ಸ್ವಾಮಿ ಜ್ಞಾನೇಶ್ವರಾನಂದ

ನಾಲ್ಕು ಯೋಗಗಳು

ಶ್ರೀ ರಾಮಕೃಷ್ಣಾಶ್ರಮ
ಮೈಸೂರು–570 002

ನಾಲ್ಕು ಯೋಗಗಳು

ಸ್ವಾಮಿ ಜ್ಞಾನೇಶ್ವರಾನಂದ

ಶ್ರೀರಾಮಕೃಷ್ಣಾಶ್ರಮ
ಮೈಸೂರು–570002

ಮೊದಲ ಮುದ್ರಣ : 1977

ಪ್ರಕಾಶಕರು :
ಅಧ್ಯಕ್ಷರು, ಶ್ರೀರಾಮಕೃಷ್ಣ ಆಶ್ರಮ, ಮೈಸೂರು–೨

ಮುದ್ರಕರು :
ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್
ಜಯನಗರ, ಮೈಸೂರು–೧೪

ಪೀಠಿಕೆ

ಸ್ವಾಮಿ ಜ್ಞಾನೇಶ್ವರಾನಂದಜಿ ಅವರು ಚಿಕಾಗೊ ವೇದಾಂತ ಸೊಸೈಟಿಯಲ್ಲಿ ಭಕ್ತರಿಗೆ ಕೊಟ್ಟ ಪ್ರವಚನಗಳು "ನಾಲ್ಕು ಯೋಗ" ಎಂಬ ಪುಸ್ತಕ. ಇದನ್ನು ಪುಸ್ತಕಕ್ಕಾಗಿ ಬರೆದಿದ್ದಲ್ಲ. ವಿದ್ಯಾರ್ಥಿಗಳಿಗೆ ಅನೌಪಚಾರಿಕವಾಗಿ ಕೊಟ್ಟ ಪ್ರವಚನಗಳು. ಆದಕಾರಣ ಇದನ್ನು ಉಲ್ಲೇಖಿಸಿರುವ ರೀತಿ ಸ್ವಾಭಾವಿಕವಾಗಿರುವುದು. ಅತ್ಯಂತ ಗಹನವಾದ ವಿಷಯಗಳನ್ನು ಸ್ವಾಮಿಜಿ ಅವರು ಕಥೆಗಳು ಮತ್ತು ಉದಾಹರಣೆ ಮೂಲಕ ಎಲ್ಲರಿಗೂ ತಿಳಿಯುವಂತೆ ಮಾಡಿರುವರು. ನಾನು ಈ ಪುಸ್ತಕವನ್ನು ಓದಿ ಮುಗ್ಧನಾದೆ. ಅನಂತರ ಈಗ ಚಿಕಾಗೊ ನಗರದ ವೇದಾಂತ ಸೊಸೈಟಿಯಲ್ಲಿರುವ ಸ್ವಾಮಿ ಭಾಷ್ಯಾನಂದರನ್ನು ಈ ಪುಸ್ತಕವನ್ನು ಕನ್ನಡಿಗರಿಗೆ ಪರಿಚಯ ಮಾಡಿಸುತ್ತೇನೆ ಎಂದು ಕೇಳಿದಾಗ ಅವರು ತಕ್ಷಣ ಒಪ್ಪಿಕೊಂಡರು. ಅದಕ್ಕಾಗಿ ಅವರಿಗೆ ಆಶ್ರಮದ ವಂದನೆಗಳು. ಈಗ ಸ್ವಾಮಿ ಜ್ಞಾನೇಶ್ವರಾನಂದರು ಇಲ್ಲ. ಅವರು ಬ್ರಹ್ಮೀಭೂತರಾಗಿ ಸುಮಾರು ಹದಿನೈದು ವರುಷಗಳಿಗೂ ಮೇಲಾಗಿರಬಹುದು. ಆ ವ್ಯಕ್ತಿ ಇಲ್ಲದೇ ಇದ್ದರೂ ಅವರ ಭಾವ ಈ ಪುಸ್ತಕದ ಮೂಲಕ ಇದನ್ನು ಓದುವವರಿಗೆಲ್ಲಾ ವ್ಯಕ್ತವಾಗುವುದು. ಕನ್ನಡಿಗರು ಈ ಪುಸ್ತಕವನ್ನು ಓದಿ ಪ್ರಯೋಜನ ಪಡೆಯಲಿ ಎಂದು ಹಾರೈಸುತ್ತೇವೆ.

ಅಧ್ಯಕ್ಷರು
ಶ್ರೀ ರಾಮಕೃಷ್ಣ ಆಶ್ರಮ
ಮೈಸೂರು

ವಿಷಯ ಸೂಚಿ

ಪೀಠಿಕೆ

ಸ್ವಾಮಿ ವಿವೇಕಾನಂದರು ಧರ್ಮದ ಸಾರವನ್ನೆಲ್ಲಾ ಮೂರು ವಾಕ್ಯಗಳಲ್ಲಿ ಸಂಗ್ರಹಿಸುವರು.

೧. ಪ್ರತಿಯೊಂದು ಆತ್ಮನಲ್ಲಿಯೂ ಪವಿತ್ರತೆ ಅಂತಸ್ಥವಾಗಿದೆ.

೨. ಅಂತಸ್ಥವಾಗಿರುವ ಪವಿತ್ರತೆಯನ್ನು, ಬಾಹ್ಯ ಮತ್ತು ಆಂತರಿಕ ಪ್ರಕೃತಿಯ ನಿಗ್ರಹದಿಂದ ವ್ಯಕ್ತಗೊಳಿಸುವುದೇ ಗುರಿಯಾಗಿದೆ.

೩. ಇದನ್ನೇ ಕರ್ಮ ಭಕ್ತಿ ಯೋಗ ಅಥವಾ ಜ್ಞಾನ ಯಾವುದಾದರೂ ಒಂದರಿಂದ, ಅಥವಾ ಎರಡರಿಂದ ಅಥವಾ ಎಲ್ಲದರ ಸಹಾಯದಿಂದ ಸಾಧನೆಮಾಡಿ ಮುಕ್ತರಾಗಿ.

ಇದೇ ಧರ್ಮದ ಸರ್ವಸ್ವ. ಸಿದ್ಧಾಂತಗಳು, ನಂಬಿಕೆಗಳು, ಆಚಾರಗಳು, ಶಾಸ್ತ್ರಗಳು, ದೇವಸ್ಥಾನಗಳು, ಹಲವಾರು ವಿಧಿಗಳು ಇವುಗಳೆಲ್ಲ ಗೌಣ.

ಈ ಮೂರು ಸೂತ್ರಗಳನ್ನೂ ವಿಮರ್ಶಿಸೋಣ.

ಮೊದಲನೆಯ ಸೂತ್ರ : ಪ್ರತಿಯೊಂದು ಆತ್ಮನಲ್ಲಿಯೂ ಪವಿತ್ರತೆ ಅಂತಸ್ಥವಾಗಿದೆ. ಪವಿತ್ರತೆ ಎಂದರೆ ಏನರ್ಥ? ಅನೇಕರಿಗೆ ಈ ವಿಷಯದಲ್ಲಿ ಅಸ್ಪಷ್ಟ ಭಾವನೆಗಳಿವೆ. ಪವಿತ್ರತೆ ಎಂದರೆ ಒಂದು ಅಸ್ತಿತ್ವ. ಅದು ಅನಂತವಾಗಿದೆ, ಎಂದೆಂದಿಗೂ ಇದೆ. ನಾಶರಹಿತವಾದುದು, ನಿರಪೇಕ್ಷವಾದುದು, ಸರ್ವಜ್ಞ ಸರ್ವ ಶಕ್ತಿಮಾನ್, ಎಂದೆಂದಿಗೂ ಆನಂದ ಸ್ವರೂಪವಾದುದು. ಪವಿತ್ರತೆ ಎಂಬುದಕ್ಕೆ ಈ ಅರ್ಥಗಳು ಇದ್ದಂತೆ ಆಯಿತು. ನಿರಪೇಕ್ಷವಾದ (೧) ಅಸ್ತಿತ್ವ (೨) ಅನಂತ ಶಕ್ತಿ (೩) ಅನಂತ ಜ್ಞಾನ (೪) ನಿತ್ಯಾನಂದ. ಪವಿತ್ರತೆ ಎಂದರೆ ದೇವರು ಅಥವಾ ಮತ್ತಾವುದಾದರೂ ವ್ಯಕ್ತಿಯ ಆತ್ಯಂತಿಕ ಪರಮಸ್ಥಿತಿಯಲ್ಲಿ ಈ ಭಾವನೆಗಳೆಲ್ಲಾ ಇರಬೇಕಾಗಿವೆ. ಇಂತಹ ಪವಿತ್ರತೆ, ದೇವರು ಅಥವಾ ಆತ್ಯಂತಿಕ ಪರಮವಸ್ತು ಪರಿಪೂರ್ಣವಾಗಿರಬೇಕು. ಅದು ಪರಿಪೂರ್ಣವಾಗಿರಬೇಕಾದರೆ ನಾವು ವಿವರಿಸಿದ ಗುಣಗಳೆಲ್ಲ ಇರಬೇಕು. ಪವಿತ್ರ ಪರಿಪೂರ್ಣತೆ ಕಾರಣಾತೀತವಾಗಿರಬೇಕು, ಅನಂತವಾಗಿರಬೇಕು, ದೇಶಕಾಲ ನಿಮಿತ್ತಗಳ ಸಂಬಂಧದಿಂದ ಬಾಧಿತವಾಗದೆ ಇರಬೇಕು.

ಮನುಷ್ಯ ದೃಷ್ಟಿಯಿಂದ ಪವಿತ್ರತೆ ಎಂದರೇನು ? ನಮ್ಮ ಜೀವನದಲ್ಲಿ ಪಡೆಯಬಹುದಾದ ಪೂರ್ಣತೆಯ ಪರಾಕಾಷ್ಠೆ. ಯಾವ ಸ್ಥಿತಿಯಲ್ಲಿ, ನಮ್ಮಲ್ಲಿ ಯಾವ ಕುಂದುಕೊರತೆಗಳು ಇರುವುದಿಲ್ಲವೋ, ವ್ಯಥೆ ಇರುವುದಿಲ್ಲವೋ, ಮತ್ತೆ ಯಾವ ಆಂತಕಗಳೂ ಇರುವುದಿಲ್ಲವೋ ಅಂತಹ ಸ್ಥಿತಿಯ ಆವಿರ್ಭಾವ. ನಮಗೆ ತಿಳಿದೋ, ತಿಳಿಯದೆಯೋ ಎಲ್ಲರೂ ಸ್ವಾಭಾವಿಕವಾಗಿ ಅದನ್ನು ವ್ಯಕ್ತಗೊಳಿಸಲು ಯತ್ನಿಸುವೆವು. ನಾವೆಲ್ಲರೂ ಕೂಡ ಏತಕ್ಕೆ ಶ್ರಮಿಸುತ್ತಿರುವುದು ? ಜೀವನದಲ್ಲಿ ನಮ್ಮ ಪರಮಾದರ್ಶ ಯಾವುದು ? ಸ್ವಲ್ಪದರದಲ್ಲಿ

ಹೇಳುವುದಾದರೆ ನಾವೆಲ್ಲರೂ ಆ ಪೂರ್ಣತೆಯ ಆದರ್ಶವನ್ನು ಎಂದರೆ ಅನಂತ ಸಚ್ಚಿದಾನಂದವನ್ನು ವ್ಯಕ್ತಪಡಿಸಲು ಯತ್ನಿಸುವೆವು.

ನಮಗೆಲ್ಲ ಬದುಕಬೇಕೆಂದು ಇಚ್ಛೆ. ಯಾವ ರೋಗ ರುಜಿನಗಳೂ ಇಲ್ಲದ ಮರಣವಿಲ್ಲದ, ಯಾವ ವಿಧವಾದ ಕುಂದುಕೊರತೆಗಳೂ ಇಲ್ಲದ ರೀತಿಯಲ್ಲಿ ಬಾಳಬೇಕೆಂದು ಆಶಿಸುವೆವು.

ನಮಗೆಲ್ಲ ತಿಳಿದುಕೊಳ್ಳಬೇಕೆಂಬ ಇಚ್ಛೆ ಇದೆ. ನಮಗೆ ತಿಳಿಯದೆ ಇರುವ ಯಾವುದೂ ಇಲ್ಲದ ಒಂದು ಸ್ಥಿತಿಯನ್ನು ಪಡೆಯಬೇಕೆಂದು ನಾವುಗಳೆಲ್ಲ ಇಚ್ಛಿಸುವೆವು. ನಾವುಗಳೆಲ್ಲ ಅಂತಹ ಸ್ಥಿತಿಯನ್ನು ಎದುರು ನೋಡುವ ದಿವಸಕ್ಕಾಗಿ ಕಾಯುತ್ತಿರುವೆವು. ಮನುಷ್ಯನಲ್ಲಿ ಇಂತಹ ಪ್ರಚೋದನೆ ಇರುವುದರಿಂದಲೇ, ಭೌತಿಕ ಮತ್ತು ವೈಜ್ಞಾನಿಕ ಜಗತ್ತಿನಲ್ಲಿ ನವನವಾನ್ವೇಷಣೆಗಳು ಸಾಧ್ಯವಾದವು.

ಸ್ವಾಭಾವಿಕವಾಗಿ ನಾವುಗಳೆಲ್ಲ ಆನಂದದಲ್ಲಿರಬೇಕೆಂದು ಬಯಸುವೆವು. ಈ ಆದರ್ಶದ ಹಿಂದೆ ಇರುವ ತತ್ತ್ವ, ಮತ್ತು ಅದನ್ನು ಪಡೆಯುವ ವಿಧಾನದಲ್ಲಿ ವ್ಯತ್ಯಾಸಗಳು ಇರಬಹುದು. ಆದರೆ ಮುಖ್ಯ ಪ್ರಚೋದನೆ ಎಲ್ಲರಲ್ಲಿಯೂ ಒಂದೇ.

ಪ್ರತಿಯೊಬ್ಬರಲ್ಲಿಯೂ ಅಂತಸ್ಥವಾಗಿರುವ ಸಚ್ಚಿದಾನಂದವನ್ನು ವ್ಯಕ್ತಪಡಿಸುವ ಮುಖ್ಯವಾಗಿರುವ ಪ್ರಚೋದನೆ ಒಂದೇ. ಈ ಪವಿತ್ರತೆಯ ವಿಷಯವನ್ನು ನಮಗೆ ಯಾರೂ ಹೊರಗಿನಿಂದ ಬೋಧಿಸಬೇಕಾಗಿಲ್ಲ. ಏಕೆಂದರೆ ಅದು ಎಂದಿಗೂ ಬಾಹ್ಯದಲ್ಲಿ ಇರಲಿಲ್ಲ. ಅದು ಯಾವಾಗಲೂ ಅಂತರತಮವಾದುದು.

ಬದುಕುವುದಕ್ಕೆ ಇಚ್ಛೆ ಇಲ್ಲದವರು ನಿಮಗೆ ಯಾರಾದರೂ ಸಿಕ್ಕುವರೇ ? ರೋಗ ಮತ್ತು ಮರಣಗಳೊಂದಿಗೆ ರಾಜಿ ಮಾಡಿಕೊಂಡಿರುವವರು ಯಾರಾದರೂ ನಿಮಗೆ ಸಿಕ್ಕುವರೆ? ತಮಗೆ ಇರುವ ಜ್ಞಾನದ ಮಿತಿಯಲ್ಲಿಯೇ ತೃಪ್ತನಾದ ಯಾರಾದರೂ ನಿಮಗೆ ಸಿಕ್ಕುವರೆ? ಅಜ್ಞಾನನೊಂದಿಗೆ ನಾವು ರಾಜಿ ಮಾಡಿಕೊಂಡಿರುವೆವೆ? ಹೆಚ್ಚು ಹೆಚ್ಚು ಜ್ಞಾನವನ್ನು ಪಡೆಯಬೇಕೆಂಬ ಈ ಹಂಬಲವಾದರೂ ನಮ್ಮಲ್ಲಿ ಏತಕ್ಕೆ ಇರಬೇಕು ? ಈಗಿರುವ ಅಜ್ಞಾನದ ಸ್ಥಿತಿಯನ್ನು ಖಂಡಿಸದೆ ಇರುವ ಯಾವ ವ್ಯಕ್ತಿಯೂ ನಮಗೆ ದೊರಕುವುದಿಲ್ಲ. ಯಾರಿಗಾದರೂ ನಿಮಗೆ ತಿಳಿದುಕೊಳ್ಳುವ ಅಧಿಕಾರವಿಲ್ಲ ಎಂದು ಹೇಳಿ. ತನಗೇನೋ ಮಹಾಪರಾಧವಾದಂತೆ ಹೇಗೆ ಪ್ರತಿಭಟಿಸುವನು ಎಂಬುದನ್ನು ನೋಡಿ. ಮನಸ್ಸಿನಲ್ಲಿ ಏತಕ್ಕೆ ವಿಕಾರವಾಗಬೇಕು ?

ಆನಂದದ ವಿಷಯವನ್ನೇ ತೆಗೆದುಕೊಳ್ಳಿ. ಇಡೀ ತಮ್ಮ ಜೀವನದಲ್ಲಿ ದುಃಖವನ್ನು ಅನುಭವಿಸುತ್ತಿರುವ ವ್ಯಕ್ತಿಗಳಿದ್ದಾರೆ. ಆದರೆ ಅವರಿಗೆ ಈ ಸ್ಥಿತಿಯಲ್ಲಿ ಸಮಾಧಾನವಿದೆಯೆ ? ಈ ಜೀವನದಲ್ಲೋ ಮುಂದೆಯೋ, ಎಲ್ಲಿಯೋ, ಈ ದುಃಖ ಕೊನೆಗೊಳ್ಳುವ ಸುದಿನವನ್ನು ಅವರು ನಿರೀಕ್ಷಿಸುತ್ತಿಲ್ಲವೆ ? ಇದರಿಂದ ಮನುಷ್ಯನ ಸ್ವಭಾವದಲ್ಲಿ ತಾನು ಆನಂದಿಸಬೇಕೆಂಬ ದೃಢ ನಿಶ್ಚಯವನ್ನು ಇದು ತೋರುವುದು.

ಮರಣ ಅಜ್ಞಾನ ಯಾವುದೇ ವಿಧವಾದ ಯಾತನೆಯನ್ನು ಪ್ರತಿಭಟಿಸುವ ಒಂದು

ಆಜನ್ಮ ಸ್ವಭಾವವನ್ನು ಮನುಷ್ಯನಲ್ಲಿ ನೋಡುತ್ತೇವೆ. ಪ್ರತಿಯೊಬ್ಬನೂ ಅನಂತ ಪೂರ್ಣತೆಯ ತನ್ನ ಆಜನ್ಮಸಿದ್ಧ ಹಕ್ಕು ಎಂಬ ಎಂದಿಗೂ ಮಾಯವಾಗದ ಈ ಸ್ವಭಾವ ದೊಂದಿಗೆ ಪ್ರಪಂಚಕ್ಕೆ ಬರುವನು. ಪೂರ್ಣತೆಯ ಭಾವಕ್ಕೆ ಆತ ಎಚ್ಚೆತ್ತಿರುವನು. ಅದಕ್ಕೆ ವಿರೋಧವಾಗಿರುವ ಭಾವಕ್ಕೆ ಅವನು ಪ್ರತಿಭಟಿಸುವನು. ಇದು ಪ್ರತಿಯೊಬ್ಬ ನಲ್ಲಿಯೂ ಜನ್ಮತಃ ಸ್ವಾಭಾವಿಕವಾಗಿ ಬಂದದ್ದು.

ಪೂರ್ಣತೆಯ ಅಥವಾ ಪವಿತ್ರತೆಯ ಆದರ್ಶವನ್ನು, ದೇವರಿಗೆ ಒಂದು ಆಕಾರವನ್ನು ಆರೋಪಿಸಿ ಅದನ್ನು ಸ್ಥೂಲವಾದ ಒಂದು ವ್ಯಕ್ತಿಯನ್ನಾಗಿ ಮಾಡಿರುವರು. ದೇವರು ಸಚ್ಚಿದಾನಂದ ಸ್ವರೂಪ ಎಂದರೆ ಜನ ನಂಬುವರು. ಆದರೆ ಅವರಿಗೆ ತಮ್ಮಲ್ಲಿಯೇ ಅಂತಸ್ಥವಾಗಿರುವ ಪವಿತ್ರತೆಯನ್ನು ಹೇಳಿದರೆ ಅಂಜಿಕೆಯಿಂದ ತತ್ತರಿಸುವರು. ನಮ್ಮ ಮನಸ್ಸಿನಲ್ಲಿರುವ ದೇವರ ಭಾವನೆಯನ್ನು ವಿಭಜನೆಮಾಡಿ. ನಮ್ಮಲ್ಲಿರುವ ಸಚ್ಚಿದಾನಂದ ಸ್ವರೂಪದ ಒಂದು ಸಾಕಾರ ಮೂರ್ತಿ ಅವನಾಗಿದ್ದಾನೆ. ದೇವರು ಮುದುಕನಾಗುವುದಿಲ್ಲ. ಅವನು ಖಾಯಿಲೆ ಬೀಳುವುದಿಲ್ಲ. ಅವನು ಸಾಯುವುದಿಲ್ಲ. ಅವನು ಸರ್ವಜ್ಞ. ಅವನ ಜ್ಞಾನಕ್ಕೆ ಯಾವ ಮಿತಿಯೂ ಇಲ್ಲ. ದೇವರಿಗೆ ಅನಂತ ಆನಂದವನ್ನು ಅನುಭವಿಸಬಲ್ಲ ಯೋಗ್ಯತೆಯಿದೆ. ಅವನಿಗೆ ಯಾವುದೂ ದುಃಖವನ್ನು ಕೊಡಲಾರದು. ಯಾವುದೂ ಕಳವಳಕ್ಕೆ ಈಡು ಮಾಡಲಾರದು. ಈ ಮೂರು ಮೂಲ ಭಾವನೆಗಳನ್ನು ಸಾಕಾರಗೊಳಿ ಸಿದ್ದಾರೆ, ವ್ಯಕ್ತಪಡಿಸಿದ್ದಾರೆ ನಮ್ಮ ಹೊರಗೆ ಇರುವ ದೇವರು ಎಂಬ ಭಾವನೆಯಲ್ಲಿ.

ಈ ಮೂರು ಭಾವನೆಗಳನ್ನು ದೇವರು, ಅಥವಾ ಒಂದು ಪರಾವಸ್ತುವಿನ ರೂಪ, ಅಥವಾ ಸ್ಥಿತಿ ಎಂದರೆ ನೀವುಗಳೆಲ್ಲಾ ಒಪ್ಪಿಕೊಳ್ಳುತ್ತೀರಿ. ಆದರೆ ಅದನ್ನೇ ಮನುಷ್ಯನ ಗುಣ ಎಂದರೆ ಒಪ್ಪಿಕೊಳ್ಳುವುದಿಲ್ಲ. ಮನುಷ್ಯನಲ್ಲಿ ಪವಿತ್ರತೆ ಅಂತಸ್ಥವಾಗಿದೆ ಎಂದು ಒಪ್ಪಿಕೊಳ್ಳು ವುದಕ್ಕೆ ಏತಕ್ಕೆ ನಿಮಗೆ ಸಂಕೋಚ ? ಮೊದಲನೆಯದಾಗಿ ಪವಿತ್ರತೆ ಅನಂತವಾಗಿದ್ದರೆ (ಅದು ಇರಲೇಬೇಕಾಗಿದೆ) ಅದು ಸರ್ವ ವ್ಯಾಪಿಯಾಗಿರಬೇಡವೇ ? ಅದು ಇಲ್ಲದೆ ಇರುವ ಯಾವುದಾದರೊಂದು ಸ್ಥಳವಿದೆಯೇ ? ಪವಿತ್ರತೆಯೊಂದಿಗೆ ಇನ್ನು ಬೇರೆ ಯಾವುದಾದರೂ ಇರುವುದು ಸಾಧ್ಯವೇ ? ಇಲ್ಲ. ಹಾಗೆ ಬೇರೆ ಯಾವುದಾದರೂ ಇರುವುದಕ್ಕೆ ಸಾಧ್ಯ ವಿದ್ದರೆ ಪವಿತ್ರತೆ ಸರ್ವವ್ಯಾಪಿಯಾಗಿರಲಾರದು. ಸರ್ವವ್ಯಾಪಿ ಎಂದರೆ ಅದು ಒಂದಕ್ಕೆ ಮಾತ್ರ ಅನ್ವಯಿಸುವುದು. ಮತ್ತೆ ಬೇರೆ ಯಾವುದಾದರೂ ಇದ್ದರೆ, ಅದರ ಸರ್ವ ವ್ಯಾಪಿತ್ವಕ್ಕೆ ಧಕ್ಕೆ ಬಂದು ಅದು ತನ್ನ ಸರ್ವವ್ಯಾಪಿತ್ವದ ಗುಣವನ್ನೇ ಕಳೆದುಕೊಳ್ಳು ವುದು.

ಜ್ಞಾನವನ್ನು ಪಡೆಯುವುದಕ್ಕೆ ನಮಗೆ ಮೂರು ಮಾರ್ಗಗಳಿವೆ. ಅವೇ ಆಪ್ತವಾಕ್ಯ, ಯುಕ್ತಿ ಮತ್ತು ಸ್ವಾನುಭವ. ಇವುಗಳನ್ನು ಗಮನಿಸುವ.

ಆಪ್ತವಾಕ್ಯ ಎಂದರೆ,ತಾವೇ ಸತ್ಯವನ್ನು ಸಾಕ್ಷಾತ್ಕಾರ ಮಾಡಿಕೊಂಡವರ ವಾಣಿ, ಅಥವಾ ಅಂತಹ ವ್ಯಕ್ತಿಗಳು ಹೇಳಿರುವ ಭಾವನೆಗಳನ್ನು ಒಳಗೊಂಡ ಶಾಸ್ತ್ರಾದಿಗಳು. ಮುಕ್ಕಾಲು ನಮ್ಮ ಜ್ಞಾನವೆಲ್ಲ ಬರುವುದು ಹೀಗೆ. ಉದಾಹರಣೆಗೆ ಹಲವು ವೈಜ್ಞಾನಿಕ

ನಿಯಮಗಳು ನಮಗೆ ಗೊತ್ತಿವೆ, ಅವನ್ನು ಸತ್ಯ ಎಂದು ನಾವು ನಂಬುತ್ತೇವೆ. ಆದರೆ ನಾವೇ ಅವುಗಳನ್ನು ಪ್ರಯೋಗ ಮಾಡಿ ಸರಿ ಎಂದು ತೋರ್ಪಡಿಸಿರುವೆವೇ ? ಹಾಗೆ ಮಾಡಿಲ್ಲ. ಕೆಲವರು ತಾವು ಪ್ರಯೋಗ ಮಾಡಿ ಇದು ಸತ್ಯ ಎಂದು ಒಂದು ನಿರ್ಣಯಕ್ಕೆ ಬಂದವರ ಅಧಿಕಾರವಾಣಿಯನ್ನು ನಾವು ಒಪ್ಪಿಕೊಳ್ಳುತ್ತೇವೆ. ಇದರಂತೆಯೇ ಆಧ್ಯಾತ್ಮಿಕ ವಿಷಯಗಳಲ್ಲಿ ಪ್ರಯೋಗ ಮಾಡಿ, ಪ್ರತ್ಯಕ್ಷ ಅನುಭವವನ್ನು ಪಡೆದ ವ್ಯಕ್ತಿಗಳ ಅಧಿಕಾರ ವಾಣಿಯನ್ನು ಸತ್ಯ ಎಂದು ಒಪ್ಪಿಕೊಳ್ಳುತ್ತೇವೆ. ಆಧುನಿಕ ವೈಜ್ಞಾನಿಕ ಸ್ವಭಾವದವನಿಗೆ ಇದು ತೃಪ್ತಿಯನ್ನು ಕೊಡಬೇಕು.

ಯುಕ್ತಿ : ಇವುಗಳ ಕೆಳಗೆ ನಾವು ಹಲವು ವಿಷಯಗಳನ್ನು ತಿಳಿದುಕೊಳ್ಳ ಬೇಕಾಗಿದೆ.

ಬದಲಾವಣೆ ಎಂದರೆ, ಬದಲಾಯಿಸದ ಒಂದು ವಸ್ತುವನ್ನು ಒಪ್ಪಿಕೊಳ್ಳಬೇಕಾ ಗಿದೆ. ಬದಲಾವಣೆಯನ್ನು ನಾವು ಗಮನಿಸಬೇಕಾದರೆ, ಕಡಿಮೆ ಬದಲಾಯಿಸುವ ಒಂದು ವಸ್ತುವಿನ ಸಹಾಯದಿಂದ ತಿಳಿದುಕೊಳ್ಳಬೇಕಾಗಿದೆ. S ಎನ್ನುವ ದೃಗ್ A ಎನ್ನುವ ದೃಶ್ಯವನ್ನು ನೋಡುತ್ತಾನೆ. ಅದು A-1, A-2, A-3, A-4 ಆಗಿ ಬದಲಾವಣೆ ಹೊಂದುತ್ತಿದೆ. S ಎನ್ನುವ ದೃಗ್ Aಗಿಂತ ಕಡಿಮೆ ಬದಲಾಯಿಸದೆ ಇದ್ದರೆ A ಬದ ಲಾಯಿಸುವುದನ್ನೇ ನೋಡುವುದಕ್ಕೆ ಆಗುತ್ತಿರಲಿಲ್ಲ. S ಎನ್ನುವ ವಸ್ತುವನ್ನು ಮತ್ತೊಬ್ಬ ಅದು ಬದಲಾಯಿಸುತ್ತಿದೆ ಎಂದು ನೋಡಬಹುದು. ನಾವು ಇದನ್ನೇ ಹಿಂದೆ ಹಿಂದೆ ತೆಗೆದು ಕೊಂಡು ಹೋದರೆ, ಯಾವುದೋ ಒಂದು ಅದರ ಮುಂದೆ ಇರುವ ಬದಲಾವಣೆಯನ್ನು ನೋಡುತ್ತಿದೆ ಎಂದು ಭಾವಿಸಬಹುದು. ಕೊನೆಗೆ ಯಾವುದೋ ಒಂದು ಬದಲಾಯಿಸವೆ ಇರುವುದು ಇದೆ, ಅದೇ ಎಲ್ಲಾ ಬದಲಾವಣೆಯನ್ನು ತಿಳಿದುಕೊಳ್ಳುತ್ತಿದೆ ಎಂದು ಊಹಿಸ ಬೇಕಾಗಿದೆ. ಬದಲಾಯಿಸದೆ ಇರುವುದು ನಿತ್ಯವಾದುದು, ಅನಂತವಾದುದು. ಅದರ ಮೇಲೆ ಬದಲಾವಣೆಯನ್ನು ಉಂಟುಮಾಡುವುದಕ್ಕೆ ಮತ್ತಾವುದಿದೆ ? ಬದಲಾಯಿಸವೆ ಇರುವುದೇ ಪರಿಪೂರ್ಣ, ಆದಕಾರಣವೇ ಪವಿತ್ರ. ನೀವು ತಾರ್ಕಿಕವಾಗಿ ಪವಿತ್ರತೆಯಲ್ಲಿ ಯಾವ ಬದ ಲಾವಣೆಯನ್ನೂ ಆರೋಪ ಮಾಡಲಾರಿರಿ.

ದೃಗ್ ದೃಶ್ಯ ವಿವೇಕ : ಇದನ್ನು ನಿಮ್ಮ ಆತ್ಮ ಮನಸ್ಸು ದೇಹ ಈ ದೃಷ್ಟಿಯಿಂದ ತೆಗೆದುಕೊಳ್ಳಿ. ಪವಿತ್ರತೆ ನಿಮ್ಮಲ್ಲಿದೆ. ಆದರೆ ಇದು ನಿಮಗೆ ಗೊತ್ತಿಲ್ಲ. ಇದಕ್ಕೆ ಕಾರಣ ನೀವು ಎಂದರೆ ಮತ್ತಾವುದನ್ನೋ ಭಾವಿಸುವಿರಿ. ನಿಮ್ಮ ಆತ್ಮ ಎಂದರೆ ನೀವು ಏನು ಭಾವಿಸುವಿರಿ ? ಅದು ದೇಹವೇ, ಮನಸ್ಸೇ, ಬುದ್ಧಿಯೆ, ಯಾವುದಾದರೂ ಉದ್ವೇಗವೇ, ಅಥವಾ ಮತ್ತೆ ಯಾವುದಾದರೂ ಆಗಿವೆಯೆ ? ಇಲ್ಲ. ಏಕೆಂದರೆ ನಾವೇ ಇವುಗಳನ್ನೆಲ್ಲ ಉಪಯೋಗಿಸುತ್ತಿರುವುದು ಗೊತ್ತಿದೆ. ನಿಮಗೆ ಒಂದು ಮನಸ್ಸು ಇದೆ ಎಂದು ಗೊತ್ತಿದೆ. ನಿಮಗೆ ಮತ್ತಾವುದರ ಅರಿವು ಇದ್ದರೆ ನೀವು ಅದಲ್ಲ ಎಂದ ಹಾಗಾಯಿತು. ನನ್ನ ದೇಹ ನನ್ನ ಮನಸ್ಸು ಎಂದು ಹೇಳುತ್ತೀಯೆ. ಎಂದರೆ ನೀನು ದೇಹವಲ್ಲ ಎಂದಹಾಗೆ ಆಯಿತು. ಆದರೆ ಮರುಕ್ಷಣವೇ ಈ ದೇಹಕ್ಕೆ ಏನಾದರೂ ಆಲಸ್ಯವಾಗಿದ್ದರೆ ನಾನೇ ದೇಹ ಎಂದು

ಭಾವಿಸುತ್ತೀಯೆ. ನೋಡಿ ಈ ನಿಮ್ಮ ಕುತರ್ಕವನ್ನು. ನಾನು ವಿಚಾರ ಮಾಡುತ್ತೇನೆ, ನಾನು ಆಲೋಚಿಸುತ್ತೇನೆ ಎಂದು ಹೇಳುತ್ತೀರಿ. ನಿಮಗೆ ನೀವು ಮನಸ್ಸು ಅಲ್ಲ, ಆಲೋಚನೆ ಅಲ್ಲ ಎಂಬುದು ಗೊತ್ತಿದೆ. ಬದಲಾಯಿಸುತ್ತಿರುವ ನಿಮ್ಮ ದೇಹ, ಮನಸ್ಸು, ಜಾಗ್ರತ್, ಸ್ವಪ್ನ, ಸುಷುಪ್ತಿಯಲ್ಲಿ ಇದನ್ನೆಲ್ಲ ನೋಡುತ್ತಿರುವುದು ಯಾವುದು ?

ನೀನು ನಿನ್ನ ಅಂಗಿಯೆ ? ಅಲ್ಲ ಅಂಗಿ ನಿನಗೆ ಇದೆ. ದೇಹ ಮನಸ್ಸು ಬುದ್ಧಿ ಇಂದ್ರಿಯಗಳೆಲ್ಲ ಯಾರಿಗೆ ಇದೆ ? ಇವುಗಳನ್ನೆಲ್ಲ ಹೊಂದಿರುವವನು ಯಾರು ? ದೇಹ ಮನಸ್ಸು ಆತ್ಮ ಇವುಗಳಲ್ಲಿ ದೃಗ್ ಯಾರು, ದೃಶ್ಯ ಯಾರು ಎಂಬುದನ್ನು ವಿಮರ್ಶಿಸಿ ಯಾರಿಗೆ ಇವುಗಳೆಲ್ಲವೂ ಇವೆಯೋ ಅವನೇ ಆ ವಸ್ತು ಆಗಲಾರನು.

ಸಂಯುಕ್ತ ವಸ್ತುವಿನ ಸ್ವಭಾವ : ಸಂಯುಕ್ತವಸ್ತು ಇರುವುದು ಮತ್ತಾವುದೋ ಒಂದಕ್ಕಾಗಿ. ಮೊದಲು ಅದನ್ನು ಪಿಂಡಾಂಡದಲ್ಲಿ ನೋಡಿ. ಹಿಂದೂ ದರ್ಶನದ ಪ್ರಕಾರ ಮನುಷ್ಯನಲ್ಲಿ ಮೂರು ಶರೀರಗಳವೆ. ಅವೇ ಸ್ಥೂಲ ದೇಹ, ಸೂಕ್ಷ್ಮ ದೇಹ. ಇಲ್ಲೆ ಅಂತಃಕರಣ ಮನಸ್ಸು ಬುದ್ಧಿ ಇವುಗಳೆಲ್ಲವೂ ಇವೆ. ಕಾರಣ ಶರೀರವೆಂಬುದೇ ಈ ಮೂರರಲ್ಲಿ ತುಂಬಾ ಸೂಕ್ಷ್ಮವಾಗಿರುವುದು. ಇದರಲ್ಲೇ ವಿಶ್ವಪ್ರಜ್ಞೆಯ ಬೀಜ ಇರುವುದು. ಈ ಮೂರು ಶರೀರಗಳ ಮಿಶ್ರ ಆತ್ಮನಿಗಾಗಿದೆ. ಆತ್ಮ ಇವುಗಳಿಗೆ ಅತೀತವಾಗಿರುವುದು. ಈ ಮೂರು ಶರೀರಗಳನ್ನೇ ಕೋಶ ಎಂಬುದು, ಇವೇ ಆತ್ಮನನ್ನು ಮುಸುಕಿರುವ ತೆರೆಗಳು.

ಮಿಶ್ರವನ್ನೆಲ್ಲ ವಿಭಜನೆ ಮಾಡಿ ಅದರ ಮೂಲಕ್ಕೆ ಹೋಗುವುದು ಸಾಧ್ಯ. ಭೌತಿಕ ಪ್ರಪಂಚದಲ್ಲಿ ಈ ವಿಭಜನೆಯನ್ನು ನಾಶ ಅಥವಾ ಮರಣ ಎನ್ನುವುದು. ಬದಲಾಯಿಸುವ ಯಾವುದಾದರೂ ಒಂದು ವಸ್ತು ಇದ್ದರೆ, ಅದರ ಹಿಂದೆ ಬದಲಾಯಿಸದ ಮತ್ತಾವುದೋ ಇದೆ ಎಂದು ಊಹಿಸಬೇಕಾಗುವುದು. ಯಾವುದು ಕಾರ್ಯಕಾರಣಗಳಿಗೆ ಅತೀತವಾಗಿದೆಯೊ, ಯಾವುದು ಯಾವುದರಿಂದಲೂ ಬಾಧಿತವಾಗುವುದಿಲ್ಲವೋ ಅದು ಮಾತ್ರ ನಿರ್ವಿಕಾರವಾದುದು. ಪೂರ್ಣತ್ವ ಅಥವಾ ಸರ್ವಶಕ್ತಿಯುತವಾದುದು, ಯಾವ ಬದಲಾವಣೆಗೂ ನಿಲುಕದುದು ಆಯಿತು. ಅದು ಯಾವಾಗಲೂ ಅವಿಭಾಜ್ಯವಾದುದು.

ಪವಿತ್ರತೆ ಕಾರ್ಯಕಾರಣ ಸಂಬಂಧಕ್ಕೆ ಅತೀತವಾಗಿರುವುದರಿಂದ, ನಿರ್ವಿಕಾರವಾಗಿರುವುದರಿಂದ ಅವಿಭಾಜ್ಯವಾಯಿತು. ಇದನ್ನು ಯಾರು ಯಾವುದರಿಂದಲೂ, ಯಾರಿಗಾದರೂ ತಯಾರು ಮಾಡುವುದಕ್ಕೆ ಆಗುವುದಿಲ್ಲ. ಅದು ಯಾವುದಾದರೂ ವಸ್ತುವನ್ನು ತಯಾರಿಸಿದಂತೆ ಹಲವು ವಸ್ತುಗಳ ಮಿಶ್ರದಿಂದ ಆದುದಲ್ಲ. ಅದು ಸ್ವಭಾವತಃ ಮಿಶ್ರದಿಂದ ಆದ ವಸ್ತುಗಳಿಗೆಲ್ಲ ಸಾಕ್ಷಿ. ಪವಿತ್ರ ಪರಿಪೂರ್ಣತೆ ಯಾವ ವಸ್ತುವಿನಿಂದಲೂ ತಯಾರಾದುದಲ್ಲ. ಅದು ಯಾವಾಗಲೂ ತಾನೇ ತಾನಾಗಿ ಇರುವುದು. ಆದಕಾರಣ ಅದೆಂದಿಗೂ ಮಾಯವಾಗುವಂತಿಲ್ಲ, ನಾಶವಾಗುವಂತಿಲ್ಲ.

ಪ್ರತಿಯೊಂದು ವಿಕಾಸವೂ ಒಂದು ಸಂಕೋಚವನ್ನು ಊಹಿಸುವುದು. ಬೀಜವೇ ಸಂಕೋಚವಾದ ಮರ. ಮರವೇ ವಿಕಾಸವಾಗುವ ಬೀಜ. ನೀವೊಂದು ಮಾವಿನಬೀಜವನ್ನು ನೆಟ್ಟರೆ, ಅಲ್ಲಿ ನಿಮಗೆ ಸೇಬಿನ ಗಿಡ ಸಿಕ್ಕುವುದಿಲ್ಲ. ಸೇಬಿನ ಬೀಜದಿಂದ ಸೇಬಿನ

ಗಿಡ ಮಾತ್ರ ಸಿಕ್ಕುವುದು. ಒಂದು ದೊಡ್ಡ ಮರವಾಗುವ ಸಾಧ್ಯತೆ ಒಂದು ಸಣ್ಣ ಬೀಜದಲ್ಲಿದೆ. ವ್ಯಕ್ತವಾಗಬೇಕಾದರೆ ಸಾಧ್ಯತೆ ಅಲ್ಲಿರಬೇಕು. ಮಗುವೇ ಸಂಕೋಚವಾದ ಮನುಷ್ಯ, ಮನುಷ್ಯನೇ ವಿಕಾಸವಾದ ಮಗು.

ಒಂದು ಯಾಂತ್ರಿಕ ಉದಾಹರಣೆಯನ್ನು ತೆಗೆದುಕೊಳ್ಳಿ. ಕಾರ್ಯವೇ ಕಾರಣದ ಮತ್ತೊಂದು ಅವಸ್ಥೆ. ಇದೇ ಕಾರಣದ ಮತ್ತೊಂದು ಸ್ವರೂಪ. ನಿಮಗೆ ಒಂದು ಯಂತ್ರದಿಂದ ಶಕ್ತಿ ಸಿಕ್ಕಬೇಕಾದರೆ, ಆ ಯಂತ್ರಕ್ಕೆ ಇದ್ದಲು, ನೀರು, ಬೆಂಕಿ ಇವುಗಳನ್ನೆಲ್ಲ ಅಲ್ಲಿ ಹಾಕಿರಬೇಕು. ಯಂತ್ರಕ್ಕೆ ಬೇಕಾದ ಸಾಮಾನನ್ನೇ ಹಾಕದೆ ಇದ್ದರೆ ಅದರಿಂದ ಶಕ್ತಿ ಸಿಕ್ಕುವುದಿಲ್ಲ. ಮನುಷ್ಯನಲ್ಲಿ ಪರಿಪೂರ್ಣತೆಯ ಸಾಧ್ಯತೆಗಳು ಇಲ್ಲದೇ ಇದ್ದರೆ ಅವನು ಪರಿಪೂರ್ಣತೆಯ ವಿಷಯವಾಗಿ ಮಾತನಾಡಲೂ ಆರ, ಆಲೋಚಿಸಲೂ ಆರ. ಇದು ಅವನ ಸ್ವಭಾವದಲ್ಲಿ ಸ್ವಲ್ಪವೂ ಇಲ್ಲದೇ ಇದ್ದರೆ, ಅದರ ವಿಷಯವಾಗಿ ಯಾರಿಗೂ, ಚರ್ಚಿಸಲು ಆಗುತ್ತಿರಲಿಲ್ಲ, ಆಲೋಚಿಸಲು ಆಗುತ್ತಿರಲಿಲ್ಲ. ನಮ್ಮಲ್ಲಿ ಯಾವ ಸಾಧ್ಯತೆ ಇದೆಯೋ, ಅದರಂತೆ ಮಾತ್ರ ನಾವು ಆಗಬಹುದು.

ಯಾರಾದರೂ ತಮ್ಮ ಅಪೂರ್ಣತೆಯಿಂದ ಪಾರಾದರೆ, ಆ ಪರಿಪೂರ್ಣತೆ ಅವನಲ್ಲಿ ಆಗಲೆ ಇತ್ತು ಎಂಬುದನ್ನು ನಿರ್ವಿವಾದವಾಗಿ ಒಪ್ಪಬೇಕಾಗುವುದು. ಯಾರಾದರೂ ಒಬ್ಬ ಈ ಪೂರ್ಣತೆಯನ್ನು ವ್ಯಕ್ತಪಡಿಸಿದ್ದರೆ, ಅದು ಕಾರಣಾವಸ್ಥೆಯಲ್ಲಿ ಅಲ್ಲಿತ್ತು, ಅದು ಮನುಷ್ಯನ ಮೂಲ ಸ್ವಭಾವವೆ ಆಗಿತ್ತು ಎಂಬುದನ್ನು ಒಪ್ಪಿಕೊಳ್ಳಬೇಕು. ಕ್ರೈಸ್ತ, ಕೃಷ್ಣ, ಬುದ್ಧ ಮುಂತಾದವರು ಪೂರ್ಣತೆಯನ್ನು ಪಡೆದರು ಎಂದು ನಾವು ನಂಬುತ್ತೇವೆ. ನೀವು ಜೀಸಸ್ ಕ್ರೈಸ್ತನನ್ನು ಮನುಷ್ಯ ಎಂದು ಪರಿಗಣಿಸುವುದಿಲ್ಲ. ಆದರೆ ನಾವು ನಮ್ಮ ಅವತಾರಗಳನ್ನು ಮನುಷ್ಯರೆಂದು ಭಾವಿಸುತ್ತೇವೆ. ನಜರತ್‌ನ ಜೀಸಸ್, ಕ್ರೈಸ್ತನಾಗಿ, ಕ್ರೈಸ್ತತ್ವವನ್ನು ತನ್ನಲ್ಲಿ ವ್ಯಕ್ತಪಡಿಸಿದ. ಬುದ್ಧ ಹುಟ್ಟುವಾಗಲೇ ಬುದ್ಧನಾಗಿರಲಿಲ್ಲ, ಬುದ್ಧನಾಗಬಲ್ಲ ಸಾಧ್ಯತೆಗಳೆಲ್ಲ ಅಲ್ಲಿತ್ತು. ಹೇಗೆ ಬುದ್ಧತ್ವವನ್ನು ವ್ಯಕ್ತಪಡಿಸಬಹುದೋ ಅದನ್ನು ತನ್ನ ಜೀವನದಲ್ಲಿ ಉದಾಹರಿಸಿದನು. ಬುದ್ಧತ್ವವನ್ನು ಪಡೆಯಬಲ್ಲ ಸ್ಥಿತಿ ಅವನಲ್ಲಿ ಇಲ್ಲದೇ ಇದ್ದರೆ ಅವನು ತನ್ನಲ್ಲಿ ಅದನ್ನು ವ್ಯಕ್ತಪಡಿಸಲು ಸಾಧ್ಯವಾಗುತ್ತಿರಲಿಲ್ಲ. ಮನುಷ್ಯನ ಸ್ವಭಾವದಲ್ಲೇ ಅದು ಅಂತರ್ಗತವಾಗಿತ್ತು.

ಪವಿತ್ರತೆ ನಮ್ಮಲ್ಲಿ ಇಲ್ಲ, ನಾವು ಕಾಲವಾದ ಮೇಲೆ ಸ್ವರ್ಗದಲ್ಲಿ ಅದನ್ನು ಪಡೆಯಬಹುದು ಎಂದು ಕೆಲವರು ಹೇಳಬಹುದು. ಬೇರೆ ಮಾತಿನಲ್ಲಿ ಹೇಳುವುದಾದರೆ ಪವಿತ್ರತೆ ಎಂಬುದು ನಮ್ಮಲ್ಲಿ ಮೂಲತಃ ಇರಲಿಲ್ಲ, ಅದನ್ನು ಅನಂತರ ಪಡೆದುಕೊಂಡರು ಎಂದು. ಪೂರ್ಣತೆ ಎಂದರೆ ನಾವು ಏನೆಂದು ಭಾವಿಸಿದ್ದೇವೆ? ಅದು ಅನಂತವಾದುದು. ಸಾಂತವಾದ ಪೂರ್ಣತೆ ಮತ್ತು ಆನಂದದಲ್ಲಿ ಯಾರಿಗೆ ತೃಪ್ತಿ ಇದೆ? ಸಾಂತವಾದುದನ್ನು ಯಾವಾಗ ಬೇಕಾದರೂ ನಿಮ್ಮಿಂದ ಅದನ್ನು ಕಸಿದುಕೊಂಡುಬಿಡಬಹುದು. ಅದಕ್ಕೆ ಕೆಲವು ಮಿತಿಗಳಿವೆ. ಪವಿತ್ರತೆ ಇಲ್ಲಿ ಈಗ ಇಲ್ಲದೇ ಇದ್ದರೆ, ಮತ್ತಾವುದೋ ಕಾಲದಲ್ಲಿ, ಬೇರೆ ದೇಶದಲ್ಲಿ ಅದು ವ್ಯಕ್ತವಾಗುವ ಹಾಗಿದ್ದರೆ ಅದು ಕಾಲದೇಶ ಲೋಕಗಳಿಂದ ಬಾಧಿತವಾಗು

ವುದು. ಇದು ಪರಸ್ಪರ ವಿರೋಧವಾಗಿರುವುದು. ಸತರ್ಕವಾಗಿ ನೋಡುವುದಾದರೆ, ಯಾವುದು ಅನಂತವಾಗಿರುವುದೋ ಅದು ನಿನ್ನಲ್ಲಿ ಈಗ ಇರಬೇಕು. ಇಲ್ಲದೇ ಇದ್ದರೆ, ಅದು ಇಲ್ಲವೇ ಇಲ್ಲ. ಅದು ಎಲ್ಲೆಲ್ಲಿಯೂ ಇರಬೇಕು. ಇಲ್ಲದೇ ಇದ್ದರೆ ಇಲ್ಲವೇ ಇಲ್ಲ. ಸ್ಥಳ ಪಲ್ಲಟದಿಂದ ಪವಿತ್ರತೆಯನ್ನು ಪಡೆಯುವುದಕ್ಕೆ ಆಗುವುದಿಲ್ಲ. ಅಥವಾ ಅದನ್ನು ಯಾರೋ ಯಾರಿಗೋ ಭವಿಷ್ಯದಲ್ಲಿ ಕೊಡುವುದಕ್ಕೆ ಆಗುವುದಿಲ್ಲ. ಈಗ ಅದು ಇರಬೇಕು, ಇಲ್ಲದೇ ಇದ್ದರೆ ಎಂದಿಗೂ ಇಲ್ಲ.

ಪವಿತ್ರತೆ ನಿಮ್ಮಲ್ಲಿ ಅಂತರ್ಗತವಾಗಿದೆ ಎಂಬುದಕ್ಕೆ ಪರಮ ಪ್ರಮಾಣವೇ ಅನುಭವ. ನೀವು ಒಂದು ಪ್ರಯೋಗವನ್ನು ಮಾಡಿ, ಅನುಭವವನ್ನು ಪಡೆದರೆ, ಅದೇ ದೊಡ್ಡ ಪ್ರಮಾಣ. ನೀವು ಒಂದು ರಸಾಯನ ಶಾಸ್ತ್ರದ ಪ್ರಯೋಗಶಾಲೆಗೆ ಹೋದರೆ, ಅಲ್ಲಿ ಉಪಾಧ್ಯಾಯನು, ಎರಡು ಭಾಗ ಹೈಡ್ರೋಜನ್ ಒಂದಿಗೆ, ಒಂದು ಭಾಗ ಆಕ್ಸಿಜನ್ ಬೆರಸಿ, ಅಲ್ಲಿ ವಿದ್ಯುತ್ ಸ್ಪಂದನವನ್ನು ಉಂಟುಮಾಡಿದರೆ ನಿಮಗೆ ನೀರು ಸಿಕ್ಕುವುದು ಎಂದರೆ, ಅದಕ್ಕೆ ಪ್ರಮಾಣವೇನು ? ನಾವು ಪ್ರಯೋಗ ಮಾಡಬೇಕು. ಗುರು ಅಧಿಕಾರವಾಣಿಯಿಂದ ಮಾತನಾಡುತ್ತಾನೆ. ಏಕೆಂದರೆ ಅವನೇ ಪ್ರಯೋಗಮಾಡಿ ಅದರಿಂದ ಸತ್ಯವನ್ನು ಕಂಡುಕೊಂಡಿದ್ದಾನೆ. ಆದರೆ ನಿಮಗೆ ಪ್ರಮಾಣ ಯಾವುದು ? ಪ್ರತ್ಯಕ್ಷ ಅನುಭವ. ನಿಮ್ಮಲ್ಲಿ ಅಂತರ್ಗತವಾಗಿರುವ ಪವಿತ್ರತೆಯನ್ನು ಹೇಗೆ ವ್ಯಕ್ತಪಡಿಸುವುದು ಎಂಬುದನ್ನು ನಿಮಗೆ ಬೋಧಿಸಿದರೆ, ನೀವು ಅದನ್ನು ಪ್ರಯೋಗ ಮಾಡಿ ಜಯಶೀಲರಾಗುತ್ತೀರಿ. ಇದೇ ನಿರ್ವಿವಾದ ಪ್ರಮಾಣ. ಪ್ರತ್ಯಕ್ಷ ಅನುಭವವೇ ಸತ್ಯವನ್ನು ಪ್ರಮಾಣೀಕರಿಸುವ ಮೂರನೆಯ ಮಾರ್ಗ.

ಆ ಪ್ರತ್ಯಕ್ಷ ಅನುಭವವೇ ಪರಮ ಪ್ರಮಾಣ. ಸಾಧನೆಯನ್ನು ಸರಿಯಾದ ರೀತಿಯಲ್ಲಿ ಮಾಡಿದರೆ, ಪವಿತ್ರತೆಯನ್ನು ಸ್ಪಷ್ಟವಾಗಿ ಪ್ರಮಾಣೀಕರಿಸಬಹುದು. ಇದೊಂದೇ ನಿರ್ವಿವಾದ ಪ್ರಮಾಣ.

ನಾವು ಪ್ರತ್ಯಕ್ಷ ಅನುಭವವನ್ನು ಪಡೆಯಬೇಕಾದರೆ, ಯುಕ್ತಿ ಮತ್ತು ಆಪ್ತವಾಕ್ಯದ ಸಹಾಯವನ್ನು ಪಡೆಯಬೇಕು. ಈ ಮೂರು ಪ್ರಮಾಣಗಳೂ ಒಟ್ಟಿಗೆ ಸೇರಿ ಒಂದು ಅನುಭವವನ್ನು ಸತ್ಯವೆಂದು ಸಾರಬೇಕು. ಈ ಮೂರರಿಂದಲೂ ಒಂದೇ ನಿರ್ಣಯಕ್ಕೆ ಬಂದರೆ, ಆಗ ಸತ್ಯ. ಇದು ಮಾನವರು ಒಂದು ನಿರ್ಣಯಕ್ಕೆ ಬರುವ ರೀತಿ. ಈ ಮೂರನ್ನೇ ಹಿಂದೂ ತತ್ತ್ವ ಶಾಸ್ತ್ರದಲ್ಲಿ ಪ್ರಮಾಣಗಳು ಎಂದು ಹೇಳುವುದು.

ಎರಡನೆಯ ಸೂತ್ರ : ಅಂತರ್ಗತವಾಗಿರುವ ಪವಿತ್ರತೆಯನ್ನು ಬಾಹ್ಯ ಮತ್ತು ಆಂತರಿಕ ಪ್ರಕೃತಿಯ ನಿಗ್ರಹದಿಂದ ವ್ಯಕ್ತಪಡಿಸಬೇಕು.

ನಾವುಗಳೆಲ್ಲರೂ ಪವಿತ್ರಾತ್ಮರು. ಆದರೆ ನಮಗೆ ಏತಕ್ಕೆ ಅದು ಗೊತ್ತಿಲ್ಲ? ಅದನ್ನು ವ್ಯಕ್ತಪಡಿಸಲು ಏತಕ್ಕೆ ಇಷ್ಟೊಂದು ದುರ್ಬಲರಾಗಿದ್ದೇವೆ ? ಅದನ್ನು ವ್ಯಕ್ತಪಡಿಸುವುದಕ್ಕೆ ಕೆಲವು ಆತಂಕಗಳಿವೆ. ಅಂತರ್ಗತವಾಗಿರುವ ಪವಿತ್ರತೆ ವ್ಯಕ್ತವಾಗುವುದಕ್ಕೆ ಇರುವ ಅಡಚಣೆಗಳನ್ನು ನಿವಾರಿಸಬೇಕಾಗಿದೆ. ಇದನ್ನೇ ನಾವು ಬಾಹ್ಯ ಮತ್ತು ಆಂತರಿಕ

ಪ್ರಕೃತಿಯ ನಿಗ್ರಹದಿಂದ ಸಾಧಿಸಬೇಕಾಗಿದೆ. ಜೀವನ ಎಂದರೆ ಆತ್ಮ ತನ್ನ ಸ್ವಾಮಿತ್ವ ವನ್ನು ಸ್ಥಾಪಿಸುವುದಕ್ಕೆ ನಡಸುವ ಹೋರಾಟ. ಯಾವ ಆತ್ಮ ಸ್ವಭಾವತಃ ಪರಿಪೂರ್ಣ ವಾಗಿದೆಯೊ, ಅದನ್ನು ವ್ಯಕ್ತಪಡಿಸುವುದಕ್ಕೆ ಇರುವ ಆತಂಕಗಳೊಡನೆ ಹೋರಾಡುವುದು. ಈ ಆತಂಕಗಳು ಯಾವುವು? ಅವೇ ಅವಿದ್ಯೆ, ಚಿತ್ತ ಚಾಂಚಲ್ಯ, ಸರಿಯಾದ ನಾನು ಎಂಬುದರ ತಿಳಿವಳಿಕೆ ಇಲ್ಲದಿರುವುದು, ವಿಷಯ ವಸ್ತುಗಳನ್ನು ಸಂಗ್ರಹಿಸುವುದು ಮತ್ತು ಅದಕ್ಕೆ ಆಸಕ್ತವಾಗಿರುವುದು.

ಅಜ್ಞಾನ ಎಂದರೆ, ಯುಕ್ತಾಯುಕ್ತ ಪರಿಜ್ಞಾನವಿಲ್ಲದೇ ಇರುವುದು, ಮತ್ತು ಭ್ರಮೆ. ಇದನ್ನೇ ಸಂಸ್ಕೃತದಲ್ಲಿ ಅವಿದ್ಯೆ ಎನ್ನುವುದು. ಮನುಷ್ಯನ ನೈಜ ಸ್ವರೂಪದ ವಿಷಯ ದಲ್ಲಿ ಅವನಿಗೆ ಇರುವ ಅಜ್ಞಾನ.

ಹತ್ತು ಜನ ಒಂದು ಸಲ ನದಿಯನ್ನು ದಾಟುತ್ತಿದ್ದರು. ನದಿ ದಾಟುವುದಕ್ಕೆ ದೋಣಿ ಇರಲಿಲ್ಲ. ಅವರೆಲ್ಲ ಈಜಿಕೊಂಡು ದಾಟಬೇಕಾಗಿತ್ತು. ನದಿ ಆಳವಾಗಿ ವಿಶಾಲ ವಾಗಿತ್ತು, ಮತ್ತು ರಭಸದಿಂದ ಹರಿಯುತ್ತಿತ್ತು. ಜನರಿಗೆ ಚೆನ್ನಾಗಿ ಈಜುವುದಕ್ಕೆ ಬರು ತ್ತಿರಲಿಲ್ಲ. ಆದಕಾರಣ ಮೊದಲಿನಿಂದಲೂ ತಾವೆಲ್ಲಿ ನದಿ ಪಾಲು ಆಗುವೆವೋ ಎಂಬ ಅಂಜಿಕೆ ಅವರಲ್ಲಿತ್ತು.

ಬಹಳ ಕಷ್ಟಪಟ್ಟುಕೊಂಡು ನದಿಯ ಆಚೆಯ ದಡವನ್ನು ತಲಪಿದರು. ಇವರ ನಾಯಕ ತಮ್ಮ ಸಂಗಡಿಗರೆಲ್ಲರನ್ನೂ ಒಟ್ಟಿಗೆ ಸೇರಿಸಿ, ತಮ್ಮಲ್ಲಿ ಯಾರಾದರೂ ಕೊಚ್ಚಿ ಕೊಂಡು ಹೋಗಿರುವರೊ ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ಎಲ್ಲರನ್ನೂ ಎಣಿಸುವು ದಕ್ಕೆ ಪ್ರಾರಂಭಿಸಿದನು.

ಒಂದು, ಎರಡು, ಮೂರು, ನಾಲ್ಕು ಎಂದು ಒಂಭತ್ತರವರೆಗೆ ಎಣಿಸಿ, ಅಯ್ಯೋ ಹತ್ತನೆಯವನು ಇಲ್ಲವಲ್ಲ ಎಂದು ಅಳುವುದಕ್ಕೆ ಪ್ರಾರಂಭಿಸಿದನು. ಅವನ ಕಡೆಯವ ರೆಲ್ಲ ನದಿಯ ತೀರದಲ್ಲಿ ಕುಳಿತುಕೊಂಡು ಸತ್ತು ಹೋದವನಿಗೆ ವ್ಯಥೆ ಪಡುತ್ತಿದ್ದರು. ಸ್ವಲ್ಪ ಹೊತ್ತಿನ ಮೇಲೆ ಅಲ್ಲಿಗೆ ಒಬ್ಬ ಅಪರಿಚಿತ ಬಂದನು. ಅವರ ದುಃಖಕ್ಕೆ ಕಾರಣವೇನೆಂದು ಕೇಳಿದನು. ಜನರ ಮುಂದಾಳು ತಮ್ಮಲ್ಲಿ ಹತ್ತನೆಯವನು ಇಲ್ಲ ಎಂದು ಗೋಳಿಡುವುದಕ್ಕೆ ಮೊದಲು ಮಾಡಿದನು. ಅಪರಿಚಿತ ಅವನನ್ನು ಹಿಡಿದುಕೊಂಡು ನೀನೇ ಹತ್ತನೆಯವನು ಎಂದು ಹೇಳಿದನು.

ನಾವೂ ಕೂಡ ಕಥೆಯ ಹತ್ತನೆಯವನಂತೆ ನಮ್ಮ ಪೂರ್ಣತೆಯನ್ನು ಕಳೆದುಕೊಂಡಿ ರುವೆವು ಎಂದು ಭಾವಿಸುವೆವು. ಅದು ಯಾವಾಗಲೂ ನಮ್ಮಲ್ಲಿಯೇ ಇರುವಾಗ ಅದು ಇಲ್ಲ ಎಂದು ಅಳುತ್ತಿರುವೆವು. ಪವಿತ್ರತೆ ನಮ್ಮಲ್ಲಿಯೇ ಇದೆ. ಆದರೂ ಅಯ್ಯೋ, ಹೊರಟು ಹೋಗಿದೆ ಎಂದು ನಾವು ವ್ಯಥೆ ಪಡುತ್ತಿರುವೆವು. ಸದಾ ಕಾಲದಲ್ಲಿಯೂ ಆ ಪೂರ್ಣತೆ ನಮ್ಮಲ್ಲಿಯೇ ಇದೆ. ಆದರೆ ನಮ್ಮ ಅಜ್ಞಾನದಿಂದ ಅದನ್ನು ಅರಿಯಲಾರೆವು. ನಾವು ಈ ಅಜ್ಞಾನದಿಂದ ಪಾರಾಗುವುದು ಮುಂಚೆ ಬೇಕಾಗಿರುವುದು. ನಾವು ಈಗ ಅಜ್ಞಾನದ ನಿದ್ದೆಯಿಂದ ಏಳಬೇಕು. ನಾವು ಅದರಿಂದ ಎದ್ದಾಗ, ನಮ್ಮ ತಪ್ಪು ನಮಗೆ ಅರಿವಾಗು

ವುದು. ನಾವು ಅದನ್ನು ಎಲ್ಲೆಲ್ಲೊ ಹೊರಗೆ ಹುಡುಕುತ್ತಿರುವಾಗ, ನಾವು ಯಾವುದನ್ನು ಹುಡುಕುತ್ತಿದ್ದೆವೋ ಅದು ಯಾವಾಗಲೂ ನಮ್ಮಲ್ಲಿಯೇ ಇದ್ದಿತು ಎಂಬುದು ಗೊತ್ತಾಗುವುದು. ನಮಗೆ ಆತ್ಮನ ಯಥಾರ್ಥ ಜ್ಞಾನವಿರಲಿಲ್ಲ. ಇದನ್ನೇ ಅವಿದ್ಯೆ ಎನ್ನುವುದು. ಸರಿಯಾದ ಜ್ಞಾನವೇ ವಿದ್ಯೆ. ಕಸ್ತೂರಿ ಮೃಗ ತನ್ನ ನಾಭಿಯಲ್ಲಿ ಕಸ್ತೂರಿಯನ್ನು ಇಟ್ಟುಕೊಂಡಿರುತ್ತದೆ. ಅದರ ಪರಿಮಳವನ್ನು ಹುಡುಕುವುದಕ್ಕಾಗಿ ಸುಮ್ಮನೆ ಹೊರಗೆ ತಾರಾಡುತ್ತಿರುವುದು. ಕೆಲವು ವೇಳೆ ಹಾಗೆ ಹುಡುಕಾಡುವಾಗ ತನಗೇ ತೊಂದರೆ ಆಗುವುದು. ಅದಕ್ಕೆ ಕಸ್ತೂರಿ ತನ್ನಲ್ಲಿಯೇ ಇದೆ ಎಂಬ ಅರಿವೇ ಇಲ್ಲ.

ಮನಸ್ಸಿನ ಅಲ್ಲೋಲ ಕಲ್ಲೋಲವನ್ನೆ ಸಂಸ್ಕೃತದಲ್ಲಿ ಚಿತ್ತವೃತ್ತಿ ಎಂಬುದು. ಚಿತ್ತವೃತ್ತಿಗಳು ಆತ್ಮ ವ್ಯಕ್ತವಾಗುವುದಕ್ಕೆ ಆತಂಕಪ್ರಾಯವಾಗುವುವು. ನಿಜವಾಗಿಯೂ ಪವಿತ್ರತೆಯನ್ನು ಯಾವುದೂ ತಡೆಯಲಾರದು. ನಾವು ಅದನ್ನು ತಿಳಿದುಕೊಳ್ಳುವುದಕ್ಕೆ, ಅದನ್ನು ಕಂಡುಹಿಡಿಯುವುದಕ್ಕೆ ನಮಗೆ ಆತಂಕವಾಗುವುದು.

ನಿಮ್ಮ ಮನೆ ಅಂಗಳದಲ್ಲಿ ಒಂದು ನೀರಿನ ಉದ್ಯಾನವಿದೆ ಎಂದು ತಿಳಿದುಕೊಳ್ಳಿ. ನೀರು ಅಲುಗಾಡುತ್ತಿದ್ದರೆ, ಅಥವಾ ಕೊಳೆ ಆಗಿದ್ದರೆ ನೀರಿನಲ್ಲಿರುವುದು ನಿಮಗೆ ಹೇಗೆ ಕಾಣುವುದು ? ನೀರಿನ ಮೇಲೆ ಅಲೆಗಳಿದ್ದರೆ, ನೀರಿನಲ್ಲಿರುವ ತೋಟ ನಿಮಗೆ ಕಾಣುವುದಿಲ್ಲ. ನೀವು ನೀರಿನಲ್ಲಿರುವ ಬಣ್ಣ ಬಣ್ಣದ ಕಪ್ಪೆ ಚಿಪ್ಪುಗಳು, ಅದರಲ್ಲಿ ಬೆಳೆಯುವ ಸುಂದರವಾದ ಗಿಡಗಳನ್ನು, ಮತ್ತು ಹಲವು ಬಣ್ಣದ ಮೀನುಗಳನ್ನು ನೋಡಬೇಕೆಂದಿರುವಿರಿ. ಆದರೆ ನೀರು ಪ್ರಶಾಂತವಾಗದಿದ್ದರೆ, ಅದು ಶುಭ್ರವಾಗದಿದ್ದರೆ, ಮೇಲಿರುವ ನೀರಿನ ಕುಲುಕಾಟವೇ ನಿಮಗೆ ಕಾಣುವುದು. ಇದಿದ್ದರೆ, ಒಳಗಿರುವುದನ್ನು ನೀವು ನೋಡಲಾರಿರಿ. ನಿಮ್ಮ ಮನಸ್ಸೇ ನೀರಿನ ಸರೋವರ. ಅಲ್ಲಿಯೇ ಪವಿತ್ರತೆ ಎಂಬ ನೀರಿನ ತೋಟವಿರುವುದು. ನೀವು ನಿಮ್ಮ ಮನಸ್ಸಿನ ಅಲೆಗಳನ್ನು ನಿಗ್ರಹಿಸಿದರೆ, ಅದನ್ನು ಶುಭ್ರವಾಗಿಟ್ಟರೆ, ಅದರಲ್ಲಿರುವ ಪವಿತ್ರತೆ ನಿಮಗೆ ಕಾಣುವುದು. ನಮ್ಮ ಮನಸ್ಸು ಯಾವಾಗಲೂ ಅಲ್ಲೋಲ ಕಲ್ಲೋಲವಾಗಿರುವುದಕ್ಕೆ ಕಾರಣವೇ, ಹೊರಗಡೆಯಿಂದ ಬರುವ ವೇದನೆಗಳು. ನಮ್ಮ ಮನಸ್ಸಿನಲ್ಲಿ ಏಳುವ ಆಲೋಚನೆಗಳು, ಇಂದ್ರಿಯಕ್ಕೆ ವಿಷಯ ವಸ್ತುವಿನಿಂದ ಆಗುವ ಸಂಪರ್ಕ, ಮತ್ತು ನಮ್ಮ ಅಂತರಾಳದಲ್ಲಿರುವ ಹಲವು ಆಸೆ ಆಕಾಂಕ್ಷೆಗಳು, ಯೋಜನೆಗಳು, ಸ್ಮೃತಿ ಚಿತ್ರಗಳು, ನಾವು ಅದನ್ನು ತಾಟಸ್ಥ್ಯದಲ್ಲಿಡುವುದು ಹೇಗೆ? ಇದನ್ನು ಬಹಳ ಸರಳವಾಗಿ ಹೇಳಬಹುದು. ಮನಸ್ಸನ್ನು ಶಾಂತವಾಗಿಟ್ಟಿರಬೇಕು, ಶುದ್ಧವಾಗಿಟ್ಟಿರಬೇಕು. ಇದನ್ನು ಪಡೆಯುವುದಕ್ಕೆ ಬೇರೊಂದು ಮಾರ್ಗವಿದೆ.

ನಿಜವಾಗಿ ನಾನು ಯಾರು ಎಂಬ ಅರಿವಿಲ್ಲದೆ ಇರುವುದೇ ಮತ್ತೊಂದು ಆತಂಕ. ಸಂಸ್ಕೃತದಲ್ಲಿ ಇದನ್ನು ಅಹಂಕಾರ ಎನ್ನುತ್ತಾರೆ. ಎಲ್ಲಿಯವರೆಗೆ ಕ್ಷುದ್ರ ಅಹಂಕಾರವೇ ನಾನು ಎಂದು ಭಾವಿಸುವೆವೋ ಅಲ್ಲಿಯವರೆಗೆ, ನಮ್ಮ ಪವಿತ್ರತೆಯನ್ನು ತಿಳಿದುಕೊಳ್ಳಲಾರೆವು. ಈ ಅಹಂಕಾರದಿಂದ ನಾವು ಪಾರಾಗಬೇಕು.

ಒಂದು ಸಲ ಗರ್ಭಿಣಿ ಹುಲಿಯೊಂದು ಕುರಿಮಂದೆಯ ಮೇಲೆ ಬಿತ್ತು. ಆ ಗಲಾಟೆ

ಯಲ್ಲಿ ಅದು ಮರಿಯನ್ನು ಹಾಕಿ ಸತ್ತುಹೋಯಿತು. ಕುರಿಯೊಡನೆ ಹುಲಿಮರಿಯನ್ನು ಬೆಳೆಸುತ್ತಿದ್ದರು; ಕಾಲಕ್ರಮೇಣ ಈ ಹುಲಿಮರಿ ದೊಡ್ಡ ಒಂದು ಹುಲಿಯಾದರೂ, ಅದು ತಾನು ಕುರಿಮರಿ ಎಂದೇ ಭಾವಿಸಿತ್ತು. ಅದು ಕುರಿಮರಿಯಂತೆ ಆಚರಿಸುತ್ತಿತ್ತು. ಅದು ಕುರಿಮರಿಯಂತೆಯೇ ಅರಚುವುದು, ಅದರಂತೆಯೇ ಹುಲ್ಲು ತಿನ್ನುವುದು, ಅವುಗಳಂತೆಯೇ ಹುಲಿ ಮುಂತಾದ ವನ್ಯಮೃಗಗಳಿಗೆ ಅಂಜುತ್ತಿತ್ತು. ಅದು ತಾನು ಕುರಿಮರಿಯೆಂದೇ ಭ್ರಮೆ ಪಡೆಯಿತು.

ಕೆಲವು ಕಾಲದಮೇಲೆ ಕಾಡಿನ ಹುಲಿಯೊಂದು ಕುರಿಮಂದೆಯ ಮೇಲೆ ಬಿತ್ತು. ಅದೊಂದು ಸಣ್ಣ ಕುರಿಯನ್ನು ಕೊಂದಿತು. ಉಳಿದ ಮಂದೆಯೆಲ್ಲಾ ದಿಕ್ಕಾಪಾಲಾಗಿ ಚೆದುರಿಹೋದವು. ಓಡಿ ಹೋಗುತ್ತಿದ್ದ ಕುರಿಯ ಮಂದೆಯಲ್ಲಿ ಒಂದು ಚೆನ್ನಾಗಿ ಬೆಳೆದ ಹುಲಿಯೂ ಇದ್ದುದನ್ನು ನೋಡಿ, ಕಾಡಿನ ಹುಲಿಗೆ ಆಶ್ಚರ್ಯವಾಯಿತು. ಮಂದೆಯಲ್ಲಿದ್ದ ಹುಲಿಯೂ ಕುರಿಗಳಂತೆ ಅರಚುತ್ತ ಭಯದಿಂದ ಓಡಿಹೋಗುವುದನ್ನು ಕಂಡಿತು. ಕಾಡಿನ ಹುಲಿಗೆ ಪರಮಾಶ್ಚರ್ಯವಾಗಿ ಅದು ಕುರಿಯ ಹುಲಿಯನ್ನು ಅಟ್ಟಿಸಿಕೊಂಡು ಹೋಗಿ ಹಿಡಿಯಿತು.

ಕಾಡಿನ ಹುಲಿ ಕುರಿಯ ಹುಲಿಗೆ, ನೀನು ಏತಕ್ಕೆ ಕುರಿಯಂತೆ ಇರುವೆ, ನಿನಗೆ ಏನಾಗಿದೆ ಎಂದು ಕೇಳಿತು.

ಆದರೆ ಕುರಿ ಹುಲಿ "ನಾನೊಂದು ಕುರಿಯ ಮರಿಯೇ" ಎಂದಿತು. ಕಾಡಿನ ಹುಲಿ "ಅಸಹ್ಯ, ನೀನು ಕುರಿಯ ಮರಿಯಲ್ಲ. ನನ್ನಂತೆಯೇ ನೀನು ಹುಲಿ" ಎಂದಿತು. ಕುರಿಯ ಹುಲಿ ಇದನ್ನು ನಂಬಲಿಲ್ಲ. ಅದಕ್ಕೆ ತುಂಬಾ ಅಂಜಿಕೆ ಆಯಿತು. ನನ್ನನ್ನು ಕೊಲ್ಲಬೇಡ ಎಂದು ಅಂಜಿಕೆಯಿಂದ ನಡುಗುತ್ತ ಅದು ಕೇಳಿಕೊಂಡಿತು.

ಕಾಡಿನ ಹುಲಿ, ನಾನು ನಿನ್ನನ್ನು ಕೊಲ್ಲುವುದಿಲ್ಲ. ನಿನ್ನಲ್ಲಿರುವ ನಾನು ಕುರಿ ಎಂಬ ಭ್ರಾಂತಿಯನ್ನು ಕೊಲ್ಲುತ್ತೇನೆ ಎಂದಿತು. ನೀನು ಹುಲಿ ಎಂಬ ಜ್ಞಾನ ನಿನ್ನಲ್ಲಿ ಜಾಗ್ರತ ವಾಗಬೇಕು. ನನ್ನ ಜೊತೆಯಲ್ಲಿ ಬಾ, ನೀನು ಕುರಿಮರಿಯಲ್ಲ, ಹುಲಿ ಎಂಬುದನ್ನು ತೋರಿ ಸುತ್ತೇನೆ ಎಂದು ಅದನ್ನು ಕರೆದುಕೊಂಡು ಹೋಯಿತು. ಕುರಿಹುಲಿಯನ್ನು ಒಂದು ನೀರು ನಿಂತಿರುವ ಸ್ಥಳಕ್ಕೆ ಕರೆದುಕೊಂಡು ಹೋಗಿ ಅದಕ್ಕೆ ಅದರ ಪ್ರತಿಬಿಂಬವನ್ನು ತೋರಿ ಸಿತು. ನೀನು ನನ್ನ ಹಾಗೆಯೇ ಕಾಣುವುದಿಲ್ಲವೆ ? ಅಥವಾ ಕುರಿಮರಿಯಂತೆ ಕಾಣು ವೆಯಾ ಎಂದು ಕೇಳಿತು.

ಕುರಿಯಹುಲಿ ನೀರಿನಲ್ಲಿ ತನ್ನ ನೆರಳನ್ನು ನೋಡಿಕೊಂಡಿತು. ಅನಂತರ ಕಾಡಿ ನಿಂದ ಬಂದ ಹುಲಿಯನ್ನು ನೋಡಿತು. ಆಗ ತಾನು ಕುರಿಮರಿ ಅಲ್ಲ ಎಂಬ ಭಾವ ಕ್ರಮೇಣ ಮೂಡಿತು. ತಾನೊಂದು ಹುಲಿ ಆಗಿತ್ತು. ಕಾಡಿನ ಹುಲಿ ತಾನು ಕೊಂದ ಜಂತುವಿನ ಹತ್ತಿರಕ್ಕೆ ಕುರಿಯ ಹುಲಿಯನ್ನು ಕರೆದುಕೊಂಡು ಹೋಯಿತು. ಇದನ್ನು ತಿನ್ನು ಎಂದಿತು. ನೀನು ಕುರಿಮರಿಗಳ ಜೊತೆಯಲ್ಲಿ ಬೆಳೆದಿದ್ದುದ ರಿಂದ ಅದರಂತೆ ಹುಲ್ಲನ್ನು ಮೇಯುತ್ತಿದ್ದೆ. ಇದು ಹುಲಿಗಳ ಆಹಾರವಲ್ಲ. ನೀನು ನಿನ್ನ

ಆಜನ್ಮಸಿದ್ಧ ಹಕ್ಕನ್ನೇ ಮರೆತಿರುವೆ, ಈಗ ನೋಡು, ನಮ್ಮ ಕುಲದವರು ತಿನ್ನುವ ಆಹಾರ ವನ್ನು ಹೇಗೆ ತಿನ್ನುವುದು ಎಂಬುದನ್ನು ತೋರುತ್ತೇನೆ. ಅನಂತರ ನೀನು ಹುಲಿ ಎಂಬ ಭಾವ ನಿನ್ನಲ್ಲಿ ಪೂರ್ಣವಾಗಿ ಜಾಗ್ರತವಾಗುವುದು, ಎಂದಿತು. ಕುರಿಯ ಹುಲಿ ಅದನ್ನು ತಿನ್ನಲು ಅನುಮಾನಿಸಿತು. ಆದರೆ ಕಾಡಿನ ಹುಲಿ ಅದನ್ನು ತಿನ್ನುವಂತೆ ಬಲಾತ್ಕರಿಸಿತು. ಕ್ರಮೇಣ ಕುರಿಯ ಹುಲಿಯಲ್ಲಿ ಒಂದು ಬದಲಾವಣೆ ಆಯಿತು. ಕಾಡಿನ ಹುಲಿ ಕುರಿಯ ಹುಲಿಗೆ ಈಗ ಘರ್ಜಿಸು ಎಂದಿತು. ತಾನು ಹೇಗೆ ಮಾಡುತ್ತೇನೋ ಹಾಗೆ ಮಾಡು ಎಂದಿತು. ಹುಲಿಯ ಘರ್ಜನೆ ಹಿಂದೆ ಅದನ್ನು ಕೇಳಿದಾಗ ಕುರಿಯ ಹುಲಿ ಅಂಜಿಕೆಯಿಂದ ಕಂಪಿಸುತ್ತಿತ್ತು. ಈಗ ಅದು ತನ್ನಿಂದಲೇ ಬರುವುದನ್ನು ನೋಡಿ ಆನಂದದಿಂದ ಉನ್ಮತ್ತ ವಾಯಿತು. ಆಗ ತನ್ನ ಕಂಠದಿಂದ ಹುಲಿಯ ಘನ ಘರ್ಜನೆ ಕೇಳಿಬಂತು. ಬದಲಾವಣೆ ಸಂಪೂರ್ಣವಾಯಿತು. ಅದು ತನ್ನ ಬಳಗದವರೊಂದಿಗೆ ಬಾಳುವುದಕ್ಕಾಗಿ ಸಂತೋಷದಿಂದ ಘರ್ಜಿಸುತ್ತಾ ಹೋಯಿತು.

ನಾವೆಲ್ಲ ಕುರಿಯಮರಿಯಂತೆ ಇರುವೆವು. ನಾವೆಲ್ಲ ವ್ಯಾಘ್ರಗಳು, ಪವಿತ್ರಾತ್ಮರು. ಆದರೆ ನಾವೆಲ್ಲ ದುರ್ಬಲ ಮರ್ತ್ಯರು ಎಂದು ಭ್ರಮಿಸುತ್ತಿರುವೆವು. ಈ ತೋರಿಕೆಯ ಭ್ರಮೆ ಯಿಂದ ನಾವು ಪಾರಾಗಬೇಕಾಗಿದೆ. ನಾವುಗಳೆಲ್ಲ ದೊಡ್ಡ ವ್ಯಾಘ್ರದಂತೆ ದೇವರು ಎಂದು ಭಾವಿಸಬೇಕಾಗಿದೆ. ನಾವೆಲ್ಲ ದೇವರಲ್ಲಿ ಒಂದು ಎಂದು ಭಾವಿಸಬೇಕಾಗಿದೆ.

ಹಲವು ವಸ್ತುಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳುವುದನ್ನೇ ವಾಸನೆ ಎನ್ನುವುದು. ಈ ಜೀವನದ ಕ್ಷಣಿಕ ವಸ್ತುಗಳಿಗೆ ನಾವು ಆಸಕ್ತರಾಗುತ್ತೇವೆ. ಈ ಆಸಕ್ತಿಯಿಂದಲೇ ನಾವು ಬಂಧನಕ್ಕೆ ಒಳಗಾಗುತ್ತೇವೆ. ಇದು ಜಟಿಲವಾಗುತ್ತ ಬರುವುದು. ಕರ್ಮದಲ್ಲಿ ನಾವು ಸಂಪೂರ್ಣವಾಗಿ ನಮ್ಮನ್ನು ಮರೆತೇ ಹೋಗುತ್ತೇವೆ. ನಾವು ಎಲ್ಲ ಕರ್ಮದಿಂದಲೂ ಆಸಕ್ತಿಯಿಂದಲೂ ಪಾರಾಗುವ ತನಕ, ನಾವು ಇವುಗಳನ್ನು ಮೀರಿದವರು ಎಂಬುದನ್ನು ತಿಳಿಯುವ ತನಕ, ನಮ್ಮ ನೈಜ ಸ್ವಭಾವ ನಮ್ಮ ಅರಿವಿಗೆ ಬರುವುದಿಲ್ಲ.

ಒಬ್ಬ ಪರಿವ್ರಾಜಕನಾದ ಸಾಧುವಿನಿಂದ ಉಪದೇಶ ಪಡೆದ. ಕೆಲವು ಕಾಲದ ಮೇಲೆ ಆ ಸಾಧು ಶಿಷ್ಯನನ್ನು ಊರಿನ ಹೊರಗೆ ಬಂದು ಪರ್ಣಶಾಲೆಯಲ್ಲಿ ಧ್ಯಾನ ಮಾಡು ಎಂದುಬಿಟ್ಟು ಇವನು ಸಂಚಾರಕ್ಕೆ ಹೊರಟ.

ಹೊಸ ಸಾಧು ಪ್ರತಿದಿನವೂ ಭಿಕ್ಷೆಗೆ ಹೊರಗೆ ಹೋಗುತ್ತಿದ್ದ. ಉಳಿದ ಕಾಲವನ್ನು ಗುರು ಹೇಳಿದಂತ ಧ್ಯಾನದಲ್ಲಿ ಕಳೆಯುತ್ತಿದ್ದ. ಒಂದು ದಿನ ಸಾಧು ಗುಡಿಸಲಿನಿಂದ ಹೊರಗೆ ಹೋಗಿದ್ದಾಗ ಅವನು ಒಗೆದು ಹಾಕಿದ್ದ ಬಟ್ಟೆಯನ್ನು ಒಂದು ಇಲಿ ಕತ್ತರಿಸಿ ಹಾಕಿತ್ತು. ಈಗ ಸಾಧುವಿಗೆ ಒಂದು ಪಂಚೆ ಮಾತ್ರ ಇತ್ತು. ಈಗ ಇಲಿ ಅವನು ಉಟ್ಟುಕೊಂಡಿದ್ದ ಒಂದು ಪಂಚೆ ಮತ್ತು ಇತರ ಬಟ್ಟೆಗಳನ್ನು ಮಾತ್ರ ಹಾಗೇ ಬಿಟ್ಟಿತ್ತು.

ಮಾರನೇ ದಿನ ಸಾಧು ಭಿಕ್ಷಕ್ಕೆ ಹೋಗಿದ್ದಾಗ ಹಳ್ಳಿಯವರಿಗೆ ತನ್ನ ಕಷ್ಟವನ್ನು ಹೇಳಿಕೊಂಡ. ಹಳ್ಳಿಯವರು ಕನಿಕರದಿಂದ "ಸ್ವಾಮಿಜೀ, ಇವತ್ತು ನಿಮಗೆ ಒಂದು ಹೊಸ ಪಂಚೆಯನ್ನು ಕೊಡುತ್ತೇವೆ. ಆದರೆ ಪದೇ ಪದೇ ಹೇಗೆ ಪಂಚೆಯನ್ನು ಕೊಡಲು ಆಗು

ತ್ತದೆ. ನೀವು ಒಂದು ಬೆಕ್ಕನ್ನು ಸಾಕಿ. ಅದು ಇಲಿಯ ಹಾವಳಿಯನ್ನು ಬಗೆಹರಿಸುವುದು" ಎಂದರು.

ಹಳ್ಳಿಯವರು ಸಾಧುವಿಗೆ ಒಂದು ಬೆಕ್ಕನ್ನು ಕೊಟ್ಟರು. ಸಾಧು ಅದನ್ನು ತನ್ನ ಜೋಪಡಿಗೆ ತೆಗೆದುಕೊಂಡು ಹೋದ. ಆದರೆ ಆ ಬೆಕ್ಕು ಹಗಲೂ ರಾತ್ರಿ ಹಾಲಿಗೆ ಮಿಯಾವ್, ಮಿಯಾವ್ ಎಂದು ಗೋಳಿಡುತ್ತ ಅವನಿಗೆ ದೊಡ್ಡ ರೇಜಿಗೆಯನ್ನೇ ಉಂಟು ಮಾಡಿತು. ಬೆಕ್ಕಿನ ದೆಸೆಯಿಂದ ಅವನು ಧ್ಯಾನಮಾಡುವುದಕ್ಕೇ ಆಗಲಿಲ್ಲ.

ಮಾರನೇ ದಿನ ಸಾಧು ಭಿಕ್ಷಕ್ಕೆ ಹೋಗಿದ್ದಾಗ ಬೆಕ್ಕಿಗೆ ಸ್ವಲ್ಪ ಹಾಲನ್ನು ಕೇಳಿದನು. ಅದಕ್ಕೆ ಹಳ್ಳಿಯವರು "ಸ್ವಾಮಿಜೀ, ಇವತ್ತೇನೊ ನಿಮ್ಮ ಬೆಕ್ಕಿಗೆ ಸ್ವಲ್ಪ ಹಾಲನ್ನು ಕೊಡುತ್ತೇವೆ, ಆದರೆ ಪ್ರತಿದಿನವೂ ಕೊಡುವುದಕ್ಕೆ ಆಗುವುದಿಲ್ಲ. ನೀವೊಂದು ಹಸುವನ್ನು ಸಾಕಿದರೆ ಬೆಕ್ಕಿಗೆ ಬೇಕಾದಷ್ಟು ಹಾಲು ಸಿಕ್ಕುವುದು" ಎಂದರು. ಅವರು ಅವನಿಗೆ ಒಂದು ಗೋವನ್ನು ದಾನ ಮಾಡಿದರು. ಈಗ ಸಾಧು ಹಸುವಿನ ಮೇವನ್ನು ಹೊಂದಿಸಬೇಕಾಯಿತು. ಅದಕ್ಕಾಗಿ ಯಾರೊ ಹಸು ಮೇಯುವುದಕ್ಕಾಗಿ ಸ್ವಲ್ಪ ಜಮೀನನ್ನು ಕೊಟ್ಟರು. ಇದು ಹೀಗೆ ಆಗಿ ಅವನ ಸುತ್ತಲೂ ಒಂದು ಹುಲುಸಾಗಿ ಬೆಳೆದ ಜಮೀನು ಆಯಿತು. ಈಗ ಅವನು ದನಕ್ಕೆ ಹುಲ್ಲು, ಕೆಲಸ ಮಾಡುವವರಿಗೆ ಮತ್ತು ತನಗೆ ದವಸ ಧಾನ್ಯ ಬೆಳೆಯುವುದರಲ್ಲಿ ನಿರತನಾದ.

ಒಂದು ದಿನ ಹಿಂದಿನ ಸಾಧು, ಯಾವ ಶಿಷ್ಯನನ್ನು ಗುಡಿಸಲಿನಲ್ಲಿ ಧ್ಯಾನಮಾಡುತ್ತಿರು ಎಂದು ಹೇಳಿದ್ದನೋ ಅವನನ್ನು ನೋಡುವುದಕ್ಕೆ ಬಂದ. ಅವನು ಸಾಧನೆಯಲ್ಲಿ ಎಷ್ಟು ಮುಂದುವರಿದಿರುವನು ಎಂಬುದನ್ನು ನೋಡ ಬಯಸಿದ. ಸಾಧು ಸುತ್ತಲೂ ನೋಡಿದ. ಹಿಂದೆ ಇದ್ದಂತೆ ಇಲ್ಲಪೆ ಇರುವುದನ್ನು ನೋಡಿ ಅವನಿಗೆ ಸೋಜಿಗವಾಯಿತು. ಹಳೆಯ ಗುಡಿಸಲು ಹೋಗಿತ್ತು. ಅದರ ಸ್ಥಳದಲ್ಲಿ ರೈತನ ಮನೆ ಬಂದಿತ್ತು. ಕೆಲವು ಆಳುಗಳು ಅಲ್ಲಿ ಕೆಲಸ ಮಾಡುವುದನ್ನು ನೋಡಿದ. ಅವರನ್ನು ಹಿಂದೆ ಒಂದು ಗುಡಿಸಿಲಿನಲ್ಲಿದ್ದ ಸಾಧು ಎಲ್ಲಿ ಹೋದ ಎಂದು ಕೇಳಿದ. ಶಿಷ್ಯನಿಗೆ ಗುರುವಿನ ಧ್ವನಿ ಗೊತ್ತಾಗಿ ಮನೆಯ ಒಳಗಿನಿಂದ ಓಡಿ ಬಂದ. ಸಾಧು, "ವತ್ಸ ನಿನಗೆ ಏನಾಯಿತು ?" ಎಂದು ಕೇಳಿದ. ಶಿಷ್ಯ ತನ್ನ ಕಥೆಯನ್ನು ಹೇಳಿದ. ಸಾಧು ತುಂಬ ವ್ಯಸನದಿಂದ ತಲೆಯನ್ನು ಅಲ್ಲಾಡಿಸುತ್ತ ಇದೆಲ್ಲ ಒಂದು ಕೌಪೀನಕ್ಕಾಗಿ ಎಂದು ಹೇಳಿದ.

ನಮ್ಮಲ್ಲಿ ಅಂತರ್ಗತವಾಗಿರುವ ಪವಿತ್ರತೆ ವ್ಯಕ್ತಗೊಳಿಸುವುದಕ್ಕೆ ಇರುವ ನಾಲ್ಕು ಮುಖ್ಯ ಆತಂಕಗಳು. ನಾವೀಗ ಮೂರನೆ ಸಲಹೆಗೆ ಬರುತ್ತೇವೆ. ನಮ್ಮಲ್ಲಿರುವ ಪವಿತ್ರತೆಯನ್ನು ವ್ಯಕ್ತಗೊಳಿಸಲು ನಾವು ಏನು ಮಾಡಬೇಕು ಎಂಬುದನ್ನು ನೋಡೋಣ. ಮೂರನೆಯ ಸೂತ್ರ ಇದನ್ನು ಕರ್ಮದಿಂದಾದರೂ ಮಾಡಿ, ಪೂಜೆಯಿಂದಾದರೂ ಮಾಡಿ, ಮನೋನಿಗ್ರಹದಿಂದಲಾದರೂ ಮಾಡಿ, ಜ್ಞಾನಮಾರ್ಗದಿಂದಲಾದರೂ ಮಾಡಿ, ಒಂದು ಮಾರ್ಗವೋ, ಎರಡು ಮಾರ್ಗವೋ, ಅಥವಾ ಎಲ್ಲಾ ಮಾರ್ಗಗಳ ಮಿಶ್ರದಿಂದಾದರೂ ಮಾಡಿ ಮುಕ್ತರಾಗಿ.

ಮಾನವಕೋಟಿಯನ್ನು ಮೂರು ಭಾಗ ಮಾಡಬಹುದು. ಜಾಗ್ರತರಾದವರು, ಜಾಗ್ರತರಾಗುವುದಕ್ಕೆ ಸಿದ್ಧರಾಗಿರುವವರು, ಬದ್ಧರಾಗಿರುವವರು. ಜಾಗ್ರತರಾಗಿರುವವರಲ್ಲಿ, ತಮ್ಮಲ್ಲಿರುವ ಪವಿತ್ರತೆಯ ಅರಿವಿದೆ. ಅವರಿಗೆ ಪೂರ್ಣ ಅರಿವಾಗಿದೆ ಎಂದಲ್ಲ. ಆದರೆ ಬಹುಮಟ್ಟಿಗೆ ಜಾಗ್ರತರಾಗಿರುವರು. ಅಂತಹವರ ಸಂಖ್ಯೆ ಯಾವಾಗಲೂ ಅತಿ ವಿರಳ. ಯಾರು ಬದ್ಧರಾಗಿರುವರೋ ಅವರು ಈಗಿನ ಸ್ಥಿತಿಯಲ್ಲಿ ತೃಪ್ತರಾಗಿರುವರು. ಅವರು ತಮ್ಮ ಇಂದ್ರಿಯ ಪ್ರಪಂಚದ ಆಚೆ ಯಾವುದನ್ನೂ ಗಮನಿಸುವುದಿಲ್ಲ. ಇವರೇ ಮಾನವ ಕೋಟಿಯ ಅತ್ಯಧಿಕ ಸಂಖ್ಯಾತರು. ಜಾಗ್ರತರಾಗುವುದಕ್ಕೆ ಸಿದ್ಧರಾಗಿರುವವರೆ ಆಧ್ಯಾತ್ಮಿಕ ಜೀವನದ ಸಾಧಕರು.

ಸಾಧಕರನ್ನು ಅವರವರ ಸ್ವಭಾವಕ್ಕೆ ಅನುಗುಣವಾಗಿ ನಾಲ್ಕು ವರ್ಗಗಳನ್ನಾಗಿ ವಿಭಾಗಿಸಬಹುದು. ವಿಚಾರ ಮಾಡುವವರ ಗುಂಪು, ವಿಷಯವಸ್ತುವನ್ನು ಗಮನಿಸದೆ ಮನೋ ಏಕಾಗ್ರತೆಯ ಕಡೆಗೆ ಗಮನಿಸುವವರು, ಪ್ರೀತಿಸುವ ಭಾವುಕರು, ನಾಲ್ಕನೆಯದೆ ಕರ್ಮ ಪಟುಗಳು. ಇದು ಬಾಹ್ಯಮುಖನಾಗಿರುವ ಕರ್ಮವೀರರನ್ನು ಕುರಿತದ್ದು.

ಈ ನಾಲ್ಕು ಮಾರ್ಗಗಳೂ ಮುಖ್ಯವಾದುವುಗಳೇ. ಒಂದರ ನೀತಿಯನ್ನು ಮತ್ತೊಂದಕ್ಕೆ ಅನ್ವಯಿಸಲು ಆಗುವುದಿಲ್ಲ. ಪ್ರತಿಯೊಂದು ಮಾರ್ಗದವರು ಮುಂದುವರೆಯುವುದಕ್ಕೆ ತಾವು ಅನುಸರಿಸುವ ಮಾರ್ಗವನ್ನು ಯೋಗ ಎಂದು ಕರೆಯುತ್ತಾರೆ. ಯೋಗ ಎಂಬ ಪದ ಸಂಸ್ಕೃತದ 'ಯಜ್' ಎಂಬ ಪದದಿಂದ ಬಂದಿದೆ. ಎಂದರೆ ಒಟ್ಟಿಗೆ ಸೇರಿಸುವುದು, ಬೆರೆಸುವುದು, ಕಟ್ಟುವುದು ಎಂದರ್ಥ. ಇಲ್ಲಿ ಜೀವಾತ್ಮನನ್ನು ಪರಮಾತ್ಮನೊಂದಿಗೆ ಸೇರಿಸುವುದು ಎಂದು ಅರ್ಥ. ಪ್ರತಿಯೊಂದು ಯೋಗವೂ ಮತ್ತೊಂದು ಯೋಗದ ಸಹಾಯವಿಲ್ಲದೆ ಗುರಿಗೆ ಒಯ್ಯಬಲ್ಲದು. ಪಾರಿಭಾಷಿಕವಾಗಿ ಯೋಗ ಎಂದರೆ ಯಾವುದು ಸಾಧಕನನ್ನು ಗುರಿಗೆ ಒಯ್ಯುವುದೊ ಅದು. ವಿಚಾರ ಮಾಡುವವನು ಜ್ಞಾನಯೋಗವನ್ನು ಅನುಸರಿಸುವನು. ಭಕ್ತಿಯ ಸ್ವಭಾವದವರಿಗೆ ಭಕ್ತಿಯೋಗ ಹಿಡಿಸುವುದು. ಬಹಿರ್ಮುಖರಾದ ಕಾರ್ಯ ಪಟುಗಳಿಗೆ ಕರ್ಮಯೋಗ ಹಿಡಿಸುವುದು.

ಯೋಗಗಳೆಲ್ಲ ಒಂದೇ ಗುರಿಗೆ ಕರೆದುಕೊಂಡು ಹೋಗುವುವು ಎಂಬುದನ್ನು ಗಮನದಲ್ಲಿಡಿ. ಅದರಲ್ಲಿ ಯಾವುದಾದರೂ ಒಂದನ್ನು ಮುಖ್ಯ ಎಂದು ಭಾವಿಸಿ ; ಇತರ ಮಾರ್ಗಗಳನ್ನೆಲ್ಲ ಲಘುವಾಗಿ ಭಾವಿಸಬೇಡಿ. ಯಾವುದಾದರೂ ಒಂದು ಯೋಗವನ್ನು ಚೆನ್ನಾಗಿ ಅನುಸರಿಸಿದರೆ ಅದು ಮುಕ್ತಿಗೆ ಒಯ್ಯಬಲ್ಲದು.

ಹಿಂದೂ ದರ್ಶನ ಶಾಸ್ತ್ರದ ವೈಶಿಷ್ಟ್ಯ ಇದು. ಇಲ್ಲಿ ಹಲವು ರೀತಿ ಪ್ರಯೋಗ ಮಾಡಬಹುದು. ಆದಕಾರಣ ಇದನ್ನು ವೈಜ್ಞಾನಿಕ ಎಂದು ನಾವು ಕರೆಯಬಹುದು. ಒಬ್ಬ ಋಜುತ್ವದಿಂದ ಸಾಧನೆ ಮಾಡಿದರೆ, ಅವನಿಗೇ ಇದು ವೇದ್ಯವಾಗುವುದು, ಅದರಿಂದ ಬರುವ ಪ್ರತಿಫಲಗಳಿಂದ.

ಜ್ಞಾನಯೋಗ

ಮಾಯಾ ತೆರೆಯನ್ನು ಸರಿಸಿ, ನಿಮ್ಮ ಆತ್ಮ, ಪ್ರಪಂಚ, ಬ್ರಹ್ಮ ಇವುಗಳ ವಿಷಯದಲ್ಲಿ ಸತ್ಯವನ್ನು ಅರಿತು ಮುಕ್ತರಾಗಿ.

ಜ್ಞಾನಯೋಗದ ಮಾರ್ಗದಲ್ಲಿ ಸಾಧನೆ ಇದು. ಮಾಯಾ ತೆರೆ ಈ ಮೂರು ವಸ್ತುಗಳನ್ನು ಆವರಿಸಿರುವುದು. ಇದನ್ನು ನಾವು ಅತ್ತ ಸರಿಸಬೇಕಾಗಿದೆ.

ಬ್ರಹ್ಮ ಎಂದರೆ ಏನು ? ಅದು ಒಂದು, ಎಂದಿಗೂ ಬದಲಾಯಿಸನೆ ಇರುವುದು ಮತ್ತು ಅಖಂಡ ಅಸ್ತಿತ್ವ. ಇದೇನೇ ಪವಿತ್ರತೆ, ಇದೇನೆ ದೇವರು. ದ್ವೈತ ತತ್ವಗಳಲ್ಲಿ ದೇವರೆಂದರೆ ಏನು ಭಾವನೆ ಬರುವುದೊ ಅದಕ್ಕಿಂತ ಬ್ರಹ್ಮ ಎಂಬ ಪದ ಮತ್ತೂ ವಿಶಾಲವಾಗಿರುವುದು. ಬ್ರಹ್ಮ ಎಂದರೆ ಅತ್ಯಂತ ದೊಡ್ಡದು, ಅದರಾಚೆ ಮತ್ತೇನೂ ಇಲ್ಲ. ಎಂದಿಗೂ ನಾವು ಅರಿಯಲಾಗದ ವಿಷಯವಸ್ತು. ಆದರೂ ನಾವು ಅದನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬಹುದು.

ಹಿಂದೂ ದರ್ಶನ ಬ್ರಹ್ಮನನ್ನು ನೇತಿ ನೇತಿ ಎಂದು ವಿವರಿಸುವುದು. ಇದನ್ನು ಇತಿ ಎಂದು ಹೇಳಲಾಗುವುದಿಲ್ಲ. ಏಕೆಂದರೆ ಅದು ಮನಸ್ಸಿಗೆ ಒಂದು ದೃಶ್ಯವಾಗಲಾರದು. ನಮಗೆ ಗೊತ್ತಿರುವ ಎಲ್ಲವನ್ನೂ ಮನಸ್ಸಿನ ಮೂಲಕ ತಿಳಿದುಕೊಳ್ಳುತ್ತೇವೆ. ಬ್ರಹ್ಮನನ್ನು ನಮ್ಮ ಮನಸ್ಸು ಮತ್ತು ಇಂದ್ರಿಯದ ಬೇಲಿಯಲ್ಲಿ ತರುವುದಕ್ಕೆ ಆಗುವುದಿಲ್ಲ. ನೇತಿ ನೇತಿ ಎಂದು ಕರೆಯುವುದರಿಂದ ಮಾತ್ರ ಬ್ರಹ್ಮನನ್ನು ಅರಿಯಬಹುದು. ಅನಂತವಾದ ನಿರಾಕಾರವಾದ ಬ್ರಹ್ಮ ಒಂದು ದೃಶ್ಯವಸ್ತು ಆಗಲಾರದು. ಅದನ್ನು ಕಾಲ ದೇಶ ನಿಮಿತ್ತದ ಬೇಲಿಯೊಳಗೆ ತರಲಾಗುವುದಿಲ್ಲ. ನೀವು ಯಾವುದಾದರೂ ಒಂದು ಆಕಾರವನ್ನು ಚಿಂತಿಸಿದರೆ ಅದನ್ನು ಆಕಾಶದಲ್ಲಿ ತರಬೇಕು. ಆಗ ಅದು ಆಕಾಶದ ಮಿತಿಗಳಿಂದ ಬಾಧಿತವಾಗುವುದು. ಆಕಾಶದ ಮಿತಿಯನ್ನು ಒಪ್ಪಿಕೊಂಡ ತಕ್ಷಣವೇ ಕಾಲ ಮತ್ತು ನಿಮಿತ್ತದ ಮಿತಿಯನ್ನು ಒಪ್ಪಿಕೊಳ್ಳಬೇಕಾಗುವುದು. ಈ ಮೂರು ಪದಗಳು ಒಂದನ್ನೊಂದು ಆಶ್ರಯಿಸಿವೆ. ಅವೆಲ್ಲ ಒಟ್ಟಿಗೆ ಇರುತ್ತವೆ, ಇಲ್ಲವೇ ಒಟ್ಟಿಗೆ ಹೋಗುತ್ತವೆ. ಅದಕ್ಕಾಗಿಯೇ ನಿರಾಕಾರವಾದ ಅಖಂಡ ಬ್ರಹ್ಮನನ್ನು ನೇತಿ, ನೇತಿ (ಇದಲ್ಲ) ಎಂದು ಹೇಳುವುದು.

ಅದನ್ನು ಸ್ಪಷ್ಟವಾದ ಭಾಷೆಯಲ್ಲಿ ಹೇಳಿದರೆ, ಅದು ಸಚ್ಚಿದಾನಂದ. ಪ್ರಮಾಣ ಗ್ರಂಥಗಳಾದ ಹಿಂದೂ ಶಾಸ್ತ್ರಗಳು ಅವುಗಳನ್ನು ಹಾಗೆ ಸಾರುತ್ತವೆ. ಯುಕ್ತಿ ಮತ್ತು ಊಹೆಯೂ ಇದನ್ನು ಸಮರ್ಥಿಸುವುದು. ಅತ್ಯಂತ ಶ್ರೇಷ್ಠವಾದ ಅತೀಂದ್ರಿಯ ನಿರ್ವಿಕಲ್ಪ ಸಮಾಧಿಯಲ್ಲಿ ಅನೇಕ ಮಹರ್ಷಿಗಳು ಮತ್ತು ಅವತಾರಗಳು ಹಿಂದಿನಿಂದಲೂ ಇವುಗಳನ್ನು

ಸಾಕ್ಷಾತ್ಕಾರ ಮಾಡಿಕೊಂಡಿರುವರು. ಇದನ್ನು ನಾವು ಕೂಡ ಅನುಭವದ ಮೂಲಕ ಸತ್ಯ ಎಂದು ಅರಿಯಬಹುದು.

ಮಾಯೆ ಎಂದರೇನು ? ಸತ್ಯವನ್ನು ಅರಿಯುವುದಕ್ಕೆ ತಡೆಯುವ ಭೇದಿಸಲಾಗದ ಶಕ್ತಿ. ನಾವು ಮಾಯೆಯ ದೆಸೆಯಿಂದ ಬ್ರಹ್ಮನನ್ನು ಅರಿಯಲಾಗುವುದಿಲ್ಲ. ಮಾಯೆ ಎಂದರೆ ಬ್ರಹ್ಮನ ಒಂದು ಶಕ್ತಿ. ಅದು ವಸ್ತು ಇಲ್ಲದೇ ಇದ್ದರೂ ಇರುವಂತೆ ಮಾಡುವುದು. ಇದಕ್ಕೆ ಭ್ರಮೆ ಎಂತಲೂ ಅರ್ಥ ಮಾಡುತ್ತಾರೆ. ಮಾಯೆಯ ದೆಸೆಯಿಂದ ಏಕವಾದ ನಿರ್ವಿಕಾರಿಯಾದ ಬ್ರಹ್ಮ, ವೈವಿಧ್ಯತೆಗಳಿಂದ ಕೂಡಿದ ಈ ಪ್ರಪಂಚದಂತೆ ಕಾಣುತ್ತದೆ, ರಂಗಭೂಮಿಯ ಮೇಲೆ ಅಭಿನಯಿಸುತ್ತಿರುವ ಪಾತ್ರಧಾರಿಯಂತೆ. ಅವನು ಒಂದು ಪಾತ್ರವನ್ನು ಅಭಿನಯಿಸುತ್ತಿರುವಾಗ, ಅದರಂತೆಯೇ ಕಾಣುತ್ತಾನೆ. ಆದರೆ ನಿಜವಾಗಿಯೂ ಅದಲ್ಲ. ಮಾಯೆಯನ್ನು ಇದೆ ಎಂತಲೂ ಹೇಳಲಿಕ್ಕಾಗುವುದಿಲ್ಲ. ಇಲ್ಲ ಎಂತಲೂ ಹೇಳಲಿಕ್ಕೆ ಆಗುವುದಿಲ್ಲ. ಇದು ಈಗ ಕಾಣುವ ರೀತಿ. ಬ್ರಹ್ಮ ನಿರ್ವಿಕಾರಿ ಆದುದು. ಅದರಿಂದ ಈ ದೃಶ್ಯ ಪ್ರಪಂಚ ಪ್ರಕ್ಷೇಪಣೆಗೊಳ್ಳುತ್ತದೆ. ಆದರೆ ಬ್ರಹ್ಮನಲ್ಲಿ ಯಾವ ವಿಧವಾದ ಬದಲಾವಣೆಯೂ ಆಗಿಲ್ಲ. ಹಲವದರಂತೆ ತೋರುತ್ತಿರುವ ಬ್ರಹ್ಮನನ್ನು ಮಾಯೆ ಎನ್ನುವುದು.

ಸಿನೆಮಾ ಚಿತ್ರದಲ್ಲಿ ನಮಗೆ ಇದಕ್ಕೆ ತಕ್ಕ ಉದಾಹರಣೆ ಸಿಕ್ಕುವುದು. ತೆರೆಯಮೇಲೆ ಕಾಣುವ ಚಿತ್ರಗಳು ಸತ್ಯವಲ್ಲ. ಅದರ ಹಿಂದೆ ಇರುವ ಬೆಳಕು ಮಾತ್ರ ಸತ್ಯ. ಜ್ಯೋತಿ ಸ್ಪಂದನದಿಂದ ನಾವು ನೋಡುತ್ತಿರುವ ಚಿತ್ರ ಆಗಿದೆ. ಬೆಳಕನ್ನು ಬಿಟ್ಟರೆ ಸತ್ಯವೇ ಇಲ್ಲ. ಇದರಂತೆಯೇ ನಮಗೆ ಹಲವದರಂತೆ ತೋರುವ ಎಲ್ಲಾ ವಸ್ತುಗಳ ಬೇರೆ ಸತ್ಯವೇ ಬ್ರಹ್ಮ. ಇತರ ದೃಶ್ಯ ವಸ್ತುಗಳು ಸತ್ಯದಂತೆ ನಮಗೆ ಕಾಣಬಹುದು. ಆದರೆ ಅವಕ್ಕೆಲ್ಲ ಕಾರಣ ಸ್ಥಿರವಾದ ಬ್ರಹ್ಮನ ಬೆಳಕು. ಬ್ರಹ್ಮನೇ ಈ ವಿಶ್ವದ ಹಿಂದೆ ಇರುವ ಯಾವ ವಿಕಾರಕ್ಕೂ ಒಳಗಾಗದ ಸತ್ಯ. ಈ ಬೆಳಕಿನ ರಹಸ್ಯವನ್ನು ನೀವು ತಿಳಿದುಕೊಂಡರೆ, ಈ ವಿಶ್ವವೆಂಬ ಸಿನೆಮಾ ಚಿತ್ರವನ್ನು ನೀವು ಆನಂದಿಸಬಲ್ಲಿರಿ. ಆದರೆ ನಿಮಗೆ ಅದರ ರಹಸ್ಯ ಗೊತ್ತಾಗದೆ ಇದ್ದರೆ, ನೀವು ಅದು ಹೇಳಿದಂತೆ ಕೇಳಬೇಕಾಗುವುದು. ಆಗ ನೀವು ಒಂದು ಆಟದ ಚೆಂಡಿನಂತೆ ಆಗುವಿರಿ. ಈಗ ಒಬ್ಬ ಆಟಗಾರನ ಕಾಲಿನಿಂದ ಒದೆಸಿಕೊಳ್ಳುತ್ತಿರುವುದು, ಅನಂತರ ಮತ್ತೊಬ್ಬರ ತಲೆಯ ಮೇಲಿರುವುದು.

ಮನುಷ್ಯನ ನಿಜವಾದ ಆತ್ಮನಿಗೆ ಪವಿತ್ರತೆಯ ಗುಣಗಳೆಲ್ಲ ಇವೆ. ಅದು ಪವಿತ್ರವೇ ಆಗಿದೆ. ಇದನ್ನು ನಾವು ಪೀಠಿಕಾ ಅಧ್ಯಾಯದಲ್ಲಿ ಆಗಲೇ ವಿಚಾರಿಸಿರುವೆವು. ಮುಂದೆ ಹೋದಂತೆ ಇನ್ನೂ ಹೆಚ್ಚು ವಿಮರ್ಶಿಸುತ್ತೇವೆ. ಆತ್ಮನ ಪವಿತ್ರತೆಯನ್ನು ಮೂರು ಮಾರ್ಗಗಳಿಂದ ಸ್ಥಾಪಿಸಬಹುದು : ಆಪ್ತವಾಕ್ಯ, ಯುಕ್ತಿ ಅಥವಾ ವಿಚಾರ, ಸ್ವಾನುಭವ. ಜ್ಞಾನಯೋಗದ ಸಾಧನೆಗೆ ಈ ಮೂರೂ ಬಹಳ ಮುಖ್ಯವಾದವುಗಳು.

ಜ್ಞಾನ ಯೋಗದ ಮೂಲಕ ನಾವು ಪೂರ್ಣತೆಯನ್ನು ಪಡೆಯಬೇಕಾದರೆ, ಅದಕ್ಕೆ ಅದ್ವೈತ ಸಿದ್ಧಾಂತದ ತಳಹದಿ ಬೇಕು. ಹಿಂದೂ ತತ್ವದ ಪ್ರಕಾರ ಸತ್ಯವನ್ನು ಮೂರು

ದೃಷ್ಟಿಯಿಂದ ನೋಡಬಹುದು. ಅವೇ ದ್ವೈತ, ವಿಶಿಷ್ಟಾದ್ವೈತ, ಮತ್ತು ಅದ್ವೈತ. ಇವು ಈ ಮೂರು ಪ್ರಶ್ನೆಗಳಿಗೆ ಸಂಬಂಧಪಟ್ಟಿವೆ. ಪರಮ ಸತ್ಯದ ಸ್ವರೂಪವೇನು ? ಪ್ರಪಂಚದ ಸತ್ಯವೇನು ? ಜೀವಿಯ ಸತ್ಯವೇನು ? ಸಂಸ್ಕೃತದಲ್ಲಿ ತತ್ವ ಶಾಸ್ತ್ರವನ್ನು ದರ್ಶನ ಶಾಸ್ತ್ರ ಎನ್ನುತ್ತಾರೆ. ಇದು ನಮ್ಮನ್ನು ಸಾಧನ ಮಾರ್ಗದಲ್ಲಿ ನಡಸುವುದು. ಅದು ಮುಂಚೆ ತತ್ವವನ್ನು ಸಿದ್ಧಾಂತಗೊಳಿಸುವುದು, ಅನಂತರ ಅದನ್ನು ಪಡೆಯಬೇಕಾದರೆ ಏನು ಸಾಧನೆ ಮಾಡಬೇಕೆಂದು ಹೇಳುವುದು. ದರ್ಶನವೆಂಬುದು ದೃಷ್ ಎಂದರೆ ನೋಡು ಎಂಬುದ ರಿಂದ ಬಂದಿದೆ. ಎಂದರೆ ವಸ್ತು ಹೇಗಿದೆಯೋ ಹಾಗೆ ನೋಡುವ ಶಕ್ತಿಯನ್ನು ಕೊಡು ವುದು. ವಸ್ತು ಹೇಗೆ ಕಾಣುತ್ತಿದೆಯೋ ಹಾಗೆ ನೋಡುವುದಿಲ್ಲ. ಇಲ್ಲಿ ಊಹೆ ಮತ್ತು ಯುಕ್ತಿ ಎರಡೂ ಕೆಲಸ ಮಾಡಬೇಕು. ಇವುಗಳ ಮೂಲಕ ನಾವೊಂದು ನಿರ್ಣಯಕ್ಕೆ ಬರುತ್ತೇವೆ. ಬರೀ ಒಂದು ನಿರ್ಣಯಕ್ಕೆ ಬಂದರೆ ಸಾಲದು. ನಾವು ಯಾವುದನ್ನು ತಾತ್ವಿಕವಾಗಿ ಕಂಡುಹಿಡಿದೆವೊ ಅದರಂತೆ ಆಗಬೇಕು.

ದರ್ಶನದಲ್ಲಿ ಪ್ರಮಾಣ ಮತ್ತು ಪ್ರಮೇಯ ಮುಖ್ಯ. ಪ್ರಮಾಣ ಎಂದರೆ ಯಾವುದರ ಮೂಲಕ ನಾವು ಒಂದನ್ನು ಸತ್ಯ ಎಂದು ಸಾಧಿಸಿರುವೆವೊ ಅದು. ಪ್ರಮೇಯ ಎಂದರೆ, ಯಾವುದರ ವಿಷಯವಾಗಿ ತಿಳಿದುಕೊಳ್ಳಬೇಕೆಂದಿರುವೆವೋ ಅದು. ಮುಂಚೆ ಪ್ರಮಾಣ ಎಂದರೇನು ಎಂಬುದನ್ನು ಚರ್ಚಿಸಿದೆವು. ಅವೇ ಆಗಮ, ಅನುಮಾನ, ಅನುಭವ.

ಪ್ರಮೇಯದಲ್ಲಿ ನಾಲ್ಕು ಭಾವನೆಗಳು ಬರುವುವು. ಅವೇ ಸೃಷ್ಟಿ, ಜಗತ್, ಜೀವ, ಬ್ರಹ್ಮ ಅಥವಾ ಈಶ್ವರ. ನಾವು ಈ ಪ್ರಪಂಚವನ್ನೆಲ್ಲ ನೋಡುವ ಆತ್ಮನ ಸ್ವಭಾವವೇನು ? ಎಂಬುದನ್ನು ಅರಿಯಬೇಕು. ಈ ಪ್ರಪಂಚ (ಎಂದರೆ ದೃಶ್ಯ) ಎಂದರೆ ಏನು ಅದನ್ನು ತಿಳಿದುಕೊಳ್ಳಬೇಕು. ಇದಕ್ಕೆಲ್ಲ ಮೂಲವಾದ ಪರಮ ಸತ್ಯದ ಸ್ವರೂಪವೇನು ? ಇವು ಗಳನ್ನೆಲ್ಲ ನಾವು ತಿಳಿಯ ಬಯಸುತ್ತೇವೆ.

ಸಂಪ್ರದಾಯ ದಾರ್ಶನಿಕರು ಪ್ರಮೇಯದಲ್ಲಿ ಬರುವ ವಸ್ತುವನ್ನು ವಿವರಿಸುವರು. ಇದು ಹಿಂದೆ ಹೇಳಿದ ಮೂರು ತತ್ವ ಸಿದ್ಧಾಂತದ ಕೆಳಗೆ ಬರುವುದು. ಈ ದ್ವೈತ, ವಿಶಿಷ್ಟಾ ದ್ವೈತ, ಅದ್ವೈತ ಎಂಬ ಮೂರು ಸಿದ್ಧಾಂತಗಳು ಒಂದಕ್ಕೆ ಒಂದು ವಿರೋಧವಲ್ಲ, ಪೂರಕವಾಗಿದೆ ಎಂದು ಸ್ವಾಮಿ ವಿವೇಕಾನಂದರು ಹೇಳಿದರು. ತೋರಿಕೆಗೆ ಪರಸ್ಪರ ವಿರೋಧವಾಗಿ ಕಂಡರೂ, ನಿಜವಾಗಿ ನೋಡಿದರೆ ಹಾಗಿಲ್ಲ.

ಅದ್ವೈತ ವಾದದಲ್ಲಿ ಎರಡು ಗುಂಪಿನವರು ಇದ್ದಾರೆ. ಅಜಾತವಾದ ಎಂದರೆ ಹುಟ್ಟಲ್ಲದೇ ಇರುವುದು, ವಿವರ್ತವಾದ ಅಥವಾ ಮಾಯಾ ಸಿದ್ಧಾಂತ. ವೇದಾಂತವೆಂದು ನಾವು ಕರೆಯುವ ಅದ್ವೈತ ಸಿದ್ಧಾಂತ ಉಪನಿಷತ್ತಿನಲ್ಲಿ ಬರುವುದು. ಉಪನಿಷತ್ತನ್ನು ವೇದಗಳ ಸಾರವೆನ್ನುವುದು. ಅದ್ವೈತ ಸಿದ್ಧಾಂತವನ್ನು ಪುನಃ ಪ್ರತಿಷ್ಠಾಪನೆ ಮಾಡಿ ದವರು ಎಂಟನೇ ಶತಮಾನದಲ್ಲಿದ್ದ ಶಂಕರಾಚಾರ್ಯರೆಂಬ ದೊಡ್ಡ ತತ್ವಜ್ಞಾನಿಗಳು ಮತ್ತು ಸಂನ್ಯಾಸಿಗಳು. ಆದರೆ ಅದ್ವೈತ ವೇದಾಂತವನ್ನು ಪ್ರಚಾರಕ್ಕೆ ತಂದವರು ಪ್ರಖ್ಯಾತ ವಿದ್ವಾಂಸರಾದ ಗೌಡ ಪಾದಾಚಾರ್ಯರು. ಇವರೇ ಶಂಕರಾಚಾರ್ಯ ಗುರುಗಳ ಗುರುಗಳು.

ಗೌಡಪಾದಾಚಾರ್ಯರು ಅಜಾತ ವಾದವನ್ನು ಪ್ರಚಾರ ಮಾಡಿದರು. ಅದನ್ನು ಅವರು ಹೀಗೆ ಹೇಳುತ್ತಾರೆ. ಸೃಷ್ಟಿ ಎಂಬುದು ಒಂದು ಕನಸಿನಂತೆ, ನೀವು ಜಾಗ್ರತರಾಗಿ, ಅದೇ ಬೇಕಾಗಿರುವುದು. ಆದರೆ ಅವರನ್ನು ಕೇಳುವುದಕ್ಕೆ ಯಾರೂ ಬರಲಿಲ್ಲ. ಅವರು ಹೇಳಿದುದನ್ನು ಯಾರೂ ಅರ್ಥಮಾಡಿಕೊಳ್ಳಲಿಲ್ಲ. ಅವರ ಶಿಷ್ಯರಾದ ಗೋವಿಂದಪಾದರು ಮಾತ್ರ ಅವರನ್ನು ಅರ್ಥಮಾಡಿಕೊಂಡರು. ಗೌಡಪಾದರು ನೂರಾರು ವರ್ಷಗಳವರೆಗೆ ಬದುಕಿದ್ದರು. ಅವರು ಮೃತ್ಯುವಿನ ಕರೆಯನ್ನು ಆಲಿಸಲಿಲ್ಲ. ತಮ್ಮ ಸಿದ್ಧಾಂತ ಜನರಲ್ಲಿ ಜಾರಿಗೆ ಬರುವ ತನಕ ತಾನು ಸಾಯುವುದಿಲ್ಲ ಎಂದು ಶಪಥ ತೊಟ್ಟಿದ್ದರು. ಆದರೆ ಮತ್ಯುದೇವನಾದ ಯಮನಿಗೆ ಇವರಿಗೆ ಕಾದು ಸಾಕಾಯಿತು. ಗೌಡಪಾದರಿಗೆ ಅವರ ತತ್ವವನ್ನು ಜನರು ತಿಳಿದುಕೊಳ್ಳಬಲ್ಲರೀತಿಯಲ್ಲಿ ಹೇಳುವವರು ಬರುತ್ತಾರೆ ಎಂದು ತಿಳಿಸಬೇಕಾಯಿತು.

ಒಂದು ರಾತ್ರಿ ಗೌಡಪಾದರಿಗೆ ಒಂದು ದೃಶ್ಯ ಕಂಡಿತು. ಅವರ ಬಳಿಗೆ ಎಂಟು ವರುಷದ ಹುಡುಗ ಒಬ್ಬ ಶಿಷ್ಯನಾಗಿ ಬರುತ್ತಾನೆ, ಅವನು ಕಾಲಕ್ರಮೇಣ ಜನರಲ್ಲಿ ಇದನ್ನು ಪ್ರಚಾರ ಮಾಡುತ್ತಾನೆ ಎಂದಂತೆ ಆಯಿತು. ಆ ಹುಡುಗನನ್ನು ಹೇಗೆ ಗುರುತು ಹಚ್ಚುವುದು ಎಂದು ಕೇಳಿದಾಗ ಅವನು ಒಂದು ಅದ್ಭುತವಾದ ಯೋಗಶಕ್ತಿಯನ್ನು ತೋರುತ್ತಾನೆ. ಅವನು ಗೌಡಪಾದರ ತತ್ವದ ಮೇಲೆ ಒಂದು ಅದ್ಭುತವಾದ ಭಾಷ್ಯವನ್ನು ಬರೆಯುತ್ತಾನೆ. ಅವನು ಸನ್ಯಾಸಿಗಳಲ್ಲೆಲ್ಲ ಅತ್ಯಂತ ಕಿರಿಯವನಾಗಿರುತ್ತಾನೆ ಎಂದು ತೋರಿತು. ಈ ಹುಡುಗ ಬಂದಮೇಲೆ ಗೌಡಪಾದರು ನಿರಾತಂಕವಾಗಿ ಪ್ರಾಣ ಬಿಡಬಹುದೆಂದು ಹೇಳಿತು.

ಅಷ್ಟುಹೊತ್ತಿಗೆ ದಕ್ಷಿಣ ಇಂಡಿಯಾದ ಮಲಬಾರಿನಲ್ಲಿ, ಶಂಕರನೆಂಬ ಎಂಟು ವರುಷದ ಪ್ರಚಂಡ ಪ್ರತಿಭಾವಂತನಾದ ಹುಡುಗ ಸನ್ಯಾಸಿಯಾಗಿ ಗೌಡಪಾದರೆಂಬ ಮಹಾಚಾರ್ಯರನ್ನು ಹುಡುಕುವುದಕ್ಕೆ ಹೊರಟಿದ್ದರು. ಇವರು ಗೌಡಪಾದರ ಆಶ್ರಮಕ್ಕೆ ಬಂದಾಗ ಗೌಡಪಾದರು ದೀರ್ಘ ಧ್ಯಾನದಲ್ಲಿದ್ದರು. ಹತ್ತಿರ ಇದ್ದ ನರ್ಮದ ನದಿ ಪೂರ್ಣ ಪ್ರವಾಹದಲ್ಲಿತ್ತು. ಶಂಕರಾಚಾರ್ಯರು ಗೌಡಪಾದರಿಗೆ ನಮಸ್ಕರಿಸುವುದಕ್ಕೆ ಮುಂಚೆ ನೀರಿನಲ್ಲಿ ಮುಳುಗಿಹೋಗುವುದರಲ್ಲಿದ್ದರು. ಶಂಕರಾಚಾರ್ಯರು ನರ್ಮದ ನದಿಗೆ ನಿಲ್ಲು ಎಂದು ಆಜ್ಞೆ ಮಾಡಿದರು. ಅದು ನಿಲ್ಲಲಿಲ್ಲ. ಏನು, ನೀನು ನನ್ನ ಆಜ್ಞೆಯನ್ನು ಅಲ್ಲಗಳೆಯುವೆಯಾ? ನೋಡು, ನಿನಗೆ ತೋರಿಸುತ್ತೇನೆ ಎಂದು ನರ್ಮದ ನದಿಯನ್ನು ತಮ್ಮ ಕಮಂಡಲುವಿನಲ್ಲಿ ಕೂಡಿಹಾಕಿದರು ಎಂದು ಕಥೆ ಹೇಳುವುದು. ಕೆಸರಿನಲ್ಲಿ ಸಿಕ್ಕಿಬಿದ್ದ ಮೀನುಗಳು ಒದ್ದಾಡುತ್ತಿದ್ದುವು, ಇದರಿಂದ ಗೌಡಪಾದರಿಗೆ ಜಾಗ್ರತವಾಯಿತು. ಹಿಂತಿರುಗಿ ನೋಡಿದಾಗ ಕಮಂಡಲುವಿನಲ್ಲಿ ಸಿಕ್ಕಿಬಿದ್ದ ನರ್ಮದಾ ನದಿಯನ್ನು ಕೋಪದಿಂದ ನೋಡುತ್ತಿದ್ದ ಶಂಕರಾಚಾರ್ಯರು ಕಂಡರು. ತಮಗೆ ಹಿಂದೆ ದೃಶ್ಯದಲ್ಲಿ ಕಂಡ ಹುಡುಗನೇ ಇವನು ಎಂಬುದನ್ನು ಅವರು ಕಂಡುಹಿಡಿದರು. ಗೌಡಪಾದರು ಕೆಸರಿನಲ್ಲಿ ಮೀನುಗಳು ಒದ್ದಾಡುತ್ತಿದ್ದುದರಿಂದ ನರ್ಮದಾ ನದಿಯನ್ನು ಸೆರೆಯಿಂದ ಬಿಡಿಸು ಎಂದು ಆಜ್ಞಾಪಿಸಿದರು. ಅನಂತರ ಅವರು ಮಾಂಡೂಕ್ಯ ಉಪನಿಷತ್ತಿನ ಮೇಲೆ ಬರೆದ ಕಾರಿಕೆಯನ್ನು ಕೊಟ್ಟು, ಅದನ್ನು ಓದು ಎಂದು ಹೇಳಿ, ರಾತ್ರಿ ಮಲಗಿಕೊಳ್ಳುವುದಕ್ಕೆ ಹೋದರು.

ಮಾರನೇ ದಿನ ಶಂಕರಾಚಾರ್ಯರು ಕಾರಿಕೆಯ ಮೇಲೆ ಬರೆದ ತಮ್ಮ ಭಾಷ್ಯ ಸಮೇತ ಗೌಡಪಾದರಲ್ಲಿಗೆ ಬಂದರು. ಕೇವಲ ಎಂಟು ವರ್ಷದ ಹುಡುಗ ತಮ್ಮ ಕಾರಿಕೆಯಲ್ಲಿರುವ ವಿಷಯವನ್ನು ಎಷ್ಟು ಚೆನ್ನಾಗಿ ವಿವರಿಸಿರುವನು ಎಂಬುದನ್ನು ನೋಡಿ ಗೌಡಪಾದರಿಗೆ ಆಶ್ಚರ್ಯವಾಯಿತು. ಗೌಡಪಾದರು ಶಂಕರಾಚಾರ್ಯರಿಗೆ ನೀನು ಗೋವಿಂದಪಾದರ ಶಿಷ್ಯನಾಗು ಎಂದು ಹೇಳಿ ಅವರು ಹಿಂತಿರುಗಿ ಬರದ ಮಹಾಸಮಾಧಿಗೆ ಹೋದರು.

ಗೌಡಪಾದರ ಅಜಾತವಾದದ ಸಿದ್ಧಾಂತದಲ್ಲಿ ಸೃಷ್ಟಿ ಎಂದಿಗೂ ಇರಲಿಲ್ಲ. ಎಂದು ಹೇಳುವುದು. ಆದಕಾರಣ ಅಲ್ಲಿ ಆತ್ಮ, ದೇವರು, ಸೃಷ್ಟಿ ಎಂಬ ಭಾವನೆಗಳೇ ಬರುವುದಿಲ್ಲ. ದ್ವೈತ ಭಾವನೆಗಳೆಲ್ಲ ಕನಸಿನಂತೆ ಹುಸಿ. ಬ್ರಹ್ಮನೊಬ್ಬನೇ ಇರುವುದು. ಅದನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕಾದರೆ, ಸೃಷ್ಟಿಯ ವಿಷಯವಾಗಿ ಚರ್ಚಿಸಿದರೆ ಪ್ರಯೋಜನ ವಿಲ್ಲ, ಅದು ಹೇಗೆ ಏತಕ್ಕೆ ಬಂತು ಎಂದು ಕೇಳಿದರೂ ಪ್ರಯೋಜನವಿಲ್ಲ. ಈ ಭಯಾನಕ ವಾದ ವೈವಿಧ್ಯಪೂರ್ಣ ಕನಸಿನಿಂದ ಜಾಗ್ರತವಾಗಬೇಕು ಅಷ್ಟೆ. ನೀವೊಂದು ಕತ್ತಲೆಯ ಕೋಣೆಯಲ್ಲಿದ್ದರೆ, ಅಲ್ಲಿ ಏತಕ್ಕೆ ಕತ್ತಲಿದೆ ಎಂದು ಕೇಳುವುದಿಲ್ಲ. ಬೆಳಕನ್ನು ಹತ್ತಿಸಿದರೆ ಕತ್ತಲೆ ಹೋಗುವುದು.

ನಿಮಗೆ ಏನಾದರೂ ತಲೆ ನೋವಾದರೆ, ನಿಮಗೆ ತಲೆ ಇದೆ ಎಂದು ಭಾವಿಸುತ್ತೀರಿ. ಆದರೆ ಗೌಡಪಾದರು ಹೇಳುವ ರೀತಿ "ಏನು ನಿನಗೆ ತಲೆನೋವೆ? ಅಯ್ಯೋ ನನ್ನ ಸ್ನೇಹಿತನೆ, ನಿನಗೆ ತಲೆಯೇ ಇಲ್ಲ." ಅವರು ಯಾವ ಭ್ರಾಂತಿಯ ಭಾವನೆಗಳನ್ನೂ ಒಪ್ಪಿ ಕೊಳ್ಳುತ್ತಿರಲಿಲ್ಲ. ಶಂಕರಾಚಾರ್ಯರಾದರೋ ಅವರು ನಿಮಗೆ ತಲೆನೋವು ಎಂಬ ಭ್ರಾಂತಿಯ ಭಾವನೆಯನ್ನು ಒಪ್ಪಿಕೊಳ್ಳುವರು. ಅನಂತರ ಅವರು ನೀವು ಹೇಳುವುದು ನಿಜವಲ್ಲ ಎಂದು ತೋರುತ್ತಿದ್ದರು. ಅವರು ಹೇಳುವ ಭ್ರಾಂತಿಯ ಪ್ರಲಾಪವನ್ನೆಲ್ಲ ನಾವು ಒಪ್ಪಿಕೊಳ್ಳುತ್ತೇವೆ. ಅನಂತರ ಯುಕ್ತಿಯ ಮೂಲಕ ಅವರು ಹೇಳುವುದು ಸರಿಯಲ್ಲ ಎಂಬುದನ್ನು ತೋರುತ್ತೇನೆ ಎನ್ನುತ್ತಾರೆ. ಒಂದೇ ಇರುವುದು. ಎಂದಿಗೂ ಎರಡಿರಲಿಲ್ಲ. ಇರುವುದೊಂದೆ ಸ್ನೇಹಿತನೆ ಎನ್ನುತ್ತಾರೆ. ಶಂಕರಾಚಾರ್ಯರು ಸೃಷ್ಟಿ ಇದೆ ಎಂಬ ಭ್ರಾಂತಿಯ ನಿಲುವನ್ನು ಒಪ್ಪಿಕೊಂಡು, ಅನಂತರ ತಾರ್ಕಿಕವಾಗಿ ಪರಮಸತ್ಯವನ್ನು ತೋರುತ್ತಾರೆ.

ಇದು ಶ್ರೀ ರಾಮಕೃಷ್ಣರ ಜೀವನದ ಒಂದು ಘಟನೆಯನ್ನು ನನ್ನ ನೆನಪಿಗೆ ತರು ವುದು. ಒಂದುಸಲ ಶ್ರೀ ರಾಮಕೃಷ್ಣರ ಶಿಷ್ಯನೊಬ್ಬ ಅವರನ್ನು ನೋಡಲು ಹೋಗುವಾಗ ತನ್ನ ಸ್ನೇಹಿತನನ್ನು ಕರೆದುಕೊಂಡು ಹೋಗುತ್ತಾನೆ. ಅವನ ಸ್ನೇಹಿತ ತನ್ನ ಜೇಷ್ಠ ಮಗ ನನ್ನು ಆಗತಾನೆ ಕಳೆದುಕೊಂಡ ದುಃಖದಿಂದ ಹುಚ್ಚನಂತಾಗಿದ್ದ. ಅವನಿಗೆ ಯಾವ ಸಾಧು ವನ್ನು ನೋಡುವುದಕ್ಕೆ ಮನಸ್ಸಿರಲಿಲ್ಲ. ಸಾಧುವನ್ನು ನೋಡಿ ಏನು ಪ್ರಯೋಜನ ಅವನು ಸುಮ್ಮನೆ ಇದೆಲ್ಲ ಕ್ಷಣಿಕ, ಸಂಸಾರದಲ್ಲಿ ಆಸಕ್ತನಾಗಿರಬಾರದು ಎಂದು ಹೇಳುತ್ತಾನೆ. ಆದರಿಂದ ನನಗೇನು ಪ್ರಯೋಜನ ಎಂದ. ಆದರೆ ಶ್ರೀ ರಾಮಕೃಷ್ಣರ ಭಕ್ತ, ಈ ಸಾಧು ಹಾಗಲ್ಲ. ಅವನನ್ನು ನೋಡುವುದಕ್ಕೆ ಬಾ ಎಂದು ಕರೆದುಕೊಂಡು ಹೋದ.

ಶ್ರೀ ರಾಮಕೃಷ್ಣರು ಬಂದವನ ವಿಯೋಗದ ವಿಷಯವನ್ನು ಕುರಿತು ಮಾತನಾಡಿ

ದರು. ಇವನು ಹೇಳುವುದನ್ನೆಲ್ಲ ಅವರು ಮನಸ್ಸಿಟ್ಟು ಕೇಳಿದರು. ಆ ಮಗುವಿಗೆ ಸಂಬಂಧ ಪಟ್ಟ ಪ್ರಶ್ನೆಗಳನ್ನು ಹಾಕಿ ಅವನು ಹೇಳುವುದನ್ನು ಸಹಾನುಭೂತಿಯಿಂದ ಕೇಳಿದರು. ಒಬ್ಬನನ್ನು ಕಳೆದುಕೊಳ್ಳುವುದು ಎಷ್ಟು ದುಃಖ ಎನ್ನುವುದು ನನಗೆ ಗೊತ್ತು. ನನ್ನ ತಂಗಿ ಮಗ ಸತ್ತುಹೋದಾಗ ತನ್ನ ಹೃದಯವನ್ನು ಟವಲ್ ಹಿಂಡುವಂತೆ ಯಾರೋ ಹಿಂಡಿದಂತೆ ಆಯಿತು ಎಂದು ಹೇಳಿದರು. ಇದನ್ನು ಹೇಳುವಾಗ ಶ್ರೀ ರಾಮಕೃಷ್ಣರ ಕಣ್ಣು ಹನಿ ಗೂಡಿತು. ಇದನ್ನು ಕೇಳಿದ ಮನುಷ್ಯನೂ ಅತ್ತ, ಇಬ್ಬರೂ ಕೆಲವು ಕಾಲ ಅತ್ತಮೇಲೆ ಆ ಮನುಷ್ಯನಿಗೆ ಸ್ವಲ್ಪ ಸಮಾಧಾನ ಆಯಿತು. ಶ್ರೀ ರಾಮಕೃಷ್ಣರು ಕ್ರಮೇಣ ಅವನಿಗೆ ಸಾಂತ್ವನ ನುಡಿಯನ್ನು ಹೇಳಿದರು. ಕೊನೆಗೆ ಮೃತ್ಯುವನ್ನು ಪ್ರತಿಭಟಿಸುವ ಒಂದು ಹಾಡನ್ನು ಎದ್ದುನಿಂತು ಹೇಳಿದರು. ಮನುಷ್ಯನಿಗೆ ಆಗ ಶಾಂತಿ ಸಿಕ್ಕಿತು. ಶ್ರೀ ರಾಮ ಕೃಷ್ಣರು ನಿಧಾನವಾಗಿ ಅವನಲ್ಲಿ ಬದಲಾವಣೆಯನ್ನು ಉಂಟುಮಾಡಿದರು. ಮೊದಲು ಮನುಷ್ಯನ ವಿಯೋಗದ ದುಃಖವನ್ನು ಒಪ್ಪಿಕೊಂಡರು. ಕ್ರಮೇಣ ಅವನಿಗೆ ಸಮಾಧಾನ ವನ್ನು ತಂದರು. ಮನುಷ್ಯ ದುಃಖದಿಂದ ಪಾರಾಗಿ ಶಾಂತಿಯಿಂದ ಹಿಂತಿರುಗಿದ. ಶ್ರೀ ರಾಮ ಕೃಷ್ಣರು ಕೇಳಿದರೂ ಅದು ಸತ್ಯವಲ್ಲ ಎಂಬುದು ಗೊತ್ತಿತ್ತು. ಅಲ್ಲಿಂದ ಕ್ರಮೇಣ ಆತನನ್ನು ಮೇಲಕ್ಕೆ ಕರೆದುಕೊಂಡು ಹೋದರು. ಕೊನೆಗೆ ಆತನ ಮಗ ಜನನ ಮರಣಾತೀತನಾದ ಆತ್ಮ ಎಂಬುದನ್ನು ಸಮರ್ಥಿಸಿದರು.

ಶಂಕರಾಚಾರ್ಯರು ಗೌಡಪಾದರ ಅಜಾತವಾದವನ್ನು ವಿವರ್ತವಾದದ ದೃಷ್ಟಿಯಿಂದ ವಿವರಿಸಿದರು. ಒಂದು ವಸ್ತು ಬೇರೊಂದು ಬಗೆಯಾಗಿ ಕಂಡರೆ ಅದನ್ನು ವಿವರ್ತ ಎನ್ನು ತ್ತಾರೆ. ಇದಕ್ಕೆ ಕೊಡುವ ಬಹುಮುಖ್ಯವಾದ ಉದಾಹರಣೆ ರಜ್ಜು ಸರ್ಪದಂತೆ ಕಾಣು ವುದು. ಒಬ್ಬ ಪ್ರಯಾಣಿಕ ಸಂಜೆ ಒಂದು ಗ್ರಾಮದ ಹತ್ತಿರ ಹೋಗುತ್ತಿದ್ದ. ದಾರಿಯಲ್ಲಿ ಒಂದು ಹಾವು ಬಿದ್ದಿರುವುದನ್ನು ಕಂಡ. ಅವನು ತನಗೆ ಸಮೀಪದಲ್ಲಿದ್ದ ಮನೆಗೆ ಓಡಿ "ನೋಡಿ, ದಾರಿಯಲ್ಲಿ ಒಂದು ದೊಡ್ಡ ಹಾವು ಇದೆ" ಎಂದು ಕೂಗಿಕೊಂಡ. ಮನೆಯಿಂದ ಮನುಷ್ಯ ಹೊರಕ್ಕೆ ಬಂದು "ಹಾಗೇನು ? ನೋಡೋಣ" ಎಂದು ಅವನ ಜೊತೆಯಲ್ಲಿ ಹೊರಟ. ಹೋಗುವಾಗ ಕೈಯಲ್ಲಿ ದೀಪವನ್ನು ತೆಗೆದುಕೊಂಡ. ದಾರಿಯುದ್ದಕ್ಕೂ ಅಪರಿ ಚಿತ ಇವನಿಗೆ "ಅದು ಎಂತಹ ಹಾವು ಇರಬಹುದು ? ಅದೇನು ವಿಷದ ಹಾವೋ ? ಇಲ್ಲಿ ತುಂಬಾ ಹಾವುಗಳಿವೆಯೇ" ಎಂದು ಪ್ರಶ್ನೆ ಹಾಕುತ್ತಿದ್ದ. ಗ್ರಾಮದವನು ಈ ಪ್ರಶ್ನೆಗೆ ಉತ್ತರವನ್ನೇ ಕೊಡಲಿಲ್ಲ. ದಾರಿಗೆ ಬಂದಾಗ ಪ್ರಯಾಣಿಕ ನೆಲದ ಮೇಲೆ ಬಿದ್ದಿರುವುದನ್ನು ನೋಡಲಿ ಎಂದು ತನ್ನ ಕೈಯ್ಯಲ್ಲಿದ್ದ ದೀಪವನ್ನು ಅದಕ್ಕೆ ತೋರಿಸಿದ. ಬೆಳಕು ಬಿದ್ದಾಗ ಕೆಳಗೆ ಬಿದ್ದಿರುವುದು ಒಂದು ಹಗ್ಗ ಎಂದು ಗೊತ್ತಾಯಿತು. ಇದೇನೇ ವಿವರ್ತ. ಒಂದು ವಸ್ತು ಮತ್ತೊಂದರಂತೆ ಕಾಣುತ್ತಿದೆ.

ವಿಕಾರ ಎಂದರೆ ಒಂದು ವಸ್ತು ಮತ್ತೊಂದು ಆಗುವುದು. ಈಗ ಹಾಲಿದೆ, ಅದು ಮೊಸರಾಗುವುದು. ಶಂಕರಾಚಾರ್ಯರು ಅಜಾತವಾದ ಮತ್ತು ವಿಕಾರವಾದ ಇವುಗಳ ಮಧ್ಯದ ನಿಲುವನ್ನು ತೆಗೆದುಕೊಳ್ಳುತ್ತಾರೆ. ಅವರು ಬ್ರಹ್ಮ ಬದಲಾಯಿಸುವುದಿಲ್ಲ ಎಂದು

ಒಪ್ಪಿಕೊಳ್ಳುತ್ತಾರೆ. ಅದು ಯಾವಾಗಲೂ ಒಂದೇ ಆಗಿರುವುದು. ಆದರೆ ಹೇಗೋ ಬದಲಾಯಿಸಿದಂತೆ ಕಾಣುವುದು. ಹಾಲು ಮೊಸರಾದಂತೆ ಅಲ್ಲ, ಹಗ್ಗ ಹಾವಿನಂತೆ ಕಂಡಂತೆ. ಶಂಕರಾಚಾರ್ಯರು ವಿವರ್ತ ಅಥವಾ ಮಾಯಾಸಿದ್ಧಾಂತವನ್ನು ಹೀಗೆ ವಿವರಿಸುತ್ತಾರೆ. ಬ್ರಹ್ಮ ಮಾಯೆಯ ಮೂಲಕ ವ್ಯಕ್ತವಾಗುತ್ತಾನೆ. ಏಕಮೇವ ಅದ್ವಿತೀಯವಾದ ಬ್ರಹ್ಮ ಮಾಯೆಯ ಮೂಲಕ ಹಲವದರಂತೆ ಕಾಣುತ್ತಿದೆ. ಅಜ್ಞಾನಿಗಳ ಮೇಲಿನ ಸಹಾನುಭೂತಿಯಿಂದ ಶಂಕರಾಚಾರ್ಯರು ಮಾಯಾಸಿದ್ಧಾಂತವನ್ನು ಸಾರುತ್ತಾರೆ. ಅಲ್ಲಿ ಇಲ್ಲದಿರುವುದು ಇರುವಂತೆ ಕಾಣುತ್ತದೆ. ಅವರು ಹೀಗೆ ಹೇಳುತ್ತಾರೆ "ಆಗಲಿ, ಪ್ರಪಂಚ ಈಗ ಸತ್ಯದಂತೆ ಕಾಣುತ್ತಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಸಾಪೇಕ್ಷ ಸತ್ಯ ಇದು, ಇದು ಹಗ್ಗದಲ್ಲಿ ಕಾಣುವ ಹಾವು ಎಷ್ಟು ನಿಜವೋ ಅಷ್ಟೇ ನಿಜ. ಆದರೆ ಜಾಗ್ರತನಾದ ಮೇಲೆ ಜ್ಞಾನದ ಬೆಳಕಿನಲ್ಲಿ ನೋಡಿದಾಗ, ಇದು ಹಾವಲ್ಲ ಎಂಬುದು ಗೊತ್ತಾಗುವುದು. ಆಗ ಅದರ ಸತ್ಯ ಗೋಚರಿಸುವುದು."

ನಿತ್ಯ ಅನಿತ್ಯ ವಸ್ತು ವಿವೇಕ—ಶಂಕರಾಚಾರ್ಯರು ಚರ್ಚಿಸುವ ಅದ್ವೈತ ಸಿದ್ಧಾಂತ—ನಿತ್ಯ ಮತ್ತು ಅನಿತ್ಯ ವಸ್ತುವನ್ನು ನಾವು ವಿಮರ್ಶಿಸಬೇಕಾಗಿದೆ. ಇದು ಎಂತಹ ಅದ್ವೈತ ಎಂದು ನೀವು ಕೇಳಬಹುದು. ಇಲ್ಲಿಯೇ ಗೌಡಪಾದರಿಗೂ, ಶಂಕರಾಚಾರ್ಯರಿಗೂ ಅದ್ವೈತ ಸಿದ್ಧಾಂತಕ್ಕೆ ಇರುವ ವ್ಯತ್ಯಾಸ. ಶಂಕರಾಚಾರ್ಯರು ಅನಿತ್ಯವನ್ನು ಒಪ್ಪಿಕೊಳ್ಳುತ್ತಾರೆ. ಮಾಯೆಯ ಪ್ರಭಾವದಿಂದ ನಾವು ಹಲವನ್ನು ನೋಡಲೇಬೇಕಾಗಿದೆ. ಶಂಕರಾಚಾರ್ಯರು ಪ್ರಾರಂಭದಲ್ಲಿ ಈ ಸ್ಥಿತಿಯನ್ನು ಒಪ್ಪಿಕೊಳ್ಳುತ್ತಾರೆ.

ಶಂಕಾರಾಚಾರ್ಯರು ವಿವರಿಸುವ ವಿವರ್ತ ವಾದದಲ್ಲಿ ವ್ಯಾವಹಾರಿಕ ಸತ್ಯ, ಪಾರಮಾರ್ಥಿಕ ಸತ್ಯ ಎಂಬ ಪದಗಳನ್ನು ಉಪಯೋಗಿಸುತ್ತಾರೆ. ನಮಗೆ ತೋರುವುದು ಎಂದರೆ ಒಂದು ಘಟನೆ ಆಗುತ್ತಿರುವುದು. ಆದರೆ ಸತ್ಯವಾದರೊ ಎಂದಿಗೂ ಬದಲಾಯಿಸುವುದೇ ಇಲ್ಲ. ತೋರಿಕೆ ಸತ್ಯವಲ್ಲದೆ ಇರಬಹುದು. ಆದರೆ ಇದೊಂದು ಘಟನೆ ಆಗಿರುವುದು. ಯಾವಾಗಲೂ ಸಾಪೇಕ್ಷ ಸತ್ಯ ಮತ್ತು ಪರಮಾರ್ಥ ಸತ್ಯಕ್ಕೆ ಇರುವ ವ್ಯತ್ಯಾಸವನ್ನು ತಿಳಿದುಕೊಳ್ಳಿ. ಒಂದು ವಸ್ತುವಿಗೆ ಈ ಎರಡು ದೃಷ್ಟಿಗಳಿವೆ. ಒಂದು ವಸ್ತು ಹೇಗೆ ಆಗುತ್ತದೆ ಎಂಬುದನ್ನು ಅರಿಯಲು ಅದರ ಮೂಲಕಾರಣಕ್ಕೆ ಹೋಗಿ. ನೀವು ಕಾರಣವನ್ನು ವಿಭಜನೆಮಾಡಿದರೆ ಸತ್ಯ ಇರುವುದೊಂದೇ ಹಲವಲ್ಲ ಎಂಬುದು ಗೊತ್ತಾಗುವುದು.

ಹಾವು ಹಗ್ಗದ ಕಥೆಯಲ್ಲಿ ಹಳ್ಳಿಯವನು ಅಪರಿಚಿತ ಕೇಳುವ ಯಾವ ಪ್ರಶ್ನೆಗೂ ಉತ್ತರ ಕೊಡುವುದಿಲ್ಲ. ಏಕೆಂದರೆ ಅವನಿಗೆ ಅಲ್ಲಿರುವ ಹಾವು ಸುಳ್ಳೆಂದು ಚೆನ್ನಾಗಿ ಗೊತ್ತಿದೆ. ಹಾವಿನ ಭಾವನೆ ಒಂದು ಭ್ರಾಂತಿ. ಮಾಯೆ ಎಂದರೆ ಇದೇ. ಹಾವು ಇಲ್ಲದ ಕಡೆ ಹಾವು ಇದೆ ಎಂದು ನಾವು ಭ್ರಮಿಸುತ್ತೇವೆ. ಒಂದು ಇರುವ ಕಡೆ ಹಲವನ್ನು ನೋಡುತ್ತೇವೆ.

ಶಂಕರಾಚಾರ್ಯರು ವ್ಯಾವಹಾರಿಕ ದೃಷ್ಟಿಯಿಂದ ಜನರ ಅನುಭವವನ್ನು ಒಪ್ಪಿಕೊಳ್ಳುತ್ತಾರೆ. ಅನಂತರ ಅವರನ್ನು ಪಾರಮಾರ್ಥಿಕ ಸತ್ಯಕ್ಕೆ ಕರೆದುಕೊಂಡು ಹೋಗುತ್ತಾರೆ. ತರ್ಕದಿಂದ ವ್ಯವಹಾರವನ್ನು ತ್ಯಜಿಸಿ. ಅನಂತರ ತರ್ಕ ಮತ್ತು ಎಲ್ಲವನ್ನೂ ಬಿಡಿ.

ತರ್ಕ ಕೇವಲ ಬುದ್ಧಿಚಾತುರ್ಯಕ್ಕೆ, ಮುಕ್ತಿಗಲ್ಲ. ತರ್ಕವೂ ಕೂಡ ಮಾಯೆಯ ಆವರಣ ದಲ್ಲಿದೆ.

ಬ್ರಹ್ಮನ ಜೊತೆಯಲ್ಲಿಯೇ ಮತ್ತಾವುದಾದರೂ ಇದ್ದರೆ, ಬ್ರಹ್ಮ ಅನಂತವಾಗ ಲಾರದು, ಸರ್ವವ್ಯಾಪಿಯಾಗಲಾರದು, ಸರ್ವಜ್ಞವಾಗಲಾರದು. ಇದನ್ನು ಚೆನ್ನಾಗಿ ಆಲೋಚನೆಮಾಡಿ. ಮನುಷ್ಯ ಒಂದು ಸತ್ಯದಿಂದ ಇನ್ನೊಂದು ಸತ್ಯಕ್ಕೆ ಪ್ರಯಾಣ ಮಾಡುತ್ತಿರುವನು. ಅಲ್ಲಿ ಕಾಣಬರುವುದೆಲ್ಲ ಸಾಪೇಕ್ಷ. ಪರಮ ಸತ್ಯದಂತೆ ತೋರು ವುದೆಲ್ಲ ಬರಿಯ ಊಹೆ. ಅನಂತವನ್ನು ಸಾಕ್ಷಾತ್ಕಾರಮಾಡಿಕೊಂಡಾಗ ಅದು ಎಲ್ಲಕ್ಕೂ ಅತೀತವಾಗುವುದು.

ಚರ್ಚೆ ಯಾವಾಗಲೂ ಒಂದು ನಿಲುವನ್ನು ಸಮರ್ಥಿಸುವುದು. ಆ ದೃಷ್ಟಿಯಿಂದ ಇದು ಮೇಲು. ಎಲ್ಲಾ ಒಳ್ಳೆಯ ಕೆಟ್ಟ ಪ್ರತಿಕ್ರಿಯೆಗಳಿಂದಲೂ ಪಾರಾಗಿ. ನೀವು ಮೇಲೆ ಹೋದರೆ ಒಳ್ಳೆಯದು ಕೆಟ್ಟದ್ದು ಇವಕ್ಕೆ ವ್ಯತ್ಯಾಸವಿಲ್ಲ. ಇವೆರಡಕ್ಕೂ ಅತೀತರಾಗ ಬೇಕಾಗಿದೆ. ಎಲ್ಲಾ ಭ್ರಮಾತ್ಮಕ.

ಕೇವಲ ಅದ್ವೈತಿಗೆ ಹಲವು ಕಾಣುವದೇ ಇಲ್ಲ. ಅವನಿಗೆ ಮಾಯೆಯೇ ಇಲ್ಲ. ಬ್ರಹ್ಮನಲ್ಲದೆ ಅವನಿಗೆ ಬೇರೆ ಕಾಣುವುದೇ ಇಲ್ಲ. ಶಂಕರಾಚಾರ್ಯರು "ಮಾಯೆ ಎಂದರೆ ಏನು ಎಂದು ನಾನು ಹೇಗೆ ಹೇಳುವುದು. ನಾನು ನೀವು ಹೇಳುವುದನ್ನು ಮಾಯೆ ಎಂದು ತೆಗೆದುಕೊಂಡು ಮುಂದವರಿಯುತ್ತೇನೆ" ಎನ್ನುತ್ತಾರೆ.

ಬ್ರಹ್ಮನಲ್ಲದೆ ನೀವು ಬೇರೆ ಯಾವುದನ್ನಾದರೂ ಒಪ್ಪಿಕೊಂಡರೆ, ನೀವು ದ್ವೈತಿ ಗಳಾಗುತ್ತೀರಿ. ನಿಮ್ಮ ದೇವರು ಸಾಕಾರವಾಗಲಿ, ನಿರಾಕಾರವಾಗಲಿ, ಒಂದು ಸ್ಥಿತಿಯಾಗಲಿ, ಕ್ರೈಸ್ತನೇ ಆಗಲಿ, ಆಗ ನೀವು ದ್ವೈತಿಗಳು. ನೀವು ಸೃಷ್ಟಿಯನ್ನು ಒಪ್ಪಿಕೊಂಡ ತಕ್ಷಣವೇ ನೀವು ದ್ವೈತಿಗಳಾಗುತ್ತೀರಿ. ಈ ಸೃಷ್ಟಿಗೆ ಸಂಬಂಧಪಟ್ಟ ಯಾವುದಾದರೂ ವಸ್ತುವನ್ನು ತಿಳಿದುಕೊಳ್ಳಬೇಕಾದರೆ ಸಾಂಖ್ಯದರ್ಶನದ ಮೂಲ ಪುರುಷರಾದ ಕಪಿಲರ ಬಳಿಗೆ ಹೋಗಿ ಎಂದು ಶಂಕರಾಚಾರ್ಯರು ಹೇಳುತ್ತಾರೆ. ಸಾಂಖ್ಯರ ತತ್ವದಲ್ಲಿ ಪುರುಷ ಮತ್ತು ವಿಕಾಸ ವಾಗುತ್ತಿರುವ ಇಪ್ಪತ್ತನಾಲ್ಕು ತತ್ವಗಳಿವೆ. ನೀವು ಎಲ್ಲಿಯವರೆಗೆ ಮಾಯೆಯ ಆವರಣ ದಲ್ಲಿ ಇರುತ್ತೀರೋ, ಸೃಷ್ಟಿಗೆ ಒಂದು ವಿವರಣೆ ಬೇಕಾದರೆ ಕಪಿಲರ ಹತ್ತಿರ ಹೋಗಿ ಎನ್ನು ತ್ತಾರೆ, ಶಂಕರಾಚಾರ್ಯರು. ಈ ಪ್ರಪಂಚ ಮಾಯೆ ಅಥವಾ ವ್ಯಾವಹಾರಿಕ ಸತ್ಯವಾದುದು. ಅದು ಈಗ ತೋರುವುದರಿಂದ, ನಿಜ, ಆದರೆ ಅದು ಪರಮಾರ್ಥ ದೃಷ್ಟಿಯಿಂದ ಸತ್ಯವಲ್ಲ, ಅದೆಂದಿಗೂ ಇಲ್ಲ.

ತಾತ್ವಿಕರಲ್ಲಿ ಶಂಕರಾಚಾರ್ಯರ ಸಿದ್ಧಾಂತವೇ ಅತ್ಯಂತ ಶ್ರೇಷ್ಠವಾದುದು. ವ್ಯಾವಹಾರಿಕ ಸತ್ಯವನ್ನು ಅವರು ಒಪ್ಪಿಕೊಳ್ಳುತ್ತಾರೆ. ಅದಕ್ಕೆ ಯಾವ ಒಂದು ವಿವರಣೆಯನ್ನು ಕೊಡು ವುದಕ್ಕೆ ಹೋಗುವುದಿಲ್ಲ. ವ್ಯಾವಹಾರಿಕದಿಂದ ಜನರನ್ನು ಪಾರಮಾರ್ಥಿಕ ಸತ್ಯದ ಕಡೆಗೆ ಕರೆದುಕೊಂಡು ಹೋಗುವುದಕ್ಕೆ ವಿವೇಕ ಮತ್ತು ವೈರಾಗ್ಯದ ಮಾರ್ಗವನ್ನು ತೋರು ತ್ತಾರೆ. ಈ ಎರಡು ಪದಗಳು ಶಂಕರಾಚಾರ್ಯರ ಬೋಧನೆಯ ಪಲ್ಲವಿ.

ಶಂಕರಾಚಾರ್ಯರು ಸಣ್ಣ ಒಂದು ಶ್ಲೋಕದಲ್ಲಿ ತಮ್ಮ ಸಿದ್ಧಾಂತದ ಸಾರವನ್ನು ವ್ಯಕ್ತಪಡಿಸುತ್ತಾರೆ. "ಸಹಸ್ರಾರು ಗ್ರಂಥಗಳಲ್ಲಿ ಬೋಧಿಸಿರುವುದನ್ನು ನಾನು ನಿಮಗೆ ಅರ್ಧ ಶ್ಲೋಕದಲ್ಲಿ ಹೇಳುತ್ತೇನೆ. ಅದೇ ಬ್ರಹ್ಮ ಸತ್ಯ, ಜಗತ್ ಮಿಥ್ಯ, ಜೀವ ಬ್ರಹ್ಮನಲ್ಲದೆ ಬೇರಲ್ಲ." ಸಾಧಕ ಈ ವಿಷಯಗಳನ್ನು ಜ್ಞಾನಮಾರ್ಗದಲ್ಲಿ ಸಾಕ್ಷಾತ್ಕರಿಸಿಕೊಳ್ಳಬೇಕಾಗಿದೆ.

ಮುಮುಕ್ಷು ಆಗಬೇಕಾದರೆ ಅವನಿಗೆ ಕೆಲವು ಯೋಗ್ಯತೆಗಳು ಬೇಕು.. ಅವೇ ಮನುಷ್ಯ ಜನ್ಮ, ಜನನ ಮರಣಗಳ ರಹಸ್ಯವನ್ನು ಬೇಧಿಸಬಲ್ಲಂತಹ ಸರಿಯಾದ ಜ್ಞಾನ, ಮುಕ್ತಿಯನ್ನು ಪಡೆದ ಗುರುಗಳ ಆಶ್ರಯ.

ಒಂದು ಜೀವಿಯಲ್ಲಿ ಅಂತಸ್ಥವಾಗಿರುವ ಪವಿತ್ರತೆ ವ್ಯಕ್ತವಾಗುವುದಕ್ಕೆ, ಹಲವು ಪ್ರಾಣಿ ದೇಹದ ಅನುಭವ ಪಡೆದು ಕೊನೆಗೆ ಮನುಷ್ಯನಾಗಿ ಹುಟ್ಟಿರಬೇಕು. ಜನನ ಮರಣಗಳಿಗೆ ಕಾರಣವಾದ ಮಾಯಾವರಣವನ್ನು ಹರಿದೊಗೆಯಲು ಮಾನವ ಜನ್ಮ ಅತ್ಯಂತ ಶ್ರೇಷ್ಠವಾದ ಅವಕಾಶವನ್ನು ಕೊಡುವುದು. ಹಿಂದೂಶಾಸ್ತ್ರ ಮನುಷ್ಯನಾಗಿ ಹುಟ್ಟುವುದಕ್ಕೆ ಮುಂಚೆ ಎಂಭತ್ತುನಾಲ್ಕು ಲಕ್ಷ ಯೋನಿಗಳ ಮೂಲಕ ಬಂದಿರಬೇಕು ಎನ್ನುವುದು. ನೀವು ಮನುಷ್ಯರಲ್ಲಿ ಗಂಡಸರೋ ಹೆಂಗಸರೋ ಆಗಿ ಹುಟ್ಟಿದಾಗ ಮುಕ್ತ ರಾಗಲು ಶ್ರೇಷ್ಠ ಅವಕಾಶವಿದೆ. ಮಾನವ ದೇಹದಲ್ಲಿ ಮಾತ್ರ ನಿತ್ಯ ಅನಿತ್ಯ ವಸ್ತು ವಿವೇಕವನ್ನು ಚೆನ್ನಾಗಿ ಮಾಡಬಹುದು. ಮನುಷ್ಯ ಜನ್ಮದಲ್ಲಿ ಬರುವ ಅವಕಾಶವನ್ನು ಕಳೆದುಕೊಂಡರೆ ನಮಗೆ ಎಂತಹ ನಷ್ಟವಾಗುವುದು. ಈಗ ಬೇಕಾದರೆ ನೀವು ಅತ್ಯಂತ ಶ್ರೇಷ್ಠಪದವಿಯನ್ನು ಪಡೆದುಕೊಳ್ಳಬಹುದು. ಇಲ್ಲದೇ ಇದ್ದರೆ ಮತ್ತಾವುದೋ ಕೀಳು ಪ್ರಾಣಿಯಾಗಿ ಸದ್ಯಕ್ಕೆ ಮುಕ್ತಿಯನ್ನು ಪಡೆಯುವ ಅವಕಾಶವನ್ನು ಕಳೆದುಕೊಳ್ಳುತ್ತೇವೆ. ಆದಕಾರಣ ಮನುಷ್ಯರಾಗಿ ಹುಟ್ಟಿರುವ ಅವಕಾಶ ನಮಗೆ ಬಂದಿರುವಾಗ, ಯುಕ್ತಾ ಅಯುಕ್ತ ಜ್ಞಾನದಿಂದ ಈ ಪ್ರಾಪಂಚಿಕ ವಸ್ತುಗಳಲ್ಲಿ ಆಸಕ್ತರಾಗುವ ಬದಲು ಪರಮ ಸತ್ಯವನ್ನು ಪ್ರೀತಿಸೋಣ. ಈ ಮಾನವ ದೇಹವನ್ನು ವ್ಯರ್ಥ ಮಾಡದೇ ಇರುವ.

ಜ್ಞಾನಮಾರ್ಗದಲ್ಲಿರುವ ಸಾಧಕನು, ಮಾಯಾವರಣದಿಂದ ಪಾರಾಗಿ ಮುಕ್ತನಾಗಲು ಇಚ್ಛಿಸುವನು. ಇದೇ ಅವನ ಸಮಸ್ಯೆ. ಜೀವನದಲ್ಲಿ ಯಾವುದಾದರೂ ಸಮಸ್ಯೆಯನ್ನು ಬಗೆಹರಿಸಬೇಕಾದರೆ, ಅದನ್ನು ಕುರಿತು ಚೆನ್ನಾಗಿ ಪರ್ಯಾಲೋಚನೆ ಮಾಡಬೇಕು. ಗುರಿಯನ್ನು ಸಾಧಿಸಬೇಕಾದರೆ ಏನೇನು ಮಾಡಬೇಕು ಅವುಗಳನ್ನೆಲ್ಲಾ ಚೆನ್ನಾಗಿ ತಿಳಿದಿರಬೇಕು. ಆಧ್ಯಾತ್ಮಿಕ ಜೀವನದಲ್ಲಿ ನಡೆಯುವವನಿಗೂ ಇದು ಅನ್ವಯಿಸುವುದು. ಮೊದಲಿನಿಂದಲೂ ಇಲ್ಲಿ ಎಲ್ಲವನ್ನೂ ಮಾಯೆ ಎಂದು ಹೇಳಿದರೂ, ಇದನ್ನು ಅವನೇ ಅನುಭವದ ಮೂಲಕ ಕಂಡುಕೊಳ್ಳಬೇಕಾಗಿದೆ. ಅವನು ಇದನ್ನು ನಿತ್ಯಅನಿತ್ಯ ವಸ್ತು ವಿವೇಕದ ಸಹಾಯದಿಂದ ಮಾಡಬೇಕಾಗಿದೆ.

ಮನುಷ್ಯಜೀವನದ ಸ್ವರೂಪವನ್ನು ತಿಳಿದರೆ ಇದು ಸುಲಭವಾಗುವುದು. ಮನುಷ್ಯ ಎಂದರೆ ನಮಗೇನು ಗೊತ್ತಿದೆ ? ಈ ಪ್ರಪಂಚದಲ್ಲಿ ಒಂದು ವಸ್ತು ಹೇಗೆ ಬರುತ್ತದೆ ? ಈ ಪ್ರಪಂಚಕ್ಕೂ ನಮಗೂ ಏನು ಸಂಬಂಧ ? ಸಾವಿರಾರು ವರ್ಷಗಳ ಹಿಂದೆ ಕಪಿಲ

ಮಹರ್ಷಿಗಳು ಬ್ರಹ್ಮಾಂಡ ಮತ್ತು ಪಿಂಡಾಂಡವನ್ನು ವಿಭಜನೆ ಮಾಡಿ ಹೇಳಿದರು. ಅದು ಇಂದಿಗೂ ಸತ್ಯವಾಗಿದೆ. ನಾವು ಈ ಸೃಷ್ಟಿಯನ್ನು ವಿವರಿಸಬೇಕಾದರೆ ಕಪಿಲರ ಬಳಿಗೆ ಹೋಗಬೇಕು ಎನ್ನುತ್ತಾರೆ. ಆದರೆ ಪ್ರಾರಂಭದಲ್ಲಿ ನಮಗೆ ಕೆಲವು ವಿವರಣೆಗಳು ಬೇಕು. ಅಸತ್ಯ ಏನು ಎಂದು ತಿಳಿಯದೇ ಇದ್ದರೆ, ಸತ್ಯದಿಂದ ಅದನ್ನು ಬೇರೆ ಮಾಡಲು ನಮಗೆ ಆಗುವುದಿಲ್ಲ. ನಾವು ಯಾವುದನ್ನು ತ್ಯಜಿಸಬೇಕೋ ಅದರ ಸ್ವಭಾವ ನಮಗೆ ಗೊತ್ತಿರ ಬೇಕು.

ಕಪಿಲರ ಪ್ರಕಾರ ಸೃಷ್ಟಿ ಪುರುಷ ಮತ್ತು ಪ್ರಕೃತಿ ಇವರ ಸಂಬಂಧದಿಂದ ಆಗು ವುದು. ಪುರುಷನೇ ನಿಮಿತ್ತ ಕಾರಣ, ಪ್ರಕೃತಿ ಉಪಾದಾನ ಕಾರಣ. ಕಪಿಲರ ಸೃಷ್ಟಿ ಸಿದ್ಧಾಂತಕ್ಕೂ ವೇದಾಂತದ ಸೃಷ್ಟಿ ಸಿದ್ಧಾಂತಕ್ಕೂ ಈ ಬೇಧವಿದೆ. ಕಪಿಲರ ಪ್ರಕಾರ, ಪುರುಷ ಮತ್ತು ಪ್ರಕೃತಿ ಸೃಷ್ಟಿಗೆ ಕಾರಣ. ವೇದಾಂತದ ಪ್ರಕಾರ, ಬ್ರಹ್ಮ ಮತ್ತು ಮಾಯೆ ಸೃಷ್ಟಿಗೆ ಕಾರಣ. ವೇದಾಂತ ಕಪಿಲರನ್ನು ಎರಡು ದೃಷ್ಟಿಯಿಂದ ಖಂಡಿಸುವುದು. ಅವೇ ಅಸಂಖ್ಯಾತ ಪುರುಷರು ಇರುವುದು, ಮತ್ತು ಪ್ರಕೃತಿ ಸ್ವತಂತ್ರವಾಗಿ ಇರಬಲ್ಲದು ಎಂಬ ವಿಷಯ. ವೇದಾಂತದ ಪ್ರಕಾರ ಪುರುಷ ಒಂದು, ಹಲವಿಲ್ಲ. ಪ್ರಕೃತಿ ಸೃಷ್ಟಿಗೆ ಉಪಾದಾನ ಕಾರಣವಲ್ಲ. ಉಪಾದಾನವೇ ಇಲ್ಲ. ಇದೆಲ್ಲ ಬರಿ ಮಾಯೆ. ಬ್ರಹ್ಮನ ಮೇಲೆ ಆರೋಪ ಮಾಡಿರುವ ಮಾಯೆಯೆ ವಿವರ್ತ, ಅದೇ ಸೃಷ್ಟಿಗೆ ಕಾರಣ. ಬ್ರಹ್ಮನಿಲ್ಲದೆ ಇದ್ದರೆ ಪ್ರಕೃತಿ ಇರಲಾರದು. ಈ ಎರಡು ವಿಷಯದಲ್ಲಿ ವೇದಾಂತಕ್ಕೂ ಕಪಿಲರಿಗೂ ಇರುವ ವ್ಯತ್ಯಾಸ.

ಕಪಿಲರ ಸಿದ್ಧಾಂತದ ಪ್ರಕಾರ ಪ್ರಕೃತಿ ಮೂರು ಗುಣಗಳಿಂದ ಆಗಿದೆ. ಅದೇ ತಮಸ್ಸು; ಇದೇ ಆವರಣ ಶಕ್ತಿ. ಅಜ್ಞಾನ ಮತ್ತು ಭ್ರಾಂತಿಗೆ ಕಾರಣ. ರಜಸ್ ಎಂದರೆ ಯಾವಾಗಲೂ ಹೊರಗೆ ಹೋಗುವ ಸ್ವಭಾವ. ಮೂರನೆಯದೆ ಸತ್ವ. ಇದು ಸಮತ್ವದಲ್ಲಿ ರುವುದು. ತಾನು ಎಲ್ಲಿಂದ ಬಂದನೋ ಅಲ್ಲಿಗೆ ಹಿಂತಿರುಗಬೇಕೆಂಬ ಸ್ವಭಾವ. ಕಪಿಲರ ಸಿದ್ಧಾಂತದ ಪ್ರಕಾರ, ಈ ಮೂರು ಗುಣಗಳುಳ್ಳ ಪ್ರಕೃತಿ, ಪುರುಷನೊಂದಿಗೆ ಸೇರಿ, ಮಹತ್‌ನಂತೆ ವಿಕಾಸವಾಗುವುದು. ಇದೇನೇ ವಿಶ್ವಚೈತನ್ಯ, ಅವ್ಯಕ್ತ. ಅನಂತರ ಅಹಂಕಾರ, ನಾನು ನನ್ನದು ಎಂಬ ಭಾವ, ಮನಸ್ಸು—ಸಂಕಲ್ಪ ವಿಕಲ್ಪಗಳಿಂದ ಕೂಡಿರುವುದು.

ಮನಸ್ಸಿನಿಂದ ಮುಂದಿನವು ವಿಕಾಸವಾಗುವುವು. ಬಾಹ್ಯಪ್ರಪಂಚದಲ್ಲಿ ಐದು ತನ್ಮಾತ್ರಗಳು ಎಂದರೆ ಸೂಕ್ಷ್ಮ ವಿಷಯವಸ್ತುಗಳು, ಶಬ್ದ, ಸ್ಪರ್ಶ, ರೂಪು, ರಸ, ಗಂಧ ಗಳನ್ನೊಳಗೊಂಡಿದೆ. ಇವೇನೇ ಅನಂತರ ಪಂಚಭೂತಗಳಾಗುವುವು. ಇವೇ ಪೃಥ್ವಿ, ಅಪ್, ಮರುತ್, ತೇಜಸ್, ವ್ಯೋಮ. ಆಂತರ್ಯದಲ್ಲಿ ಐದು ಕರ್ಮೇಂದ್ರಿಯ, ಐದು ಜ್ಞಾನೇಂದ್ರಿಯ ಮತ್ತು ಪಂಚಪ್ರಾಣಗಳು ಇವೆ. ನಾವು ಮಾಡುವ ಐದು ಜ್ಞಾನೇಂದ್ರಿ ಯದ ಕರ್ಮವೇ ಶಬ್ದ, ಸ್ಪರ್ಶ, ರೂಪ, ರಸ, ಗಂಧದ ಅರಿವಾಗುವುದು.

ಮನುಷ್ಯ ಮೂರು ಶರೀರಗಳಿಂದ ಆಗಿದ್ದಾನೆ. ಶರೀರ ಎಂದರೆ ಬದಲಾಯಿಸು

ವುದು ಎಂದು ಅರ್ಥ. ಈ ಮೂರು ಶರೀರಗಳು ಬದಲಾಯಿಸುತ್ತ ಇರುತ್ತವೆ. ಆದಕಾರಣ ಅವು ಸತ್ಯವಾಗಿರಲಾರವು. ಏಕೆಂದರೆ ಸತ್ಯವಿಕಾರಕ್ಕೆ ಒಳಗಾಗಬಾರದು. ನಮ್ಮಲ್ಲಿ ಪ್ರತಿಯೊಬ್ಬರಲ್ಲಿಯೂ ಇರುವ ನೈಜಸ್ವರೂಪವೇ ಆತ್ಮ. ಆತ್ಮ ಈ ಮೂರು ಶರೀರಗಳಿಗೆ ಅತೀತ.

ಅತ್ಯಂತ ಬಾಹ್ಯದಲ್ಲಿರುವುದೇ ಸ್ಥೂಲಶರೀರ. ಇದು ಪಂಚಭೂತಗಳಿಂದ ಆಗಿದೆ. ಇದರಲ್ಲಿ ದೇಹಕ್ಕೆ ಸಂಬಂಧಪಟ್ಟಿರುವ ಅಂಗಾಂಗಗಳೆಲ್ಲ ಇವೆ. ಮೂಳೆ, ಮಾಂಸ, ಕೊಬ್ಬು, ಚರ್ಮ, ದೇಹದಲ್ಲಿರುವ ಹಲವಾರು ಗ್ರಂಥಗಳು, ರಕ್ತ, ವೀರ್ಯ ಇತ್ಯಾದಿಗಳೆಲ್ಲ ಇವೆ. ಈ ಹೊರಗಿನ ಶರೀರ ಆಹಾರದಿಂದ ರಕ್ಷಿತವಾಗಿದೆ. ಎರಡನೆಯವೆ ಸೂಕ್ಷ್ಮ ಶರೀರ. ಇದು ಸ್ಥೂಲದೇಹದ ಒಳಗೆ ಇದೆ. ಇದು ಸ್ಥೂಲದೇಹವನ್ನು ಒಂದು ಯಂತ್ರ ದಂತೆ ಉಪಯೋಗಿಸುವುದು. ಸೂಕ್ಷ್ಮ ಶರೀರ ಅಸ್ತಿತ್ವದ ದೃಷ್ಟಿಯಿಂದ ಸ್ಥೂಲಶರೀರ ಕ್ಕಿಂತ ಬೇರೆ. ಆದರೆ ವ್ಯಕ್ತಪಡಿಸಬೇಕಾದರೆ, ಸ್ಥೂಲಶರೀರ ಬೇಕು. ಸೂಕ್ಷ್ಮ ಶರೀರ ದಲ್ಲಿ ಹದಿನಾಲ್ಕು ಭಾಗಗಳಿವೆ. ಅವೇ ಚಿತ್ತ ವಿಶ್ವಮನಸ್ಸು. ಇಲ್ಲಿಯೇ ಆಲೋಚನೆಗಳು ಎಂಬ ಅಲೆಗಳು ಎದ್ದು ವ್ಯಕ್ತವಾಗಬೇಕಾದರೆ, ಬಾಹ್ಯದಲ್ಲಿ ಶಬ್ದಸ್ಪಂದನಗಳೇಳುವ ಹಾಗೆ. ಅನಂತರವೇ ಬುದ್ಧಿ, ನಿಶ್ಚಯಾತ್ಮಕ ಜ್ಞಾನವನ್ನು ಕೊಡುವುದು, ಅಹಂಕಾರ, ಮನಸ್ಸು, ಪಂಚಪ್ರಾಣಗಳು, ಮತ್ತು ಪಂಚತನ್ಮಾತ್ರಗಳು.

ಪಂಚಪ್ರಾಣಗಳೇ, ಪ್ರಾಣ, ಉಸಿರಾಡುವುದು, ಸಮಾನ ಎಂದರೆ ಜೀರ್ಣಿಸಿ ಕೊಳ್ಳುವ ಶಕ್ತಿ, ಅಪಾನ ಎಂದರೆ ಹೊರಗೆ ಕಳುಹಿಸುವ ಶಕ್ತಿ, ಉದಾನ ಎಂದರೆ ನಮ್ಮನ್ನು ಮೇಲೆತ್ತುವ ಶಕ್ತಿ, ವ್ಯಾನ ಎಂದರೆ ದೇಹದಲ್ಲೆಲ್ಲ ಸಮತ್ವವನ್ನು ಕಾಪಾಡು ವುದು. ಪಂಚೇಂದ್ರಿಯಗಳಿಗೆ ತಾಕುವ ಸೂಕ್ಷ್ಮವಿಷಯಗಳನ್ನು ತನ್ಮಾತ್ರ ಎನ್ನುತ್ತಾರೆ.

ಮೂರನೆಯದನ್ನೇ ಕಾರಣ ಶರೀರ ಎನ್ನುತ್ತಾರೆ. ಇದೇ ಅತ್ಯಂತ ಒಳಗೆ ಇರುವುದು. ಇಲ್ಲಿಯೇ ಅವಿದ್ಯೆಯ ಬೀಜ ಇರುವುದು. ಇಲ್ಲಿಯೇ ಮಾಯೆಯ ಭಾವನೆ ಹೇಗೋ ಬೇರೂರಿದೆ. ಇವುಗಳ ಹಿಂದೆ ಇರುವ ಆತ್ಮನೇ ಬ್ರಹ್ಮ. ಇದು ಹೇಗೋ ಈ ಮೂರರಲ್ಲಿ ಸಿಕ್ಕಿಕೊಂಡಿದೆ.

ಕತ್ತಿ ಒರೆಯಲ್ಲಿರುವಂತೆ, ಆತ್ಮ ಪಂಚಕೋಶಗಳ ಒಳಗೆ ಇದ್ದಾನೆ ಎಂತಲೂ ಹೇಳು ತ್ತಾರೆ. ಅತ್ಯಾಧುನಿಕವಾದ ಉದಾಹರಣೆ ಮೂಲಕ ಹೇಳುವುದಾದರೆ, ವಿದ್ಯುದ್ದೀಪವನ್ನು ಬೇರೆಬೇರೆ ಬಣ್ಣ ಮತ್ತು ಆಕಾರಗಳಿಂದ ಕೂಡಿದ, ಐದು ಪದರಗಳಿಂದ ಮುಚ್ಚಿದ ಹಾಗಿದೆ. ನಾವು ಪದರಗಳಾಚೆ ಬೆಳಕಿನ ಹತ್ತಿರ ಹತ್ತಿರ ಹೋದರೆ ಅದು ಚೆನ್ನಾಗಿ ಬೆಳಗುವುದು. ಕೋಶ ಎಂದರೆ ಬಣ್ಣ ಮತ್ತು ಆಕಾರದ ಪದರಗಳು, ಇವುಗಳೇ ಗುಣಗಳು. ನಾವು ಆತ್ಮನನ್ನು ಸೇರಬೇಕಾದರೆ ವಿವೇಕದ ಸಹಾಯದಿಂದ ಈ ಕೋಶಗಳನ್ನು ದಾಟಿ ಹೋಗಬೇಕು. ಅತ್ಯಂತ ಹೊರಗೆ ಇರುವುದೇ ಅನ್ನಮಯ ಕೋಶ. ಇದೇ ಸ್ಥೂಲ ಶರೀರ. ಆಹಾರದಿಂದ ಇದು ಪೋಷಿತವಾಗಿರುವುದು. ಅದಿಲ್ಲದೆ ಇದ್ದರೆ ಇದು ನಾಶ ವಾಗುವುದು. ಇದೇ ಆತ್ಮನ ಅತ್ಯಂತ ಹೊರಗಿನ ಕೋಶ. ಎರಡನೇಯದೇ ಪ್ರಾಣ

ಮಯ ಕೋಶ. ಪಂಚ ಜ್ಞಾನೇಂದ್ರಿಯದ ಮೂಲಕ ಇದು ಕೆಲಸ ಮಾಡುವುದು. ಅವೇ ಕೇಳುವುದು, ಮುಟ್ಟುವುದು, ನೋಡುವುದು, ರುಚಿಸುವುದು, ಮೂಸುವುದು. ನಾಲ್ಕನೆಯ ಕೋಶವೇ ವಿಜ್ಞಾನಮಯ ಕೋಶ. ಇಲ್ಲಿಯೇ ಬುದ್ಧಿ ಜ್ಞಾನೇಂದ್ರಿಯದ ಮೂಲಕ ಕೆಲಸ ಮಾಡುವುದು. ಎರಡು ಮೂರು ನಾಲ್ಕನೆಯ ಕೋಶಗಳಲ್ಲಿ ಸೂಕ್ಷ್ಮ ಶರೀರ ಕೆಲಸ ಮಾಡುವುದು. ಐದನೆಯದೇ ಆನಂದಮಯ ಕೋಶ. ಇದೇ ಕಾರಣ ಶರೀರ. ಇದೇ ಆತ್ಮನ ಅತ್ಯಂತ ಒಳಗಿನ ಕೋಶ.

ಐದು ಕೋಶಗಳನ್ನು ಒಂದರೊಳಗೆ ಒಂದು ಇರುವ ವೃತ್ತಗಳಂತೆ ಭಾವಿಸಬಹುದು. ಇವುಗಳಿಗೆಲ್ಲ ಕೇಂದ್ರವೇ ಆತ್ಮ. ಆತ್ಮನೇ ನಿಮ್ಮ ವ್ಯಕ್ತಿತ್ವದ ಕೇಂದ್ರ. ನೀವು ಕೇಂದ್ರದ ಕಡೆ ಹೋಗಬೇಕಾಗಿದೆ. ನೀವು ಅಂತರ್ಮುಖರಾಗಬೇಕಾಗಿದೆ. ನೀವು ಯುಕ್ತ ಅಯುಕ್ತ ವನ್ನು ವಿಚಾರಿಸಬೇಕಾಗಿದೆ. ಅಂತರ್ಮುಖರಾಗಬೇಕು, ಧ್ಯಾನಮಗ್ನರಾಗಬೇಕು. ಸತ್ಯ ವನ್ನು ಪಡೆಯಬೇಕಾದರೆ, ಪೂರ್ಣತೆಯನ್ನು ಹೊಂದಬೇಕಾದರೆ, ನೀವು ಅಂತರ್ಮುಖ ರಾಗಬೇಕು, ಇಲ್ಲದೇ ಇದ್ದರೆ ನೀವು ಮುಂದುವರೆಯುವುದಕ್ಕೆ ಆಗುವುದಿಲ್ಲ. ನಿತ್ಯ ಅನಿತ್ಯ ವಸ್ತು ವಿವೇಕದಿಂದ ನಾವು ಆತ್ಮನ ಕಡೆಗೆ ಹೋಗುವೆವು. ಕ್ರಮೇಣ ದೇಹಾಭಿಮಾನವನ್ನು ತೊರೆಯಬೇಕು. ದೇಹಾಭಿಮಾನವೇ ಆತ್ಮಜ್ಞಾನಕ್ಕೆ ಆತಂಕ ಪ್ರಾಯವಾಗಿರುವುದು.

ಜಾಗ್ರತಾವಸ್ಥೆಯಲ್ಲಿ ನಾವು ಸ್ಥೂಲ ದೇಹದಲ್ಲಿರುತ್ತೇವೆ. ಕನಸಿನ ಅವಸ್ಥೆಯಲ್ಲಿ ಸೂಕ್ಷ್ಮ ಶರೀರಕ್ಕೆ ಹೋಗುತ್ತೇವೆ. ಸುಷುಪ್ತಿಯಲ್ಲಿ ಕಾರಣ ಶರೀರಕ್ಕೆ ಹೋಗುತ್ತೇವೆ. ಈ ಮೂರು ಅವಸ್ಥೆಗಳ ಹಿಂದೆಯೂ ಸಾಮಾನ್ಯವಾದ ಸಾಕ್ಷೀ ಭಾವ ಇರುತ್ತದೆ. ನಮಗೆ ಏನೂ ಅರಿಯದ ಸುಷುಪ್ತಿಯಿಂದ ಎದ್ದ ಮೇಲೆ, ನಮಗೆ ಬೇರೆ ಎನ್ನುವ ಭಾವ ಇರುವುದಿಲ್ಲ. ನಾವು ಹಿಂದೆ ಎಲ್ಲಿ ಬಿಟ್ಟಿದ್ದೆವೊ, ಅಲ್ಲಿಂದ ಮುಂದೆ ಹೋಗು ತ್ತೇವೆ. ಹಿಂದೆ ಒಂದು ಸಾಕ್ಷಿ ಇಲ್ಲದಿದ್ದರೆ ಇದು ಹೇಗೆ ಸಾಧ್ಯವಾಗುತ್ತದೆ? ನೀವು ಸುಷುಪ್ತಿ ಅವಸ್ಥೆಯಲ್ಲಿ ಇದ್ದಿರಿ ಎಂಬುದು ಹೇಗೆ ಗೊತ್ತು? ಹಿಂದೆ ಇರುವ ನನ್ನ ಪ್ರಜ್ಞೆ ಇದನ್ನು ತೋರುವುದು. ಆತ್ಮನೇ ಇಂದ್ರಿಯ ಮನಸ್ಸು ಮತ್ತು ಅಹಂಕಾರದ ಸಾಕ್ಷಿ. ಸುಷುಪ್ತಿಯಲ್ಲಿ ಏನೂ ಇಲ್ಲ ಎಂದು ಹೇಳುವುದಕ್ಕೂ ಆತ್ಮನೇ ಇರಬೇಕು. ಆತ್ಮ ಯಾವಾಗಲೂ ಚಿತ್ತ ವೃತ್ತಿಗಳಿಂದ, ಇಂದ್ರಿಯಗಳಿಂದ, ಅಹಂಕಾರದಿಂದ ಬೇರೆ.

ಮನುಷ್ಯನ ಆತ್ಮ ಕೋಶಗಳಿಗಿಂತ ಬೇರೆ ಆಗಿದೆ. ದೇಹ, ಬುದ್ಧಿ, ಮನಸ್ಸು, ಅಹಂಕಾರ ವಿಷಯ ವಸ್ತುಗಳು ಮತ್ತು ಮನಸ್ಸು ಗ್ರಹಿಸುವ ಪ್ರತಿಯೊಂದು ವಸ್ತುವೂ ಅನಾತ್ಮ. ಆತ್ಮ ಇವುಗಳೆಲ್ಲದರ ಸಾಕ್ಷಿ. ಆತ್ಮ ಮನಸ್ಸಿಗೆ ಅತೀತ, ಎಲ್ಲ ಅವಸ್ಥೆಗಳಿಗೂ ಅತೀತ. ಅದು ನಿರ್ವಿಕಾರಿಯಾದುದು, ಅನಂತವಾದುದು, ಎಲ್ಲ ಚಲನವಲನಕ್ಕೆ ಅತೀತ ವಾದುದು. ಅದನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದೇ ನಮ್ಮ ಗುರಿ. ಆದರೆ ಮಾಯಾ ಪ್ರಭಾವದಿಂದ ನಾವು ಅನಾತ್ಮ ವಸ್ತುವಿನೊಂದಿಗೆ ತಾದಾತ್ಮ್ಯಭಾವವನ್ನು ಪಡೆಯುತ್ತೇವೆ. ಇದು ಭ್ರಾಂತಿಯ ಅಭಿಮಾನ. ದೇಹ, ಮನಸ್ಸು, ಬುದ್ಧಿ ನಾವು ಎಂಬ ಅಭಿಮಾನವನ್ನು ಬ್ರಹ್ಮನ ಮೇಲೆ ಆರೋಪ ಮಾಡಬೇಕಾಗಿದೆ.

ಬ್ರಹ್ಮನೇ ಸತ್ಯ. ಅದರೊಂದಿಗೆ ತಾದಾತ್ಮ್ಯ ಭಾವವನ್ನು ಪಡೆಯುವುದಕ್ಕೆ ನಾವು ಯತ್ನಿಸಬೇಕು. ನಮ್ಮ ಒಂದು ದೋಷವೇ ದೇಹ ಮತ್ತು ಅದಕ್ಕೆ ಸಂಬಂಧಪಟ್ಟ ಕ್ರಿಯೆಯೊಂದಿಗೆ ತಾದಾತ್ಮ್ಯ ಭಾವವನ್ನು ಪಡೆಯುತ್ತೇವೆ. ಉದಾಹರಣೆಗೆ ನಾನು ಎಂಬುದನ್ನು ಉಪಯೋಗಿಸಿದರೆ, ದೇಹದ ಭಾವನೆಯೇ ನಮಗೆ ಬರುವುದು. ಸಾವಿರದಲ್ಲಿ ಒಂಭೈನೂರ ತೊಂಭತ್ತು ಒಂಭತ್ತು ಜನ, ತಾವು ದೇಹ ಎಂದು ಭಾವಿಸುತ್ತಾರೆ. ಆದ ಕಾರಣ, ಆತ್ಮನ ಮೇಲೆ ದೇಹದ ಅಭಿಮಾನವನ್ನು ಆರೋಪಿಸಿಕೊಳ್ಳುತ್ತೇವೆ. ಅದನ್ನು ನಾವು ತೋರಬೇಕೆ? ನೀನು ಎಷ್ಟು ತೂಕ ಇದ್ದೀಯಾ ಎಂದು ಕೇಳಿದರೆ, ಅವನು ತಕ್ಕಡಿಯ ಮೇಲೆ ನಿಂತು ಬಹುಶಃ ನಾನು ೧೪೫ ಪೌಂಡು ತೂಗುತ್ತೇನೆ ಎಂದು ಹೇಳುತ್ತಾನೆ. ನೀನು ಎಷ್ಟು ಉದ್ದ ಇದ್ದೀಯಾ ಎಂದು ಕೇಳಿದರೆ, ಅವನು ಟೇಪಿನಿಂದ ತನ್ನನ್ನು ಅಳೆದುಕೊಳ್ಳುವನು. ಆತ್ಮನ ಮೇಲೆ ದೇಹದ ಧರ್ಮವನ್ನು ಆರೋಪ ಮಾಡುತ್ತಾನೆ. ಸಾಂತ ವಸ್ತುವಿನ ಗುಣವನ್ನು ತಾನು ಆರೋಪಮಾಡಿಕೊಳ್ಳುತ್ತಾನೆ. ಹೀಗಿದ್ದರೆ ಅನಂತ ವನ್ನು ಹೇಗೆ ಸಾಕ್ಷಾತ್ಕಾರ ಮಾಡಿಕೊಳ್ಳಬಲ್ಲ. ಎಷ್ಟೋ ಒಂದು ಸಲ ನಾನೇ ದೇಹ ಎಂದು ಹೇಳಿಕೊಂಡು ಅದನ್ನು ತೂಗಿಸಿಕೊಳ್ಳುತ್ತೇನೆ. ಅದನ್ನೇ ಆತ್ಮ ಎಂದು ಭಾವಿಸುತ್ತೇನೆ. ನಾವು ಏತಕ್ಕೆ ಈ ತಪ್ಪನ್ನು ಮಾಡುತ್ತೇವೆ? ನಾನು, ನನ್ನ ದೇಹ ಎಂದರೆ, ನನಗೆ ಸೇರಿದ್ದು ಎಂದು. ನನ್ನ ತೂಕ ಎಷ್ಟು ಎಂದು ಕೇಳಿದರೆ, ನನ್ನ ಕೋಟನ್ನು ತೂಗಿ ನಾನು ಎರಡು ಪೌಂಡು ಎಂದು ಹೇಳುವುದಿಲ್ಲ. ನಾವು ದೇಹಕ್ಕೆ ಏತಕ್ಕೆ ಇದನ್ನು ಮಾಡಬೇಕು?

ಸ್ವಾಮಿತ್ವ ಮತ್ತು ಸ್ವಾಮ್ಯ ಭಾವವನ್ನು ತರಬೇಕು. ಪ್ರತಿಯೊಂದು ಇಂದ್ರಿಯ ಗ್ರಹಣದಲ್ಲಿಯೂ ಎರಡು ವಸ್ತುಗಳು ಇರಬೇಕು. ಗ್ರಹಿಸುವ ದೃಗ್ ಮತ್ತು ಅವನು ಗ್ರಹಿಸುವ ದೃಶ್ಯ. ನಮಗೆ ದೇಹ ಮನಸ್ಸು ಬುದ್ಧಿ ಇಂದ್ರಿಯಗಳಿವೆ ಎನ್ನುತ್ತೇವೆ. ಇವೆಲ್ಲವೂ ದೃಶ್ಯ, ದೃಗ್ ಅಲ್ಲ. ಮನಸ್ಸಿನಲ್ಲಿ ದೃಗ್, ದೃಶ್ಯಗಳ ವಿಷಯದಲ್ಲಿ ಭ್ರಾಂತಿ ಇರಬಾರದು. ದೃಶ್ಯ ಯಾವಾಗಲೂ ದೃಶ್ಯವೇ ಆಗಿರಬೇಕು. ದೃಶ್ಯ ಎಂಬುದು ಏನು ಎಂಬುದು ನಿಮಗೆ ಗೊತ್ತಿದ್ದರೆ ಅದನ್ನು ನೀವು ದೃಗ್ ಮಾಡುವುದಕ್ಕೆ ಆಗುವುದಿಲ್ಲ.

ನಾನು ಎಂಬ ಪ್ರತ್ಯಯವನ್ನು ತೆಗೆದುಕೊಳ್ಳಿ. ಅಲ್ಲಿ ನಾನಲ್ಲವೇ ಇರುವುದನ್ನೆಲ್ಲ, ಕಳೆಯುತ್ತ ಬನ್ನಿ. ಹಾಗೆ ವಿಭಜನೆ ಮಾಡಿದಾಗ, ದೇಹ ಮನಸ್ಸು ಇವುಗಳೆಲ್ಲವೂ ಇವೆ. ದೃಗ್ ಇಲ್ಲಿ ದೇಹ, ಮನಸ್ಸು, ಬುದ್ಧಿ ಆಗುತ್ತದೆ. ನನಗೆ ಕೋಪ ಬಂದಾಗ, ನನಗೆ ಕೋಪ ಬಂದಿದೆ ಎಂದು ಗೊತ್ತಾಗುವುದು. ನನಗೆ ಸಂತೋಷವಾದಾಗ, ಅದು ನನಗೆ ಗೊತ್ತಿದೆ. ಭಾವನೆಗಳು ದೃಗ್‌ಗಿಂತ ಹೊರಗೆ ಇವೆ. ನಾನು ಎಂದರೆ ದೇಹ ಎಂಬ ಭಾವನೆಯನ್ನು ತೆಗೆದು ಹಾಕಿದರೆ, ಆಗ ನಾನು ದೇಹದಲ್ಲಿರುತ್ತೇನೆ ಎಂದು ಹೇಳುವುದಕ್ಕೆ ಆಗುವುದಿಲ್ಲ.

ನಾವು ಇದನ್ನು ಮಾಡುವುದಕ್ಕೆ ಏತಕ್ಕೆ ಕಷ್ಟವಾಗುವುದು? ನಾವೇಕೆ ದೇಹ ಭಾವನೆ ಮತ್ತು ಅದು ಮಾಡುವ ಕ್ರಿಯೆಯಿಂದ ಪಾರಾಗಬಾರದು? ಮತ್ತಾವುದೋ ಶಕ್ತಿ ಅದನ್ನು ತಡೆಯುತ್ತಿದೆ. ನಮ್ಮ ಬುದ್ಧಿಗೆ ಯಾವುದೋ ಒಂದು ಭ್ರಮಣೆಯನ್ನು ತಂದಿದೆ.

ಆದಕಾರಣವೇ ನಾವು ಈಗ ಆ ಸ್ಥಿತಿಯಲ್ಲಿರುವುದು. ನಾವು ಒಳ್ಳೆಯ ರಾಜನ ಮನೆಗೆ ಸೇರಿದ್ದರೂ ಭಿಕ್ಷುಕರಂತೆ ಇರುವೆವು. ನಾವು ಅನಂತ ಸ್ವರೂಪರಾದರೂ, ನಾವು ತುಂಬಾ ಕ್ಷುದ್ರರು, ದುರ್ಬಲರು, ನಾಜೋಕಿನವರು ಎಂದು ಭಾವಿಸುತ್ತೇವೆ.

ಮಾಯಾ ಪಾಶಕ್ಕೆ ಬಿದ್ದು ನಾವು ಅಲ್ಪ ವ್ಯಕ್ತಿಗಳಾಗಿದ್ದೇವೆ. ನಮ್ಮ ನಿಜವಾದ ಸ್ವಭಾವ ನಮಗೆ ಮರೆತು ಹೋಗಿದೆ. ಈ ಮಾಯೆಯ ಸ್ವರೂಪವನ್ನು ತಿಳಿದುಕೊಂಡರೆ, ನಮ್ಮ ಸ್ವಸ್ವರೂಪ ಗೊತ್ತಾಗುವುದು. ಕೆಲವುವೇಳೆ ಮಿಂಚಿನಂತೆ ನಮಗೆ ಅದು ಹೊಳೆಯುವುದು. ಮಿಂಚು ಹೇಗೆ ಕ್ಷಣಕಾಲ ಹೊರಗಿರುವುದನ್ನು ತೋರಿ ಮಾಯೆಯಾಗುವುದೊ ಹಾಗಿದೆ. ಆದರೆ ಅದು ನಮ್ಮ ಸ್ಮೃತಿಯಿಂದ ಎಂದಿಗೂ ಅಳಿಸಿ ಹೋಗುವುದಿಲ್ಲ. ಕ್ಷಣಿಕವಾಗಿ ತೋರುವ ಬೆಳಕು ಶಾಶ್ವತವಾಗಿ ನಿಂತಾಗ ನಮಗೆ ಪೂರ್ಣ ಸಾಕ್ಷಾತ್ಕಾರವಾಗುವುದು. ನಾವು ನಮ್ಮ ಪೂರ್ವಮಹಿಮಾಮಯ ಸ್ಥಿತಿಗೆ ಹೋಗಬೇಕು. ಮಾಯಾ ದೆಸೆಯಿಂದ ನಾವು ಈ ದುಸ್ಥಿತಿಗೆ ಬಂದಿದ್ದೇವೆ. ನಾವು ಪೂರ್ವ ಸ್ಥಿತಿಯನ್ನು ಪಡೆದು ಅಲ್ಲಿ ಶಾಶ್ವತವಾಗಿರುವುದೇ—ಎಂದರೆ ಮುಕ್ತವಾಗುವುದೇ ಜ್ಞಾನಯೋಗದ ಗುರಿ.

ಈ ಮಾಯೆಯಿಂದ ಪಾರಾಗುವುದು ಬಹಳ ಕಷ್ಟ. ಈ ದೃಗ್ ದೃಶ್ಯದ ಭಾವನೆಯಿಂದ ಪಾರಾಗುವುದು ಬಹಳ ಕಷ್ಟ. ನಾನು ಇದಾಗಿದ್ದೇನೆ, ಆ ವಸ್ತುವನ್ನು ಪಡೆದುಕೊಂಡು ಸಂತೋಷಪಡಬೇಕು ಎಂಬುದೊಂದೇ ನಮಗೆ ಗೊತ್ತಾಗುವುದು. ಮುಕ್ತಿಯನ್ನು ಪಡೆಯುವುದಕ್ಕಿಂತ ಸ್ವರ್ಗಕ್ಕೆ ಹೋಗುವುದಕ್ಕೆ ಹಲವರಿಗೆ ಆಸೆ ಇರುವುದು. ನಾನೊಮ್ಮೆ ಸ್ವಾಮಿ ತುರೀಯಾನಂದರನ್ನು ನೋಡುವುದಕ್ಕೆ ಹೋಗಿದ್ದಾಗ ನಿನಗೆ ಸ್ವರ್ಗಕ್ಕೆ ಹೋಗುವುದಕ್ಕೆ ಇಚ್ಛೆ ಇದೆಯೇ ಎಂದು ಕೇಳಿದರು. ನಾನು ತಕ್ಷಣವೇ ಇಲ್ಲ ಎಂದೆ. ಅವರು ತುಸು ನಕ್ಕು ಬಹುಶಃ ಸ್ವರ್ಗ ಇಲ್ಲ ಎಂದು ನೀನು ತಿಳಿದುಕೊಂಡಿದ್ದೀಯೆ, ಅದಕ್ಕೇ ಹಾಗೆ ಹೇಳುವುದು. ಆದರೆ ಒಂದು ಸ್ವರ್ಗವಿದೆ ಎಂದು ನಾನು ನಿನಗೆ ತೋರಿದರೆ, ಆಗ ನೀನು ಅಲ್ಲಿಗೆ ಹೋಗುವುದಿಲ್ಲ ಎಂದು ಹೇಳುತ್ತೀಯ ? ಎಂದರು.

ಸ್ವರ್ಗಲೋಕಕ್ಕೆ ಹೋಗಬೇಕೆಂಬ ಆಸೆ ಇದ್ದರೂ ಜ್ಞಾನಯೋಗದ ಗುರಿಯನ್ನು ಮುಟ್ಟಲು ಆಗುವುದಿಲ್ಲ. ದ್ವೈತ ಭಾವನೆ ಯಾವ ರೀತಿಯಲ್ಲಿದ್ದರೂ ಅದನ್ನು ಅಲ್ಲಗಳೆಯದೆ ಇದ್ದರೆ ಜ್ಞಾನಯೋಗದ ಮೂಲಕ ಹೋಗುವುದಕ್ಕೆ ಆಗುವುದಿಲ್ಲ. ಕೆಳಗಿನ ಭೂಮಿಕೆಯಲ್ಲಿ ದೃಗ್ ದೃಶ್ಯದ ಭಾವನೆ ಯಾವಾಗಲೂ ಇರುವುದು. ನಾವು ಮನಸ್ಸಿಗೆ ಅತೀತರಾಗಿ ಹೋಗಬೇಕಾಗಿದೆ. ಮನಸ್ಸು ಸ್ಥಿರವಲ್ಲ. ಅದು ಯಾವಾಗಲೂ ಚಂಚಲ ಸ್ವಭಾವ ಉಳ್ಳದ್ದು. ಇವತ್ತು ದೇವರನ್ನು ಪ್ರೀತಿಸುವ ಮನಸ್ಸು ನಾಳೆ ಯಾರನ್ನೂ ಪ್ರೀತಿಸುವುದಿಲ್ಲ ಎಂದು ಹೇಗೆ ಹೇಳುವುದು ? ಮನಸ್ಸಿನೊಂದಿಗೆ ತಾದಾತ್ಮ್ಯ ಭಾವವನ್ನು ಪಡೆದಿರುವ ನಾನು ಎಂಬುದನ್ನು ತೆಗೆದುಹಾಕಬೇಕು. ಆಗಲೇ ದೃಗ್ ದೃಶ್ಯದ ಭಾವನೆ ತೊಲಗಬೇಕಾದರೆ. ಅದು ಹೋದರೆ ಮನಸ್ಸು ಹೋಗುವುದು. ಆಗ ಬ್ರಹ್ಮನ ಸಾಕ್ಷಾತ್ಕಾರವಾಗುವುದು. ಆಗಲೇ ಮಾಯ ನಾಶವಾಗಬೇಕಾದರೆ, ಮಾಯಾವರಣ ಎಂದೆಂದಿಗೂ ಬಿದ್ದು ಹೋಗುವುದು.

ಆತ್ಮನ ಮೇಲೆ ಆರೋಪಿತವಾದ ಮನಸ್ಸಿನ ಆವರಣವನ್ನು ತೆಗೆದುಹಾಕಿದರೆ, ಆಗ ಬ್ರಹ್ಮಾನಂದ ಅರಿವಾಗುವುದು. ಮಾಯೆಯ ಇಬ್ಭಾಗವಾದ ದೃಗ್ ದೃಶ್ಯಗಳನ್ನು ಒಂದು ಗೂಡಿಸಬೇಕಾದರೆ ಮನಸ್ಸಿನ ನಿಗ್ರಹ ಅತ್ಯಂತ ಮುಖ್ಯವಾದುದು. ಎರಡು ಕಮಾನು ಗಳನ್ನು ನಾವು ಧ್ವಂಸ ಮಾಡಬೇಕು.

ಬ್ರಹ್ಮಸಾಕ್ಷಾತ್ಕಾರವನ್ನು ಹೊಸದಾಗಿ ಪಡೆಯಬೇಕೆಂದು ಜ್ಞಾನಯೋಗ ಹೇಳುವು ದಿಲ್ಲ. ಅದು ಯಾವ ನಂಬಿಕೆಯನ್ನೂ ಬೋಧಿಸುವುದಿಲ್ಲ, ಆಚಾರವನ್ನು ಬೋಧಿಸುವು ದಿಲ್ಲ. ನಿಮ್ಮಲ್ಲಿ ಆಗಲೆ ಇಲ್ಲದಿರುವ ಯಾವುದನ್ನೂ ಹೊಸದಾಗಿ ಕೊಡುತ್ತೇನೆ ಎಂದು ಭರವಸೆಯನ್ನು ಕೊಡುವುದಿಲ್ಲ. ಪರಿಪೂರ್ಣತೆ ಎಂಬುದು ನಿಮ್ಮ ಚೈತನ್ಯದ ವಿಕಾಸ. ಈ ದೃಷ್ಟಿಯಿಂದ ಇದನ್ನು ಹೊಸದಾಗಿ ಪಡೆಯುವುದಿಲ್ಲ. ಪೂರ್ಣತೆ ಆಗಲೆ ನಿಮ್ಮಲ್ಲಿ ಅಂತರ್ಗತ ವಾಗಿದೆ. ಮಾಯಾವರಣ ಸರಿದೊಡನೆ ನೀವು ಹಿಂದೆ ಏನಾಗಿದ್ದಿರೊ, ಹಾಗೆ ಆಗುತ್ತೀರಿ. ಜೀವಾತ್ಮ ಪರಮಾತ್ಮನಲ್ಲದೆ ಬೇರಲ್ಲ. ಜೀವನೇ ಬ್ರಹ್ಮ. ಈ ಜ್ಞಾನವನ್ನು ಮುಚ್ಚಿರುವ ಅಜ್ಞಾನದ ತೆರೆಯನ್ನು ಅತ್ತ ಸರಿಸಬೇಕಾಗಿದೆ. ಅಷ್ಟೇ ನಾವು ಮಾಡಬೇಕಾಗಿರುವುದು.

ಯಾವುದು ಆಗಲೇ ನಿನ್ನಲ್ಲಿದೆಯೋ, ಅದನ್ನು ಹೊಸದಾಗಿ ಪಡೆಯಬೇಕಾಗಿಲ್ಲ. ಯಾವುದು ನಿಮ್ಮದೊ ಅದರಿಂದ ಎಂದಿಗೂ ಬೇರೆಯಾಗಿರಲಾರಿರಿ. ಆ ದೃಷ್ಟಿಯಿಂದ ಬ್ರಹ್ಮನನ್ನು ನಾನು ಹೊಸದಾಗಿ ಪಡೆಯುವುದಿಲ್ಲ. ಈಗಲೂ ನೀವು ಅದೇ ಆಗಿರುವಿರಿ. ಆದರೆ ಅದನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕಾಗಿದೆ. ನಿಮ್ಮ ಮನಸ್ಸಿನಲ್ಲಿ ಅದನ್ನು ವ್ಯಕ್ತಪಡಿಸಬೇಕಾಗಿದೆ. ಅದನ್ನು ನಾವು ಹೆಚ್ಚು ಕಡಿಮೆ ವ್ಯಕ್ತಪಡಿಸಬಹುದು.

ಮೊದಲನೆಯದಾಗಿ, ಯಾರು ಅದನ್ನು ಸಾಕ್ಷಾತ್ಕಾರ ಮಾಡಿಕೊಂಡಿರುವರೋ ಅವರಿಂದ ಕೇಳಿದರೆ ನಿಮಗೆ ಬೌದ್ಧಿಕವಾಗಿ ಅದು ತೃಪ್ತಿಕರವಾಗಿರಬಹುದು. ಸಾಕ್ಷಾತ್ಕಾರ ಮಾಡಿಕೊಂಡವನು ಅದನ್ನು ಲೀಲಾಜಾಲವಾಗಿ, ನಿಮ್ಮ ಮೇಲೆ ಚೆನ್ನಾಗಿ ಪರಿಣಾಮಕಾರಿ ಆಗುವ ರೀತಿಯಲ್ಲಿ ವಿವರಿಸಬಲ್ಲ ಗ್ರಂಥಗಳನ್ನು ಓದಿ ಅದನ್ನು ಪಡೆಯುವುದಕ್ಕೆ ಆಗುವು ದಿಲ್ಲ. ಯಾರು ಅದನ್ನು ತಮ್ಮ ಜೀವನದಲ್ಲೇ ಸಾಕ್ಷಾತ್ಕಾರ ಮಾಡಿಕೊಂಡಿರುವರೋ ಯಾರು ಅಂಜಿಕೆ, ಮರಣ, ನಾವು ಭಾವಿಸಿರುವ ಜೀವನಕ್ಕೂ ಅತೀತರಾಗಿರುವರೊ ಅಂತಹವರ ಮುಖೇನ ಕೇಳುವುದೊಂದು ಅಪೂರ್ವ ಭಾಗ್ಯ. ಆಗ ನಿಮಗೇ ಅದು ಸಾಕ್ಷಾ ತ್ಕಾರವಾಗದೆ ಇದ್ದರೂ, ನೀವು ಅದನ್ನು ಅನುಮಾನಿಸುವುದಿಲ್ಲ. ಆಗ ನಿಮಗೆ ಪರೋಕ್ಷ ವಾಗಿ ಬ್ರಹ್ಮನ ಪರಿಚಯವಾಗಿದೆ.

ನಾವು ಹಲವು ವಸ್ತುಗಳನ್ನು ನಂಬುತ್ತೇವೆ. ಅವುಗಳೆಲ್ಲ ಪರೋಕ್ಷ ಜ್ಞಾನವಲ್ಲದೆ ಮತ್ತೇನು ? ವೈಜ್ಞಾನಿಕ ಸತ್ಯಗಳನ್ನು ಎಷ್ಟು ಜನ ಅದನ್ನು ತಾವೇ ಮಾಡಿ ನೋಡಿರು ವರು ? ಆದರೂ ಅವುಗಳನ್ನು ಸತ್ಯ ಎಂದು ಭಾವಿಸುತ್ತೇವೆ. ಅದನ್ನು ನಮ್ಮ ಜ್ಞಾನ ಭಂಡಾರದಲ್ಲಿ ಸೇರಿಸುತ್ತೇವೆ. ನಾವು ಬ್ರಹ್ಮ ಎಂಬ ವಿಷಯದಲ್ಲಿ ನಂಬಿಕೆ ಹುಟ್ಟಿದ್ದರೆ, ಅದು ಬೇರೆ ಬೇರೆ ವಸ್ತುಗಳನ್ನು ನಂಬುವಷ್ಟಾದರೂ ಪರೋಕ್ಷವಾಗಿದ್ದರೂ, ಅದು ನಮ್ಮ ಜೀವನವನ್ನೇ ಮಾರ್ಪಡಿಸುವುದು. ನಾವು ಅದೇ ಹಳೇ ಮನುಷ್ಯರು ಆಗಿರಲಾರೆವು.

ಅದೊಂದೇ ಅಲ್ಲ ನಮ್ಮಲ್ಲಿರುವ ಅನೇಕ ಅಜ್ಞಾನಗಳು ಕ್ರಮೇಣ ಮಾಯವಾಗುವುದನ್ನು ನೋಡುವೆವು.

ಬೌದ್ಧಿಕವಾಗಿ ಯಾವುದನ್ನು ಸರಿ ಎಂದು ತಿಳಿದುಕೊಂಡಿರುವೆವೊ ಅದನ್ನು ನಮ್ಮ ಸ್ವಂತ ಅನುಭವವನ್ನಾಗಿ ಮಾಡಿಕೊಳ್ಳಬೇಕಾದರೆ, ಬೇಕಾದಷ್ಟು ಸಾಧನೆ ಮಾಡಬೇಕು. ಮಹಾ ಗುರುಗಳು ಪ್ರತ್ಯಕ್ಷ ಅನುಭವವನ್ನು ಪಡೆದುಕೊಳ್ಳಿ ಎಂದು ಬೇಕಾದಷ್ಟು ಪ್ರೋತ್ಸಾಹವನ್ನು ಕೊಟ್ಟಿರುವರು. ಬ್ರಹ್ಮಸಾಕ್ಷಾತ್ಕಾರವೇ ಆದರ್ಶ, ಅದೇ ಗುರಿ. ಆದರೆ ಈಗ ಹೇಗೋ ರಾಜಿ ಮಾಡಿಕೊಂಡು, ಅದನ್ನು ಬೌದ್ಧಿಕವಾಗಿ ಸತ್ಯ ಎಂದು ತಿಳಿದಿದ್ದರೆ, ಆ ಆದರ್ಶವನ್ನು ನಮ್ಮ ಮನಸ್ಸಿನ ಮುಂದೆ ಇಟ್ಟುಕೊಂಡಿದ್ದರೆ, ನಾವು ಎಷ್ಟೋ ಮುಂದುವರೆಯಬಹುದು. ಗುರಿಯನ್ನು ಮುಟ್ಟುವುದಕ್ಕೆ ಸಾಗುವ ದಾರಿಯೇನೋ ತುಂಬಾ ಕಡಿದು, ಮತ್ತು ಜಾರುವುದು. ಯಾತ್ರಿಕ ಅಲ್ಲಿಗೆ ಹೋಗುವುದಕ್ಕೆ ಬೇಕಾದುದನ್ನೆಲ್ಲ ಒದಗಿಸಿಕೊಂಡಿ ಅಣಿಯಾಗಿರಬೇಕು. ಪರೋಕ್ಷ ಜ್ಞಾನಕ್ಕೂ ಪ್ರತ್ಯಕ್ಷ ಜ್ಞಾನಕ್ಕೂ ಏನು ವ್ಯತ್ಯಾಸ ? ಬಹುಶಃ ನೀವು ಒಂದು ಕತ್ತಲೆ ಕೋಣೆಗೆ ಪ್ರವೇಶ ಮಾಡಿದಿರಿ ಎಂದು ಇಟ್ಟುಕೊಳ್ಳೋಣ. ನಾನು ಆಗಲೆ ಅಲ್ಲಿ ಇರುವೆನು. ಆದರೆ ಆ ಕೋಣೆಯೆಲ್ಲ ನನಗೆ ಮುಂಚೆಯೇ ಚೆನ್ನಾಗಿ ಗೊತ್ತಿದೆ. ಅದನ್ನು ನಿನಗೆ ವಿವರಿಸುತ್ತೇನೆ ಎಂದು ಇಟ್ಟುಕೊಳ್ಳೋಣ. ಇವುಗಳನ್ನು ಕೇಳಿ ಯಾವುದು ಹೇಗಿರಬಹುದು, ಎಂದು ಮನಸ್ಸಿನಲ್ಲಿ ಭಾವಿಸುವಿರಿ. ಅನಂತರ ನಾನು ಲೈಟನ್ನು ಹಾಕುತ್ತೇನೆ. ಆಗ ಏನಾಗುವುದು ? ನೀವು ರೂಮನ್ನು ಚೆನ್ನಾಗಿ ನೋಡುವಿರಿ. ನೀವು ಈ ಎರಡು ಭಾವನೆಗಳನ್ನೂ ಹೋಲಿಸಿನೋಡಿ. ನೀವು ಮುಂಚೆ ಈ ಕೋಣೆಯನ್ನು ಪ್ರವೇಶ ಮಾಡಿದಾಗ, ನಿಮಗೆ ಅದನ್ನು ವಿವರಿಸುವುದಕ್ಕೆ ಮುಂಚೆ, ಈ ರೂಮಿನ ವಿಷಯದಲ್ಲಿ, ಇದೊಂದು ಓಪಿಯಂ ತಿನ್ನುವವರ ಗುಹೆ ಇರಬಹುದು, ಅಥವಾ ಕಳ್ಳರು ಅಡಗಿರುವ ಸ್ಥಳ ಇರಬಹುದು, ಎಂದು ಮನಸ್ಸು ಆಲೋಚಿಸುತ್ತಿರಬಹುದು. ಆದರೆ ನನ್ನಿಂದ ನೀವು ಆ ರೂಮಿನ ವಿಷಯವನ್ನು ಕೇಳಿದ ಮೇಲೆ, ಸ್ವಲ್ಪ ಸ್ಪಷ್ಟವಾದ ಭಾವನೆ ಬಂದಿದೆ. ಆಗ ಆ ಕ್ಷಣ ಪರೋಕ್ಷ ಅನುಭವ ಬಂದಿದೆ. ಯಾವಾಗ ದೀಪದ ಬೆಳಕಿನಲ್ಲಿ ನೋಡುತ್ತೀರೋ, ಆಗ ನಾನು ಹೇಳಿರುವುದನ್ನೆಲ್ಲ ಪರೀಕ್ಷೆ ಮಾಡಿ ನೋಡುತ್ತೀರಿ. ಅದರಂತೆಯೇ ಬ್ರಹ್ಮಜ್ಞಾನ. ನಿಮಗೆ ಪರೋಕ್ಷ ಜ್ಞಾನ ಬಂದಿದ್ದರೂ ಅದನ್ನು ಪ್ರತ್ಯಕ್ಷ ಜ್ಞಾನಕ್ಕೆ ಸರಿಸಮನಾಗಿ ಮಾಡಲು ಆಗುವುದಿಲ್ಲ. ಆಗ ಸಂಶಯಗಳೆಲ್ಲ ಒಂದೇ ಸಲ ಮಾಯವಾಗುವುವು.

ಜೀವವೇ ಬ್ರಹ್ಮ ತತ್ವಮಸಿ ನೀನೇ ಅದಾಗಿದ್ದೀಯೆ. ಇದೇ ಶ್ರೇಷ್ಠವಾದ ಬೋಧನೆ. ಜ್ಞಾನಯೋಗದ ಸಾಧಕ, ತನ್ನ ಮನಸ್ಸಿನಲ್ಲಿ ಹುದುಗಿರವ ತಾನು ಯಾರೊ ಬೇರೆ ಎಂಬ ಅಜ್ಞಾನದಿಂದ ಪಾರಾಗಲು ಯತ್ನಿಸಬೇಕು. ನಾವು ಇಲ್ಲಿ ಮಾಡಬೇಕಾದ ಮುಖ್ಯವಾದ ಕರ್ತವ್ಯವೇ, ನಿತ್ಯ ಅನಿತ್ಯ ವಸ್ತುವಿವೇಕ. ಸಂಶಯಗಳಿಂದ ಪಾರಾಗುವುದಕ್ಕೆ ತತ್ವಮಸಿ ಎಂಬುದರ ಮೇಲೆ ಧ್ಯಾನಮಾಡಬೇಕು.

ಬುದ್ಧಿ ಮತ್ತು ಅಹಂಕಾರ ಸುಳ್ಳುಗಾರರು, ನಾನು ಇಂಥವನು ಅಂಥವನು ಎಂದು

ಹೇಳಿಕೊಳ್ಳುವುದೇ ಪ್ರಪಂಚದಲ್ಲಿ ದೊಡ್ಡ ಸುಳ್ಳು. ನೀನು ಶುದ್ಧ ಬುದ್ಧ ಸ್ವರೂಪವಾದ ಆತ್ಮ, ನೀನೇ ಬ್ರಹ್ಮ. ನೀನು ಬುದ್ಧಿ ಅಹಂಕಾರ ಮುಂತಾದವುಗಳಿಗೆಲ್ಲ ಸಾಕ್ಷಿ, ನೀನಲ್ಲದೆ ಬೇರೆ ಯಾವುದೂ ಇಲ್ಲ ಎಂದು ತಿಳಿದುಕೊಳ್ಳಿ. ನಿಮಗೆ ಈಗ ಕಾಣುವುದೆಲ್ಲ ಮರೀಚಿಕೆಯಂತೆ ಸುಳ್ಳು. ನಾವೇನು ಹಾಗಾದರೆ ಕನಸಿನಲ್ಲಿ ಸಂಚರಿಸುತ್ತಿರುವೆವೆ ಹಾಗಲ್ಲ. ಈ ಪ್ರಪಂಚದ ಮರೀಚಿಕೆಯಲ್ಲಿ ನಿನ್ನ ದೇಹ ಸಂಚರಿಸಲಿ. ಆದರೆ ನಿಜವಾದ ನೀನು ಅದಕ್ಕೆ ಸಾಕ್ಷಿಯಾಗಿ ನಿಲ್ಲು. ನೋಡುತ್ತಿರುವುದೆಲ್ಲ ಭ್ರಮೆ ಎಂದು ಭಾವಿಸು. ವ್ಯವಹಾರದಲ್ಲಿ ಒಂದು ರೀತಿ ವರ್ತಿಸಿ. ಜನರಿಗೆ ಇದು ಅಂಜಿಕೆ ಹುಟ್ಟಿಸುವುದಕ್ಕೆ. ಆದರೆ ಪರಮಾರ್ಥದಲ್ಲಿ ನಿಮ್ಮಲ್ಲಿ ಬೇರೆ ನಿಲುವಿರಲಿ. ಆನೆಗೆ ಹೊರಗೆ ಕೊಂಬಿರುವುದು, ಅಂಜಿಸುವುದಕ್ಕೆ, ಒಳಗಿರುವ ಹಲ್ಲು, ಆಹಾರವನ್ನು ತಿನ್ನುವುದಕ್ಕೆ. ಈ ನಿತ್ಯ ಅನಿತ್ಯವಸ್ತು ವಿವೇಕವನ್ನು ಇಟ್ಟುಕೊಂಡಿರಬೇಕಾದರೆ, ನಾವು ಚೆನ್ನಾಗಿ ಆಲೋಚನೆ ಮಾಡಬೇಕು.

ಪಾಶ್ಚಾತ್ಯರಲ್ಲಿ ನೀವು ಆಲೋಚನೆ ಮಾಡುವುದಕ್ಕೆ ಪ್ರಾಮುಖ್ಯತೆ ಇಲ್ಲ. ಬಾಹ್ಯ ಚಟುವಟಿಕೆಯನ್ನೇ ಕೊಂಡಾಡುವರು. ಆದರೆ ಸುಮ್ಮನೆ ಒಬ್ಬನ ಬಾಹ್ಯ ಚಟುವಟಿಕೆಯನ್ನು ಏತಕ್ಕೆ ಹೊಗಳುವಿರಿ ? ಯಾರು ಗುರಿಗೆ ದೂರದಲ್ಲಿರವನೋ ಅವನು ವೇಗವಾಗಿ ಓಡುತ್ತಿರುವನು ಎಂಬುದು ನಿಜವಲ್ಲವೆ ? ಸ್ವಲ್ಪ ಬದಲಾವಣೆಯನ್ನು ಮಾಡಿಕೊಳ್ಳುವುದಕ್ಕೆ ಅಂತರ್ಮುಖತೆಯನ್ನು ರೂಢಿಸಿ. ಆಗಲೇ ಆಧ್ಯಾತ್ಮಿಕಜೀವನವನ್ನು ನೀವು ಮೆಚ್ಚಬಲ್ಲಿರಿ. ನೀವು ನಿಮ್ಮ ದೌರ್ಬಲ್ಯಗಳನ್ನೇ ವಿಶೇಷ ಒಳ್ಳೆ ಗುಣಗಳೆಂದು ಭಾವಿಸಿದ್ದೀರಿ. ದೇಹ ಮತ್ತು ಮನಸ್ಸಿನ ಬಿಡುವಿಲ್ಲದ ಚಟುವಟಿಕೆಯಿಂದ ನಿಮಗೆ ಶಾಂತಿ ಸಿಕ್ಕಿದೆಯೆ ? ಇಲ್ಲ. ಅದೆಂದಿಗೂ ಬರಲಾರದು. ಯೋಗಮಾರ್ಗದ ಸಾಧಕ ಇದನ್ನೇ ಚೆನ್ನಾಗಿ ಮನಗಾಣಬೇಕು. ಆಗಲೇ ಅವನು ಪ್ರತಿಯೊಂದಕ್ಕೂ ಏತಕ್ಕೆ ? ಹೇಗೆ ? ಎಂದು ಪ್ರಶ್ನಿಸುವನು. ಬ್ರಹ್ಮಸಾಕ್ಷಾತ್ಕಾರ ಒಂದೇ ನಿಮಗೆ ನಿಮ್ಮ ಜೀವನವನ್ನು ಸಾರ್ಥಕಗೊಳಿಸುವುದು. ಅದೊಂದೇ ನಿಮ್ಮನ್ನು ಪೂರ್ಣರನ್ನಾಗಿ ಮಾಡುವುದು. ಪರಮೇಶ್ವರನಲ್ಲಿ ನೀವು ಒಂದು ಎಂದು ಭಾವಿಸಿದಾಗ, ಬ್ರಹ್ಮನಲ್ಲಿ ನೀವು ಒಂದು ಎಂದು ಭಾವಿಸಿದಾಗ ನೀವು ಜೀವನದ ಚರಮ ಆದರ್ಶವನ್ನು ಮುಟ್ಟಿರುವಿರಿ.

"ನೀವೇ ಬ್ರಹ್ಮ ಅದನ್ನು ಅರಿ ಮುಕ್ತನಾಗು." ತಾರ್ಕಿಕವಾಗಿ ಇದನ್ನು ಬೇಕಾದರೆ ಕೆಣಕಿ ಯುಕ್ತಿಯ ಮೂಲಕ ಉತ್ತರವನ್ನು ಹೃದಯದಲ್ಲಿ ಪಡೆದುಕೊಳ್ಳಿ. ನೀವೇ ಈ ಪ್ರಶ್ನೆಯನ್ನು ಹಾಕಿಕೊಳ್ಳಿ. ನಾನೇ ದೇವರಾಗರೆ, ಅದು ಒಳ್ಳೆಯದಾಗಿದ್ದರೆ, ಸತ್ಯವಾಗಿದ್ದರೆ, ಸರ್ವಶಕ್ತವಾಗಿದ್ದರೆ, ನಮಗೆ ಏತಕ್ಕೆ ಅದು ಗೊತ್ತಿಲ್ಲ ? ನಿಜವಾಗಿ ನೀವು ಬ್ರಹ್ಮ ಎಂಬುದು ನಿಮಗೆ ಗೊತ್ತಿದೆ. ಆದರೆ ಅದನ್ನು ನಂಬುವುದಿಲ್ಲ. ಅನ್ಯಥಾ ಭಾವಿಸುವ ಭ್ರಮೆಯಿಂದ ಪಾರಾಗಲಾರಿರಿ. ಇದು ಏತಕ್ಕೆ ಆಗಬೇಕು ? ಏತಕ್ಕೆ ಎಂದರೆ ಸತ್ಯವನ್ನು ಕಾಣದಂತೆ ಉಪಾಧಿ ತಡೆದಿದೆ. ಉಪಾಧಿ ಎಂದರೆ ತಪ್ಪು ತಿಳಿವಳಿಕೆ. ವಸ್ತು ಒಂದುತರಹ ಇದ್ದರೆ ನಮಗೆ ಬೇರೊಂದು ರೀತಿ ಇದ್ದಂತೆ ತೋರವುದು. ಸಿನಿಮಾ ತೆರೆಯ ಮೇಲೆ, ಬೆಳಕಿನ ತರತಮವನ್ನು ನೋಡುತ್ತೇವೆ. ಫಿಲಂ ಹಿಂದಿನಿಂದ ಬರುವ ಬೆಳಕನ್ನು ತಡೆದು, ಅದಕ್ಕೆ ಬಣ್ಣವನ್ನು

ಕೊಡುವುದು. ಇದೊಂದು ಉಪಾಧಿ. ಆಕಾಶಕ್ಕೆ ಯಾವ ಮಿತಿಯೂ ಇಲ್ಲ. ಆದರೆ ಒಂದು ಬೇಲಿ ಹಾಕಿದರೆ ಅದಕ್ಕೆ ಒಂದು ಮಿತಿ ಬಂದಂತೆ ಆಯಿತು. ಉಪಾಧಿ ಅಂದರೆ, ಯಾವುದು ಮಿತಿಯನ್ನು ಕಲ್ಪಿಸುವುದೊ ಅದು.

ನಾವೊಂದು ಸಾಂತಮಿತಿಗೊಳಗಾಗಿ, ನಮ್ಮ ತಿಳಿವಳಿಕೆಯೂ ಸಂಕೋಚವಾಗುವುದು. ಉಪಾಧಿ ನಾಮರೂಪಗಳನ್ನು ತಾಳುತ್ತದೆ. ಜೇಡಿಮಣ್ಣಿನಿಂದ ಹಲವು ಗೊಂಬೆಗಳನ್ನು ಮಾಡಿದಮೇಲೆ ಇನ್ನು ಮಣ್ಣಿಲ್ಲ ಎನ್ನುತ್ತಾನೆ. ಆದರೆ ಅವನಿಗೆ ಗೊಂಬೆಯಲ್ಲಿ ಜೇಡೀಮಣ್ಣೇ ಇರುವುದು. ಆದರೆ ಅದು ಈಗ ಕುದುರೆ, ಆನೆ, ಹುಲಿ, ನಾಯಿಗಳಂತೆ ಇದೆ ಎಂಬುದನ್ನು ಮರೆಯುವನು. ಈ ನಾಮರೂಪಗಳೇ ಜೇಡಿಮಣ್ಣನ್ನು ಮರೆಸಿರುವ ಉಪಾಧಿ.

ನಮ್ಮ ಹಲವು ಇಂದ್ರಿಯಗಳಿಗೆ ಗೋಚರನಾಗಿರುವ ಪ್ರಪಂಚ ಬದಲಾಯಿಸುತ್ತಿದೆ. ಇದು ನಿಜವಾಗಿ ಬ್ರಹ್ಮನಲ್ಲದೆ ಬೇರಲ್ಲ. ದ್ವೈತವೇ ಇಲ್ಲ. ಇದು ಅದು ಎಂದು ಹೇಳುವಾಗ ನಾಮರೂಪಗಳನ್ನು ಕುರಿತು ಹೇಳುತ್ತಿರುವೆವು. ನಾವು, ನೀವು ಎಂದು ಹೇಳುವಾಗ ನಾಮರೂಪಗಳನ್ನು ಮಾತ್ರ ನಿರ್ದೇಶಿಸುತ್ತೇವೆ. ಅದರ ಹಿಂದೆ ಇರುವ ಮೂಲವಸ್ತುವಿನ ಸತ್ಯ ನಮಗೆ ಅರಿವಾಗಿಲ್ಲ.

ಎರಡನೆಯದಾಗಿ ಮಾಯಾಪ್ರಭಾವಕ್ಕೆ ನಾವು ಒಳಗಾಗಿರುವೆವು. ಈ ಪ್ರಪಂಚವನ್ನು ಮತ್ತು ನಮ್ಮನ್ನು ಹಾವಿನಂತೆ ನೋಡುತ್ತಿರುವೆವೇ ಹೊರತು ಹಗ್ಗದಂತೆ ಅಲ್ಲ. ಮಾಯೆಯಿಂದ ಪಾರಾದ ಜ್ಯೋತಿ ಪ್ರಪಂಚದ ಮೇಲೆ ಬೆಳಗಿದಾಗ, ನೀವು ಭಾವಿಸಿದ್ದಂತೆ ಪ್ರಪಂಚ ಇಲ್ಲ ಎಂಬುದು ಅರಿವಾಗುವುದು. ಈಗ ನಾವು ನೋಡುವ ವೈವಿಧ್ಯತೆಯಿಂದ ಕೂಡಿದ ಪ್ರಪಂಚ ನಾವು ಭಾವಿಸಿದಂತೆ ಇಲ್ಲ ಎಂಬುದು ಆಗ ಗೊತ್ತಾಗುವುದು. ಇವುಗಳ ಸತ್ಯವೆಲ್ಲ ಬ್ರಹ್ಮವೇ. ನಾವೆಲ್ಲ ಕುಡುಕರಂತೆ ಇದ್ದೇವೆ ಎಂದು ಶಂಕರಾಚಾರ್ಯರು ಹೇಳುತ್ತಾರೆ. ಬ್ರಹ್ಮನಲ್ಲದೆ ಬೇರೆ ಎಂದು ನೋಡುವುದಕ್ಕೆ ಕಾರಣ ನಾವು ಮಾಯಾಸುರೆಯನ್ನು ಪಾನ ಮಾಡಿರುವುದು. ಕುಡಿತದ ಮತ್ತಿನಿಂದ ಪಾರಾಗಬೇಕು. ಇದೇ ಜ್ಞಾನಯೋಗದ ಗುರಿ. ಜ್ಞಾನಯೋಗದ ಕ್ರಮವನ್ನು ಅನುಸರಿಸಿದರೆ ಸಾಧಕ ಗುರಿಯನ್ನು ಮುಟ್ಟುವನು.

ನಮ್ಮ ಗರ್ಭಗುಡಿಯಲ್ಲಿರುವ ದೇವರನ್ನು ಸಾಕ್ಷಾತ್ಕಾರ ಮಾಡಿಕೊಳ್ಳದೇ ಇದ್ದರೆ ಎಷ್ಟೇ ದೇವ, ದೇವಿಯರನ್ನು ನೋಡಿದರೂ ಸಾರ್ಥಕವಾಗುವುದಿಲ್ಲ. ನಮ್ಮ ಅಂತರತಮನನ್ನು ನಾವು ಮೊದಲು ಕಂಡುಕೊಳ್ಳಬೇಕು. ನಮ್ಮ ಗುರಿ ಸರಿಯಾಗಿ ಗೊತ್ತಿದ್ದರೆ ಯಾವ ಮಾರ್ಗದ ಮೂಲಕ ಬೇಕಾದರೂ ಅದನ್ನು ಪಡೆಯಬಹುದು. ನಾನು ಯಾವುದು, ನಾನು ಅಲ್ಲದೆ ಇರುವುದು ಯಾವುದು ಎಂಬುದರಿಂದ ಪ್ರಾರಂಭವಾಗಬೇಕು. ನಿತ್ಯ ಅನಿತ್ಯ ವಸ್ತು ವಿವೇಕದಿಂದ, ಆತ್ಮಜ್ಞಾನದಲ್ಲಿ ಪ್ರತಿಷ್ಠಿತನಾದಮೇಲೆ ಅನಾತ್ಮವಸ್ತು ಆತ್ಮನಲ್ಲಿ ಲಯವಾಗುವುದು. ಬ್ರಹ್ಮ ಒಂದೇ ಉಳಿದುಕೊಳ್ಳುವುದು.

ಬ್ರಹ್ಮ-ಸಾಕ್ಷಾತ್ಕಾರದಿಂದ ಶೂನ್ಯವಲ್ಲ ಲಭಿಸುವುದು, ಪೂರ್ಣ ಲಭಿಸುವುದು. ಆಗ ಬ್ರಹ್ಮವೆಂಬುದೊಂದೇ ಸತ್ಯ ಎಂದು ಅರಿವಾಗುವುದು. ಈಗ ಕಾಣುವ ದೃಶ್ಯ ಪ್ರಪಂಚ ಮಿಥ್ಯ. ಅದು ನಿಜವಾಗಿಯೂ ಬ್ರಹ್ಮವೇ. ಜೀವನ ಸತ್ಯವೇ ಬ್ರಹ್ಮ. ಬ್ರಹ್ಮನೇ ಎಲ್ಲಾ

ನಾಮರೂಪಗಳ ಹಿಂದೆ ಇರುವುದು. ಮಿಥ್ಯವನ್ನು ಬಿಡಬೇಕು. ಸತ್ಯವಾದ ಬ್ರಹ್ಮನನ್ನು ಹಿಡಿಯಬೇಕು. ಅನಂತರ ಎಲ್ಲವೂ ಬ್ರಹ್ಮ ಎಂಬುದನ್ನು ಧೃಢಪಡಿಸಿಕೊಳ್ಳಬೇಕು.

ಆಗ ನೀವು ನಾನು ನೋಡುವುದು ಬ್ರಹ್ಮ, ಬ್ರಹ್ಮನಲ್ಲದೆ ಬೇರಲ್ಲ. ನಾನು ನಿಜವಾಗಿಯೂ ಎಲ್ಲಾ ಕಡೆಯೂ ದೇವರನ್ನು ನೋಡುತ್ತಿರುವೆನು ಎನ್ನಬಹುದು. ಆದರೆ ಅವನು ಹೇಗಿರುವನೊ ಹಾಗೆ ನೋಡುತ್ತಿಲ್ಲ. ದೇಹಾದಿ ಉಪಾಧಿಗಳ ಮೂಲಕ ಹೇಗೆ ಕಾಣುತ್ತಿದ್ದಾನೆಯೊ ಹಾಗೆ ನೋಡುತ್ತಿದ್ದೇನೆ.

ಯಾರು ತಾವು ದೇವರನ್ನು ನೋಡಿಲ್ಲ ಎಂದು ಹೇಳುತ್ತಿರುವರೊ ಅವರು ಸುಳ್ಳು ಹೇಳುತ್ತಿರುವರು. ದೇವರನ್ನು ನೋಡದೆ ಬೇರೆ ಯಾವುದನ್ನೂ ನೋಡಲಾರಿರಿ. ಈ ನಂಬಿಕೆ ದೃಢವಾಗಬೇಕು. ಜ್ಞಾನಿ ನಾವು ನೋಡುವ ಪ್ರಪಂಚವನ್ನೇ ನೋಡುತ್ತಾನೆ. ಆದರೆ ಬೇರೊಂದು ದೃಷ್ಟಿಯಿಂದ. ಸತ್ಯವಾಗಿ ಈ ಪ್ರಪಂಚ ದೇವರಲ್ಲದೆ ಬೇರೆಯಲ್ಲ. ಎಲ್ಲರಲ್ಲಿಯೂ ಇರುವ ಬ್ರಹ್ಮ ನೀನು. ನೀನು ಇಡೀ ವಿಶ್ವದಿಂದ ಒಂದಾಗಿರುವೆ. ಎಲ್ಲಾ ಸ್ಥಿತಿಯಲ್ಲಿಯೂ ಎಲ್ಲಾ ಕಾಲದಲ್ಲಿಯೂ ಬ್ರಹ್ಮಜ್ಞಾನದ ಅನುಭವದ ಮೇಲೆ ನೆಲೆಸಿರುವುದನ್ನೇ ಮುಕ್ತಿ ಎಂದು ಹೇಳುವುದು.

ಬ್ರಹ್ಮಸಾಕ್ಷಾತ್ಕಾರವನ್ನು ಪಡೆದ ನಾಲ್ಕು ಋಷಿಗಳ ಕಥೆಯೊಂದಿದೆ. ಅವರು ಒಮ್ಮೆ ಶಿವನ ದರ್ಶನಕ್ಕೆ ಹೋದರು. ಅವರು ಶಿವನಿಗೆ ಗೌರವವನ್ನು ಅರ್ಪಿಸಿ, ಆತ್ಮನ ಅಮರತ್ವದ ಮೇಲೆ ದೀರ್ಘಕಾಲ ಮಾತನಾಡಿದರು. ಆದರೆ ಪಕ್ಕದಲ್ಲೆ ಯಮಧರ್ಮ ನಿಂತಿರುವುದು ಅವರಿಗೆ ಕಾಣಲಿಲ್ಲ. ತನಗೆ ಗೌರವ ತೋರಲಿಲ್ಲ ಎಂದು ಯಮನಿಗೆ ಕೋಪ ಬಂತು. ಅವರ ಮೇಲೆ ತನ್ನ ಸೇಡನ್ನು ತೀರಿಸಿಕೊಳ್ಳಬೇಕೆಂದು ಸಂಕಲ್ಪ ಮಾಡಿದನು. ಋಷಿಗಳು ಹೋಗುವುದಕ್ಕೆ ಎದ್ದಾಗ ಯಮ ಅವರಿಗೆ "ದುರಹಂಕಾರಿಗಳೇ, ಮೃತ್ಯುವನ್ನು ಕೂಡ ಲೆಕ್ಕಿಸುವುದಿಲ್ಲ ನೀವು. ನಾನು ನಿಮಗೆ ಶಾಪ ಕೊಡುತ್ತೇನೆ. ನೀವೆಲ್ಲ ಮೃಗಗಳಾಗಿ ಹುಟ್ಟಿ" ಎಂದು ಶಾಪ ಕೊಟ್ಟನು.

ಯಮನಿಗೆ ಎಲ್ಲರ ದೇಹದ ಮೇಲೆ ಸರ್ವಾಧಿಕಾರವಿತ್ತು. ನಾಲ್ಕು ಜನ ಋಷಿಗಳು ತಕ್ಷಣವೇ ನಾಲ್ಕು ನಾಯಿಗಳಾದರು. ಯಮ ಅವರನ್ನು ನೋಡಿ "ನೋಡಿದಿರಾ, ನಾನು ನಿಮಗೆ ಏನು ಮಾಡಬಲ್ಲೆ ? ಎಂಬುದನ್ನು" ಎಂದು ಹೇಳಿದ. ಆದರೆ ಋಷಿಗಳು ಆತ್ಮಸಾಕ್ಷಾತ್ಕಾರವನ್ನು ಪಡೆದವರು. ಅವರಿಗೆ ತಾವು ದೇಹವಲ್ಲ, ಆಕಾರವಲ್ಲ, ಅಂಗವಲ್ಲ, ಸಚ್ಚಿದಾನಂದ ಸ್ವರೂಪರು ತಾವು ಎಂದು ಗೊತ್ತಿತ್ತು. ಪ್ರಾಣಿದೇಹದಿಂದ ಅವರಿಗೆ ಯಾವ ವ್ಯತ್ಯಾಸವೂ ಕಾಣಲಿಲ್ಲ. "ಯಮ, ನಮ್ಮ ಮೇಲೆ ನಿನ್ನ ಅಧಿಕಾರವನ್ನು ಚಲಾಯಿಸುವುದಕ್ಕೆ ಆಗುವುದಿಲ್ಲ. ಈಗಲೂ ನಾವು ಬ್ರಹ್ಮರೇ" ಎಂದರು.

ಯಮನಿಗೆ ತುಂಬಾ ಕೋಪ ಬಂದು ಅವರನ್ನು ಕೀಟಗಳನ್ನಾಗಿ ಮಾಡಿದನು. ಅವರ ದೇಹ ಬದಲಾಯಿಸುತ್ತಿರುವಾಗಲೂ ಯಮನನ್ನು ನೋಡಿ ಅವರು ಹಾಸ್ಯ ಮಾಡಿದರು. ಯಾವ ಬದಲಾವಣೆಯನ್ನು ದೇಹಕ್ಕೆ ಮಾಡಿದರೂ ಇವರಿಗೆ ಏನೂ ಆಗದೆ ಇರುವುದನ್ನು ನೋಡಿ, ಯಮನಿಗೆ ಗರ್ವಭಂಗವಾಯಿತು. ಕೊನೆಗೆ ಶಿವನೆ ಯಮನ ಬಳಿಗೆ ಬಂದು,

"ಯಮ, ಯಾರು ತಾವು ದೇಹಧಾರಿಗಳು ಎಂದು ಭಾವಿಸುತ್ತಾರೊ ಅವರನ್ನು ನೀನು ಆಳುತ್ತೀಯೆ. ಆದರೆ ಯಾರು ತಾವು ಆತ್ಮ, ಬ್ರಹ್ಮ ಎಂದು ಭಾವಿಸುವರೊ, ಅವರು ನಿನ್ನ ಆಳ್ವಿಕೆಗೆ ಹೊರಗೆ ಇರುವರು. ನೀನು ದೇಹವನ್ನು ಬದಲಾಯಿಸಬಹುದು. ಆತ್ಮವನ್ನು ಏನು ಮಾಡಬಲ್ಲೆ ? ನಾಲ್ಕು ಜನ ಋಷಿಗಳನ್ನು ಬಿಡುಗಡೆ ಮಾಡುವುದು ಒಳ್ಳೆಯದು" ಎಂದು ಹೇಳಿದ.

ನಮ್ಮ ಪ್ರಜ್ಞೆ ನಿಜವಾಗಿಯೂ ಪೂರ್ಣಜ್ಞಾನದಿಂದ ಕೂಡಿರುವುದು. ಈಗ ಅದು ಹಲವು ಉಪಾಧಿಗಳಿಂದ ಬಾಧಿತವಾದಂತೆ ತೋರುತ್ತಿರುವುದು. ಜೀವಿಯನ್ನು ಬಾಧಿಸುತ್ತಿರುವ ನಾನು, ನನ್ನದು, ಎಂಬ ಉಪಾಧಿಗಳಿಂದ ಪಾರಾದರೆ, ಆಗ ನಾವೇ ಬ್ರಹ್ಮನೆಂದು ಅರಿಯಲು ಸಾಧ್ಯ. ಅಜ್ಞಾನ ಸರಿದಮೇಲೆ, ಯಾವಾಗಲೂ, ಎಲ್ಲಾ ಸ್ಥಿತಿಯಲ್ಲಿಯೂ ನಾವು ಬ್ರಹ್ಮರೇ ಆಗಿದ್ದೆವು ಎಂಬುದು ಅರಿವಾಗುವುದು.

ಜ್ಞಾನಯೋಗದ ಆದರ್ಶವೇ ಬ್ರಹ್ಮನನ್ನು ಸಂಪೂರ್ಣವಾಗಿ ಸಾಕ್ಷಾತ್ಕಾರ ಮಾಡಿಕೊಳ್ಳುವುದು. ಅದಕ್ಕಿಂತ ಕೆಳಗೆ ನಿಲ್ಲಬಾರದು. ಸುಮ್ಮನೆ ಬ್ರಹ್ಮನ ಮೇಲೆ ಮಾತನಾಡಿ ಪ್ರಯೋಜನವಿಲ್ಲ. ಶಾಸ್ತ್ರಗಳನ್ನು ಉದಹರಿಸಿದರೂ ಸಾಲದು. ಯುಕ್ತಿಗೆ ಅತೀತವಾಗಿ ಹೋಗಿ ಅದನ್ನು ನಮ್ಮ ಸ್ವಂತ ಅನುಭವವನ್ನಾಗಿ ಮಾಡಿಕೊಳ್ಳಬೇಕು. ಆದರೆ ಎಲ್ಲರಿಗೂ ಆ ತೀವ್ರತೆ ಇರುವುದಿಲ್ಲ. ಅನೇಕರಿಗೆ ಬೌದ್ಧಿಕವಾಗಿ ಅದನ್ನು ತಿಳಿದುಕೊಂಡರೆ ಸಾಕು ತೃಪ್ತಿಯಾಗುವುದು. ಆದರೆ ಅದಕ್ಕಾಗಿ ಸ್ಫೂರ್ತಿ ಬಂದರೆ, ಮತ್ತಾವುದೂ ಅವನಿಗೆ ತೃಪ್ತಿ ತಾರದು. ಮತ್ತಾವುದನ್ನೂ ಅವನು ಕುರಿತು ಚಿಂತಿಸಲಾರನು. ಊಟ ಮಾಡುವುದಕ್ಕಾಗಲೀ, ನಿದ್ರಿಸುವುದಕ್ಕಾಗಲೀ, ಅವನಿಗೆ ಮನಸ್ಸಿರುವುದಿಲ್ಲ. ಬರೀ ಪರೋಕ್ಷಜ್ಞಾನದಿಂದ ಅವನಿಗೆ ತೃಪ್ತಿ ಬರುವುದಿಲ್ಲ. ಸಾಧ್ಯವಾದಷ್ಟು ಬೇಗ ಗುರಿಯನ್ನು ಸೇರಲು ಅವನು ಪ್ರಯತ್ನಿಸುವನು. ಕೆಲವರು ಎಕ್ಸ್‌ಪ್ರೆಸ್ ರೈಲಿನಲ್ಲಿ ಕುಳಿತುಕೊಂಡು ಪ್ರಯಾಣ ಮಾಡುವವರು. ಇತರರಿಗೆ ಅಷ್ಟು ಅವಸರವಿಲ್ಲ. ಕೆಲವರು ನಿಧಾನವಾಗಿ ಹೋಗುವ ರೈಲಿನಲ್ಲಿ ಕುಳಿತುಕೊಂಡು ದಾರಿಯಲ್ಲಿ ಸಿಕ್ಕ ದೃಶ್ಯವನ್ನು ನೋಡಿಕೊಂಡು ಹೋಗಲು ಬಯಸುವರು. ಮತ್ತೆ ಕೆಲವರು ಸಾಕಷ್ಟು ಬೇಗ ಗುರಿ ಸೇರಬೇಕು. ಒಬ್ಬ ಕಳ್ಳನಿಗೆ ತನ್ನ ಕೋಣೆಯ ಪಕ್ಕದಲ್ಲಿ ಬೇಕಾದಷ್ಟು ನಿಧಿ ಇದೆ, ಎಂದು ಗೊತ್ತಾದರೆ, ಅವನು ಬಾಗಿಲನ್ನು ಒಡೆದು ಆ ನಿಧಿಯನ್ನು ಪಡೆಯುವವರೆಗೆ ಅವನಿಗೆ ಸಮಾಧಾನವಿಲ್ಲ. ಬ್ರಹ್ಮ ಸಾಕ್ಷಾತ್ಕಾರಕ್ಕೆ ಇಂತಹ ತೀವ್ರ ಆಕಾಂಕ್ಷೆ ಇದ್ದರೆ, ಅವನು ಮಾಯೆಯಿಂದ ಪಾರಾಗುವುದಕ್ಕೆ ಸತತ ಹೋರಾಡುವನು. ದೇಹ, ಮನಸ್ಸು, ಇಂದ್ರಿಯ ಇವುಗಳ ಉಪಾಧಿಯಿಂದ ಪಾರಾಗಲು ಯತ್ನಿಸುವನು. ಈ ಉಪಾಧಿಗಳೇ ಆತ್ಮನನ್ನು ಸಂಕುಚಿತ ಮಾಡಿ, ಅವನನ್ನು ದೇಹ, ಮನಸ್ಸು, ಇಂದ್ರಿಯಗಳೆಂದು ಚಿಂತಿಸುವಂತೆ ಮಾಡಿರುವುದು.

ನಾವು ಸತ್ಯ–ಸಾಕ್ಷಾತ್ಕಾರಕ್ಕೆ ಹೋರಾಡುತ್ತಿರುವಾಗ ನಿತ್ಯ-ಅನಿತ್ಯ ವಸ್ತುವನ್ನು ಚೆನ್ನಾಗಿ ತಿಳಿದಿರಬೇಕು. ಮಾಯೆ ಯಾವಾಗಲೂ ನಮ್ಮನ್ನು ವಂಚಿಸುವುದಕ್ಕೆ ಕಾದುಕೊಂಡಿರುವುದು. ಮಾಯೆ ವ್ಯಕ್ತಿಯ ಮನಸ್ಸನ್ನು ಹಲವಾರು ಉಪಾಧಿಗಳಿಂದ ಬಿಗಿ

ಯಲು ಹೊಂಚು ಹಾಕುತ್ತಿದೆ. ಇವುಗಳೇ ಸತ್ವ, ರಜಸ್, ತಮೋಗುಣಗಳು. ನಾವು ಇವುಗಳ ವಿಷಯವನ್ನು ಆಗಲೇ ಹೇಳಿರುವೆವು. ಆದರೆ ಅವನ್ನು ಮತ್ತಷ್ಟು ಚೆನ್ನಾಗಿ ತಿಳಿಕೊಳ್ಳುವುದು ಆವಶ್ಯಕ. ಮೊದಲನೆಯದೆ ತಮಸ್, ಬುದ್ಧಿಮಾಂದ್ಯ, ಸೋಮಾರಿತನ, ಮರವು, ಅಜ್ಞಾನ ಇವುಗಳು. ರಜೋಗುಣದ ಆಧಿಕ್ಯದಿಂದ ಉಂಟಾಗುವ ಗುಣಗಳೇ ಕಾಮ, ಕ್ರೋಧ, ದ್ವೇಷ, ಅಸೂಯೆ ಮೊದಲಾದುವು. ಸತ್ವಗುಣ ವೃದ್ಧಿಯಾದಾಗ, ನಿರಹಂಕಾರ, ಶ್ರದ್ಧೆ, ಭಕ್ತಿ, ನಿತ್ಯ–ಅನಿತ್ಯ ವಸ್ತು ವಿವೇಕ, ಮುಕ್ತಿಯನ್ನು ಪಡೆಯಲು ತೀವ್ರ–ಆಕಾಂಕ್ಷೆ ಮುಂತಾದ ಗುಣಗಳು ಇರುತ್ತವೆ.

ಮೇಲಿನ ಗುಣಗಳೆಲ್ಲ ಮನುಷ್ಯರಲ್ಲಿ ಇವೆ. ಸತ್ವಗುಣದ ಮಟ್ಟಕ್ಕೆ ತಮೋಗುಣ ಮತ್ತು ರಜೋಗುಣದಿಂದ ಪಾರಾಗಬೇಕು. ತಮೋ ಮತ್ತು ರಜೋಗುಣ ಸ್ವಭಾವಗಳು, ಸತ್ಯವನ್ನು ತಿಳಿದುಕೊಳ್ಳುವುದಕ್ಕೆ ಆತಂಕ ಪ್ರಾಯಗಳಾಗುವುವು. ಸತ್ವ–ಗುಣ ಮಾಯೆಯ ಉಪಟಳದಿಂದ ಪಾರಾಗಲು ಸಹಾಯ ಮಾಡುವುದು. ನಾವು ತಮಸ್ಸಿನಿಂದ ಪಾರಾಗಿ ರಜೋಗುಣಕ್ಕೆ ಅತೀತರಾದಾಗಲೇ, ಸತ್ವಗುಣ ನಮ್ಮಲ್ಲಿ ಬರುವುದು. ಸತ್ವದಲ್ಲಿ ಪ್ರತಿಷ್ಠಿತನಾದಮೇಲೆಯೇ ಆವನಿಗೆ ಮುಂದಿನದು ದೊರಕಬೇಕಾದರೆ.

ಆಧ್ಯಾತ್ಮಿಕ ಜೀವನದಲ್ಲಿ ಗುರಿಯನ್ನು ಸೇರಬೇಕಾದರೆ ಕೆಲವು ಮುಖ್ಯವಾದ ಸಾಧನೆಗಳನ್ನು ಕೈಕೊಳ್ಳಬೇಕು. ಇವು ಆಧ್ಯಾತ್ಮಿಕ ಅನುಭವಗಳನ್ನು ರಕ್ಷಿಸುವುದಕ್ಕೆ ಅತ್ಯಂತ ಸಹಕಾರಿಯಾದುದರಿಂದ, ಜೀವನದಲ್ಲಿ ಯೋಗಿಗಳು ಇವನ್ನು ರಕ್ಷಿಸಿಕೊಂಡಿರುವರು. ಯೋಗಜೀವನದಲ್ಲಿ ಮುಂದುವರಿದವನಿಗೆ ಇವು ಬಹಳ ಸಹಕಾರಿಗಳಾಗಿರುತ್ತವೆ. ಹಾಗೆಯೇ ಪ್ರಾರಂಭದಲ್ಲಿರುವವರಿಗೂ ಮುಖ್ಯವಾಗಿ ಬೇಕಾಗುತ್ತವೆ. ಈ ಸಾಧನೆಗಳನ್ನು ನಾವು ಕೈಕೊಳ್ಳದಿದ್ದರೆ, ಮನಸ್ಸನ್ನು ಸತ್ವದ ಸ್ಥಿತಿಗೆ ತರುವುದಕ್ಕೆ ಆಗುವುದಿಲ್ಲ. ಸತ್ವದ ಸ್ಥಿತಿಯಲ್ಲಿ ಮಾತ್ರ ಇವು ಪರಿಣಾಮಕಾರಿಗಳಾಗುವುವು.

ಐದು ವಿಧಗಳಿವೆ. ಪ್ರಾರಂಭದಲ್ಲಿ ಇವನ್ನು ಸ್ವಲ್ಪವೂ ಬಿಡದೆ ಅನುಸರಿಸಬೇಕು. ಅವುಗಳೇ ಮಾತನ್ನು ನಿಗ್ರಹಿಸುವುದು, ಅಪರಿಗ್ರಹ, ಆಶೆ ಇಲ್ಲದೇ ಇರುವುದು, ಕರ್ಮವನ್ನು ತ್ಯಜಿಸುವುದು ಮತ್ತು ಏಕಾಂತವಾಸ. ಕೆಲವು ವೇಳೆ ಸಾಧನೆಯನ್ನು ವಿಸ್ತಾರ ಮಾಡಿದರೆ, ತೀವ್ರತೆಯಲ್ಲಿ ಕಡಿಮೆಯಾಗುವುದು. ಆದಕಾರಣವೇ ವಿಸ್ತಾರವನ್ನು ತಗ್ಗಿಸಿ, ತೀವ್ರತೆಯನ್ನು ಹೆಚ್ಚಿಸಬೇಕು. ಅನಂತರ ಬೇಕಾದರೆ ಅವನ್ನು ವಿಸ್ತರಿಸಬಹುದು. ಇವು ನಮ್ಮ ಆಶೆಯನ್ನು ನಿಗ್ರಹಿಸುವುದಕ್ಕೆ ಸಹಾಯ ಮಾಡುವುವು. ಆಶೆಯೇ ನಮ್ಮ ಮನಸ್ಸಿನ ಪ್ರಕ್ಷುಬ್ಧತೆಗೆ ಕಾರಣ. ನಾವು ಇದರಿಂದಲೆ ಬಾಹ್ಯ ಪ್ರಪಂಚಕ್ಕೆ ಗುಲಾಮರಾಗಿರುವುದು. ಗುಲಾಮ ಸ್ವತಂತ್ರನಾಗಬಲ್ಲನೆ ?

ಮಾತನ್ನು ನಿಗ್ರಹಿಸುವುದು ಅತ್ಯಂತ ಮುಖ್ಯವಾದುದು. ಮಾತು ನಮ್ಮ ಮನಸ್ಸಿನ ಮೇಲೆ ಎಂತಹ ಆಂದೋಳನವನ್ನು ಉಂಟುಮಾಡುವುದು ಎಂಬುದು ನಮಗೆ ಗೊತ್ತಿಲ್ಲ. ಕೆಲವು ದಿನ ಮೌನವಾಗಿರುವುದಕ್ಕೆ ಪ್ರಯತ್ನಿಸಿ. ಮೊದಲು ನೀವು ಅದನ್ನು ಯಾಂತ್ರಿಕವಾಗಿ ಮಾಡಿ. ಮಾತನಾಡುವ ಬದಲು ಬರೆದು ತೋರಿಸಿ. ಕ್ರಮೇಣ ಇವುಗಳ ಆವಶ್ಯ

ಕತೆ ನಮಗೆ ತೋರುವುದಿಲ್ಲ. ಮಾತನಾಡುವ ತವಕವನ್ನು ನಿಗ್ರಹಿಸುವಿರಿ. ಯಾರೊ ನನ್ನನ್ನು ತಿಳಿದುಕೊಳ್ಳದೇ ಇದ್ದರೆ ನನಗೇನು ಎಂದುಕೊಳ್ಳುವಿರಿ. ಮುಂಚೆ ಯಾವುದು ಅತ್ಯಂತ ಮುಖ್ಯವಾಗಿತ್ತೊ ಅದು ಗೌಣವಾಗಿ, ಮಾಯವಾಗುವುದು. ನೀನು ಮಾತನಾಡದೆ ಇದ್ದರೂ ಸೃಷ್ಟಿ ಏನೂ ನಿಂತುಹೋಗಿಬಿಡುವುದಿಲ್ಲ. ಯಾರು ಅಂತರ್ಮುಖಿಗಳಾಗಲು ಬಯಸುವರೊ, ಮನಸ್ಸನ್ನು ನಿಗ್ರಹದಲ್ಲಿಡಬೇಕೆಂದು ಆಶಿಸುವರೊ ಅವರಿಗೆ ಮಾತಿನ ಮೇಲೆ ಒಂದು ಹತೋಟಿ ಅತ್ಯಂತ ಮುಖ್ಯ. ಹಲವರು ದೀರ್ಘಕಾಲದವರೆಗೆ ಮೌನವನ್ನು ಆಚರಿಸಿರುವರು. ಪ್ರತಿವಾರವೂ, ಪ್ರತಿ ದಿನವೂ ಕೆಲವುಗಂಟೆಗಳವರೆಗಾದರೂ ಇದಕ್ಕೆ ಪ್ರಯತ್ನಿಸಿ. ಇದರಿಂದ ನಮ್ಮ ಮನಸ್ಸಿನ ಚಾಂಚಲ್ಯ ಎಷ್ಟೊ ಕಡಿಮೆಯಾಗುವುದು.

ಅಪರಿಗ್ರಹದ ವಿಷಯದಲ್ಲಿ ನೀವು ರಾಜಿ ಮಾಡಿಕೊಳ್ಳಬೇಡಿ. ನನಗೆ ಯಾರಿಂದಲೂ ಏನೂ ಬೇಡ. ನಾನು ನನ್ನ ಕಾಲ ಮೇಲೆ ನಿಂತುಕೊಳ್ಳಬೇಕು. ನಾನು ಯಾರಿಗೂ ಕೈಒಡ್ಡುವುದಿಲ್ಲ. ನನಗೆ ಏನಾದರೂ ಆವಶ್ಯಕತೆ ಇದ್ದರೆ ದೇವರಿಗೇ ಬೇಡುತ್ತೇನೆ. ಯಾರೂ ನನ್ನನ್ನು ರಕ್ಷಿಸಬೇಕಾಗಿಲ್ಲ. ಬಂದದ್ದು ಬರಲಿ ಎನ್ನಿ. ನನಗೆ ಸತ್ಯ ಒಂದೇ ಬೇಕು ಎಂದು ಹೇಳುವ ಸ್ಥಿತಿಯಲ್ಲಿ ನಾವಿರಬೇಕು. ಇತರ ಆಶ್ರಯಗಳಿಲ್ಲದೆ ನಾನು ಏಕಾಕಿಯಾಗಿ ನಿಲ್ಲುವ ಸಮಯ ಬರಬೇಕು. ಅಪರಿಗ್ರಹ ನಮ್ಮ ಕರಗತವಾದಾಗ ಹಾಗೆ ಆಗುವುದು. ಹೀಗೆ ಒಂದು ದಿನ, ಕೆಲವು ಕ್ಷಣಗಳಾದರೂ ಅನುಭವಿಸುವ ಸ್ಥಿತಿಗೆ ಬಂದರೆ, ನಾವು ಎಷ್ಟೊ ಮುಂದುವರಿದಿದ್ದೇವೆ. ಈ ಸ್ಥಿತಿಗೆ ಬಂದ ಮನುಷ್ಯ ಆಶೆಯಿಂದ ಪಾರಾಗಿರುವನು. ಅವನು ವಸ್ತುಗಳನ್ನು ಹುಡುಕಿಕೊಂಡು ಹೋಗಬೇಕಾಗಿಲ್ಲ. ವಸ್ತುಗಳು ಅವನೆಡೆಗೆ ಬರುತ್ತವೆ.

ಎರಡನೆಯದೆ ಆಶೆಯಿಂದ ಪಾರಾಗುವುದು. ಭರವಸೆ ಎಂಬ ಬಳ್ಳಿ ಅದು ಹೇಗೆ ಚಿಗುರುವುದು, ಬೆಳೆಯುವುದು, ಕೊನೆಗೆ ಎಲ್ಲವನ್ನೂ ಹಬ್ಬುವುದು. ಬೇರು ಸಮೇತ ಕಿತ್ತು ಹಾಕಿ. ಇದರಿಂದ ನಿಮಗೆ ಬೇಕಾದಷ್ಟು ಶಕ್ತಿ ಬರುವುದು. ಆಶೆಯೇ ನಮ್ಮನ್ನು ದುರ್ಬಲಗೊಳಿಸುವುದು. ಒಂದು ದೇವಸ್ಥಾನದಲ್ಲಿದ್ದ ಪೂಜಾರಿಗಳು ತ್ಯಾಗಕ್ಕೆ ಹೆಸರಾಗಿದ್ದರು. ರಾಜನಿಗೆ ಇದರಿಂದ ತೊಂದರೆಯಾಯಿತು. ಏಕೆಂದರೆ ರಾಜ್ಯದಲ್ಲಿ ಅವರ ಪ್ರಭಾವ ಬಹಳ ಬಲವಾಗಿತ್ತು. ಆದರೆ ಮಹಾರಾಜ ಬಹಳ ಬುದ್ಧಿವಂತ. ಇವರ ಮನಸ್ಸಿನಲ್ಲಿ ಆಶೆಯ ಬೀಜವನ್ನು ಬಿತ್ತಿ ನೋಡೋಣ ಎಂದು ಆಲೋಚಿಸಿದ. ಪೂಜಾರಿಗಳನ್ನು ಕರೆದು ನಿಮಗೆಲ್ಲ ಹೆಚ್ಚು ಸೌಕರ್ಯ ಇರಬೇಕು, ನಿಮ್ಮ ಸಂಬಳ ಹೆಚ್ಚು ಮಾಡುತ್ತೇನೆ. ಊಟದಲ್ಲಿ ಹೆಚ್ಚು ವಿಧಗಳು ಇರಬೇಕು, ಇದಕ್ಕೆಲ್ಲ ನಾನು ಈಗಲೇ ಅಣಿ ಮಾಡುತ್ತೇನೆಂದ. ಸಣ್ಣ ಒಂದು ಬೀಜವನ್ನು ಬಿತ್ತಿದ. ಕ್ರಮೇಣ ರಾಜನನ್ನು ಮೆಚ್ಚಿಸಲು ಪೂಜಾರಿಗಳು ಅವನು ಹೇಳಿದಂತೆ ಕೇಳಲು ಮೊದಲು ಮಾಡಿದರು. ಬೀಜ ಮೊಳೆಯಿತು, ಅದು ಕ್ರಮೇಣ ಬೆಳೆಯುತ್ತ ಹೋಯಿತು, ಮಹಾರಾಜ ಹೇಳಿದಂತೆ ಪೂಜಾರಿಗಳೆಲ್ಲ ಕೇಳುವಂತೆ ಆದರು.

ಪ್ರತಿಯೊಂದು ಕಡೆಯೂ ಆಶೆಯೇ ನಮ್ಮನ್ನು ಬಂಧನಕ್ಕೆ ಒಳಗು ಮಾಡುವುದು, ನಮ್ಮ ಶಕ್ತಿಯನ್ನು ಹೀರುವುದು. ಏನೊ ಸ್ವರ್ಗಕ್ಕೆ ಹೋಗಬೇಕು ಎಂಬ ಆಶೆಯಿಂದ

ನೀವು ದೇವರನ್ನು ನೋಡಿದರೆ ನೀವು ಸರ್ವನಾಶವಾದೀರಿ! ಆಶೆ ನಿಮ್ಮ ಮುಖ್ಯ ಗುರಿಯಿಂದ ಅತ್ತ ಸೆಳೆಯುವುದು. ನಾವು ಆಶೆಗೆ ಏತಕ್ಕೆ ಗುಲಾಮರಾಗಬೇಕು? ನೀವು ಆಶೆಯಿಂದ ಪ್ರೇರೇಪಿತರಾಗಿ ಕೆಲಸ ಮಾಡಿದರೆ, ನೀವು ಗುಲಾಮರಾಗುತ್ತೀರಿ. ನಾವು ಯಾವುದನ್ನು ಪಡೆಯಬೇಕಾದರೂ ಆಶೆಯಿಂದ ಪ್ರಯೋಜನವಿಲ್ಲ, ಆಧ್ಯಾತ್ಮಿಕ ಜೀವನದಲ್ಲಿ ನಡೆಯುವವನಿಗೆ ಇದು ಆವಶ್ಯಕವೂ ಅಲ್ಲ, ಇದರಿಂದ ಪ್ರಯೋಜನವೂ ಇಲ್ಲ.

ಬಾಹ್ಯ ಚಟುವಟಿಕೆಗಳನ್ನು ಕ್ರಮೇಣ ಕಡಿಮೆ ಮಾಡುತ್ತ ಬರಬೇಕು. ನಾವು ಏತಕ್ಕೆ ಕೆಲಸ ಮಾಡಬೇಕು? ಯಾವಾಗ ಕರ್ಮ ಮಾಡುತ್ತೇವೆಯೊ ಆಗ ನಮ್ಮಲ್ಲಿ ಏನೊ ಕೊರತೆ ಇದೆ ಎಂದಹಾಗಾಯಿತು. ಮನುಷ್ಯ ಎಷ್ಟು ಅಪರಿಪೂರ್ಣನೊ ಅಷ್ಟು ಜಾಸ್ತಿ ಕರ್ಮದಲ್ಲಿ ಮುಳುಗಿರುವನು. ಬಾಹ್ಯ ಚಟುವಟಿಕೆ ಮನಸ್ಸಿನ ಚಾಂಚಲ್ಯವನ್ನು ತೋರುವುದು. ಕೆಲಸ ಮಾಡುವುದಕ್ಕೆ ಯಾರು ಉತ್ಸಾಹಿಗಳಾಗಿರುವರು? ಯಾರ ಚಿತ್ತದಲ್ಲಿ ಸ್ವಾಸ್ಥ್ಯವಿಲ್ಲವೊ, ಯಾರಲ್ಲಿ ಶಾಂತಿ ಇಲ್ಲವೊ, ಯಾರಲ್ಲಿ ಬೇಕಾದಷ್ಟು ಆಶೆ ಇದೆಯೊ ಅವರು. ನಾವು ಬಾಹ್ಯ ಚಟುವಟಿಕೆಯಿಂದ ಪಾರಾದಾಗ, ಯಾವುದಾದರೂ ಉದಾತ್ತ ಭಾವನೆಯನ್ನು ಚೆನ್ನಾಗಿ ಆಲೋಚನೆ ಮಾಡಬಹುದು. ಯಾವಾಗಲೂ ನಾವು ಏತಕ್ಕೆ ಕೆಲಸ ಮಾಡುತ್ತಿರಬೇಕು? ವಿರಾಮ ವೇತನವನ್ನು ಎಂದು ಅನುಭವಿಸುವುದು?

ಏಕಾಂತವಾಸವನ್ನು ಸ್ವಲ್ಪಕಾಲ ಮಾಡದೇ ಇದ್ದರೆ ಆಧ್ಯಾತ್ಮಿಕ ಸ್ವಭಾವವನ್ನು ರೂಢಿಸುವುದಕ್ಕೆ ಆಗುವುದಿಲ್ಲ. ನಿವೃತ್ತರಾಗಿ, ಚಟುವಟಿಕೆಯೆಲ್ಲ ನಿಂತಾಗಲೇ ಯೋಚನಾಪರನಾಗುವ ಸ್ವಭಾವ ಜಾಗ್ರತವಾಗಬೇಕಾದರೆ. ಆಗ ನಾವು ಬೇರೊಂದು ದೃಷ್ಟಿಯಿಂದ ನೋಡುತ್ತೇವೆ. ಆಗಲೆ ಮನಸ್ಸು ಮತ್ತು ಇಂದ್ರಿಯಗಳನ್ನು ನಿಗ್ರಹಿಸುವ ಆವಶ್ಯಕತೆ ತೋರುವುದು. ನಾವೊಂದು ಸಂತೆಯ ಮಧ್ಯದಲ್ಲಿರುವಾಗ ಮನಸ್ಸನ್ನು ನಿಗ್ರಹಿಸುವುದು ಬಹಳ ಕಷ್ಟ. ಪ್ರಾರಂಭದಲ್ಲಿ ಏಕಾಂತ ಅತ್ಯಂತ ಆವಶ್ಯಕ. ನಾವೇಕೆ ಇಂದ್ರಿಯ ಮನಸ್ಸು ಹೇಳಿದಂತೆ ಕೇಳಬೇಕು? ನಾನು ಅವಕ್ಕೆ ಸೇರಿರುವೆನೆ ಅಥವಾ ಅವು ನನಗೆ ಸೇರಿರುವವೊ ಎಂದು ಕೇಳಿ. ಅವು ನನಗೆ ಸೇರಿದ್ದರೆ, ಅವು ನಾನು ಹೇಳಿದಂತೆ ಕೇಳಬೇಕು. ಆದರೆ ಈಗ ನಾನು ಮಾಡುತ್ತಿರುವುದು ಏನು? ಅವು ಹೇಳಿದಂತೆ ಕೇಳುತ್ತಿರುವೆನು. ಇಂದ್ರಿಯಗಳ ಮೇಲೆ ನಿಗ್ರಹವಿಲ್ಲದೇ ಇದ್ದರೆ, ಮನಸ್ಸನ್ನು ಏಕಾಗ್ರಗೊಳಿಸುವುದಕ್ಕೆ ಆಗುವುದಿಲ್ಲ. ಮನಸ್ಸನ್ನು ಹೊರಗೆ ಎಳೆಯುವ ಬಾಹ್ಯ ಕಾರಣ ಯಾವಾಗಲೂ ಇದ್ದರೆ ಅದು ಚಂಚಲವಾಗುವುದು.

ನಿವೃತ್ತನಾಗುವುದು ಅತ್ಯಂತ ಆವಶ್ಯಕ. ನಿವೃತ್ತನಾದವನಂತೆ ತೋರುವುದು ಕೂಡ ಏನೂ ಇಲ್ಲದೆ ಇರುವದಕ್ಕಿಂತ ಮೇಲು. ತಕ್ಷಣವೇ ಏಕಾಂತವಾಸಕ್ಕೆ ಹೋಗಲು ನಿನಗೆ ಸಾಧ್ಯವಿಲ್ಲದೆ ಹೋದರೂ ಮಾನಸಿಕವಾಗಿಯಾದರೂ ಅದನ್ನು ಅಭ್ಯಾಸಮಾಡು. ಮನಸ್ಸನ್ನು ಸಾಧ್ಯವಾದಷ್ಟು ಬಾಹ್ಯ ಚಟುವಟಿಕೆಗಳಿಂದ ದೂರವಿಡಿ. ಪ್ರಪಂಚದಲ್ಲಿ ನಾನಲ್ಲದೆ ಯಾರೂ ಇಲ್ಲ ಎಂದು ತಿಳಿಯಿರಿ. ಪ್ರಪಂಚದಲ್ಲಿ ನಾನೊಬ್ಬನೆ ವಾಸಮಾಡುತ್ತಿರುವೆ ಎಂದು ಭಾವಿಸಿ. ಇದೊಂದು ವಿಧವಾದ ಧ್ಯಾನ. ಅದು ಸಾಧ್ಯವಿಲ್ಲದೇ ಇದ್ದರೆ, ಒಂದು

ದಿನಕ್ಕೆ ಅರ್ಧಗಂಟೆಯಾದರೂ ಪ್ರಪಂಚದಲ್ಲಿ ನಾನು ದೇವರು ಇಬ್ಬರೇ ಇರುವುದು ಎಂದು ಭಾವಿಸಿ. ಈ ಅರ್ಧಗಂಟೆಯ ಏಕಾಂತವಾಸದಿಂದ ನೀವು ಬೇರೊಬ್ಬರಾಗಿ ಬರುವಿರಿ. ನೀವು ಪುನಃ ಚಟುವಟಿಕೆಯ ಜೀವನಕ್ಕೆ ಕೈಹಾಕಿದರೂ ಈ ಏಕಾಂತವಾಸ ನಿಮಗೆ ಸಹಾಯ ಮಾಡುವುದು. ಶ್ರೀರಾಮಕೃಷ್ಣರು, ಆನೆಯನ್ನು ಸ್ನಾನಮಾಡಿಸಿದ ಮೇಲೆಯೂ ಸೊಂಡಿಲನ್ನು ಕೊಳಕು ನೀರಿಗೆ ಹಾಕಿ ಮೈಮೇಲೆ ಎರಚಿಕೊಂಡು ಕೊಳೆ ಮಾಡಿಕೊಳ್ಳುವುದು ಎಂದು ಹೇಳುತ್ತಿದ್ದರು. ಮನಸ್ಸು ಕೂಡ ಅದರಂತೆಯೆ. ನಮ್ಮ ಮನಸ್ಸು ಪುನಃ ಸಂಸಾರದ ಕೆಸರಿಗೆ ಹೋದರೂ ಅದಕ್ಕೆ ಮುಂಚೆ ಏಕಾಂತವಾಸ ಒಳ್ಳೆಯದು. ಕ್ರಮೇಣ ನಿಜವಾದ ಏಕಾಂತವಾಸವನ್ನು ಅನುಭವಿಸುವುದಕ್ಕೆ ಪ್ರಯತ್ನ ಮಾಡಿ. ನಿಜವಾದ ನಿರ್ಜನ ಪ್ರದೇಶದಲ್ಲಿ ಏಕಾಂತವಾಗಿ ಧ್ಯಾನಮಾಡಿದರೆ, ಒಬ್ಬನಿಗೆ ಎಷ್ಟೊ ಧೈರ್ಯ ಬರುವುದು. ಆಗ ಮೃತ್ಯುವನ್ನಾದರೂ ಕೆಚ್ಚಿದೆಯಿಂದ ಎದುರಿಸುವನು. ನಾನು, ನೆರೆಯಿಂದ ಪೀಡಿತರಾದ ಜನರಿಗೆ ಸಹಾಯ ಮಾಡಲು ಮಂಡಿಯುದ್ದ ನೀರಿನಲ್ಲಿ ನಡೆದುಕೊಂಡು ಹೋಗುವಾಗಲೂ ಈ ಧೈರ್ಯವನ್ನು ಅನುಭವಿಸಿರುವೆನು. ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿಯಬೇಕೆಂದು ಬಯಸುವವನಿಗೆ ಮಧ್ಯ ಮಧ್ಯ ಏಕಾಂತವಾಸ ಅತಿಮುಖ್ಯ.

ಇವುಗಳ ಸಾರವೆ ಇದು: ಮಾತಿನ ನಿಗ್ರಹ ಅತ್ಯಂತ ಆವಶ್ಯಕ. ಯಾರಿಂದಲೂ ಏನನ್ನೂ ಯಾವವಸ್ತುವನ್ನಾದರೂ ಆಗಲಿ, ಯಾವ ಸಹಾಯವನ್ನಾದರೂ ಆಗಲಿ ನಿರೀಕ್ಷಿಸಬೇಡಿ. ಒಬ್ಬರೇ ನಿಲ್ಲಿ. ಯಾವ ಭರವಸೆಯನ್ನೂ ಇಟ್ಟುಕೊಳ್ಳಬೇಡಿ. ಯಾವ ಯೋಚನೆಯನ್ನೂ ಇಟ್ಟುಕೊಳ್ಳಬೇಡಿ. ಭರವಸೆಯ ಬಳ್ಳಿಯನ್ನು ಕತ್ತರಿಸಿಹಾಕಿ. ಇವುಗಳೇ ನಮ್ಮ ಮನಸ್ಸನ್ನು ದುರ್ಬಲಗೊಳಿಸುವುದು. ಆಧ್ಯಾತ್ಮಿಕ ಶ್ರೇಷ್ಠ ಸತ್ಯಗಳನ್ನು ಅರ್ಥಮಾಡಿಕೊಳ್ಳಲು ಆಗುವುದಿಲ್ಲ. ಕೊನೆಗೆ ನಿಮ್ಮ ಬಾಹ್ಯ ಚಟುವಟಿಕೆಯನ್ನು ಸಾಧ್ಯವಾದಷ್ಟು ಕಡಿಮೆಮಾಡಿ, ಏಕಾಂತತೆಯನ್ನು ಪ್ರೀತಿಸುವುದನ್ನು ಅಭ್ಯಾಸ್ಯಮಾಡಿ. ಕೆಲವುವೇಳೆ ಏಕಾಂತವಾಸಕ್ಕೆ ಹೋಗಿ. ಪ್ರಾರಂಭದ ಈ ಕೆಲವು ಅಭ್ಯಾಸಗಳು ಮನಸ್ಸನ್ನು ಏಕಾಗ್ರಗೊಳಿಸಿ, ಅದನ್ನು ಬಲಮಾಡುವುದು. ಬಾಹ್ಯ ಪ್ರಪಂಚದ ಆಸರೆಗಳನ್ನು ಅಷ್ಟು ನೆಚ್ಚುವುದಿಲ್ಲ. ಜ್ಞಾನಯೋಗವನ್ನು ತೀವ್ರವಾಗಿ ಅಭ್ಯಾಸಮಾಡಲು ಮೊದಲು ಒಬ್ಬ ಅರ್ಹತೆಯನ್ನು ಪಡೆಯಬೇಕು. ಆಧ್ಯಾತ್ಮಿಕ ಜೀವನದ ಸೂಕ್ಷ್ಮರಹಸ್ಯಗಳನ್ನು ಅವನು ತಿಳಿದುಕೊಳ್ಳಬೇಕಾಗಿದೆ. ಕೇವಲ ಬಾಹ್ಯದಲ್ಲಿ ನಿರತನಾದ ಮನುಷ್ಯ ಯೋಗಕ್ಕೆ ಸಂಬಂಧಪಟ್ಟ ಅಭ್ಯಾಸಗಳನ್ನು ತಿಳಿದುಕೊಳ್ಳಲಾರ. ಇದಕ್ಕೆ ಪೂರ್ವ ಸಿದ್ಧತೆಗಳು ಆವಶ್ಯಕ.

ಜ್ಞಾನಮಾರ್ಗದಲ್ಲಿ ನಡೆಯುವುದಕ್ಕೆ ಬೇಕಾದ ಅರ್ಹತೆಯನ್ನು ಪಡೆದವನನ್ನು ಅಧಿಕಾರಿ ಎನ್ನುತ್ತಾರೆ. ಆಧ್ಯಾತ್ಮಿಕ ಸಂದೇಶಗಳನ್ನು ಅರ್ಥಮಾಡಿಕೊಳ್ಳುವ ಸ್ಥಿತಿಗೆ ಅವನು ಬಂದಿದ್ದಾನೆ. ಇದುವರೆಗೆ ನಾವು ಹೇಳುತ್ತಿದ್ದ ಅಭ್ಯಾಸಗಳು, ಈ ಅಧಿಕಾರವನ್ನು ಪಡೆಯಲು ಯೋಗ್ಯನನ್ನಾಗಿ ಮಾಡುತ್ತವೆ. ಆದರೆ ಅಷ್ಟೇ ಅಲ್ಲ, ಅದಕ್ಕಿಂತ ಹೆಚ್ಚು ವಿವರಗಳಿವೆ. ಜ್ಞಾನಯೋಗದ ಸಿದ್ಧಾಂತಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಹೆಚ್ಚಿನ ಅರ್ಹತೆ ಬೇಕಾಗುವುದು.

ಆಧ್ಯಾತ್ಮಿಕ ಜೀವನದಲ್ಲಿ ಅರ್ಹತೆಯ ದೃಷ್ಟಿಯಿಂದ ಜನರನ್ನು ಮೂರು ಭಾಗ ಮಾಡುತ್ತಾರೆ. ಬದ್ಧರಾಗಿರುವವರು, ಜಾಗ್ರತರಾಗುವುದಕ್ಕೆ ಸಿದ್ಧರಾಗಿರುವವರು, ಆಗಲೆ ಜಾಗ್ರತರಾಗಿರುವವರು. ಇದರಲ್ಲಿ ಸ್ವಾಭಾವಿಕವಾಗಿ ಜನ ಮೊದಲನೆ ವರ್ಗಕ್ಕೇ ಹೆಚ್ಚು ಸೇರುತ್ತಾರೆ. ಅರ್ಹತೆಯನ್ನು ಪಡೆದಿರುವ ಸಾಧಕನೆ, ಜಾಗ್ರತನಾಗುವುದಕ್ಕೆ ಸಿದ್ಧನಾಗಿರುವನು. ಅವನನ್ನು ಅಧಿಕಾರಿ ಎಂದು ಕರೆಯಬಹುದು.

ಹಿಂದೂ ಶಾಸ್ತ್ರದಲ್ಲಿ ಜ್ಞಾನಯೋಗಕ್ಕೆ ಬೇಕಾದ ಅಧಿಕಾರಿಯ ಯೋಗ್ಯತೆಯನ್ನು ವಿವರಿಸುವರು. ಪೂರ್ವಕಾಲದ ಧರ್ಮಶಾಸ್ತ್ರಕರ್ತೃವಾದ ಮನು, ಸಾಧಕನು ಮೂರು ಆಶ್ರಮಗಳ ಮೂಲಕ ಬಂದಿರಬೇಕು ಎನ್ನುವನು. ಅವೇ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಎಂಬುವು. ಅನಂತರವೇ ಅವನು ಮುಕ್ತಿಗೆ ಅರ್ಹತೆಯನ್ನು ಪಡೆಯುವ ಸನ್ಯಾಸಿಯಾಗಲು ಯೋಗ್ಯ ಎನ್ನುವನು. ಸಂಪ್ರದಾಯದ ದೃಷ್ಟಿಯಿಂದ ಸಾಧಕನಿಗೆ ಸುಮಾರು ಐವತ್ತು ವರುಷಗಳಾದರೂ ಆಗಿರಬೇಕು, ಮತ್ತು ಮೊದಲು ಮೂರು ಆಶ್ರಮಗಳನ್ನು ಪೂರೈಸಿರಬೇಕು. ಆತ್ಮಜ್ಞಾನಕ್ಕೆ ಪ್ರಯತ್ನಪಡಬೇಕಾದರೆ ಅದಕ್ಕೆ ತ್ಯಾಗವಿರಬೇಕು. ಅದಕ್ಕಾಗಿ ಒಬ್ಬ ಮುಂಚೆ ಕರ್ಮದಲ್ಲಿ ಚೆನ್ನಾಗಿ ಪಳಗಿರಬೇಕು. ಒಬ್ಬ ತಾನು ಮಾಡಬೇಕಾದ ಪ್ರಯತ್ನವನ್ನೆಲ್ಲ ಮಾಡಿರಬೇಕು. ನೀವು ಪ್ರಯತ್ನಮಾಡಿ ಸೋತಮೇಲೆ, ಆಧ್ಯಾತ್ಮಿಕ ಜೀವನದಲ್ಲಿ ಒಂದು ನಿರ್ಣಯಕ್ಕೆ ಬಂದಮೇಲೆ, ಅದರ ಸಾಕ್ಷಾತ್ಕಾರವನ್ನು ಹೇಗೆ ಪಡೆಯುವುದು ಎಂಬುದನ್ನು ಆಲೋಚಿಸಬಹುದು.

ಅಧಿಕಾರಿಗೆ ಬೇಕಾದ ಯೋಗ್ಯತೆ ಉಪನಿಷತ್ತುಗಳಲ್ಲಿ ಇವೆ. ಅವನು ಸಾಧಕನಾಗಿರಬೇಕು. ತಾನು ಜೀವನದಲ್ಲಿ ಗುರಿಯನ್ನು ಮುಟ್ಟುತ್ತೇನೆ ಎಂಬ ಭರವಸೆ ಅವನಲ್ಲಿರಬೇಕು. ಇದು ಸಾಧಾರಣ ಭರವಸೆಯಲ್ಲ. ನಾನು ಗುರಿಯನ್ನು ಮುಟ್ಟಿಯೇ ಮುಟ್ಟುತ್ತೇನೆ ಎಂಬ ಭಾವನೆಯಿಂದ ದೀಪ್ತನಾಗಿರಬೇಕು. ಅಧಿಕಾರಿ ಆರೋಗ್ಯವಾಗಿರಬೇಕು. ಅವನ ದೇಹ ಮನಸ್ಸು ಎರಡೂ ದೃಢವಾಗಿರಬೇಕು. ಅವನು ಮೇಧಾಶಕ್ತಿಯಿಂದ ಕೂಡಿರಬೇಕು, ಅಂದರೆ ಅತ್ಯಂತ ಬುದ್ಧಿವಂತನಾಗಿರಬೇಕು.

ಜ್ಞಾನಯೋಗದ ಅಧಿಕಾರಿಗೆ ಬೇಕಾದ ಯೋಗ್ಯತೆಯನ್ನು ಕುರಿತು, ಪ್ರಖ್ಯಾತ ಸಾಧು ಮತ್ತು ತತ್ತ್ವಜ್ಞಾನಿಗಳಾದ ಶ್ರೀಶಂಕರಾಚಾರ್ಯರು ಸ್ಪಷ್ಟವಾಗಿ ಅವುಗಳನ್ನು ಹೇಳುತ್ತಾರೆ. ಅವೇ ಸಾಧನ–ಚತುಷ್ಟಯ, ಸಾಧಕನಲ್ಲಿ ಇರಬೇಕಾದ ನಾಲ್ಕು ಗುಣಗಳು ಎಂಬುದು.

೧. ವಿವೇಕ, ಎಂದರೆ ಪ್ರಪಂಚದಲ್ಲಿ ನಿತ್ಯ ಯಾವುದು, ಅನಿತ್ಯ ಯಾವುದು ಎಂಬುದನ್ನು ತಿಳಿದುಕೊಳ್ಳುವ ಶಕ್ತಿ. ಬ್ರಹ್ಮನೇ ಸತ್ಯ, ಈ ಪ್ರಪಂಚ ಮಿಥ್ಯ ಎಂಬ ದೃಢವಾದ ನಂಬಿಕೆ ಇರಬೇಕು.

೨. ವೈರಾಗ್ಯ, ಎಂದರೆ ತ್ಯಾಗ. ಇಂದ್ರಿಯ ವಿಷಯಗಳೆಲ್ಲ ಕ್ಷಣಿಕ ಎಂದು ತಿಳಿದು ಅವುಗಳನ್ನು ತ್ಯಜಿಸುವ ಇಚ್ಛೆ ಇರಬೇಕು.

೩. ಆರು ಸದ್ಗುಣಗಳನ್ನು ಪಡೆದಿರಬೇಕು. ಶಮ ಎಂದರೆ ಶಾಂತಿ ಇರಬೇಕು.

ವಿಷಯವಸ್ತುಗಳು ಕ್ಷಣಿಕ ಎಂದು ತಿಳಿದು, ಮನಸ್ಸನ್ನು ಅವುಗಳಿಂದ ಸೆಳೆದು, ಬ್ರಹ್ಮನ ಮೇಲೆ ಇಡುವ ಶಕ್ತಿ ಇರಬೇಕು.

ದಮ ಎಂದರೆ ನಿಗ್ರಹಿಸುವುದು. ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳನ್ನು ಹೊರಗೆ ಹೋಗದಂತೆ ತಡೆಗಟ್ಟುವುದು.

ಉಪರತಿ, ಶಮ ಮತ್ತು ದಮವನ್ನು ಆಚರಿಸುವುದರಿಂದ ಬರುವುದು. ಇದು ಬಾಹ್ಯ ವೇದನೆಗೆ ಮನಸ್ಸನ್ನು ಹಾಕದ ಸ್ಥಿತಿ.

ತಿತಿಕ್ಷ ಎಂದರೆ ಸಹಿಷ್ಣುತೆ. ಮನಸ್ಸು ಯಾವ ಸನ್ನಿವೇಶದಲ್ಲಿಯೂ ತನ್ನ ಸ್ವಾಸ್ಥ್ಯ ವನ್ನು ಕಳೆದುಕೊಳ್ಳದೆ ಶಾಂತಿಯಿಂದ ಇರುವುದು.

ಶ್ರದ್ಧೆ ಎಂದರೆ ದೃಢವಾದ ನಂಬಿಕೆ. ಶಾಸ್ತ್ರ ಮತ್ತು ಗುರು ಇವರುಗಳು ಹೇಳುವು ದನ್ನು ಚೆನ್ನಾಗಿ ವಿಮರ್ಶೆ ಮಾಡಿದ ಮೇಲೆ ಬರುವ ಸ್ಥಿತಿ.

ಸಮಾಧಾನ ಎಂದರೆ ತನ್ನ ನೆಲೆಯನ್ನು ಕಂಡುಕೊಂಡಿರುವುದು. ಬ್ರಹ್ಮವೇ ಸತ್ಯ ಎಂದು ಸದಾ ಚಿಂತಿಸುವುದರಿಂದ ಈ ಸ್ಥಿತಿ ಬರುವುದು.

೪. ಮುಮುಕ್ಷತ್ವ ಎಂದರೆ ಮುಕ್ತನಾಗುವುದಕ್ಕೆ ಇರುವ ಆಸಕ್ತಿ.

ಶಂಕರಾಚಾರ್ಯರು ಹೇಳುವ ಸಾಧನ–ಚತುಷ್ಟಯ ಇದು. ವಿವೇಕ–ಚೂಡಾಮಣಿ ಎಂಬ ಗ್ರಂಥದಲ್ಲಿ ೧೯ ರಿಂದ ೨೭ನೇ ಶ್ಲೋಕಗಳಲ್ಲಿ ಇದನ್ನು ವಿವರಿಸುವರು.

ಜ್ಞಾನವೇ ಮುಕ್ತಿ. ಇದನ್ನು ಮತ್ತಾವುದೊ ವಸ್ತುವಿನಿಂದ ಪಡೆದುಕೊಳ್ಳುವುದಕ್ಕೆ ಆಗದೇ ಇದ್ದರೂ ನಮ್ಮ ಚಿತ್ತಶುದ್ಧಿ ಮಾಡಿಕೊಳ್ಳುವುದಕ್ಕೆ ಈ ಸಾಧನೆಗಳು ಆವಶ್ಯಕ, ಕೊಳೆಯ ಕನ್ನಡಿ ಬೆಳಕನ್ನು ಚೆನ್ನಾಗಿ ಪ್ರತಿಬಿಂಬಿಸಲಾರದು. ನಮ್ಮ ಚಿತ್ತ ಕನ್ನಡಿಯಂತೆ ಯಾವಾಗ ಅದನ್ನು ಚೆನ್ನಾಗಿ ಒರಸುತ್ತೇವೆಯೊ ಆಗ ಅದು ಬ್ರಹ್ಮನನ್ನು ಪ್ರತಿಬಿಂಬಿಸು ವುದು. ಸಾಧನ–ಚತುಷ್ಟಯದಲ್ಲಿ ಪ್ರತಿಷ್ಠಿತನಾದರೆ ಜ್ಞಾನಮಾರ್ಗದಲ್ಲಿ ಹೋಗುವುದಕ್ಕೆ ಅಧಿಕಾರಿಯಾಗುತ್ತಾನೆ.

ವಿವೇಕ ಎಂದರೆ ಯಾವುದು ನಿಜ, ಯಾವುದು ಸುಳ್ಳು ಎಂಬುದನ್ನು ತಿಳಿದು ಕೊಳ್ಳುವ ಶಕ್ತಿ. ಇದನ್ನು ಬಾಹ್ಯ ಮತ್ತು ಆಂತರಿಕವಾಗಿ ನೋಡಬೇಕು. ಬಾಹ್ಯದಲ್ಲಿ ನೋಡಿದರೆ ಯೋಗ್ಯವಾದ ಕರ್ಮ, ಯೋಗ್ಯವಾದ ತಿಳಿವಳಿಕೆ, ಯೋಗ್ಯವಾದ ಶೀಲ. ಆಂತರಿಕವಾಗಿ ನೋಡಿದರೆ ಸರಿಯಾಗಿ ವಿಭಜನೆ ಮಾಡುವ ಶಕ್ತಿ, ಸರಿಯಾದ ಬುದ್ಧಿ, ಸರಿಯಾದ ದೃಷ್ಟಿ, ಸರಿಯಾದ ಎಂದರೆ ಮುಖ್ಯವಾದ ಏಕತ್ವದ ಸಿದ್ಧಾಂತದ ಕಡೆ ಮನ ಸ್ಸನ್ನು ಇಡುವುದಕ್ಕೆ ಬೇಕಾದ ಕ್ರಿಯೆ ಮತ್ತು ತೀರ್ಪು. ಸರಿಯಾದ ತೀರ್ಪು ಎಂದರೆ ಯಾರೊ ವಿಚಾರ ಮಾಡಿದ್ದಲ್ಲ, ಅಥವಾ ನಾನೇ ವಿಚಾರ ಮಾಡಿದ್ದೂ ಅಲ್ಲ. ಆದರೆ ಸತ್ಯ ಏನಾಗಿದೆಯೊ ಅದು.

ಯುಕ್ತಾ–ಅಯುಕ್ತ ವಿವೇಕವನ್ನು ಅಭ್ಯಾಸ ಮಾಡಬೇಕು. ಅದರ ಫಲವೆ ಆತ್ಮ ಸಾಕ್ಷಾತ್ಕಾರ. ಎಂದಿಗೂ ಅದನ್ನು ಲಘುವಾಗಿ ಭಾವಿಸಬೇಡಿ. ಇದನ್ನು ಮಕ್ಕಳ ಆಟ ಎಂದು ನೋಡಬೇಡಿ.

ಯಾವಾಗಲೂ ಸ್ಥೂಲದಿಂದ ಸೂಕ್ಷ್ಮಕ್ಕೆ ಹೋಗಬೇಕು. ಇದು ವ್ಯವಹಾರ ಜೀವನಕ್ಕೆ ಅನ್ವಯಿಸುವುದು, ಪರಮಾರ್ಥ ಜೀವನಕ್ಕೂ ಅನ್ವಯಿಸುವುದು. ಸ್ಥೂಲದಿಂದ ಸೂಕ್ಷ್ಮದ ಕಡೆಗೇನೆ ಎಲ್ಲಾ ಜ್ಞಾನಮಾರ್ಗ ಇರುವುದು. ನನಗೆ ಒಂದು ಕಥೆ ಜ್ಞಾಪಕಕ್ಕೆ ಬರುವುದು. ಖಗೋಳ ಶಾಸ್ತ್ರಜ್ಞ ತನ್ನ ವಿದ್ಯಾರ್ಥಿಗೆ ಬೋಧಿಸುತ್ತಿದ್ದ. ಅವರ ಸಂಭಾಷಣೆ ಹೀಗಿತ್ತು.

ಗುರು : ನಿನ್ನ ಎದುರಿಗೆ ಇರುವ ಗುಡ್ಡ ಕಾಣುವುದೆ ?

ಶಿಷ್ಯ : ಹೌದು ಸ್ವಾಮಿ, ನೋಡುತ್ತೇನೆ.

ಗುರು : ಗುಡ್ಡದಮೇಲೆ ಇರುವ ದೊಡ್ಡ ಮರ ಕಾಣುವುದೆ ?

ಶಿಷ್ಯ : ಹೌದು ಸ್ವಾಮಿ, ಅದನ್ನು ನೋಡುತ್ತಿದ್ದೇನೆ.

ಗುರು : ನಿನಗೆ ಅತ್ಯಂತ ಮೇಲೆ ಇರುವ ಕೊಂಬೆ ಕಾಣುವುದೆ ?

ಶಿಷ್ಯ : ಹೌದು ಅದು ಕಾಣುತ್ತಿದೆ.

ಗುರು : ಕೊನೆಯ ರೆಂಬೆಯ ಮೇಲೆ ನಿನಗೆ ಎಲೆಗಳು ಕಾಣುತ್ತಿವೆಯೆ ?

ಶಿಷ್ಯ : ಹೌದು ಸ್ವಾಮಿ.

ಗುರು : ಎಲೆಗಳ ಮಧ್ಯದಲ್ಲಿ ಸ್ವಲ್ಪ ಖಾಲಿ ಜಾಗ ಇದೆ. ಅದು ಕಾಣುವುದೆ ?

ಶಿಷ್ಯ : ಹೌದು ಅದು ಕಾಣುತ್ತಿದೆ.

ಗುರು : ಆ ಖಾಲಿ ಜಾಗದಲ್ಲಿ ಏನಿದೆ ? ಜೋಪಾನವಾಗಿ ನೋಡಿ ಹೇಳು.

ಶಿಷ್ಯ : ಅಲ್ಲೊಂದು ಪ್ರಕಾಶಮಾನವಾದ ನಕ್ಷತ್ರ ಇದೆ ಸ್ವಾಮಿ.

ಗುರು : ಆ ಪ್ರಕಾಶಮಾನವಾದ ನಕ್ಷತ್ರದ ಮೇಲೆ ಏನು ಇದೆ ಹೇಳು.

ಶಿಷ್ಯ : (ಕೆಲವು ಕ್ಷಣಗಳಾದ ಮೇಲೆ) ನಾನೊಂದು ಮಂಕಾಗಿರುವ ನಕ್ಷತ್ರವನ್ನು ನೋಡುತ್ತಿದ್ದೇನೆ.

ಗುರು : ಅದೇ ಅರುಂಧತಿ ನಕ್ಷತ್ರ.

ಇದನ್ನೇ ಅರುಂಧತಿ ದರ್ಶನ ನ್ಯಾಯದ ಕಥೆ ಎಂದು ಹೇಳುವುದು. ಎಂದರೆ ಅತ್ಯಂತ ಸೂಕ್ಷ್ಮವಾದ ಅರುಂಧತಿ ನಕ್ಷತ್ರವನ್ನು ನೋಡುವ ರೀತಿ. ಸ್ಥೂಲದಿಂದ ಸೂಕ್ಷ್ಮದ ಕಡೆಗೆ ಹೇಗೆ ಬರುವುದು ಎಂಬುದನ್ನು ನಾಟಕೀಯವಾಗಿ ಹೇಳುವರು. ಗುರು ಸ್ಥೂಲದ ಮೂಲಕ ಶಿಷ್ಯನನ್ನು ಸೂಕ್ಷ್ಮಕ್ಕೆ ಕರೆದುಕೊಂಡು ಹೋಗುವನು. ಅದರಂತೆಯೇ ಆಧ್ಯಾತ್ಮಿಕ ಬೆಳವಣಿಗೆ ಕೂಡ.ಈಗ ನಮಗೆ ಗೊತ್ತಿರುವುದರಿಂದ, ಗೊತ್ತಿಲ್ಲದ ಕಡೆ ಹೋಗಬೇಕು. ಇದನ್ನೇ ವಿವೇಕದಿಂದ ಮಾಡುತ್ತಾನೆ.

ಬ್ರಹ್ಮನಿಂದ ನನ್ನನ್ನು ಬೇರೆ ಮಾಡಿರುವುದೇ ಅಹಂಕಾರ. ನಾವು ಬ್ರಹ್ಮನನ್ನು ಅರಿಯಬೇಕಾದರೆ ಕೆಳಗಿನಿಂದ ಎಂದರೆ ದೇಹದಿಂದ, ಅದರ ಗುಣಗಳಾದ ಚರ್ಮ, ಕೂದಲು, ಉಗುರು, ಕಣ್ಣು ಮುಂತಾದವುಗಳಿಂದ ವಿಭಜನೆ ಮಾಡುವುದಕ್ಕೆ ಪ್ರಯತ್ನಿಸುತ್ತೇವೆ. ಕ್ರಮೇಣ ಸೂಕ್ಷ್ಮ ಸೂಕ್ಷ್ಮವಾಗಿ ನಮ್ಮ ಅಹಂಕಾರದ ಬಳಿಗೆ ಹೋಗುತ್ತೇವೆ. ನಾವು ಯಾವುದಲ್ಲವೊ ಅದನ್ನು ಕಳೆದರೆ, ನಾವು ಏನಾಗಿದ್ದೇವೊ ಅದರ ಸಮೀಪಕ್ಕೆ

ಹೋಗುತ್ತೇವೆ. ನಾವು ಅಹಂಕಾರದ ಬಳಿಗೆ ಹೋದಾಗ ಆತ್ಮನಿಗೆ ಸಮೀಪದಲ್ಲಿರುವೆವು.

ನಾವು ಯಾವುದನ್ನು ಆತ್ಮ ಎನ್ನುವೆವೊ ಅದನ್ನು ವಿಭಜನೆ ಮಾಡಿ ನೋಡೋಣ. ನನಗೆ ಒಂದು ದೇಹ ಇದೆ ಎಂದು ನನಗೆ ಗೊತ್ತಿದೆ. ಆದಕಾರಣ ನಾನು ದೇಹವಲ್ಲ. ಹಾಗಾದರೆ ನಾನು ಯಾರು ನೋಡೋಣ. ದೇಹ ಮತ್ತು ಅದಕ್ಕೆ ಸಂಬಂಧಪಟ್ಟ ಇಂದ್ರಿಯಗಳೊಳಗೆ, ಅವಕ್ಕೆಲ್ಲ ಒಡೆಯನಾಗಿ ಒಬ್ಬ ಸಿಂಹಾಸನದ ಮೇಲೆ ಕುಳಿತಿರುವನು. ಅವನ ಪ್ರಜೆಗಳಿಗೆ ರಾಜ ಎಷ್ಟು ಬಲಶಾಲಿ ಎಂದು ಗೊತ್ತಿಲ್ಲ. ಅವರಿಗೆ ಅವನಿರುವುದೂ ಗೊತ್ತಿಲ್ಲ.

ಒಂದು ಸಲ ಆ ಪ್ರಜೆಗಳಲ್ಲಿ ತಮ್ಮೊಳಗೇ ಒಂದು ಮನಸ್ತಾಪ ಬಂತು. ಕೈಕಾಲುಗಳು ಹೊಟ್ಟೆಗೆ, ನೀನು ಮಾಡುವ ಕೆಲಸವೇನು ಅಷ್ಟು ಮುಖ್ಯವಲ್ಲ. ನೋಡು ನಾವೆಷ್ಟು ಕಷ್ಟಪಟ್ಟು ಕೆಲಸ ಮಾಡುತ್ತೇವೆ. ಹೊಟ್ಟೆ, ನೀನೇನು ಮಾಡದೆ ಇದ್ದರೂ ನಿನಗೆ ಅಷ್ಟೊಂದು ರುಚಿಕರವಾದ ಆಹಾರವನ್ನು ಕೊಡುತ್ತಿರುವರು ಎಂದವು. ನಿನಗೆ ಎಲ್ಲಾ ಚೆನ್ನಾಗಿರುವುದು ಸಿಕ್ಕುವುದು. ನೀನು ನಮ್ಮಷ್ಟು ಕಷ್ಟಪಟ್ಟು ಕೆಲಸ ಮಾಡುವುದಿಲ್ಲ. ನಾವು ದಂಗೆ ಏಳುತ್ತೇವೆ ಎಂದುವು. ಅವುಗಳ ಜೊತೆಗೆ ಇನ್ನೂ ಕೆಲವು ಅಂಗಾಂಗಳು ಸೇರಿದವು. ಕೆಲವು ಕಾಲದ ಮೇಲೆ ಅವೆಲ್ಲ ಸ್ವಲ್ಪ ನಿತ್ರಾಣವಾದವು. ಆಗ ಯಾರೊ ಅಧಿಕಾರವಾಣಿಯಿಂದ ಮಾತನಾಡಿದರು. ನೀವೇನು ಮಾಡುತ್ತಿರುವಿರಿ. ನೀವೆಲ್ಲ ಆಳುಗಳು. ನಿಮ್ಮ ಅಸ್ತಿತ್ವದ ಪರಿಚಯ ನಿಮಗೆ ಇಲ್ಲ. ನೀವುಗಳೆಲ್ಲ ಯಾರು ಎಂದು ಭಾವಿಸಿದಿರಿ ? ನಾನೇ ನಿಮ್ಮನ್ನೆಲ್ಲ ಒಂದು ನಿಯಮದಲ್ಲಿ ಇಟ್ಟಿರುವುದು. ನಿಮ್ಮಲ್ಲಿ ಸೌಹಾರ್ದ ಬರುವಂತೆ ಮಾಡಿರುವುದು. ನನ್ನ ಶಕ್ತಿಯಿಂದ ನೀವೆಲ್ಲ ಕೆಲಸ ಮಾಡುವುದಕ್ಕೆ ಸಾಧ್ಯ. ನಿಮಗೆ ನಾನು ಯಾರು ಗೊತ್ತಿಲ್ಲವೆ ಎಂದಿತು.

ಅವುಗಳು ಇದರ ಮಾತನ್ನು ಕೇಳಲಿಲ್ಲ. ಹಾಗಾದರೆ ನಾನು ಹೋಗುತ್ತೇನೆ ಎಂದು ಏಳಲು ಮೊದಲಾಯಿತು. ಆಗ ಇಂದ್ರಿಯಗಳಿಗೆಲ್ಲ ಗೊತ್ತಾಯಿತು, ಇದಿಲ್ಲದೆ ನಾವು ಏನು ಮಾಡುವುದಕ್ಕೂ ಸಾಧ್ಯವಿಲ್ಲ ಎಂದು. ಇದು ಇಲ್ಲದೇ ಇದ್ದರೆ ಅವುಗಳು ಬದುಕುವುದಕ್ಕೆ ಸಾಧ್ಯವಿಲ್ಲ. ಅವು ತಮ್ಮ ಅಸಹಕಾರವನ್ನು ನಿಲ್ಲಿಸಿ ಹೊಂದಿಕೊಂಡು ಕೆಲಸಮಾಡಲು ಶುರುಮಾಡಿದವು. ಆಫೀಸಿನಲ್ಲಿ ಆಫೀಸರ್ ಇದ್ದ ಹಾಗೆ. ಕೆಲಸಗಾರರಿಗೆ ಅವನು ಇರುವುದು ಗೊತ್ತಿದ್ದರೆ, ಅವರು ಮಾತನಾಡುವುದು, ಜಗಳ ಕಾಯುವುದು ಇವುಗಳನ್ನೆಲ್ಲ ಬಿಟ್ಟು ತೆಪ್ಪಗೆ ಕೆಲಸ ಮಾಡಿಕೊಂಡು ಹೋಗುವರು.

ನಿಜವಾದ ನಾನೇ ದೊರೆ. ಯಾವಾಗಲೂ ಸಾಕ್ಷಿಯಂತೆ ಇರುವುದು. ಅದೇ ಮನಸ್ಸು, ದೇಹ ಇವುಗಳು ಕೆಲಸ ಮಾಡುವುದಕ್ಕೆ ಶಕ್ತಿಯನ್ನು ನೀಡುವುದು. ಯಜಮಾನ ಅವನಿಗೆ ದುಡಿಯುತ್ತಿರುವ ಆಳುಗಳೊಂದಿಗೆ ಬೆರೆತು ಹೋಗುವುದಕ್ಕೆ ಅವಕಾಶ ಕೊಡಕೂಡದು. ನಾವು ಹೀಗೆ ವಿಚಾರಮಾಡಿ, ನಮ್ಮ ದೇಹದಲ್ಲಿ ಯಜಮಾನ ಒಬ್ಬನಿರುವನು, ಅವನ ಕೆಲಸವನ್ನು ಮಾಡುವ ಆಳುಗಳಿರುವರು ಎಂಬುದನ್ನು ಆಲೋಚಿಸಬೇಕು. ಉದಾಹರಣೆಗೆ ಕಣ್ಣುಗಳು ಏನು ಮಾಡುತ್ತಿವೆ ? ಬಣ್ಣ, ಆಕಾರ, ಸೌಂದರ್ಯಗಳನ್ನು ನಮಗೆ ತರುತ್ತಿವೆ. ಇದೆಲ್ಲ ಮಾಡುವುದು ಕಣ್ಣಿನ ಪ್ರಯೋಜನಕ್ಕೇನು ? ಇದನ್ನು ಪ್ರತಿ

ಯೊಂದು ಇಂದ್ರಿಯಕ್ಕೂ ಹೋಲಿಸಿ ನೋಡಿ. ಆಗ ಗೊತ್ತಾಗುವುದು ಇವುಗಳೆಲ್ಲ ಮನಸ್ಸಿಗಾಗಿ ಕೆಲಸ ಮಾಡುತ್ತಿವೆ ಎಂಬುದು. ಮನಸ್ಸು ಕೂಡ ಒಬ್ಬ ಆಳಿ. ಅವನು ಇತರರ ಮೇಲ್ವಿಚಾರಣೆ ನೋಡಿಕೊಳ್ಳುವ ಮೇಸ್ತ್ರಿಯಂತೆ. ಈಗ ಈ ಚಟುವಟಿಕೆಗಳೆಲ್ಲ ಯಾರ ಪ್ರಯೋಜನಕ್ಕಾಗಿ ಆಗುತ್ತಿರುವುದು ? ಹೀಗೆಯೆ ನೀವು ವಿಭಜನೆ ಮಾಡುತ್ತ ಹೋದರೆ, ಇವುಗಳಿಗೆ ಅತೀತನಾದವನ ಕ್ಷಣಿಕ ನೋಟವೊಂದು ಸಿಕ್ಕುವುದು. ಅವನು ಯಾವ ಚಟುವಟಿಕೆಯಲ್ಲಿಯೂ ಭಾಗಿಯಾಗಿಲ್ಲ. ಆಗ ದೇಹದಲ್ಲಿ ಆಗುತ್ತಿರುವ ಬದಲಾವಣೆಗಳೆಲ್ಲ, ಸುಖ ದುಃಖ ಮುಂತಾದ ದ್ವಂದ್ವ ಅನುಭವಗಳೆಲ್ಲ ಆಗುತ್ತಿರುವುದು ಆಳುಗಳಿಗೆ ಮಾತ್ರ, ಸಾಕ್ಷಿಯಾದ ಯಜಮಾನನಿಗಲ್ಲ ಎಂಬುದು ಅರಿವಾಗುವುದು.

ನೀವು ನಿಮ್ಮ ಮನೆಯ ಮಹಡಿಯ ಮೇಲೆ ನಿಂತುಕೊಂಡಿದ್ದೀರಿ ಎಂದು ಭಾವಿಸಿ. ನಿಮ್ಮ ಕೆಳಗೆ ಯಾರೊ ಏನನ್ನೊ ಕದಿಯುತ್ತಿರುವರು. ಅನಂತರ ಮತ್ತಾರೊ ಏನೊ ಪುಣ್ಯ ಕೆಲಸ ಮಾಡುತ್ತಿರುವರು. ಇವೆರಡರಿಂದ ನೀವು ಬಾಧಿತರಾಗುತ್ತೀರಿ ಎಂದು ತಿಳಿದಿರಾ ? ಪೋಲಿಸಿನವನು ಬಂದು ಕಳ್ಳನನ್ನು ಸೆರೆಹಿಡಿದರೆ ನೀವು ಕಾರಣಕರ್ತರಲ್ಲ. ಮಾಡಿದ ಪುಣ್ಯ ಕೆಲಸಕ್ಕೆ ಯಾರೊ ಅವನಿಗೆ ಬಹುಮಾನವನ್ನು ಕೊಟ್ಟರೆ ಅದನ್ನು ಹಂಚಿಕೊಳ್ಳುವುದಕ್ಕೆ ಆಗುವುದೆ? ನೀವು ಎರಡು ಕೆಲಸಕ್ಕೂ ಸಾಕ್ಷಿಯಾಗಿದ್ದೀರಿ. ಅದರಂತೆಯೇ ಈ ದೇಹ ಮತ್ತು ಮನಸ್ಸಿನಿಂದ ಆಗುತ್ತಿರುವ ಕರ್ಮಗಳನ್ನು ಆತ್ಮ ನೋಡುತ್ತಿರುವ ಸಾಕ್ಷಿ. ನಾನೀಗ ನಿಮ್ಮೊಡನೆ ಮಾತನಾಡುತ್ತಿರುವೆನು. ನಾನು ವ್ಯಕ್ತಪಡಿಸುವ ದೇಹ, ಮನಸ್ಸು. ಇಂದ್ರಿಯದ ಕ್ರಿಯೆಯ ಹಿಂದೆಲ್ಲ ಸಾಕ್ಷಿಯೊಬ್ಬನಿರುವನು. ಸಾಕ್ಷಿ ಹಿಂದೆ ಇರುವುದರಿಂದ ಮಾತ್ರ ಮಿಕ್ಕ ಇಂದ್ರಿಯಗಳೆಲ್ಲ ಕೆಲಸವನ್ನು ಮಾಡಬೇಕಾದರೆ. ಆದರೆ ಆತ್ಮನಾದರೊ ಅನಾಸಕ್ತನಾಗಿ ಇರುವನು.

ಆ ಸಾಕ್ಷಿಯೇ ನಿಮ್ಮ ಆತ್ಮ ಎಂಬುದನ್ನು ಅರಿಯುವುದೇ ನಿಜವಾದ ಮುಕ್ತಿ, ಸ್ವಾತಂತ್ರ್ಯ, ಪೂರ್ಣತೆ. ಇದನ್ನು ಪದೇ ಪದೇ ಮನೋವಿಭಜನೆಯಿಂದ ಮಾಡಬೇಕು. ವಿಭಜನೆಯ ಸಹಾಯದಿಂದ ಸಾಕ್ಷಿಭೂತನಾದ ನಮ್ಮ ಆತ್ಮನೊಂದಿಗೆ ತಾದಾತ್ಮ್ಯಭಾವವನ್ನು ಬೆಳೆಸಬೇಕು. ಅದು ಇತರ ವಸ್ತುಗಳೊಂದಿಗೆ ಮಿಶ್ರವಾಗದಂತೆ ನೋಡಿಕೊಳ್ಳಬೇಕು. ಇದೇ ನಿತ್ಯಾನಿತ್ಯ ವಸ್ತು ವಿವೇಕ ಎಂಬುದು. ಇದನ್ನು ಸದಾ ಮಾಡುತ್ತಿರಬೇಕು. ದೇಹ ಮನಸ್ಸಿನ ಕ್ರಿಯೆಗಳು ಯಾವುವು ಎಂಬುದನ್ನು ಅರಿತು ವಿಭಜನೆ ಮಾಡುತ್ತಿರಬೇಕು. ಅನಾತ್ಮವಸ್ತುವನ್ನು ಆತ್ಮನ ಮೇಲೆ ಆರೋಪಮಾಡುವುದು ನಿಂತರೆ ಮುಕ್ತಿ ಈಗಲೇ ಕರಗತವಾಗುವುದು. ಸಾಧುವೆಂದರೆ ಇವನೆ. ಆತ್ಮಸಾಕ್ಷಾತ್ಕಾರವನ್ನು ಪಡೆದವನು ಈ ವಿಭಜನೆಯನ್ನು ಇತರರಿಗಿಂತ ಹೆಚ್ಚಾಗಿ ಮಾಡಿರುವನು.

ನಮ್ಮ ಅಂತರತಮನಾದ ಆತ್ಮನನ್ನು ಕಂಡುಹಿಡಿಯಬೇಕು. ನಾವು ಈ ಜ್ಞಾನದಲ್ಲಿ ಚೆನ್ನಾಗಿ ಪ್ರತಿಷ್ಠಿತರಾದರೆ, ಅನಾತ್ಮವಸ್ತು ಆತ್ಮನಲ್ಲಿ ಕರಗಿ ಮಾಯವಾಗುವುದು. ಆಗಲೆ ಪರಮ ಪರಿಪೂರ್ಣತೆ ನಿಮಗೆ ಸಾಕ್ಷಾತ್ಕಾರವಾಗಬೇಕಾದರೆ. ಬ್ರಹ್ಮ ಸಾಕ್ಷಾತ್ಕಾರವಾದರೆ ಮಾಯಾಜಾಲ ಬಿದ್ದು ಹೋಗುವುದು. ಮಾಯೆ ಹೇಳುವುದು ನಾನಾರು ಎಂಬುದನ್ನು ಹೇಳಿದರೆ, ನಾನು ಮಾಯವಾಗುತ್ತೇನೆ ಎಂದು.

ನಮ್ಮ ಸಂಘದ ಹಿರಿಯ ಸ್ವಾಮಿಗಳೊಬ್ಬರು ನಮಗೆ ಒಂದು ಪ್ರಶ್ನೆಯನ್ನು ಹಾಕಿದರು. ಅದು ಹೀಗಿತ್ತು : ಪ್ರಪಂಚದಲ್ಲಿ ನೀನೊಬ್ಬನೆ ಉಳಿದಿರುವೆ ಎಂದು ಭಾವಿಸು. ನಿನ್ನ ಸುತ್ತಲೂ ಇರುವುದೆಲ್ಲ ಆವಿಯಾಗಿ ಹೋಗುತ್ತಿದೆ. ಆದರೂ ನೀನು ಇರುವೆ. ನೀನು ಯಾವುದನ್ನು ದೇಹ ಮನಸ್ಸು ಎನ್ನುವಿಯೊ ಅದು ಕೂಡ ಮಾಯವಾಗುತ್ತಿದೆ. ಇದನ್ನು ಆಲೋಚಿಸಿ ನೋಡಿ. ಒಂದು ವಾರ ಇದರ ಮೇಲೆ ಧ್ಯಾನಿಸಿ. ಅವರು ನಮಗೆ ಆತ್ಮ–ಅನಾತ್ಮವಸ್ತುವನ್ನು ವಿಭಜನೆ ಮಾಡುವುದನ್ನು ತೋರುತ್ತಿದ್ದರು.

ಅನಾತ್ಮ ವಸ್ತುವನ್ನು ಆತ್ಮನೆಂದು ಭಾವಿಸುವುದೇ ಜ್ಞಾನಿಗೆ ಪರಮ ಶತ್ರು. ಇದನ್ನು ನಾವು ಎಂದಿಗೂ ಮರೆಯಬಾರದು—ಅನಾತ್ಮನನ್ನು ನಾವು ಎಂದು ಭಾವಿಸುವುದರಿಂದಲೇ ಎಲ್ಲ ಉದ್ವಿಗ್ನತೆಗಳಿಗೂ ಅವಕಾಶವನ್ನು ಕೊಡುವುದು. ಆಧ್ಯಾತ್ಮಿಕ ಪುರೋಗಮನಕ್ಕೆ ಇರುವ ಆತಂಕವೇ ಇದು. ನಾವು ಅಂತರ್ಮುಖರಾಗಿ ಒಳಗೆ ಸೆಳೆದುಕೊಂಡರೆ ಇವುಗಳೆಲ್ಲ ನಮ್ಮನ್ನು ಬಿಟ್ಟುಹೋಗುತ್ತವೆ.

ಈಗ ನನಗೊಂದು ಸಣ್ಣ ಕಥೆ ಜ್ಞಾಪಕಕ್ಕೆ ಬರುತ್ತದೆ. ನರಿ ಒಂದು ಸಲ ಮೊಸಳೆಗೆ "ನೋಡು ಮನುಷ್ಯರು ತುಂಬಾ ಬಲಶಾಲಿಗಳು ಮತ್ತು ಪ್ರಖ್ಯಾತರಾಗಿದ್ದಾರೆ. ಏಕೆಂದರೆ ಅವರು ಕೃಷಿ ಮಾಡುತ್ತಾರೆ. ನಾವು ಕೂಡ ಹಾಗೆಯೇ ಮಾಡೋಣ" ಎಂದಿತು. ಅವರು ಭತ್ತವನ್ನು ಬೆಳೆಯುವುದಕ್ಕೆ ಸಂಕಲ್ಪ ಮಾಡಿದರು. ಮೊಸಳೆ ಕಷ್ಟಪಟ್ಟು ಕೆಲಸಮಾಡಿತು. ಬೆಳೆ ಬಂದಾಗ ನರಿ ನೀನು ಯಾವ ಭಾಗವನ್ನು ತೆಗೆದುಕೊಳ್ಳುತ್ತೀಯೆ ಎಂದು ಮೊಸಳೆಗೆ ಕೇಳಿತು. ಅದಕ್ಕೆ ಮೊಸಳೆ ನಾನು ಬೇರಿನ ಭಾಗವನ್ನು ತೆಗೆದುಕೊಳ್ಳುತ್ತೇನೆ ಎಂದಿತು. ಎರಡನೆಯ ಸಲ ಕಬ್ಬನ್ನು ಬೆಳೆದರು. ಈಗ ಮೊಸಳೆ ಭಾವಿಸಿತು, ಈಗ ಬೆಳೆಯ ತುದಿಯನ್ನು ತೆಗೆದುಕೊಂಡರೆ ಮೇಲು ಎಂದು. ಎರಡು ಸಲಿಯೂ ನಾನು ಮೋಸಹೋದೆ, ನರಿ ನನಗಿಂತ ಜಾಣ. ಅವನಿಗೆ ಇದು ಹೇಗೆ ಬಂತು ಎಂದು ನರಿಯನ್ನು ಕೇಳಿತು. ಅದಕ್ಕೆ ನರಿ, ಓ ಅದಕ್ಕೆ ಕಾರಣ ನನ್ನಲ್ಲಿರುವ ಮೇಧಾಶಕ್ತಿ ಎಂದಿತು. ಈ ಜಾಣತನವನ್ನು ಕಲಿತುಕೊಳ್ಳುವುದಕ್ಕೆ ಮೊಸಳೆ ತನ್ನ ಮರಿಗಳನ್ನು ನರಿಯ ಬಳಿಗೆ ಕಳುಹಿಸಿತು. ಎಷ್ಟು ಕಾಲವಾದರೂ ಮೊಸಳೆ ಮರಿಗಳು ಬರಲಿಲ್ಲ. ತಾಯಿ ಮೊಸಳೆಗೆ ಅಂಜಿಕೆಯಾಯಿತು ; ತನ್ನ ಮಕ್ಕಳಿಗೆ ಏನಾಗಿದೆಯೊ ಎಂದು. ಅವು ಹೇಗಿವೆ ಎಂದು ನೋಡುವುದಕ್ಕೆ ಹೋಯಿತು. ನರಿ ಮೊಸಳೆಗೆ ನೀನು ಮನೋವ್ಯಥೆ ಪಡಬೇಕಾಗಿಲ್ಲ, ನಿನ್ನ ಮಕ್ಕಳು ಚೆನ್ನಾಗಿ ಕಲಿಯುತ್ತಿದ್ದಾರೆ ಎಂದಿತು. ತಾಯಿ ಮೊಸಳೆ ಮರಿಗಳನ್ನು ನೋಡಬೇಕೆಂದು ಹೇಳಿತು. ಆಗ ಮೊಸಳೆ ತನ್ನ ಮರಿಗಳನ್ನು ನೋಡಲು ಹೋಯಿತು.

ತನ್ನ ಮನೆಯ ಹತ್ತಿರ ಇರುವ ಸರೋವರದಲ್ಲಿ ನರಿ ಈಜುತ್ತಿತ್ತು. ಆದರೆ ಅಲ್ಲಿ ಮೊಸಳೆ ಮರಿಗಳ ಸುಳಿವೇ ಇಲ್ಲ. ಅನುಮಾನದಿಂದ ನರಿಯನ್ನು ನೋಡಿ, ನನ್ನ ಮರಿಗಳೆಲ್ಲ, ಎಲ್ಲಿ ಎಂದು ಕೇಳಿತು. ನರಿ ಅದಕ್ಕೆ ಉತ್ತರವನ್ನೇ ಕೊಡದೆ ನೀರಿನ ಮೇಲೆ ಸಂತೋಷದಿಂದ ಈಜುತ್ತಿತ್ತು. ಇದರಿಂದ ಮೊಸಳೆಗೆ ತುಂಬಾ ಕೋಪ ಬಂತು. ನನ್ನ ಮಕ್ಕಳನ್ನು ನೀನು ಏನು ಮಾಡಿದೆ ಎಂದು ರೇಗಿ ಕೇಳಿತು. ನೀನು ನನ್ನ ಸ್ನೇಹಿತ

ಎಂದು ಭಾವಿಸಿದ್ದೆ. ಪಾಪಿ, ನೀನು ನನ್ನ ಮರಿಗಳನ್ನು ತಿಂದುಹಾಕಿರಬೇಕು. ನಾನು ನಿನ್ನನ್ನು ಕೊಂದು ತಿಂದು ಹಾಕುತ್ತೇನೆ ಎಂದು ಹೇಳಿ ನರಿಯ ಕಾಲನ್ನು ಹಿಡಿದು ಕೊಂಡಿತು. ನರಿ ಆಗ ನಕ್ಕು ಹೇಳಿತು. "ಏನು ನೀನು ನನ್ನನ್ನು ತಿನ್ನಬೇಕೆ ? ಆದರೆ ನನ್ನ ಕಾಲನ್ನು ಮಾತ್ರ ಹಿಡಿದಿರುವೆ" ಎಂದಿತು. ಆಗ ಮೊಸಳೆ ಅದರ ಹೊಟ್ಟೆಯನ್ನು ಹಿಡಿಯಿತು. ಆಗ ನರಿ ಹಿಂದಿಗಿಂತ ಜೋರಾಗಿ ನಕ್ಕು "ಅದು ಬರೀ ನನ್ನ ಹೊಟ್ಟೆ, ನೀನು ನನ್ನ ಹಿಡಿಯದೆ ಇದ್ದರೆ ಹೇಗೆ ತಿನ್ನುವೆ ?" ಎಂದು ಕೇಳಿತು. ಮೊಸಳೆಗೆ ದಿಕ್ಕೇ ತೋಚದ ಹಾಗೆ ಆಯಿತು. ಅದು ತನ್ನ ಹಿಡಿತವನ್ನು ಸಡಿಲಿಸಿತು. ಜಾಣ ನರಿ ಅದರಿಂದ ಬೇಗ ತಪ್ಪಿಸಿಕೊಂಡು ಹೋಯಿತು. ಮೊಸಳೆ ನರಿಯ ಜಾಣತನವನ್ನು ನೋಡಿ ಪೆಚ್ಚು ಮುಖ ಹಾಕಿಕೊಂಡು ಹಿಂತಿರುಗಿತು. ಅನಾತ್ಮವಸ್ತುವನ್ನು ನಾವು ಎಂದು ಭಾವಿಸದೆ ಇದ್ದರೆ, ನಮ್ಮ ಎಲ್ಲಾ ವೈರಿಗಳಿಂದಲೂ ಪಾರಾಗಬಹುದು.

ನರಮಾಂಸಭಕ್ಷಕರು ಒಂದು ಸಲ ಒಬ್ಬ ಮನುಷ್ಯನನ್ನು ಸೆರೆ ಹಿಡಿದರು. ಅವನನ್ನು ತಿನ್ನಬೇಕೆಂದು ಅವರು ಅವರು ಅವನ ಸುತ್ತಲೂ ನಿಂತರು. ಆದರೆ ಮನುಷ್ಯ ಮೊದಲು ತನ್ನ ಕೃತಕ ಹಲ್ಲನ್ನು ಹೊರಕ್ಕೆ ತೆಗೆದ. ಅನಂತರ ತನ್ನ ಕೃತಕ ಕಾಲನ್ನು ತೆಗೆದ. ನರಮಾಂಸ ಭಕ್ಷಕರು ಇದನ್ನು ನೋಡಿ ಅಂಜಿಕೆಯಿಂದ ತತ್ತರಿಸಿದರು. ಅವನನ್ನು ಏನು ಮಾಡಬೇಕು ? ಅವನು ಬರೀ ಭಾಗಗಳಿಂದ ಆಗಿದ್ದಾನೆ ಎಂದು ಅವನಿಂದ ಓಡಿಹೋದರು. ನಾವು ಅನಾತ್ಮವಸ್ತುವನ್ನು ಅನಾತ್ಮವಸ್ತುವಿನಂತೆ ನೋಡಿದರೆ ನರಮಾಂಸಭಕ್ಷಕರು ಅಂಜಿ ಓಡಿಹೋದಂತೆ ಇವರೂ ಓಡಿಹೋಗುವರು. ಆತ್ಮ ಅನಾತ್ಮವಸ್ತುವನ್ನು ಬೇರ್ಪಡಿಸಬೇಕು. ಅವುಗಳ ವಿಷಯದಲ್ಲಿ ಎಂದಿಗೂ ಮೋಸಹೋಗಬಾರದು. ನಾವು ವಿಭಜನೆ ಮಾಡುವಾಗ ನಾನು, ಮತ್ತು ನಾನಲ್ಲದೆ ಇರುವುದನ್ನು ಬೇರ್ಪಡಿಸಬೇಕು. ನಾನಲ್ಲದೆ ಇರುವ ವಸ್ತುವಿನ ಕೆಳಗೆ ನಮಗೆ ಕಾಣುವ ಪ್ರಪಂಚದ ಸರ್ವಸ್ವವೂ ಬರುವುದು. ನಾನು ಎಂಬುದೊಂದೇ ಇಡೀ ವಿಶ್ವಕ್ಕೆ ದೃಗ್. ಅದರಲ್ಲೆ ಬ್ರಹ್ಮಾಂಡ ನೆಲೆಸಿರುವುದು. ನಾವು ಪ್ರಪಂಚದಲ್ಲಿ ನೋಡುವುದೆಲ್ಲ ದೃಶ್ಯ. ಇದರಲ್ಲಿ ನಾನು ಯಾರು ಎಂಬುದನ್ನು ಕಂಡುಹಿಡಿಯಿರಿ. ಇದೇ ಆತ್ಮ ವಿಭಜನೆ, ನಾವು ಬದುಕಿರುವುದೇ ನಿಜವಾದ ನನ್ನನ್ನು ಪತ್ತೆ ಮಾಡುವುದಕ್ಕೆ.

ಜ್ಞಾನಯೋಗದ ಅಭ್ಯಾಸದಲ್ಲಿ ಮುಂದೆ ಹೋದರೆ, ಈ ವಿಭಜನೆ ಮತ್ತೂ ಸೂಕ್ಷ್ಮವಾದ ವಸ್ತುಗಳ ಆಳಕ್ಕೆ ನಮ್ಮನ್ನು ಕರೆದುಕೊಂಡು ಹೋಗುವುದು. ಮೊದಲು ಸ್ಥೂಲ ದೇಹ ಮತ್ತು ಅದರ ಕ್ರಿಯೆಗಳಿಂದ ತನ್ನನ್ನು ಸೆಳೆದುಕೊಳ್ಳುವನು. ಅನಂತರ ಮನಸ್ಸಿನಿಂದಲೂ ತನ್ನನ್ನು ಸೆಳೆದುಕೊಳ್ಳುವನು. ಇನ್ನೂ ಮುಂದೆ ಹೋದರೆ ಕೊನೆಯ ಉಪಾಧಿಯಾದ ಅಹಂಕಾರಕ್ಕೆ ಬರುವನು. ಇದೇ ಎಲ್ಲಾ ವ್ಯಥೆಗೂ ಮೂಲ. ಅದೂ ಕೂಡ ಇವನ ವಿಭಜನೆಗೆ ತುತ್ತಾಗುವುದು. ಕೊನೆಗೆ ಅವನಿಗೆ ತನ್ನ ಆತ್ಮದ ಪ್ರತ್ಯಕ್ಷಜ್ಞಾನವಾಗುವುದು.

ಇವುಗಳನ್ನು ಪಡೆಯಬೇಕಾದರೆ ತುಂಬಾ ಸಾಧನೆ ಮಾಡಬೇಕು. ಈಗ ನಾವು ತಿಳಿದುಕೊಂಡಿರುವ ಸ್ಥಿತಿಯಿಂದ ಅಭ್ಯಾಸ ಪ್ರಾರಂಭವಾಗಬೇಕು. ಅನಂತರ ಈಗ ನಮಗೆ

ಗೊತ್ತಾಗದೆ ಇರುವ ಕಡೆಗೆ ಮುಂದೆ ಮುಂದೆ ಹೋಗಬೇಕು. ಹೊರಗಡೆಯ ಕೋಶವಾದ ದೇಹದಿಂದ ಪ್ರಾರಂಭಿಸಿ. ಅನಂತರ ನಿಮ್ಮ ಮನಸ್ಸಿನ ಆಳ ಆಳಕ್ಕೆ ಹೋದರೆ ನಿಮ್ಮ ಆತ್ಮನಾದ ಬಹ್ಮನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವಿರಿ. ಈ ವಿಮರ್ಶೆಯೇ ನಿಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗುವುದು.

ವೈರಾಗ್ಯದಿಂದಲೆ ತ್ಯಾಗ. ಇಲ್ಲಿ ಅನಾಸಕ್ತಿ ಮತ್ತು ಅನಾದರ ತೀವ್ರವಾಗಿದೆ. ವೈರಾಗ್ಯದಿಂದಲೇ ನಿಜವಾದ ಜ್ಞಾನ ಬರಬೇಕಾದರೆ. ಆ ಜ್ಞಾನ ನಮಗೆ ಬಂದರೆ, ಇಂದ್ರಿಯ ವಸ್ತುಗಳಿಂದ ಸ್ವಾಭಾವಿಕವಾಗಿ ಮನಸ್ಸು ಹಿಮ್ಮುಖವಾಗುವುದು. ಅನಂತರವೇ ಬ್ರಹ್ಮಪ್ರಾಪ್ತಿ. ಇದಾದ ನಂತರವೇ ಶಾಂತಿ.

ಒಂದು ದಿನ ಹಕ್ಕಿಯೊಂದು ಸರೋವರದ ಒಳಗೆ ಹೋಗಿ ಮೀನನ್ನು ಹಿಡಿಯಿತು. ಆ ಸರೋವರದ ಸುತ್ತಲೂ ಹಲವು ಹಕ್ಕಿಗಳು ಇದ್ದವು. ಮೊದಲನೆ ಹಕ್ಕಿಗೆ ಮೀನು ಸಿಕ್ಕಿದ ತಕ್ಷಣವೇ ಉಳಿದ ಹಕ್ಕಿಗಳು ಅದನ್ನು ಮುತ್ತಿದವು. ಅದರಿಂದ ಪಾಲನ್ನು ಪಡೆಯುವುದಕ್ಕೆ, ಮೀನಿನೊಡನೆ ಎಲ್ಲಿ ಹಾರಿಹೋದರೂ ಉಳಿದವು ಅದನ್ನು ಬಿಡಲಿಲ್ಲ. ಅದಕ್ಕೆ ದೊಡ್ಡ ಹಿಂಸೆಯಾಯಿತು. ನಾನು ಮೀನು ಹಿಡಿಯುವುದಕ್ಕೆ ಮುಂಚೆ ಎಷ್ಟು ಸುಖಿಯಾಗಿದ್ದೆ ಎಂದು ಭಾವಿಸಿತು. ಈಗ ಇತರ ಹಕ್ಕಿಗಳು ನನ್ನ ಜೀವನವನ್ನು ಹಿಂಸಿಸುತ್ತಿವೆ. ಅದಕ್ಕೆ ಜುಗುಪ್ಸೆ ಬಂದು ಮೀನನ್ನು ಬಿಸುಟಿತು. ಮತ್ತೊಂದು ಹಕ್ಕಿ ಆ ಮೀನನ್ನು ಹಿಡಿದುಕೊಂಡಿತು. ಉಳಿದ ಹಕ್ಕಿಗಳು, ಅದನ್ನು ಅಟ್ಟಿಸಿಕೊಂಡು ಹೋದುವು. ಮೊದಲನೆ ಹಕ್ಕಿ ಸರೋವರದ ದಡದಲ್ಲಿ ತೆಪ್ಪನೆ ಕುಳಿತಿತ್ತು. ಅದು ಬೇಕಾದರೆ ಅದನ್ನು ಅಟ್ಟಿಸಿಕೊಂಡು ಹೋಗಲಿ. ಈಗ ನಾನು ಅದನ್ನು ತ್ಯಜಿಸಿಬಿಟ್ಟಿದ್ದೇನೆ ಎಂದುಕೊಂಡಿತು.

ತ್ಯಾಗ ಎಂದರೆ ಎಲ್ಲದರಿಂದ ಅನಾಸಕ್ತನಾಗಿ ದೂರ ನಿಲ್ಲುವುದು. ಈ ಅನಾಸಕ್ತಿ ಆಂತರಿಕವಾಗಿರಬಹುದು, ಬಾಹ್ಯಿಕವಾಗಿರಬಹುದು, ಅಥವಾ ಎರಡೂ ಒಟ್ಟಿಗೆಯೂ ಇರಬಹುದು. ಇದು ಬಾಹ್ಯಿಕವಾಗಿದ್ದರೆ, ಇದು ನಿಮ್ಮದು, ನಿಮ್ಮ ಮನೆ, ನಿಮ್ಮ ಸಂಸಾರ ಎಂದು ಹೇಳಿಕೊಳ್ಳುವುದಕ್ಕೆ ಏನೂ ಇರುವುದಿಲ್ಲ. ಇದೊಂದೇ ಅಲ್ಲ ಯಾರೂ ನಿಮಗೆ ಇದನ್ನು ಕೊಡುವುದಕ್ಕೆ ಇಚ್ಛಿಸುವುದಿಲ್ಲ. ಕೆಲವರು ಬಾಹ್ಯದಲ್ಲಿ ತ್ಯಜಿಸಿದ್ದರೂ ಅವರು ಗುರಿಯನ್ನು ಮುಟ್ಟಿರುವುದಿಲ್ಲ. ಕೆಲವರು ತಮ್ಮ ಮನಸ್ಸಿನಲ್ಲಿ ಅದನ್ನು ತ್ಯಜಿಸಿರುವರು, ಹೊರಗಿನಿಂದ ಅಲ್ಲ. ಅವರ ಸುತ್ತಲೂ ಎಲ್ಲಾ ವಿಧವಿಧವಾದ ಪ್ರಾಪಂಚಿಕ ವಸ್ತುಗಳು ಇರಬಹುದು. ಆದರೂ ಅವರು ಅನಾಸಕ್ತರಾಗಿರುತ್ತಾರೆ. ಇಂತಹ ಜನ ಅತ್ಯಂತ ವಿರಳ. ಮತ್ತೆ ಕೆಲವರು ಬಾಹ್ಯದಲ್ಲಿ ಮತ್ತು ಮನಸ್ಸಿನಲ್ಲಿ ಇವುಗಳನ್ನು ತ್ಯಜಿಸಿರುತ್ತಾರೆ. ಶಿವನ ಆದರ್ಶವೇ ಇದಕ್ಕೆ ದೊಡ್ಡ ಉದಾಹರಣೆ. ಅವನು ಏಕಾಂತ ಪ್ರಿಯನಾದ ಯೋಗಿ, ಅವನು ಯಾವುದನ್ನೂ ತನ್ನದು ಎಂದು ಹೇಳಿಕೊಳ್ಳುವುದಿಲ್ಲ. ನಾಲ್ಕು ದಿಕ್ಕುಗಳೇ ಅವನಿಗೆ ಬಟ್ಟೆ. ಅವನಲ್ಲಿ ಏನೂ ಇಲ್ಲ, ಆದರೂ ಪ್ರಪಂಚಕ್ಕೆ ಒಡೆಯ. ವೈರಾಗ್ಯದಿಂದ ಮಾತ್ರ ಒಬ್ಬ ಬಾಹ್ಯ ಮತ್ತು ಆಂತರಿಕವಾದುದನ್ನು ತ್ಯಜಿಸಬಲ್ಲ.

ನಾವುಗಳೆಲ್ಲರೂ ಕೂಡ ಸಾಧಕರಾಗಿದ್ದೇವೆ. ನಮ್ಮ ವಿಚಾರಶಕ್ತಿಯಿಂದ ಬ್ರಹ್ಮ

ನೆಂದರೆ ಏನು ಎಂಬುದನ್ನು ಸ್ವಲ್ಪಮಟ್ಟಿಗೆ ತಿಳಿದುಕೊಂಡಿದ್ದೇವೆ ಎಂದು ಭಾವಿಸೋಣ. ಆ ಬ್ರಹ್ಮನೊಂದೇ ಸತ್ಯ, ಸುತ್ತಲೂ ನಾವು ನೋಡುವುದೆಲ್ಲ ತೋರಿಕೆ ಎಂದು ನಂಬುತ್ತೇವೆ. ಈಗ ನಮ್ಮ ಗುರಿ ಏನು ? ಮಾಯಾಪಾಶದಿಂದ ಪಾರಾಗಬೇಕು. ಬ್ರಹ್ಮನೊಬ್ಬನೇ ಎಲ್ಲಾ ಬದಲಾವಣೆಗಳ ಹಿಂದೆ ಇರುವನು ಎಂಬುದನ್ನು ಪದೇಪದೇ ಜ್ಞಾಪಿಸಿಕೊಳ್ಳುವುದಕ್ಕೆ ಯತ್ನಿಸಬೇಕು. ನಾವು ಒಂದು ವ್ಯಕ್ತಿಯಲ್ಲಿ ಬ್ರಹ್ಮನನ್ನು ನೋಡುವುದು ಎಂದರೆ, ಮುಂಚೆಮುಂಚೆ, ನಮಗೆ ಅವನು ಕಾಣುವುದಿಲ್ಲ. ಪಂಚಭೂತಗಳಿಂದ ಆದ ದೇಹ ಒಂದೇ ಕಾಣುವುದು ಎಂದು ಹೇಳುತ್ತೇವೆ. ನಾವು ಮಾಂಸಮಯವಾದ ದೇಹ ಎಂಬ ಭಾವನೆಯಿಂದ ಪಾರಾಗಬೇಕು. ನಮಗೆ ಏನು ಈಗ ಕಾಣುತ್ತಿದೆಯೋ ಅದನ್ನೆಲ್ಲ ನಾವು ನೋಡಬೇಕೆಂದಿರುವುದು ಎಂದು ನಾವು ವೈರಾಗ್ಯವನ್ನು ರೂಢಿಸಬೇಕು. ನಾವು ಹೀಗೆ ಪದೇಪದೇ ಪ್ರಯತ್ನಮಾಡುತ್ತಿದ್ದರೆ ಸತ್ಯವನ್ನು ಮುಚ್ಚಿರುವ ವೈಷಯಿಕ ವಸ್ತುವಿನ ಮೇಲೆ ನಮಗೆ ಜುಗುಪ್ಸೆ ಹುಟ್ಟುವುದು. ಬರೀ ಬಲಾತ್ಕಾರದಿಂದಲೇ ಮಾಯೆಯಿಂದ ನೀವು ಪಾರಾಗಲು ಯತ್ನಿಸಿದರೆ ನಾನು ನಿಮ್ಮಲ್ಲಿ ತಪ್ಪು ಕಂಡುಹಿಡಿಯುವುದಿಲ್ಲ. ಗುರುಗಳು ಇದನ್ನು ಒತ್ತಿ ಹೇಳುತ್ತಾರೆ. ಈ ದೇಹವನ್ನು ಅವರು ಸ್ಥೂಲ, ಅನಿಷ್ಟ, ಹೆಣದಂತೆ ಎಂದು ನಿಕೃಷ್ಟವಾಗಿ ಕಾಣುವರು. ಯಾವಾಗ ಈ ಪ್ರಪಂಚವನ್ನು ಮಾಯ ಎನ್ನುತ್ತಾರೋ ಆಗ ಅದನ್ನು ತ್ಯಜಿಸುವುದು ಯೋಗ್ಯವೇ ಆಗಿದೆ. ನಮ್ಮನ್ನು ಮುತ್ತಿರುವ ಮಾಯೆಯ ಮೇಲೆ ಜುಗುಪ್ಸೆ ಹುಟ್ಟುವುದಕ್ಕಾಗಿ ಅವರು ಹೀಗೆ ಬೋಧನೆ ಮಾಡಿದ್ದಾರೆ. ನಮ್ಮಲ್ಲಿ ತೀವ್ರವಾದ ವೈರಾಗ್ಯ ಹುಟ್ಟಿ ಇದನ್ನು ತ್ಯಜಿಸಲಿ ಎಂಬುದಕ್ಕಾಗಿ ಹೀಗೆ ಹೇಳಿರುವರು.

ಒಬ್ಬ ದೇಹದಲ್ಲಿ ಅತ್ಯಾಸಕ್ತನಾಗಿದ್ದರೆ, ಇದರ ವಿಷಯದಲ್ಲಿ ಅವನಲ್ಲಿ ಅಪನಂಬಿಕೆ ಹುಟ್ಟುವಂತೆ ಮಾಡಬೇಕು. ಈ ದೇಹವನ್ನು ಏತಕ್ಕೆ ಶಾಶ್ವತ ಎಂದು ಭಾವಿಸಬೇಕು ? ನಮಗೆ ಜೀವನ ಎಂದರೆ, ನಾವು ಗಂಡಸರೋ ಹೆಂಗಸರೊ ಆಗಿದ್ದೇವೆ, ಅವರಿಗೆ ಜೀವನದಲ್ಲಿ ಕೆಲವು ವಸ್ತುಗಳಿವೆ, ಅವರಿಗೆ ಕೆಲವು ಗೌರವಸ್ಥಾನಮಾನಗಳು ಬದಲಾಯಿಸದೆ ಇರುತ್ತವೆ ಎಂದು ಭಾವಿಸುತ್ತೇವೆ. ಅದಕ್ಕಾಗಿಯೇ ಇವುಗಳನ್ನೆಲ್ಲ ನಾವು ಸ್ಥಿರ ಎಂದು ಭಾವಿಸುತ್ತೇವೆ. ಆದರೆ ನಮಗೆ ಕೆಲವು ಅನುಭವಗಳಾಗಿ ನಮ್ಮ ಈಗಿನ ಸ್ಥಿತಿಯನ್ನು ಬದಲಾಯಿಸಿದರೆ, ಆಗ ಇವು ಸುಳ್ಳು ಎಂದು ಭಾವಿಸುತ್ತೇವೆ. ನಮಗೆ ಐದು ಇಂದ್ರಿಯಗಳಿವೆ. ನಮಗೆ ನಾಳಿನಿಂದ ಆರನೆ ಒಂದು ಇಂದ್ರಿಯ ಬರುತ್ತದೆ ಎಂದು ಭಾವಿಸೋಣ. ಆಗ ನಮಗೆ ಕಾಣುವ ಪ್ರಪಂಚವೇ ಬೇರೆ ಆಗುವುದು. ನಾವು ಈಗ ಪಂಚೇಂದ್ರಿಯದ ಪ್ರಪಂಚದಲ್ಲಿ ಸಂಚರಿಸುತ್ತಿರುವೆವು. ನಮಗೆ ಆರನೆಯ ಇಂದ್ರಿಯ ಬಂದರೆ ನಮ್ಮ ಅನುಭವ ಕೇಂದ್ರ ಬದಲಾಯಿಸುವುದು.

ಈ ನಮ್ಮ ದೇಹ ನಮ್ಮನ್ನು ನಮಗೆ ಅರಿಯದ ಸಾಗರದ ಆಚೆ ಕರೆದುಕೊಂಡು ಹೋಗುವುದು ಎಂದು ಭಾವಿಸುತ್ತೇವೆ. ಈ ಅಜ್ಞಾತ ಸಾಗರದ ಮೇಲೆ ತೇಲುತ್ತಿರುವಾಗ ಈ ದೇಹವೆಂಬ ಸಣ್ಣ ದೋಣಿಗೆ ನಾವು ಅಂಟಿಕೊಂಡು ಇರುವೆವು. ಅದು ಎಂಥ ಅಧೋಗತಿಗೆ ಬಂದಿದ್ದರೂ, ನಾನು ಎಲ್ಲಿಂದ ಬಂದೆನೊ ಗೊತ್ತಿಲ್ಲ, ನಾನು ಎಲ್ಲಿಗೆ ಹೋಗುವೆನೋ

ಅದೂ ಗೊತ್ತಿಲ್ಲ. ಆದರೆ ಈ ಸಣ್ಣ ದೋಣಿಯ ಸಹಾಯದಿಂದ ಹೇಗೋ ಪಾರಾಗುವೆ ಎಂದು ಭಾವಿಸುವೆವು. ಈ ದೇಹ ಸ್ಥಿರವಲ್ಲ, ಸತ್ಯವಲ್ಲ, ನಾವು ಭಾವಿಸಿದಂತೆ ಇಲ್ಲ ಎಂದಾಗ ನಾವು ದಿಗ್ಭ್ರಾಂತರಾಗುವೆವು. ಆದರೆ ನಾವು ಸಮಾಧಾನದಿಂದ ಸತ್ಯವನ್ನು ಕೇಳಿ ಅದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನಿಸಿದರೆ, ಆಗ ದೇಹ, ಬುದ್ಧಿ, ಮನಸ್ಸಿನ ಪಾತ್ರಗಳು ಏನು ಎಂಬುದನ್ನು ಅರ್ಥಮಾಡಿಕೊಳ್ಳುತ್ತೇವೆ. ಆಗ ನಾವು ಇಷ್ಟೊಂದು ಆಸಕ್ತರಾಗಿರುವ ದೇಹ ದೋಣಿಯ ಸ್ವಭಾವವೇನು ಎಂಬುದು ಗೊತ್ತಾಗುವುದು. ಗುರು ನಮ್ಮನ್ನು ಅಜ್ಞಾನದಿಂದ ಹೊರಬರುವಂತೆ ಮಾಡುವುದಕ್ಕೆ ತತ್ತರಿಸುವ ಬೋಧನೆಯನ್ನು ಮಾಡುತ್ತಾನೆ. ಇದರಿಂದ ನಿಜವಾದ ಆತ್ಮನ ಸ್ವಭಾವ ಅರಿವಾಗುವುದು. ಅದಕ್ಕಾಗಿಯೇ ನಮ್ಮ ಈ ದೇಹ ಇಂದ್ರಿಯ ಮನಸ್ಸು ಇವುಗಳನ್ನು ವಿಭಜನೆ ಮಾಡಿ ಎಂದು ಹೇಳುತ್ತಾನೆ. ಕ್ರಮೇಣ ಶಿಷ್ಯ ಪ್ರಪಂಚದ ಕ್ಷಣಿಕ ವಸ್ತುಗಳ ಮೇಲೆ ವೈರಾಗ್ಯವನ್ನು ತಾಳುವನು. ಈ ದೇಹಮನಸ್ಸುಗಳನ್ನು ಹೊಂದಿದ ಸಣ್ಣ ದೋಣಿ ನಮ್ಮನ್ನು ಸಂಸಾರಸಾಗರದಿಂದ ಪಾರು ಮಾಡಲಾರದು ಎಂಬುದನ್ನು ಅರಿತು, ಅಂತರತಮನಾಗಿ ಆತ್ಮಸಾಕ್ಷಾತ್ಕಾರಕ್ಕೆ ಪ್ರಯತ್ನಿಸುತ್ತಾನೆ.

ಸಾಧಾರಣ ಮನುಷ್ಯನಿಗೆ ಈ ನಮ್ಮ ದೇಹ ಮತ್ತು ಮನಸ್ಸಿನ ಹಿಂದೆ ಎಂತಹ ನಿಧಿ ಇದೆ ಎಂಬುದು ಗೊತ್ತಿಲ್ಲ. ಅವನಿಗೆ ಹೊರಗಿನ ಮುಚ್ಚಳದ ಮೇಲೆಯೇ ಆಕರ್ಷಣೆ, ಅವನನ್ನು ಅಂತರ್ಮುಖನನ್ನಾಗಿ ಮಾಡುವುದು ತುಂಬಾ ಕಷ್ಟ. ನಿಮ್ಮ ಒಬ್ಬ ಸ್ನೇಹಿತನ ಬಳಿ, ಒಂದು ವಜ್ರದ ಪೆಟ್ಟಿಗೆ ಇದೆ ಎಂದು ಭಾವಿಸೋಣ. ಆ ಪೆಟ್ಟಿಗೆಯಲ್ಲಿ ವಜ್ರ ಇದೆ. ಆದರೆ ಅದು ಅವನಿಗೆ ಗೊತ್ತಿಲ್ಲ. ಆ ಪೆಟ್ಟಿಗೆ ಎಷ್ಟು ಚೆನ್ನಾಗಿದೆ ಎಂದು ಅವನು ಚರ್ಚಿಸುತ್ತಾನೆಯೆ ಹೊರತು, ಅದರೊಳಗೆ ಇರುವ ವಜ್ರವೇ ಅವನ ಅರಿವಿಗೆ ಬಂದಿಲ್ಲ. ಆದರೆ ನಿಮಗೆ ಗೊತ್ತಿದೆ, ಒಳಗೆ ಇರುವ ವಜ್ರದಿಂದ ಪೆಟ್ಟಿಗೆಗೆ ಪ್ರಾಧಾನ್ಯ ಬಂದಿದೆ ಎಂಬುದು. ನಿಮ್ಮ ಸ್ನೇಹಿತನ ದೃಷ್ಟಿ ಆ ಪೆಟ್ಟಿಗೆಯ ಸೌಂದರ್ಯಕ್ಕೆ ಮನಸೋತು, ಸಂಕುಚಿತವಾಗಿದೆ. ಅವನಿಗೆ ಬೇರೇನೂ ಬೇಡ.

ನೀವು ಅವನಿಗೆ ಸತ್ಯವನ್ನು ತಿಳಿಸಬೇಕಾದರೆ ಹೇಗೆ ಮಾಡುತ್ತೀರಿ ? ಅವನು ಪೆಟ್ಟಿಗೆ ಎಂದರೆ ಏನೆಂದು ಭಾವಿಸುವನೊ, ಅದರ ದೊಡ್ಡಸ್ಥಿಕೆಯನ್ನು ಬಿಡಿಸಬೇಕಾಗಿದೆ. ಅವನಿಗೆ, ನೀನು ಪೆಟ್ಟಿಗೆ ಎಂದರೆ ಇಷ್ಟೊಂದು ಆಸಕ್ತನಾಗಿರುವೆಯಲ್ಲ, ನೋಡು ಅದರಲ್ಲಿ ಬಿರುಕು ಇದೆ. ನೀನು ಭಾವಿಸುವಷ್ಟು ಇದು ಚೆನ್ನಾಗಿಲ್ಲ. ಅದನ್ನು ನಿಜವಾದ ದಂತದಿಂದ ಮಾಡಿದ್ದಾರೆ ಎಂದು ಭಾವಿಸಿದೆಯೇನು ? ಇಲ್ಲ. ಅದು ಬರೀ ನಕಲು ದಂತ ಎನ್ನಬೇಕು. ಅವನಿಗೆ ಪೆಟ್ಟಿಗೆ ವಿಷಯದಲ್ಲಿ ಸಂದೇಹ ಬರುವಂತೆ ಮಾಡಬೇಕು, ಅನುಮಾನ ಬರುವಂತೆ ಮಾಡಬೇಕು. ಹೀಗೆ ಮಾಡಿದರೆ ಅವನಿಗೆ ಸಹಾಯ ಮಾಡಿದಂತೆ ಆಗುವುದು. ಅವನು ಪೆಟ್ಟಿಗೆಯನ್ನು ದ್ವೇಷಿಸಬೇಕು ಎಂಬುದಲ್ಲ ನಮ್ಮ ದೃಷ್ಟಿ. ಇದರಿಂದ ಅವನಿಗೇನೂ ಪ್ರಯೋಜನವಿಲ್ಲ. ನೀವು ಅವನಿಗೆ ಪೆಟ್ಟಿಗೆಗಿಂತ ಬೆಲೆಬಾಳುವ ವಸ್ತು. ಅದರಲ್ಲಿದೆ, ಆದರೆ ಅವನಿಗೆ ಅದು ಗೊತ್ತಿಲ್ಲ ಎಂಬುದನ್ನು ಹೇಳಬೇಕು. ಅದಕ್ಕಾಗಿಯೇ ಅವನು ಈಗ

ಯಾವುದನ್ನು ಮುದ್ದಿಸುತ್ತಿರುವನೋ ಅದರ ಮೇಲೆ ಅನಾದರ ಹುಟ್ಟುವಂತೆ ಮಾಡುತ್ತಾರೆ. ಮಹಾಗುರುಗಳು ನಮಗೆ ಮಾಡುವುದೇ ಇದನ್ನು. ಅವರು ನಮಗೆ ನಮ್ಮ ದೇಹ ಮನಸ್ಸು ಮುಂತಾದವುಗಳ ದೋಷವನ್ನು ತೋರುತ್ತಾರೆ. ಏಕೆಂದರೆ ಅದರ ಒಳಗೆ ಅದಕ್ಕಿಂತ ಮಿಗಿಲಾದ ಬೆಲೆಯುಳ್ಳ ವಸ್ತು ಇದೆ, ನಮ್ಮನ್ನು ಸಂಸಾರ ಸಾಗರದಿಂದ ಪಾರು ಮಾಡಬಲ್ಲದು ಅದು ಎಂಬುದನ್ನು ಬೋಧಿಸುತ್ತಾರೆ.

ನೀವು ನಿಜವಾಗಿ ಏನನ್ನೂ ಬಿಡಲಾರಿರಿ. ನೀವು ಶೂನ್ಯದಲ್ಲಿ ಇರಲಾರಿರಿ. ನೀವು ಮತ್ತೊಂದು ಉತ್ತಮವಾದ ವಸ್ತುವಿಗೆ ಸ್ಥಳ ಮಾಡುವುದಕ್ಕೆ ಆಗಲೆ ಅಲ್ಲಿರುವುದನ್ನು ಅತ್ತ ಸರಿಸುತ್ತೀರಿ. ನೀವು ಬ್ರಹ್ಮನನ್ನು ಕರೆದುಕೊಂಡು ಬರಬೇಕೆಂದಿರುವಿರಿ. ಆದರೆ ಒಳಗೆ ಏನೇನೋ ಇದೆ, ಸ್ಥಳವೇ ಇಲ್ಲ. ಅದಕ್ಕಾಗಿಯೇ ಬ್ರಹ್ಮನಿಗಾಗಿ ಕೆಲವು ವಸ್ತುಗಳನ್ನೆಸೆದು, ಅದಕ್ಕೆ ಸ್ಥಳ ಮಾಡುತ್ತೇವೆ. ನಾವು ಮತ್ತೊಂದು ವಸ್ತುವಿಗೆ ಆಸಕ್ತರಾಗಿ ಈಗ ಆಸಕ್ತರಾಗಿರುವ ವಸ್ತುವನ್ನು ಬಿಡಬೇಕಾಗಿದೆ. ರೂಮಿಗೆ ಬೆಳಕು ಬಂದರೆ ಕತ್ತಲೆ ಹೋಗುವುದು. ನೀವು ಬೆಳಕು ಬರುವಂತೆ ಮಾಡಬೇಕು. ನಮ್ಮ ಮನಸ್ಸು ಬುದ್ಧಿ ಅಹಂಕಾರಗಳಿಗೆ ಅಂಟಿಕೊಂಡಿರುವ ಮನಸ್ಸನ್ನು ತೆಗೆದು, ಬ್ರಹ್ಮನ ಮೇಲೆ ಆಸಕ್ತನಾಗುವಂತೆ ಮಾಡಬೇಕು. ಅದನ್ನು ಮಾಡಬೇಕಾದರೆ ವಸ್ತುವಿನ ಯೋಗ್ಯತೆ ಗೊತ್ತಿರಬೇಕು. ಇದರಿಂದಲೇ ನಮಗೆ ವೈರಾಗ್ಯ ಬರುವುದು.

ಅಹಂಕಾರ ಸಾಕ್ಷಿಯೊಂದಿಗೆ ಸೇರಬೇಕು. ಸಾಕ್ಷೀಭೂತನಾದ ಆತ್ಮನೆ, ದೇಹ, ಮನಸ್ಸು, ಬುದ್ಧಿ ಇಂದ್ರಿಯಗಳೊಂದಿಗೆ ಸೇರದೆ, ಅದನ್ನೆಲ್ಲ ನೋಡುತ್ತಿರುವುದು. ನಾನು ನಿಮ್ಮನ್ನು ನೋಡುತ್ತಿರುವಾಗ, ಯಾರೊ ನನ್ನನ್ನು ನೋಡುತ್ತಿರುವರು ಎಂಬ ಜ್ಞಾನ ಇದೆ. ಅದು ನೋಡುವುದಾಗಲಿ, ಕೇಳುವುದಾಗಲಿ, ಯಾವುದರೊಂದಿಗೂ ಭಾಗವಹಿಸುವುದಿಲ್ಲ.

ನಮ್ಮಲ್ಲಿ ಪ್ರತಿಯೊಬ್ಬರಲ್ಲಿಯೂ ಈ ಸಾಕ್ಷೀಭೂತನಿರುವನು. ನೀವು ಗೋಪುರದ ಮೇಲೆ ನಿಂತುಕೊಂಡು ಕೆಳಗೆ ಕೊಂಡು ಮಾರುತ್ತಿರುವ ಸಂತೆಯನ್ನು ನೋಡುತ್ತಿರುವಂತೆ ಅದು. ನೀವು ಮೇಲಿನಿಂದ ಎಲ್ಲವನ್ನೂ ನೋಡುತ್ತೀರಿ. ಆದರೆ ಯಾವುದರೊಂದಿಗೂ ಭಾಗವಹಿಸುವುದಿಲ್ಲ. ಅದರಂತೆಯೇ, ನಿಮ್ಮಲ್ಲಿ ಅಂತಹ ಸಾಕ್ಷಿ ಇರುವನು. ಅವನು ಯಾವ ಚಟುವಟಿಕೆಯಲ್ಲಿ ಭಾಗವಹಿಸುವುದಿಲ್ಲ. ನೀವು ಗಮನಕೊಟ್ಟರೆ ಇದನ್ನು ನೋಡಬಹುದು. ಅದು ನಿಮ್ಮ ದೇಹ ಮತ್ತು ಮನಸ್ಸಿನಲ್ಲಿ ಏಳುವ ಆಲೋಚನೆ, ಭಾವನೆ, ವೇದನೆ ಇವುಗಳನ್ನೆಲ್ಲಾ ನೋಡುತ್ತಿರುವುದು. ಕೆಲವುವೇಳೆ ನಿಮಗೆ ಚಳಿ ಆಗಬಹುದು, ಬಿಸಿ ಆಗಬಹುದು. ಕೆಲವು ವೇಳೆ ನಿಮಗೆ ಸಂತೋಷವಾಗಬಹುದು, ಕೆಲವು ವೇಳೆ ದುಃಖವಾಗಬಹುದು. ಆದರೆ ಆ ಸಾಕ್ಷೀಭೂತನಾದ ಆತ್ಮನಾದರೋ ಇವುಗಳನ್ನೆಲ್ಲಾ ನೋಡುತ್ತಿದೆ. ಅದಕ್ಕೆ ಚಳಿಯೂ ಇಲ್ಲ, ಬಿಸಿಲೂ ಇಲ್ಲ, ಸುಖವೂ ಇಲ್ಲ, ದುಃಖವೂ ಇಲ್ಲ. ಬೌದ್ಧಿಕವಾಗಿ ಇದನ್ನು ಕುರಿತು ಚಿಂತನೆ ಮಾಡುವುದಕ್ಕೂ ಅನೇಕರಿಗೆ ಸಾಧ್ಯವಿಲ್ಲ. ಆದರೆ ಅದು ಇದೆ.

ಆ ಸಾಕ್ಷಿ ನಾವು ಮಾಡುವ ಯಾವ ಕೆಲಸದಲ್ಲಿಯೂ ಭಾಗವಹಿಸುವುದಿಲ್ಲ. ಅದು

ಸುಮ್ಮನೆ ನೋಡುತ್ತಿರುವುದು. ಅದು ಮನಸ್ಸನ್ನೇ ನೋಡುತ್ತಿದೆ. ಅದು ಈಗ ಏನುಮಾಡುತ್ತಿದೆ? ಮನಸ್ಸನ್ನು ಒಬ್ಬ ಮನೆಯಿಂದ ಮನೆಗೆ ಮಾರಾಟಮಾಡುತ್ತಿರುವ ವ್ಯಾಪಾರಿಯಂತೆ ಭಾವಿಸಿ. ಅವನಿಗೆ ಲಾಭನಷ್ಟದ ಯೋಚನೆಯೇ ಯಾವಾಗಲೂ. ಅದು ಕೆಲವುವೇಳೆ ಬಣ್ಣದ ಮನೆಯಬಾಗಿಲು ತಟ್ಟುವುದು. ಕೆಲವುವೇಳೆ ರುಚಿಯ ಮನೆಯಬಾಗಿಲನ್ನು ತಟ್ಟುವುದು, ಕೆಲವುವೇಳೆ ಸ್ಪರ್ಶದ ಮನೆ ಬಾಗಿಲನ್ನು ತಟ್ಟುವುದು. ನೀವು ಹಾಗೆಯೇ ಮನಸ್ಸನ್ನು ನೋಡಿದರೆ, ಶಬ್ದ, ರಸ, ರೂಪು, ಸ್ಪರ್ಶ, ಗಂಧವೆಂಬ ಪಂಚೇಂದ್ರಿಯಗಳ ಬಾಗಿಲನ್ನು ಅವನು ತಟ್ಟುತ್ತಿರುವನು. ಈ ಗಿರಾಕಿಗಳೊಂದಿಗೆ ವ್ಯವಹಾರಮಾಡುತ್ತಾ ತನ್ನ ಬಹುಪಾಲು ಶಕ್ತಿಯನ್ನು ಕಳೆದುಕೊಳ್ಳುತ್ತಿರುವನು.

ಈ ವ್ಯಾಪಾರಿ ಯಾವಾಗಲೂ ಕೇಳುತ್ತ ಮಾರುತ್ತ ಇರುತ್ತಾನೆಯೇ ? ಅವನಿಗೆ ಬೇಜಾರೇ ಆಗುವುದಿಲ್ಲವೆ ? ಅವನಿಗೆ ಮನೆ ಇಲ್ಲವೆ ? ಯಾವಾಗಲೂ ಇಂದ್ರಿಯಗಳ ಬಾಗಿಲನ್ನು ತಟ್ಟುತ್ತಿರುವ ನಮ್ಮ ಮನಸ್ಸನ್ನು ಕೇಳಿ, ಅದಕ್ಕೇನಾದರೂ ಮನೆಗೆ ಬಂದು ವಿಶಾಂತ್ರಿಯನ್ನು ಅನುಭವಿಸಬೇಕೆಂಬ ಇಚ್ಛೆ ಇಲ್ಲವೆ ಎಂದು. ಹೌದು ಅದಕ್ಕೇನೋ ಹೋಗಬೇಕೆಂಬ ಇಚೆ ಇದೆ. ಅದನ್ನು ಸಂತೆಗೆ ಹೋಗು ಎಂದು ಯಾರೋ ಪ್ರಚೋದಿಸುತ್ತಿರುವರು. ಅದು ಮನೆಗೆ ಬರಲಿ. ಪಾಪ ಮನೆಗೆ ಬಂದು ವಿಶಾಂತ್ರಿ ಪಡೆಯಲಿ. ಅದು ತನ್ನ ಮಾರಾಟದ ಸಾಮಾನನ್ನೆಲ್ಲ ಮೂಲೆಗೆಸೆದು ವಿಶ್ರಾಂತಿಯನ್ನನುಭವಿಸಲಿ.

ಮನಸ್ಸು ಹೇಗೆ ಮನೆಗೆ ಬರುವುದನ್ನು ಕಲಿಯುವುದು ? ಅದಕ್ಕೆ ಒಂದು ಅಂತರಂಗದ ವಾಣಿ ಕೇಳುವುದು ! ಈ ವಾಣಿ ಯಾವಾಗಲೂ ಒಳಗಿನಿಂದ ಬರುತ್ತಿರುವುದು. ಆದರೆ ಪ್ರಪಂಚದ ಗದ್ದಲದಿಂದ ಅದು ಅನೇಕವೇಳೆ ಕೇಳುವದಿಲ್ಲ. ಆದರೆ ಕೆಲವು ಕ್ಷಣಗಳು ಕೆಲವುವೇಳೆ ಬರುತ್ತದೆ. ಆಗ ಅದು ಆ ವಾಣಿಯನ್ನು ಕೇಳುವುದು. ಪ್ರಪಂಚದ ಗದ್ದಲ ಆಗ ನಿಂತಂತೆ ಕಾಣುವುದು. ಆ ವಾಣಿ ಮನಸ್ಸಿಗೆ ಸ್ಫೂರ್ತಿಯನ್ನು ಕೊಡುವುದು. ತನ್ನ ಮನೆಗೆ ಹಿಂದಿರುಗಬೇಕೆಂದು ಆಶಿಸುವುದು. ನಾನೇನು ಮಾಡುತ್ತಿದ್ದೇನೆ ಇಲ್ಲಿ. ನನಗೆ ಮನೆಯಲ್ಲಿ ಬೇಕಾದಷ್ಟು ನಿಧಿ ಇರುವಾಗ ಕೆಲವು ಬಿಡಿಕಾಸುಗಳನ್ನು ಆಯುತ್ತಿದ್ದೇನೆ. ಈ ವಾಣಿಯ ಹಿಂದೆ ಯಾವ ಜುಗುಪ್ಸೆಯೂ ಇಲ್ಲ, ಸೋಲಿನ ಮನೋಭಾವವೂ ಇಲ್ಲ. ಈ ವಾಣಿಯಿಂದ ಆಕರ್ಷಿಸಲ್ಪಡುವುದು. ಅದಕ್ಕೆ ಹೊರಗೆ ಏನೂ ಕೆಲಸ ಮಾಡಲು ಇಚ್ಛೆ ಇರುವುದಿಲ್ಲ. ಅಂತರಂಗದಿಂದ ಬರುವ ಆ ಪವಿತ್ರ ಸ್ಪಷ್ಟವಾದ ವಾಣಿಯನ್ನು ಆಲಿಸುತ್ತ ಅದರ ಕಡೆ ತಿರುಗುವುದು. ಅದು ಆಗ ಗಿರಾಕಿಗಳ ಮನೆಯಿಂದ ಹಿಂತಿರುಗುವುದು. ಇಂತಹ ಕೆಲಸದಿಂದ ಶಾಶ್ವತವಾದುದೇನನ್ನೂ ಪಡೆಯಲಾಗುವುದಿಲ್ಲ ಎಂಬುದನ್ನು ಅರಿಯುವುದು. ಅದು ತನ್ನ ಮನೆಗೆ ಹಿಂತಿರುಗಬೇಕೆಂದು ಬಯಸುವುದು. ಮನಸ್ಸಿನ ಮನೆಯೆ ನಮ್ಮ ಆತ್ಮನ ಅಂತರಾಳದಲ್ಲಿ.

ನಮ್ಮಲ್ಲಿ ವೈರಾಗ್ಯ ಉದ್ದೀಪನೆಯಾದಾಗ ಹೀಗೆ ಆಗುವುದು. ವೈರಾಗ್ಯ ಎಂದರೆ ಈ ಪ್ರಪಂಚವನ್ನು ದ್ವೇಷಿಸುವದಲ್ಲ ಎಂಬುದನ್ನು ನೆನಪಿನಲ್ಲಿಡಿ. ಸಮಾಧಾನದಿಂದ ಆಲೋಚನೆ ಮಾಡಿದರೆ ವಿಷಯ ವಸ್ತುಗಳನ್ನು ಬಿಕರಿ ಮಾಡಿದರೆ ಏನೂ ಸಿಕ್ಕುವುದಿಲ್ಲ

ಎಂಬುದು ಗೊತ್ತಾಗುವುದು. ಆದರೆ ದುಃಖದ ಮನೋಭಾವದವನಾಗಿರುವುದಿಲ್ಲ. ಅವನು ಅನಂತರ ಇಂದ್ರಿಯ ವಸ್ತುಗಳನ್ನು ಉಪಯೋಗಿಸುವನು. ಆದರೆ ಅವುಗಳ ಮೇಲೆ ಆಸಕ್ತಿ ಇರುವುದಿಲ್ಲ, ಅತ್ಯಂತ ಉದಾಸೀನನಾಗಿರುವನು. ಅವುಗಳ ಮೇಲೆ ದ್ವೇಷ ಇರುವುದಿಲ್ಲ. ಇಂದ್ರಿಯವಸ್ತುಗಳಿಂದ ಯಾವಾಗ ನೀವು ಹೆಚ್ಚನ್ನು ನಿರೀಕ್ಷಿಸುವಿರೊ ಆಗ ನಿರಾಶೆಯೇ ಫಲ. ಯಾವಾಗ ನೀವು ಅದರಿಂದ ಏನನ್ನೂ ನಿರೀಕ್ಷಿಸುವುದಿಲ್ಲವೊ, ಆಗ ಇಂದ್ರಿಯ ಸ್ಪರ್ಶ ಕೇವಲ ಯಾಂತ್ರಿಕವಾಗುವುದು. ಅನಂತರವೂ ನೀವು ದೃಶ್ಯವಸ್ತುಗಳನ್ನು ನೋಡುತ್ತಿರಬಹುದು, ಅನಂತರವೂ ನೀವು ಪ್ರಪಂಚದ ಸಂತೆಯಲ್ಲಿ ಇರಬೇಕಾಗುವುದು. ಆಗ ನೀವು ಸತ್ಯವನ್ನು ಅರಿತ ವ್ಯಾಪಾರಿಯಂತೆ ಇರುವಿರಿ. ಸುಮ್ಮನೆ ಕರ್ಮ ನಿಮ್ಮಿಂದ ಕ್ಷಯವಾಗುತ್ತಿದೆ. ಬಣ್ಣ, ಸ್ಪರ್ಶ, ವಾಸನೆ ಇವುಗಳ ವೇದನೆಯಿಂದ, ನಿಮ್ಮ ಮನಸ್ಸಿನ ಮೇಲೆ ಯಾವ ವಿಕಾರವೂ ಆಗುವುದಿಲ್ಲ. ಈಗ ಇದು ನಿಮಗೆ ಗೊತ್ತಾಗಿದೆ. ಇನ್ನು ಮೇಲೆ ಕ್ರಿಯೆಗೆ ನೀವು ನಿತ್ಯಸಾಕ್ಷಿ.

ವಿವೇಕ-ವೈರಾಗ್ಯ ಆತ್ಮಸಾಕ್ಷಾತ್ಕಾರಕ್ಕೆ ಸಹಾಯಮಾಡುವುದು. ನೀವು ಇದರ ವಿಚಾರವನ್ನು ಚರ್ಚಿಸುತ್ತಿರುವಾಗ ನಿಮಗೆ ಅವುಗಳ ವಿಷಯ ಸ್ವಲ್ಪ ಗೊತ್ತಾಗಬಹುದು. ಆದರೆ ಮನೆಗೆ ಹೋದೊಡನೆಯೆ ಎಲ್ಲಾ ಮರೆತು ಹೋಗುವುದು. ಏನೊ ಸ್ವಲ್ಪ ಕಂಡಂತೆ ತೋರುವುದು, ತಕ್ಷಣವೆ ಮಾಯವಾಗುವುದು. ಇಂಡಿಯಾ ದೇಶದಲ್ಲಿ ನೀರಿನಮೇಲೆ ಅಂತರಗಂಗೆ ಎಂಬ ಪಾಚಿ ಬೆಳೆಯುವುದು. ಅದು ನೀರನ್ನೆಲ್ಲ ಮುಚ್ಚಿಬಿಡುವುದು. ಅದರ ಕೆಳಗೆ ನೀರು ತಂಪಾಗಿ ಶುಭ್ರವಾಗಿರುವುದು. ನೀವು ನೀರನ್ನು ಕುಡಿಯಬೇಕಾದರೆ ಪಾಚಿಯನ್ನು ಅತ್ತ ಸರಿಸಬೇಕು. ಆದರೆ ನೀವು ಕೈತೆರೆದೊಡನೆ ಪಾಚಿ ಬಂದು ನೀರನ್ನು ಆವರಿಸಿಕೊಳ್ಳುವುದು. ಆತ್ಮನ ವಿಚಾರವಾಗಿ ಚರ್ಚೆಮಾಡುವುದು, ಅದನ್ನು ಕೇಳುವುದು, ಅದನ್ನು ಓದುವುದು, ಇವುಗಳಿಂದ ಪಾಚಿ ಸ್ವಲ್ಪ ಸರಿದಂತೆ ಕಾಣುವುದು. ಆದರೆ ಅಜ್ಞಾನ ಪುನಃ ಬಂದು ಆವರಿಸುವುದು. ಇವುಗಳೇ ನಮ್ಮಲ್ಲಿಯ ರಾಗದ್ವೇಷಗಳು. ರಾಗವೆಂದರೆ ದೇಹಾದಿಗಳಿಗೆ ಆಸಕ್ತರಾಗಿರುವುದು. ಮನಸ್ಸಿನಲ್ಲಿ ಆಂದೋಳನವನ್ನು ಉಂಟುಮಾಡಬೇಕಾದರೆ, ರಾಗವಿರಬೇಕು. ನಮಗೆ ಪ್ರಾಪಂಚಿಕವಸ್ತುಗಳ ಮೇಲೆ ಆಶೆ, ಆಕಾಂಕ್ಷೆಗಳು ಇದ್ದರೆ, ನಾವು ಸಾಧನ ಮಾಡುವಾಗ ಯಾವ ಸ್ಥಳ ಖಾಲಿಯಾಗಿತ್ತೊ ಪುನಃ ಅದು ಅಜ್ಞಾನದಿಂದ ಆವರಿಸಲ್ಪಡುವುದು.

ಜ್ಞಾನಯೋಗದಲ್ಲಿ ಗುರಿಯನ್ನು ಸೇರಬೇಕಾದರೆ ವಿವೇಕ ಮತ್ತು ವೈರಾಗ್ಯ ಇರಬೇಕು. ವೈರಾಗ್ಯದೊಂದಿಗೆ, ಆತ್ಮಸಾಕ್ಷಾತ್ಕಾರದ ಅನುಭವ ಇರಬೇಕು. ಕೆಲವುವೇಳೆ ಯೋಗಿಗಳು ಛಲದಿಂದ ವೈರಾಗ್ಯವನ್ನು ಅಭ್ಯಾಸಮಾಡಿರುವರು. ಅವುಗಳಿಂದ ಅಂಜಿಕೊಂಡು, ಅದರಿಂದ ಪಾರಾಗಲು ಪ್ರಯತ್ನಿಸುವರು. ಇದರಿಂದ ಪ್ರತಿಕ್ರಿಯೆ ಬರುವುದು. ವೈರಾಗ್ಯ ಇರಬೇಕಾದರೆ ಅದರ ಹಿಂದೆ ಸರಿಯಾದ ಜ್ಞಾನವಿರಬೇಕು. ವಿವೇಕ-ವೈರಾಗ್ಯ ಯಾವಾಗಲೂ ಒಂದನ್ನೊಂದು ಎಡಬಿಡದೆ ಇರಬೇಕು. ತ್ಯಾಗವೆಂಬ ಹಕ್ಕಿಗೆ ಇರುವ ಎರಡು ರೆಕ್ಕೆಗಳಂತೆ, ವಿವೇಕ ಮತ್ತು ವೈರಾಗ್ಯ ಎಂಬುದು. ಈ ರೆಕ್ಕೆಗಳಿಲ್ಲದೆ ಇದ್ದರೆ ಅದು ಹಾರಲಾರದು.

ಶಮ ಮತ್ತು ಐದುಗುಣಗಳೆ ಷಟ್–ಸಂಪತ್ತಿಗಳು. ಅದನ್ನು ಆರು ಮೂಲೆಯ ನಕ್ಷತ್ರವೆಂದು ಕರೆಯಬಹುದು. ಸಾಧಕನ ಹೃದಯದಲ್ಲಿ ಇದು ಬೆಳಗುತ್ತಿದ್ದರೆ, ಮುಮುಕ್ಷುತ್ವ ಸಾಧ್ಯವಾಗುವುದು. ಷಟ್–ಸಂಪತ್ತಿ ಇಲ್ಲವೇ ಇದ್ದರೆ ಮುಕ್ತನಾಗಬೇಕೆಂಬ ಆಶೆ ಇರುವುದಿಲ್ಲ. ಶಾಂತನಾದ ಮೇಲೆ ಮನಸ್ಸನ್ನು ಬ್ರಹ್ಮನ ಮೇಲೆ ನಿಲ್ಲಿಸುವದಕ್ಕೆ ಶಮ ಎಂದು ಹೆಸರು. ಮನಸ್ಸನ್ನು ವಿಷಯವಸ್ತುಗಳಿಂದ ತೆಗೆದಮೇಲೆ ಇದು ಬರುವುದು. ವಿಷಯವಸ್ತುಗಳು ಕ್ಷಣಿಕ. ಅವು ನಮಗೆ ಆತ್ಮಸಾಕ್ಷಾತ್ಕಾರವನ್ನು ಕೊಡಲಾರವು.

ನಮಗೆ ಸಾಕಷ್ಟು ಅನಾಸಕ್ತಿ ಬರುವುದು ಹೇಗೆ? ಹೊರಗೆ ಹೋಗುವ ಸ್ವಭಾವವುಳ್ಳ ಮನಸ್ಸನ್ನು ನಿಗ್ರಹಿಸುವುದರಿಂದ. ಮನಸ್ಸಿಗೆ ಆಂತರಿಕ ಮತ್ತು ಬಾಹ್ಯಿಕ ಸ್ವಭಾವಗಳಿವೆ. ಇಂದ್ರಿಯಗಳ ಆಕರ್ಷಣೆಗೆ ಸಿಲುಕಿದ ಮನಸ್ಸು ಹೊರಗೆ ಹೋಗುವುದು. ಆದರೆ ಅದನ್ನು ಅಂತರ್ಮುಖವಾಗುವಂತೆ ನಾವು ಸಾಧನೆ ಮಾಡಬೇಕು. ಮನಸ್ಸು ತುಂಟ ಹುಡುಗರಂತೆ ಯಾವಾಗಲೂ ಹೊರಗೆ ಹುಡುಕುತ್ತಿರುವುದು. ಆದರೆ ಹೀಗೆ ಮಾಡಿ ಆದ ಮೇಲೆ, ಇದರಿಂದ ಸ್ಥಿರವಾಗಿರುವುದೇನು ಬರಲಿಲ್ಲ ಎಂದು ಮನಸ್ಸು ತಿಳಿದುಕೊಳ್ಳುವುದು. ಆಗಲೆ ಅದು ಅಂತರ್ಯದಲ್ಲಿರುವುದು. ಆಗ ಶಾಂತಿ ಬರುವುದು. ಆಗ ಅದು ಇಂದ್ರಿಯಗಳು ಎಳೆದತ್ತ ಹೋಗುವುದಿಲ್ಲ. ಆಂತರಿಕ ಶಾಂತಿಯನ್ನು ನೀವು ಹೆಚ್ಚು ಮಾಡುತ್ತಾ ಹೋದಂತೆ, ಸ್ವಾಭಾವಿಕವಾಗಿ ಬಾಹ್ಯವಸ್ತುಗಳ ಮೇಲೆ ಆಕರ್ಷಣೆ ತಗ್ಗುವುದು. ಆಗ ದೇಹವನ್ನು ಹೆಣದಂತೆ, ಅಶುದ್ಧ ಎಂದು ಕರೆದರೆ ಸರಿ ಎನ್ನಿಸುವುದು. ಇಂತಹ ಮನೋಭಾವವನ್ನು ಪಡೆಯುವುದೇ ದೊಡ್ಡ ಲಾಭ.

ದಮ ಎಂದರೆ ಮನೋನಿಗ್ರಹ. ಕರ್ಮೇಂದ್ರಿಯ ಜ್ಞಾನೇಂದ್ರಿಯಗಳೆರಡಕ್ಕೂ ಇದು ಅನ್ವಯಿಸುವುದು. ನಿಜವಾಗಿ ದಮ ಎಂದರೆ ಅದರ ನಿಗ್ರಹ ಮಾತ್ರವಲ್ಲ, ಅವನ್ನು ಆಯಾ ಸ್ಥಳದಲ್ಲಿ ನಿಲ್ಲಿಸುವುದು ಎಂದು. ಅವುಗಳನ್ನು ಅವುಗಳ ಮೂಲವೃತ್ತಿ ರೂಪಕ್ಕೆ ಒಯ್ಯಬೇಕು. ಅದರ ಉದ್ದೇಶವೇ ಆಲೋಚನೆ ಮತ್ತು ಕ್ರಿಯೆ ಎರಡನ್ನೂ ನಿಗ್ರಹಿಸುವುದಾಗಿದೆ.

ಆತ್ಮವನ್ನು ಕ್ರಮೇಣ, ಸ್ಥೂಲವಾದ ದೇಹ, ಇಂದ್ರಿಯ, ಮನಸ್ಸು, ಬುದ್ಧಿ, ಅಹಂಕಾರ ಇವುಗಳಿಂದ ಬಿಡಿಸಬೇಕು. ಬಾಹ್ಯ ಪ್ರಕೃತಿಯ ಮನಸ್ಸನ್ನು ನಿಗ್ರಹಿಸುವುದಕ್ಕೆ ನಾವು ಮೊದಲು ಮಾಡಬೇಕಾದುದು ಇದೇ. ಅನಂತರ ಅವುಗಳನ್ನು ಅದರ ವೃತ್ತಿ ಮೂಲಕ್ಕೆ ಒಯ್ಯಬೇಕು. ಹಾಗೆ ಸೆಳೆದಾಗಲೆ ಉಪರತಿ. ಉಪರತಿಯಲ್ಲಿ ಮನಸ್ಸನ್ನು ಅಂತರ್ಮುಖಮಾಡಿ, ಶಮದಮಗಳಿಂದ ಶಾಂತಗೊಳಿಸುವುದು. ಬಾಹ್ಯವೇದನೆಗಳಿಗೆ ಅದು ಪ್ರತಿಕ್ರಿಯೆ ಕೊಡುವುದಿಲ್ಲ.

ಒಂದು ಸಲ ಶ್ರೀರಾಮಕೃಷ್ಣರ ಪ್ರತ್ಯಕ್ಷಶಿಷ್ಯರಾದ ತುರೀಯಾನಂದರು, ಒಂದು ಯಾತನಾಮಯವಾದ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಯಿತು. ಅವರು ದೊಡ್ಡ ಆಧ್ಯಾತ್ಮಿಕ ಅನುಭಾವಿಗಳು. ಅವರು ಚಿಕಿತ್ಸೆಯಾಗುತ್ತಿರುವಾಗ ಪ್ರಜ್ಞೆಯಿಂದ ಇದ್ದರು. ಇದನ್ನೆಲ್ಲ ನೋಡುತ್ತಿದ್ದರು. ಅನಂತರ ಅವರು ಅದು ಯಾವುದೋ ನನ್ನ ಹೊರಗೆ ಆದಂತೆ ಇತ್ತು. ಆದಕಾರಣ ನನಗೆ ಯಾವ ವಿಧವಾದ ಯಾತನೆಯೂ ಆಗಲಿಲ್ಲ ಎಂದರು. ಅವರು ದೊಡ್ಡ ಯೋಗಿಗಳಾಗಿದ್ದುದರಿಂದ ಹೀಗೆ ಮಾಡಬಹುದಾಗಿತ್ತು.

ಮನಸ್ಸನ್ನು ಅಂತರ್ಮುಖವಮಾಡಿ ಅದನ್ನು ಇಂದ್ರಿಯ ವೇದನೆಗಳ ಕಡೆ ಹೋಗ ದಂತೆ ನೋಡಿಕೊಳ್ಳಬೇಕು. ಮನಸ್ಸಿಗೆ ಕೆಲವನ್ನು ಮಾಡಕೂಡದು ಎಂದು ಖಂಡಿತವಾಗಿ ಹೇಳಿ. ಅದಕ್ಕೆ ಪ್ರಿಯವಾದ ಇಂದ್ರಿಯಗಳು ಮತ್ತು ಅದಕ್ಕೆ ಸಂಬಂಧಪಟ್ಟ ವಸ್ತು ಗಳಿಂದ ದೂರ ಇಡಿ. ಇದರಿಂದ ನಮಗೆ ಎಷ್ಟೋ ಶಕ್ತಿ ಬರುವುದು. ಇದನ್ನು ನಾವು ಅನುಭವಿಸಬೇಕಾಗಿದೆ. ಬರೀ ಮಾತಿನಿಂದ ನಿಮಗೆ ಸರಿ ಎಂದು ತೋರುವುದಕ್ಕೆ ಆಗುವು ದಿಲ್ಲ. ಸದ್ಯದಲ್ಲಿ ಮನಸ್ಸು ಇಂದ್ರಿಯಗಳ ಮೂಲಕ ಹೊರಗೆ ಹೋಗುತ್ತಿದೆ. ಅದಕ್ಕೆ ಒಳಗೆ ನಿಲ್ಲುವಂತೆ ತರಬೇತನ್ನು ಕೊಟ್ಟಿಲ್ಲ. ಜಾಗ್ರತಾವಸ್ಥೆಯಲ್ಲಿ ಪ್ರತಿಯೊಂದು ಕ್ಷಣವೂ ಬಾಹ್ಯಪ್ರಪಂಚನೊಂದಿಗೆ ಸಂಪರ್ಕವಿಲ್ಲದೇ ಇದ್ದರೆ ಮುಕ್ಕಾಲುಪಾಲು ಮಾನವರು ವ್ಯಥೆ ಗೀಡಾಗುವರು. ಅವರಿಗೆ ತಮ್ಮ ಒಳಗೆ ಬಾಹ್ಯಕ್ಕಿಂತ ತೃಪ್ತಿ ಕೊಡುವ ವಸ್ತು ಇದೆ ಎಂದು ಗೊತ್ತಿಲ್ಲ.

ಮೊದಲು ಇಂದ್ರಿಯಗಳ ಸುತ್ತಲೂ ಒಂದು ಬೇಲಿಯನ್ನು ಹಾಕಿ, ಅದನ್ನು ಒಳಗೆ ಸೆಳೆಯಬೇಕು. ಮನಸ್ಸನ್ನು, ಬುದ್ಧಿಯನ್ನು, ನೆನಪನ್ನು ನಮ್ಮ ವಶಕ್ಕೆ ತಂದಮೇಲೆ, ಧ್ಯಾನ ಮಾಡುವ ಸ್ವಭಾವ ಬರುವುದು. ಆಗ ಮನಸ್ಸನ್ನು ಬುದ್ಧಿ ಒಳಗೆ ಸೇರಿಸಬೇಕು. ಇನ್ನುಮೇಲೆ ಅದು ಸಂಕಲ್ಪ ವಿಕಲ್ಪಗಳಂತೆ ಏಳಕೂಡದು. ನಾವು ಮನಸ್ಸಿನೊಳಗೆ ಅದನ್ನು ಅನುಭವಿಸಬೇಕು. ನೀವು ಪರಮ ಆಧ್ಯಾತ್ಮ ಆದರ್ಶವನ್ನು ಮನಗಾಣುವಾಗ, ನೀವು ಆಲೋಚಿಸುತ್ತಿಲ್ಲ. ಇದು ಅಲ್ಲಿದೆ ಅಷ್ಟೆ. ಅಲ್ಲಿಯೂ ದೃಗ್ ದೃಶ್ಯಭೇದವಿದೆ. ಒಂದು ಮತ್ತಾವುದೋ ಒಂದನ್ನು ನೋಡುತ್ತಿದೆ. ಆದರೆ ಯಾವುದೋ ಒಂದು ಇವೆರ ಡನ್ನೂ ನೋಡುತ್ತಿದೆ. ನಮ್ಮ ಬುದ್ಧಿಗೆ ಮತ್ತಾವುದೋ ಹೊಳೆಯುವುದು. ಆದರೆ ನಿಜವಾದ ಬುದ್ಧಿ ಮತ್ತು ನೀವು ಮತ್ತಾವುದಕ್ಕೋ ಸಾಕ್ಷಿಯಾಗಿರುವುದು. ಶಮದಮ ಉಪರತಿಯಲ್ಲಿ ನಾವು ಪ್ರತಿಷ್ಠಿತವಾದ ಮೇಲೆ, ನಿಜವಾದ ಧ್ಯಾನಮಾಡಲು ಸಾಧ್ಯವಾಗುವುದು.

ತಿತಿಕ್ಷೆ ಎಂದರೆ ನಮಗೆ ಬರುವ ಎಲ್ಲವನ್ನೂ ಪ್ರತೀಕಾರ ಬುದ್ಧಿಯಿಲ್ಲದೆ ಸಹಿಸು ವುದು. ಅಲ್ಲಿ ಕಳವಳವಿಲ್ಲ, ಉದ್ವೇಗವಿಲ್ಲ. ಸಹಿಷ್ಣುತೆ ಇಲ್ಲನೆಇದ್ದರೆ ಮನಸ್ಸು ಚಂಚಲ ವಾಗುವುದು. ತಿತಿಕ್ಷ ನೆಲಸಬೇಕಾದರೆ ಶೀಲ ಶುದ್ಧವಾಗಿರಬೇಕು. ತಿತಿಕ್ಷೆಯೇ ಶೀಲ ಸಂಪಾದನೆ ಅವಶ್ಯಕವಾಗಿರುವುದು. ಜೀವನದಲ್ಲಿ ಯಾವ ಕಾರ್ಯಕ್ಷೇತ್ರದಲ್ಲಿಯಾದರೂ ಹಾಯಾಗಿರಬೇಕಾದರೆ, ಕಷ್ಟಸಹಿಷ್ಣುವಾಗಬೇಕು. ಸಹಿಷ್ಣುತೆ ಇದ್ದರೆ, ಯಾವ ಕೆಲಸ ವನ್ನಾದರೂ ಚೆನ್ನಾಗಿ ಮಾಡುವನು. ಅಂತರ್ಯದಲ್ಲಿ ಶಾಂತಿಯನ್ನು ಪಡೆಯಬೇಕಾದರೆ ಎಂತಹ ಕಷ್ಟವಾದ ಬಾಹ್ಯವನ್ನಾದರೂ ಸಹಿಸಬೇಕು. ಇದರಿಂದ ಒಬ್ಬನ ಹೃದಯ ವಿಶಾಲವಾಗುವುದು, ಇನ್ನೊಬ್ಬರ ನ್ಯೂನತೆಯನ್ನು ಸಹಿಸುವ ಸ್ವಭಾವ ಬರುವುದು. ತಿತಿಕ್ಷೆಯೇ ನಮ್ಮ ಶೀಲವನ್ನು ರೂಪಿಸುವುದು. ಇವನನ್ನು ಯಾರಾದರೂ ನೆಚ್ಚುವರು. ಅವನು ಸ್ಥಿರವಾಗಿರುತ್ತಾನೆ. ಅವನು ಪರರಿಗೆ ಮರುಗುತ್ತಾನೆ, ಎಲ್ಲರನ್ನೂ ಪ್ರೀತಿಸು ತ್ತಾನೆ. ಅವನು ವಿಶ್ವವನ್ನೆಲ್ಲ ಉದಾರಭಾವದಿಂದ ನೋಡುತ್ತಾನೆ. ನಮ್ಮ ಸಾಮರ್ಥ್ಯ ವನ್ನು ವೃದ್ಧಿ ಮಾಡುವುದು. ದ್ವಂದ್ವದಾಚೆ ಹೋಗುವುದಕ್ಕೆ ಅವನಿಗೆ ಸಾಧ್ಯವಾಗುವುದು.

ಬೇರೆ ಬೇರೆ ಸನ್ನಿವೇಶಗಳಲ್ಲಿ, ಗೊಣಗಾಡದೆ ಹೊಂದಿಕೊಂಡು ಹೋಗಬೇಕಾದರೆ ತಿತಿಕ್ಷೆಯನ್ನು ಅಭ್ಯಾಸಮಾಡಬೇಕು. ಇದರಿಂದ ನನಗೆ ಶಕ್ತಿ ಬರುವುದು. ನಮ್ಮ ಶೀಲವನ್ನು ರೂಢಿಸುವುದೇ ತಿತಿಕ್ಷೆ ಎಂಬುದನ್ನು ಯಾವಾಗಲೂ ನೆನಪಿನಲ್ಲಿಡಿ.

ಶ್ರದ್ಧೆ ಎಂದರೆ ನನ್ನಲ್ಲಿ ಮತ್ತು ಹೊರಗಡೆ ನನಗೆ ನಂಬಿಕೆ ಇರಬೇಕು. ನಮಗೆ ಸಹಾಯ ಬರುವ ಗುರು ಮತ್ತು ಅವನ ಬೋಧನೆಯಲ್ಲಿ ಶ್ರದ್ಧೆ ಇರಬೇಕು. ಇಲ್ಲಿ ಆತ್ಮ ಶ್ರದ್ಧೆಯೂ ಕೂಡ ಇದೆ. ನನಗೆಲ್ಲ ಚೆನ್ನಾಗಿರುವುದು ಸಿಕ್ಕುವುದು ಎಂಬ ಕಾಡು ಕಲ್ಪನೆಯಲ್ಲ. ಸರಿಯಾದ ಯುಕ್ತಿಯ ಆಧಾರದ ಮೇಲೆ ನಿಂತ ನಂಬಿಕೆ. ಒಂದು ವಸ್ತುವನ್ನು ಪಡೆಯುವ ಸಾಮರ್ಥ್ಯ ನಿನ್ನಲ್ಲಿದೆ ಎಂಬ ತಿಳಿವಳಿಕೆ. ನೀವೇನಾದರೂ ಪ್ರಯತ್ನಪಟ್ಟರೆ ನಿಮಗೆ ಅದು ಸಾಧ್ಯ. ಆದರೆ ಸುಮ್ಮನೆ ದುಡುಕಬೇಡಿ. ಸ್ಥಿರವಾದ ಶಾಂತವಾದ ಸರಿಯಾದ ವಿವೇಚನಾ ಶಕ್ತಿ ನಿಮ್ಮಲ್ಲಿರಲಿ. ನಿಮ್ಮ ಸಂಗಡಿಗರನ್ನು ಜೋಪಾನವಾಗಿ ಆರಿಸಿಕೊಳ್ಳಿ. ಅವರು ನಿಮ್ಮ ಮೇಲೆ ತಮ್ಮ ಪ್ರಭಾವವನ್ನು ಬೀರುತ್ತಾರೆ. ಅದಕ್ಕಾಗಿ ಜೋಪಾನವಾಗಿರಿ.

ನೀವು ಕೆಲಸಕ್ಕೆ ಬಾರದವರು, ದುರ್ಬಲರು ಎಂದು ಎಂದಿಗೂ ಚಿಂತಿಸಬೇಡಿ. ನೀವು ದುರ್ಬಲರು, ನಿಮಗೆ ಯಾವ ಭರವಸೆಯೂ ಇಲ್ಲ, ನೀವು ಹಿಡಿದ ಕಾರ್ಯಗಳಲ್ಲಿ ವಿಮುಖರಾದವರು ಎಂದು ನಿಮಗೆ ಅನ್ನಿಸಿದರೆ, ನಿಮ್ಮಲ್ಲಿ ಪ್ರವಿತ್ರತೆ ಇಲ್ಲ ಎಂಬ ನಿರ್ಧಾರಕ್ಕೆ ಬರಬೇಡಿ. ಅದನ್ನು ಪ್ರಪಂಚದಲ್ಲಿ ಯಾವುದೂ ನಾಶಮಾಡಲಾರದು. ನಾನು ಪವಿತ್ರ, ಪವಿತ್ರತೆ ನನ್ನಲ್ಲಿದೆ ಎಂದು ದಿನಕ್ಕೆ ಹತ್ತುಸಾವಿರ ವೇಳೆ ಹೇಳಿ.

ನಾವು ಏನು ಆಗಬೇಕೆಂದಿರುವೆವೊ ಆ ಸಾಧ್ಯತೆಯ ಬೀಜ ನಮ್ಮಲ್ಲಿದೆ. ಈ ಸಾಧ್ಯತೆ ನಮ್ಮಲ್ಲಿದೆ. ಅದನ್ನು ವ್ಯಕ್ತಪಡಿಸಲು, ಅದಕ್ಕೆ ಇರುವ ಆತಂಕಗಳನ್ನು ನಾನು ನಿವಾರಿಸಿಕೊಳ್ಳಬೇಕಾಗಿದೆ. ಬೇರೆ ಯಾವ ಸಂಸ್ಥೆಯಾಗಲಿ, ವ್ಯಕ್ತಿಯಾಗಲಿ ನನಗೆ ಅದನ್ನು ಮಾಡಲಾರದು. ಆಗಲೇ ಆದರ್ಶ ನಮ್ಮ ಸ್ವಭಾವ ಆಗಬೇಕಾದರೆ. ನಾವಾಗಲೇ ಅದಾಗಿದ್ದೇವೆ ಎಂಬುದು ನಮಗೆ ಗೊತ್ತಿದೆ. ಇದನ್ನು ಹೊಸದಾಗಿ ಪಡೆಯಬೇಕಾಗಿಲ್ಲ. ಒಬ್ಬ ಕಲಾವಿದನಾಗಲಿ, ಪಾತ್ರಧಾರಿಯಾಗಲಿ, ಸಂಗೀತಗಾರನಾಗಲಿ, ವೈದ್ಯನಾಗಲಿ, ಲಾಯರ್ ಆಗಲಿ ಅಥವಾ ಆಧ್ಯಾತ್ಮಿಕ ವ್ಯಕ್ತಿಯೇ ಆಗಲಿ ನಾನು ಅದು ಎಂದು ಸಾಕ್ಷಾತ್ಕಾರ ಮಾಡಿಕೊಳ್ಳಬೇಕಾದರೆ, ಪ್ರತಿಯೊಬ್ಬನೂ ಪ್ರಯತ್ನ ಮಾಡಬೇಕು, ವಿಮರ್ಶೆ ಮಾಡಬೇಕು. ಅದನ್ನು ಕುರಿತು ಧ್ಯಾನಿಸಬೇಕು. ಅವನು ಆದರ್ಶದೊಂದಿಗೆ ಎಷ್ಟು ತಾದಾತ್ಮ್ಯಭಾವವನ್ನು ತಾಳಿರುವನೊ ಅದರ ಪ್ರಮಾಣಕ್ಕೆ ತಕ್ಕಂತೆ ಅದನ್ನು ವ್ಯಕ್ತಪಡಿಸುವನು. ಪವಿತ್ರತೆ ಆಗಲೆ ನಮ್ಮಲ್ಲಿದೆ ಎಂಬ ಶ್ರದ್ಧೆಯನ್ನು ರೂಢಿಸಿ. ಅನಂತರ ನಿಮ್ಮ ಮನಸ್ಸಿನ ಆಳಆಳಕ್ಕೆ ಅದನ್ನು ಕಳುಹಿಸುವುದಕ್ಕೆ ಸಾಧನೆಮಾಡಿ. ಆದರ್ಶದಿಂದ ಸ್ಫೂರ್ತಿಗೊಳ್ಳಿ. ಅದು ಆಗಲೇ ನಮ್ಮಲ್ಲಿದೆ, ವ್ಯಕ್ತವಾಗುವುದಕ್ಕೆ ಅಣಿಯಾಗುತ್ತಿದೆ ಎಂದು ಭಾವಿಸಿ. ಅದಕ್ಕೆ ಯಾವ ಯಾವ ಅಡಚಣೆಗಳಿವೆಯೋ ಅವುಗಳನ್ನೆಲ್ಲ ತಿಳಿದುಕೊಂಡು, ಅದರಿಂದ ಪಾರಾಗಲು ಯತ್ನಿಸಿ.

ಯಾವುದಾದರೂ ಆತಂಕ ನಿಮಗೆ ತಡೆಬಂದರೆ, ನಾನು ಅವುಗಳನ್ನೆಲ್ಲಾ ಗೆಲ್ಲು ತ್ತೇನೆ ಎನ್ನಿ. ಆತಂಕಗಳಿಗೆ ಅಂಜಬೇಡಿ. ಅವುಗಳನ್ನು ಹೊಡೆದು ಅತ್ತ ಕಳಿಸಿ. ಅವು ಗಳನ್ನು ಗೆಲ್ಲುವುದಕ್ಕೆ ನೀವು ಪ್ರಯತ್ನಮಾಡಿದರೆ, ವಾತಾವರಣ ಬದಲಾಯಿಸುವುದು. ಯಾವ ಮಾರ್ಗದಲ್ಲಾಗಲಿ ಮುಂದುವರಿಯಬೇಕಾದರೆ ನಾಲ್ಕು ಗುಣಗಳು ಇರಬೇಕು. ಅವುಗಳನ್ನು ನಾಲ್ಕು S ಎನ್ನಬಹುದು. ಅವೇ Strength (ಶಕ್ತಿ), Steadiness (ಸ್ಥಿರತೆ), Simplicity (ಸರಳತೆ) ಮತ್ತು Sincerity (ಋಜುತ್ವ). ಈ ಗುಣಗಳನ್ನು ನಿಮ್ಮಲ್ಲಿ ವೃದ್ಧಿಗೊಳಿಸಿ.

ಬಂಧನವನ್ನು ತುಂಡರಿಸಿ ಹೊರಗೆ ಬನ್ನಿ. ನೀವು ಕೆಳಗಿದ್ದರೆ ಅದಕ್ಕಾಗಿ ನಿರಾಶ ರಾಗಬೇಡಿ. ನೆಲವನ್ನು ಒದೆಯಿರಿ. ಅದು ನಿಮ್ಮ ಸ್ನೇಹಿತನಾಗದೆ ಇರಲಿ. ನಾನು ಏನನ್ನು ಪಡೆಯಬೇಕಾದರೂ ಅದು ಆಗಲೆ ನನ್ನಲ್ಲಿದೆ. ಅವು ಯಾವುವೂ ಹೊರಗಿಲ್ಲ ಎಂದು ನಂಬಿ. ಅವನ್ನೆಲ್ಲ ಎಲ್ಲೋ ಹೊರಗಿನಿಂದ ತಂದು ನಿಮ್ಮಲ್ಲಿ ನೆಡಬೇಕಾಗಿಲ್ಲ. ಇದು ನಿಮ್ಮ ಆಜನ್ಮಸಿದ್ಧ ಹಕ್ಕು. ಇವನ್ನು ನೀವು ಯಾವಾಗಲೂ ನಿಮ್ಮೊಳಗೇ ಇಟ್ಟು ಕೊಂಡಿರುವಿರಿ. ಇಂತಹ ಶ್ರದ್ಧೆ ಇದ್ದರೆ, ಆಗಲೆ ಅರ್ಧವನ್ನು ಸಂಪಾದಿಸಿದಂತೆ.

ಸಮಾಧಾನ ಎಂದರೆ ಆತ್ಮನ ಮೇಲೆ ಮನಸ್ಸನ್ನು ಕೇಂದ್ರೀಕರಿಸುವುದು. ಇದಕ್ಕೆ ಏಕಾಗ್ರತೆ ಬೇಕು, ಶಪಥ ಬೇಕು, ಮನಸ್ಸನ್ನು ಸಂಕಲ್ಪ ಮಾಡಬೇಕು. ಭಗವತ್ ಸಾಕ್ಷಾತ್ಕಾರವೇ ನಿಮ್ಮ ಜೀವನದ ಗುರಿಯಾಗಲಿ. ಆ ಆದರ್ಶಕ್ಕಾಗಿ ಎಲ್ಲವನ್ನೂ ಹೊಂದಿಸಿ ಕೊಳ್ಳಿ. ಅದನ್ನು ಮನಸ್ಸಿನಲ್ಲಿಟ್ಟುಕೊಂಡು ನಿಮ್ಮ ಕರ್ತವ್ಯವನ್ನು ಮಾಡಿ. ನಾನು ಭಗವಂತನ ಸಾಕ್ಷಾತ್ಕಾರಕ್ಕಾಗಿ ಬದುಕಿದ್ದೇನೆ. ಆತ್ಮಸಾಕ್ಷಾತ್ಕಾರಕ್ಕಾಗಿ ಬದುಕಿದ್ದೇನೆ ಎಂದು ಜೀವನದಲ್ಲಿ ಆದರ್ಶವನ್ನು ಬಿಡಬೇಡಿ.

ಮುಮುಕ್ಷುತ್ವ ಎಂದರೆ ಮುಕ್ತನಾಗುವುದಕ್ಕೆ ಇರುವ ತೀವ್ರ ಅಭಿಲಾಷೆ. ಬರೀ ಮುಕ್ತನಾಗಬೇಕೆಂಬ ಮಂದ ಆಶೆಯಲ್ಲ, ಆ ಆಸೆ ನನ್ನಲ್ಲಿ ಹತ್ತಿಕೊಂಡು ಉರಿಯುತ್ತಿರ ಬೇಕು. ಮುಕ್ತಿಯನ್ನು ನಾನು ಮೆಚ್ಚುತ್ತೇನೆ, ಅದನ್ನು ನಾನು ಪಡೆಯುತ್ತೇನೆ, ಜೀವನದ ಪರಮ ಉದ್ದೇಶವೇ ಅದು ಎಂದು ನಂಬಿ. ಮುಕ್ತಿಯೇ ನನ್ನ ಉದ್ದೇಶ. ನಾನು ಯಾವ ಇಂದ್ರಿಯಕ್ಕೂ ಬದ್ಧನಲ್ಲ, ಯಾವ ಸನ್ನಿವೇಶಕ್ಕೂ ಬದ್ಧನಲ್ಲ. ಮುಕ್ತಾವಸ್ಥೆ ಯಲ್ಲಿ ಆನಂದದ ಕೇಂದ್ರ ಯಾವುದೊ ಒಂದು ಕಡೆ ಇಲ್ಲ. ಏಕೆಂದರೆ ಅದು ಎಲ್ಲೆಲ್ಲಿಯೂ ಇದೆ. ನನಗೆ ಮುಕ್ತನಾಗಬೇಕೆಂದು ಆಶೆ ಇದ್ದರೆ, ಇತರ ಮುಮುಕ್ಷುಗಳನ್ನು ನಾನು ಪ್ರೀತಿಸುತ್ತೇನೆ. ಹೇಗೆ ನಿಮ್ಮ ಆತ್ಮಸಾಕ್ಷಾತ್ಕಾರಕ್ಕೆ ಇರುವ ಆತಂಕಗಳಿಂದ ಪಾರಾಗಲು ಯತ್ನಿಸುವಿರೊ ಹಾಗೆಯೇ ಇತರರ ಆತಂಕಗಳನ್ನು ನಿವಾರಿಸಲು ಯತ್ನಿಸುವಿರಿ. ನಿಮ್ಮ ಮುಕ್ತಿಯನ್ನು ಮಾತ್ರ ಆಲೋಚನೆ ಮಾಡಬೇಡಿ. ಎಲ್ಲರೂ ಯೋಗ್ಯವಾಗಿಯೂ, ಅಯೋಗ್ಯವಾಗಿಯೂ, ಮುಕ್ತರಾಗುವುದಕ್ಕೆ ಯತ್ನಿಸುತ್ತಿರುವರು. ಆದರೆ ಪ್ರತಿ ಯೊಬ್ಬನೂ ತಿಳಿದೊ, ತಿಳಿಯದೆಯೊ, ಅದಕ್ಕೆ ಪ್ರಯತ್ನಿಸುತ್ತಿರುವನು. ನಾವು ತಿಳಿದು ಮನಃಪೂರ್ವಕ ಅದನ್ನು ಮಾಡಿದರೆ, ಅದು ನಮ್ಮ ಹೃದಯವನ್ನು ವಿಶಾಲಮಾಡುವುದು,

ಬುದ್ಧಿಯನ್ನು ಮತ್ತೂ ಸೂಕ್ಷ್ಮ ಮಾಡುವುದು. ಇನ್ನೊಬ್ಬರಿಗೆ ಏನನ್ನೂ ಬಲತ್ಕಾರ ಮಾಡಬೇಡಿ.

ನೀವೊಂದು ಪೆಟ್ಟಿಗೆ ಮೂಲಕ ಕಾಣುತ್ತಿರುವ ಬ್ರಹ್ಮನೆ. ಆತ್ಮನ ಪೂರ್ಣತೆಯನ್ನು ಉಪಾಧಿಗಳು ಕಾಣದಂತೆ ಮಾಡಿವೆ. ಆಕಾಶ ಅನಂತವಾಗಿದೆ. ಆದರೆ ಅದಕ್ಕೆ ಗೋಡೆ ಹಾಕಿ ಅದನ್ನು ರೂಮು ಎಂದು ಸಾಂತವನ್ನಾಗಿ ಮಾಡುವಿರಿ. ಆದರೆ ಉಪಾಧಿಯ ಮೇಲೆ ಇರುವ ಆಕಾಶವೇ ಅದು. ಅದರಂತೆಯೇ ನೀವೊಬ್ಬ ಬ್ರಹ್ಮ. ಆದರೆ ದೇಹ, ಮನಸ್ಸು, ಬುದ್ಧಿ ಎಂಬ ಉಪಾಧಿಗಳಿಂದ ಬಾಧಿತರಾಗಿರುವಿರಿ. ಒಂದು ದೊಡ್ಡ ಸಾಗರವಿದೆ. ಅದರೊಳಗೆ ಗ್ಲಾಸಿನ ಬುಡ್ಡಿಗಳಿವೆ. ನಾವು ಆ ಸಾಗರದಲ್ಲಿರುವ ಗ್ಲಾಸಿನ ಬುಡ್ಡಿಗಳಂತೆ, ಸಮುದ್ರದ ನೀರಿನಿಂದ ಕೂಡಿಕೊಂಡು ಸಂಚರಿಸುತ್ತಿರುವಂತಿದೆ. ಬುಡ್ಡಿಯ ಒಳಗೆ ಇರುವ ನೀರಿಗೆ ಬುಡ್ಡಿಯ ಗ್ಲಾಸಿನ ಬಣ್ಣ ಬಂದಂತೆ ಇದೆ. ಆದರೆ ನೀರಿಗೆ ಬಣ್ಣವಿಲ್ಲ. ಅನಂತ ಸಾಗರವೇ ಬ್ರಹ್ಮ. ಅದೇ ನಮ್ಮಲ್ಲೆಲ್ಲ ಇರುವುದು.

ಈ ಬುಡ್ಡಿಗಳ ಉದ್ದೇಶವೆಲ್ಲ ಏನು ? ಬುಡ್ಡಿಗಳು ಸಾಗರದಲ್ಲಿ ಸಂಚರಿಸುತ್ತಿರುವಾಗ ಮತ್ತೊಂದು ದೊಡ್ಡ ಬುಡ್ಡಿಯನ್ನು ನೋಡಿ ನಾನು ಅದರಂತೆ ಇರಬೇಕು ಎಂದು ಆಶಿಸುವುದು. ಅದರಿಂದ ಅದು ವಿಕಾಸವಾಗಿ, ಅದರ ಅನುಭವವನ್ನು ಪಡೆಯುವುದು. ಹೀಗೆ ಹಲವುಸಲ ಆದಮೇಲೆ ಅದು ಕೊನೆಗೆ ನನಗೆ ಯಾವ ಬುಡ್ಡಿಯೂ ಆಗಲು ಇಚ್ಛೆಯಿಲ್ಲ, ನಾನು ಸಾಗರವಾಗಬೇಕು ಎಂದು ಆಶಿಸುವುದು. ಬುಡ್ಡಿ ಎಷ್ಟೇ ದೊಡ್ಡದಾದರೂ ಸಾಗರಕ್ಕೆ ಹೋಲಿಸಿದರೆ ಸಣ್ಣದೇ. ಅದಕ್ಕಾಗಿ ತಾನು ಸಾಗರವೇ ಆಗಬೇಕೆಂದು ಬಯಸುವುದು ಇದೇ ಮುಮುಕ್ಷುತ್ವ. ಬಂಧನದಿಂದ ಪಾರಾಗಿ ಮುಕ್ತನಾಗಬೇಕೆಂಬ ಆಸೆ.

ಮುಮುಕ್ಷುತ್ವದ ತೀವ್ರತೆಯಿಂದ ಒಂದು ಶಕ್ತಿ ನಮ್ಮಲ್ಲಿ ಜಾಗ್ರತವಾಗುವುದು. ಅದು ನಮ್ಮನ್ನು ಒಬ್ಬ ಗುರುವಿನೆಡೆಗೆ ಒಯ್ಯುವುದು. ಗುರು ತನ್ನ ಶಿಷ್ಯನನ್ನು ಗುರುತು ಹಿಡಿಯುತ್ತಾನೆ, ಶಿಷ್ಯ ಗುರುವನ್ನು ಕಂಡುಹಿಡಿಯುವುದಿಲ್ಲ. ಮುಮುಕ್ಷುತ್ವ ಅದನ್ನು ಸ್ವೀಕರಿಸುವ ಸ್ಥಿತಿಗೆ ನಮ್ಮನ್ನು ಪಕ್ವ ಮಾಡುವುದು. ಆಗ ಗುರು ಪ್ರತ್ಯಕ್ಷನಾಗುತ್ತಾನೆ. ಅದಕ್ಕೆ ಶಾಸ್ತ್ರದಲ್ಲಿ ಹೇಳುವ ಸಾಧನ_ಚತುಷ್ಟಯದಲ್ಲಿ ಪ್ರತಿಷ್ಠಿತನಾದಮೇಲೆ ಶ್ರದ್ಧೆ, ದೈನ್ಯತೆ, ಗೌರವಗಳಿಂದ ಗುರುವನ್ನು ಸಮೀಪಿಸುತ್ತಾನೆ. ಗುರು ಅವನನ್ನು ಆತ್ಮಸಾಕ್ಷಾತ್ಕಾರಕ್ಕೆ ಕರೆದುಕೊಂಡು ಹೋಗುವನು.

ನಿಜವಾಗಿ ನೋಡಿದರೆ ನಮಗೆ ಮಾನವ ಗುರುವಿನ ಅವಶ್ಯಕತೆ ಇಲ್ಲ. ಆದರೆ ಈಗ ನಮ್ಮಲ್ಲಿರುವ ಪವಿತ್ರತೆಯನ್ನು ಮುಚ್ಚಿರುವ ಅಜ್ಞಾನಾದಿಗಳು ಇರುವುದರಿಂದ, ಗುರಿಯನ್ನು ಪಡೆಯಬೇಕಾದರೆ ಒಬ್ಬ ಗುರು ಬೇಕಾಗಿದೆ.ಕ್ಯಾಂಡಲ್ಲಿಗೆ ಬೆಳಕನ್ನು ಕೊಡುವ ಯೋಗ್ಯತೆ ಇದೆ. ಆದರೆ ಅದನ್ನು ಮೊದಲು ಹಚ್ಚಬೇಕಾಗಿದೆ. ಮನುಷ್ಯನಲ್ಲಿ ಪೂರ್ಣತೆಯ ಸಾಧ್ಯತೆ ಇದೆ. ಆದರೆ ಗುರುವಿನ ಸ್ಪರ್ಶದಿಂದ ಅದು ಜಾಗ್ರತವಾಗಬೇಕು.

ಎರಡು ಬಗೆಯ ಗುರುಗಳಿದ್ದಾರೆ. ಶಿಷ್ಯನಿಗೆ ಉಪದೇಶವನ್ನು ನೀಡುವ ಸದ್ಗುರು ಇರುವನು. ಇವನು ಒಬ್ಬನೆ ಇರಬೇಕು. ಉಪಗುರುಗಳು ಹಲವು ಜನ ಇರಬಹುದು.

ನಾವು ಇತರ ವಿಷಯಗಳನ್ನು ಯಾರಿಂದ ಕಲಿತರೂ ಅವರನ್ನು ಉಪಗುರು ಎಂದು ಹೇಳಬಹುದು.

ನಿಜವಾದ ಸದ್ಗುರುವಿನ ಲಕ್ಷಣಗಳೇನು ? ಮೊದಲು ಅವನೇ ಸಾಧನೆ ಮಾಡಿ ಸತ್ಯಸಾಕ್ಷಾತ್ಕಾರವನ್ನು ಪಡೆದಿರುವನು. ಎರಡನೆಯದೆ ಅವನಿಗೆ ಶಾಸ್ತ್ರ ಗೊತ್ತಿರಬೇಕು. ಅಂದರೆ ಶಾಸ್ತ್ರಗಳನ್ನು ಲೀಲಾಜಾಲವಾಗಿ ಉದಹರಿಸುವವನು, ಅಥವಾ ಚೆನ್ನಾಗಿ ಮಾತನಾಡುವವನು ಎಂದೂ ಅಲ್ಲ. ಅವನಿಗೆ ಶಾಸ್ತ್ರಗಳೆಲ್ಲ ಕರತಲಾಮಲಕವಾಗಿ ಗೊತ್ತಿರಬೇಕು, ಬುದ್ಧಿವಂತನಾಗಿರಬೇಕು, ಆಧ್ಯಾತ್ಮಿಕ ಅನುಭವವನ್ನು ಪಡೆದವನಾಗಿರಬೇಕು.

ಅವನು ಹಣ, ಕೀರ್ತಿ ಅಥವಾ ಮುಂದಾಳಾಗಬೇಕೆಂಬ ಯಾವ ಆಶೆಯಿಂದಲೂ ಪ್ರಚೋದಿತನಾಗಿರಬಾರದು. ಯಾರನ್ನು ಮಹಾಗುರುಗಳು ಎನ್ನುವೆವೊ ಅವರು ಮೇಲಿನವುಗಳನ್ನು ತುಚ್ಛವಾಗಿ ಕಾಣುವರು. ನಾಲ್ಕನೆಯದಾಗಿ ಶಿಷ್ಯನ ಮೇಲೆ ಅವನ ಪ್ರೀತಿ ಹೇಗೆ ವಸಂತಋತು ತನ್ನ ಗಾಳಿಯಿಂದ ಎಲ್ಲಾ ಗಿಡಗಳಲ್ಲಿಯೂ ತಳಿರು ಬರುವಂತೆ ಮಾಡುವುದೊ ಹಾಗೆ ಅಹೇತುಕವಾಗಿರಬೇಕು.

ಒಂದು ಸಲ ಭಕ್ತನೊಬ್ಬನು ಶ್ರೀರಾಮಕೃಷ್ಣರನ್ನು ನೋಡಲು ದಕ್ಷಿಣೇಶ್ವರಕ್ಕೆ ತನ್ನ ಸ್ನೇಹಿತರೊಡನೆ ಹೋದನು. ಸ್ವಲ್ಪ ಹೊತ್ತಾದಮೇಲೆ ಸ್ನೇಹಿತರಿಗೆ ಬೇಜಾರಾಯಿತು. ನಾವು ಯಾವಾಗ ಇಲ್ಲಿಂದ ಹೋಗುವುದು ಎಂದು ಕೇಳಿದರು. ಆತ ಸದ್ಯದಲ್ಲಿ ಬರುವ ಹಾಗಿಲ್ಲ ಎಂಬುದನ್ನು ಅರಿತು ಅವರು ಹೊರಗೆ ದೋಣಿಗೆ ಹೋಗಿ ಅಲ್ಲಿ ಅವನಿಗೆ ಕಾಯುತ್ತಿದ್ದರು. ದೇವಗುರುಗಳಾದ ಶ್ರೀರಾಮಕೃಷ್ಣರು ತಮ್ಮ ಅಮೃತಮಯ ಬೋಧನೆಯನ್ನು ಉದಾರವಾಗಿ ನೀಡುತ್ತಿದ್ದಾರೆ. ಯಾರು ಅದನ್ನು ಸ್ವೀಕರಿಸುವುದಕ್ಕೆ ಸಿದ್ಧರಾಗಿರುವರೊ ಅವರು ಅದರಿಂದ ಪ್ರಯೋಜನವನ್ನು ಪಡೆಯಬಹುದು. ಇತರರಿಗೆ ಇದು ಲಭ್ಯವಿಲ್ಲ.

ಸದ್ಗುರುಗಳನ್ನು ಈಶ್ವರಕೋಟಿ ಮತ್ತು ಜೀವಕೋಟಿಗಳೆಂದು ಹೇಳುತ್ತಾರೆ. ಈಶ್ವರಕೋಟಿ ಶಿಷ್ಯನ ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಂಡು ಅವನು ಮಾಡುವ ಸಾಧನೆಯನ್ನು ಗಮನಕ್ಕೆ ತೆಗೆದುಕೊಳ್ಳದೆ ಪೂರ್ಣಜ್ಞಾನವನ್ನು ನೀಡಬಲ್ಲರು. ಆದರೆ ಜೀವಕೋಟಿಯಾದರೊ, ಶಿಷ್ಯನಿಗೆ ಆ ದಾರಿಯಲ್ಲಿ ಮುಂದೆ ಹೋಗುವುದಕ್ಕೆ ಉತ್ಸಾಹವನ್ನು ಕೊಡುವನು. ಶಿಷ್ಯ ಗುರು ಹೇಳಿದಂತೆ ಸಾಧನೆ ಮಾಡಬೇಕಾಗುವುದು ; ಸಾಕ್ಷಾತ್ಕಾರವನ್ನು ಸಂಪಾದನೆ ಮಾಡಬೇಕಾದರೆ

ಸತ್ ಶಿಷ್ಯನ ಲಕ್ಷಣಗಳು ಇವು :

೧. ಅವನ ಉದ್ದೇಶ ಪರಿಶುದ್ಧವಾಗಿರಬೇಕು. ಅವನಿಗೆ ಸತ್ಯವಲ್ಲದೆ ಮತ್ತೇನೂ ಬೇಕಾಗಿಲ್ಲ.

೨. ಸಾಧನ ಚತುಷ್ಟಯದಲ್ಲಿ ಸ್ಥಿರನಾಗಿರಬೇಕು.

೩. ಅವನ ಇಚ್ಛೆ ದೃಢವಾಗಿರಬೇಕು. ಅವನು ದೃಢವಾಗಿರಬೇಕು. ಆರೋಗ್ಯವಂತನಾಗಿರಬೇಕು.

೪. ಬುದ್ಧಿವಂತನಾಗಿರಬೇಕು. ಆಶಿಷ್ಠನಾಗಿರಬೇಕು. ಉತ್ಸಾಹ ಪೂರಿತನಾಗಿರಬೇಕು.

ಸ್ಥಿರತೆ ಮತ್ತು ಹಿಡಿದುದನ್ನು ಬಿಡದ ಛಲ ಇದೇ ನಮ್ಮ ಗುರಿಗೆ ಒಯ್ಯುವುದು. ಸ್ಥಿರತೆ ಮತ್ತು ಅಂತರ್ಮುಖತೆಯನ್ನು ಗುರುಗಳು ಒತ್ತಿ ಹೇಳುತ್ತಾರೆ. ನೀವು ಪ್ರತಿದಿನವೂ ಅಭ್ಯಾಸ ಮಾಡುತ್ತೀರೇನು ? ನೀವು ಪ್ರತಿದಿನವೂ ಏನನ್ನಾದರೂ ಮಾಡುತ್ತೀರೇನು ? ಹಾಗೆ ಮಾಡುತ್ತಿದ್ದರೆ ನಿಮ್ಮ ಉದ್ದೇಶದಲ್ಲಿ ಸ್ಥಿರವಾಗಿರುವಿರಿ. ಸಾಧನೆಯಿಂದ ಕ್ರಮೇಣ ಮೇಲುಮೇಲಕ್ಕೆ ಹೋಗಬಹುದು. ಬಿಡದೆ ಛಲದಿಂದ ಮಾಡಿದ ಸಾಧನೆಯಿಂದ ಜ್ಞಾನವನ್ನು ಪಡೆದುಕೊಳ್ಳಬಹುದು.

ಅಂತರ್ಮುಖತೆಯನ್ನು ಅಭ್ಯಾಸಮಾಡಿ. ವಿಚಾರ ಮಾಡದೆ ಇಂದ್ರಿಯ ವಸ್ತುಗಳ ಹಿಂದೆ ಓಡಬೇಡಿ. ಹೊಳೆಯುವುದೆಲ್ಲ ಚಿನ್ನವಲ್ಲ ಎಂಬುದನ್ನು ನೆನಪಿಡಿ.

ಮನಸ್ಸೇನಾದರೂ ಹೊರಗೆ ಹೋಗಬೇಕೆಂದರೆ ಏತಕ್ಕೆ ಹೋಗಬೇಕು ಎಂದು ಕೇಳಿ. ಎಂದಿಗೂ ನಾಶವಾಗದ ಸೌಂದರ್ಯ ನಿನಗೆ ಬೇಕೆ ? ಅಂತಹ ಶ್ರೇಷ್ಠವಾದ ಸೌಂದರ್ಯವನ್ನು ನಿನಗೆ ತೋರುವೆ ಎನ್ನಿ. ನಿನ್ನ ಆಸೆಯನ್ನು ತಣಿಸುವುದಕ್ಕೆ ಯಾವುದಾದರೂ ವಸ್ತುವನ್ನು ಹುಡುಕಿಕೊಂಡು ಹೋಗುತ್ತೀಯೇನು ? ಹಾಗಾದರೆ ಪರಿಪೂರ್ಣದ ಕಡೆ ತಿರುಗು. ಅಲ್ಪದರಲ್ಲಿ ಸುಖವಿಲ್ಲ. ಅದರಿಂದ ಬರುವ ಸುಖ ಶಾಶ್ವತವಲ್ಲ. ಅದೆಲ್ಲ ಒಂದು ದಿನ ಕೊನೆಗಾಣಬೇಕು.

ಹೀಗೆ ವಿಚಾರ ಮಾಡುತ್ತ ಮನಸ್ಸನ್ನು ಅಂತರ್ಮುಖ ಮಾಡಬೇಕು. ಅದರಿಂದ ಶ್ರೇಷ್ಠ ಆಧ್ಯಾತ್ಮಿಕ ಅನುಭವ ಪ್ರಾಪ್ತವಾಗುವುದು. ಆತ್ಮನ ಸೌಂದರ್ಯದ ಸವಿಯನ್ನು ನೀವು ಅಂತರ್ಯದಲ್ಲಿ ರುಚಿ ನೋಡಿದಾಗಲೇ ಬಾಹ್ಯವಸ್ತುವಿನ ಮೇಲಿನ ಆಕರ್ಷಣೆ ಹೋಗಬೇಕಾದರೆ.

ಅಂತರ್ಯದಲ್ಲಿರುವ ಆನಂದವನ್ನು ಸವಿ ನೋಡಿದಮೇಲೆ, ಬಾಹ್ಯ ವಸ್ತುವನ್ನು ಲೆಕ್ಕಿಸುವವರಾರು ? ಗಂಧರ್ವಗಾನವನ್ನು ಕೇಳಿದಮೇಲೆ ಫ್ಯಾಕ್ಟರಿ ಸಿಳ್ಳೆಯನ್ನು ಯಾರು ಕೇಳುವುದಕ್ಕೆ ಹೋಗುತ್ತಾರೆ ?

ತೀವ್ರವಾದ ಅಂತರ್ಮುಖ ಜೀವನದಿಂದ ಅವನೊಂದು ವಾತಾವರಣವನ್ನೇ ಸೃಷ್ಟಿ ಮಾಡುತ್ತಾನೆ. ಅಲ್ಲಿಗೆ ಆಧ್ಯಾತ್ಮಿಕತೆ ತಾನಾಗಿ ಬರುವುದು. ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿದವರೆಲ್ಲ ಅವನ ಒಳಗೆ ಬರುತ್ತಾರೆ. ನಾವು ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿಯಬೇಕಾದರೆ, ಅಂತಹ ಜೀವನವನ್ನು ನಡೆಸುತ್ತಿರುವವರ ಸಂಗ ಅತ್ಯಂತ ಸಹಾಯಕಾರಿ. ಇಂತಹ ಉದ್ದೇಶದಿಂದ ಆಕರ್ಷಿತನಾಗಿಯೇ ಅವನು ಗುರುವನ್ನು ಸಂದರ್ಶಿಸುವುದು. ಅನಂತರ ಅವನ ಸಾಧನೆ ಜಯಪ್ರದವಾಗುವುದು.

ನನಗೆ ಸುಂದರವಾದ ಒಂದು ಉಪಮಾನ ಜ್ಞಾಪಕಕ್ಕೆ ಬರುವುದು. ಒಂದು ಸಣ್ಣ ದೋಣಿ ಸಾಗರದಮೇಲೆ ದಿಕ್ಕಿಲ್ಲದೆ ತೇಲಿ ಹೋಗುತ್ತಿತ್ತು. ಆಗ ಒಂದು ದೊಡ್ಡ ಜಹಜು ಹೋಗುತ್ತಿತ್ತು. ಆ ದೋಣಿಯನ್ನು ಆ ದೊಡ್ಡ ಜಹಜಿಗೆ ಕಟ್ಟಿದರು. ಜಹಜು ಸುಲಭವಾಗಿ ಸಾಗರವನ್ನು ದಾಟುವುದು. ಆದರೆ ಸಣ್ಣ ದೋಣಿ ತಾನೇ ಬೇರೆ ಇದ್ದಿದ್ದರೆ, ಚಂಡಮಾರುತ, ಅಲೆಗಳ ಉಪಟಳದ ದೆಸೆಯಿಂದ ಸಮುದ್ರವನ್ನು ದಾಟುವುದಕ್ಕೆ ಆಗುತ್ತಿರಲಿಲ್ಲ.

ಆದರೆ ಈಗ ಜಹಜಿನೊಂದಿಗೆ ಕಟ್ಟಿರುವುದರಿಂದ ಅದು ಮುಳುಗಿ ಹೋಗುವ ಅಪಾಯವಿಲ್ಲ. ಅದರಂತೆಯೇ ಆಧ್ಯಾತ್ಮಿಕ ಜೀವನದಲ್ಲಿ ಗುರುವಿನ ಸಂಪರ್ಕವಾದರೆ ಶಿಷ್ಯನ ಸಾಧನೆ ಜಯಪ್ರದವಾಗುವುದು. ಆಧ್ಯಾತ್ಮಿಕ ಜಹಜಿನಂತಿರುವ ಗುರುವಿನೊಂದಿಗೆ ಸಂಬಂಧವನ್ನು ಪಡೆದರೆ ನೀನು ಭವಸಾಗರವನ್ನು ಸುಲಭವಾಗಿ ದಾಟುವೆ ಎಂದು ತುಳಸಿದಾಸ ಹೇಳುತ್ತಾನೆ.

ನನಗೆ ಗುರು ಹೇಗೆ ಸಿಕ್ಕುತ್ತಾನೆ ಎಂದು ನೀವು ಕೇಳಬಹುದು. ನೀವು ಹುಡುಕಿ ಕೊಂಡು ಹೋಗಬೇಕಾಗಿಲ್ಲ. ನೀವು ಯೋಗ್ಯರಾದ ಶಿಷ್ಯರಾಗುವುದಕ್ಕೆ ಪ್ರಯತ್ನ ಮಾಡಿ ದರೆ, ಗುರು ನಿಮ್ಮ ಬಳಿಗೆ ಬಂದೇ ಬರುತ್ತಾನೆ. ನಿಜವಾದ ಗುರು ಯಾವಾಗ ನಿನ್ನಿಂದ ಆಕರ್ಷಿತನಾಗುತ್ತಾನೆಯೊ, ಆಗ ನಿನಗೇ ಅದು ಗೊತ್ತಾಗುವುದು. ಗುರು ಶಿಷ್ಯರ ಸಂಬಂಧ ಎಂದೆಂದಿಗೂ ಇರುವುದು. ಗುರು-ಶಿಷ್ಯರ ಸಂಬಂಧದಷ್ಟು ಭವ್ಯವಾಗಿರುವುದು, ಮಧುರವಾಗಿರುವುದು ಮತ್ತಾವುದೂ ಇಲ್ಲ.

ಸದ್ಗುರು-ಶಿಷ್ಯರ ಸಂಬಂಧವನ್ನು ಹೀಗೆ ಹೇಳುತ್ತಾರೆ. ಸದ್ಗುರು ಉರಿಯುತ್ತಿರುವ ಪಂಜಿನಂತೆ. ಅವನು ಶಿಷ್ಯನೆಂಬ ಇನ್ನೂ ಉರಿಯದೆ ಇರುವ ಪಂಜನ್ನು ಹತ್ತಿಸುತ್ತಾನೆ. ತನ್ನಲ್ಲಿರುವ ಸುಪ್ತವಾದ ಬೆಂಕಿ ವ್ಯಕ್ತವಾಗುವುದಕ್ಕಾಗಿ ಗುರುವಿನ ಸ್ಪರ್ಶಕ್ಕೆ ಕಾಯುತ್ತಿರು ವನು. ಯೋಗ್ಯನಾಗಿರುವ ಶಿಷ್ಯ ಒಳ್ಳೆ ಒಣಗಿದ ಸೌದೆಯಂತೆ. ಆದರೆ ಗುರು ಬೆಂಕಿ ಯನ್ನು ತಾಕಿಸಿದಲ್ಲದೆ ಅವನು ಹತ್ತಿಕೊಳ್ಳಲಾರ.

ಗುರು ತನ್ನ ಜೀವನದ ಮೇಲ್ಪಂಕ್ತಿಯಿಂದ ಶಿಷ್ಯನಿಗೆ ಸ್ಫೂರ್ತಿಯನ್ನು ಕೊಡುವನು. ತನ್ನ ಬೋಧನೆಯಿಂದ ಶಿಷ್ಯನನ್ನು ಪರಿಶುದ್ಧಗೊಳಿಸುವನು.

ಗುರು-ಶಿಷ್ಯನಿಗೆ ಇರುವ ಸಂಬಂಧದಲ್ಲಿ, ಗುರುವಿನ ಮೇಲೆ ಅದ್ಭುತ ಶ್ರದ್ಧೆ ಇರ ಬೇಕು. ಗುರುವಿಗೆ ಶಿಷ್ಯನ ಮೇಲೆ ಅಹೇತುಕ ಪ್ರೀತಿ ಇರಬೇಕು. ಈ ಸೇತುವೆ ಇರಬೇಕು. ಇಲ್ಲದೆ ಇದ್ದರೆ ಪರಸ್ಪರ ಸಂಬಂಧವಿರುವುದಿಲ್ಲ. ಯಾವಾಗ ಈ ಭವ್ಯ ಸೇತುವೆ ಅಣಿಯಾ ಗುವುದೋ, ಆಗ ಇದರ ಸಂಪರ್ಕ ಪ್ರಾರಂಭವಾಗುವುದು.

ಬೋಧನೆ ಮೂರು ಬಗೆಯಾಗಿವೆ. ಅದೇ ಶ್ರವಣ, ಮನನ, ನಿಧಿಧ್ಯಾಸನ. ಗುರು ಶಿಷ್ಯನಿಗೆ ಮುಂಚೆ ಕೇಳುವಂತೆ ಮಾಡುತ್ತಾನೆ. ಗುರು ಸತ್ಯವನ್ನು ಹೇಳುತ್ತಾನೆ. ಶಿಷ್ಯ ಅದನ್ನು ಕೇಳುತ್ತಾನೆ. ಇದನ್ನೇ ಪದೇ ಪದೇ ಮಾಡುತ್ತಿರಬೇಕು. ಒಂದುಸಲಿಯೊ, ಎರಡುಸಲಿಯೊ, ಕೇಳಿದರೆ ಸಾಕು ಎಂದು ಭಾವಿಸಬೇಡಿ. ಬೋಧನೆಯನ್ನು ಅರ್ಥ ಮಾಡಿಕೊಳ್ಳಲು ಹಲವು ಆತಂಕಗಳಿವೆ. ಶ್ರವಣ ಎಂದರೆ ಕೇಳುವುದು ಮತ್ತು ಜ್ಞಾಪಕ ದಲ್ಲಿಟ್ಟುಕೊಳ್ಳುವುದು.

ಒಂದು ಹಳೆಯ ಹಳ್ಳಿಯ ಕಥೆ ನನಗೆ ಜ್ಞಾಪಕ ಬರುವುದು. ವಿಕಟನೆಂಬ ಒಬ್ಬ ಹಳೆಯ ರಾಕ್ಷಸ ಇದ್ದ. ಅವನು ಇದುವರೆಗೆ ಮನುಷ್ಯರು ಸೊಳ್ಳೆಯನ್ನು ಕೊಲ್ಲುವಂತೆ, ಅವನು ಮನುಷ್ಯರನ್ನು ಕೊಂದು ತಿನ್ನುತ್ತಿದ್ದ. ಅವನಿಗೆ ಈಗ ಆ ಸುಲಭವಾದ ಆಟ ಬೇಜಾರಾಯಿತು. ಕೊಲ್ಲುವುದಕ್ಕೆ ಸ್ವಲ್ಪ ವ್ಯಂಜನ ಬೆರಸಿದ. ಜನರಿಗೆ ಬದುಕುವುದಕ್ಕೆ

ಒಂದು ಅವಕಾಶ ಕಲ್ಪಿಸಿಕೊಡುತ್ತೇನೆ ಎಂದು ಆಲೋಚಿದ. ಹತ್ತಿರದ ಗುಡ್ಡದಲ್ಲಿದ್ದ ತನ್ನ ಮನೆಯಲ್ಲಿ ಅವನು ತಿಂದ ಮನುಷ್ಯರ ತಲೆಯ ಬರುಡೆಗಳ ರಾಶಿ ಇತ್ತು. ಅಲ್ಲಿಗೆ ಹೋಗಿ ಬಹಳ ಜಾಣತನದಿಂದ ನಾಲ್ಕು ತಲೆಯ ಬರುಡೆಗಳನ್ನು ಆರಿಸಿಕೊಂಡ. ಇವುಗಳೆಲ್ಲ ಯಾರದು ಎಂದು ನನಗೆ ಗೊತ್ತಿದೆ ಎಂದ.

ಅವನು ತಲೆ ಬುರುಡೆಗಳನ್ನು ಚೀಲದಲ್ಲಿ ಹಾಕಿಕೊಂಡು ಹತ್ತಿರದ ಹಳ್ಳಿಗೆ ಹೋದ. ಚೀಲವನ್ನು ಬಿಚ್ಚಿ ನಾಲ್ಕು ಬುರುಡೆಗಳನ್ನು ತನ್ನ ಎದುರಿಗೆ ಇಟ್ಟ. ಅಲ್ಲಿ ಹೋಗುತ್ತಿದ್ದವರನ್ನು ಹತ್ತಿರ ಕರೆದು ಈ ಬುರುಡೆಗಳಲ್ಲಿ ಯಾರದು ತುಂಬಾ ಜಾಣನದು ಎಂದು ಕೇಳಿದ. ಇದಕ್ಕೆ ಯಾರಿಗೂ ಉತ್ತರಿಸಲಿಕ್ಕೆ ಆಗಲಿಲ್ಲ. ರಾಕ್ಷಸ, ಜೊತೆಗೆ ತಲೆಬುರುಡೆಗಳು ಇವನ್ನು ನೋಡಿಯೆ ಅವರಿಗೆ ನಡುಕ ಬಂತು. ಯಾವಾಗ ಅವರಿಂದ ಉತ್ತರವೇ ಇಲ್ಲವೋ ಅವರನ್ನು ಹಿಡಿದು ಚೀಲದಲ್ಲಿ ಹಾಕಿಕೊಂಡು ಹೋಗುತ್ತಿದ್ದನು. ಹೀಗೆ ಕೆಲವು ದಿನಗಳು ಆದವು.

ಈ ಹಾವಳಿಯಿಂದ ಹೇಗೆ ಪಾರಾಗಬೇಕೊ ಹಳ್ಳಿಯವರಿಗೆ ಗೊತ್ತಿರಲಿಲ್ಲ. ಪಕ್ಕದ ಹಳ್ಳಿಯಲ್ಲಿದ್ದ ಒಬ್ಬ ಸಾಧುವಿಗೆ ಹೇಳಿಕಳುಹಿಸಿದರು. ಮಾರನೆ ದಿನ ಬೆಳಗ್ಗೆ ಹೊತ್ತಿಗೆ ಮುಂಚೆ ಅವನು ಬಂದ. ಅವನು ವಿಕಟನೆಂಬ ರಾಕ್ಷಸನ ಬಳಿಗೆ ಹೋಗಿ, ನೀನೇನು ಮಾಡುತ್ತಿರುವೆ ಎಂದು ಕೇಳಿದ.

ವಿಕಟ : ಇದುವರೆಗೆ ನನಗೆ ಯಾರು ಯಾರು ಬೇಕೋ ಅಂತಹ ಮನುಷ್ಯರನ್ನೇ ನಾನು ತಿಂದಿದ್ದೇನೆ. ಈಗ ನನ್ನ ಇಳಿವಯುಸ್ಸಿನಲ್ಲಿ ಅದನ್ನು ಸ್ವಲ್ಪ ಸ್ವಾರಸ್ಯವಾಗಿ ಮಾಡಿದ್ದೇನೆ. ನಾನು ಅವರೊಡನೆ ಒಂದು ಪಂದ್ಯ ಹೂಡುತ್ತೇನೆ. ಅವರು ಅದರಲ್ಲಿ ಗೆದ್ದರೆ ಬದುಕಬಹುದು.

ಸಾಧು ಪಂದ್ಯ ಏನು ಎಂದು ಕೇಳಿದ. ವಿಕಟ, ಈ ನಾಲ್ಕು ತಲೆಬುರುಡೆಗಳನ್ನು ತೋರಿಸಿ ಯಾರು ತುಂಬಾ ಬುದ್ಧಿವಂತರು ಎಂದು ಕೇಳುತ್ತೇನೆ. ಅವರು ಅದಕ್ಕೆ ಉತ್ತರವನ್ನು ಕೊಡದೆ ಇದ್ದರೆ ಅವರು ನನ್ನವರಾಗುತ್ತಾರೆ. ನಾನು ನಿನಗೆ ಆ ಪ್ರಶ್ನೆಯನ್ನು ಹಾಕಿದರೆ ನೀನೇನು ಉತ್ತರ ಹೇಳುವಿ ಎಂದು ಕೇಳಿದ.

ಒಂದು ನಿಮಿಷ ತಾಳು ಎಂದು ಸಾಧು. ನಾನು ನಿನ್ನ ಉತ್ತರವನ್ನು ಸರಿಯಾಗಿ ಹೇಳಿದರೆ ನೀನು ಏನು ಕೊಡುತ್ತೀ ಎಂದು ಕೇಳಿದ. ಆದಕ್ಕೆ ರಾಕ್ಷಸ, ನಾನು ಅದನ್ನು ಆಲೋಚಿಸಿಯೇ ಇರಲಿಲ್ಲ, ನಾನು ನನ್ನ ಶಕ್ತಿಯನ್ನೆಲ್ಲ ನಿನಗೆ ಕೊಟ್ಟುಬಿಡುತ್ತೇನೆ. ಪಂದ್ಯ ಸರಿಸಮನಾಗಿರುವುದು ಎಂದು ಹೇಳಿದ. ಸಾಧು, ಹಾಗೇ ಆಗಲಿ, ನಾನು ನಿನ್ನ ಪ್ರಶ್ನೆಗೆ ಉತ್ತರ ಕೊಟ್ಟರೆ ಈ ಮನುಷ್ಯರನ್ನು ತಿನ್ನುವ ಕೆಟ್ಟ ಅಭ್ಯಾಸದಿಂದ ನೀನು ಪಾರಾಗಬೇಕು ಎಂದ.

ಸಾಧು ಒಂದು ತಲೆಬುರುಡೆಯನ್ನು ತೆಗೆದುಕೊಂಡ. ಅದನ್ನು ಜೋಪಾನವಾಗಿ ನೋಡಿ, ಅದರ ಒಂದು ಕಿವಿಗೆ ಒಂದು ಸಣ್ಣ ಕಿಲ್ಲನ್ನು ಹಾಕಿದನು. ಅದು ತಲೆಬರುಡೆ ಒಳಗೆ ಹೋಗಿ ಮತ್ತೊಂದು ಕಿವಿಯ ಮೂಲಕ ಹೊರಗೆ ಬಂತು. ಅದನ್ನು ಕೆಳಗೆ ಇಟ್ಟು ಸಾಧು, ಇವನೊಬ್ಬ ಅಯೋಗ್ಯ, ಧಾರ್ಮಿಕ ವಿಷಯಗಳನ್ನು ಒಂದು ಕಿವಿಯಿಂದ ಕೇಳಿ

ಮತ್ತೊಂದು ಕಿವಿಯ ಮೂಲಕ ಅದನ್ನು ಬಿಟ್ಟುಬಿಟ್ಟ ಎಂದ. ಅದು ಅವನ ಜೀವನದ ಮೇಲೆ ಏನೂ ಪರಿಣಾಮ ಉಂಟುಮಾಡಲಿಲ್ಲ.

ಸಾಧು ಮತ್ತೊಂದು ತಲೆಬುರುಡೆಯನ್ನು ತೆಗೆದುಕೊಂಡು ಅದರ ಕಿವಿಗೆ ಒಂದು ಕಲ್ಲನ್ನು ಹಾಕಿದ. ಅದು ತಲೆಬುರುಡೆ ಒಳಗೆ ಹೋಗಿ ಬಾಯಿ ಮೂಲಕ ಬಂತು. ಈ ಮನುಷ್ಯ ಒಳ್ಳೆಯ ವಿಷಯಗಳನ್ನು ಕೇಳಿದ, ಆದರೆ ಸುಮ್ಮನೆ ಅದನ್ನು ಹರಟುತ್ತಿದ್ದ. ಕಿವಿ ಕೇಳುವುದಕ್ಕಿಂತ ಬೇಗ ಬಾಯಿ ಮಾತು ಖರ್ಚುಮಾಡುತ್ತಿತ್ತು. ಅವನು ಯಾವಾಗಲೂ ದರಿದ್ರನಾಗಿದ್ದ.

ಅವನು ಮೂರನೆಯ ತಲೆಬುರುಡೆಯನ್ನು ತೆಗೆದುಕೊಂಡ. ನರಮಾಂಸ ಭಕ್ಷಕನಾದ ರಾಕ್ಷಸ ವಿಕಟ, ಅಂಜಿಕೆಯಿಂದಲೂ ವಿಸ್ಮಯದಿಂದಲೂ ಇದನ್ನು ನೋಡುತ್ತಿದ್ದ. ಸಾಧು ಮೂರನೆಯದರ ಕಿವಿಗೆ ಕಲ್ಲನ್ನು ಹಾಕಿದ. ಕಲ್ಲು ಕೊರಳಿನ ಕೆಳಗೆ ಬಂತು. ಈ ಮನುಷ್ಯ ಒಳ್ಳೆಯವನು. ಆದರೆ ದುರ್ಬಲ. ಅವನಿಗೆ ಜ್ಞಾನದ ರುಚಿ ಮಾತ್ರ ಸಿಕ್ಕಿತು. ಆದರೆ ಅದನ್ನು ಸಂಪಾದನೆ ಮಾಡಲು ಯತ್ನಿಸಲಿಲ್ಲ. ನಾಳೆಯಿಂದ ಅದನ್ನು ಮಾಡೋಣ ಎಂದು ಮುಂದೂಡುತ್ತಿದ್ದ. ಆ ನಾಳೆ ಬರಲೇ ಇಲ್ಲ ಎಂದ.

ನಾಲ್ಕನೇ ಬುರುಡೆ ಒಳಗೆ ಕಲ್ಲನ್ನು ಹಾಕಿದಾಗ ಅದು ಹೊರಗೆ ಬರಲೇ ಇಲ್ಲ. ಇವನು ನಿಜವಾಗಿಯೂ ಜ್ಞಾನಿ ಎಂದ. "ಅವನು ಯಾವಾಗಲೂ ಜ್ಞಾನವನ್ನೇ ತನ್ನಲ್ಲಿಟ್ಟು ಕೊಂಡಿದ್ದ. ಅವನು ಕಲಿತದ್ದನ್ನೆಲ್ಲ ಜ್ಞಾಪಕದಲ್ಲಿಟ್ಟುಕೊಂಡಿದ್ದ. ಆ ಜ್ಞಾನವೇ ಇವನ ಜೀವನವನ್ನೆಲ್ಲ ರೂಪಿಸುತ್ತಿತ್ತು."

ವಿಕಟ ಹೇಳಿದ "ನಿನ್ನಂತಹ ಮಹಾಪುರುಷನಿಂದ ಸೋಲುವುದು ನನ್ನ ಭಾಗ್ಯ. ನನ್ನ ಮುಂದಿನ ಜೀವನದಲ್ಲಿ ನಿಮ್ಮ ಶಕ್ತಿಯ ಒಂದು ಚುಟುಕಾದರೂ ನನಗೆ ಬರಲಿ. ಈ ಜನ್ಮ ಈಗ ನಿಮ್ಮದು, ಏನುಬೇಕಾದರೂ ಮಾಡಿ."

ಸಾಧು ಮಂದಹಾಸದಿಂದ ಹೀಗೆ ಹೇಳಿದ. "ನಾನು ಕೊಲ್ಲುವುದಿಲ್ಲ. ನಾನು ನಾಶದ ಮೇಲೆಯೂ ಕಟ್ಟುವುದಕ್ಕೆ ಪ್ರಯತ್ನಿಸುವೆನು. ನೀನು ನಾಲ್ಕನೆಯವನನ್ನು ಅನುಸರಿಸು ವುದಕ್ಕೆ ಒಪ್ಪಿಕೊಂಡರೆ ಹೇಗೆ ಜ್ಞಾನಿಯಾಗುವುದು ಎಂದು ಹೇಳುತ್ತೇನೆ." ವಿಕಟ ಸಾಧು ವಿನ ದೊಡ್ಡ ಶಿಷ್ಯನಾದನು. ಅವನು ಏನನ್ನು ಕೇಳಿದನೊ ಅದು ಹೊರಗೆ ಬರಲಿಲ್ಲ. ಅವನೊಬ್ಬ ದೊಡ್ಡ ಜ್ಞಾನಿಯಾದ.

ಇದೊಂದು ಬುದ್ಧಿಪ್ರದವಾದ ಸಣ್ಣ ಕಥೆ. ನಾವು ಯಾವ ಕಾರ್ಯಕ್ಷೇತ್ರದಲ್ಲಿಯಾದರೂ ಮುಂದುವರಿಯಬೇಕಾದರೆ, ಕೇಳಿದುದನ್ನು ಜ್ಞಾಪಕದಲ್ಲಿಟ್ಟುಕೊಂಡಿರಬೇಕು: ಅವುಗಳನ್ನು ಜೀರ್ಣಿಸಿಕೊಂಡು, ನಮ್ಮದನ್ನಾಗಿ ಮಾಡಿಕೊಳ್ಳಬೇಕು. ನಾವು ನಂಬಿದಂತೆ ಆಗಬೇಕು, ಬಾಳಬೇಕು.

ಶ್ರವಣ ಗುರುವಿನ ಉಪದೇಶದ ಮೊದಲನೆಯ ಭಾಗ. ಮೊದಲು ಶಿಷ್ಯ ಉಪದೇಶ ವನ್ನು ಶ್ರದ್ಧೆಯಿಂದ ಕೇಳಬೇಕು. ಗುರು ವಿವರಿಸುವುದನ್ನು ಕೇಳಿದಮೇಲೆ ಮನನ ಎಂಬ ಎರಡನೆಯದಕ್ಕೆ ಬರುತ್ತಾನೆ.

ಮನನ ಎಂದರೆ ಮನಸ್ಸಿನಲ್ಲಿ ಅದರ ಪೂರ್ವಾಪರವನ್ನೆಲ್ಲ ವಿಚಾರಮಾಡಿ, ಜೀರ್ಣಿಸಿ ಕೊಳ್ಳುವುದು. ಆಗ ಮನಸ್ಸು ಸರಿಯೊ ಅಲ್ಲವೊ ಎಂದು ಯೋಚಿಸುತ್ತಿರುವುದು. ಯಾವಾಗ ಒಂದು ವಿಷಯವನ್ನು ಕೇಳುತ್ತೇವೆಯೊ ಆಗ ಮನಸ್ಸು ಗಡಿಯಾರದ ಪೆಂಡುಲಂನಂತೆ ಸರಿಯೊ ಅಲ್ಲವೊ ಎಂದು ಎರಡೂ ಕಡೆಯೂ ಓಲಾಡುತ್ತಿರುವುದು. ಶಿಷ್ಯ ಪ್ರಶ್ನೆಗಳನ್ನು ಕೇಳುತ್ತಾನೆ, ತನ್ನ ಪಾಂಡಿತ್ಯವನ್ನು ತೋರಿಸಬೇಕೆಂದಲ್ಲ, ಸತ್ಯವನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದಕ್ಕೆ. ಆಗ ಮನಸ್ಸು ವಿಚಾರದಿಂದ ತಾಡಿತವಾಗಿರುವುದು. ಮನನ ಮಾಡಿದಮೇಲೆ ಕ್ರಮೇಣ ಅಂತರ್ಮುಖವಾಗುವುದು. ಅನಂತರ ಅದರ ಸತ್ಯವನ್ನು ಅನುಭವಿಸುವುದು.

ಮನನವನ್ನು ಉದಾಹರಿಸುವುದಕ್ಕೆ ಒಂದು ಸಣ್ಣ ಕಥೆಯನ್ನು ಕೊಡುತ್ತೇನೆ. ಒಬ್ಬ ತತ್ವಜ್ಞಾನಿ ಮನೆಯಲ್ಲಿ ಓದುತ್ತಿದ್ದ. ದೀಪಕ್ಕೆ ಎಣ್ಣೆಯನ್ನು ತೆಗೆದುಕೊಂಡು ಬನ್ನಿ ಎಂದು ಅವಳು ಗಂಡನನ್ನು ಗಾಣಿಗರ ಮನೆಗೆ ಕಳುಹಿಸಿಳು. ಗಾಣಿಗನ ಬಳಿಗೆ ಹೋಗುತ್ತಿದ್ದಾಗ ತಾನು ಏನನ್ನು ಓದಿದ್ದನೊ ಅದನ್ನು ಮನನ ಮಾಡುತ್ತಿದ್ದ. ಗಾಣಿಗ ಎಣ್ಣೆ ಕೊಡುವುದಕ್ಕೆ ಬಂದಾಗ ಇವನು ಗಾಣವನ್ನು ಒಂದು ಎತ್ತಿನಿಂದ ಆಡಿಸುತ್ತಿದ್ದುದನ್ನು ನೋಡಿದ. ಎತ್ತಿನ ಕಣ್ಣನ್ನು ಕಟ್ಟಿದ್ದರು. ಅದು ಬೀಜಗಳನ್ನು ಗಾಣದಲ್ಲಿ ರುಬ್ಬುತ್ತ ಸುತ್ತಲೂ ಬರುತ್ತಿತ್ತು. ಗಾಣಿಗ ಗಿರಾಕಿಗಳೊಡನೆ ನಿಂತು ಮಾತನಾಡುತ್ತಿದ್ದರೂ, ಎತ್ತು ಯಾವಾಗ ನಿಲ್ಲುವುದೊ ಗೊತ್ತಾಗುತ್ತಿತ್ತು. ಏಕೆಂದರೆ ಎತ್ತಿನ ಕೊರಳಿಗೆ ಒಂದು ಗಂಟೆ ಕಟ್ಟಿದ್ದರು. ಯಾವಾಗ ಗಂಟೆ ಶಬ್ದ ನಿಲ್ಲುತ್ತಿತ್ತೊ, ಎತ್ತು ನಿಂತಿದೆ ಎಂದು ಗೊತ್ತಾಗಿ, ಅವನು ಬಂದು ಎತ್ತನ್ನು ಹೊಡೆದು, ಮುಂದೆ ಕಳುಹಿಸುತ್ತಿದ್ದನು.

ತತ್ವಜ್ಞಾನಿ ಗಾಣಿಗನಿಗೆ, "ಗಾಣಿಗ ನೀನು ಜಾಣ. ನೀನು ದೊಡ್ಡ ನ್ಯಾಯ ಪಂಡಿತನಾಗಬಹುದಾಗಿತ್ತು" ಎಂದು ಹೇಳಿ ಮನೆಗೆ ಹಿಂತಿರುಗುತ್ತಿದ್ದ. ಆಗ ಗಾಣಿಗನ ಜಾಣತನವನ್ನು ಮೆಚ್ಚುತ್ತಿದ್ದ. ಎತ್ತು ನಡೆಯುವುದು, ಗಂಟೆ ಹೊಡೆಯುವುದು ಒಟ್ಟಿಗೆ ಹೋಗುವುದು. ಇದನ್ನೇ ಮನಸ್ಸಿನಲ್ಲಿ ಮನನಮಾಡುತ್ತಿದ್ದ. ತಕ್ಷಣವೇ ಎಣ್ಣೆ ಪಾತ್ರೆಯನ್ನು ಕೆಳಗೆ ಬಿಸುಟು ಗಾಣಿಗನ ಹತ್ತಿರ ಹೋಗಿ, ಈಗ ನನಗೆ ಗೊತ್ತಾಯಿತು, ಈಗ ನನಗೆ ಗೊತ್ತಾಯಿತು ಎಂದು ಹೇಳಿದ.

ಏನು ಗೊತ್ತಾಯಿತು ಎಂದು ಗಾಣಿಗ ಕೇಳಿದ. ನಿನ್ನ ತರ್ಕದ ದೋಷ ನನಗೀಗ ಗೊತ್ತಾಯಿತು, ನಿನ್ನ ಎತ್ತು ನಡೆಯುವುದನ್ನು ನಿಲ್ಲಿಸಿ ಸುಮ್ಮನೆ ತಲೆ ಅಲ್ಲಾಡಿಸುತ್ತಿದ್ದರೆ ಆಗ ನಡೆಯದೆ ಇದ್ದರೂ ಗಂಟೆ ಹೊಡೆಯುತ್ತಿರುವುದು. ಆಗ ಗಾಣಿಗ ಹೇಳಿದ "ದೇವರಿಗೆ ಧನ್ಯವಾದ, ನನ್ನ ಎತ್ತು ನಿನ್ನ ನ್ಯಾಯ ಓದಿಲ್ಲ."

ಮುಂಚೆ ವಿದ್ಯಾರ್ಥಿ ಗುರು ಹೇಳುವುದನ್ನು ಕೇಳುವನು. ಅನಂತರ ಅದನ್ನು ಕುರಿತು ವಿಚಾರಮಾಡುವನು. ಅದರಲ್ಲಿ ದೋಷ ಗೊತ್ತಾದಾಗ, ಅದನ್ನು ತೋರಿಸುವುದಕ್ಕೆ ಓಡುತ್ತಾನೆ. ಅವನು ಮನನಮಾಡಿದ್ದರಿಂದ ಆ ದೋಷ ಗೊತ್ತಾಯಿತು.

ನಿಧಿಧ್ಯಾಸನ ಎಂದರೆ, ಸತ್ಯವನ್ನು ಕುರಿತು ಧ್ಯಾನಿಸುವುದು ಎಂದು. ದ್ರವ ಒಂದು

ಪಾತ್ರೆಯಿಂದ ಮತ್ತೊಂದು ಪಾತ್ರೆಗೆ ಬೀಳುವಂತೆ ಆದಾಗ ಅದು ಸ್ಥಿರವಾಗುವುದು, ಸ್ವಾಭಾವಿಕವಾಗುವುದು. ನಿಧಿಧ್ಯಾಸನ ಎಂದರೆ ಸದಾ ಸ್ವಾಭಾವಿಕವಾಗಿ ಹರಿಯುವ ಜ್ಞಾನ ಪ್ರವಾಹ. ನೀವು ಕಲಿತದ್ದು ನಿಮ್ಮದಾಗುವುದು, ನೀವೇ ಅದು ಎಂದು ನಿಮಗೆ ಅರಿವಾಗುವುದು.

ಮೂರು ಮಾರ್ಗದಲ್ಲಿ ಜ್ಞಾನ ಹೇಗೆ ನಮ್ಮಲ್ಲಿ ವಿಕಾಸವಾಗುವುದು ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದು. ಇದು ಎಲ್ಲಾ ವಿದ್ಯೆಗೂ ಅನ್ವಯಿಸುವುದು. ನೀವೊಂದು ಮಗುವಿಗೆ ಒಳ್ಳೆಯದು ಎಂಬುದನ್ನು ಹೇಳುತ್ತೀರಿ ಎಂದು ಇಟ್ಟುಕೊಳ್ಳಿ. ಮಗು ಅದನ್ನು ಕೇಳಿದಾಗ ಅದೊಂದು ಶಬ್ದ ಮಾತ್ರವಾಗಿರುವುದು. ಅದನ್ನು ಅದು ಬೇಗ ಮರೆಯುವುದು. ಆ ಮಗುವಿಗೆ ನೀನೊಳ್ಳೆಯ ಮಗು ಎಂದರೆ ಅದು ಎರಡನೆಯ ಮೆಟ್ಟಲು. ಅವನು ಕೆಲವು ವೇಳೆ ಒಳ್ಳೆಯವನಾಗಿರುವನು. ಕೊನೆಗೆ ಒಳ್ಳೆಯದೆಂದರೆ ಏನು ಎಂಬುದು ಅವನಿಗೆ ಅರ್ಥವಾಗಿ ಅವನು ಅದರಂತೆ ಆಗುತ್ತಾನೆ. ಇದೇ ಮೂರನೆಯ ಮೆಟ್ಟಲು. ಅವನು ಅದರಂತೆ ಆಗುತ್ತಾನೆ. ಅನೇಕರು ಮೊದಲನೆ ಎರಡು ಮೆಟ್ಟಲಿಗೆ ಬರುತ್ತಾರೆ. ಮೂರನೆಯದಕ್ಕೆ ಹೋಗುವುದಿಲ್ಲ. ಅವರು ಏನನ್ನು ನಂಬುತ್ತಾರೊ ಅದರಂತೆ ಆಗುವುದಿಲ್ಲ. ಅವರು ಎರಡು ವ್ಯಕ್ತಿಗಳಂತೆ ಇರುತ್ತಾರೆ. ಒಂದನ್ನು ನಂಬುತ್ತಾರೆ. ಮತ್ತೊಂದನ್ನು ಮಾಡುತ್ತಾರೆ.

ಜ್ಞಾನಯೋಗದಲ್ಲಿ ಸಾಧಕ, ದೃಗ್ ದೃಶ್ಯಗಳ ಸತ್ಯವನ್ನು ಅರಿಯಬೇಕಾದರೆ, ಶ್ರವಣ, ಮನನ ಮತ್ತು ನಿಧಿಧ್ಯಾಸನ ಮಾಡಬೇಕು. ಶಂಕರಾಚಾರ್ಯರು ಸೂತ್ರಗಳನ್ನು ಮೂರು ವಾಕ್ಯಗಳಲ್ಲಿಡುತ್ತಾರೆ. ಬ್ರಹ್ಮಸತ್ಯ, ಜಗತ್‌ಮಿಥ್ಯ, ಜೀವ ಬ್ರಹ್ಮನಲ್ಲದೆ ಬೇರಲ್ಲ. ಶಿಷ್ಯ ಇದರ ಸತ್ಯವನ್ನು ಗುರುಮುಖೇನ ಕೇಳುವನು. ಅವನು ಶಾಸ್ತ್ರಗಳ ಮೂಲಕವೂ, ಅದನ್ನೇ ಸಾಕ್ಷಾತ್ಕಾರ ಮಾಡಿಕೊಂಡವರ ವಾಣಿಯಿಂದಲೂ ಇದನ್ನು ಉದಹರಿಸುವನು. ಅವನು ತನ್ನ ಅನುಭವದಿಂದಲೂ ಹೇಳಬಹುದು. ಅವನು ಅದರ ಸತ್ಯವನ್ನು ತಿಳಿಸಲು ನಿತ್ಯಜೀವನದ ಉದಾಹರಣೆಗಳನ್ನು ಕೊಡಬಹುದು. ಗುರು ಈ ಸತ್ಯದ ಪ್ರಾಮುಖ್ಯತೆಯನ್ನು ಎಲ್ಲಾ ವಿಧದಿಂದಲೂ ವಿವರಿಸುವನು. ಪುನರುಕ್ತಿಯಿಂದ ಮತ್ತು ವಿಧವಿಧವಾಗಿ ಆತ ಸತ್ಯವನ್ನು ಶಿಷ್ಯನಿಗೆ ಹೇಳುವನು.

ಶಿಷ್ಯನು ಇವುಗಳನ್ನು ಕೇಳಿ,ಶ್ರದ್ಧೆಯಿಂದ ಇವುಗಳನ್ನು ಮನನಮಾಡಿ, ಅರ್ಥಮಾಡಿಕೊಳ್ಳಲು ತನ್ನ ಮನಸ್ಸಿನಲ್ಲಿಯೇ ಮನನ ಮಾಡುವನು. ಇವುಗಳ ಮೇಲೆ ಧ್ಯಾನಮಾಡಿಕೊಂಡು ಸಾಕ್ಷಾತ್ಕಾರ ಮಾಡಿಕೊಳ್ಳಲು ಯತ್ನಿಸುವನು. ಅವುಗಳನ್ನು ಅರ್ಥಮಾಡಿ. ಜೀವ, ಜಗತ್, ಬ್ರಹ್ಮ ಇವುಗಳ ಮೇಲೆ,ತನಗಿರುವ ಅಜ್ಞಾನವನ್ನು ಕಳೆದುಕೊಳ್ಳುವನು.

ಏಕಾಗ್ರತೆ ಎಂದರೆ ಪದೇ ಪದೇ ಅದನ್ನು ಕುರಿತು ಚಿಂತಿಸುವುದೇ ಸಾಕ್ಷಾತ್ಕಾರವನ್ನು ಪಡೆದುಕೊಳ್ಳುವುದಕ್ಕೆ ಸಹಾಯಮಾಡುವುದು. ನಾವು ಯಾವುದನ್ನು ಕುರಿತು ಚಿಂತಿಸುತ್ತೇವೆಯೋ ಅದರಂತೆ ಆಗುವೆವು. ನಾವು ಬ್ರಹ್ಮನನ್ನು ಕುರಿತು ಚಿಂತಿಸಿದರೆ ಬ್ರಹ್ಮನಾಗುತ್ತೇವೆ. ಆದರೆ ಇದು ಕ್ರಮೇಣ ಆಗುವುದು. ಇದು ಭ್ರಮರ ಕೀಟನ್ಯಾಯ

ದಂತೆ ಕಣಜ, ಕೀಟವನ್ನು ಕುಟುಕಿದರೂ ಅದು ಸಾಯುವುದಿಲ್ಲ. ಕಡಿತದಿಂದ ಕೀಟ ತನ್ನ ಪಜ್ಞೆಯನ್ನು ಕಳೆದುಕೊಳ್ಳುವುದು. ಆಗ ಕೀಟವನ್ನು ಭ್ರಮರ ತನ್ನ ಗೂಡಿಗೆ ಕರೆದು ಕೊಂಡು ಹೋಗುವುದು. ಅಲ್ಲಿ ಕೀಟ ಕೆಲವುಕಾಲ ಅಂಜಕೆಯಿಂದ ಇರುವುದು. ಆಗ ಭ್ರಮರವನ್ನೇ ಕುರಿತು ಚಿಂತಿಸುತ್ತಿರುವುದು. ಕ್ರಮೇಣ ಕೀಟದಲ್ಲಿ ಒಂದು ಬದಲಾವಣೆ ಆಗುವುದು. ಅದೂ ಕೂಡ ಭ್ರಮರದಂತೆ ಆಗುವುದು. ಈಗ ಕೀಟಕ್ಕೂ ಭ್ರಮರಕ್ಕೂ ಯಾವ ವ್ಯತ್ಯಾಸವೂ ಇರುವುದಿಲ್ಲ. ಅನೇಕರು ಇದನ್ನು ನೋಡಿದ್ದಾರೆ. ನೀವು ಇದನ್ನು ಅಕ್ಷರಶಃ ಸತ್ಯ ಎಂದು ಒಪ್ಪಿಕೊಳ್ಳದೇ ಇದ್ದರೂ ಆಧುನಿಕ ಮಾನಸ ಶಾಸ್ತ್ರದಲ್ಲಿ ಇಂತಹ ಉದಾಹರಣೆಗಳಿವೆ. ಒಂದು ವ್ಯಕ್ತಿಯಲ್ಲಿ ಮುಖ್ಯವಾಗಿರುವುದು ಭಾವನೆ. ಅವನು ಬಾಹ್ಯ ದಲ್ಲಿ ಸ್ಥೂಲವಾಗಿ ವ್ಯಕ್ತಪಡಿಸುವುದು ಅವನಲ್ಲಿರುವ ಸೂಕ್ಷ್ಮ ಭಾವನೆ. ನೀವು ಅಯೋಗ್ಯ ವಾದ ಭಾವನೆಗಳನ್ನು ಚಿಂತಿಸುತ್ತಿದ್ದರೆ, ನೀವೂ ಕೂಡ ಅಯೋಗ್ಯರೇ ಆಗುವಿರಿ. ಇದಕ್ಕೆ ವಿರೋಧವಾಗಿರುವುದೂ ಸತ್ಯವೇ. ನೀವು ಶುದ್ಧ, ಬುದ್ಧ, ಬೋಧಸ್ವರೂಪರು ಎಂದು ಭಾವಿಸಿದರೆ, ಅದೇ ನಿಮ್ಮ ಮೂಲಕ ವ್ಯಕ್ತವಾಗುವುದು. ಈ ವ್ಯಕ್ತಿ ಅದನ್ನು ಪೂರ್ಣ ವಾಗಿ ಪ್ರತಿಬಿಂಬಿಸಲು ಸಾಧ್ಯವಾಗದೆ ಇರಬಹುದು. ಆದರೆ ಬದಲಾವಣೆ ಕ್ರಮೇಣ ಆಗುವುದು.

ನಮ್ಮಲ್ಲಿರುವ ಪವಿತ್ರತೆಯು ಭಾವನೆಯೊಂದಿಗೆ ದೀಪ್ತಿಗೊಳ್ಳುವುದು ಅಲಂಕಾರಿಕ ವಾಗಿ ಹೇಳುವುದಿರಬಹುದು. ಬ್ರಹ್ಮನನ್ನು ನಮ್ಮಲ್ಲಿ ಯಾವ ಒಂದು ಸ್ಥಳದಲ್ಲಿಯೂ ಹುಡುಕುವುದಕ್ಕೆ ಆಗುವುದಿಲ್ಲ. ಬ್ರಹ್ಮ ಅನಂತ ಸಾಗರದಂತೆ. ನಾವುಗಳೆಲ್ಲ ಅದರಲ್ಲಿರುವ ಬುದ್ಬುಗಳಂತೆ. ಬ್ರಹ್ಮ ನಮ್ಮ ಒಳಗೆ ಮತ್ತು ಹೊರಗೆ ಇರುವನು. ಈ ದೇಹ ಮನಸ್ಸು, ಇಂದ್ರಿಯಗಳೆಂಬ ಈ ಬುದ್ಬುಯಲ್ಲಿ ಬ್ರಹ್ಮನೇ ಇರುವುದು ಎಂದು ನಾವು ಆಲೋಚಿಸುತ್ತಿ ದ್ದರೆ, ಅವನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲು ಕಷ್ಟವೆ? ನೀವು ಒಂದು ಕೆಲಸದಲ್ಲಿರು ವಾಗಲೂ, ಆದರ್ಶದ ಮೇಲೆ ಮನಸ್ಸನ್ನು ಕೇಂದ್ರೀಕರಿಸಿದರೆ, ಅದನ್ನೇ ಕುರಿತು ಚಿಂತಿಸು ತ್ತಿದ್ದರೆ, ಸಾಕ್ಷಾತ್ಕಾರ ಬೇಗ ಪ್ರಾಪ್ತವಾಗುವುದು.

ಇಲ್ಲೊಂದು ಸುಲಭವಾದ ಉದಾಹರಣೆ ಇದೆ. ನಿಮ್ಮ ಪ್ರಿಯ ಮಿತ್ರ ಹಲವು ವರುಷಗಳಾದಮೇಲೆ ನಿಮ್ಮ ಮನೆಗೆ ಬರುವುದನ್ನು ನಿರೀಕ್ಷಿಸುತ್ತಿರುವಿರಿ ಎಂದು ಇಟ್ಟು ಕೊಳ್ಳೋಣ. ಅವನು ನಾಳಿದ್ದು ಬರುತ್ತಾನೆ. ನೀವು ಇಂದೇ ಬೆಳಗಿನಿಂದ ಸಾಯಂಕಾಲ ದವರೆಗೆ ಅವನ ಬರುವಿಗಾಗಿ ಸಿದ್ಧತೆಗಳನ್ನು ಮಾಡುತ್ತಿರುವಿರಿ. ನಿಮಗೆ ಬೇರೆ ಆಲೋ ಚನೆ ಮಾಡುವುದಕ್ಕೇ ಸಮಯವಿರುವುದಿಲ್ಲ. ನಿಮ್ಮ ದೇಹ ಮತ್ತು ಮನಸ್ಸು ಎರಡಕ್ಕೂ ಬಿಡುವಿಲ್ಲ. ಈಗ ನಿಮ್ಮ ಮನಸ್ಸಿನಲ್ಲಿರುವುದನ್ನು ವಿಭಜನೆ ಮಾಡಿನೋಡಿ. ನೀವು ನಿಮ್ಮ ಪ್ರಿಯಮಿತ್ರನಿಂದ ಬೇರೆ ಇರುವಿರಾ? ನೀವು ಎಷ್ಟೋ ಕೆಲಸದಲ್ಲಿ ನಿರತರಾಗಿರುವಾಗಲೂ, ನಿಮ್ಮ ಪ್ರತಿಯೊಂದು ಉಸಿರಾಡುವುದರ ಹಿಂದೆಯೂ ಅವನೇ ಸ್ಪಂದಿಸುತ್ತಿರುವನು. ನೀವು ಮನೆ ಕಸ ಗುಡಿಸುತ್ತಿರುವಾಗಲೂ ಅವನನ್ನೇ ಕುರಿತು ಚಿಂತಿಸುತ್ತಿರುವಿರಿ. ನೀವು ಅಡಿಗೆ ಮಾಡುವಾಗ ಕೈಯಲ್ಲಿ ಆಲೂಗಡ್ಡೆ ಹೆಚ್ಚುತ್ತಿರಬಹುದು, ಆದರೆ ಮನಸ್ಸು ಪ್ರಿಯ ಸ್ನೇಹಿತ

ನನ್ನೇ ಕುರಿತು ಚಿಂತಿಸುತ್ತಿರುವುದು. ಅವನ ಸ್ಮೃತಿಯೇ ನಿಮ್ಮ ಆಲೋಚನೆ ಮತ್ತು ಕ್ರಿಯೆಯ ಹಿಂದೆಲ್ಲ ಇದೆ.

ನೀವು ಈ ಉಪಮಾನವನ್ನು ಒಪ್ಪಿಕೊಳ್ಳುವುದಾದರೆ ಇದಕ್ಕಿಂತ ವಿಸ್ತಾರವಾಗಿ ಅರ್ಥಬರುವುದನ್ನು ಒಪ್ಪಿಕೊಳ್ಳದೇ ಇರುವುದಕ್ಕೆ ಆಗುವುದಿಲ್ಲ. ನಮ್ಮ ಜೀವನದಲ್ಲಿ ಆ ಪರಮ ಆದರ್ಶವೇ ಇದೆ ಎಂಬ ಮುಖ್ಯ ತತ್ತ್ವವನ್ನು ನಾವು ಅನುಭವಕ್ಕೆ ತಂದು ಕೊಳ್ಳ ಬೇಕು. ನಮ್ಮ ಆಲೋಚನೆ ಮತ್ತು ಕರ್ಮದ ಹಿಂದೆ ಅದೊಂದೇ ಹಿಮ್ಮೇಳವಾಗಿರುವುದು. ಆಗ ನಾವು ಪ್ರಪಂಚದಲ್ಲಿ ಏನನ್ನಾದರೂ ಮಾಡಬೇಕಾದರೆ ಅದನ್ನು, ಇಲ್ಲಿ ಯಾವ ಭಯವೂ ಇಲ್ಲದೆ ಮಾಡಬಹುದು, ಸಂಚರಿಸಬಹುದು. ಎಲ್ಲಾ ಸಮಯದಲ್ಲಿಯೂ, ನಮ್ಮ ಮೂಲ ಆದರ್ಶಕ್ಕೆ ಆಸಕ್ತರಾಗುವೆವು. ಪವಿತ್ರತೆ ಎಂಬ ನಮ್ಮ ಆತ್ಮನ ಸ್ವಭಾವ ವನ್ನು ಅರಿಯಬೇಕಾದರೆ ಏಕಾಗ್ರತೆಯೇ ದಾರಿ.

ಪವಿತ್ರತೆಯೆ ನಮ್ಮ ವ್ಯಕ್ತಿತ್ವದ ಮೂಲ ಸ್ವಭಾವ. ಬ್ರಹ್ಮನಿಗೆ ಯಾವುದನ್ನು ಆರೋಪಿಸುವೆವೊ ಅದನ್ನೆಲ್ಲಾ ನಿಮ್ಮ ಮೇಲೆ ಆರೂಪಿಸಿಕೊಳ್ಳಿ. ಬ್ರಹ್ಮನನ್ನು ಸರ್ವಶಕ್ತ, ಜನನ ಮರಣಗಳಿಲ್ಲದವನು ಎಂದು ಭಾವಿಸುತ್ತೇವೆ. ನಮ್ಮ ಆತ್ಮನಿಗೂ ಇದು ಅನ್ವಯಿ ಸುವುದು. ಆದರೆ ಅದನ್ನೇ ದೇಹ ಮತ್ತು ಮನಸ್ಸಿನ ಮೂಲಕ ವ್ಯಕ್ತಪಡಿಸಲು ಯತ್ನಿಸಿ ದಾಗ, ಅದಕ್ಕೆ ಮಿತಿಗಳಿವೆ. ದೇಹ ಮತ್ತು ಮನಸ್ಸಿನ ಗುಣಧರ್ಮಗಳನ್ನು ತನ್ನ ಮೇಲೆ ಆರೋಪಿಸಿಕೊಳ್ಳುವುದು. ನಾನು ಈ ಪೆನ್ಸಿಲ್‌ಮೇಲೆತ್ತಿದರೆ, ಅದರ ಹಿಂದೆ ಇರುವ ಚೈತನ್ಯ ಇದನ್ನು ಮಾಡುತ್ತಿರುವುದು. ಈ ದೇಹ ಎಂಬ ಯಂತ್ರದ ಮೂಲಕ ಕೆಲಸ ಮಾಡುತ್ತಿರುವುದು ನನ್ನ ಚೈತನ್ಯವೇ. ಆದರೆ ಯಾರಾದರೂ ಈ ಕ್ರಿಯೆಯನ್ನು ನೋಡಿ ದರೆ, ನನ್ನನ್ನು ಸರ್ವಶಕ್ತ ಎನ್ನುವುದಿಲ್ಲ. ಇದು ಏತಕ್ಕೆ ? ಈ ಕ್ರಿಯೆಯ ಹಿಂದೆ ಇದರ ಮೂಲವನ್ನು ನಾವು ತರುವುದಿಲ್ಲ. ನಮ್ಮ ದೇಹ ಮತ್ತು ಮನಸ್ಸಿನ ಮೂಲಕ ಕೆಲಸ ಮಾಡುವ ಶಕ್ತಿಯನ್ನು ನಾವು ಒಪ್ಪಿಕೊಳ್ಳುವುದಿಲ್ಲ.

ಎಲ್ಲಾ ಗುಣಗಳು ಮತ್ತು ಆರೋಪದಿಂದ ಬೇರೆ ಇರುವ ಆತ್ಮನನ್ನು ನಾವು ಧ್ಯಾನದ ಮೂಲಕ ಮಾತ್ರ ಅರಿಯಬಹುದು. ನಾವು ಧ್ಯಾನದ ವಿಷಯವನ್ನು ಮಾತ ನಾಡುತ್ತೇವೆ. ಹಾಗೆಂದರೆ ಏನು ? ಪರಿಶುದ್ಧನಾದ ಆತ್ಮನ ಕಾಂತಿಗೆ ಊನ ತರುವುದ ನ್ನೆಲ್ಲ ನಿವಾರಿಸುವುದೇ ಧ್ಯಾನ. ಧ್ಯಾನ ಮಾಡುವಾಗ ಮೊದಲು ಇಂದ್ರಿಯಗಳ ಬಾಗಿಲನ್ನು ಹಾಕಿ. ನೀವು ಅದನ್ನು ಮಾಡಲು ಸಾಧ್ಯವಾದರೆ ನಿಮ್ಮ ಮನಸ್ಸು ಬೇರೆ ಸ್ಥಿತಿಯಲ್ಲಿರು ವುದು. ವಿಸ್ತಾರವಾದ ಚಿತ್ ಪ್ರಭೆಗೆ ಐದು ಬಾಗಿಲುಗಳಿವೆ ಎಂದು ಭಾವಿಸಿ. ನೀವು ಬಾಗಿಲನ್ನು ಮುಚ್ಚಿದರೆ ನಿಮ್ಮ ಪ್ರಜ್ಞೆ ಮತ್ತೂ ತೀವ್ರನಾಗುವುದನ್ನು ನೋಡುವಿರಿ. ಆದರೂ ಅದರ ಕಾಂತಿಗೆ ಭಂಗತರುವ ಸೂಕ್ಷ್ಮರಂಧ್ರಗಳಿವೆ. ನಮ್ಮ ಮನಸ್ಸಿನಲ್ಲಿ ಸ್ಮೃತಿ ಚಿತ್ರಗಳಿವೆ. ನಿಮ್ಮ ಕಣ್ಣು ಈಗ ಹೊರಗಿರುವ ಯಾವುವನ್ನೂ ನೋಡದೇ ಇದ್ದರೂ, ಹಿಂದೆ ನೋಡಿದ್ದನ್ನು ಚಿಂತಿಸುತ್ತಿರುವುದು. ಈ ಸ್ಮೃತಿ ತನ್ನ ನಾಮರೂಪಗಳನ್ನು ನನ್ನ ಮೇಲೆ ಒತ್ತುವುದು. ಬಟ್ಟೆಗೆ ಬಣ್ಣವನ್ನು ಒತ್ತುವವನು ಒಂದು ಮುದ್ರೆಯನ್ನು ತೆಗೆದು

ಕೊಂಡು ಬಟ್ಟೆಯ ಮೇಲೆ ಬಣ್ಣ ಬಣ್ಣದ ಮುದ್ರೆಗಳನ್ನು ಒತ್ತುತ್ತಾನೆ. ಈ ಮುದ್ರೆಗಳನ್ನೆಲ್ಲಾ ನೀವು ಅಳಿಸಿಹಾಕಿದರೆ, ಹಿಂದೆ ಹೇಗಿತ್ತೋ ಹಾಗೆ ಆಗುವುದು. ಅದರಂತೆಯೇ ಸ್ಮೃತಿ ನಮ್ಮ ಪ್ರಜ್ಞೆಯ ಮೇಲೆ ಬರುತ್ತಿರುವುದನ್ನು ತೆಗೆದು ಹಾಕಿದರೆ ಪ್ರಜ್ಞೆ ಹಿಂದೆಯೂ ಹಾಗೆ ಕಾಣುವುದು. ನಮ್ಮ ಆತ್ಮನ ಸ್ವಭಾವವನ್ನು ಅರಿಯಬೇಕಾದರೆ, ನಮ್ಮನ್ನು ಸಾಂತಗೊಳಿಸುವ ಸ್ಮೃತಿ ಮುದ್ರೆಗಳಿಂದ ಪಾರಾಗಬೇಕು. ಆಗ ಸದಾಕಾಲ ನಾವು ಏನಾಗಿದ್ದೆವೊ ಅದು ಅರಿವಾಗುವುದು.

ಕೆಲವು ವೈಷಯಿಕ ವಸ್ತುಗಳನ್ನು ಪಡೆದು ಅನುಭವಿಸುವುದರಿಂದ ಅದಕ್ಕೆ ಆಸಕ್ತರಾಗುವುದರಿಂದ ನಮ್ಮ ಪ್ರಜ್ಞೆಯ ಮೇಲೆ, ಈ ಸಂಸ್ಕಾರಗಳ ಮುದ್ರೆಯನ್ನು ಒತ್ತುತ್ತೇವೆ. ಅದರಿಂದ ನಾವು ನಮ್ಮ ಆಸೆಗಳಷ್ಟೇ ಸಣ್ಣದಾಗುತ್ತೇವೆ. ನಮ್ಮ ಸ್ವರೂಪ ಆ ಬ್ರಹ್ಮನೇ ಎಂಬುದನ್ನು ಅರಿಯಬೇಕಾದರೆ, ಈ ಸಂಸ್ಕಾರದ ಮುದ್ರೆಗಳಿಂದ ಪಾರಾಗಬೇಕು. ಈ ಸಂಸ್ಕಾರಗಳಿಗೆ ಅತೀತರಾಗಿ ಹೇಗೆ ಹೋಗುವುದು ಎಂಬುದನ್ನು ಯೋಗ ನಮಗೆ ಹೇಳುವುದು. ಅಲ್ಪವನ್ನು ತೊರೆದು ಭೂಮವನ್ನು ಬಯಸು ಎಂದು ಯೋಗ ಹೇಳುವುದು. ನೀವು ಯಾವುದಕ್ಕಾದರೂ ಆಸಕ್ತರಾದರೆ, ಯಾವುದಾದರೂ ಅಲ್ಪವಸ್ತುವೇ ನೀವು ಎಂದು ಭಾವಿಸಿದರೆ ಅದು ನಮ್ಮನ್ನು ಅಲ್ಪವನ್ನಾಗಿ ಮಾಡುವುದು. ತ್ಯಾಗ ಮಾಡುವುದು ಎಂದರೆ ಯಾವುದರಿಂದಲೂ ಬಾಧಿತರಾಗದಂತೆ ನೋಡಿಕೊಳ್ಳುವುದು. ಸತ್ಯದ ಮೇಲೆ ಧ್ಯಾನಿಸಿ ನೀನು ಆಸೆಯಲ್ಲ, ಕರ್ಮವಲ್ಲ, ನೀನು ವ್ಯಕ್ತಪಡಿಸುವ ಯಾವುದೂ ಅಲ್ಲ ಎಂದು ಭಾವಿಸಿ. ಇವುಗಳ ಮೂಲಕ ವ್ಯಕ್ತಪಡಿಸುತ್ತಿರುವವನು ನೀನು. ಯಾವುದರ ಮೂಲಕ ವ್ಯಕ್ತಪಡಿಸುತ್ತಿಯೋ ಅದನ್ನೇ ನೀನು ಎಂದು ಭಾವಿಸಬೇಡ.

ಉಪಾಧಿಗಳ ಆರೋಪವೇ ಪ್ರಜ್ಞೆಯನ್ನು ನಾವು ಯಾವುದರಲ್ಲಿಡುವೆವೋ ಅದು ಎಂಬ ಭ್ರಮೆಯನ್ನು ತರುವುದು. ಉಪಾಧಿಗಳೇ ನಮ್ಮ ಆಂತರಿಕ ಮತ್ತು ಸತ್ಯವನ್ನು ಮರೆಮಾಚುವ ತೆರೆಗಳು. ನಾವು ಈ ಉಪಾಧಿಗಳ ಮೇಲೆ ಕೇಂದ್ರಿಕೃತರಾಗಿರುವುದರಿಂದ ನಾವು ಅದಕ್ಕೆ ಆಸಕ್ತರಾಗುವೆವು. ಅದೇ ಮಾಯೆ. ನಾವು ಸಾಂತ ಉಪಾಧಿಯಿಂದ ಪಾರಾಗಿ ಧ್ಯಾನಾಸಕ್ತರಾದರೆ ಸತ್ಯ ಸಾಕ್ಷಾತ್ಕಾರವಾಗುವುದು.

ನಾವು ಮನಸ್ಸು ಮತ್ತು ಬುದ್ಧಿ ಎಂಬ ಪ್ರಜ್ಞೆಯೇ ಬ್ರಹ್ಮ. ಆದರೆ ಬ್ರಹ್ಮ ಅಜ್ಞಾನದ ಹಲವು ಪದರಗಳ ಹಿಂದೆ ಇದೆ. ಚಿನ್ನದ ಮೇಲೆ ಮುತ್ತಿರುವ ಕೊಳೆಯಂತೆ ಆತ್ಮನ ಮೇಲೆ ಮುತ್ತಿರುವ ಅಜ್ಞಾನದ ಕಿಲುಬನ್ನು ಮೊದಲು ತೆಗೆಯಬೇಕಾಗಿದೆ. ಚಿನ್ನ ಸ್ವಭಾವತಃ ಶುದ್ಧವಾಗಿದೆ, ಕಾಂತಿಯುತವಾಗಿದೆ. ಆದರೆ ಅದು ಇತರ ವಸ್ತುಗಳೊಡನೆ ಬೆರೆತು ಹೋದಾಗ ತನ್ನ ಕಾಂತಿಯನ್ನು ಕಳೆದುಕೊಳ್ಳುತ್ತದೆ. ಪ್ರತಿದಿನವೂ ಉಪಯೋಗಿಸುತ್ತಿರುವ ಪ್ರಜ್ಞೆಯೇ ಪ್ರಶಸ್ತವಾದ ಚಿನ್ನ. ಈಗ ಆ ಚಿನ್ನದಲ್ಲಿರುವ ಕೊಳೆಯನ್ನು ತೆಗೆಯಬೇಕಾಗಿದೆ.

ಚಿನ್ನವನ್ನು ಶುದ್ಧಮಾಡುವುದಕ್ಕೆ ಅಕ್ಕಸಾಲಿಗ ಕೆಲವು ಕ್ರಮಗಳನ್ನು ಅನುಸರಿಸುವನು. ಇಲ್ಲಿ ಮೂರು ಕೆಲಸಗಳನ್ನು ಮಾಡಬೇಕಾಗಿದೆ. ಮೊದಲು ಚಿನ್ನದ ಮೇಲೆ

ಕುಳಿತಿರುವ ಸ್ಥೂಲವಾದ ಕೊಳೆಯನ್ನು ತೆಗೆಯಬೇಕಾಗಿದೆ. ಅದನ್ನು ತೆಗೆಯಬೇಕಾದರೆ, ಚಿನ್ನವನ್ನು ಅಡಿಗಲ್ಲಿನ ಮೇಲೆ ಇಟ್ಟು ಚೆನ್ನಾಗಿ ಸುತ್ತಿಗೆಯಿಂದ ಹೊಡೆಯುವನು. ಎರಡನೆಯದಾಗಿ ರಾಸಾಯನಿಕವಾಗಿ ಅದರ ಮೇಲೆ ಸೇರಿ ಹೋಗಿರುವ ಕಿಲುಬನ್ನು ತೆಗೆಯಬೇಕಾಗಿದೆ. ಅದಕ್ಕಾಗಿ ಅದನ್ನು ಚೆನ್ನಾಗಿ ತಿಕ್ಕಿ ತೊಳೆಯಬೇಕು. ಅದಕ್ಕೆ ಕೆಲವು ರಾಸಾಯನಿಕ ವಸ್ತುಗಳನ್ನು ಬಳಿಯ ಬೇಕಾಗುವುದು. ಅನಂತರ ಮತ್ತೂ ಸೂಕ್ಷ್ಮವಾದ ಕೆಲವು ಮಿಶ್ರಗಳು ಚಿನ್ನದ ಒಳಗೆ ಸೇರಿ ಹೋಗಿವೆ. ಅವನ್ನು ತೆಗೆಯಬೇಕಾದರೆ ಕುಲುಮೆಯಲ್ಲಿಟ್ಟು ಕಾಯಿಸಲೇಬೇಕು. ಬೆಂಕಿಯಿಂದ ಬಂದ ಮೇಲೆ ಅದು ಪರಿಶುದ್ಧವಾದ ಚಿನ್ನವಾಗುವುದು. ಅದರಲ್ಲಿರುವ ಮಿಶ್ರವನ್ನೆಲ್ಲಾ ತೆಗೆದು ಆಗಿದೆ.

ಜೀವಿಯಲ್ಲಿರುವ ಅಜ್ಞಾನವನ್ನು ತೆಗೆಯಬೇಕಾದರೂ ನಾವು ಹೀಗೆಯೇ ಮಾಡಬೇಕಾಗುವುದು. ನಮಗೆ ತಿಳಿದೊ, ತಿಳಿಯದೊ, ಈ ಶುದ್ಧೀಕರಣದ ಮೂಲಕ ಸಾಗಿ ಹೋಗುತ್ತಿರುವೆವು. ಆಧ್ಯಾತ್ಮಿಕ ಜೀವನದಲ್ಲಿ ಸಾಧಕ ಅದನ್ನು ಅರಿತು ಮಾಡುತ್ತಿರುವನು. ಇದರಿಂದ ಆತನಿಗೆ ತುಂಬಾ ವ್ಯಥೆ ಆಗುವುದು. ನಾವು ಈಗ ಯಾವುದನ್ನು ಸತ್ಯ ಎಂದು ಯಾವುದರೊಂದಿಗೆ ಆಸಕ್ತರಾಗಿರುವೆವೋ ಅವು ಕ್ಷಣಿಕ ಎಂದು ಅರಿತರೆ ಅದರಿಂದ ವ್ಯಥೆ ಆಗುವುದಿಲ್ಲವೆ ? ನಮ್ಮ ಇಂದ್ರಿಯ ಮತ್ತು ಮನಸ್ಸನ್ನು ನಿಗ್ರಹಿಸುವಾಗ ನಮಗೆ ವ್ಯಥೆಯಾಗುವುದಿಲ್ಲವೆ? ನಮ್ಮ ಅಹಂಕಾರದನ್ನು ದಮನ ಮಾುವುದಕ್ಕಾಗಿ ಪ್ರಯತ್ನಿಸುತ್ತಿರುವಾಗ ವ್ಯಥೆಯಾಗುವುದಿಲ್ಲವೆ? ಅದು ನಿಜವಾಗಿ ಯಾತನಾಮಯವೆ.

ಕೆಲವು ಧರ್ಮಗಳು ಕಷ್ಟವನ್ನು ಅನುಭವಿಸುವುದನ್ನು ಮೆಚ್ಚುವರು, ಅದರ ಸಮಾನ ಇಲ್ಲ ಎಂದು ಹೊಗಳುವರು. ಸುಮ್ಮನೆ ಕಷ್ಟಕ್ಕಾಗಿ ಕಷ್ಟವನ್ನು ಅನುಭವಿಸುವುದರಲ್ಲಿ ದೊಡ್ಡಸ್ಥಿಕೆ ಏನಿದೆ? ಬರೀ ಕಷ್ಟಪಟ್ಟರೆ ಏನು ಬಂತು? ಇದರಿಂದಲೇ ಎಲ್ಲರೂ ಪವಿತ್ರಾತ್ಮರು ಆಗುವ ಹಾಗಿದ್ದರೆ, ನಿರ್ಗತಿಕರಾದ, ಹೊಟ್ಟೆಗಿಲ್ಲದೇ ನರಳುತ್ತಿರುವವರೆಲ್ಲ ಪ್ರಪಂಚದಲ್ಲಿ ಸಾಧುಪುರುಷರಾಗಬಹುದಾಗಿತ್ತು. ಆದರೆ ನಾವು ಕಷ್ಟವನ್ನು ಪಡುತ್ತಿರುವುದು ನಮ್ಮ ಚಿತ್ತಶುದ್ಧಿಗಾಗಿ ಎಂದು ತಿಳಿದರೆ ಮಾತ್ರ ಕಷ್ಟದಿಂದ ದುಃಖ ಪಡುವುದಿಲ್ಲ. ಆಗ ದುಃಖದ ತೀವ್ರತೆ ಕಡಿಮೆಯಾಗುವುದು. ನಮಗೆ ದುಃಖ ಮತ್ತು ಯಾತನೆಯನ್ನುಂಟುಮಾಡುವ ಕೆಲವು ಸನ್ನಿವೇಶಗಳ ಮೂಲಕ ಹೋದಾಗಲೇ ನಮ್ಮಲ್ಲಿರುವ ಅಜ್ಞಾನ ಹೋಗಬೇಕಾದರೆ. ನಾವು ಇವುಗಳ ಮೂಲಕ ತಿಳಿದು ಹೋಗಬೇಕು. ನಮ್ಮ ಗುರಿ ಯಾವಾಗಲೂ ನಮ್ಮ ಮುಂದೆ ಇರಬೇಕು.

ಕೊನೆಯ ಘಟ್ಟದಲ್ಲಿಯೂ, ಹಲವಾರು ಅಜ್ಞಾನದ ತೆರೆಗಳನ್ನು ತೆಗೆದ ಮೇಲೆಯೂ, ನಮ್ಮ ಪ್ರಜ್ಞೆಯಲ್ಲಿ ಸ್ವಲ್ಪ ಅಜ್ಞಾನ ಹುದುಗಿರುವುದು. ಅದ ತನ್ನ ವ್ಯಕ್ತಿತ್ವವನ್ನು ರಕ್ಷಿಸಿ ಕೊಂಡಿರಲು ಯತ್ನಿಸುವುದು. ಒಂದು ಬಿರುಗಾಳಿ ಎದ್ದು ಅದನ್ನು ಮತ್ತೊಮ್ಮೆ ಕಸದ ಬುಟ್ಟಿಗೆ ದಬ್ಬಬಹುದು. ಏಕೆಂದರೆ ಅದು ಪೂರ್ಣವಾಗಿಲ್ಲ. ಅದು ಪೂರ್ಣವಾಗುವವರೆಗೆ, ಬ್ರಹ್ಮವಾಗುವವರೆಗೆ, ಅದು ಸುರಕ್ಷಿತವಲ್ಲ.

ಎಲ್ಲಾ ದ್ವೈತಗಳಾಚೆ, ಪೂರ್ಣವಾಗುವ ಸ್ಥಿತಿಯನ್ನೇ ನಿರ್ವಿಕಲ್ಪ ಸಮಾಧಿ

ಎನ್ನುವುದು. ಇದೇ ಜ್ಞಾನಯೋಗದ ಪರಮ ಗುರಿ. ಈಗ ನಮಗೆ ಇರುವ ಪ್ರಜ್ಞೆಯಲ್ಲಿ ಅನುಮಾನ, ಅಜ್ಞಾನ ಎಂಬ ಎರಡು ದೋಷಗಳಿವೆ. ಇದು ಒಂದು ಸಾವಿರಪಾಲು ಹೆಚ್ಚು ಶುದ್ಧವಾಗಿ, ಶಾಂತಿಯಿಂದ ತುಂಬಿ ತುಳುಕಾಡುತ್ತಾ ಬೇಕಾದಷ್ಟು ಆಧ್ಯಾತ್ಮಿಕ ಶಕ್ತಿಯನ್ನು ಪಡೆದಿದ್ದರೂ ಅದು ವ್ಯಕ್ತಿಗತವಾದ ಪ್ರಜ್ಞೆಯಾಗುವುದು. ಈಗ ಇರುವುದೆಲ್ಲ ಎಂದೆಂದಿಗೂ ಹೀಗೆಯೇ ಇರುವುದೆಂದು ಭಾವಿಸಬೇಡಿ. ನೀವು ಆನಂದವನ್ನು ಅನುಭವಿಸಬೇಕೆಂದು ಇಚ್ಛಿಸಿದರೆ, ಅದ್ವೈತಕ್ಕೆ ಅಂಜುವುದೇನೋ ನಿಜ. ಒಬ್ಬ ದೊಡ್ಡ ಭಕ್ತರು ಹೇಳಿದಂತೆ, ನನಗೆ ಸಕ್ಕರೆ ಆಗುವುದಕ್ಕೆ ಇಚ್ಛೆಯಿಲ್ಲ; ಸಕ್ಕರೆ ರುಚಿನೋಡಬೇಕೆನ್ನುವೆ. ಆದರೆ ಏನು ಹೇಳುತ್ತಾರೆ ಎಂದರೆ, ಆಗಲಿ ರುಚಿ ನೋಡುತ್ತ ಹೋಗಿ ಅನಂತರ ನಿಮ್ಮ ಹೊಟ್ಟೆ ಕೆಡುವುದು. ಸಕ್ಕರೆ ಆದರೇನೆ ಮುಕ್ತರಾಗಲು ಸಾಧ್ಯ.

ಪ್ರಪಂಚದ ಮಹಾ ಗುರುಗಳೆಲ್ಲ ಸಕ್ಕರೆಯಾಗುವ ಕೊನೆಯ ಸ್ಥಿತಿಯನ್ನೇ ವರ್ಣಿಸುವುದು. ನಿರ್ವಿಕಲ್ಪ ಸಮಾಧಿ ಬರುವವರೆಗೆ ಮಧ್ಯದಲ್ಲಿ ಎಲ್ಲಿಯೂ ನಿಲ್ಲಬೇಡಿ ಎಂದು ಹೇಳುವರು. ನಾವು ನಮ್ಮ ವ್ಯಕ್ತಿತ್ವವನ್ನು ಸಚ್ಚಿದಾನಂದದಲ್ಲಿ ಕರಗಿಸಬೇಕು. ಈ ವಿಷಯದಲ್ಲಿ ರಾಜಿ ಇಲ್ಲ. ಇದೇ ನಮ್ಮ ಗುರಿ. ಅದನ್ನು ಪಡೆದ ಮೇಲೆ ಈ ಜೀವಾತ್ಮ ಎಂಬ ಸಾಂತವಾದ ವ್ಯಕ್ತಿ ಅದರಲ್ಲಿ ಕರಗಿ ಹೋಗುವುದು. ಅನಂತರ ಒಂದು ವ್ಯಕ್ತಿ ಆಗುವುದಕ್ಕೆ ಆಸೆ ಪಡುವುದಿಲ್ಲ. ಆದರೆ ಆ ಸ್ಥಿತಿಯಲ್ಲಿ ನಾವೇನಾದರೂ ಕಳೆದುಕೊಳ್ಳುತ್ತೇವೆಯೇ? ಎಂದಿಗೂ ಇಲ್ಲ. ಬ್ರಹ್ಮ ಎಂದರೆ ಎಲ್ಲವೂ. ನಾವು ಬ್ರಹ್ಮ ಸಾಕ್ಷಾತ್ಕಾರವನ್ನು ಪಡೆದರೆ, ನಾವೇ ಎಲ್ಲವೂ ಆಗುತ್ತೇವೆ. ನಾವೇ ವಿಶ್ವಾತ್ಮರಾಗುತ್ತೇವೆ, ಸಚ್ಚಿದಾನಂದ ಸ್ವರೂಪರಾಗುತ್ತೇವೆ.

ಸಂಪೂರ್ಣವಾಗಿ ಬ್ರಹ್ಮನಲ್ಲಿ ತನ್ಮಯವಾಗುವುದೇ ನಮ್ಮ ಗುರಿ. ಮೊದಲು ನಮಗೆ ಎಂದೆಂದಿಗೂ ಶಾಶ್ವತವಾಗಿರುವ ಇಂದ್ರಿಯ ಸುಖ ಇಲ್ಲ ಎಂಬುದು ಗೊತ್ತಿರಬೇಕು. ಅದು ಈ ಲೋಕದಲ್ಲಾಗಲಿ ಬೇರೆ ಯಾವ ಲೋಕದಲ್ಲಾಗಲೀ ಸಾಧ್ಯವಿಲ್ಲ. ಈ ದೃಶ್ಯ ಪ್ರಪಂಚದಲ್ಲಿ, ಸ್ಥೂಲವಾಗಿರಲಿ, ಸೂಕ್ಷ್ಮವಾಗಿರಲಿ ಅಲ್ಲೆಲ್ಲ ಮಿತಿಗಳಿರುತ್ತವೆ. ಇವೇ ನಮ್ಮ ಸ್ವಾತಂತ್ರ್ಯಕ್ಕೆ ಬಂಧನಕಾರಿಗಳಾಗುವುವು. ನಿರ್ವಿಕಲ್ಪ ಸಮಾಧಿಯನ್ನು ನಾವು ಪಡೆಯಬೇಕಾದರೆ, ದೃಗ್ ದೃಶ್ಯಗಳಿರುವ ದ್ವೈತದಿಂದ ಪಾರಾಗಬೇಕು.

ಯಾರು ಅದನ್ನು ಅನುಭವಿಸಿದರೋ, ಅವರಿಗೆ ಆ ಸ್ಥಿತಿಯನ್ನು ಬಣ್ಣಿಸಲು ಸಾಧ್ಯವಾಗಲಿಲ್ಲ. ಏಕೆಂದರೆ ನಾವು ದೃಶ್ಯದ ದೃಷ್ಟಿಯಿಂದ ಮಾತ್ರ ಮಾತನಾಡಬೇಕಾಗಿದೆ. ಬಣ್ಣನೆಗೆ ಸಿಲುಕದುದನ್ನು ಯಾರು ಬಣ್ಣಿಸಬಲ್ಲರು? ಆದರೆ ಕಾವ್ಯಮಯವಾದ ಭಾಷೆಯಲ್ಲಿ ಅದಕ್ಕೆ ಒಂದು ಪ್ರಯತ್ನವನ್ನು ಮಾಡಿದ್ದಾರೆ. ಹತ್ತುಸಾವಿರ ಸೂರ್ಯರು ತಮ್ಮ ಪ್ರಭೆಯನ್ನು ಏಕಕಾಲದಲ್ಲಿ ಬೆಳಗಿದರೂ, ಅದು ಆತ್ಮ ಪ್ರಭೆಯ ಮುಂದೆ ಮಂಕಾಗುವುದು. ಎರಡು ಕೋಟಿ ಚಂದ್ರರು ಏಕಕಾಲದಲ್ಲಿ ಬೆಳಗಿದರೂ, ಅದು ಆತ್ಮ ಪ್ರಭೆಗೆ ಸರಿಸಮಾನವಾಗದು. ಬ್ರಹ್ಮನನ್ನು ವಿವರಿಸಲು ಯಾವಾಗಲೂ ಬೆಳಕಿನ ಉಪಮಾನವನ್ನು ಕೊಡುವರು.

ಈಗ ನಮ್ಮಲ್ಲಿರುವ ಪ್ರಭೆ, ಅದು ಈಗ ಹೇಗೆ ವ್ಯಕ್ತವಾದರೂ ಚಿಂತೆಯಿಲ್ಲ. ಆದರೆ ಅದರ ಹಿಂದೆ ಇರುವುದರೊಂದಿಗೆ, ಹತ್ತು ಸಾವಿರ ಸೂರ್ಯರ ಕಾಂತಿಯನ್ನಾಗಲೀ, ಎರಡು ಕೋಟಿ ಚಂದ್ರರ ಪ್ರಭೆಯನ್ನಾಗಲಿ, ಹೋಲಿಸಲು ಆಗುವುದಿಲ್ಲ. ಇದನ್ನು ಆಲೋಚಿಸಿ ನೋಡಿ! ನಮ್ಮ ಚಿತ್ತವನ್ನು, ಹೊಡೆಯುವುದು, ತೊಳೆಯುವುದು, ಕಾಯಿಸುವುದು ಮುಂತಾದ ಶುದ್ಧೀಕರಣದ ಮೂಲಕ ಪರಿಶುದ್ಧ ಮಾಡುವುದಕ್ಕೆ ಯತ್ನಿಸೋಣ. ಇವು ಗಳನ್ನೆಲ್ಲ ಮಾಡಿದರೆ ನಾವು ಗುರಿಯನ್ನು ಮುಟ್ಟಬಹುದು ಎಂದು ಪ್ರಾರಂಭಿಸೋಣ. ನಮ್ಮ ಜೀವನದಲ್ಲಾಗಲಿ, ಆಧ್ಯಾತ್ಮಿಕ ಸಾಧನೆಯಲ್ಲಾಗಲೀ, ನಮಗೆ ಬಿದ್ದ ಪ್ರತಿ ಯೊಂದು ಪೆಟ್ಟೂ ನಮಗೆ ಒಂದು ವರವೆಂದು ಭಾವಿಸಿ. ನಮ್ಮನ್ನು ಪ್ರಪಂಚಕ್ಕೆ ಬಿಗಿದ ಅಜ್ಞಾನದಿಂದ ಪಾರಾಗುವುದಕ್ಕೆ ಇವು ಸಹಾಯ ಮಾಡಿವೆ. ಸಾಧನೆ ಕಷ್ಟವೇನೋ ನಿಜ. ಆದರೆ ಇದರಲ್ಲಿ ಅಹಂಕಾರವಿಲ್ಲ, ಸಂಕಟವಿಲ್ಲ, ಇದು ಇಜವಾಗಿಯೂ ಆತ್ಮ ವಿಭಜನೆ.

ನಮ್ಮ ಪ್ರಜ್ಞೆ ಎಂಬ ಚಿನ್ನವನ್ನು ಶುದ್ಧಿಮಾಡಬೇಕಾದರೆ, ಜ್ಞಾನಯೋಗದಲ್ಲಿ ಶ್ರವಣ ಮನನ ನಿಧಿ ಧ್ಯಾಸನವನ್ನು ಅಭ್ಯಾಸಮಾಡಬೇಕು. ನಿರ್ವಿಕಲ್ಪ ಸಮಾಧಿಯೊಂದಿಗೆ ಹೋಲಿಸಿ ನೋಡಿದರೆ, ಇವು ಬಹಳ ಅಲ್ಪ. ಮನನ ಎಂದರೆ ಚಿಂತಿಸುವುದು. ಇದೇ ಶ್ರವಣಕ್ಕಿಂತ ಮೇಲು. ಮನನ ಮಾಡುವುದು ಶ್ರವಣಕ್ಕಿಂತ ನೂರು ಪಾಲು ಮೇಲು. ನಿಧಿಧ್ಯಾಸನ ಎಂದರೆ ಧ್ಯಾನ ಮಾಡುವುದು. ಮನನಕ್ಕಿಂತ ನೂರುಪಾಲು ಮೇಲು. ಆದರೆ ನಿರ್ವಿಕಲ್ಪ ಸಮಾಧಿಯಾದರೋ ಅದಕ್ಕೆ ಎಣೆಯೇ ಇಲ್ಲ. ಅದು ಅನಂತ ಎನ್ನುವರು ಶಂಕರಾಚಾರ್ಯರು.

ಜ್ಞಾನಯೋಗದಲ್ಲಿ ಬರುವ ಸಾಧನೆಗಳೆಲ್ಲ ನಮ್ಮ ಪ್ರಜ್ಞೆ ಎಂಬ ಚಿನ್ನವನ್ನು ಶುದ್ಧಿ ಮಾಡುವುದು. ಅನಂತರ ಅದು ಪರಿಶುದ್ಧವಾಗಿ ತಾನೇ ಬೆಳಗುವುದು. ಇದೇ ನಿರ್ವಿಕಲ್ಪ ಸಮಾಧಿ.

ಜ್ಞಾನಯೋಗವನ್ನು ಅನುಷ್ಠಾನ ಮಾಡುವವನು, ತಾನು ಎಲ್ಲಿಯವರೆಗೆ ಒಂದು ಎಂದು ಭಾವಿಸುವನೊ ಅಲ್ಲಿಯವರೆಗೆ, ಹಲವದರ ಹಿಂದೆ ಒಂದನ್ನು ನೋಡಲು ಯತ್ನಿಸು ವನು. ಅವನ ಆದರ್ಶವೇ ತನ್ನ ಒಳಗೆ ಮತ್ತು ಹೊರಗೆ ಎಲ್ಲಾ ಕಡೆಯಲ್ಲಿಯೂ ಬ್ರಹ್ಮ ದರ್ಶನ ಮಾಡುವುದು. ಅವನು ಯಾವಾಗ ಬ್ರಹ್ಮನಲ್ಲದೆ ಮತ್ತೇನನ್ನೂ ನೋಡುವುದಿಲ್ಲವೊ ಬ್ರಹ್ಮನಲ್ಲದೆ ಮತ್ತೇನನ್ನೂ ಸ್ಪರ್ಶ ಮಾಡುವುದಿಲ್ಲವೋ, ಬ್ರಹ್ಮನಲ್ಲದೆ ಮತ್ತೇನನ್ನೂ ಕೇಳು ವುದಿಲ್ಲವೋ, ಅವನ ಇಂದ್ರಿಯಗಳೆಲ್ಲ ಬ್ರಹ್ಮನಲ್ಲೇ ಕೇಂದ್ರೀಕೃತವಾಗಿರುವಾಗ, ಅವನು ಒಳಗೆ ಹೊರಗೆ ಎಲ್ಲೆಡೆಯೂ ಅವನನ್ನೇ ನೋಡುತ್ತಾನೆ. ಆಗಲೆ ಅವನು ವೈವಿಧ್ಯತೆಯ ಹಿಂದೆ ಇರುವ ಒಂದನ್ನು ಮನಗಂಡಿರುವನು. ನಾವುಗಳೆಲ್ಲ ನೋಡುವಂತೆ ಅವನು ವೈವಿ ಧ್ಯತೆಗಳನ್ನು ನೋಡುತ್ತಾನೆ. ಆದರೆ ಅದರ ಹಿಂದೆ ಬ್ರಹ್ಮನೊಬ್ಬನೇ ಸತ್ಯ, ತಾನು ಆ ಬ್ರಹ್ಮನೇ ಆಗಿದ್ದೇನೆ ಎಂದು ಅರಿಯುತ್ತಾನೆ.

ಜೀವ ಬ್ರಹ್ಮರ ಐಕ್ಯತೆಯನ್ನು ಹೊಸದಾಗಿ ಪಡೆಯುವುದಿಲ್ಲ. ಅದು ಯಾವಾ ಗಲೂ ಅಲ್ಲಿದೆ. ಅದು ಹಿಂದಿನಿಂದಲೂ ಇರಬೇಕು, ಇಲ್ಲದೇ ಇದ್ದರೆ, ಎಂದೆಂದಿಗೂ ಇರಲಾ

ರದು. ಅದನ್ನು ಮತ್ತೆಲ್ಲೋ, ಯಾವಾಗಲೋ ಪಡೆಯಲು ಆಗುವುದಿಲ್ಲ. ನಾನು ಬ್ರಹ್ಮನಲ್ಲಿ ಈಗ ಒಂದಲ್ಲದೇ ಇದ್ದರೆ, ಇನ್ನೆರಡು ವರುಷಗಳಾದ ಮೇಲೆ ಒಂದಾಗುವುದಕ್ಕೆ ಸಾಧ್ಯವಿಲ್ಲ. ನಾನು ಈ ಸ್ಥಳದಲ್ಲಿ ಒಂದಾಗಿಲ್ಲದೇ ಇದ್ದರೆ, ಪ್ರಪಂಚದಲ್ಲಿ ಎಲ್ಲಿ ಹೋದರೂ ಒಂದಾಗುವುದಕ್ಕೆ ಸಾಧ್ಯವಿಲ್ಲ.

ನಾವು ಈ ಸೂತ್ರವನ್ನು ಒಪ್ಪಿಕೊಂಡರೆ ಕೊನೆಗೆ ನಾವು ಬ್ರಹ್ಮನಲ್ಲಿ ಒಂದಾಗುವ ಹಾಗಿದ್ದರೆ, ಈಗಲೂ ನಾವು ಅದರಲ್ಲಿ ಒಂದಾಗಿಯೇ ಇದ್ದೇವೆ ಎಂಬುದನ್ನು ಒಪ್ಪಿಕೊಳ್ಳಬೇಕು. ನಾವೆಂದಿಗೂ ಬ್ರಹ್ಮನಿಂದ ಬೇರೆ ಇರಲಿಲ್ಲ. ನಮ್ಮ ನೈಜ ಸ್ವರೂಪ ಅರಿಯದೇ ಇದ್ದುದರಿಂದ ನಾವು ಬ್ರಹ್ಮನಿಂದ ಬೇರೆ ಎಂದು ತಪ್ಪಾಗಿ ಭಾವಿಸಿದ್ದೆವು. ಈ ಅಜ್ಞಾನದಿಂದಲೇ ಬ್ರಹ್ಮ ಎಲ್ಲೋ ದೂರದಲ್ಲಿರುವನು ಎಂದು ಭಾವಿಸಿದೆವು. ಅಜ್ಞಾನ ಸರಿದೊಡನೆಯೇ, ನಾವು ಯಾವಾಗಲೂ ಬ್ರಹ್ಮನೊಂದಿಗೆ ಒಂದಾಗಿಯೇ ಇದ್ದೆವು ಎನ್ನುವುದು ಗೊತ್ತಾಗುವುದು.

ನಾನು ಇದನ್ನು ವಿವರಿಸುವುದಕ್ಕಾಗಿ ಧೈರ್ಯದಿಂದ ಇದನ್ನು ಹೇಳುತ್ತೇನೆ. ನಾವು ಯಾವ ಆದರ್ಶಕ್ಕಾಗಿ ಹೋರಾಡುತ್ತಿರುವೆವೋ ಅದು ಆಗಲೇ ನಮ್ಮಲ್ಲಿ ಇಲ್ಲದೇ ಇದ್ದರೆ ನಾವು ಯಾರಿಂದಲೂ ಸಾಲವಾಗಿ ತೆಗೆದುಕೊಳ್ಳುವುದಕ್ಕಾಗಲಿ, ಭಿಕ್ಷೆ ಬೇಡುವುದಕ್ಕಾಗಲಿ, ಕದಿಯುವುದಕ್ಕಾಗಲಿ ಆಗುವುದಿಲ್ಲ. ಇನ್ನೊಬ್ಬನಲ್ಲಿರುವ ದಯೆ ಅಥವಾ ಪ್ರೀತಿಯನ್ನು ನಾವು ಅರ್ಥಮಾಡಿಕೊಳ್ಳಬೇಕಾದರೆ ಅವನ ಅಂಶ ನಮ್ಮಲ್ಲಿ ಇಲ್ಲದೇ ಇದ್ದರೆ ಸಾಧ್ಯವೇ ಇಲ್ಲ. ನಮ್ಮಲ್ಲಿ ಇಲ್ಲದೆ ಇರುವುದು ಹೊರಗೆ ಎಲ್ಲಿಯೂ ಕಾಣುವುದಿಲ್ಲ.

ಇದಕ್ಕೆ ವಿರೋಧವಾಗಿರುವುದಕ್ಕೂ ಇದು ಅನ್ವಯಿಸುವುದು. ನಿಮ್ಮಲ್ಲಿ ಯಾವ ಒಳ್ಳೆಯ ಗುಣವೂ ಇಲ್ಲದೆ ಇದ್ದರೆ, ನಿಮಗೆ ಹೊರಗೆಲ್ಲೂ ಅದು ಕಾಣುವುದಿಲ್ಲ. ಕಳ್ಳ ಈ ಪ್ರಪಂಚವೆಲ್ಲ ಕಳ್ಳರಿಂದ ತುಂಬಿದೆ ಎಂದು ಭಾವಿಸುತ್ತಾನೆ. ಒಬ್ಬ ಸ್ವಾರ್ಥಿ ಎಲ್ಲರಲ್ಲೂ ಸ್ವಾರ್ಥವೇ ಇದೆ ಎಂದು ಭಾವಿಸುವನು.

ಬ್ರಹ್ಮಸಾಕ್ಷಾತ್ಕಾರದ ಆದರ್ಶ ನಿಮ್ಮಲ್ಲಿ ಇಲ್ಲದೇ ಇದ್ದರೆ, ನೀವು ಬ್ರಹ್ಮನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಆದರ್ಶ ಎಲ್ಲೋ ಕಾಲಾನಂತರ ಸಿಕ್ಕುವುದು ಎಂದು ಭಾವಿಸಿದರೆ ನೀವು ನಿರಾಶರಾಗಬೇಕಾಗುವುದು. ಬ್ರಹ್ಮನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕಾದರೆ, ನಿಮ್ಮನ್ನು ಅವನಲ್ಲಿ ಹುಡುಕಬೇಕು. ನೀವು ಹಾಗೆ ಸಾಧನೆ ಮಾಡಿದಾಗ, ಆ ಭಾವನೆಯಿಂದ ಹಾಸುಹೊಕ್ಕಾಗುತ್ತೀವೆ. ನಿಮ್ಮ ಒಳಗಿನಿಂದ ಏನು ಬರುವುದೊ ಅದೆಲ್ಲ ಬ್ರಹ್ಮವೇ ಎಂದು ಗೊತ್ತಾಗುವುದು. ಆಗ ಜೀವ, ಜಗತ್, ಬ್ರಹ್ಮ ಎಲ್ಲ ಒಂದೇ ಎಂದು ಅರಿವಾಗುವುದು.

ಆ ಅನಂತ ಬ್ರಹ್ಮನಲ್ಲಿ ಸಂಪೂರ್ಣ ತನ್ಮಯರಾಗುವುದೇ ನಮ್ಮ ಶ್ರೇಷ್ಠವಾದ ಆದರ್ಶ. ಎಲ್ಲಿಯವರೆಗೆ ಎರಡು ಇವೆಯೊ ಅಲ್ಲಿಯವರೆಗೆ ಅಂಜಿಕೆ ನಮಗೆ ತಪ್ಪಿದ್ದಲ್ಲ. ಎಲ್ಲಿ ದ್ವೈತವಿದೆಯೊ ಎಲ್ಲಿ ಆಕಾರಗಳಿವೆಯೊ ಅಲ್ಲಿ ಕಾಲ ದೇಶ ಇರಬೇಕು. ಅಲ್ಲಿ ಬದಲಾವಣೆ ಆಗಬೇಕು. ಎರಡಿದ್ದರೆ, ಅಲ್ಲಿ ಪೂರ್ಣತೆ ಹೇಗೆ ಇರಬಲ್ಲದು ? ಮುಕ್ತಿ ಹೇಗೆ ಇರುವುದು ?

ಸುಖಾನುಭವದ ದೃಷ್ಟಿಯಿಂದ ನಾವು ಇದನ್ನು ಹೇಳುತ್ತಿಲ್ಲ. ಸುಖಾನುಭವವೇ ನಮ್ಮ ದೃಷ್ಟಿಯಾದರೆ, ನಾವು ಯಾವಾಗಲೂ ದ್ವೈತಭೂಮಿಕೆಯಲ್ಲಿಯೇ ಇರಬೇಕಾಗಿದೆ. ಯಾವಾಗಲೂ ಆನಂದವನ್ನೇ ಒಬ್ಬ ಹುಡುಕುವುದಿಲ್ಲ. ಪೂರ್ಣತೆ ಮತ್ತು ಮುಕ್ತಿಗಾಗಿ ನೀವು ತವಕಪಡುವ ಒಂದು ಸಮಯ ಬರುವುದು. ಎಲ್ಲಾ ಆಸೆಗಳಿಂದಲೂ ಪಾರಾಗ ಬೇಕು, ದ್ವೈತಭಾವನೆಗಳಿಂದಲೂ ಪಾರಾಗಬೇಕು. ಆಗಲೇ ಜೀವಾತ್ಮನಲ್ಲಿ ಪರಮಾತ್ಮ ನನ್ನು ನೋಡುವಿರಿ.

ಜ್ಞಾನದ ಗುರಿಯೆ ವೈವಿಧ್ಯತೆ ಹಿಂದೆ ಏಕವನ್ನು ನೋಡುವುದು. ಆಧುನಿಕ ಕಾಲ ದಲ್ಲಿ ವಿಜ್ಞಾನ ಪ್ರಪಂಚದಲ್ಲಿ ಆಗುತ್ತಿರುವ ನವನವ ಅನ್ವೇಷಣೆಗಳ ಹಿಂದೆಲ್ಲ ಈ ಉದ್ದೇಶ ವನ್ನು ನೋಡುತ್ತೇವೆ. ಈ ಕೋಣೆಯಲ್ಲಿ ಏನಿದೆ ಎನ್ನುವುದನ್ನು ತಿಳಿಯಲು ಈಗ ಯತ್ನಿ ಸೋಣ. ಇಲ್ಲಿ ಇರುವುದೆಲ್ಲ ಒಂದು ವಸ್ತುವಿನಿಂದ ಆಗಿದೆ, ಅದೇ X ಎಂದು. X ಗೊತ್ತಾ ದರೆ ಈ ರೂಮಿನಲ್ಲಿರುವುದೆಲ್ಲ ಗೊತ್ತಾಗುವುದು. ಯಾವ ಒಂದರಿಂದ ಹಲವು ಬಂದಿವೆಯೊ ಅದನ್ನು ಅರಿತಾಗಲೇ ಜ್ಞಾನ ತೃಷೆ ಹಿಂಗಬೇಕಾದರೆ.

ನಿಜವಾಗಿಯೂ ಒಂದೇ ಯಾವಾಗಲೂ ನಮ್ಮ ಪ್ರಜ್ಞೆಯ ಹಿಂದೆ ಇದೆ. ಈ ಹಿನ್ನೆಲೆ ಇಲ್ಲದೇ ಇದ್ದರೆ, ನಮ್ಮ ಪ್ರಜ್ಞೆ ಬರಿಯ ಆಲೋಚನೆಗಳ ಸಮೂಹದಿಂದ ಕೂಡಿದ್ದರೆ, ನಮ್ಮ ಮನಸ್ಸು ಯಾವಾಗಲೂ ಅಲ್ಲೋಲ ಕಲ್ಲೋಲವಾಗಿರುವುದು. ಅದೊಂದು ಚಂಡ ಮಾರುತದಂತೆ ಇರುವುದು. ಹೊರಗಿನಿಂದ ಹಲವಾರು ವೇದನೆಗಳು ಬರುತ್ತಿರುತ್ತವೆ. ಆಗ ನಮ್ಮ ಸ್ಥೈರ್ಯವನ್ನು ಕಳೆದುಕೊಂಡು ಉರುಳಿಹೋಗಬೇಕಾಗುವುದು. ಅದೃಷ್ಟವಶಾತ್ ಪರಿಸ್ಥಿತಿ ಹೀಗಿಲ್ಲ. ಈ ಏಕತೆಯ ಭಾವನೆ ನಮಗೆ ಪರಿಚಯವಿಲ್ಲದೇ ಇದ್ದರೂ, ಮೊದಲು ನಮ್ಮ ಪ್ರಜ್ಞೆಯ ಮೇಲಿರುವುದೇ ಇದು. ಈ ಏಕದ ಆಧಾರದ ಮೇಲೆಯೇ ಅನೇಕವನ್ನು ನಾವು ಊಹಿಸಿಕೊಳ್ಳುವುದು. ಇದರಿಂದಲೇ ನಾವು ಹುಚ್ಚರಾಗದೆ ಇರುವುದು. ನಮ್ಮ ಮನಸ್ಸನ್ನು ವಿಭಜನೆ ಮಾಡಿದರೆ, ನನಗೆ ದಿನ ನಿತ್ಯವೂ ಬರುವ ವಿಧವಿಧ ವೇದನೆಗಳನ್ನು ಐಕ್ಯತೆಗೆ ತರುವ ಶಕ್ತಿ ನಮ್ಮಲ್ಲಿದೆ. ತಕ್ಷಣ ಹೊರಗಿನಿಂದ ಬರುವ ವೇದನೆಗಳೆಲ್ಲವನ್ನೂ ಹೀರಿಕೊಳ್ಳುವುದು. ತತ್ಕಾಲದಲ್ಲಿ ಮನಸ್ಸು ಪ್ರಕ್ಷುಬವಾಗುವುದು. ಆದರೆ ಮನಸ್ಸು ಅದರ ಹಿಂದೆ ಇರುವ ಸಾಮಾನ್ಯನಿಯಮವನ್ನು ಕಂಡುಹಿಡಿಯುವುದು, ಆಗ ವೈವಿಧ್ಯತೆ ಯಲ್ಲಿ ಒಂದಾಗುವುದು. ಹೊರಗಿನಿಂದ ಬರುವ ಶಬ್ದ, ಸ್ಪರ್ಶ, ರೂಪು, ರಸ, ಗಂಧ ಎಲ್ಲ ವನ್ನೂ ಸ್ವೀಕರಿಸಿ ಮನಸ್ಸು ಅದನ್ನು X ನಲ್ಲಿ ಲಯಮಾಡುವುದು. ಯಾವಾಗ ಅದು ಎಲ್ಲ ದರ ಹಿನ್ನೆಲೆಯ X ಅಗುವುದೊ, ಆಗ ನಮ್ಮ ಅನುಭವದಿಂದ, ನಮಗೆ ಜ್ಞಾನ ಪ್ರಾಪ್ತ ವಾಗುವುದು. ಮೊದಲು ನಮ್ಮಲ್ಲಿ ಸಾಮಾನ್ಯವಾಗಿರುವ X ಅನ್ನು ಅರಿಯುವುದಕ್ಕೆ ನಾವು ಅಭ್ಯಾಸ ಮಾಡಬಹುದು. ಅದರ ಆಧಾರದ ಮೇಲೆ, ನೋಡುವ ವೈವಿಧ್ಯತೆಯನ್ನೆಲ್ಲ ಜೋಡಿಸಬಹುದು.

ಎಲ್ಲಾ ಜ್ಞಾನ ಅಥವಾ ತತ್ತ್ವದ ಉದ್ದೇಶ, ಪ್ರಪಂಚದ ವೈವಿಧ್ಯತೆಗಳ ಹಿಂದೆ ಏಕತೆಯನ್ನು ಕಂಡುಹಿಡಿಯುವುದಾಗಿದೆ. ನಿಮ್ಮ ಪ್ರಯೋಗವನ್ನೇ ಮಾಡಿ. ಹಲವನ್ನು

ನೋಡಿ, ಅವನ್ನು ಜೋಡಿಸಿ, ಅದರ ಹಿಂದೆ ಇರುವ ಸರ್ವ ಸಾಮಾನ್ಯವನ್ನು ಕಂಡುಹಿಡಿಯಿರಿ. ಒಂದು ನಾಯಿಯನ್ನು ನೋಡಿ ನಾಯಿ ಎಂದು ತಿಳಿದುಕೊಳ್ಳಿ. ಒಂದು ಬೆಕ್ಕನ್ನು ನೋಡಿ ಬೆಕ್ಕು ಎಂದು ತಿಳಿದುಕೊಳ್ಳಿ, ಕುದುರೆಯನ್ನು ನೋಡಿ ಕುದುರೆ ಎಂದು ತಿಳಿದುಕೊಳ್ಳಿ. ಅವುಗಳ ಬೇರೆ ಬೇರೆ ಸ್ವಭಾವವನ್ನು ಪರೀಕ್ಷಿಸಿ. ಅನಂತರ ಅದರ ಆಳಕ್ಕೆ ಹೋಗಿ ಇವುಗಳಲ್ಲೆಲ್ಲ ಸರ್ವಸಾಮಾನ್ಯವಾಗಿರುವುದಾವುದು ಅದನ್ನು ಕಂಡುಹಿಡಿಯಿರಿ. ಇವತ್ತು ನಿಮಗೆ ಮಾನಸಿಕ ಶಾಸ್ತ್ರದ ಮೇಲೆ, ನಾಳೆ ಜೀವ ವಿಜ್ಞಾನದ ಮೇಲೆ ಆಸೆ, ಇನ್ನೊಂದು ದಿನ ಮತ್ತಾವುದೋ ಒಂದರ ಮೇಲೆ ಆಸೆ. ಪ್ರತಿಯೊಂದನ್ನು ವೈಜ್ಞಾನಿಕವಾಗಿ ಪರೀಕ್ಷಿಸಿ ಅವುಗಳ ಆಳಕ್ಕೆ ಹೋಗುತ್ತಾ ಬನ್ನಿ. ಅವುಗಳ ಹಿಂದೆಲ್ಲ ಸರ್ವಸಾಮಾನ್ಯವಾಗಿರುವ ಸೂತ್ರ ಒಂದನ್ನು ಕಂಡುಹಿಡಿಯಿರಿ.

ನಿಮ್ಮನ್ನೇ ಅಧ್ಯಯನಕ್ಕೆ ವಿಷಯವನ್ನಾಗಿ ತೆಗೆದುಕೊಳ್ಳಿ. ನೀವು ವ್ಯಾಪಾರಗಾರರಾಗಿರಬಹುದು, ಬರಹಗಾರರಾಗಿರಬಹುದು, ಕಲಾವಿದನಾಗಿರಬಹುದು ಅಥವಾ ಆಫೀಸಿನಲ್ಲಿ ಗುಮಾಸ್ತನಾಗಿರಬಹುದು. ಇವುಗಳೆಲ್ಲದರ ಹಿಂದೆ, ನೀವು ಒಬ್ಬ ತಾಯಿಯಾಗಿಯೋ ತಂದೆಯಾಗಿಯೋ ಇರುವಿರಿ. ನೀವು ಹೀಗೆ ಕೆಲಸಮಾಡುತ್ತಿರುವಾಗ ನೀವು ಯಾರು ಎಂಬುದನ್ನು ಮರೆತರೆ ಹುಚ್ಚರಾಗುತ್ತೀರಿ. ನಿಮ್ಮನ್ನು ಆಸ್ಪತ್ರೆಗೆ ದಾಖಲು ಮಾಡಬೇಕಾಗಬಹುದು. ನಿಮ್ಮ ಮತ್ತು ನೋಡುವ ಘಟನೆಗಳ ಹಿಂದೆಲ್ಲ ಬದಲಾಯಿಸದ ಯಾವುದೋ ಒಂದು ಸೂತ್ರವಿದೆ ಎಂಬುದನ್ನು ನೀವು ತಿಳಿದುಕೊಂಡಿರಬೇಕು. ಒಂದು ಸಲ ನೀವು ದೃಗ್ ದೃಶ್ಯದ ಹಿಂದೆ ಇರುವ ಮೂಲ ತಂತುವನ್ನು ಕಂಡುಹಿಡಿದರೆ, ಅದು ಯಾವಾಗಲೂ ನಿಮ್ಮ ನೆನಪಿನಲ್ಲಿರುವುದರ ಆವಶ್ಯಕತೆ ಗೊತ್ತಾಗುವುದು.

ನಮ್ಮ ದೃಷ್ಟಿಯಿಂದ ಏಕ ಅಥವಾ ಅನೇಕ ನಮಗೆ ಕಾಣುವುದು. ಒಂದು ದೃಷ್ಟಿಯಿಂದ ನೋಡಿದರೆ ಈ ಪ್ರಪಂಚದ ಹಿಂದೆ ಇರುವ ಐಕ್ಯತೆ ಕಾಣುವುದು. ಮತ್ತೊಂದು ದೃಷ್ಟಿಯಿಂದ ಅದರಲ್ಲಿರುವ ವೈವಿಧ್ಯತೆ ಸ್ಪಷ್ಟವಾಗಿ ಕಾಣುವುದು. ನೀವು ವೈವಿಧ್ಯತೆಯನ್ನೆಲ್ಲ ಸಂಪೂರ್ಣವಾಗಿ ಮರೆಯಬೇಕು ಎನ್ನುವುದಿಲ್ಲ. ಆದರೆ ಮೊದಲು ಎಲ್ಲದರ ಹಿಂದೆ ಇರುವ ಏಕವನ್ನು ಅರಿಯಿರಿ. ನಾವು ವೈವಿಧ್ಯಗಳನ್ನು ಎಲ್ಲಿಯವರೆಗೆ ಈ ಜಗತ್ತಿನಲ್ಲಿರುವವೋ ಅಲ್ಲಿಯವರೆಗೆ ನೋಡಲೇ ಬೇಕಾಗಿದೆ. ಆದರೆ ಅದನ್ನು ಶಾಂತಿಯಿಂದ ಉದ್ವಿಗ್ನತೆ ಇಲ್ಲದೆ ಮಾಡಬಹುದು. ವೈವಿಧ್ಯತೆಯ ಹಿಂದೆ ಇರುವ ಏಕವನ್ನು ಕಂಡುಹಿಡಿಯುವ ಸ್ಥಿತಿಯಲ್ಲಿರಬೇಕು. ಅಲ್ಮೇರಾದಲ್ಲಿರುವ ಪುಸ್ತಕಗಳನ್ನೆಲ್ಲಾ ನಾವು ಒಂದುಗೂಡಿಸಬೇಕಾದರೆ ಅದಕ್ಕೆ ಪೇಪರು, ಇಂಕು, ಬಟ್ಟೆ ಇತ್ಯಾದಿಗಳೆಲ್ಲ ಬೇಕಾಗಿದೆ. ಪುಸ್ತಕದಲ್ಲಿ ಹಲವು ವಿಷಯಗಳೂ ಬಂದರೂ, ಅವನ್ನೆಲ್ಲ ಯಾವುದೋ ಕೆಲವು ವಸ್ತುಗಳು ಒಂದುಗೂಡಿಸಿವೆ. ನೀವು ಭೌತಿಕ ಪ್ರಪಂಚದ ಹಿಂದೆ ಹೋದರೆ, ಐಕ್ಯತೆ ಸಿಕ್ಕುವುದಿಲ್ಲ. ಬೇಕಾದರೆ ಅದರ ಹತ್ತಿರ ಬರಬಹುದು. ಏಕವನ್ನು ಕಂಡುಹಿಡಿಯಬೇಕಾದರೆ ನಾವು ಪ್ರಜ್ಞೆಯ ಹಿಂದೆ ಹೋಗಬೇಕಾಗಿದೆ. ನಿಮ್ಮ ಹಿಂದೆಯೂ, ಅಥವಾ ಕೆಲವು ಜನರ ಹಿಂದೆಯೂ, ಇವರಲ್ಲಿ ಸರ್ವಸಾಮಾನ್ಯವಾಗಿರುವುದು ಯಾವುದು ಎಂದು ತಿಳಿದುಕೊಳ್ಳಲು

ಪ್ರಯತ್ನಪಟ್ಟರೆ, ಬರೀ ಅವರ ಹೊರಗಿರುವ ಚರ್ಮ, ಕಣ್ಣು, ಮೂಗು, ಬಾಯಿ ಇವುಗಳನ್ನು ತೆಗೆದುಕೊಂಡರೆ, ನಿಮ್ಮಲ್ಲಿ ಸಾಮಾನ್ಯವಾಗಿರುವುದು ಸಿಕ್ಕುವುದು, ಆದರೆ ಏಕತೆ ಸಿಕ್ಕುವುದಿಲ್ಲ, ನಾವು ಇನ್ನೂ ಆಳಕ್ಕೆ ಹೋಗಿ, ಅವರ ಆಲೋಚನೆ, ಭಾವನೆ, ಬುದ್ಧಿ ಇವುಗಳ ಹಿಂದೆ ಹೋದರೆ, ಆಗ ಒಂದೇ ಆತ್ಮ ಬೇರೆಬೇರೆ ವ್ಯಕ್ತಿಗಳ ಹಿಂದೆಲ್ಲ ಇದೆ ಎಂದು ಗೊತ್ತಾಗುವುದು.

ಅಂತಹ ಒಂದು ಸ್ಥಿತಿ ಇದೆ ಎಂಬುದನ್ನು ನಾವು ಮೊದಲು ಒಪ್ಪಿಕೊಳ್ಳಬೇಕಾಗಿದೆ. ವೈವಿಧ್ಯತೆ ನನಗೆ ಬೇಕೆ, ಐಕ್ಯತೆ ನನಗೆ ಬೇಕೆ ಎಂಬುದನ್ನು ಮೊದಲು ನಾವು ಕೇಳಿಕೊಳ್ಳಬೇಕು, ನಿಮಗೆ ವೈವಿಧ್ಯತೆ ಬೇಕು ಎಂದರೆ, ಆಗಲಿ ಹೋಗಿ ಅದನ್ನು ಅನುಭವಿಸಿ, ಆದರೆ ಅದರಿಂದ ಬೇಜಾರಾದ ಮೇಲೆ ಪುನಃ ಬನ್ನಿ. ಆಗ ನಾವುಗಳು ಎಲ್ಲ ಒಪ್ಪಿಕೊಳ್ಳುತ್ತೇವೆ ಎಂಬುದನ್ನು ಹೇಳುತ್ತೇನೆ. ಅದನ್ನು ಅನುಸರಿಸಿದರೆ ಐಕ್ಯತೆ ಸಿಕ್ಕುವುದು.

ಇರುವುದೊಂದೆ ಅಸ್ತಿತ್ವ ಅದೇ ಬ್ರಹ್ಮ. ಅದರಲ್ಲಿ ಯಾವ ವೈವಿಧ್ಯತೆಯೂ ಇಲ್ಲ. ನಮ್ಮ ಪ್ರಜ್ಞೆಯ ಹಿಂದೆ, ಆ ಐಕ್ಯತೆ ಇರುವುದರಿಂದಲೇ, ನಾವು ಪ್ರಪಂಚದಲ್ಲಿ ವೈವಿಧ್ಯತೆಯನ್ನು ನೋಡಲು ಸಾಧ್ಯವಾಗುವುದು. ಈ ವೈವಿಧ್ಯತೆಯ ಪ್ರಪಂಚ ಮನಸ್ಸಿನಲ್ಲಿದೆ. ಮನಸ್ಸನ್ನು ಐಕ್ಯತೆಯ ಮೇಲೆ ಕೇಂದ್ರೀಕರಿಸಿದರೆ, ನಮ್ಮ ಮನಸ್ಸಿನಲ್ಲಿರುವ ವೈವಿಧ್ಯತೆಯ ಭಾವನೆಯಿಂದ ಪಾರಾಗಿ, ಐಕ್ಯತೆಯನ್ನು ಪಡೆಯಲು ಸಾಧ್ಯವಾಗುವುದು. ಆದರೆ ಇದಕ್ಕೆ ಪ್ರಾರಂಭಮಾಡಬೇಕು. ಇಂದ್ರಿಯಾತೀತವಾದ ತತ್ವ ಒಂದು ಇದೆ ಎಂಬುದನ್ನು ಮೊದಲು ಮನಗಾಣಬೇಕು. ನಮ್ಮ ಎಲ್ಲಾ ಭಾವನೆಗಳ ಹಿಂದೆ ಅದನ್ನು ಒಪ್ಪಿಕೊಳ್ಳುವುದು ಅತ್ಯಂತ ಆವಶ್ಯಕ ಎಂಬುದನ್ನು ನೀವು ಒಪ್ಪಿಕೊಳ್ಳಬೇಕು. ಈ ದೃಢಭಾವನೆ ನಮ್ಮಲ್ಲಿ ಇಲ್ಲದೇ ಇದ್ದರೆ, ನಾವು ತಿಳಿದುಕೊಳ್ಳುವುದಕ್ಕೆ ಆಗುವುದಿಲ್ಲ. ಇದು ತೋರಿಕೆಯ ಒಪ್ಪಿಗೆ ಆದರೆ ಇದರಿಂದ ಅಷ್ಟು ಪ್ರಯೋಜನವಿಲ್ಲ. ನಮಗೆ ಇದು ಅತ್ಯಾವಶ್ಯಕವಾಗಬೇಕು. ಬರಬರುತ್ತಾ ನಾವು ಅದನ್ನು ಹೆಚ್ಚಾಗಿ ಅರಿಯುತ್ತ ಬರಬೇಕು. ಆ ಸ್ಥಿತಿ ನಿರಪೇಕ್ಷವಾದುದು, ಅಚಲವಾದುದು. ಆದಕಾರಣ ಅದು ನಿಷ್ಕ್ರಿಯವಾದುದು. ಅದು ದೇಶಕಾಲ ನಿಮಿತ್ತಾತೀತವಾದುದು. ಇದು ಮನಸ್ಸಿಗೂ ಅತೀತವಾದುದು. ಶುದ್ಧವಾದ ಚಿತ್ತದಲ್ಲಿ ಅದರ ಪ್ರತಿಬಿಂಬವನ್ನು ಮಾತ್ರ ನೋಡಬಹುದು. ನಾವು ಮನಸ್ಸಿಗೆ ಅತೀತರಾಗಿ ಹೋದಾಗ ಅದನ್ನು ಅನುಭವಿಸಬಹುದು. ಭ್ರಾಂತಿ ಮೂಲವನ್ನು ನಾಶಮಾಡಬೇಕು. ಭ್ರಾಂತಿಯ ಮೂಲವೇ ನಮ್ಮ ನಿಜವಾದ ಆತ್ಮನನ್ನು ನಾವು ತಿಳಿದುಕೊಳ್ಳದೆ ಇರುವುದು. ನಿಜವಾದ ನಾನು ಯಾವುದು ಎಂಬುದನ್ನು ಕಂಡು ಕೊಳ್ಳಬೇಕು. ಅನಾತ್ಮ ವಸ್ತುಗಳನ್ನೆಲ್ಲ ಕಳೆದ ಮೇಲೆ ಅದು ದೊರಕುವುದು. ಆತ್ಮ ದೇಹ ಅಲ್ಲ. ಇಂದ್ರಿಯ ಅಲ್ಲ. ಮನಸ್ಸಲ್ಲ, ನಮ್ಮ ಯಾವ ಸಾಮರ್ಥ್ಯವೂ ಅಲ್ಲ. ನಮಗೆ ಗೊತ್ತಿರುವ ಎಲ್ಲದಕ್ಕಿಂತಲೂ ಹೊರಗೆ ಇರುವುದು. ಆದರೂ ನಮಗೆ ಗೊತ್ತಿರುವುದಕ್ಕೆಲ್ಲ ಹಿನ್ನೆಲೆಯಾಗಿರುವುದು. ಅದು ಎಲ್ಲಾ ಕಾಲದಲ್ಲಿ, ಎಲ್ಲಾ ದೇಶದದಲ್ಲಿ ಇದೆ. ಆದರೆ ನಮಗೆ ಅಗೋಚರವಾಗಿದೆ. ಅವೇನೋ ಅದಾಗಿದೆ.

ಜ್ಞಾನಯೋಗ ಅತಿಮುಖ್ಯವಾಗಿ ನಮಗೆ ಬೋಧಿಸುವುದೇನೆಂದರೆ, ಮನುಷ್ಯನ ಆತ್ಮ ಸರ್ವಶಕ್ತಿಮಾನ್, ಸರ್ವವ್ಯಾಪಿ ಮತ್ತು ಅನಂತ ಸ್ವರೂಪ ಎಂಬುದು. ಅದು ಸಚ್ಚಿದಾನಂದ. ನಾವು ಇದನ್ನು ಒಪ್ಪಿಕೊಂಡರೆ, ನಮ್ಮ ಆತ್ಮ ಎಂದರೆ ಏನೆಂದು ಭಾವಿಸುತ್ತೀರಿ. ಅದರ ಸ್ವಭಾವವೇನು? ಮೊದಲು ಅದು ಕಾಲದೇಶದಿಂದ ಬಾಧಿತವಾಗದ ಅನಂತ ಎಂಬುದನ್ನು ಅರಿಯಬೇಕು. ನನ್ನ ಆತ್ಮ ಎಂದರೆ, ಯಾವುದೋ ನನ್ನ ದೇಹದಲ್ಲಿರುವ ಒಂದು ಸಣ್ಣ ವಸ್ತುವಲ್ಲ. ಅದು ಸರ್ವವ್ಯಾಪಿ, ಅದು ಎಲ್ಲಾ ಕಾಲದಲ್ಲಿಯೂ ಇದೆ. ಎಲ್ಲಾ ದೇಶದಲ್ಲೂ ವ್ಯಾಪಿಸಿಕೊಂಡಿದೆ. ಆಗ ನಿಮ್ಮ ಆತ್ಮ, ಕ್ರಿಸ್ತನ ಆತ್ಮನಿಗಿಂತ, ಬುದ್ಧನ ಆತ್ಮನಿಗಿಂತ ಬೇರೆ ಎಂದು ಹೇಳುವುದಕ್ಕೆ ಆಗುವುದಿಲ್ಲ, ಏನು, ಇದರಿಂದ ನಿಮಗೆ ಅಂಜಿಕೆಯಾಗುವುದೆ? ಆತ್ಮನಿಗೆ ಬಹುವಚನ ಉಪಯೋಗಿಸುವುದಕ್ಕೆ ಆಗುವುದಿಲ್ಲ. ಬೇರೆಬೇರೆ ಆತ್ಮರುಗಳಿಲ್ಲ. ಜ್ಞಾನಯೋಗದ ಪ್ರಕಾರ ಇರುವುದೊಂದೇ, ಅದೇ ಬ್ರಹ್ಮ.

ಬ್ರಹ್ಮನೇ ಸರ್ವವ್ಯಾಪಿಯಾದ, ನಿರಾಕಾರನಾದ, ನಿರಪೇಕ್ಷವಾದ ಸತ್ಯ. ಅದು ದೇಶಕಾಲ ನಿಮಿತ್ತಗಳಿಂದ ಬಾಧಿತವಾಗುವುದಿಲ್ಲ. ನೀವು ಒಂದು ಆಕಾರವನ್ನು ಆಲೋಚಿಸಬೇಕಾದರೆ, ಅದನ್ನು ದೇಶದಲ್ಲಿ ಮಾಡಬೇಕು. ಆಗ ಅದು ಕಾಲದಿಂದ ಬಾಧಿತವಾಗುವುದು. ಆಗ ಅದು ಸರ್ವವ್ಯಾಪಿ ಆಗಲಾರದು. ಯಾವಾಗ ದೇಶದ ಸಾಂತವನ್ನು ಒಪ್ಪಿಕೊಳ್ಳುತ್ತೀರೋ, ಆಗ ಕಾಲದ ಸಾಂತವನ್ನು ಒಪ್ಪಿಕೊಳ್ಳಬೇಕಾಗಿದೆ. ಆಕಾರ ಎಂದೆಂದಿಗೂ ಇರಲಾರದು. ಹಾಗಾದರೆ ಈ ನಿರಾಕಾರವಾದ, ಕಾಲಾತೀತವಾದ, ಎಲ್ಲಾ ವಸ್ತುಗಳ ಸಾರವಾದ ಇದನ್ನು ಏನೆಂದು ಕರೆಯುವುದು?

ಅಸ್ತಿತ್ವದ ಸಾರ ಎಂದರೆ ಏನು ಎಂಬುದನ್ನು ವಿಭಜನೆ ಮಾಡೋಣ. ಅಸ್ತಿತ್ವದ ಸಾರವನ್ನು ನೀವು ಏನೆಂದು ಭಾವಿಸುವಿರಿ. ನಿಮಗೆ ಇರುವ ಎಲ್ಲಾ ವಸ್ತುಗಳ ಪಟ್ಟಿಯನ್ನು ಮಾಡಿ. ಆ ವಸ್ತುಗಳ ಸಾರ ಯಾವುದು ಎಂಬುದನ್ನು ಹೇಳಲು ಯತ್ನಿಸಿ. ಅದು ಏನೂ ಇಲ್ಲ ಎಂದು ಹೇಳಬಹುದು ಅಥವಾ ಆ ವಸ್ತುಗಳ ಮೊತ್ತ ಎಂದುಬೇಕಾದರೆ ಹೇಳಬಹುದು. ನಿಮಗೆ ಗೊತ್ತಿಲ್ಲ. ಈ ವಸ್ತುಗಳು ಯಾವಾಗಲೂ ಬದಲಾಯಿಸುತ್ತವೆ. ನೀವು ಪಟ್ಟಿ ಮಾಡಿರುವ ಬಾಹ್ಯವಸ್ತುಗಳ, ಜೊತೆಗೆ ನಿಮ್ಮ ದೇಹ, ಮನಸ್ಸು, ಬುದ್ಧಿ ಇವುಗಳೆಲ್ಲ ಪ್ರತಿಕ್ಷಣವೂ ಬದಲಾಯಿಸುತ್ತವೆ. ನೀವು ಇದನ್ನು ಒಪ್ಪಿಕೊಳ್ಳುತ್ತೀರೋ? ನಾವು ಹುಡುಕುತ್ತಿರುವುದು ಬದಲಾವಣೆ ಆಗದ ವಸ್ತುವನ್ನು. ಯಾವುದು ಬದಲಾವಣೆ ಆಗುವುದೋ ಅದು ನಿರಪೇಕ್ಷವಾಗಿರಲಾರದು. ಅಸ್ತಿತ್ವದ ಸಾರವನ್ನು ನಾವು ಹುಡುಕುತ್ತಿರುವೆವು.

ನೀವು ಮಾಡಿರುವ ಪಟ್ಟಿಯಲ್ಲೆಲ್ಲ ದೃಗ್ ಯಾರು? ನೀವು ಯಾರು? ನೀವು ಎಂದರೆ ಏನು? ಈ ಬದಲಾಯಿಸುತ್ತಿರುವ ವಸ್ತುಗಳ ಮೊತ್ತ ನೀವು ಎಂದು ಹೇಳಲಾರಿರಿ. ಏಕೆಂದರೆ ಅದು ಕುತರ್ಕವಾಗುವುದು. ಪ್ರತಿಯೊಂದು ವಸ್ತುವಿನಲ್ಲಿಯೂ ಒಂದು ಗುಣ ಇಲ್ಲದೇ ಇದ್ದರೆ, ಈ ವಸ್ತುಗಳನ್ನೆಲ್ಲ ಸಂಗ್ರಹಿಸಿದರೆ, ಅದನ್ನು ಉತ್ಪತ್ತಿ ಮಾಡುವುದಕ್ಕೆ

ಆಗುವುದಿಲ್ಲ. ಹಲವು ವಸ್ತುಗಳನ್ನೆಲ್ಲಾ ಯಾವುದೋ ಒಂದು ಎತ್ತಿ ಹಿಡಿದಿದೆ, ಇದೇ ಅವುಗಳೆಲ್ಲದರ ಮೂಲ, ಅದು ನಿರಪೇಕ್ಷವಾಗಿದೆ ಎಂದು ನಾವು ಒಪ್ಪಿಕೊಳ್ಳಬೇಕಾಗಿದೆ. ಬದಲಾಯಿಸದೇ ಇರುವ ಯಾವುದೋ ಒಂದು ಇವುಗಳನ್ನು ಗ್ರಹಿಸುತ್ತಿದೆ. ಬದಲಾವಣೆಗೆಲ್ಲ, ಬದಲಾಯಿಸದೇ ಇರುವ ಒಂದು ಹಿನ್ನೆಲೆ ಇರಬೇಕಾಗಿದೆ. ಸಾಧು ಪಾಲ್ "ನಾವು ಅವನಲ್ಲಿದ್ದೇವೆ, ಅವನಲ್ಲೆ ಸಂಚರಿಸುತ್ತಿದ್ದೇವೆ, ಅವನಿಂದಲೇ ಆಗಿದ್ದೇವೆ" ಎನ್ನುತ್ತಾನೆ. ಇದೇ ನಮ್ಮ ಅಸ್ತಿತ್ವದ ಸಾರ. ಇದು ಅತೀಂದ್ರಿಯವಾದುದು. ಹಿನ್ನೆಲೆಯಲ್ಲಿರುವ ಮೂಲ ಚೈತನ್ಯ ನಮಗೆ ಶಕ್ತಿಯನ್ನು ಒದಗಿಸದೇ ಇದ್ದರೆ, ನಾವು ಒಂದು ಕ್ಷಣವೂ ಬದುಕುವುದಕ್ಕೆ ಆಗುವುದಿಲ್ಲ. ಒಂದು ಚೂರು ಕೆಲಸವನ್ನು ಮಾಡುವುದಕ್ಕೆ ಆಗುವುದಿಲ್ಲ. ಇದು ಬರೀ ಮನುಷ್ಯನಿಗೆ ಮಾತ್ರ ಅನ್ವಯಿಸುವುದಿಲ್ಲ. ವಿಶ್ವಕ್ಕೆ ಅನ್ವಯಿಸುವುದು. ಎಲ್ಲವೂ ಅನಂತ ಅಸ್ತಿತ್ವ ಸಾಗರದ ಮೇಲೆ ತೇಲುತ್ತಿದೆ. ಆ ಗುಳ್ಳೆ ಯಾವಾಗಲೂ ಸಾಗರದ ಒಂದು ಭಾಗವೇ. ಅದು ಸಾಗರದಿಂದ ಎಂದಿಗೂ ಬೇರೆ ಅಲ್ಲ. ಅಥವಾ ಅದನ್ನು ಸಾಗರದ ಮೇಲೆ ತೇಲುವ ಮಂಜಿನ ಗಡ್ಡೆಯಂತೆ ಎಂದು ಬೇಕಾದರೂ ಹೇಳಬಹುದು. ಮಂಜುಗಡ್ಡೆ ಕರಗಿದರೆ ಎಲ್ಲಿಗೆ ಹೋಗುವುದು ? ಅದು ಯಾವುದರ ಮೇಲೆ ತೇಲುತ್ತಿದೆಯೋ ಅದೇ ಸಾಗರಕ್ಕೆ ಸೇರುವುದು. ಅದು ಬೇರೆ ಎಲ್ಲಿ ಹೋಗಲು ಸಾಧ್ಯ. ಅನಂತ ಅಸ್ತಿತ್ವದಲ್ಲಿ ನಾವಿದ್ದೇವೆ, ಆಲೋಚಿಸುತ್ತೇವೆ, ಅದರಿಂದಲೇ ಆಗಿದ್ದೇವೆ. ಮೇಲೆ ಕಾಣುವ ಗುಣಗಳು ಮತ್ತು ಆಕಾರಕ್ಕೆ ಪ್ರಾಮುಖ್ಯತೆ ಕೊಡುವುದರಿಂದ, ಎಲ್ಲಕ್ಕೂ ಆಧಾರವಾದ ಹಿನ್ನೆಲೆಯನ್ನೇ ನಾವು ಮರೆಯುತ್ತೇವೆ. ಗುಣಗಳೇ ಆಕಾರವನ್ನು ಮಿತಿಗೆ ಒಳಗು ಮಾಡುವುದು. ಅದು ಸತ್ಯವನ್ನು ನಮಗೆ ಕಾಣದಂತೆ ಮಾಡುವುದು. ನಿರಪೇಕ್ಷವಾದ ಅಸ್ತಿತ್ವ ತನ್ನ ಪಾಡಿಗೆ ತಾನಿದೆ. ಅದು ಹೊರಗಿನ ಆಕಾರದ ಹಂಗಿನ ಮೇಲೆ ಇಲ್ಲ. ಮೊದಲು ನಮಗೆ ಕಷ್ಟವಾದರೂ ಕಾಲಕ್ರಮೇಣ, ಯಾವುದೋ ಒಂದು ನಿರಪೇಕ್ಷತತ್ತ್ವ ವೈವಿಧ್ಯತೆಯ ಹಿಂದೆ ಇದೆ ಎಂದು ನಾವು ಊಹಿಸಬಹುದು. ನಾವು ಇದನ್ನು ಊಹಿಸಬೇಕಾದರೆ ಅದ್ಭುತ ವಿಭಜನಾಶಕ್ತಿ ಬೇಕಾಗುವುದು. ಆದರೂ ಇದನ್ನೇ ನಾವು ಮಾಡಬಹುದು. ನಾನು ಎಂದರೆ ಈ ತಲೆ, ಕೈ, ಕಾಲು ಅಥವಾ ಮುಖವೆ ಎಂದು ಪ್ರಶ್ನೆಮಾಡಿಕೊಳ್ಳಿ. ನೀವು ಇವುಗಳಾವುದರ ಮೇಲೆಯೂ ನಿಂತಿಲ್ಲ, ಮತ್ತು ಇವುಗಳೆಲ್ಲದರ ಒಟ್ಟುಮೊತ್ತವೂ ನೀವಲ್ಲ ಎಂದು ಗೊತ್ತಾಗುವುದು. ಆದರೆ ಇವುಗಳೆಲ್ಲವೂ ವ್ಯಕ್ತಪಡಿಸುತ್ತಿರುವ ಯಾವುದೊ ಒಂದು ನಿರಪೇಕ್ಷ ಅಸ್ತಿತ್ವ ಇದೆ. ಅದರ ಹಿನ್ನೆಲೆಯಮೇಲೆ ಈ ತೋರಿಕೆಯನ್ನು ಜೋಡಿಸಿದಂತಿದೆ. ನಮ್ಮ ಆತ್ಮನ ಅಥವಾ ಬ್ರಹ್ಮನ ಸಾರವೇ ನಿರಪೇಕ್ಷ ಜ್ಞಾನ. ಅದು ಜ್ಞಾನವನ್ನು ಹೊಂದಿಲ್ಲ, ಜ್ಞಾನವೇ ಆಗಿದೆ. ನಾವು ಅನಂತ ಜ್ಞಾನವನ್ನು ನಿರಪೇಕ್ಷ ಜ್ಞಾನವೆನ್ನುತ್ತೇವೆ. ಹೀಗೆಂದರೆ ಏನು ? ನಿರಪೇಕ್ಷವಾದ ಜ್ಞಾನ ಒಂದಿದೆ, ಹಲವು ವಸ್ತುಗಳ ಜ್ಞಾನವೊಂದಿದೆ. ನಿಮ್ಮಲ್ಲಿ ಜ್ಞಾನಭಂಡಾರ ಇದೆ. ನೀವು ಅದಕ್ಕೆ ಬೇರೆಬೇರೆ ಹೆಸರುಗಳನ್ನು ಕೊಡುತ್ತಿರುವಿರಿ. ಒಂದಕ್ಕೂ ಮತ್ತೊಂದಕ್ಕೂ ಇರುವ ವ್ಯತ್ಯಾಸ, ತೋರಿಕೆಯ ಜ್ಞಾನದ ವ್ಯತ್ಯಾಸದಲ್ಲಿದೆ. ನಾನು ನೀರು ಎಂದರೆ ಏನಾಗುವುದು ? ಜ್ಞಾನವೇ

ನೀರಿನ ರೂಪ ಧರಿಸುತ್ತವೆ. ಈಗ ನಿಮ್ಮ ಮನಸ್ಸಿನಲ್ಲಿ ನೀರಿನ ಜ್ಞಾನವಲ್ಲದೆ ಬೇರೇನೂ ಇಲ್ಲ ಎಂದರೆ ಜ್ಞಾನವನ್ನು ವ್ಯಕ್ತಪಡಿಸುವುದಕ್ಕೆ ನಿಮಗೆ ,ಸಾಧ್ಯವಾಗುವುದಿಲ್ಲವೆ ?,ನಿಮ್ಮ ಮನಸ್ಸಿನ ಸರೋವರದಮೇಲೆ ಹಲವು ಜ್ಞಾನಗಳೆಂಬ ಗುಳ್ಳೆಗಳು ಏಳುತ್ತಿವೆ. ಈಗ ತಾನೇ ಪ್ರಪಂಚಯಾತ್ರೆಯನ್ನು ಪೂರೈಸಿಕೊಂಡು ಬಂದಿರುವ ನಮ್ಮನ್ನು ನೀವು ಏನೇನು ನೋಡಿದಿರಿ ಎಂದು ಕೇಳಿದರೆ, ಜ್ಞಾನ ವಿಧವಿಧವಾದ ರೂಪತಾಳುವುದು, ಜ್ಞಾನವನ್ನೇ ಬಗೆಬಗೆಯಾಗಿ ನಾನು ವರ್ಣಿಸುತ್ತೇನೆ. ಜ್ಞಾನದ ಭಂಡಾರ ನಮ್ಮಲ್ಲಿ ಇಲ್ಲದೇ ಇದ್ದರೆ, ಹಲವು ವಿಧವಾದ ಭಾವನೆಗಳನ್ನು ನಾನು ವ್ಯಕ್ತಪಡಿಸಲು ಆಗುತ್ತಿರಲಿಲ್ಲ.

ನಿರ್ವಿಕಾರವಾದ ಜ್ಞಾನದ ವಿಷಯ ನಮಗೆ ಏನು ಗೊತ್ತಿದೆ? ಅದು ನಮ್ಮ ಮರ, ಹಕ್ಕಿ, ನಾಯಿ ಮುಂತಾದ ಜ್ಞಾನಗಳಂತೆ ಅಲ್ಲ. ಅದೇ ಇವುಗಳೆಲ್ಲದರ ಮೂಲಕ ವ್ಯಕ್ತವಾಗುವುದು. ಅದು ಪ್ರತಿಯೊಬ್ಬನ ಮೂಲಕವಾಗಿಯೂ ವ್ಯಕ್ತವಾಗುತ್ತಿದೆ, ಪ್ರತಿಯೊಬ್ಬನ ಜ್ಞಾನದ ಮೂಲಕವಾಗಿಯೂ ವ್ಯಕ್ತವಾಗುತ್ತಿದೆ. ಒಂದು ಅನಂತ ಶಾಖದ ಸಾಗರವನ್ನು ಊಹಿಸಿಕೊಳ್ಳೋಣ. ಅದು ಹಲವು ಕಡೆಗಳಲ್ಲಿ ಹಲವು ರೀತಿ ವ್ಯಕ್ತವಾಗುತ್ತಿದೆ. ಇದನ್ನೇ ಊಹಿಸಿಕೊಳ್ಳಲು ಅಷ್ಟು ಕಷ್ಟವೆ? ಉಷ್ಣ ಎಂಬುದು ಇದ್ದರೂ, ಎಲ್ಲಾ ಕಡೆಯೂ ಒಂದೇಸಮನಾಗಿಲ್ಲ. ಲೋಹವನ್ನು ಕರಗಿಸುವ ದೊಡ್ಡ ಕುಲುಮೆಯಲ್ಲಿ ಅದು ಜಾಸ್ತಿ ಇದೆ. ರಿಫ್ರಿಜಿರೇಟರಿನಲ್ಲಿ ಬೇರೊಂದು ಬಗೆಯಾಗಿ ಇದೆ. ಈಗ ನಾವು ಬ್ರಹ್ಮ ಅಥವಾ ಅನಂತಜ್ಞಾನವನ್ನು ತೆಗೆದುಕೊಳ್ಳೋಣ. ಅದು ಹಲವು ದೇಹ ಮನಸ್ಸು ಚಿತ್ತಗಳ ಮೂಲಕ ಬಗೆಬಗೆಯಾಗಿ ವ್ಯಕ್ತವಾಗುತ್ತಿದೆ.

ಉದಾಹರಣೆಗೆ ನಿಮಗೆ ತುಂಬಾ ಗೊತ್ತಿದೆ. ಮತ್ತೊಬ್ಬನಿಗೆ ಕಡಿಮೆ ಗೊತ್ತಿದೆ. ಇನ್ನೊಬ್ಬನಿಗೆ ಮತ್ತೂ ಕಡಿಮೆ ಗೊತ್ತಿದೆ ಎಂದು ಇಟ್ಟುಕೊಳ್ಳೋಣ. ಆ ಜ್ಞಾನವೇ ದೇವರು. ಆದರೆ ಜ್ಞಾನ ಇದಷ್ಟೇ ಅಲ್ಲ. ಅದು ಅನಂತವಾದುದು. ಜ್ಞಾನ ಪ್ರತಿಯೊಂದು ವ್ಯಕ್ತಿಗಳ ಸಾಮರ್ಥ್ಯಕ್ಕೆ ತಕ್ಕಂತೆ ವ್ಯಕ್ತವಾಗುತ್ತಿದೆ. ನೀವು, ನಾವು ಎಂಬ ಉಪಾಧಿಗಳಿಗೆ ಅತೀತವಾದ ಜ್ಞಾನವನ್ನು ಊಹಿಸಿಕೊಳ್ಳುವುದಕ್ಕೆ ಸಾಧ್ಯವೆ ? ಸೂರ್ಯನ ಕಾಂತಿ ಹಲವು ವಸ್ತುಗಳ ಮೂಲಕ ಪ್ರತಿಬಿಂಬಿಸುತ್ತಿದೆ ಎಂಬುದು ನಮಗೆ ಗೊತ್ತಿದೆ. ಇವುಗಳ ಕಾಂತಿಯಲ್ಲಿ ತರತಮವಿದ್ದರೂ ಒಂದು ಸೂರ್ಯ ಇವುಗಳಲ್ಲೆಲ್ಲ ಪ್ರತಿಬಿಂಬಿಸುತ್ತಿರುವನು ಎಂಬುದು ನಮಗೆ ಗೊತ್ತಿದೆ. ಹಲವು ಬಣ್ಣಗಳು ಕೂಡ ಒಂದೇ ಬಣ್ಣದ ತರತಮ ಸ್ಪಂದನಗಳು ಎಂಬುದು ಕೂಡ ನಮಗೆ ಗೊತ್ತಿದೆ. ಹಲವು ಬಗೆಯ ಬೆಳಕಿನ ಪ್ರತಿಬಿಂಬದ ಹಿಂದೆ ಒಂದು ಸಾಮಾನ್ಯವಾಗಿರುವುದು ಇದೆ ಎಂಬುದನ್ನು ಊಹಿಸಿಕೊಳ್ಳುವುದು ಕಷ್ಟವಾಗುವುದಿಲ್ಲ. 'ಹಲವು ದೇಹ, ಇಂದ್ರಿಯ ಮನಸ್ಸು ಬುದ್ಧಿಗಳು ಒಂದೇ ಜ್ಞಾನವನ್ನು ಪ್ರತಿಬಿಂಬಿಸುತ್ತವೆ, ಎಂಬುದನ್ನು ಊಹಿಸಿಕೊಳ್ಳುವುದು ಕಷ್ಟವಾಗುವುದಿಲ್ಲ. ನಮ್ಮ ಜ್ಞಾನವನ್ನು ಸೂರ್ಯನ ಒಂದು ಕಿರಣ ಎಂದು ತಿಳಿದುಕೊಳ್ಳಿ. ನಮ್ಮ ಜ್ಞಾನದ ಹಿನ್ನೆಲೆ ಸರ್ವಶಕ್ತವಾದ, ಸರ್ವಜ್ಞವಾದ, ಅನಂತವಾದ ಜ್ಞಾನ. ಜ್ಞಾನವೇ ಬ್ರಹ್ಮ, ಅದೇ ನನ್ನ ಆತ್ಮದ ಸಾರ.

ಮತ್ತೊಂದು ಬ್ರಹ್ಮನ ಗುಣವಿದೆ. ಅದನ್ನೆ ನಾವು ಇನ್ನೂ ತೆಗೆದುಕೊಂಡಿಲ್ಲ. ಅದೇ ಬ್ರಹ್ಮ ಪರಮಾನಂದ ಸ್ವರೂಪ ಎಂಬುದು. ಆನಂದವನ್ನು ವಿವರಿಸುವುದಕ್ಕೆ ಆಗು ವುದಿಲ್ಲ. ಅದೊಂದು ಮಾನಸಿಕ ಸ್ಥಿತಿ. ಅಲ್ಲಿ ಯಾವ ಬಯಕೆಯೂ ಇಲ್ಲ, ಯಾವ ಘರ್ಷಣೆಯೂ ಇಲ್ಲ, ಅಲ್ಲಿ ಯಾವ ಚಿಂತೆಯೂ ಇಲ್ಲ, ದುಃಖವೂ ಇಲ್ಲ. ನಿಮ್ಮ ಆನಂದ ಮತ್ತು ಶಾಂತಿಗೆ ಯಾವ ವಿಧವಾದ ಆತಂಕವೂ ಇಲ್ಲ. ನಾವೆಲ್ಲರೂ ಅನುಭವಿಸುವ ಒಂದು ಆನಂದವನ್ನು ಸುಷುಪ್ತಿ ಎಂದು ಹೇಳಬಹುದು. ಇದು ಆನಂದಕ್ಕೆ ಪರಮ ಸಮಿಪ ದಲ್ಲಿರುವುದು. ಸುಷುಪ್ತಿಯನ್ನು ಉದಾಹರಣೆಗೆ ತೆಗೆದುಕೊಂಡರೆ ನಾವು ನಮ್ಮ ಅಸ್ತಿತ್ವದ ಸಾರವಾದ ಸುಷುಪ್ತಿಯನ್ನು ಪಡೆಯಬೇಕಾದರೆ ದೇಹ ಮನಸ್ಸು ಮತ್ತು ಇತರ ಸಾಮರ್ಥ್ಯ ಗಳನ್ನು ತ್ಯಜಿಸಬೇಕಾಗುವುದು. ಇವುಗಳೆಲ್ಲ ನಿದ್ರಾಸ್ಥಿತಿಗೆ ಹೋಗಬೇಕು. ಆಗಲೆ ಆನಂದ ಪ್ರಾಪ್ತಿಯಾಗುವುದು. ನೀವು ಸುಷುಪ್ತಿಯಿಂದ ಎದ್ದಮೇಲೆ "ಓ, ನಾನೆಷ್ಟು ಹಾಯಾಗಿ ನಿದ್ದೆ ಮಾಡಿದೆ. ಅಲ್ಲಿ ಯಾವ ಕಳವಳವೂ ಇರಲಿಲ್ಲ; ಆಗ ನಾನೂ ಇರಲಿಲ್ಲ. ನನಗೆ ತಲೆನೋವು ಇರಲಿಲ್ಲ. ಆಗ ನನ್ನ ಚಿಂತೆ, ವ್ಯಾಕುಲ, ನೋವನ್ನೆಲ್ಲ ಮರೆತಿದ್ದೆ," ಎಂದು ಹೇಳುತ್ತೀರಿ. ಅಲ್ಲಿ ಏನೂ ಇಲ್ಲ. ಎಲ್ಲವನ್ನೂ ಕಳೆದಾಗಿದೆ. ಆನಂದದಲ್ಲಿ ಯಾವ ವಿಧ ವಾದ ಕುಂದು ಕೊರತೆಗಳೂ ಇರುವುದಿಲ್ಲ. ಎಲ್ಲವನ್ನೂ ಕಳೆದಮೇಲೆ ಕೊನೆಗೆ ಉಳಿ ಯುವ ಸ್ಥಿತಿಯೇ ಅದು.

ನಮಗೆ ಇಂದ್ರಿಯದ ಮೂಲಕ ಸ್ವಲ್ಪ ಆನಂದದ ಅರಿವಾಗುವುದು. ಇದನ್ನೇ ಸಂತೋಷ ಎನ್ನುವುದು. ನಮಗೆ ಪ್ರಿಯವಾದ ವೇದನೆಗಳನ್ನು ಕೊಡುವ ವಸ್ತುಗಳು ಇಂದ್ರಿಯಕ್ಕೆ ತಾಕಿದಾಗ, ನಮ್ಮಲ್ಲಿರುವ ಪರಮಾನಂದದ ಒಂದು ಕಿರಣವನ್ನು ನೋಡು ವೆವು. ಆದರೆ ಇದು ಕ್ಷಣಿಕ. ನಾವು ದೃಶ್ಯದ ಮಟ್ಟಕ್ಕೆ ಎಳೆತಂದಾಗ ಆನಂದವನ್ನು ವಿಕೃತಿಗೊಳಿಸುವೆವು. ಇದು ವಿಕೃತವಾದ ಆನಂದ, ವಿಕಾರವಾದ ಆನಂದ: ನಾಯಿ ಯೊಂದು ರಬ್ಬರಿನಿಂದ ಮಾಡಿದ ಆಟದ ಸಾಮಾನನ್ನೋ, ಮೂಳೆಯನ್ನೋ ಅಗಿಯು ವುದನ್ನು ನೋಡಿದೆ. ನಾಯಿ ಆ ಮೂಳೆಯನ್ನು ತೆಗೆದುಕೊಂಡು, ನಿರ್ಜನ ಪ್ರದೇಶಕ್ಕೆ ಹೋಗಿ ಚೆನ್ನಾಗಿ ಅಗಿಯಿತು. ಆಗ ತನ್ನ ಜೊಲ್ಲೆ ಮೂಳೆಮೇಲೆಲ್ಲ ಇತ್ತು. ತನ್ನ ದವಡೆ ಯಿಂದಲೇ ಬಂದ ರಕ್ತ ಅಲ್ಲಿತ್ತು. ಅದೇನೊ ಅಗಿಯುವ ಮೂಳೆಯಿಂದ ಬಂದಿತು ಎಂದು ಆನಂದದಿಂದ ನೆಕ್ಕುತ್ತಿತ್ತು. ನಾವೂ ಕೂಡ ಅದರಂತೆಯೇ ನಮ್ಮಿಂದಲೇ ಸ್ಫುರಿಸುವ ಆನಂದವನ್ನು ಬಾಹ್ಯವಸ್ತುವಿನ ಮೂಲಕ ಅನುಭವಿಸುತ್ತಿರುವೆವು.

ಯಾವುದೋ ಒಂದು ವಸ್ತುವಿದೆ. ಅದು ಕೆಲವು ಗುಣಗಳ ಮೂಲಕ ಗೋಚರ ವಾಗುತ್ತಿದೆ. ನಿರಪೇಕ್ಷದಲ್ಲಿ ಎಲ್ಲಾ ಗುಣಗಳ ಸಾಧ್ಯತೆ ಇದೆ. ಆದರೆ ನಮಗೆ ಅದರ ಗುಣ ಗಳೇ, ನಮ್ಮ ಸರ್ವಸ್ವವಾಗಿವೆ, ಅವೇ ಸತ್ಯವಾಗಿವೆ. ಯಾವುದು ಗುಣಗಳ ಮೂಲಕ ವ್ಯಕ್ತವಾಗುತ್ತಿದೆಯೋ ಅದು ನನಗೆ ಗೊತ್ತಾದರೆ ಆಗ ಜೀವನವೆಲ್ಲ ಅದರ ಸತ್ಯ, ಜ್ಞಾನ ವೆಲ್ಲ ಅದರ ಕಿರಣ, ಆನಂದವೆಲ್ಲ ಅದರ ಅಂಶ ಎಂದು ಗೊತ್ತಾಗುವುದು. ಅದು ಗುಣಗಳ ಮೂಲಕ ವ್ಯಕ್ತವಾದಾಗ, ವಿಕಾರವಾಗಿ ಕಾಣಬಹುದು, ಬೇರೆ ರೀತಿ ಕಾಣಬಹುದು. ಆಗಲೆ ನಮ್ಮ ನೈಜಸ್ವಭಾವ ಸಚ್ಚಿದಾನಂದ ಎಂದು ಅರಿವಾಗುವುದು.

ಬ್ರಹ್ಮ ಸರ್ವವ್ಯಾಪಿಯಾಗಿದ್ದಾನೆ, ಎಲ್ಲಾ ಕಾಲದಲ್ಲಿಯೂ ಇದ್ದಾನೆ, ಅದಕ್ಕೆ ಎಲ್ಲಾ ಶಕ್ತಿ ಇದೆ, ಎಲ್ಲಾ ಜ್ಞಾನವಿದೆ, ಮೇರೆ ಇಲ್ಲದುದು ಮತ್ತು ಅನಿರ್ವಚನೀಯ. ಇದೇ ನನ್ನ ಆತ್ಮ, ನನ್ನ ಅಸ್ತಿತ್ವದ ಸಾರ. ನನ್ನ ಇರವು ಮತ್ತು ಜ್ಞಾನ ಅದರ ಮೇಲೆ ನಿಂತಿದೆ. ನನ್ನ ಸಂತೋಷ, ನನ್ನ ಆನಂದ, ನನ್ನ ಅಸ್ತಿತ್ವದ ಸಾರವಾದ ಅನಂತ ಆನಂದದ ಒಂದು ಕಿರಣ.

ಒಂದು ಅನಂತ ಸಾಗರವಿದೆ ಎಂದು ಭಾವಿಸಿ. ಅದರಲ್ಲಿ ಹಲವು ಆಕಾರ, ಬಣ್ಣ, ಸೈಜಿನ ಬುಡ್ಬುಗಳಿವೆ ಎಂದು ಭಾವಿಸಿ. ಪ್ರತಿ ಜೀವಾತ್ಮನೂ ಅದರಲ್ಲಿರುವ ಬುಡ್ಬುಯಂತೆ. ಅದೆಲ್ಲ ಸಾಗರದ ನೀರಿನಿಂದ ಕೂಡಿದೆ. ವ್ಯತ್ಯಾಸ ಇರುವುದು ಬುಡ್ಬುಯ ಆಕಾರ, ಬಣ್ಣ ಮತ್ತು ಸೈಜಿನಲ್ಲಿದೆ. ಬ್ರಹ್ಮನೇ ಎಲ್ಲದರಲ್ಲಿಯೂ ಇರುವುದು. ಇದೇ ನಮ್ಮ ಅಸ್ತಿತ್ವಕ್ಕೆ ಮೂಲ, ಇದೇ ನಮ್ಮ ಹಿನ್ನೆಲೆ, ನಮ್ಮ ಜ್ಞಾನ, ಆನಂದ ಮತ್ತು ಎಲ್ಲಕ್ಕೂ ಇದೇ ಮೂಲ. ನಾವಿರಬೇಕಾದರೆ ಬ್ರಹ್ಮ ಇರಬೇಕು, ನಮಗೇನಾದರೂ ಜ್ಞಾನ ಬೇಕಾದರೆ ಬ್ರಹ್ಮನಿಂದ ಬರಬೇಕು, ನಮಗೇನಾದರೂ ಆನಂದವಾದರೆ ಇದು ಬ್ರಹ್ಮಾನಂದದ ಒಂದು ಅಂಶ.

ನಾವೆಲ್ಲ ಬುಡ್ಬುಗಳಂತೆ ಇದ್ದೇವೆ. ಉದಾಹರಣೆಯಲ್ಲಿ ಬರುವ, ಬಣ್ಣಬಣ್ಣದ, ವಿವಿಧ ಆಕಾರಗಳ ಬುಡ್ಬುಗಳು ನಾವು. ನಾವೆಲ್ಲ ಅನಂತ ಬ್ರಹ್ಮಸಾಗರದಲ್ಲಿ ತೇಲುತ್ತಿರುವೆವು. ನಾವೇಕೆ ಇಂತಹ ಆಕಾರಗಳಲ್ಲಿ ವ್ಯಕ್ತವಾಗಬೇಕು ? ಇದನ್ನೇ ಮಾಯೆ ಎನ್ನುತ್ತೇವೆ. ಇದೊಂದು ವಿವರಣೆಯಲ್ಲ, ಇರುವ ಸ್ಥಿತಿ ಅಷ್ಟೆ ಎಂದು ಸ್ವಾಮಿ ವಿವೇಕಾನಂದರು ಹೇಳುವರು. ಪರಿಸ್ಥಿತಿ ಹೀಗೆ ಇದೆ ಎಂದು ನಾವು ಒಂದು ವಿವರಣೆಯನ್ನು ಕೊಡಬೇಕಾಗಿದೆ. ನಾವು ಬೇಕಾದರೆ ಮುಂದೆ ಹೋಗಬಹುದು, ಹಿಂದೆ ಹೋಗುವುದಕ್ಕೆ ಆಗುವುದಿಲ್ಲ.

ತಾತ್ತ್ವಿಕ ಪ್ರಶ್ನೆಗಳನ್ನೆಲ್ಲ ಮರೆತು, ಈ ಪರಿಸ್ಥಿತಿಯಲ್ಲಿ ನಾವೇನು ಮಾಡೋಣ ? ನಮ್ಮ ಉದ್ದೇಶವೇನು! ಪ್ರತಿಯೊಂದು ಬುಡ್ಬುಯೂ ಪ್ರತ್ಯೇಕವಾಗಿ ಸಂಚರಿಸುತ್ತಿದೆ. ಅದು ಏತಕ್ಕೆ ಚಲಿಸುತ್ತದೆ? ಏಕೆಂದರೆ ಅದಕ್ಕೆ ಚಲಿಸಲು ಆಸೆ. ಅದು ತನ್ನ ವ್ಯಕ್ತಿತ್ವವನ್ನು ಕಾಪಾಡಿಕೊಳ್ಳುವುದಕ್ಕಾಗಿ ಚಲಿಸುತ್ತಿದೆ. ಇನ್ನೊಂದೆ ವಿವರಣೆಯನ್ನು ಕೊಡಲು ಸಾಧ್ಯ. ಅದೊಂದು ಸಣ್ಣ ವಸ್ತುವಾಗಿ ಸಂಚರಿಸುತ್ತಿರುವಾಗ, ಅದು ನೋಡುವ ಮತ್ತಾವುದೋ ದೊಡ್ಡ ಬುಡ್ಬುಯಂತೆ ಆಗಬೇಕು ಎಂದು ಆಶಿಸುವುದು. ಈ ಆಸೆಯಿಂದ ಪ್ರಚೋದಿತವಾಗಿ, ಅದು ತಾನು ಏನು ಆಗಬೇಕೆಂದು ಆಶಿಸುವುದೋ ಅದರಂತೆ ಆಗುವುದು. ಅದು ಹಾಗೆಯೇ, ಹೆಚ್ಚು ಹೆಚ್ಚು ಪೂರ್ಣವಾದ ವಸ್ತುವಿನಂತೆ ಬದಲಾಯಿಸುತ್ತಾ ಬರುವುದು. ಅದೊಂದು ಪರಿಮಿತಿಯನ್ನು ಮುಟ್ಟಿದಾಗ ಅದಕ್ಕೆ ಏನಾಗುವುದು ? ತನ್ನಲ್ಲಿರುವುದು, ತನ್ನ ಹೊರಗೆ ಇರುವುದು, ಇವನ್ನು ಯಾವ ದೃಷ್ಟಿಯಿಂದ ನೋಡುವುದು ? ನಾನು ಪ್ರತ್ಯೇಕವಾದ ಸ್ಥಿತಿಯನ್ನೇ ರಕ್ಷಿಸಿಕೊಂಡಿರಲು ಇಚ್ಛಿಸುವುದಿಲ್ಲ. ನಾನು ಸಾಗರದೊಂದಿಗೆ ಒಂದಾಗಬೇಕು. ಸಾಗರದಲ್ಲಿ ಸಚ್ಚಿದಾನಂದವಿದೆ. ನಾನು ಹಲವು ಬುಡ್ಬುಗಳ ಮೂಲಕ ಹೋಗುತ್ತಿದ್ದಾಗ, ನಾನು ಯಾವುದನ್ನು ಆಶಿಸುತ್ತಿದ್ದೆನೊ, ಆಗ ಅದರ ಅಂಶವನ್ನು ಮಾತ್ರ

ರುಚಿನೋಡುತ್ತಿದ್ದೆ. ಬುದ್ಧಿ ಎಷ್ಟೇ ದೊಡ್ಡದಾಗಿರಲಿ ಅದು ಸಾಗರಸೊಂದಿಗೆ ಹೋಲಿಸಿದಾಗ, ಒಂದು ಬಿಂದು. ಎಲ್ಲ ಉಪಾಧಿಗಳ ಮಿತಿಯನ್ನು ಅರಿತಾಗ ಒಬ್ಬ ಈ ಸ್ಥಿತಿಗೆ ಬರುವನು. ಆಗ ಉಪಾಧಿಗಳಿಂದ ಪಾರಾಗಲು ಯತ್ನಿಸುವನು.

ಪುನರ್ಜನ್ಮ ಎಂದರೆ ಏನು ಎಂಬುದು ನಿಮಗೆ ಇದರಿಂದ ಗೊತ್ತಾಯಿತೆ ? ಎಲ್ಲಿಯ ವರೆಗೆ ವ್ಯಕ್ತಿ, ತನ್ನ ವ್ಯಕ್ತಿತ್ವವನ್ನು ರಕ್ಷಿಸಿಕೊಳ್ಳಬೇಕು ಎಂದು ಆಶಿಸುವನೋ ಅಲ್ಲಿಯ ವರೆಗೆ ಅವನು ವಿಕಾಸವಾಗುತ್ತಾ ಬರುವನು. ನಾವು ಎಂದೆಂದಿಗೂ ಹೀಗೆಯೇ ವಿಕಾಸವಾಗುತ್ತಿರಬೇಕೆ ? ಇದರಿಂದ ನಾವು ಪಾರಾಗುವುದಕ್ಕೆ ಸಾಧ್ಯವಿಲ್ಲವೆ ? ನೀವು ಪುನರ್ಜನ್ಮ ಸಿದ್ಧಾಂತವನ್ನು ತಿಳಿದುಕೊಂಡಮೇಲೆ, ಅದನ್ನು ಅತಿಕ್ರಮಿಸಲು ಯತ್ನಿಸುವಿರಿ. ನಿಮಗೆ ಒಮ್ಮೆ, ನಿಮ್ಮ ಆತ್ಮದ ಸಾರವೇ ಬ್ರಹ್ಮ, ಅದೇ ನನ್ನ ನೈಜಸ್ಥಿತಿ ಎಂದು ಗೊತ್ತಾದಮೇಲೆ ನೀವಿನ್ನು ಅಲ್ಪ ವ್ಯಕ್ತಿತ್ವಕ್ಕೆ ಅಂಟಿಕೊಂಡಿರುವುದಿಲ್ಲ. ನಿಮ್ಮ ಒಳಗೆ ಇರುವುದನ್ನು, ಒಮ್ಮೆ ನೀವು ರುಚಿ ನೋಡಿದರೂ ಸಾಕು, ಇನ್ನುಮೇಲೆ ಅದನ್ನೇ ಪ್ರತ್ಯೇಕವಾಗಿ, ರಕ್ಷಿಸಿಕೊಂಡಿರಲು ಇಚ್ಛಿಸುವುದಿಲ್ಲ. ಸತ್ಯವೇನೆಂದರೆ, ಎಲ್ಲಾ ದೇಹಗಳೂ ಒಂದು ಬಂಧನವೆ. ಆದರೆ ಆ ಜ್ಞಾನ ಬರುವವರೆಗೆ ನಿಮ್ಮ ದೇಹವನ್ನು ಜಾಣರಾಗಿ ಉಪಯೋಗಿಸಿ. ಅದು ನಿಮಗೆ ಸಹಾಯಮಾಡುವುದು. ಅದಕ್ಕೆ ವಿಶ್ರಾಂತಿ ಕೊಡಿ, ಆಹಾರಕೊಡಿ, ಅದನ್ನು ಒಂದು ನಿಯಮದಲ್ಲಿಡಿ. ಅದು ನಿಮ್ಮನ್ನು ಮುಂದುಮುಂದಕ್ಕೆ ಕರೆದುಕೊಂಡು ಹೋಗುವುದು. ಆದರೆ ಇದೇ ಪರಮ ಸತ್ಯ ಎಂದು ಭಾವಿಸಬೇಡಿ. ನೀವು ಬರೀ ದೇಹಗಳಲ್ಲಿ ಸಿಕ್ಕಿಕೊಂಡಿರುವಿರಿ. ಸಾಧ್ಯವಾದಷ್ಟು ಇದರಿಂದ ಪಾರಾಗಿ.

ಜನ ಅನೇಕವೇಳೆ ಪುನರ್ಜನ್ಮ ಸಿದ್ಧಾಂತ ತಮಗೆ ಎಷ್ಟೋ ಸಮಾಧಾನವನ್ನು ತರುವುದು ಎಂದು ಹೇಳುವರು. ಮೃತ್ಯು ಎಂದರೆ ದೇಹದ ಬದಲಾವಣೆ ಎಂದರೆ ಅವರಿಗೆ ಸಂತೋಷ. ಆದರೆ ಇದನ್ನು ಒಂದು ಸಮಾಧಾನ ಎಂದು ಹೇಳಲು ಆಗುವುದಿಲ್ಲ. ಒಬ್ಬ ಗುಲಾಮ ಪುನಃ ಒಬ್ಬ ಗುಲಾಮನಾಗಿ ಹುಟ್ಟುವುದರಿಂದ ಏನಾದರೂ ಸಮಾಧಾನವಿದೆಯೆ ? ಅನೇಕರಿಗೆ ತಮ್ಮ ವ್ಯಕ್ತಿತ್ವವನ್ನು ಬಿಡಬೇಕೆಂದು ಅಂಜಿಕೆಯಿಂದ ನಡುಗುವರು. ತಾವು ಅದರಲ್ಲಿ ಆಸಕ್ತವಾಗಿರುವುದರಿಂದ ಅದನ್ನೇ ಭದ್ರವಾಗಿ ಹಿಡಿದುಕೊಳ್ಳುವರು. ತಮ್ಮ ಒಳಗೆ ಇರುವ ಅಸ್ತಿತ್ವದ ವಿಷಯದಲ್ಲಿ ಅವರಿಗೆ ಅರಿವೇ ಇಲ್ಲ. ಸಾವು ಬಂದಾಗ ವ್ಯಕ್ತಿತ್ವ ಒಡೆದು ನುಚ್ಚುನೂರಾಗುವುದು ಎಂದರೆ ಅವರೇನು ಮಾಡುತ್ತಾರೆ. ನನಗೇನೊ ಅದು ಒಳ್ಳೆಯದೇ ಎಂದು ಭಾವಿಸುತ್ತೇನೆ. ಆದರೆ ಪುನಃ ಪುನಃ ಬರುವುದು, ಹಲವು ದೇಹಗಳನ್ನು ಧರಿಸುವುದು, ಯಾವಾಗಲೂ ಬೇರೆ ಆಗಿರುವುದು. ಹೀಗಿದ್ದರೆ, ನಾವು ಇವುಗಳಿಂದ ಪಾರಾಗುವುದೆಂದು ? ಇನ್ನುಮೇಲೆ ದೇಹವಿಲ್ಲದಾಗ. ಸಾವು ಎಂದರೆ ಬುದ್ಧಿಯ ಬದಲಾವಣೆ ಅಷ್ಟೆ. ಗುಂಡಾಗಿರುವುದು ಚೌಕವಾಗುವುದು, ಉದ್ದವಾಗುವುದು, ನಾವು ದೇಹವನ್ನು ನಾಶಮಾಡುವುದಿಲ್ಲ. ಅದನ್ನು ಬೇರೊಂದು ದೇಹಕ್ಕೆ ವರ್ಗಾಯಿಸುವುದು. ನಾವು ಈ ಬಂಧನದಿಂದ ಪಾರಾಗಬೇಕಾದರೆ ನಾವೇ ಪೂರ್ಣ ಸಚ್ಚಿದಾನಂದ ಬ್ರಹ್ಮ, ಅದಕ್ಕಿಂತ ಕಡಿಮೆಯಾದರೆ, ಬಂಧನಕಾರಿ ಎಂದು ಅರಿಯಬೇಕು.

ನಾವು ಇದನ್ನು ಹೇಗೆ ಅರ್ಥಮಾಡಿಕೊಳ್ಳುವುದು, ಅನುಷ್ಠಾನಕ್ಕೆ ತರುವುದು ? ಯಾವಾಗಲೂ ದೇಹ ಮತ್ತು ಆತ್ಮ ಇವನ್ನು ವಿಭಜನೆ ಮಾಡುತ್ತಿರಬೇಕು. ಎಲ್ಲಾ ದೇಹಗಳಲ್ಲಿಯೂ ಇರುವುದೊಂದೇ ವಸ್ತು ಎಂಬುದನ್ನು ಅರಿಯಬೇಕು. ಆಕಾರಕ್ಕಿಂತ ಹೆಚ್ಚಾಗಿ ಅದರ ಒಳಗಿರುವ ವಸ್ತುವಿಗೆ ಗಮನ ಕೊಡಬೇಕು. ಇಲ್ಲಿ ಬ್ರಹ್ಮ ಒಂದು ಆಕಾರದಲ್ಲಿ ಕಾಣುತ್ತಿದೆ, ಅದರಲ್ಲಿ ಇರುವುದು ಬ್ರಹ್ಮವೇ. ಇದನ್ನು ಪುನಃ ಪುನಃ ಅಭ್ಯಾಸಮಾಡಿ, ತೀವ್ರವಾಗಿ ಶ್ರದ್ಧೆಯಿಂದ ಆರು ತಿಂಗಳು ಇದನ್ನು ಅಭ್ಯಾಸಮಾಡಿ. ಆಗ ನೋಡುವಿರಿ ನಿಮ್ಮ ದೃಷ್ಟಿಯಲ್ಲಿ ಎಷ್ಟೊಂದು ಬದಲಾವಣೆ ಆಗಿದೆ ಎಂಬುದು. ಈ ಹೊಸ ದೃಷ್ಟಿಯಲ್ಲಿ ಮಹಾಗುರುಗಳ ಬೋಧನೆಯನ್ನು ಅರ್ಥಮಾಡಿಕೊಳ್ಳುವುದಕ್ಕೆ ಯತ್ನಿಸಿ. ಆಗ ಅಲ್ಲಿ ಹೊಸ ಹೊಸ ಸತ್ಯಗಳು ಹೊಳೆಯುವುವು.

ಜ್ಞಾನಯೋಗದಲ್ಲಿ ವಿವೇಕವೆಂಬ ಮಾರ್ಗದಿಂದ ಸೇರಿದ ಗುರಿ, ಆಧ್ಯಾತ್ಮಿಕ ಜೀವನದಲ್ಲಿ ಕೊನೆಯ ಅವಸ್ಥೆ. ನೀವು ಬೇರೆ ಮಾರ್ಗದಿಂದಲೂ ಸತ್ಯವನ್ನು ತಿಳಿಯುವುದಕ್ಕೆ ಪ್ರಯತ್ನಿಸಬಹುದು. ಆದರೆ ಇದೇ ಕೊನೆಯ ವಿವರಣೆ. ನೀವು ಈ ಜನ್ಮದಲ್ಲಿ ಬ್ರಹ್ಮವನ್ನು ತಿಳಿಯಬೇಕು, ಬ್ರಹ್ಮನಾಗಬೇಕು. ಜೀವ ಬ್ರಹ್ಮವಲ್ಲದೆ ಬೇರಲ್ಲ ಎಂದು ಶಂಕರಾಚಾರ್ಯರು ಅರ್ಧ ವಾಕ್ಯದಲ್ಲಿ ಹೇಳುವರು. ಇದನ್ನೇ ಈ ಜನ್ಮದಲ್ಲೇ ಸಾಕ್ಷಾತ್ಕಾರ ಮಾಡಿಕೊಳ್ಳಬೇಕಾಗಿದೆ. ಜ್ಞಾನಯೋಗಿ ಇದಕ್ಕೆ ಮುಂಚೆ ನಿಲ್ಲುವುದಿಲ್ಲ.

ಜ್ಞಾನಯೋಗಿಗೆ ಸತ್ಯಸಾಕ್ಷಾತ್ಕಾರ ಎಂದರೆ ತನ್ನ ಆತ್ಮನನ್ನೇ ಬ್ರಹ್ಮ ಎಂದು ಅರಿಯುವುದು. ಆದರೆ ಇದನ್ನು ಬ್ಯಾಹ್ಯವಸ್ತುಗಳನ್ನು ಅರಿಯುವಂತೆ ಅರಿಯಬೇಕೆ ? ನೀವು ಇಲ್ಲೊಂದು ಹೂವು ನನಗೆ ಕಾಣಿಸುತ್ತಿದೆ ಎಂದು ಹೇಳುತ್ತೀರಿ. ನಿಜವಾಗಿ ಏನಾಗಿದೆ ? ನೀವು ಒಂದು ಸರ್ಚ್‌ಲೈಟಿನಂತೆ ಪ್ರಜ್ಞೆಯನ್ನು ಹೊರಗೆ ಕಳುಹಿಸಿದಿರಿ. ಆ ಪ್ರಜ್ಞೆಯ ಸಹಾಯದಿಂದ, ಬುದ್ಧಿಯ ಸಹಾಯದಿಂದ ನೀವು ಅದನ್ನು ಅರಿತಿರಿ. ನೀವು ಅದನ್ನು ನೋಡುವವರು. ಹೂವು ಒಂದು ದೃಶ್ಯವಾಯಿತು. ನೀವು ದೃಗ್ ಆದಿರಿ. ನಾವು ಈ ಹೂವನ್ನು ತಿಳಿದುಕೊಳ್ಳುವಂತೆ, ಬ್ರಹ್ಮನನ್ನು ತಿಳಿದುಕೊಳ್ಳಬೇಕೆ ? ನೀವು ಒಂದು ದೃಶ್ಯ ವಸ್ತುವಿನಂತೆ ಬ್ರಹ್ಮನನ್ನು ಅರಿತರೆ, ನಿಮಗೆ ತೃಪ್ತಿಯಾಗುವುದೆ ? ನಮಗೆ ತೃಪ್ತಿ ಆಗುವುದಿಲ್ಲ. ಏತಕ್ಕೆ ಎಂಬುದನ್ನು ಹೇಳುತ್ತೇನೆ. ನಿಮಗೆ ಗೊತ್ತಿರುವ ಯಾವ ವಸ್ತುವೇ ಆಗಲಿ, ಅದು ದೇಶದಲ್ಲಿರಬೇಕು. ಅದು ಕಾಲದಲ್ಲಿರಬೇಕು. ಅದು ಕಾರಣದಿಂದ ಬಾಧಿತವಾಗಿರಬೇಕು ; ಆದಕಾರಣ ಅದು ವಿಕಾರಾತ್ಮಕವಾಯಿತು. ನೀವು ಯಾವ ವಸ್ತುವನ್ನು ದೃಶ್ಯದಂತೆ ನೋಡಿದರೂ ಅದಕ್ಕೆ ಈ ಮಿತಿಗಳು ಇರುತ್ತವೆ. ಅದು ನಿರಪೇಕ್ಷವಾಗಿರುವುದಕ್ಕೆ ಆಗುವುದಿಲ್ಲ. ಅದು ಪರಿಪೂರ್ಣವಾಗಲಾರದು. ಅದು ಹೇಗೆ ಪರಮ ಸತ್ಯವಾಗಬಲ್ಲದು ? ಹೊರಗೆ ಇರುವ ಯಾವುದೂ ನಮ್ಮ ಅನ್ವೇಷಣೆಯ ಗುರಿಯಲ್ಲ. ಎಲ್ಲಾ ದೃಶ್ಯಗಳ ದೃಗ್ ಅನ್ನು ನಾವು ನೋಡಬೇಕಾಗಿದೆ.

ಹೊರಗಿನ ವಸ್ತುವನ್ನಾಗಲಿ ಅಥವಾ ಜ್ಞಾನವನ್ನಾಗಲಿ ಹುಡುಕುವುದಕ್ಕೆ ಹೋದರೆ ನಾವು ಸಮಸ್ಯೆಯಿಂದ ಪಾರಾಗಲಾರೆವು. ನೀವು ಅಂತರ್ಮುಖರಾಗಬೇಕು. ಮೊದಲು

ನಾವು ನಮ್ಮಿಂದ ಹೊರಗೆ ಇರುವ ವಸ್ತುಗಳನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನಿಸುತ್ತೇವೆ. ಅನಂತರ ಅವುಗಳನ್ನು ಸಂಗ್ರಹಿಸುತ್ತೇವೆ. ಮುಂಚೆ ದೃಶ್ಯಪ್ರಪಂಚದಲ್ಲಿ ನಾವು ಹುಡುಕುತ್ತೇವೆ. ಆದರೆ ತುಂಬಾ ಅನುಭವ ಬಂದಮೇಲೆ ನಮಗೆ ಗೊತ್ತಾಗುವುದು ಇದರಿಂದ ಪ್ರಯೋಜನ ಇಲ್ಲ ಎಂದು. ಯಾವಾಗಲೂ ದೃಗ್ ಮತ್ತು ದೃಶ್ಯಗಳ ದ್ವೈತವಿದೆ. ಈ ದ್ವೈತವನ್ನು ಮೀರಿ ಹೋಗಲಾರೆವು.

ಅನಂತರ ನೀವು ಅಂತರ್ಮುಖರಾಗುತ್ತೀರಿ. ಇಲ್ಲಿಯೂ ಕೂಡ ನಾವು ಏನನ್ನು ಹುಡುಕುತ್ತಿರುವೆವು ಎಂಬ ಭಾವನೆ ಇದೆ. ಅಂತರ್ಯದಲ್ಲಿರುವ ಜ್ಞಾನವನ್ನು ನಾವು ಅರಿಯಬೇಕೆಂದು ಇಚ್ಛಿಸುವೆವು. ದ್ವೈತ ಇರುವುದು. ಆದರೆ ನೀವು ಯಾವ ವಸ್ತುವನ್ನು ತಿಳಿದುಕೊಳ್ಳಬೇಕಾದರೂ, ನೀವು ಅದರ ಮೇಲೆ ಚೆಲ್ಲುವ ಕಾಂತಿಯ ಮೇಲೆ ನಿಂತಿದೆ ಎಂದು ಗೊತ್ತಾಗುವುದು. ಯಾವ ಒಂದು ವಸ್ತುವಾದರೂ ಅದು ಹೇಗಿದೆಯೋ ಹಾಗೆ ನಮಗೆ ಕಾಣುವುದಿಲ್ಲ. ನೀವು ಅದರ ಮೇಲೆ ಆರೋಪಮಾಡುವ ತಿಳಿವಳಿಕೆಯ ಮೇಲೆ ಅದು ನಿಂತಿದೆ. ಅದೇನು ಎಂದು ತಿಳಿದುಕೊಳ್ಳುವುದಕ್ಕೆ ನೀವು ಯತ್ನಿಸುವಿರಿ. ಇದು ತುಂಬಾ ಸೂಕ್ಷ್ಮವಾದುದು. ಇಲ್ಲಿ ನಿಮ್ಮನ್ನೆ ನೀವು ವಿಭಜನೆ ಮಾಡಿಕೊಳ್ಳುತ್ತಿರುವಿರಿ. ಆದರೆ ನೀವು ಅದರಲ್ಲಿ ಮುಗ್ನರಾಗುವವರೆಗೆ ನಿಮಗೆ ಅದು ಗೊತ್ತಾಗುವುದಿಲ್ಲ. ಹೀಗೆ ಒಂದಾದಾಗ ಸತ್ಯದ ಕಿಡಿ ಏಳುವುದು. ಇದನ್ನು ಜ್ಞಾನದ ಸ್ಥಿತಿ ಎಂದು ಹೇಳುತ್ತೀರ? ನಮಗೆ ಸಾಧಾರಣವಾಗಿ ಗೊತ್ತಿರುವ ಜ್ಞಾನದಂತೆ ಅಲ್ಲ ಇದು. ಜ್ಞಾನವಿರಬೇಕಾದರೆ, ದೃಗ್ ದೃಶ್ಯ ಇರಬೇಕು. ಎಲ್ಲಿ ದೃಶ್ಯವೇ ಇಲ್ಲವೋ ಅಲ್ಲಿ ತಿಳಿದುಕೊಳ್ಳುವುದಕ್ಕೆ ಏನಿದೆ? ಅದು ಸುಮ್ಮನೆ ಇದೆ. ಅದರ ವಿಷಯವಾಗಿ ನಾವು ಇಷ್ಟನ್ನು ಮಾತ್ರ ಹೇಳಬಹುದು. ಮುಂಚೆ ನಾವು ಯಾವುದನ್ನು ಹೊರಗೆ ಹುಡುಕುತ್ತಿದ್ದೆವೊ, ಅನಂತರ ಒಳಗೆ ಹುಡುತ್ತಿದ್ದೆವೊ ಅದೇ ವಸ್ತುವಿನ ನೈಜಸ್ಥಿತಿ ಎಂದು ಗೊತ್ತಾಗುವುದು. ನೀವು ಯಾವುದನ್ನೋ ನೋಡುತ್ತಿರುವಿರಿ. ಇದ್ದಕ್ಕೆ ಇದ್ದಂತೆಯೇ ನೀವೇ ಆ ನೋಡುವ ವಸ್ತು ಆಗಿದ್ದೀರಿ ಎಂದು ಹೊಳೆಯುವುದು. ಅಲ್ಲಿ ಭಾಷೆ ಮೌನವಾಗುವುದು. ಅಂತಹ ಸ್ಥಿತಿಯಲ್ಲಿ ಏನನ್ನೂ ವಿವರಿಸುವುದಕ್ಕೆ ಆಗುವುದಿಲ್ಲ. ಇದೇ ಸಮಾಧಿ. ನೀನು ಆತ್ಮಸಾಕ್ಷಾತ್ಕಾರವನ್ನು ಪಡೆದರೆ ಆಗಲೆ ಅಸ್ತಿತ್ವದ ಪರಮಪದ ಪ್ರಾಪ್ತವಾಗುವುದು. ಇದೇ ಸಚ್ಚಿದಾನಂದ. ನೀನೇ ಅದಾಗುವೆ. ನೀವೇನೂ ದೇವರು ಅಥವಾ ಬ್ರಹ್ಮನನ್ನು ನೋಡುವುದಿಲ್ಲ. ನೀವೇ ಅದಾಗುತ್ತೀರಿ. ನೀವು ಅದನ್ನು ಹುಡುಕುತ್ತಿರುವ ಸಾಧಕನಾಗಿದ್ದ ಸ್ಥಿತಿಗೂ ಅದನ್ನು ಪಡೆದ ಸಿದ್ಧನಾದ ಸ್ಥಿತಿಗೂ ಏನು ವ್ಯತ್ಯಾಸ? ಇಂದ್ರಿಯ ವಸ್ತುವನ್ನು ತಿಳಿದುಕೊಳ್ಳುವುದಕ್ಕೂ ಬ್ರಹ್ಮ ಸಾಕ್ಷಾತ್ಕಾರಕ್ಕೂ ವ್ಯತ್ಯಾಸವೇನು? ನೀವು ವಿಭಜನೆ ಮಾಡುತ್ತಿರುವಾಗ "ನಾನು ಹುಡುಕುತ್ತಿದ್ದೇನೆ, ನನಗೆ ಬುದ್ಧಿ, ಮನಸ್ಸು, ಇಂದ್ರಿಯ, ದೇಹವಿದೆ ಎಂಬ ಭಾವನೆ ಇರುವುದು. ನಾನು ಅಪೂರ್ಣ, ನಾನು ಪೂರ್ಣತೆಯನ್ನು ಅರಸುತ್ತಿದ್ದೇನೆ" ಎಂಬ ಭಾವನೆ ಇರುವುದು.

ಸತ್ಯ ಸಾಕ್ಷಾತ್ಕಾರಕ್ಕೆ ಮುಂಚೆ, ಅದರ ಮೇಲೆ ನೀವು ಯಾವು ಯಾವುದನ್ನು

ಆರೋಪ ಮಾಡುವಿರಿ, ಈ ಆರೋಪಿತ ವಸ್ತುಗಳೆಲ್ಲ ಸುಳ್ಳು. ನಿಮ್ಮ ವಿಷಯವಾಗಿ ನೀವು ಏನನ್ನು ಹೇಳಿಕೊಂಡರೂ, ನೀವು ನಿಮ್ಮಲ್ಲಿರುವ ಗುಣಗಳನ್ನು ಸಾರುತ್ತಿದ್ದೀರಿ ಅಥವಾ ನಿಷೇಧಿಸುತ್ತಿದ್ದೀರಿ. ನಾನು ಮರ್ತ್ಯ, ಅಪೂರ್ಣ, ದುರ್ಬಲ ಅಥವಾ ನಾನು ಬಲಶಾಲಿ ಅಥವಾ ಸುಖವಾಗಿದ್ದೇನೆ ಎಂದು ಹೇಳಬಹುದು. ನೀವು ಇವೆ ಎನ್ನುವುದು, ಇಲ್ಲ ಎನ್ನುವುದು ಎರಡೂ ಆರೋಪಗಳು. ಆ ಗುಣಗಳ ಸ್ವಭಾವ ಗೊತ್ತಿಲ್ಲದೆ, ನೀವು ಅವುಗಳನ್ನು ಆರೋಪಮಾಡಿಕೊಳ್ಳುತ್ತಿದ್ದೀರಿ. ಈ ಆರೋಪದ ವಿಚಿತ್ರವೇನೆಂದರೆ, ಅವು ಇಲ್ಲದೇ ಇದ್ದರೂ ಇರುವ ಹಾಗೆ ನಿಮಗೆ ಕಾಣುವುದು. ಇದು ರಜ್ಜು ಸರ್ಪ ನ್ಯಾಯದಂತೆ. ನಮ್ಮ ಪ್ರಜ್ಞೆಯ ವಿಷಯವಾಗಿ ನಾವು ಹೇಳುವುದೆಲ್ಲ ಬರೀ ಆರೋಪ. ಯಾವುದನ್ನು ಆರೋಪ ಮಾಡಿರುವೆವೋ ಅದನ್ನು ತೆಗೆದಮೇಲೆ, ಆಗ ನಿಜವಾದ ನಾನು ವ್ಯಕ್ತವಾಗುವುದು.

ನಾವು ನಮ್ಮ ವಿಚಾರ ಶಕ್ತಿಯನ್ನು ಉಪಯೋಗಿಸಿದರೆ, ಈ ಪವಿತ್ರತೆ ಎಂಬುದು ನಮ್ಮ ನೈಜ ಸ್ವಭಾವ ಎಂಬುದನ್ನು ಅರಿಯುವುದಕ್ಕೆ ಆಗುವುದಿಲ್ಲವೆ ? ಆ ಸತ್ಯವೇ, ನಮ್ಮ ಭಾವನೆ, ಆಲೋಚನೆ, ಕ್ರಿಯೆ ಇವುಗಳ ಮೂಲಕ ವ್ಯಕ್ತವಾಗುತ್ತಿರುವುದು ಎಂಬುದನ್ನು ಅರಿಯಲು ಸಾಧ್ಯವೆ ? ಅದು ಮನಸ್ಸಿಗೆ ಒಂದು ದೃಶ್ಯವಾಗದಿರಬಹುದು. ನಾವು ಮುಂದುವರಿದಂತೆ, ವಿವೇಚನೆ ಮಾಡುತ್ತಾ ಹೋದಂತೆ, ಆ ಸತ್ಯವೇ ನಮ್ಮ ಮೂಲಕ ವ್ಯಕ್ತವಾಗುತ್ತಿದೆ ಎಂಬುದನ್ನು ಅರಿಯುತ್ತೇವೆ. ಯಾವುದೋ ಒಂದು ವಿಶ್ವಶಕ್ತಿ, ಹಲವು ಆಕಾರಗಳ ಮೂಲಕ, ಮಾತಿನ ಮೂಲಕ, ಕ್ರಿಯೆಯ ಮೂಲಕ ವ್ಯಕ್ತವಾಗುತ್ತಿದೆ ಎಂದು ಭಾವಿಸುವೆವು. ಆದರೆ ನಮ್ಮಲ್ಲಿರುವ ನ್ಯೂನತೆಗಳನ್ನೆಲ್ಲ ಹೇಗೆ ವಿವರಿಸುತ್ತೀರಿ ಎಂದು ನೀವು ಕೇಳಬಹುದು. ವಿದ್ಯುಚ್ಛಕ್ತಿ ಹರಿದುಕೊಂಡು ಹೋಗುವ ಮಧ್ಯವರ್ತಿಯಲ್ಲಿ ಇರುವ ದೋಷ, ವಿದ್ಯುಚ್ಛಕ್ತಿಯ ದೋಷವಲ್ಲ. ಅದರಂತೆಯೆ, ಇವುಗಳೆಲ್ಲ, ದೇಹ, ಮನಸ್ಸು ಇಂದ್ರಿಯಾದಿಗಳ ದೋಷ, ಅವುಗಳ ಮೂಲಕ ವ್ಯಕ್ತವಾಗುವ ಬ್ರಹ್ಮನ ದೋಷವಲ್ಲ ಎಂದು ಹೇಳಬಹುದು.

ದೇಹ ಮತ್ತು ಮನಸ್ಸು ಒಂದು ಯಂತ್ರವಾಗಿರುವುದರಿಂದ ನಾವು ಅವುಗಳನ್ನು ನಿರ್ಲಕ್ಷಿಸಬಹುದು ಎಂದು ನೀವು ಹೇಳಬಹುದು. ಅದು ಹಾಗಲ್ಲ. ನಾವು ಹೊರಗಿನ ಯಂತ್ರಗಳನ್ನು ಹೇಗೆ ಸರಿಪಡಿಸುತ್ತೇವೆಯೋ ಹಾಗೆಯೇ ದೇಹ ಮನಸ್ಸು ಮುಂತಾದ ಯಂತ್ರಗಳನ್ನು ಇನ್ನೂ ಉತ್ತಮ ಸ್ಥಿತಿಗೆ ತರಬಹುದು. ಈ ಯಂತ್ರವನ್ನು ಉತ್ತಮಪಡಿಸುತ್ತಾ ಹೋದರೆ ಕೊನೆಗೆ ಏನಾಗುವುದು ? ಅವುಗಳು ಮಾಡುವ ಕೆಲಸಗಳನ್ನು ಹೆಚ್ಚಿಸಬಹುದು. ಆದರೂ ಅದು ಪೂರ್ಣವಾಗುವುದಿಲ್ಲ. ನೀವು ಸಾಗರವನ್ನು ಮನೆಗೆ ತರಬೇಕೆಂದು ಇಚ್ಛಿಸುವಿರಿ ಎಂದು ಇಟ್ಟುಕೊಳ್ಳೋಣ. ಮೊದಲನೆಯ ದಿನ ಒಂದು ಪಿಂಟ್ ಹಿಡಿಯುವ ಬಾಟಲನ್ನು ತೆಗೆದುಕೊಂಡು ಹೋಗುತ್ತೀರಿ. ಅದು ತುಂಬಾ ಸಣ್ಣದಾಗಿ ಕಾಣುವುದು. ನೀವು ಪಾತ್ರೆಯನ್ನು ದೊಡ್ಡದೊಡ್ಡದನ್ನಾಗಿ ಮಾಡುತ್ತೀರಿ. ಆದರೆ ಸಾಗರವನ್ನು ಹಿಡಿಯಬೇಕಾದರೆ, ಸಾಗರವೇ ಬೇಕಾಗುವುದು. ಅಂದರೆ ಸಾಗರವನ್ನು ಮನೆಗೆ ತರುವುದಕ್ಕೆ ಆಗುವುದಿಲ್ಲ. ನೀವೇ ಸಾಗರಕ್ಕೆ ಹೋಗಬೇಕಾಗಿದೆ. ನೀವು ನಿಮ್ಮ

ದೇಹ, ಇಂದ್ರಿಯ, ಮನಸ್ಸು, ಬುದ್ಧಿ ಇವುಗಳನ್ನೆಲ್ಲ ಉತ್ತಮಪಡಿಸಿಕೊಳ್ಳಬಹುದು. ನೀವು ಎಷ್ಟೇ ಉತ್ತಮಪಡಿಸಿದರೂ ಅದು ಆತ್ಮನನ್ನು ಸಂಪೂರ್ಣವಾಗಿ ವ್ಯಕ್ತಪಡಿಸಲಾರದು. ನೀವು ಯಂತ್ರಗಳನ್ನೆಲ್ಲಾ ಆಚೆಗೆ ಎಸೆಯಬೇಕಾಗುವುದು. ಯಂತ್ರ ತನ್ನ ಕೆಲಸವನ್ನೆನೋ ಮಾಡುತ್ತಿದೆ. ಅದರ ಹಿಂದೆ ಇರುವ ವಸ್ತುವನ್ನು ನಾವು ಗಮನಿಸಬೇಕು. ಅದನ್ನು ನಾವು ಒಳಗೆ ನೋಡದೆ, ಹೊರಗೆ ಕಾಣುವ ದೃಶ್ಯದಲ್ಲಿ ನೋಡಿದರೆ, ಇದೇ ಅಜ್ಞಾನ ಪ್ರಾಪಂಚಿಕತೆ, ಚಾರ್ವಾಕಮತ, ಇದೇ ಮೃತ್ಯು ಎನ್ನುತ್ತೇನೆ. ನಮ್ಮಲ್ಲಿ ಮತ್ತು ನಮ್ಮ ಹೊರಗೆ ನಾವು ನೋಡುವುದರಲ್ಲೆಲ್ಲ ಅದು ಇದೆ, ಆದರೆ, ನಮ್ಮ ದೇಹೇಂದ್ರಿಯಗಳು ಅವನ್ನು ವ್ಯಕ್ತಪಡಿಸಲಾರವು ಎಂದು ಭಾವಿಸಿದರೆ ಅದು ಆಧ್ಯಾತ್ಮಿಕತೆ ಅದೇ ಜ್ಞಾನ.

ನೀವು ಹೀಗೇ ಮುಂದುವರಿದರೆ, ನಿಮ್ಮ ಅಂತರಾಳದಲ್ಲಿ ಹಿಂದೆ ಎಂದೂ ಅನುಭವಿಸದ ಒಂದು ಶಾಂತಿಯನ್ನು ಅನುಭವಿಸುತ್ತೀರಿ. ಹೊರಗಿನ ಸನ್ನಿವೇಶಗಳು ಮತ್ತು ತೋರಿಕೆಗಳು ಗೌಣವಾಗುತ್ತ ಬರುವುವು. ನಮ್ಮ ಅಂತರ್ಯದ ಕಡೆ ಮನಸ್ಸನ್ನು ತಿರುಗಿಸಿದರೆ, ಎಲ್ಲ ಸನ್ನಿವೇಶಗಳಲ್ಲಿಯೂ ನಾವು ಪ್ರಶಾಂತರಾಗಿರಲು ಸಾಧ್ಯ. ಗೀತೆಯಲ್ಲಿ ಇಂತಹ ಸ್ಥಿತಿಯನ್ನು ಸ್ಥಿತಪ್ರಜ್ಞ ಎನ್ನುವರು. ಅದೊಂದು ಅನಂತ ಸಾಗರದಂತೆ. ನೀವು ಕೋಟ್ಯಂತರ ಗ್ಯಾಲನ್ ನೀರನ್ನು ಅದಕ್ಕೆ ಹಾಕಿದರೆ ಅಲ್ಲಿ ಯಾವ ವ್ಯತ್ಯಾಸವನ್ನೂ ನೋಡುವುದಿಲ್ಲ. ಸಾಗರ ಎಂದರೆ, ಅದರಲ್ಲಿರುವ ನೀರು ಹಲವು ರೀತಿ ಹೊರಗೆ ಹೋಗುತ್ತಿದೆ, ಹಲವು ರೀತಿ ನೀರು ಅದಕ್ಕೆ ಬಂದು ಬೀಳುತ್ತಿದೆ. ಆದರೆ ಅದಂತೂ ಹೆಚ್ಚುಕಡಿಮೆ ಆಗುವುದಿಲ್ಲ. ಈ ಅನಂತ ಪ್ರಜ್ಞೆಯ ಸಾಗರಕ್ಕೆ, ಗೌರವ, ಅಗೌರವ, ಆಸ್ತಿ, ಬಡತನ, ಕೆಲವುವೇಳೆ ಆರೋಗ್ಯ, ಕೆಲವುವೇಳೆ ಅನಾರೋಗ್ಯ, ಯೌವನ ಮತ್ತು ವಾರ್ಧಕ್ಯ ಬರುತ್ತದೆ. ಅಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ. ಆದರೆ ಸಣ್ಣ ಒಂದು ಕೆರೆಯನ್ನು ತೆಗೆದುಕೊಳ್ಳಿ. ಅದಕ್ಕೆ ಸ್ವಲ್ಪ ನೀರು ಬಂದರೂ,ಹೋದರೂ ಎಂತಹ ವ್ಯತ್ಯಾಸವಾಗುವುದು. ನಮ್ಮಲ್ಲಿರುವುದನ್ನು ಯಾರಾದರೂ ತೆಗೆದುಕೊಂಡು ಹೋದರೆ ನಮ್ಮ ಸ್ವಾಸ್ಥ್ಯ ಕೆಡುವುದು. ನಾವು ಉದ್ವೇಗಕ್ಕೆ ತುತ್ತಾಗುವೆವು. ನಮಗೇನಾದರೂ ಸ್ವಲ್ಪ ತಂದುಕೊಟ್ಟರೆ ಯಾವುದಾದರೂ ಗೆಲವು, ಗೌರವ ಇವು ಬಂದರೆ ಹೇಗೆ ನೆಗೆದಾಡುತ್ತೇವೆ. ನಮ್ಮ ಶಾಂತಿಯ ದೃಷ್ಟಿಯಿಂದ ಇಪ್ಪತ್ತು ಸಾವಿರ ಕಣಗಳನ್ನು ಸೇರಿಸಿದರೂ ಒಂದೆ, ತೆಗೆದರೂ ಒಂದೆ. ಬೌದ್ಧಿಕವಾಗಿ ಆದರೂ, ಯಾರು ಸತ್ಯವನ್ನು ತಿಳಿದುಕೊಂಡಿರುವರೊ ಅವರು ಪ್ರತಿಯೊಂದು ಸ್ಥಿತಿಯಲ್ಲಿಯೂ ಉದ್ವೇಗವಿಲ್ಲದೆ ವರ್ತಿಸುವರು.

ಒಬ್ಬ ನಿಜವಾಗಿಯೂ ಸತ್ಯದ ಕಡೆ ಮುಂದುವರಿಯುತ್ತಿದ್ದರೆ, ಆದರ ಲಕ್ಷಣವೇ, ಅವನು ಎಲ್ಲಾ ಪರಿಸ್ಥಿತಿಯಲ್ಲಿಯೂ ಸಮಾಧಾನವಾಗಿರುವನು. ಕೆಲವು ವೇಳೆ ಸ್ವಾಸ್ಥ್ಯತೆ ತಾತ್ಕಾಲಿಕವಾಗಿ ಹೋದರೂ ಸ್ವಲ್ಪ ಹೊತ್ತಿನಲ್ಲಿಯೇ ಅದು ಬರುವುದು. ಕೋಪ, ಅಶಾಂತಿ ಆಧ್ಯಾತ್ಮಿಕ ಜೀವಿಯಲ್ಲಿ ನೀರಿನಮೇಲೆ ಬರೆದ ಅಕ್ಷರದಂತೆ ಎಂದು ಸ್ವಾಮಿ ಅದ್ಭುತಾನಂದರು ಹೇಳುತ್ತಿದ್ದರು. ಒಂದು ಕ್ಷಣ ಅದು ಇರುವುದು, ಮರುಕ್ಷಣವೇ ಅದು ಮಾಯವಾಗುವುದು. ಜ್ಞಾನಿ ತನ್ನ ಮೂಲಕ್ಕೆ ಹೋಗಿ ತಕ್ಷಣವೇ ಸ್ವಾಸ್ಥ್ಯವನ್ನು ಪಡೆ

ಯುವನು. ನಮಗೆ ಈಗ ಅದು ಕಷ್ಟವಾಗಿ ತೋರಬಹುದು. ಆದರೆ ಆದರ್ಶವನ್ನು ನಮ್ಮ ಮುಂದೆ ಇಟ್ಟುಕೊಂಡಿದ್ದರೆ, ನಾವೆಂದಿಗೂ ಬ್ರಹ್ಮನಿಂದ ಬೇರೆ ಎಂದು ಭಾವಿಸುವುದಿಲ್ಲ. ನಮ್ಮ ಮನಸ್ಸನ್ನು ಅತ್ತ ಕಡೆ ಯಾವಾಗಲೂ ಹರಿಸಬಹುದು. ಆ ಪರಮ ಪವಿತ್ರತೆ ನಮ್ಮಲ್ಲಿದೆ, ನಾವು ಅದನ್ನು ಉಪಯೋಗಿಸಿಕೊಳ್ಳಬಹುದು ಎಂಬುದನ್ನು ನಿಸ್ಸಂದೇಹವಾಗಿ ನಂಬಬೇಕು.

ಇಂತಹ ಸ್ಥಿತಪ್ರಜ್ಞನಿಗೆ, ಸತ್ಯಸಾಕ್ಷಾತ್ಕಾರವನ್ನು ಪಡೆದವನಿಗೆ ಈ ಪ್ರಪಂಚ ಇಲ್ಲ ಎಂದು ಹೇಳುತ್ತಾರೆ. ಹೇಗೆಂದರೆ, ಈ ಇಂದ್ರಿಯಕ್ಕೆ ಕಾಣುವ ಪ್ರಪಂಚದ ಹಿಂದೆ ಇದಕ್ಕಿಂತ ಶಾಶ್ವತವಾದ ಮತ್ತೊಂದನ್ನು ಅವನು ಕಂಡುಕೊಂಡಿರುವನು. ಅವನು ತನ್ನ ಪ್ರಪಂಚದಲ್ಲಿಯೇ ವಿಹರಿಸುವನು. ಆ ಪ್ರಪಂಚ ಅವನಿಗೆ ಎಲ್ಲಿಂದ ಬಂತು ? ವಿಷಯ ವಸ್ತುಗಳನ್ನು ಭೇದಿಸಿ ಹೋಗಬಲ್ಲ ಒಂದು ಶಕ್ತಿಯನ್ನು ಅವನು ಉತ್ಪನ್ನಮಾಡಿಕೊಂಡನು. ಅಲ್ಲಿ ತೋರಿಕೆಯನ್ನು ತೋರಿಕೆಯಂತೆ ಭಾವಿಸಿ, ಅದರ ಹಿಂದೆ ಇರುವ ಸತ್ಯವನ್ನು ಅವನು ಅರಿತುಕೊಂಡನು. ಕೆಲವುವೇಳೆ ನಿಮಗೆ ಸ್ಪಷ್ಟವಾಗಿ ಅದು ಕಾಣಬಹುದು. ನೀವು ದೊಡ್ಡ ಸಮುದಾಯವನ್ನು ನೋಡಿದಾಗ, ಅವರಲ್ಲಿ ಒಂದು ಚೈತನ್ಯ ಸಂಚರಿಸುತ್ತಿದೆ, ಒಂದು ಚೈತನ್ಯ ಹಲವು ವಿಧದಲ್ಲಿ ವ್ಯಕ್ತಗೊಳಿಸುತ್ತಿದೆ ಎಂಬುದನ್ನು ಅನುಭವಿಸಬಹುದು. ಈ ಅಂತರ್ದೃಷ್ಟಿಯನ್ನು ಒಮ್ಮೆ ನಾವು ಅನುಭವಿಸಿದರೆ, ಅದನ್ನು ನಾವು ಎಂದಿಗೂ ಮರೆಯುವುದಿಲ್ಲ. ಅದು ಅಷ್ಟು ತೀವ್ರವಾಗಿರುವುದು. ಒಂದು ಸಣ್ಣ ಮಗು ಆಡುವುದನ್ನು ಯಾವಾಗಲಾದರೂ ಗಮನಿಸುವಿರಾ ? ಆ ಮಗುವನ್ನು ತಿಳಿದುಕೊಳ್ಳಲು ಯತ್ನಿಸಿ: ಅದು ಹೇಗಿದೆ, ಎಲ್ಲಿದೆ ಎಂಬುದನ್ನು ಗಮನಿಸಬೇಡಿ. ಆ ಮಗುವಿನ ಮನಸ್ಸು ಹೇಗೆ ವ್ಯಕ್ತವಾಗುತ್ತಿದೆ ಎಂಬುದನ್ನು ಗಮನಿಸಿ. ನೀವು ನಿಮ್ಮ ಏಕಾಗ್ರತೆಯನ್ನು ಹೆಚ್ಚಿಸಿದರೆ, ಮಗು ಮಾಯವಾಗುವುದು. ಬ್ರಹ್ಮ ಅದರ ಮೂಲಕ ವ್ಯಕ್ತವಾಗುತ್ತಿರುವುದು ಕಾಣುವುದು. ನಿಮಗೆ ಬ್ರಹ್ಮನ ಒಂದು ಕ್ಷಣಿಕ ನೋಟ ಸಿಕ್ಕುವುದು.

ಇಂಡಿಯಾ ದೇಶದಲ್ಲಿ ಪಟವಾಡುವ ಪಂದ್ಯವಿದೆ. ಬಣ್ಣಬಣ್ಣದ ಕಾಗದಗಳಿಂದ ಹಲವು ಆಕಾರಗಳಿಂದ ಕೂಡಿದ ಪಟವನ್ನು ಮಾಡುತ್ತಾರೆ. ಪಟದ ಹಾರಕ್ಕೆ ಗಾಜಿನ ಪುಡಿಯ ಅಂಟನ್ನು ಬೆರಸುತ್ತಾರೆ. ತಮ್ಮ ವಿರೋಧಿಗಳ ಪಟಗಳ ದಾರವನ್ನು ಕತ್ತರಿಸುವುದಕ್ಕೆ. ನಮ್ಮ ಪಟದ ದಾರ ಕಿತ್ತುಹೋದರೆ ನೀವು ಪಟವನ್ನು ಹುಡುಕಿಕೊಂಡು ಹೋಗುವುದಿಲ್ಲ. ಆದರೆ ಸಣ್ಣ ಹುಡುಗರು ಕಿತ್ತು ಹೋಗಿರುವ ಪಟವನ್ನು ಹಿಡಿಯಬೇಕೆಂದು ಆಶಿಸುತ್ತಾರೆ. ನಾನೊಮ್ಮೆ ಒಬ್ಬನೇ ಕುಳಿತಿದ್ದೆ. ಆಕಾಶದಲ್ಲಿ ಹಾರಾಡುತ್ತಿದ್ದ ಪಟವನ್ನು ಮಗು ನೋಡಿತು. ಆ ಪಟ ಕಿತ್ತುಹೋಗಲಿ ಎಂದು ಪ್ರಾರ್ಥಿಸುತ್ತಿತ್ತು. ಆ ಪಟ ಕಿತ್ತು ಹೋಯಿತು. ಪಟ ಕ್ರಮೇಣ ನೆಲದಮೇಲೆ ಬೀಳುತ್ತಿತ್ತು, ಮಗು ಅದರ ಕಡೆಗೆ ಓಡಿತು. ಪಟ ಕೆಳಗೆ ಬಂದರೂ ಮಗುವಿನ ಕೈಗೆನಿಲುಕಲಿಲ್ಲ. ಮಗು ಒಂದು ನದಿಯ ಕಡೆಗೆ ಬಂದು ತನ್ನ ಕೈಗಳನ್ನು ಎತ್ತಿದರೂ ಪಟ ಕೈಗೆ ಸಿಕ್ಕುವಂತೆ ಇರಲಿಲ್ಲ. ಆ ಸಮಯದಲ್ಲಿ ಒಂದು ಕುತೂಹಲ ಜರುಗಿತು. ದೋಣಿಯವನು ಬಂದು ಆ ಹುಡುಗನಿಗೆ ದೋಣಿಗೆ ಹಾರು

ಎಂದನು. ಮಗು ದೋಣಿಯಲ್ಲಿ ಕುಳಿತುಕೊಂಡಿತು. ದೋಣಿಯವನು ಪಟ ನೇತಾಡುತ್ತಿದ್ದ ಸ್ಥಳಕ್ಕೆ ದೋಣಿಯನ್ನು ತೆಗೆದುಕೊಂಡು ಹೋದ. ಈ ಪಟದ ದಾರ ಹತ್ತಿರ ಹತ್ತಿರ ಬಂತು. ಕೊನೆಗೆ ಆ ಮಗುವಿನ ಕೈಗೆ ಸಿಕ್ಕಿತು.

ನಾನು ಇದನ್ನೆಲ್ಲ ಸುಮ್ಮನೆ ನೋಡುತ್ತಿದ್ದೆ. ಆಗ ನನಗೇನೊ ಅನುಭವವಾಯಿತು. ಆ ಮಗುವಿನ ಆನಂದ ಒಂದೇ ನನಗೆ ಕಂಡಿತು. ಆ ಮಗು ಪಟದ ದಾರವನ್ನು ಹಿಡಿದೊಡನೆಯೆ ಆನಂದದ ಕಿರಣ ಅದರಿಂದ ಚಿಮ್ಮಿತು. ಆ ಮಗುವಿನಲ್ಲಿದ್ದ ಏಕಮಾತ್ರ ಆಲೋಚನೆ, ಆ ಪಟದ ದಾರ ತನ್ನ ಕೈಗೆ ಸಿಕ್ಕಿದರೆ ಎಂಬುದೊಂದೆ. ಕೊನೆಗೆ ಅದು ಸಿಕ್ಕಿದಾಗ ಅದರ ಆಸೆ, ಉದ್ವೇಗ, ಅಂಜಿಕೆ, ಕಳವಳ ಎಲ್ಲಾ ಕೊನೆಗೊಂಡಿತು. ಇದೆಲ್ಲ ಹೋದಮೇಲೆ ಬ್ರಹ್ಮಾನಂದ ಅಲ್ಲಿ ವ್ಯಕ್ತವಾಯಿತು. ತತ್ಕಾಲಕ್ಕೆ ಆ ಮಗು ಬ್ರಹ್ಮವೇ ಆಗಿತ್ತು. ನನಗೆ ಹೊರಗಿನವೆಲ್ಲಾ ಸಂಪೂರ್ಣ ಅಳಿಸಿಹೋಗಿ ಅಂತರ್ಯದಲ್ಲಿ ಆನಂದ ಒಂದೇ ಉಳಿಯಿತು. ಹೊರಗಿರುವುದನ್ನೇ ಆಶಿಸಬೇಕು. ನೀವು ಅದರಲ್ಲಿ ಯಶಸ್ವಿಯಾದರೆ ನಿಮಗೆ ಅದರಲ್ಲಿ ಬೇರೊಂದು ದೃಶ್ಯ ಸಿಕ್ಕುವುದು. ಅನಂತರ ಬಾಹ್ಯಕ್ಕೆ ಅಷ್ಟೊಂದು ಪ್ರಾಮುಖ್ಯತೆಯನ್ನು ಕೊಡುವುದಿಲ್ಲ. ಇದರಿಂದ ಸದಾ ನೀವು ಸತ್ಯಸಂಪರ್ಕವನ್ನು ಪಡೆಯುತ್ತೀರಿ. ನೀವು ಇನ್ನುಮೇಲೆ ಹಿಂದಿನ ಹಾಗೆ ಬಾಹ್ಯ ಪ್ರಪಂಚದಲ್ಲಿರುವುದಿಲ್ಲ.

ಶಾಸ್ತ್ರ, ಬ್ರಹ್ಮಜ್ಞಾನಿ, ಅಜ್ಞಾನದಿಂದ, ದೃಶ್ಯದಿಂದ ಹೊರಗೆ ಹೋಗುತ್ತಾನೆ ಎಂದರೆ ನೀವು ಏನು ತಿಳಿದುಕೊಳ್ಳುತ್ತೀರಿ. ಇದನ್ನು ಹೇಗೆ ವಿವರಿಸುತ್ತೀರಿ. ಇಲ್ಲಿ ಅಜ್ಞಾನದ ಕೋಣೆ ಇದೆ. ಅಲ್ಲಿ ಜ್ಞಾನದ ಕೋಣೆ ಇದೆ. ಅವನು ಇನ್ನುಮೇಲೆ ಅಜ್ಞಾನದ ಕೋಣೆಯನ್ನು ಪ್ರವೇಶಿಸುವುದಿಲ್ಲ, ಅವನು ಇನ್ನುಮೇಲೆ ಸಂಸಾರದಲ್ಲಿಯೂ ಪ್ರವೇಶಿಸುವುದಿಲ್ಲ, ಭಾಗಿಯಾಗುವುದಿಲ್ಲ ಎಂದು ಹೇಳುತ್ತಾರೆ. ಆದರೆ ಇದನ್ನು ಅಕ್ಷರಶಃ ತೆಗೆದುಕೊಳ್ಳಬೇಡಿ. ಅವನು ಯಾವಾಗಲೂ ಸತ್ಯದ ಅರಿವಿನಲ್ಲಿ ಬಾಳುತ್ತಾನೆ. ಅವನು ಬ್ರಹ್ಮನಲ್ಲಿ ತಲ್ಲೀನನಾಗಿರುತ್ತಾನೆ. ಅಲ್ಲಿ ಕ್ರಿಯೆ ಹೇಗೆ ಸಾಧ್ಯ? ಚಟುವಟಿಕೆಯೆಲ್ಲ ಕರಣಕ್ಕೆ ಸಂಬಂಧಪಟ್ಟದ್ದು ಎಂಬುದು ಅವನಿಗೆ ಗೊತ್ತಿದೆ. ಇನ್ನುಮೇಲೆ ಅವನು ಚಟುವಟಿಕೆಯಲ್ಲಿ ನಿರತನಾಗುವುದಿಲ್ಲ ಎಂದರೆ ಚಲಿಸುತ್ತಿರುವ ತೋರಿಕೆಯ ಹಿಂದೆಲ್ಲ ಸ್ಥಿರವಾಗಿರುವ ಸತ್ಯವನ್ನು ಅವನು ಮನಗಂಡಿರುವನು.

ನಮ್ಮಲ್ಲಿ ಬ್ರಹ್ಮನಿದ್ದಾನೆ ಎಂಬುದನ್ನು ನಿಸ್ಸಂದೇಹವಾಗಿ ನಂಬಬೇಕು. ಅದೇ ಎಲ್ಲಾ ಚಲನವಲನಗಳ ಹಿಂದೆ ವ್ಯಕ್ತವಾಗುತ್ತಿದೆ. ಈ ತಿಳಿವು ಇನ್ನೂ ಆಳಆಳಕ್ಕೆ ಇಳಿಯುತ್ತ ಬರಬೇಕು. ಬ್ರಹ್ಮ ನಿಮ್ಮ ಪ್ರಜ್ಞೆಯನ್ನೆಲ್ಲ ಹೀರಿಕೊಳ್ಳಲಿ, ಅನಂತರ ನಿಮ್ಮಿಂದ ವ್ಯಕ್ತವಾಗುವುದೆಲ್ಲ ಬ್ರಹ್ಮ ಪ್ರೇರಣೆಯಿಂದಲೇ ಆಗುವುದು. ನೀವು ಯಾವುದರೊಂದಿಗೆ ಸಂಬಂಧವನ್ನು ಕಲ್ಪಿಸಿಕೊಂಡರೂ, ಅದು ಬ್ರಹ್ಮವೇ ಆಗಿರುವುದು.

ನಮ್ಮಲ್ಲಿ ಪ್ರತಿಯೊಬ್ಬರೂ ಬ್ರಹ್ಮಸಾಕ್ಷಾತ್ಕಾರಕ್ಕೆ ಪ್ರಯತ್ನಿಸುತ್ತಿದ್ದೇವೆ ಎಂದರೆ, ಆ ಸಾಕ್ಷಾತ್ಕಾರ ಎಂತಹುದು ಎಂಬ ಪ್ರಶ್ನೆ ಏಳುವುದು. ಇದನ್ನೇ ಆಧ್ಯಾತ್ಮಿಕ ಜ್ಯೋತಿಯನ್ನು ಪಡೆಯುವುದು ಎಂದು ಹೇಳುತ್ತಾರೆ. ನಿಮ್ಮ ಪ್ರಜ್ಞೆ ವಿಕಾಸವಾಗುತ್ತಿರುವಾಗ

ಅದು ಬೆಳಕಿನಂತೆ ತೋರುವುದು. ನಿಮ್ಮಲ್ಲಿರುವ ಜ್ಯೋತಿ, ನಿಮ್ಮ ವ್ಯಕ್ತಿತ್ವವನ್ನೆಲ್ಲ ಅದು ತೋರುತ್ತಿದೆ ಎಂದು ಭಾವಿಸಿ. ಅಜ್ಞಾನದಿಂದ ಮುಚ್ಚಿರುವ ಪ್ರದೇಶವನ್ನು ಅದು ತೋರುವುದು. ಒಳಗೆ ಮನುಷ್ಯ ಹೇಗೆ ಕೆಲಸಮಾಡುತ್ತಾನೆ ತೋರುವುದು. ಇಲ್ಲಿ ಅಜ್ಞಾನವೆಂಬುದಿಲ್ಲ. ಅಜ್ಞಾನ ಅಂಜಿಕೆಯನ್ನು ಹುಟ್ಟಿಸುವುದು, ಅಜ್ಞಾನದಿಂದ ತಪ್ಪು ಅಭಿಪ್ರಾಯಗಳು ಬರುವುವು. ಅದು ನಮ್ಮ ಮನಸ್ಸಿನಲ್ಲಿ ಭ್ರಾಂತಿಯನ್ನು ಉಂಟುಮಾಡುವುದು. ಅಜ್ಞಾನದ ದೊಡ್ಡ ಚಿಹ್ನೆಯೇ ಅಂಧಕಾರ. ಆಧ್ಯಾತ್ಮಿಕ ಜ್ಯೋತಿಯಲ್ಲಿ ಅಂಧಕಾರ ಇರುವುದಿಲ್ಲ. ಇದನ್ನೇ ನಾವು ನಿಜವಾದ ಜ್ಞಾನವೆನ್ನುವುದು.

ನಿಮ್ಮ ಆಲೋಚನೆ, ಭಾವನೆ ಕ್ರಿಯೆಗಳ ಮುಖ್ಯ ಉದ್ದೇಶವೇನು ಎಂಬುದನ್ನು ಅದು ತೋರುವುದು. ವಿಭಜನೆಯ ಕೊನೆಯಲ್ಲಿ, ಆ ಪರಂಜ್ಯೋತಿ ಯಾವ ಆತಂಕವೂ ಇಲ್ಲದೆ ಬೆಳಗುವುದೇ ಮುಖ್ಯ ಉದ್ದೇಶ ಎಂದು ತೋರುವುದು. ಇಲ್ಲಿ ಒಂದು ದೀಪವಿದೆ ಎಂದು ಭಾವಿಸೋಣ. ಅದನ್ನು ಯಾವುಯಾವುದರಿಂದಲೋ ಮುಚ್ಚುತ್ತೇವೆ. ಆಗ ಬೆಳಕಿಗೆ ಅಡಚಣೆಗಳಿವೆ, ಅದು ಬೆಳಗಲಾರದು. ಅದು ಇಲ್ಲದಂತೆಯೇ ತೋರುವುದು. ಇದರಂತೆಯೇ ಆ ಪರಂಜ್ಯೋತಿಯ ಮೇಲೆ ನಾವು ಯಾವುಯಾವುದೋ ಭಾವನೆ ಆಲೋಚನೆಗಳನ್ನು ಆರೋಪಮಾಡಿದರೆ, ಅದು ಕಾಣಲಾರದು.

ಆಧ್ಯಾತ್ಮಿಕ ಸಾಕ್ಷಾತ್ಕಾರವನ್ನು ಪಡೆದ ಜ್ಞಾನಿಯ ಭಾವನೆ ಆಲೋಚನೆಗಳೆಲ್ಲ ಅವನ ಸಾಕ್ಷಾತ್ಕಾರದಿಂದ ಆಚ್ಛಾದಿತವಾಗಿರುವುದು. ಅವನ ಪ್ರತಿಯೊಂದು ಆಲೋಚನೆ, ಭಾವನೆ, ಕ್ರಿಯೆ, ಅಂತರ್ಜ್ಯೋತಿಯಿಂದ ಪ್ರೇರೇಪಿತವಾಗಿರುವುದು. ಅದನ್ನು ಅವನು ಅನುಭವಿಸುತ್ತಿರುವನು. ಯಾವ ಆತಂಕವೂ ಇಲ್ಲದೆ ಅದನ್ನೇ ಅವನು ವ್ಯಕ್ತಪಡಿಸುತ್ತಿರುವನು. ನಿಜವಾದ ಆಧ್ಯಾತ್ಮಿಕ ಉದ್ದೇಶವನ್ನು ತಡೆಗಟ್ಟುವುದಾವುದು ? ಅದೇ ಆತ್ಮಜ್ಞಾನದ ಅಭಾವ. ಅಹಂಕಾರ ಅದನ್ನು ತಡೆಗಟ್ಟಿ ವಿಕಾರವಾಗಿ ಅದು ಕಾಣುವಂತೆ ಮಾಡುವುದು. ಅಭ್ಯಾಸ ಬಲದಿಂದ ನಾವು ಅದನ್ನು ಶುದ್ಧ ಮಾಡಬಹುದು. ಅದನ್ನು ಯಾವ ಒಳ್ಳೆಯ ಕೆಲಸಕ್ಕೆ ಬೇಕಾದರೂ ಯೋಗ್ಯ ಮಾಡಬಹುದು. ಅಹಂಕಾರದಿಂದ ನಾವು ಪಾರಾಗಬೇಕಾದರೆ ಸತತ ಪ್ರಯತ್ನ ಅದಕ್ಕೆ ಆವಶ್ಯಕ.

ಸಮುದ್ರ ತೀರದಲ್ಲಿ ಐದು ವರ್ಷದ ಮಗು ಮನೆಕಟ್ಟುತ್ತಿರುವುದನ್ನು ನೀವು ಯಾವಾಗಲಾದರೂ ನೋಡಿರುವಿರಾ ? ನಾನು ಮಿಚಿಗನ್ ಸರೋವರದ ಬಳಿ ಇದನ್ನು ನೋಡಿದ್ದೇನೆ. ಆ ಮಗು ತನ್ನ ಕೆಲಸದಲ್ಲಿ ತನ್ಮಯವಾಗಿದೆ. ಅದರ ಮನಸ್ಸು ಹೇಗೆ ಇರುತ್ತದೆ ? ಅದು ಸುಮ್ಮನೆ ಕಟ್ಟುತ್ತದೆ. ತನ್ನ ಕೆಲಸವನ್ನು ಇತರರು ಹೇಗೆ ನೋಡುತ್ತಾರೊ, ನಾಳೆ ನನ್ನ ಹೆಸರು ಪತ್ರಿಕೆಯಲ್ಲಿ ಬರುವುದೊ, ತನ್ನ ಕೆಲಸವನ್ನು ನೋಡಿ ಜನ ಮೆಚ್ಚುವರೊ, ಇದಾವುದನ್ನು ಅದು ಕುರಿತು ಚಿಂತಿಸುವುದಿಲ್ಲ. ಸುಮ್ಮನೆ ಅದು ಆಟದಲ್ಲಿ ನಿರತವಾಗಿರುವುದು. ಆ ಸಮಯದಲ್ಲಿ ಅದು ಅನಾಸಕ್ತವಾಗಿ ಕೆಲಸಮಾಡುತ್ತಿದೆ, ಅದೊಂದು ದೊಡ್ಡ ವ್ಯಕ್ತಿಯಾಗಿದೆ. ತನ್ನಲ್ಲಿರುವ ಅಂತರ್ಜ್ಯೋತಿಯನ್ನು ಯಾವುದೂ ತಡೆಯುತ್ತಿಲ್ಲ. ಅಹಂಕಾರ ಸ್ವಲ್ಪವೂ ವಿಕಾರವಾಗದಿರುವುದಕ್ಕೆ ಇದೊಂದು ನಿದರ್ಶನ. ಅದರಲ್ಲಿ ಅದ್ಭುತವಾದ ಶಕ್ತಿ ಇದೆ. ಏಕೆಂದರೆ ಅದು ಯಾವ ಅಹಂಕಾರದಿಂದಲೂ ಬಾಧಿತವಾಗಿಲ್ಲ.

ಜ್ಞಾನದ ಪ್ರಥಮ ಲಕ್ಷಣವೇ ಅಹಂಕಾರ ಶೂನ್ಯತೆ. ಅವನು ಏನುಮಾಡಿದರೂ ಚಿಂತೆಯಿಲ್ಲ. ಅವನು ತನ್ನ ಮೂಲಕ ಜ್ಞಾನವನ್ನು ವ್ಯಕ್ತಪಡಿಸುತ್ತಿರುವನು. ಜ್ಯೋತಿ ವ್ಯಕ್ತವಾಗುವ ಮಧ್ಯವರ್ತಿ ಶುದ್ಧವಾಗಿದೆ. ಏಕೆಂದರೆ ಅಲ್ಲಿ ಸ್ವಲ್ಪವೂ ಅಹಂಕಾರವಿಲ್ಲ. ಅವನು ಏನುಮಾಡಿದರೂ ಇತರರ ಕಲ್ಯಾಣಕ್ಕಾಗಿಯೆ. ಅವನು ಒಳ್ಳೆಯದೇ ಆಗಿಹೋಗಿರುವನು. ಅವನಿಂದ ಬರುವುದೆಲ್ಲವೂ ಒಳ್ಳೆಯದೇ ಆಗಿರುವುದು.

ನೀವು ಗ್ಲಾಸಿನಿಂದ ಆಗಿರುವಿರಿ. ನಿಮ್ಮಲ್ಲಿ ಒಂದು ಬೆಳಕು ಉರಿಯುತ್ತಿದೆ ಎಂದು ಭಾವಿಸಿ. ಆ ಬೆಳಕು ಒಳಗೆ ಆಗುತ್ತಿರುವುದನ್ನೆಲ್ಲ ತೋರುತ್ತಿದೆ. ಆ ಬೆಳಕು ಹೊರಗೂ ಕಾಣುತ್ತಿದೆ. ಅದೊಂದು ನಿನ್ನ ಸುತ್ತಲೂ ಇರುವ ಕಾಂತಿ ಪರಿಧಿಯಂತೆ ಇದೆ. ನೀನು ಹೋದಕಡೆ ಅದು ಬೆಳಗುತ್ತಿದೆ. ಯಾವ ಯಾವ ವಸ್ತುಗಳು ಆ ಕಾಂತಿಯ ಮೇಲೆ ಒಳಗೆ ಬರುವುದೊ ಅದಕ್ಕೆ ಒಂದು ಸೊಬಗು ಬರುವುದು. ಆಧ್ಯಾತ್ಮಿಕ ಜ್ಯೋತಿ ಒಳಗೆ ಮತ್ತು ಹೊರಗೆ ಬೆಳಗುವುದು. ಬೆಳಗುವುದು ಎಂದರೆ ಇದರಂತೆ. ಅದು ತನ್ನಲ್ಲಿರುವುದನ್ನೆಲ್ಲ ತೋರುತ್ತದೆ, ಮತ್ತು ಸುತ್ತಲೂ ಇರುವ ವಸ್ತುವಿನ ಮೇಲೆ ತನ್ನ ಕಾಂತಿಯನ್ನು ಬೀರುತ್ತದೆ.

ಒಬ್ಬ ಮನುಷ್ಯನಿಗೆ ಆತ್ಮಸಾಕ್ಷಾತ್ಕಾರವಾದರೆ ಅವನಿಗೆ ಏನಾಗುತ್ತದೆ ಎಂದು ಹಲವರು ಕೇಳುತ್ತಾರೆ. ಅವನು ಆನಂದ ಪರವಶನಾಗುತ್ತಾನೆ. ಅದಕ್ಕೆ ಏನಾದರೂ ಉದಾಹರಣೆಯನ್ನು ಕೊಡಲು ಸಾಧ್ಯವೆ? ಅದನ್ನು ಅಸ್ಪಷ್ಟವಾಗಿ ಹೇಳಬಹುದು. ನಮಗೆ ಯಾವತ್ತಾದರೂ ಬಂದ ಶ್ರೇಷ್ಠವಾದ ಆನಂದವನ್ನು ಹತ್ತಸಾವಿರದಷ್ಟು ಉದ್ದೀಪನೆಗೊಳಿಸಿ ಅದನ್ನು ಅನಂತ ಕಾಲದವರೆಗೆ ಅನುಭವಿಸಿದರೆ, ಅದು ಆನಂದಪರವಶತೆಗೆ ಸಮೀಪದಲ್ಲಿ ಬರಬಹುದು. ಜ್ಞಾನಯೋಗ ಮೋಕ್ಷವನ್ನು ಒತ್ತಿ ಹೇಳುವುದು.

ಪರವಶತೆಯ ವಿಷಯದಲ್ಲಿ ನಮಗೆ ಏನು ಗೊತ್ತಿದೆ? ನಮ್ಮ ಅಂತರತಮ ಭಾವನೆಯನ್ನು ಉದ್ದೀಪನೆಗೊಳಿಸುವ ಏನೋ ಅನುಭವ ನಮಗೆ ಆಗಿದೆ ಎಂದು ಇಟ್ಟುಕೊಳ್ಳೋಣ. ನಮ್ಮಲ್ಲಿ ಒಂದು ಬದಲಾವಣೆ ಆಗಿದೆ. ನಾವು ಆನಂದಾತಿಶಯದಲ್ಲಿ ಇರುವೆವು. ಇದು ಒಂದು ದೃಷ್ಟಿಯಿಂದ ನಿಜ. ಮತ್ತೊಂದು ದೃಷ್ಟಿಯಿಂದ ಇಲ್ಲ. ನಮ್ಮ ಆನಂದಾತಿಶಯಕ್ಕೆ ಕಾರಣವಾದ ಏನೊ ನಮಗೆ ಆಗಿದೆ ಎಂದು ಗೊತ್ತು. ನಿಮ್ಮ ಪ್ರಿಯ ಸ್ನೇಹಿತನೊಬ್ಬ ಸತ್ತುಹೋದ ಎಂದು ಯಾರೋ ಹೇಳಿದರು ಎಂದು ಇಟ್ಟುಕೊಳ್ಳೋಣ. ಕೆಲವು ಕಾಲದ ಮೇಲೆ ಅವನು ನಿಮ್ಮ ಎದುರಿಗೆ ಬಂದು ನಿಂತುಕೊಳ್ಳುತ್ತಾನೆ. ಆಗ ನಿಮ್ಮ ಮನಸ್ಸಿನಲ್ಲಿ ಏನಾಗುವುದು? ನೀವು ಸ್ತಂಭೀಭೂತರಾಗುವಿರಿ. ನಿಮಗೆ ಅತ್ಯಾನಂದವಾದರೂ, ನೀವು ಪರವಶತೆಯಲ್ಲಿದ್ದರೂ, ಅದನ್ನು ವ್ಯಕ್ತಪಡಿಸಲು ಆಗುವುದಿಲ್ಲ. ನೀವು ಆಗ ಏನುಮಾಡುವುದಕ್ಕೂ ಆಗುವುದಿಲ್ಲ. ನಮ್ಮ ಪರವಶತೆ ತಗ್ಗಿದಾಗ, ನಿಮ್ಮ ಸ್ನೇಹಿತನನ್ನು ಅಪ್ಪಿಕೊಂಡು ನೀವು ಮಾತನಾಡುವಿರಿ. ಮೊದಲು ಅದು ಅಸ್ಪಷ್ಟವಾಗಿರುತ್ತದೆ. ಕಣ್ಣು ಹನಿಗೂಡಿರುತ್ತದೆ.

ಆದರೆ ಪರವಶತೆ ತೀವ್ರವಾದಾಗ ನಾವು ಏನನ್ನು ಹೇಳುವುದಕ್ಕೂ ಆಗುವುದಿಲ್ಲ. ಈ

ಪರವಶತೆ ನಮ್ಮನ್ನು ನಿಶ್ಚೇಷ್ಟಿತರನ್ನಾಗಿ ಮಾಡುವುದು. ಇದು ನಿಮ್ಮ ಹೃದಯವನ್ನೆಲ್ಲ ತುಂಬುವುದು. ಆಧ್ಯಾತ್ಮಿಕ ಪರವಶತೆಯಲ್ಲಿ, ಜೀವಾತ್ಮ ಪರಮಾತ್ಮನೊಡನೆ ಸೇರಿದಾಗ ನಿಮ್ಮ ಕೈಯಲ್ಲಿ ಏನನ್ನೂ ಮಾಡುವುದಕ್ಕೆ ಆಗುವುದಿಲ್ಲ. ಆಗ ಆತ್ಮ ತನ್ನ ನೈಜ ಸ್ಥಿತಿಯಲ್ಲಿ ಯಾವ ಉದ್ವೇಗವೂ ಇಲ್ಲದೆ ನೆಲೆಸಿರುವುದು. ಆಗ ನೀನು ನಿನ್ನ ಸಹಜವಾದ ಸ್ಥಿತಿಯಲ್ಲಿರುವೆ.

ಪರವಶತೆ ಎಂದರೆ, ಅಲ್ಲಿ ಯಾವ ಉದ್ವೇಗವೂ ಇಲ್ಲದ, ಯಾವ ಆತಂಕವೂ ಇಲ್ಲದ ಸ್ಥಿತಿ. ಅದನ್ನು ಎರವಲಾಗಿ ತಂದಿದ್ದಲ್ಲ, ಹೊಸದಾಗಿ ಉತ್ಪತ್ತಿ ಮಾಡಿದ್ದಲ್ಲ. ಅದು ನಿನ್ನ ಸಹಜ ಸ್ವಭಾವವೇ ಆಗಿದೆ. ಮೊದಲಲ್ಲಿ ಅದಕ್ಕೆ ಸ್ವಲ್ಪ ಪ್ರಚೋದನೆ ಆಗಿರಬಹುದು. ಆದರೆ ಅದರಿಂದ ಇದು ಬಂದಿದ್ದಲ್ಲ. ನಿಮ್ಮ ನಿಜವಾದ ಆತ್ಮ ಪ್ರಶಾಂತ ಸ್ಥಿತಿಯಲ್ಲಿದೆ. ಅದಕ್ಕೆ ನೀವು ಆನಂದ ಎನ್ನುವುದು. ಪರವಶತೆಯನ್ನು ಪಡೆಯುವುದು ಎಂದರೆ, ಸ್ವಾಭಾವಿಕವಾದ, ಉದ್ವೇಗಗಳಿಲ್ಲದ ಪ್ರಶಾಂತ ಸ್ಥಿತಿಯನ್ನು ಪಡೆಯುವುದು. ಜ್ಞಾನಯೋಗದ ಪ್ರಕಾರ, ನಿಮ್ಮ ಮನಸ್ಸಿನಿಂದ ಇಡೀ ಪ್ರಪಂಚವನ್ನು ಕಳೆದಮೇಲೆ ಉಳಿವ ಸ್ಥಿತಿಯೇ ಬ್ರಹ್ಮಾನಂದ ಪರವಶತೆ.

ಜ್ಞಾನಯೋಗವನ್ನು ಅಭ್ಯಾಸ ಮಾಡುವ ಸಾಧಕನಿಗೆ, ಆತ್ಮನಿಂದ ಸ್ಥೂಲಬಾಹ್ಯ ಪ್ರಪಂಚವನ್ನು ಬಿಡಿಸುವುದಕ್ಕೆ ಹೇಳಿಕೊಡುವರು. ನೀವು ಇಂದ್ರಿಯಗಳನ್ನು ನಿಗ್ರಹಿಸಿದರೆ ಬಾಹ್ಯಪ್ರಪಂಚ ಸ್ವಲ್ಪಮಟ್ಟಿಗೆ ಹೋಗುವುದು. ಆದರೆ ಅದು ನಿನ್ನ ಮನಸ್ಸಿನಲ್ಲಿದೆ. ಬಾಹ್ಯ ಇಂದ್ರಿಯವನ್ನು ನಿಗ್ರಹಿಸುವುದು ಮೊದಲನೆ ಮೆಟ್ಟಲು. ಅನಂತರ ಮತ್ತೊಂದು ಗೋಡೆ ನಿಮ್ಮೆದುರಿಗೆ ನಿಲ್ಲುವುದು. ಅದೇನೇ ಆಲೋಚನೆ ಮತ್ತು ಹಿಂದಿನ ಸ್ಥಿತಿ. ಈ ಗೋಡೆಯನ್ನು ಕೆಡವಬೇಕಾದರೆ ನಾವು ಬೇರೆ ಉಪಾಯವನ್ನು ಮಾಡಬೇಕು. ಅನಂತರ ಅಹಂಕಾರವೆಂಬ ಮತ್ತೊಂದು ಆತಂಕ ಬರುವುದು. ನಿಮ್ಮ ಪ್ರಜ್ಞೆ ವಿಶಾಲವಾಗಿದ್ದರೂ, ಇಂದ್ರಿಯ ಮತ್ತು ಇತರ ಮಿತಿಗಳಿಂದ ಪಾರಾಗಿದ್ದರೂ ಅದು ಕೊನೆಯ ಸ್ಥಿತಿಗೆ ನಿಮ್ಮನ್ನು ಹೋಗಲು ಬಿಡುವುದಿಲ್ಲ. ಯಾವಾಗ ನಾನು ಎಂಬ ಅಹಂಕಾರ ಮಾಯವಾಗುವುದೊ, ಆಗ ಸತ್ಯಸಾಗರದಲ್ಲಿ ನೀವು ತನ್ಮಯರಾಗುವಿರಿ. ಅದೇ ಆನಂದ ಮತ್ತು ಪರವಶತೆ. ಆಗ ನೀವು ಆನಂದದಿಂದ ತುಂಬಿ ತುಳುಕುತ್ತಿರುವಿರಿ. ಜ್ಞಾನದಿಂದ ಕೂಡಿರುವಿರಿ. ನಿಮ್ಮ ಅಸ್ತಿತ್ವಕ್ಕೆ ಮೇರೆಯೇ ಇಲ್ಲ. ನೀವು ಮುಕ್ತರಾಗುವಿರಿ.

ಯಾರು ಮುಕ್ತರಾಗಿರುವರೊ ಅವರ ವಾಣಿ ನಮ್ಮ ಹೃದಯಕ್ಕೆ ಸತ್ಯವನ್ನು ಒತ್ತಿ ಹೇಳುವುದು. ಅವರ ಮಾತು ಇತರರ ಮಾತಿನಂತಲ್ಲ. ಇತರರ ಮಾತನ್ನು ಸತ್ಯವೆಂದು ತಿಳಿಯಬೇಕಾದರೆ ನಾವು ವಿಚಾರಿಸುತ್ತೇವೆ, ತರ್ಕಿಸುತ್ತೇವೆ. ವಿಚಾರ ಪ್ರಧಾನವಾಗಿರುವುದು ಮತ್ತು ಅನುಭವ ಪ್ರಧಾನವಾಗಿರುವುದು ಈ ಎರಡಕ್ಕೂ ವ್ಯತ್ಯಾಸವನ್ನು ತೋರಬೇಕಾಗಿದೆ. ಗುರು ವಿಚಾರ ಪ್ರಧಾನವಾಗಿ ಹೇಳಿದರೆ, ಅವನು ಶ್ರೋತೃಗಳಲ್ಲಿ ಯುಕ್ತಿಯನ್ನು ಪ್ರಚೋದಿಸುತ್ತಾನೆ, ಅನುಭವ ಪ್ರಧಾನವಾಗಿ ಮಾತನಾಡಿದರೆ ಶ್ರೋತೃಗಳಲ್ಲಿ ಇದು ಸತ್ಯ ಎಂಬ ಅರಿವು ಬರುವಂತೆ ಮಾಡುತ್ತಾನೆ. ಸಂಸ್ಕೃತದಲ್ಲಿ ಇದಕ್ಕೆ ಸಿದ್ಧಾಂತವಾಕ್ಯ ಎನ್ನುತ್ತಾರೆ.

ಇದೇ ಮಾತಿನ ಕೊನೆ. ಆಧ್ಯಾತ್ಮಿಕ ಅನುಭವದಿಂದ ಮಾತ್ರ ಇದನ್ನು ಹೇಳಲು ಸಾಧ್ಯ. ಅದನ್ನು ಅನುಭವಿಸುತ್ತಿರುವವನಿಂದ ಮಾತ್ರ ಅವು ಬರಬಲ್ಲವು. ಶ್ರೀರಾಮಕೃಷ್ಣರು ನೀವು ಬ್ರಹ್ಮ ಎಂದು ಹೇಳುವುದಕ್ಕೂ ನಾವು ಹೇಳುವುದಕ್ಕೂ ಎಷ್ಟು ವ್ಯತ್ಯಾಸ ಇದೆ. ಅವರು ಹೇಳುವುದು ಸಿದ್ಧಾಂತ.

ಸಿದ್ಧಾಂತ ವಾಕ್ಯವನ್ನು ನಾವು ಭಯ ಗೌರವ ಭಕ್ತಿಯಿಂದ ಸ್ವೀಕರಿಸಿದ್ದು ಎಂದು ಭಾವಿಸಬೇಡಿ. ಹಾಗೆ ಅದನ್ನು ನೀವು ಸ್ವೀಕರಿಸಿದ್ದರೆ ಅದು ಆಳಕ್ಕೆ ಇಳಿಯುತ್ತಿರಲಿಲ್ಲ. ತುಂಬಾ ಬುದ್ಧಿವಂತರು ನಿಮ್ಮನ್ನು ವಾದದಲ್ಲಿ ಸೋಲಿಸಬಹುದು. ಆದರೆ ನೀವು ಮನೆಗೆ ಹೋದಮೇಲೆ ನಿಮ್ಮ ಮನಸ್ಸಿನಲ್ಲಿ ದೊಡ್ಡ ಆಂದೋಳನವನ್ನು ಎಬ್ಬಿಸಿರುವಂತೆ ಕಾಣುವುದು. ನೀವು ಒಬ್ಬ ವಿದ್ವಾಂಸರ ಬಳಿಗೆ ಹೋಗಿ ಅವರು ಹೇಳುವುದನ್ನು ಕೇಳುತ್ತೀರಿ ಎಂದು ಭಾವಿಸೋಣ. ಅವರು ಹೇಳುವುದು ನಿಜ ಎಂದು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಅದನ್ನೇ ಅನಂತರ ಆಲೋಚಿಸುತ್ತಿದ್ದರೆ, ಅವರ ವಾದದಲ್ಲಿ ನಮಗೆ ಸಂಶಯ ಬರುವುದು. ಅವರು ಹೇಳಿದ್ದು ಸಿದ್ಧಾಂತವಲ್ಲ. ಸಿದ್ಧಾಂತವಾಕ್ಯವನ್ನು ಕೇಳಿದರೆ ಅಲ್ಲಿ ಸಂಶಯಕ್ಕೆ ಆಸ್ಪದವೇ ಇರುವುದಿಲ್ಲ. ನಾವು ಅದನ್ನು ತಕ್ಷಣವೇ ಸಾಕ್ಷಾತ್ಕಾರ ಮಾಡುವ ಸ್ಥಿತಿಯಲ್ಲಿ ಇಲ್ಲದೇ ಇರಬಹುದು, ಆದರೆ ಆ ವಿಷಯದಲ್ಲಿ ಸ್ವಲ್ಪವೂ ಅನುಮಾನವಿರುವುದಿಲ್ಲ. ಇದನ್ನು ಅನುಭವಿಸುತ್ತಿರುವ ವ್ಯಕ್ತಿಯಿಂದ ಬಂದರೆ ಮಾತ್ರ ಇದು ಸಾಧ್ಯ. ನಾನು ಇದನ್ನು ನನ್ನ ಸ್ವಾನುಭವದಿಂದ ಹೇಳುತ್ತಿದ್ದೇನೆ. ಏಕೆಂದರೆ ನಾನು ಅಂತಹ ವ್ಯಕ್ತಿಗಳನ್ನು ನೋಡಿದ್ದೇನೆ.

ನಮಗೆಲ್ಲ ಈ ಅನುಭವ ಇಲ್ಲದೇ ಇರುವುದರಿಂದ, ವಿಚಾರ ಮತ್ತು ತರ್ಕದಿಂದ ಇದನ್ನು ಪ್ರಚೋದಿಸಬೇಕಾಗಿದೆ. ಇಂತಹ ಸಿದ್ಧಾಂತ ವಾಕ್ಯಗಳನ್ನು ಸಾಹಿತ್ಯದ ಮೂಲಕವಾಗಿಯಾದರೂ ಕೇಳುವ ಅವಕಾಶವಿರುವವನು ಧನ್ಯಾತ್ಮ. ಇಂತಹ ವಾಣಿ ಸಂಶಯದಿಂದ ನಮ್ಮನ್ನು ಪಾರುಮಾಡಿ, ನಮ್ಮನ್ನು ಬೇರೊಂದು ಪ್ರಪಂಚಕ್ಕೆ ಒಯ್ಯುವುದು. ಆದಕಾರಣವೇ ಸಿದ್ಧಾಂತ ವಾಕ್ಯಗಳುಳ್ಳ ಪುಸ್ತಕಗಳನ್ನು ಓದುವುದು ಆಧ್ಯಾತ್ಮಿಕ ಜೀವನದಲ್ಲಿ ಅಷ್ಟು ಮುಖ್ಯವಾಗಿದೆ.

ಶಾಸ್ತ್ರ ಪ್ರಕಾರ ಜ್ಞಾನ ನಮಗೆ ಪ್ರಾಪ್ತವಾದರೆ ನಮ್ಮ ಮೇಲೆ ಮೂರು ಬದಲಾವಣೆಯನ್ನುಂಟುಮಾಡುವುದು. ಮೊದಲನೆಯದೆ ನಮ್ಮ ಹೃದಯಗ್ರಂಥಿಗಳೆಲ್ಲ ಛಿದ್ರವಾಗುವುವು. ಗ್ರಂಥಿ ಎಂಬುದು ಯೋಗ್ಯವಾದ ಪದ. ನೀವು ಎಂದಾದರೂ ಒಂದು ಕಟ್ಟಿದ ಗಂಟನ್ನು ಬಿಚ್ಚಲು ಪ್ರಯತ್ನಿಸಿದ್ದೀರೇನು ? ಆಗ ನಿಮಗೆ ಅದು ಎಷ್ಟು ಬಿಗಿಯಾಗಿರುವುದು, ಅದನ್ನು ಬಿಚ್ಚುವುದು ಎಷ್ಟು ಕಷ್ಟ ಎಂಬುದು ಗೊತ್ತಾಗುವುದು. ನಮ್ಮ ಮನಸ್ಸಿನಲ್ಲಿ ಬೇಕಾದಷ್ಟು ಗಂಟುಗಳಿವೆ, ಅವೆಲ್ಲ ನಮ್ಮ ಅಹಂಕಾರದಲ್ಲಿ ಮನೆ ಮಾಡಿಕೊಂಡಿವೆ. ನಾನು ಎಂಬ ಅಹಂಕಾರದಲ್ಲಿ ಅವೆಲ್ಲ ಇವೆ. ಇದರಲ್ಲಿ ಮುಖ್ಯವಾಗಿರುವ ಗಂಟೇ ಮಿಥ್ಯವನ್ನು ಸತ್ಯವೆಂದು ಭಾವಿಸಿರುವುದು. ಆ ಒಂದು ಗಂಟನ್ನು ನಾವು ಬಿಚ್ಚಿದರೆ ಉಳಿದವೆಲ್ಲಾ ತಮ್ಮ ಪಾಡಿಗೆ ತಾವೇ ಬಿಚ್ಚಿಹೋಗುವುವು. ಸಂಸ್ಕೃತದಲ್ಲಿ ಗ್ರಂಥಿ ಎಂದರೆ ಗಂಟು ಎಂದು.

ಚಿತ್ತಸ್ತಗ್ರಂಥಿ ಎಂದರೆ ಚಿತ್ತದ ಗಂಟು ಎಂದು. ಸತ್ಯವನ್ನು ಮರೆತು ತೋರಿಕೆಯನ್ನೇ ಸತ್ಯವೆಂದು ಭ್ರಮಿಸುವುದೇ ಎಲ್ಲಾ ಅಜ್ಞಾನಕ್ಕೂ ಮೂಲ. ನಾವು ಮೂಲಗಂಟನ್ನು ಬಿಚ್ಚಿದರೆ ಉಳಿದವನ್ನು ಸುಲಭವಾಗಿ ಬಿಚ್ಚಬಹುದು. ನಾವು ಆ ಗಂಟನ್ನು ಹೇಗೆ ಬಿಚ್ಚುವುದು ? ಗಂಟಿನಿಂದ ಗೋಜಾದ ಹಗ್ಗ ನಿಮಗೆ ಸಿಕ್ಕಿದರೆ ನೀವು ಏನು ಮಾಡುತ್ತೀರಿ ? ಗೋಜಿನ ಕೊನೆಯ ದಾರಕ್ಕೆ ಬೆಂಕಿ ಹಚ್ಚಿದರೆ ಗೋಜೆಲ್ಲ ಸುಟ್ಟು ಬೂದಿಯಾಗುವುದು. ಸ್ವಲ್ಪ ಬೂದಿ ಆಮೇಲೆ ಉಳಿದರೂ ನಾವು ಅದನ್ನು ಊದಿದರೆ ಸಾಕು ಅದೆಲ್ಲ ಚೆದರಿ ಹೋಗುವುದು. ವಿವೇಕವೆಂಬ ಬೆಂಕಿಯನ್ನು ನಾವು ಹಾಕಬೇಕಾಗಿದೆ. ಇದೇ ಅದರ ರಹಸ್ಯ. ವಿವೇಕವಿಲ್ಲದೆ ಗಂಟನ್ನು ಬಿಡಿಸಲಾರೆವು.

ಎರಡನೆಯದೆ, ಸಂಶಯಗಳೆಲ್ಲ ಕೊನೆಗಾಣುವುವು. ಸತ್ಯ ನಮಗೆ ಗೊತ್ತಿಲ್ಲದಾಗ ಮಧ್ಯಕಾಣಿಸುವುದು. ನಾವೊಂದು ಸಲ ಸತ್ಯವನ್ನು ಕಂಡಮೇಲೆ ಇನ್ನು ತೋರಿಕೆ ಇರುವುದಿಲ್ಲ. ಜ್ಞಾನ ನಿರಾತಂಕವಾಗಿ ಹರಿಯುವುದು.

ಅನಂತರ ಮೂರನೆಯದೆ ಕರ್ಮಗಳೆಲ್ಲ ನಾಶವಾಗುವುವು. ನೀವು ನಿಮ್ಮನ್ನು ಕಟ್ಟಿ ಹಾಕುವ ಹೊಸ ಬಂಧನಗಳನ್ನು ಉತ್ಪತ್ತಿ ಮಾಡಿಕೊಳ್ಳುವುದಿಲ್ಲ. ನಾವೆಲ್ಲ ನಮ್ಮ ಕರ್ಮಾನುಸಾರ ಕೆಲಸಮಾಡುತ್ತೇವೆ. ಈ ಕರ್ಮ ನಮ್ಮ ಬಹುಭಾಗದ ಕೆಲಸವನ್ನು ನಡೆಸುವುದು. ನೀವು ಪರಮ ಸತ್ಯವನ್ನು ಸಾಕ್ಷಾತ್ಕಾರ ಮಾಡಿಕೊಂಡರೆ ಅಜ್ಞಾನದ ಸರಪಳಿ ಕಿತ್ತುಹೋಗುವುದು. ಏಕೆಂದರೆ ಇನ್ನುಮೇಲೆ ನೀವು ಅಹಂಕಾರದಿಂದ ಪ್ರೇರಿತರಾಗಿ ಯಾವ ಕೆಲಸವನ್ನೂ ಮಾಡುವುದಿಲ್ಲ. ಮುಕ್ತನಾಗಿ ಕೆಲಸಮಾಡಿದರೆ ಕರ್ಮ ನಿಮ್ಮನ್ನು ಬಂಧಿಸುವುದಿಲ್ಲ. ಮುಂದೆ ಯಾವ ಕರ್ಮಕ್ಕೂ ಹೇತುವಾಗುವುದಿಲ್ಲ. ನೀವು ಮುಕ್ತರು ಎಂದು ತಿಳಿದರೆ, ಕರ್ಮ ಅಕರ್ಮಗಳಿಗೆ ನೀವು ಅತೀತರಾಗುವಿರಿ. ಮುಕ್ತಾತ್ಮನು ತನ್ನ ಇಚ್ಛೆಬಂದರೆ ಮಾಡುತ್ತಾನೆ ಅಥವಾ ಬಿಡುತ್ತಾನೆ. ಹೀಗೆ ಇದ್ದರೆ ಮಾತ್ರ ಮುಕ್ತನಾಗುತ್ತಾನೆ.

ಇಂತಹ ಆತ್ಮ ಸಾಕ್ಷಾತ್ಕಾರವಾಗಿರುವ ಮನುಷ್ಯ, ಅವನೇ ಎಲ್ಲದರಲ್ಲಿರುವ ಬ್ರಹ್ಮ ಎಂಬುದನ್ನು ಅರಿತಿರುವನು. ಅವನಿಗೆ ಚಿತ್ ಸಾಕ್ಷಾತ್ಕಾರವಾಗಿದೆ. ಇದರಿಂದಲೇ ಜ್ಞಾನ ಆಗಿರುವುದು. ಇದೇ ದೃಗ್ ದೃಶ್ಯದ ಹಿಂದೆ ಇರುವುದು. ಅವನ ಅಹಂಕಾರ ಮಾಯವಾಗಿದೆ. ಅವನು ಬ್ರಹ್ಮನಲ್ಲಿ ನೆಲೆಸಿರುವನು. ಅವನು ಮುಕ್ತ, ಆನಂದದಿಂದ ಕೂಡಿರುವವನು, ಪೂರ್ಣಾತ್ಮ. ಈ ಪೂರ್ಣತೆಯಲ್ಲಿ ಯಾವ ಉದ್ವೇಗವೂ ಇರುವುದಿಲ್ಲ.

ಪರಿಪೂರ್ಣಾವಸ್ಥೆಯನ್ನೆ ಮುಕ್ತಿ ಎನ್ನುವುದು. ಮುಕ್ತರಾಗಬೇಕೆಂದು ನೀವು ಇಚ್ಛಿಸಿದರೆ ಏನು ಮಾಡುತ್ತೀರಿ ? ಮೊದಲನೆಯದಾಗಿ, ನಾನು ಎಲ್ಲವನ್ನು ನಿಗ್ರಹಿಸುತ್ತೇನೆ. ಆಗ ಯಾವುದೂ ನನಗೆ ವಿರೋಧವಾಗಿ ನಿಲ್ಲಲಾರದು. ಆದರೆ ಆಗ ನಾನು ಯಜಮಾನ ಆಳನ್ನು ಆಳುವಂತೆ ಅದು ಎಂದು ಹೇಳುತ್ತೇನೆ. ಅದು ಮುಕ್ತಿಯ ಸ್ಥಿತಿ ಅಲ್ಲ. ಮನುಷ್ಯನ ಪ್ರಯೋಜನಕ್ಕಾಗಿ ವಿಜ್ಞಾನ ಪ್ರಪಂಚವನ್ನು ನಿಗ್ರಹಿಸುವುದಕ್ಕೆ ಪ್ರಯತ್ನಿಸುತ್ತಿದೆ. ಆದರೆ ಇದರಿಂದ ವಿಜ್ಞಾನ ನಮ್ಮನ್ನು ಮುಕ್ತರನ್ನಾಗಿ ಮಾಡುತ್ತಿದೆಯೇ ? ಅಥವಾ ಆ

ಶಕ್ತಿಗಳೇ ನಮ್ಮನ್ನು ಆಳುತ್ತಾ ನಮ್ಮನ್ನು ಹೆಚ್ಚು ದುಸ್ಥಿತಿಗೆ ತರುತ್ತಿವೆಯೇ ?

ನಾಗರಿಕತೆ ಎಂದರೆ ಯಾವಾಗಲೂ ನಮ್ಮ ಆಳ್ವಿಕೆಗೆ ತರುವುದಾಗಿದೆ. ಹೊರಗಿನದು ಹೆಚ್ಚು ಹೆಚ್ಚು ನಮ್ಮ ಅಧೀನವಾಗಬೇಕು, ಶಕ್ತಿ ನಮ್ಮ ಅಧೀನವಾಗಬೇಕು, ವಸ್ತುಗಳನ್ನು ಪಡೆಯುವ ವಿಧಾನ ನಮ್ಮ ವಶವಾಗಬೇಕು. ಒಬ್ಬರು ಇನ್ನೊಬ್ಬರನ್ನು ಆಳಬೇಕು. ಮನುಷ್ಯ ತನ್ನ ಕೆಳಗೆ ಎಷ್ಟು ವಸ್ತುಗಳನ್ನು ತರುವನೋ, ಅಷ್ಟು ಸ್ವತಂತ್ರನಾದೆ ಎಂದು ಭ್ರಮಿಸುವನು. ಬಾಹ್ಯ ಪ್ರಕೃತಿಯ ನಿಗ್ರಹದಿಂದ ವಿಜ್ಞಾನವಾಗಿದೆ. ಆದರೆ ಆಧ್ಯಾತ್ಮಿಕ ವಿದ್ಯೆಯಾದರೊ ಮುಕ್ತಿಯನ್ನು ತನ್ನ ಗುರಿಯನ್ನಾಗಿ ಮಾಡಿಕೊಂಡಿದೆ. ಬಾಹ್ಯ ಪ್ರಕೃತಿಯನ್ನೆಲ್ಲಾ ನಮ್ಮ ವಶಕ್ಕೆ ತಂದರೂ, ನಾವು ನಮ್ಮ ಆಂತರಿಕ ಪ್ರಕೃತಿಗೆ ದಾಸರು. ಎರಡರಿಂದಲೂ ಮುಕ್ತನಾಗುವುದೇ ಮಾನವನ ಗುರಿ.

ಮಾನವನ ಶ್ರೇಷ್ಠ ಆದರ್ಶವಾದ ನಿರ್ವಿಕಲ್ಪ ಸಮಾಧಿಯನ್ನು ಭಾಷೆಯ ಮೂಲಕ ವ್ಯಕ್ತಪಡಿಸಲು ಆಗುವುದಿಲ್ಲ. ಇದನ್ನು ಯಾವ ಜ್ಞಾನಿಯೂ ವಿವರಿಸಿಲ್ಲ. ಶ್ರೀರಾಮ ಕೃಷ್ಣರು ಬ್ರಹ್ಮನೊಬ್ಬನೇ ಜಗತ್ತಿನಲ್ಲಿ ಎಂಜಲಾಗದೆ ಇರುವವನು ಎಂದು ಹೇಳುತ್ತಿದ್ದರು. ಎಲ್ಲದರ ವಿಷಯವನ್ನು, ಇದು ಏನು ಎಂದು ಹೇಳಿದ್ದಾರೆ. ಆದರೆ ಬ್ರಹ್ಮನೇನು ಎಂದು ಹೇಳಿಲ್ಲ. ಒಂದು ವಸ್ತುವನ್ನು ವಿವರಿಸಬೇಕಾದರೆ, ಗುಣ, ಗಾತ್ರ, ಎತ್ತರ ಮುಂತಾದು ವೆಲ್ಲ ಬೇಕಾಗಿವೆ. ಆದರೆ ಸಮಾಧಿಯಲ್ಲಿ ದೃಗ್ ದೃಶ್ಯ ಎರಡು ಒಂದಾಗಿದೆ. ಅದು ಎಲ್ಲಾ ಸಾಪೇಕ್ಷಜ್ಞಾನವನ್ನೂ ಅತಿಕ್ರಮಿಸಿದೆ. ಅಲ್ಲಿ ನಾನೂ ಇಲ್ಲ, ನೀನೂ ಇಲ್ಲ, ನೋಟವೂ ಇಲ್ಲ, ಅಲ್ಲಿ ಎಲ್ಲವೂ ಒಂದೇ, ಅದನ್ನು ಬಣ್ಣಿಸುವುದಕ್ಕೆ ಆಗುವುದಿಲ್ಲ. ಶ್ರೀರಾಮ ಕೃಷ್ಣರು ತಾವು ಅದನ್ನು ಅನುಭವಿಸುತ್ತಿರುವಾಗ ಅದನ್ನು ವಿವರಿಸಲು ಎಷ್ಟು ಪ್ರಯತ್ನ ಪಟ್ಟರೂ, ಪದಗಳೇ ಬರಲಿಲ್ಲ. ಅವರೆಲ್ಲೋ ಸ್ವಲ್ಪ ದೂರ ಹೋಗುವುದರೊಳಗಾಗಿ, ಸಾಪೇಕ್ಷ ಜ್ಞಾನ, ನಿರಪೇಕ್ಷಜ್ಞಾನದಲ್ಲಿ ಲಯವಾಯಿತು. ಮಾತು ನಿಂತು ಹೋಯಿತು. ಆಗ ಅದನ್ನು ವಿವರಿಸುವುದಕ್ಕೆ ವ್ಯಕ್ತಿಯೇ ಉಳಿಯುವುದಿಲ್ಲ. ಅಥವಾ ಯಾರಿಗೆ ಹೇಳ ಬೇಕೊ ಅವನೂ ಅವರ ಪಾಲಿಗೆ ಇಲ್ಲ. ಆ ಐಕ್ಯತೆಯಲ್ಲಿ ಚಿತ್ತವೃತ್ತಿಯೇ ಇರುವುದಿಲ್ಲ. ಆದಕಾರಣ ಐಕ್ಯತೆಯನ್ನು ವಿವರಿಸುವುದಕ್ಕೆ ಆಗುವುದಿಲ್ಲ.

ಶ್ರೇಷ್ಠ ಆದರ್ಶಕ್ಕೆ ಹೋರಾಡುವವರಲ್ಲಿ ಈಶ್ವರ ಕೋಟಿಗಳು ಮಾತ್ರ, ಅದನ್ನು ಅನುಭವಿಸಿ ಪುನಃ ನಮ್ಮ ಪ್ರಪಂಚಕ್ಕೆ ಬರಬಲ್ಲರು. ಜೀವಕೋಟಿಗಳು ಆ ಅವಸ್ಥೆಗೆ ಹೋದರೆ ಅವರು ಹಿಂತಿರುಗಿ ಬರುವುದಿಲ್ಲ. ಒಂದು ಹನಿ ಸಾಗರಕ್ಕೆ ಒಮ್ಮೆ ಬಿದ್ದರೆ, ಅದು ಹೊರಗೆ ಪುನಃ ಹನಿಯಾಗುವುದಕ್ಕೆ ಬರುವುದಿಲ್ಲ. ಅದು ಸಾಗರದಲ್ಲಿ ಐಕ್ಯವಾಗಿ ಬಿಡುವುದು. ಇಂತಹ ಒಂದು ಸ್ಥಿತಿಗೆ ಬಂದರೆ ಮರದಿಂದುದುರುವ ಒಣಗಿದ ಎಲೆಯಂತೆ ಜೀವಕೋಟಿಯಾಗುವನು. ಹಾಗಾದರೆ ನಾವು ಅವನು ಸತ್ತು ಹೋಗುತ್ತಾನೆ ಎನ್ನ ಬಹುದೆ ? ಇಲ್ಲ, ಅವನು ಸಾಯುವುದಿಲ್ಲ. ಅವನ ಆತ್ಮ ದೇಹ ಭಾವದಿಂದ ಪಾರಾಗಿ ಅದರ ಮೂಲಕ್ಕೆ ಹೋಗುವುದು. ಅವನು ಹಾಕಿಕೊಂಡ ಆರೋಪವೆಲ್ಲವೂ ಹೋಗು ವುದು. ಬ್ರಹ್ಮನಾಗಿ ಅವನು ಉಳಿಯುವನು.

ಒಬ್ಬನಿಗೆ ನಿರ್ವಿಕಲ್ಪ ಸಮಾಧಿ ಬಂದರೆ ಏನಾಗುವುದು ಎಂಬುದನ್ನು ಶ್ರೀರಾಮ ಕೃಷ್ಣರು ಸುಂದರವಾಗಿ ವಿವರಿಸುವರು. ಒಂದು ಸಣ್ಣ ಉಪ್ಪಿನ ಗೊಂಬೆಗೆ ಸಾಗರದ ಆಳ ವನ್ನು ಕಂಡು ಹಿಡಿಯಬೇಕೆಂದು ಆಸೆ ಆಯಿತು. ಅದು ಸಮುದ್ರ ತೀರಕ್ಕೆ ಹೋಗಿ ಅದರಲ್ಲಿ ಇಳಿಯಿತು. ಅದು ನೀರಿಗೆ ತಾಕಿದ ತಕ್ಷಣ ಏನಾಯಿತು ? ಅದು ಕರಗಿ ಹೋಯಿತು. ಸಾಗರದಲ್ಲಿ ಒಂದಾಯಿತು. ಸಾಗರವನ್ನು ಅಳೆಯುವುದಕ್ಕಾಗಲಿ, ಹಿಂತಿ ರುಗಿ ಬಂದು ಹೇಳುವುದಕ್ಕಾಗಲಿ ಯಾರೂ ಉಳಿಯಲಿಲ್ಲ. ಶ್ರೇಷ್ಠ ಸಮಾಧಿಗೆ ಜೀವ ಕೋಟಿ ಹೋದರೆ ಏನಾಗುವುದು ಎಂಬುದನ್ನು ಇದು ವಿವರಿಸುವುದು. ಆದರೆ ಈಶ್ವರ ಕೋಟಿಗಳಾದರೊ, ಸಮುದ್ರದಲ್ಲಿ ಕರಗಿ ಒಂದಾದರೂ ಪುನಃ ಹಿಂತಿರುಗಿ ಬಂದು ಒಂದು ವ್ಯಕ್ತಿಯ ರೂಪವನ್ನು ಧರಿಸಬಹುದು.

ಹಿಂದೂ ಶಾಸ್ತ್ರದಲ್ಲಿ ಜೀವನ್ಮುಕ್ತರು, ನಿರ್ವಿಕಲ್ಪ ಸಮಾಧಿಯಲ್ಲಿ, ಐಕ್ಯರಾಗುವು ದಕ್ಕೆ ಮುಂಚೆ ಹೇಗಿರುತ್ತಾರೆ ಎಂಬ ವಿಷಯದಲ್ಲಿ ಎರಡು ಅಭಿಪ್ರಾಯಗಳಿವೆ. ಶ್ರೀರಾಮ ಕೃಷ್ಣರು ಇದನ್ನು ಜೀವನ್ಮುಕ್ತಾವಸ್ಥೆ ಎಂದು ಹೇಳುತ್ತಿದ್ದರು. ಅವನು ದೇಹದಲ್ಲಿರು ವಾಗಲೇ ಮುಕ್ತ, ಆದರೆ ತೋರಿಕೆಗೆ ಬದ್ಧನಂತೆ ವ್ಯವಹರಿಸುತ್ತಿರುವನು. ಅವರು ಸ್ಪರ್ಶ ಶಿಲೆಗೆ ತಾಕಿದ ಕತ್ತಿ ಹೇಗೆ ಚಿನ್ನವಾಗುವುದು ಎಂದು ಹೇಳುತ್ತಿದ್ದರು. ಅದು ನೋಡುವು ದಕ್ಕೆ ಕತ್ತಿಯ ಆಕಾರದಲ್ಲಿದ್ದರೂ, ಇನ್ನು ಮೇಲೆ ಕತ್ತಿ ಮಾಡುವ ಕೆಲಸವನ್ನು ಮಾಡುವು ದಿಲ್ಲ. ಜೀವನ್ಮುಕ್ತ ಸಮಾಧಿಯ ಸ್ಥಿತಿಯ ಸ್ಪರ್ಶ ಶಿಲೆಯನ್ನು ಮುಟ್ಟಿದ್ದಾನೆ. ಅವನ ತಿರುಳೆಲ್ಲ ಸಂಪೂರ್ಣವಾಗಿ ಬದಲಾಯಿಸಿದೆ. ಆದರೂ ಅವನ ಬಾಹ್ಯ ಆಕಾರ ಎಂದಿ ನಂತೆಯೇ ಉಳಿದಿರುವುದು. ಆದರೆ ಅವನಲ್ಲಿ ಯಾವ ಬಂಧನವೂ ಅಜ್ಞಾನವೂ ಇಲ್ಲ. ಅವನಲ್ಲಿ ಕ್ಷುದ್ರ ಅಹಂಕಾರ ಇಲ್ಲ. ಅವನು ಯಾವಾಗಲೂ ಬ್ರಹ್ಮದೊಂದಿಗೆ ತಾದಾತ್ಮ್ಯ ಭಾವವನ್ನು ಪಡೆದುಕೊಂಡಿರುವನು. ಅವನಿಗೂ ಹಸಿವು ಬಾಯಾರಿಕೆ ಆಗಬಹುದು. ಅವನಿಗೂ ನಿದ್ರೆ, ವಿಶ್ರಾಂತಿ ಬೇಕಾಗಬಹುದು. ಆದರೆ ಇದರಿಂದ ಅವನು ದೇಹ ಭಾವಕ್ಕೆ ಸಿಲುಕಿರುವನು ಎಂದು ಊಹಿಸಬಾರದು. ಅವನು ದೇಹ, ಮನಸ್ಸು, ಮತ್ತು ಭಾವನೆ ಗಳನ್ನು ಯಂತ್ರದಂತೆ ಉಪಯೋಗಿಸುವನು. ಅವನು ತಾನು ಬೇರೆ ಎಂದು ಯಾವಾ ಗಲೂ ತಿಳಿದುಕೊಂಡಿರುವನು. ಅವನು ಲೋಕಕಲ್ಯಾಣಕ್ಕೆ ಮಾತ್ರ ಕೆಲಸ ಮಾಡು ವನು. ಅವನಲ್ಲಿ ಲವಲೇಶವೂ ಸ್ವಾರ್ಥವಿಲ್ಲ. ಅವನ ಕೆಲಸ ಯಾವಾಗಲೂ ಇತರರ ಕ್ಷೇಮಕ್ಕೆ.

ಮತ್ತೊಂದು ಅಭಿಪ್ರಾಯದವರು, ಜೀವನ್ಮುಕ್ತನಲ್ಲಿ ನಿರ್ವಿಕಲ್ಪ ಸಮಾಧಿಯಲ್ಲಿ ಅವನು ದೇಹ, ಮನಸ್ಸು ಮುಂತಾದ ಮಿತಿಗಳನ್ನು ದಾಟುವವರೆಗೆ ಕಿಂಚಿತ್ ಅಜ್ಞಾನ ವಿರುವುದು ಎಂದು ಹೇಳುತ್ತಾರೆ. ಈಗ ಇವುಗಳಿಂದ ನಮ್ಮ ತಲೆಯನ್ನು ಕೆಡಿಸಿಕೊಳ್ಳ ಬೇಕಾಗಿಲ್ಲ. ಈ ಜನ್ಮದಲ್ಲಿ ನಮಗೆ ನಿರ್ವಿಕಲ್ಪ ಸಮಾಧಿಯು ಒಂದು ಚೂರುಕೂಡ ಸಿಕ್ಕದೆ ಇರಬಹುದು. ಆದರೆ ಅದನ್ನು ಪಡೆಯುವುದಕ್ಕೆ ನಾವು ಸಾಧನೆ ಮಾಡುತ್ತಿರು ವಾಗ ಆ ಪೂರ್ಣತೆಯ ಕೆಲವು ಚಿಹ್ನೆಗಳನ್ನಾದರೂ ನಾವು ವ್ಯಕ್ತಪಡಿಸಲು ಯತ್ನಿಸೋಣ. ಕಾಲಾನುಕಾಲದಲ್ಲಿ ನಾವೆಲ್ಲ ಗುರಿಯನ್ನು ಮುಟ್ಟುತ್ತೇವೆ.

ಜೀವನ್ಮುಕ್ತರು ಸಾಕ್ಷಾತ್ಕಾರವನ್ನು ಪಡೆದ ಮೇಲೆ ಇತರರಿಗೆ ಬೋಧಿಸುವುದಕ್ಕಾಗಿ ಈ ಪ್ರಪಂಚದಲ್ಲಿರುವರು. ಯಾರು ಪ್ರಪಂಚದಲ್ಲಿರುವರೊ, ಯಾರು ಪ್ರಪಂಚವನ್ನು ಮೀರಿ ಹೋಗುವರೊ ಅದನ್ನು ವಿವರಿಸುವುದಕ್ಕೆ ಒಂದು ಕಥೆ ಇದೆ. ಇಬ್ಬರು ಒಂದು ಕಾಡಿನಲ್ಲಿ ಸಂಚರಿಸುತ್ತಿದ್ದರು. ಅವರೆದುರಿಗೆ ಒಂದು ಗೋಡೆ ಸಿಕ್ಕಿತು. ಅದರೊಳಗೆ ಒಂದು ತೋಟ ಇರುವಂತೆ ತೋರಿತು. ತಾಳ ಮೇಳಗಳು ಅಲ್ಲಿ ಆಗುತ್ತಿರುವಂತೆ ತೋರಿತು. ಇಬ್ಬರು ಪ್ರಯಾಣಿಕರು ಅದರಿಂದ ಆಕರ್ಷಿತರಾದರು. ಅವರಲ್ಲಿ ಒಬ್ಬ ಒಂದು ಏಣಿಯನ್ನು ಮಾಡಿ ಗೋಡೆಯ ಮೇಲಕ್ಕೆ ಹತ್ತಿದ. ಗೋಡೆಯ ಹಿಂದೆ ಇದ್ದುದನ್ನು ನೋಡಿ ಆನಂದ ದಿಂದ ಕಿರುಚಿಕೊಂಡನು. ಮಾತನಾಡದೆ ಕೈಗಳನ್ನು ಮೇಲಕ್ಕೆ ಎತ್ತಿಕೊಂಡು ಆನಂದ ದಿಂದ ಪರವಶನಾಗಿ ಅವನು ಒಳಗೆ ಧುಮುಕಿದನು. ಎರಡನೆಯವನೂ ಗೋಡೆಯನ್ನು ಹತ್ತಿ ನೋಡಿದ. ಅವನಿಗೂ ಅದೇ ದೃಶ್ಯವೇ ಕಂಡಿತು. ಆದರೆ ತನ್ನನ್ನು ನಿಗ್ರಹಿಸಿಕೊಂಡು, ಏಣಿಯಿಂದ ಕೆಳಗೆ ಇಳಿದು ಬಂದು ಹತ್ತಿರದಲ್ಲಿದ್ದವರಿಗೆ ಅದನ್ನು ಹೇಳಿ, ಏಣಿಯ ಮೇಲೆ ಅವರನ್ನು ಏರಿಸಿ, ಒಳಗಿರುವುದನ್ನು ಅವರಿಗೂ ತೋರಿಸಿದನು.

ಎರಡನೆಯ ವರ್ಗದವರೆ ಗುರುಗಳು. ಆದರೆ ಇತರರ ಮೇಲೆ ಅವನಿಗೆ ಅನುಕಂಪ ವಿದೆ ಎಂದು ಮೊದಲನೆಯವನಿಗಿಂತ ಇವನು ಮೇಲು ಎಂದು ಹೇಳುವುದಕ್ಕೆ ಆಗುವುದಿಲ್ಲ. ದೇಹ ಮತ್ತು ಮನಸ್ಸಿಗಿಂತ ಅವನು ಸಂಪೂರ್ಣ ಬೇರೆ ಆಗಿ ಮುಕ್ತನಾಗಿರುವುದರಿಂದ, ಮುಕ್ತರಾಗುವುದಕ್ಕೆ ಪ್ರಯತ್ನಿಸುತ್ತಿರುವವರ ಮೇಲೆ ಅವನು ತನ್ನ ಪ್ರಭಾವವನ್ನು ಬೀರು ವನು. ಎರಡು ವರ್ಗದವರೂ ಶ್ರೇಷ್ಠರೆ, ಆದರೆ ಅವರು ಬೇರೆ ಬೇರೆ ಗುಂಪಿಗೆ ಸೇರಿದವರು.

ಕೆಲವರು ಸಮಾಧಿಯಲ್ಲಿ ಐಕ್ಯರಾಗಿ, ಇತರರಿಗೆ ಬೋಧಿಸದೆ ಇದ್ದರೆ, ಅವರಿಂದ ಏನು ಪ್ರಯೋಜನ, ಅವರು ಸ್ವಾರ್ಥಿಗಳಲ್ಲವೆ ಎಂದು ಕೇಳಬಹುದು. ನಾವು ಅಥವಾ ನೀವು ಅವರ ಯೋಗ್ಯತೆಯನ್ನು ಅಳೆಯುವುದಕ್ಕೆ ಸಮರ್ಥರೆ ಎಂದು ಕೇಳುತ್ತೇನೆ. ಬೂಟ್ಸನ್ನು ಹೊಲಿಯುವವನು ಎಲ್ಲವನ್ನು ತನ್ನ ದೃಷ್ಟಿಯಿಂದ ನೋಡುವನು. ಒಂದು ಸಲ ಒಬ್ಬ ಆಲೂಗೆಡ್ಡೆ ವ್ಯಾಪಾರಿಗೆ ನೀನೊಂದು ವಜ್ರವನ್ನು ಕೊಂಡುಕೊಳ್ಳುವೆಯಾ ? ಎಂದು ಕೇಳಿದರು. ಅವನು ಆಗಲಿ ಎಂದ. ಹಾಗಾದರೆ ಈ ವಜ್ರಕ್ಕೆ ಎಷ್ಟು ಕೊಡು ತ್ತಿಯಾ ಎಂದು ಕೇಳಿದ. ಅದಕ್ಕೆ ಅವನು ಹತ್ತು ಪೌಂಡು ಆಲೂಗೆಡ್ಡೆ ಕೊಡುತ್ತೇನೆ ಎಂದ. ಇದೆಲ್ಲ ಹಾಗೇನೆ. ನಮ್ಮ ಯೋಗ್ಯತಾನುಸಾರ ಒಬ್ಬ ಸಾಧುವನ್ನು ಅಳೆಯುತ್ತೇವೆ. ಆಲೂಗೆಡ್ಡೆ ವ್ಯಾಪಾರಿಗಳಾದ ನಾವು ಆಧ್ಯಾತ್ಮಿಕ ಸಾಕ್ಷಾತ್ಕಾರಗಳನ್ನೆಲ್ಲ ಆಲೂಗೆಡ್ಡೆ ದೃಷ್ಟಿಯಿಂದ ನೋಡುತ್ತೇವೆ.

ಸ್ವಾಮಿ ವಿವೇಕಾನಂದರು ನಿರ್ವಿಕಲ್ಪ ಸಮಾಧಿಯನ್ನು ಪಡೆದ ಮೇಲೆ, ಅವರು ಆ ಸ್ಥಿತಿಯಲ್ಲೇ ಇರಬೇಕೆಂದು ಬಯಸಿದರು. ಆದರೆ ಶ್ರೀರಾಮಕೃಷ್ಣರು, ಅವನು ಬೇಕಾದಷ್ಟು ಕೆಲಸ ಮಾಡಬೇಕಾಗಿದೆ ಎಂದರು. ನೀನು ಏತಕ್ಕೆ ಆ ಸ್ಥಿತಿಯಲ್ಲಿರಬೇಕೆಂದು ತವಕ ಪಡುವೆ. ಇದು ಆಗಲೆ ನಿನಗೆ ಸೇರಿದ್ದು. ಆದರೆ ಅದನ್ನು ಸಂದೂಕದಲ್ಲಿಟ್ಟು ಬೀಗ ಹಾಕು ತ್ತೇನೆ. ನೀನು ಯಾವ ಕೆಲಸವನ್ನು ಮಾಡುವುದಕ್ಕೆ ಬಂದೆಯೋ, ಅದನ್ನು ಮಾಡಿ ಆದ

ಮೇಲೆ, ನಿನಗೆ ಬೀಗದ ಕೈಯನ್ನು ಕೊಡುತ್ತೇನೆ. ಅನಂತರ ಅದನ್ನು ನೀನು ಪಡೆಯಬಹುದು ಎಂದರು.

ಎರಡು ಮೇರು ಸದೃಶ ವ್ಯಕ್ತಿಗಳಿಗೆ ಇದು ಆಯಿತು. ನಮ್ಮಂತಹ ಕಳಪೆ ಏನು ಮಾಡಬಹುದು. ನಾವು ನಿರ್ವಿಕಲ್ಪ ಸಮಾಧಿಯನ್ನು ಗುರಿಯಾಗಿಟ್ಟುಕೊಳ್ಳಬೇಕು. ವೈವಿಧ್ಯತೆಯಿಂದ ಕೂಡಿದ ದೃಶ್ಯ ಪ್ರಪಂಚವನ್ನು ಮೀರಿ ಹೋಗಲು ನಾವು ಯತ್ನಿಸಬೇಕು. ಆಗ ನಾವು ಬ್ರಹ್ಮನಲ್ಲಿ ಐಕ್ಯವಾಗದೆ ಇರುವುದಕ್ಕೆ ಏನಾದರೂ ಕಾರಣ ಇದ್ದರೆ, ಈ ಪ್ರಪಂಚದಲ್ಲಿ ನಾವು ಮಾಡುವುದಕ್ಕೆ ಏನಾದರೂ ಇದ್ದರೆ, ನಮ್ಮಿಂದ ಆ ಕೆಲಸವನ್ನು ಮಾಡಿಸುವರು. ಜ್ಞಾನಯೋಗದ ದೃಷ್ಟಿಯಿಂದ ಪ್ರಪಂಚಕ್ಕೆ ನೀವು ಸಹಾಯ ಮಾಡಬೇಕೆಂದು ಇಚ್ಛಿಸಿದರೆ, ನಿಮಗೆ ಪ್ರಪಂಚದಲ್ಲಿ ಇರುವುದಕ್ಕೆ ಇನ್ನೂ ಆಸೆ ಇದೆ ಎಂಬುದನ್ನು ತೋರುವುದು. ಇದು ನಮ್ಮ ಅಹಂಕಾರದ ಉಪಚಾರ.

ನೀವು ಅಥವಾ ನಾವು ಈ ಪ್ರಪಂಚಕ್ಕೆ ಏನೂ ಕೊಡದೆ ಇದ್ದರೂ ಪ್ರಪಂಚ ನಡೆದುಕೊಂಡು ಹೋಗುವುದು. ಯಾರು ಸಂಪೂರ್ಣರಾಗಿ ಅನಾಸಕ್ತರಾಗಿ ಇರುವರೊ ಅವರು ಮಾತ್ರ ಪ್ರಪಂಚಕ್ಕೆ ಸಹಾಯ ಮಾಡಬಲ್ಲರು. ಇತರರು ತಮ್ಮ ಸ್ವಾರ್ಥಕ್ಕೆ ಹೋರಾಡುವರು. ನನಗೆ ಪೂರ್ಣ ಸ್ವಾತಂತ್ರ್ಯವಲ್ಲದೆ ಬೇರೇನೂ ಬೇಡ ಎನ್ನುವವನಿಗೆ ಅದು ದೊರಕುವುದು. ಗುರು ಅಥವಾ ದೇವರು ಒಂದು ಕೀಲಿಕೆಯೊಂದಿಗೆ ಬಂದು ಅದನ್ನು ತೆಗೆಯುವನು. ಮಾನವನಿಗೊ, ದೇವರಿಗೊ ಯಾವುದಾದರೂ ಲೋಕಕಲ್ಯಾಣ ಕೆಲಸವನ್ನು ಅವನು ಮಾಡಬೇಕಾದರೆ, ಅವನಿಂದ ಸುಂಕವನ್ನೇ ವಸೂಲು ಮಾಡುವಂತೆ ಮಾಡುವರು. ಅವನಿಗೆ ಸುಂಕ ಕೊಡಲು ಇಚ್ಛೆಯಿಲ್ಲದಿದ್ದರೂ ಅದನ್ನು ವಸೂಲು ಮಾಡಿಯೇ ಮಾಡುವರು. ಮುಕ್ತನಾದ ಮೇಲೆ ನಿಮಗೆ ಏನು ಮಾಡುವುದಕ್ಕೆ ಇಲ್ಲದೇ ಇದ್ದರೂ, ಅದನ್ನು ಮಾಡಬೇಕಾಗಿದೆ. ಆದರೆ ಹೀಗೆ ಆಗುತ್ತದೆ ಎಂದು ನೀವು ಎಣಿಸಬೇಕಾಗಿಲ್ಲ. ನಿರ್ವಿಕಲ್ಪ ಸಮಾಧಿಯನ್ನು ಪಡೆದ ಮೇಲೆ, ನೀವು ಈ ಪ್ರಪಂಚಕ್ಕೆ ಬರಬೇಕೆಂದು ಇಚ್ಛಿಸಿದರೆ ಆಗ ನಾನು "ನಿಮಗೆ ನಿರ್ವಿಕಲ್ಪ ಸಮಾಧಿ ಬೇಕೆ, ಅಥವಾ ಪ್ರಪಂಚ ಬೇಕೇ" ಎಂದು ಕೇಳಬೇಕಾಗುವುದು. ನಿಮಗೆ ಯಾವುದಾದರೂ ಆಸೆ ಇದ್ದರೆ, ನೀವು ಸಮಾಧಿಯನ್ನು ಪಡೆಯುವುದಕ್ಕೆ ಆಗುವುದಿಲ್ಲ.

ಮುಮುಕ್ಷುವಿಗೆ ಸ್ವರ್ಗವಾಗಲಿ, ನರಕವಾಗಲಿ, ಈ ಲೋಕವಾಗಲಿ ಯಾವುದರ ಮೇಲೆಯೂ ಆಸೆ ಇರಕೂಡದು. ಅವನಿಗೆ ಇಲ್ಲಿರುವುದಕ್ಕಾಗಲಿ, ಹೋಗುವುದಕ್ಕಾಗಲಿ ಯಾವ ಇಚ್ಛೆಯೂ ಇಲ್ಲ. ಕಣ್ಣಿಗೆ ಯಾವ ಬಣ್ಣದ ಕನ್ನಡಕ ಹಾಕಿಕೊಳ್ಳದೆ, ಸೂರ್ಯನನ್ನು ನೋಡುವ ಸ್ಥಿತಿಗೆ ಬರಬೇಕು. ನಮ್ಮ ಉದ್ದೇಶ, ನಿರ್ವಿಕಲ್ಪ ಸಮಾಧಿಯಲ್ಲಿ, ಪರಮ ಸತ್ಯವಾದ ಪರಬ್ರಹ್ಮದಲ್ಲಿ ಒಂದಾಗುವುದಿರಬೇಕು. ಅದಕ್ಕಿಂತ ಕಡಿಮೆಯದನ್ನು ಇಚ್ಛಿಸುವುದಿಲ್ಲ. ಉಳಿದವುಗಳೆಲ್ಲ ಮಾಯ.

ರಾಜಯೋಗ

೧

ಪೂರ್ಣತೆ ಆಗಲೇ ನಮ್ಮಲ್ಲಿದೆ. ನಮ್ಮ ಚಿತ್ತ ಚಂಚಲವಾಗಿರುವುದರಿಂದ ನಾವು ಅದನ್ನು ವ್ಯಕ್ತಗೊಳಿಸಲಾರೆವು. ಪೂರ್ಣತೆ ವ್ಯಕ್ತವಾಗಬೇಕಾದರೆ ಚಿತ್ತವನ್ನು ಸಂಪೂರ್ಣವಾಗಿ ನಿಗ್ರಹಿಸಬೇಕು.

ರಾಜಯೋಗದಲ್ಲಿ ಅತ್ಯಂತ ಮುಖ್ಯವಾಗಿರುವುದೆ ಚಿತ್ತ ನಿರೋಧ. ರಾಜಯೋಗದ ಪ್ರಕಾರ ಪೂರ್ಣತೆಯ ಪ್ರಕಾಶಕ್ಕೆ ಆತಂಕಪ್ರಾಯವಾಗಿರುವುದು, ಚಿತ್ತ ವೃತ್ತಿಗಳ ಆಂದೋಳನ. ಚಿತ್ತ ವೃತ್ತಿಯನ್ನು ನಿಗ್ರಹಿಸುವುದರ ಮೂಲಕ ಅವನು ತನ್ನ ಆಂತರಿಕ ಸ್ವಭಾವವನ್ನು ನಿಗ್ರಹಿಸಬಹುದು. ಬಾಹ್ಯ ಪ್ರಕೃತಿ ಆಂತರಿಕ ಪ್ರಕೃತಿಯ ಆವಿರ್ಭಾವ ಎಂದು ಗೊತ್ತಾಗುವುದು. ರಾಜಯೋಗದಲ್ಲಿ ನಾವು ಪೂರ್ಣತೆಯನ್ನು ಪಡೆಯಬೇಕಾದರೆ ಆತಂಕ ಪ್ರಾಯವಾಗಿರುವ ಆಂತರಿಕ ಮತ್ತು ಬಾಹ್ಯ ಪ್ರಕೃತಿಯ ಆಂದೋಳನವನ್ನು ನಿಗ್ರಹಿಸಬೇಕಾಗಿದೆ. ನಮ್ಮ ಮನಸ್ಸನ್ನು ಸಂಪೂರ್ಣವಾಗಿ ನಿರೋಧಿಸುವುದು ಹೇಗೆ ಎಂಬುದನ್ನು ರಾಜಯೋಗ ಹೇಳುವುದು. ಚಿತ್ತ ವೃತ್ತಿಗಳನ್ನು ನಿಗ್ರಹಿಸುವುದೇ ಮುಖ್ಯವಾದ ಪ್ರಯತ್ನ. ಚಿತ್ತ ವೃತ್ತಿಯಲ್ಲಿ ಸ್ಥೂಲವಾಗಿರುವುದನ್ನು ನಿಗ್ರಹಿಸುವುದರ ಮೂಲಕ ಪ್ರಾರಂಭಿಸಬೇಕು.

ಇತರ ಯೋಗಗಳಂತೆ ರಾಜಯೋಗವೂ ಭರತಖಂಡದಲ್ಲಿ ಹಿಂದಿನಿಂದ ಇತ್ತು. ಇದನ್ನು ಪೂರ್ಣತೆಗೆ ಇರುವ ರಾಜಮಾರ್ಗವೆನ್ನಬಹುದು. ರಾಜ ತನ್ನ ರಾಜ್ಯವನ್ನು ಆಳುತ್ತಾನೆ. ಹಾಗೆಯೇ ನಾವು ನಮ್ಮ ರಾಜ್ಯವನ್ನು ಆಳಬೇಕು. ನಮ್ಮ ರಾಜ್ಯವೇ ನಮ್ಮ ಚಿತ್ತ. ನಾವು ಇದನ್ನು ನಿಗ್ರಹಿಸಿದರೆ, ಪ್ರಕೃತಿಯ ಒಡೆಯರಾಗುವೆವು. ರಾಜಯೋಗ ಶಾಸ್ತ್ರಕ್ಕೆ ದೊಡ್ಡ ಅಧಿಕಾರಿ ಪುರುಷನೇ ಪೂರ್ವಕಾಲದ ಪತಂಜಲಿ ಎಂಬ ಮಹರ್ಷಿಗಳು. ಇವರು ಯೋಗಸೂತ್ರ ಎಂಬುದನ್ನು ಬರೆದಿದ್ದಾರೆ. ಈ ಯೋಗ ಸಾಂಖ್ಯ ದರ್ಶನದ ಆಧಾರದ ಮೇಲಿದೆ. ಸರ್ವೇಶ್ವರನಾದ ಪರಮಾತ್ಮನಿಗೆ ಪ್ರಾರ್ಥಿಸುವ ಆವಶ್ಯಕತೆ ಏನೂ ಇಲ್ಲ. ಬೇಕಾದರೆ ದೇವರನ್ನು ಕುರಿತು ಧ್ಯಾನಿಸಬಹುದು ಎಂದು ಪತಂಜಲಿ ಹೇಳುತ್ತಾರೆ. ಯೋಗದಲ್ಲಿ ಗುರಿಯನ್ನು ಪಡೆಯಬೇಕಾದರೆ, ದೇವರನ್ನು ಧ್ಯಾನಿಸುವುದು ಹಲವು ಮಾರ್ಗಗಳಲ್ಲಿ ಒಂದು ಎಂದು ಹೇಳುತ್ತಾರೆ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ರಾಜಯೋಗದ ಮಾರ್ಗದಲ್ಲಿ ಹೋಗಬೇಕಾದರೆ, ಒಬ್ಬ ದೇವರಲ್ಲಿ ನಂಬಲೇ ಬೇಕಾಗಿಲ್ಲ, ಅವನನ್ನು ಸ್ವೀಕರಿಸಲೇ ಬೇಕಾಗಿಲ್ಲ.

ನಿನ್ನ ವೃತ್ತಿ ಏನು ಎಂದು ಒಬ್ಬ ಯೋಗಿಯನ್ನು ಕೇಳಿದರು. ಅದಕ್ಕೆ ಅವನು ಸಂಕೋಚವಿಲ್ಲದೆ, ನಾನು ಹುಟ್ಟು ವ್ಯವಸಾಯಗಾರ ಮತ್ತು ವೃತ್ತಿಯಲ್ಲಿಯೂ ವ್ಯವಸಾಯ

ಗಾರ ಎಂದ. ನಿನಗೆ ಎಷ್ಟು ಜಮೀನು ಇದೆ ಎಂದು ಕೇಳಿದರು. ಅವನು ತನ್ನ ದೇಹವನ್ನು ನೋಡಿ ಮೂರೂವರೆ ಮೊಳ ಎಂದ.

ಒಬ್ಬ ಮನುಷ್ಯನಿಗೆ ಇರುವ ದೊಡ್ಡ ಆಶೆ ಎಂದರೆ ಈ ಮೂರೂವರೆ ಮೊಳದ ದೇಹ ಮತ್ತು ಅದರಲ್ಲಿರುವ ಮನಸ್ಸು. ಅವನಿಗೆ ಬೇಸಾಯ ಗೊತ್ತಿದ್ದರೆ, ಇದರಲ್ಲಿ ಅತ್ಯಂತ ಶ್ರೇಷ್ಠವಾದ ಬೆಳೆಯನ್ನು ತೆಗೆಯಬಲ್ಲ. ಇಲ್ಲಿ ಯೋಗಿ ಬೇಸಾಯ ಮಾಡಿ ಮುಕ್ತಿಯ ಫಲವನ್ನು ಪಡೆಯುವನು.

ಯೋಗ ಎಂದರೆ ಈ ಕ್ಷೇತ್ರವನ್ನು ಹೇಗೆ ಬೇಸಾಯ ಮಾಡಿ ಒಳ್ಳೆ ಬೆಳೆಯನ್ನು ತೆಗೆಯುವುದು ಎಂಬ ಕಲೆಯನ್ನು ಬೋಧಿಸುವುದು. ನಿಮ್ಮ ಆಸ್ತಿಯನ್ನು ಹೇಗೆ ರಕ್ಷಣೆ ಮಾಡಬೇಕು, ಇಲ್ಲಿ ನೆಲವನ್ನು ಹೇಗೆ ಸರಿಪಡಿಸಬೇಕು, ಚೆನ್ನಾದ ಬೆಳೆ ತೆಗೆಯಬೇಕಾದರೆ, ಹೇಗೆ ಉಳಬೇಕು, ಬಿತ್ತಬೇಕು ಎಂಬುದನ್ನು ಹೇಳುವುದು.

ಈ ಜೀವನದಲ್ಲಿ ನಾವು ಯಾವ ಕಾರ್ಯ ಕ್ಷೇತ್ರದಲ್ಲಿ ಮುಂದುವರಿಯ ಬೇಕಾದರೂ ಅದಕ್ಕೆ ಯೋಗ್ಯವಾದ ಕ್ರಮ ಅವಶ್ಯಕ. ಇದು ರಾಜಯೋಗಕ್ಕೂ ಅನ್ವಯಿಸುವುದು. ಇಲ್ಲಿ ಗುರಿಯನ್ನು ಮುಟ್ಟುವುದಕ್ಕೆ ಸಹಾಯ ಮಾಡುವ ಕೆಲವು ಅಭ್ಯಾಸಗಳಿವೆ. ನಿಮಗೆ ಜಮೀನು ಬಂದರೆ ಮೊದಲು ಏನು ಮಾಡುತ್ತೀರಿ. ನೀವು ಮೊದಲು ಅದಕ್ಕೆ ಒಂದು ಬೇಲಿಯನ್ನು ಹಾಕುತ್ತೀರಿ. ಏಕೆಂದರೆ ಹೊರಗಿನಿಂದ ಯಾವುದೂ ಬಂದು ಒಳಗಿರುವ ಬೆಳೆಯನ್ನು ಹಾಳು ಮಾಡದೆ ಇರಲಿ ಎಂದು. ನಿಮ್ಮ ಹೆಸರಿನಲ್ಲಿ ಪತ್ರವನ್ನು ಮಾಡಿಸುತ್ತೀರಿ, ಹೊರಗಿನವರು ಬಂದು ಆಕ್ರಮಿಸದೆ ಇರಲಿ ಎಂದು. ರಾಜಯೋಗದಲ್ಲಿ ಕೂಡ ಕೆಲವು ರಕ್ಷಣೆಯ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುವುದು.

ಒಂದು ಮುಖ್ಯ ವಿಷಯಕ್ಕೆ ನಿಮ್ಮ ಗಮನವನ್ನು ಸೆಳೆಯಲಿಚ್ಛಿಸುವೆ. ಈ ರಕ್ಷಣಾ ಕ್ರಮಗಳನ್ನು ತೆಗೆದುಕೊಂಡರೆ ನಿಮಗೇ ಪ್ರಯೋಜನವಾಗುವುದು. ಹೊರಗಿನವರು ಇದನ್ನು ಮಾಡಿ ಎಂದು ನಿಮಗೆ ಬಲಾತ್ಕಾರ ಮಾಡುವುದಿಲ್ಲ. ನೀವು ನಿಮ್ಮ ಇಚ್ಛೆಯಿಂದಲೇ ಪ್ರೇರಿತರಾಗಿ ರಕ್ಷಣೆಯ ಬೇಲಿಯನ್ನು ಹಾಕಿ. ಇದು ಬಹಳ ಮುಖ್ಯವಾಗಿರುವುದು. ನೀವು ನಿಮ್ಮ ಸುತ್ತಲೂ ಒಂದು ರಕ್ಷಣೆಯ ಬೇಲಿಯನ್ನು ಯೋಗ ಜೀವನದಲ್ಲಿ ಮುಂದುವರಿಯುವುದಕ್ಕಾಗಿ ಹಾಕಿದ್ದೀರಿ. ಇದರಿಂದ ಗುರಿಯೆಡೆಗೆ ಒಂದು ಹೆಜ್ಜೆ ಮುಂದುವರಿದಂತೆ ಆಗುವುದು. ಇದರಿಂದ ನಿಮ್ಮಲ್ಲಿರುವ ಅಧ್ಯಾತ್ಮಿಕ ಶಕ್ತಿಯನ್ನು ಪ್ರತಿಪಾದಿಸಿದ್ದೀರಿ. ನೀವು ಆಗಲೆ ಪ್ರಾರಂಭ ಮಾಡಿದ್ದೀರಿ. ಪ್ರಾರಂಭಿಸುವುದು ಆಗಲೆ ಕಾರ್ಯೈನ್ನು ಖರಾದಂತೆ.

ಪ್ರತಿಯೊಂದು ಧರ್ಮದಲ್ಲಿಯೂ ಆಯಾ ಅನುಯಾಯಿಗಳು ಅನುಸರಿಸಬೇಕಾದ ಕೆಲವು ನಿಯಮಗಳಿವೆ. ಅದಕ್ಕೆ ಮಾನಸಿಕವಾಗಿ ಯಾವ ವಿವರಣೆಯೂ ಸಾಧಾರಣವಾಗಿ ಸಿಕ್ಕುವುದಿಲ್ಲ. ಆಧುನಿಕರು ನಿಯಮಾವಳಿ ಎಂದರೆ ರೇಗಿ ಬೀಳುವರು. ಈ ನಿಯಮಾವಳಿಗಳಲ್ಲಿ ಕೆಲವು ಪ್ರಯೋಜನಕಾರಿ ಎಂದು ಅವರಿಗೆ ಗೊತ್ತಾದರೂ, ಯಾರೊ ತಮ್ಮ ಮೇಲೆ ಇದನ್ನು ಬಲಾತ್ಕರಿಸುತ್ತಿದ್ದಾರೆ ಎಂದರೆ ದಂಗೆ ಏಳುವರು. ಆದಕಾರಣವೇ ಪ್ರತಿ ಧರ್ಮದಲ್ಲಿರುವ ವಿಧಿನಿಷೇಧಗಳು ಈಗಿನ ಜನರಿಗೆ ಅಷ್ಟು ಪ್ರಿಯವಲ್ಲ. ಬಲಾತ್ಕಾರವಾಗಿ

ಯಾರೊ ನಮ್ಮ ಮೇಲೆ ಇದನ್ನು ಹೇರುತ್ತಿದ್ದಾರೆ, ನಮಗೆ ಅದರ ಬಗ್ಗೆ ಯಾವ ಸ್ವಾತಂತ್ರ್ಯವೂ ಇಲ್ಲ ಎಂದಾಗ ನಾವು ಪ್ರತಿಭಟಿಸುತ್ತೇವೆ. ನಾನೇ ಈ ನಿಯಮಾವಳಿಗಳಿಗೆ ವಿರೋಧಿಸುತ್ತೇನೆ. ಆದರೆ ಇವು ನಿಜವಾಗಿಯೂ ಕಟ್ಟಪ್ಪಣೆಯೇ? ಇದನ್ನು ವಿಧಿಸಿದವರು ಕೆಲವು ಅಧಿಕಾರಿಗಳಲ್ಲ, ಈ ಜೀವನದಲ್ಲಿ ಮುಂದುವರಿದು ಹೋದವರು ಕಂಡುಹಿಡಿದ ನಿಯಮಗಳು. ಅದನ್ನು ನಮ್ಮ ಶ್ರೇಯಸ್ಸಿಗಾಗಿ ಬಿಟ್ಟುಹೋಗಿರುವರು. ಈ ದೃಷ್ಟಿಯಿಂದ ಈಗಿನಕಾಲದ ವಿಚಾರಪರ ಇದನ್ನು ಹೃತ್ಪೂರ್ವಕವಾಗಿ ಸ್ವೀಕರಿಸಬಹುದು. ಪ್ರತಿಯೊಂದು ಧರ್ಮದಲ್ಲಿಯೂ ಈ ನಿಯಾಮಾವಳಿಗಳು ರಕ್ಷಣೆಯ ಗೋಡೆ ಇದ್ದಹಾಗೆ. ಸಾಧಕ ಒಳ್ಳೆಯ ಬೆಳೆಯನ್ನು ತೆಗೆಯುವುದಕ್ಕಾಗಿ ಇದನ್ನು ಹಾಕುತ್ತಾನೆ. ನಮ್ಮ ಸುತ್ತಲೂ ಈ ರಕ್ಷಣೆಯ ಗೋಡೆ ಇಲ್ಲದೆ ಇದ್ದರೆ, ನಾವು ಜೀವನದ ಯಾವ ಕಾರ್ಯಕ್ಷೇತ್ರದಲ್ಲಿಯೂ ಮುಂದುವರಿಯಲಾರೆವು.

ರಾಜಯೋಗದಲ್ಲಿ ಪೂರ್ಣತೆಯನ್ನು ಪಡೆಯುವುದು ಎಂದರೆ, ಅಲ್ಲಿ ಯಾವ ಬಂಧನವೂ ಇಲ್ಲ, ಯಾವ ಮಿತಿಯೂ ಇಲ್ಲ, ಯಾವ ವಿಧವಾದ ಲೋಪ–ದೋಷವೂ ಇಲ್ಲ. ಚಿತ್ತ ತನ್ನ ಪರಿಶುದ್ಧ ಸ್ಥಿತಿಯಲ್ಲಿರುವುದೇ ಬ್ರಹ್ಮಸಾಕ್ಷಾತ್ಕಾರ. ಯೋಗಿಯ ಗುರಿ ಚಿತ್ತದ ಮಿತಿಯನ್ನು ದಾಟಬೇಕಾಗಿರುವುದರಿಂದ, ಮುಂಚೆ ಅದನ್ನು ನಿಗ್ರಹಿಸಬೇಕಾಗಿದೆ. ಈ ಗುರಿಯನ್ನು ಸೇರುವುದಕ್ಕೆ ಆತಂಕಪ್ರಾಯವಾಗಿರುವುದನ್ನು ವಿಭಜನೆ ಮಾಡಿ ನಮ್ಮ ಅಧೀನಕ್ಕೆ ತರಬೇಕಾಗಿದೆ. ನಮ್ಮ ಕೀಳು ಆತ್ಮನನ್ನು ಗೆಲ್ಲಬೇಕಾದರೆ, ಕೆಲವು ನಿರ್ದಿಷ್ಟವಾದ ಶಿಸ್ತುಗಳು ಆವಶ್ಯಕ.

ರಾಜಯೋಗವನ್ನು ಪತಂಜಲಿ ಅಷ್ಟಾಂಗ ಮಾರ್ಗವೆಂದು ಕರೆಯುತ್ತಾರೆ. ಇಲ್ಲಿ ಏಳು ಮೆಟ್ಟಿಲುಗಳು ಇವೆ. ಅದೇ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿ. ಇವುಗಳನ್ನೆಲ್ಲ ವಿಮರ್ಶಿಸೋಣ.

ಪತಂಜಲಿ ಚಿತ್ತಕ್ಕೆ ಆತಂಕಪ್ರಾಯವಾದುದನ್ನು ಎರಡು ಮಾರ್ಗದಲ್ಲಿ ವಿಚಾರ ಮಾಡುತ್ತಾರೆ. ಒಂದೊಂದರಲ್ಲಿ ಐದು ನಿಯಮಗಳಿವೆ. ಯಮ ಎಂದರೆ, ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ. ನಿಯಮ ಎಂದರೆ ಶೌಚ, ತೃಪ್ತಿ, ತಪಸ್, ಸ್ವಾಧ್ಯಾಯ, ಈಶ್ವರ ಪ್ರಣಿಧಾನ.

ಈ ಹತ್ತು ನಿಯಮಾವಳಿಗಳು ರಕ್ಷೆಗಾಗಿ. ಯೋಗಿ ತನ್ನ ಕಾರ್ಯಕ್ಷೇತ್ರಕ್ಕೆ ಕಟ್ಟುವ ರಕ್ಷಣೆಯ ಬೇಲಿಗೆ ಹಾಕಿರುವ ಹತ್ತು ಕಂಬಗಳು ಎಂದು ಹೇಳಬಹುದು. ಇವೇ ನೀತಿಯ ತಳಹದಿ ಎಂದು ನಾನು ಹೇಳುತ್ತೇನೆ. ಪತಂಜಲಿ ಒಬ್ಬನ ದೃಷ್ಟಿಯಿಂದ ಒಳ್ಳೆಯದಾವುದು ಕೆಟ್ಟದ್ದು ಯಾವುದು ಎಂಬುದನ್ನು ವಿಚಾರಮಾಡುತ್ತಾರೆ. ನಮ್ಮ ಮನಸ್ಸಿಗೆ ಶಾಂತಿಯನ್ನು ಕೊಡುವ ಯಾವ ಕ್ರಿಯೆಯಾಗಲಿ, ಆಲೋಚನೆಯಾಗಲಿ ಒಳ್ಳೆಯವು. ಅದಕ್ಕೆ ಯಾವುದು ಆತಂಕಪ್ರಾಯವಾಗಿದೆಯೊ ಅದು ಕೆಟ್ಟದ್ದು. ಯಾವುದು ನಮ್ಮನ್ನು ಪೂರ್ಣತೆಯಿಂದ ದೂರ ಒಯ್ಯುವುದೊ, ಅದು ಕೆಟ್ಟದ್ದು. ಯಾವುದು ನಮ್ಮನ್ನು ಅದರ ಸಮೀಪಕ್ಕೆ ಒಯ್ಯುವುದೊ ಅದು ಒಳ್ಳೆಯದು.

ಪ್ರತಿಯೊಬ್ಬ ಯೋಗದ ಸಾಧಕನು ಈ ನಿಯಮಗಳನ್ನು ಅರ್ಥಮಾಡಿಕೊಳ್ಳಬೇಕು, ಅದನ್ನು ಮೆಚ್ಚಬೇಕು, ಮತ್ತು ಅನುಷ್ಠಾನಕ್ಕೆ ತರಬೇಕು. ಈ ನಿಯಮಗಳನ್ನು ಅನುಷ್ಠಾನ ಮಾಡದೆ ಸಾಧನೆ ಮಾಡುವುದಕ್ಕೆ ಹೊರಟರೆ ತೂತಿನ ಕೊಡಕ್ಕೆ ನೀರನ್ನು ಸುರಿದಂತೆ ಆಗುವುದು. ಅವನು ಮುಂದುವರಿಯಬೇಕೆಂದು ಸಾಧನೆ ಮಾಡಬಹುದು. ಆದರೆ ತೂತನ್ನು ಮುಚ್ಚದೇ ಇದ್ದರೆ ಇವನ ಪ್ರಯತ್ನವೆಲ್ಲ ವ್ಯರ್ಥವಾಗುವುದು. ಅವನು ಯೋಗ್ಯ ಸಾಧಕನಾದರೆ, ಶಕ್ತಿ ವ್ಯರ್ಥವಾಗುವ ಕೇಂದ್ರಗಳನ್ನೆಲ್ಲ ಮೊದಲು ಮುಚ್ಚಬೇಕು. ಯೋಗಾಭ್ಯಾಸಕ್ಕೆ ಮುಂಚೆ ಇದನ್ನು ಮಾಡಬೇಕು.

ಮೊದಲನೆಯ ನಿಯಮವೇ ಅಹಿಂಸೆ. ನೀವು ಮತ್ತೊಬ್ಬರಿಗೆ ಕಾಯಾ, ವಾಚಾ, ಮಾನಸಿಕವಾಗಿ ವ್ಯಥೆಯನ್ನು ಕೊಡುವುದಿಲ್ಲವೆಂದು ಶಪಥಮಾಡಬೇಕು. ಅಹಿಂಸೆಯಲ್ಲಿ ಆಂತರಿಕವಾಗಿರುವುದಿದೆ, ಬಾಹ್ಯವಾಗಿರುವುದು ಇದೆ. ಮತ್ತೊಬ್ಬನಿಗೆ ಹಿಂಸೆಯನ್ನು ಕೊಟ್ಟರೆ, ಅದು ನಿಮ್ಮ ಮನಸ್ಸಿನ ಮೇಲೆ, ನೀರಿನ ಮೇಲೆ ಗುಳ್ಳೆಗಳೇಳುವಂತೆ ಪ್ರಭಾವವನ್ನು ಬೀರುವುದು. ನಮ್ಮ ಧ್ಯಾನವನ್ನೆಲ್ಲ ಹಾಳುಮಾಡುವುದು. ನೀವು ಮತ್ತೊಬ್ಬರಿಗೆ ಹಿಂಸೆ ಕೊಟ್ಟರೆ, ನಿಮಗೆ ಮತ್ತೊಬ್ಬರ ಮೇಲೆ ದ್ವೇಷ ಅಸೂಯೆ ಇದ್ದರೆ, ಇತರರಿಗೆ ಅನ್ಯಾಯವನ್ನು ಮಾಡಿದರೆ, ಅವರನ್ನು ಒರಟಾಗಿ ಕಂಡರೆ, ಯೋಗದ ಬಾಗಿಲಿಗೆ ಹೋಗಲಾರಿರಿ. ಯೋಗಿ ಎಲ್ಲರನ್ನೂ ಪ್ರೀತಿಸಬೇಕು. ಎಲ್ಲರಿಗೂ ಅನುಕಂಪವನ್ನು ತೋರಬೇಕು. ಅವನು ಎಲ್ಲರಿಗೂ ಸೇವೆಯನ್ನು ಮಾಡಬೇಕು. ಅಹಿಂಸೆಗೆ ಗಾಢವಾದ ಅರ್ಥವಿದೆ. ಅದರ ವ್ಯಾಪ್ಯತೆ ಬಹಳ ವಿಶಾಲವಾಗಿದೆ.

ನಮ್ಮ ನಿತ್ಯ ಜೀವನದಲ್ಲಿ ಅಹಿಂಸೆಯನ್ನು ಅಭ್ಯಾಸ ಮಾಡುವುದಕ್ಕೆ ಶ್ರೀರಾಮಕೃಷ್ಣರು ಒಂದು ಹಾಸ್ಯದ ಕಥೆಯನ್ನು ಹೇಳುತ್ತಾರೆ. ಒಂದು ಹಳ್ಳಿಯ ಹತ್ತಿರ ಕೆಟ್ಟ ವಿಷಸರ್ಪ ಒಂದು ಇತ್ತು. ಅದು ಮರದ ಪೊಟರೆಯಲ್ಲಿ ವಾಸ ಮಾಡುತ್ತ ಹಳ್ಳಿಯವರನ್ನೆಲ್ಲ ಅಂಜಿಸುತ್ತಿತ್ತು. ಒಂದು ಸಲ ಒಬ್ಬ ಸಾಧು ಆ ಮರದ ಕೆಳಗೆ ಕುಳಿತುಕೊಂಡ. ಈ ವಿಷಸರ್ಪ ಅವನನ್ನು ಕಚ್ಚುವುದಕ್ಕೆ ಹೋಯಿತು.

ಸಾಧು ಶಾಂತಿಯಿಂದ ಸರ್ಪಕ್ಕೆ ಸುಮ್ಮನಿರು, ನೀನು ನನ್ನನ್ನು ಕಚ್ಚಲಾರೆ ಎಂದನು. ಹಾವು ತೆಪ್ಪಗಾಯಿತು. ಸಾಧು "ಮಗು, ನೀನು ಏತಕ್ಕೆ ಜನರನ್ನು ಕಚ್ಚಿ ಸಾಯಿಸುವೆ? ಹುಲಿ, ಸಿಂಹ ತಮ್ಮ ಆಹಾರಕ್ಕೆ ಇತರರನ್ನು ಕೊಲ್ಲುವುದು ನನಗೆ ಅರ್ಥವಾಗುವುದು. ಆದರೆ ನೀನು ಕೊಲ್ಲುವುದು ನಿನ್ನ ಆವಶ್ಯಕತೆಗಲ್ಲ, ಸುಮ್ಮನೆ ನಿನ್ನ ವಿನೋದಕ್ಕೆ. ಈ ದುರಭ್ಯಾಸವನ್ನು ನಾನು ಬಿಡಿಸುತ್ತೇನೆ. ನಾನು ನಿನಗೆ ಮಂತ್ರೋಪದೇಶ ಮಾಡುತ್ತೇನೆ. ನೀನು ಪ್ರತಿದಿನವೂ ಅದನ್ನು ಜಪ ಮಾಡಬೇಕು. ಇನ್ನು ಮೇಲೆ ಯಾರನ್ನೂ, ಯಾವ ಕಾರಣಕ್ಕೂ ಕಚ್ಚುವುದಿಲ್ಲ ಎಂದು ಮಾತು ಕೊಡು" ಎಂದ.

ಹಾವು ಹಾಗೆಯೇ ಮಾಡುತ್ತೇನೆ ಎಂದು ಮಾತುಕೊಟ್ಟು ಗುರುವಿನಿಂದ ಮಂತ್ರೋಪದೇಶವನ್ನು ಪಡೆದುಕೊಂಡಿತು. ಸಾಧು ನಾನು ಕೆಲವು ಕಾಲವಾದ ಮೇಲೆ

ಶಿಷ್ಯನನ್ನು ನೋಡುವುದಕ್ಕೆ ಬರುತ್ತೇನೆ, ಪ್ರತಿದಿನವೂ ಇದನ್ನು ಅಭ್ಯಾಸ ಮಾಡು, ಮತ್ತು ಯಾರನ್ನೂ ಕಚ್ಚಬೇಡ ಎಂದು ಹೇಳಿ ಹೊರಟುಹೋದನು.

ಕೆಲವು ತಿಂಗಳಾದ ಮೇಲೆ ಸಾಧು ತನ್ನ ಹೊಸ ಶಿಷ್ಯನನ್ನು ನೋಡುವುದಕ್ಕೆ ಬಂದ. ಮರದ ಹತ್ತಿರ ಹೋಗಿ, ಪೊಟರೆಯಲ್ಲಿ ಹಾವಿನ ಹೆಸರನ್ನು ಕೂಗಿದನು. ಏನೂ ಉತ್ತರ ವಿಲ್ಲ. ಪುನಃ ಕೂಗಿದನು. ಕ್ರಮೇಣ ಒಂದು ಹಾವು ಅದರೊಳಗಿಂದ ಹೊರಗೆ ಬಂತು. ಅದು ಬಡಕಲಾಗಿತ್ತು. ತೆವಳುವುದಕ್ಕೂ ತ್ರಾಣವಿರಲಿಲ್ಲ. ಸಾಧುವಿಗೆ ಇದನ್ನು ನೋಡಿ ಆಶ್ಚರ್ಯವಾಗಿ, ಏತಕ್ಕೆ ಹೀಗೆ ಆಗಿದ್ದೀ ಎಂದು ಕೇಳಿದ. ಹಾವು ತುಂಬಾ ಮೆತ್ತಗೆ ಹೇಳಿತು. "ಪೂಜ್ಯ ಗುರುಗಳೆ, ನೀವು ನನಗೆ ಉಪದೇಶ ಮಾಡಿದ ಮಂತ್ರವನ್ನು ಉಚ್ಚಾರ ಮಾಡಿದೆ, ಮತ್ತು ಧ್ಯಾನವನ್ನು ಮಾಡಿದೆ. ನಾನು ನಿಮಗೆ ಮಾತು ಕೊಟ್ಟಂತೆ ಯಾರಿಗೂ ಕಚ್ಚಲಿಲ್ಲ. ಆದರೆ ತುಂಟಹುಡುಗರು ನನ್ನ ಬದಲಾವಣೆಯನ್ನು ಗಮನಿಸಿದರು. ಒಂದು ದಿನ ಒಬ್ಬ ಹುಡುಗ ನನ್ನ ಬಾಲವನ್ನು ಹಿಡಿದುಕೊಂಡು ಗಿರಗಿರ ಸುತ್ತಲೂ ಸುತ್ತಿ ನೆಲಕ್ಕೆ ಅಪ್ಪಳಿಸಿದ, ಅಂದಿನಿಂದ ನಾನು ನಿಶ್ರಾಣವಾಗಿದ್ದೇನೆ. ಆಹಾರಕ್ಕೆ ಹೊರಗೆ ಹೋಗು ವುದಕ್ಕೆ ಆಗುತ್ತಿಲ್ಲ. ಅದಕ್ಕಾಗಿಯೇ ನೀವು ನನ್ನನ್ನು ಈ ಸ್ಥಿತಿಯಲ್ಲಿ ಕಾಣುವುದು."

ಅದಕ್ಕೆ ಸಾಧುಗಳು "ಮಗು, ನಾನು ಹೇಳಿದ್ದನ್ನು ನೀನು ಚೆನ್ನಾಗಿ ಅರ್ಥಮಾಡಿ ಕೊಳ್ಳಲಿಲ್ಲ. ನಾನು ನಿನಗೆ ಕಚ್ಚಬೇಡ ಎಂದೆ. ಭುಸುಗುಟ್ಟಬೇಡ ಎನ್ನಲಿಲ್ಲವಲ್ಲ. ಭುಸುಗುಟ್ಟಿ ನಿನ್ನನ್ನು ನೀನು ರಕ್ಷಿಸಿಕೊಳ್ಳಬಹುದಾಗಿತ್ತು."

ಆದಕಾರಣವೇ ಅಹಿಂಸೆಯ ತತ್ವವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಇದು ಸುಮ್ಮನೆ ನಮ್ಮ ಕರ್ತವ್ಯಗಳನ್ನು ತ್ಯಜಿಸುವುದಲ್ಲ. ನಿಮ್ಮ ರಕ್ಷಣೆಯ ಬೇಲಿಗೆ ಅಹಿಂಸೆಯೆ ಮೊದಲನೆ ಕಂಬ.

ಎರಡನೆಯ ನಿಯಮವೆ ಸತ್ಯ. ಸತ್ಯವನ್ನು ಚೆನ್ನಾಗಿ ವಿಮರ್ಶೆಮಾಡಿ, ಯೋಚಿಸಿ ಪಾಲಿಸಬೇಕು. ಕಂಡದ್ದನ್ನು ಕಂಡಹಾಗೆ ಹೇಳುವುದು ಯಾವಾಗಲೂ ಸತ್ಯವಲ್ಲ. ಒಂದು ಘಟನೆಯನ್ನು ನಾವು ಸರಿಯಾಗಿ ಪರೀಕ್ಷಿಸಿ ತಿಳಿದುಕೊಳ್ಳಬೇಕು. ಅಂಜಿಕೆ ಮತ್ತು ಸ್ವಾರ್ಥದಿಂದ ಸತ್ಯ ಹಾಳಾಗುವುದು. ಸುಳ್ಳನ್ನು ಹೇಳುವುದಕ್ಕೆ ಪ್ರಯತ್ನಿಸಬೇಡಿ. ಆಗ ಮನಸ್ಸು ಸ್ವಾರ್ಥ ಮತ್ತು ಅಂಜಿಕೆಯಿಂದ ಪಾರಾಗುವುದು. ಸುಳ್ಳು ಹೇಳುವುದಕ್ಕೆ ಇದೇ ಕಾರಣ. ಸತ್ಯವನ್ನು ಬರೀ ಮಾತಿನಲ್ಲಿ ಮಾತ್ರವಲ್ಲ, ನಿಮ್ಮ ಕಾರ್ಯದಲ್ಲಿ ಮತ್ತು ಆಲೋ ಚನೆಯಲ್ಲಿ ಅದನ್ನೆ ಪಾಲಿಸಿ. ಸತ್ಯವೇ ನಿಮ್ಮನ್ನು ಪೂರ್ಣತೆ ಎಡೆಗೆ ಒಯ್ಯುವುದು. ಜೀವನ ದಲ್ಲಿ ಸದಾಕಾಲವೂ ಸತ್ಯವನ್ನು ಅನುಸರಿಸಿ, ಸತ್ಯದಿಂದ ನಿಮ್ಮ ವ್ಯಕ್ತಿತ್ವವೆಲ್ಲ ಹಾಸು ಹೊಕ್ಕಾಗಿರಲಿ, ನಿಮ್ಮ ಜೀವನವೇ ಸತ್ಯಕ್ಕೆ ಉದಾಹರಣೆ ಆಗಲಿ. ಆಗ ನೀವು ಪೂರ್ಣತೆ ಯನ್ನು ಪಡೆಯುವ ಯೋಗದ ಕಡೆ ಮತ್ತೊಂದು ಹೆಜ್ಜೆಯನ್ನು ಇಡುವಿರಿ.

ಮೂರನೆಯದೆ ಯೋಗಿ, ಅಸ್ತೇಯ ಅಥವಾ ಮತ್ತೊಬ್ಬರ ಸ್ವತ್ತನ್ನು ಅಪಹರಿಸು ವುದನ್ನು ತ್ಯಜಿಸಬೇಕು. ಮತ್ತೊಬ್ಬರ ಸ್ವತ್ತನ್ನೂ, ಹಕ್ಕನ್ನೂ ಕಸಿದುಕೊಳ್ಳದಿರುವುದು, ಅಸ್ತೇಯ. ಇದು ನಡತೆ ಮತ್ತು ಆಲೋಚನೆ ಎರಡಕ್ಕೂ ಅನ್ವಯಿಸುವುದು. ಇದು ಸ್ಥೂಲ

ವಾಗಿರಬಹುದು, ಭಾವನಾಮಾತ್ರವಾಗಿರಬಹುದು, ಬೌದ್ಧಿಕವಾಗಿರಬಹುದು, ಅಥವಾ ಆಧ್ಯಾತ್ಮಿಕವಾಗಿರಬಹುದು. ಇತರರ ಸ್ವತ್ತನ್ನು ಅಪಹರಿಸಿದರೆ ನಿನ್ನ ಮನಸ್ಸಿನಮೇಲೆ ಗಾಯ ವಾಗುವುದು. ಆಗ ನೀವು ಗಾಢಧ್ಯಾನ ಮಾಡುವುದಕ್ಕೆ ಆಗುವುದಿಲ್ಲ. ಇತರರು ಮಾಡಿದ ಸೇವೆಯನ್ನು ಒಪ್ಪಿಕೊಳ್ಳದಿರುವುದು ಕೂಡ ಒಂದು ವಿಧವಾದ ಕದಿಯುವುದು. ಯಾರು ಇದನ್ನು ಹೇಳಿದ್ದಾರೆ ಎಂದು ಹೇಳದೆ ಅವರ ಮಾತನ್ನು ಕೂಡ ಉಪಯೋಗಿಸಬಾರದು. ಶ್ರೀರಾಮಕೃಷ್ಣರು ಯಾವುದನ್ನಾದರೂ ಹೇಳಿದರೆ, ಅತಿದೈನ್ಯತೆಯಿಂದ ಇದನ್ನು ಯಾರಿಂದ ಕೇಳಿದರೂ ಅವರ ಹೆಸರನ್ನು ಹೇಳುತ್ತಿದ್ದರು. ಶ್ರೀರಾಮಕೃಷ್ಣರ ಜೀವನವೇ ಯೋಗದ ನಿಯಮಾವಳಿಗಳ ಅನುಷ್ಠಾನಕ್ಕೆ ಜ್ವಲಂತ ಉದಾಹರಣೆ.

ಅನಂತರ ಬರುವುದೇ ಬ್ರಹ್ಮಚರ್ಯ. ಲೈಂಗಿಕಶಕ್ತಿಯನ್ನು ನಿಗ್ರಹಿಸುವ ಜಿತೇಂದ್ರಿಯ ಜೀವನ. ಬ್ರಹ್ಮಚರ್ಯ ಎಂದರೆ ಬ್ರಹ್ಮನಲ್ಲಿ ಚರಿಸುವುದು ಎಂದಾಗುವುದು. ಜೀವನದ ಯಾವ ಕಾರ್ಯಕ್ಷೇತ್ರದಲ್ಲಾಗಲಿ ನಾವು ಕಷ್ಟಪಟ್ಟು ಕೆಲಸಮಾಡಬೇಕಾದರೆ ಜಿತೇಂದ್ರಿಯ ಜೀವನ ಆವಶ್ಯಕ. ಯೋಗಿಗಂತೂ ಬ್ರಹ್ಮಚರ್ಯ ಅತ್ಯಾವಶ್ಯಕ.

ಬ್ರಹ್ಮಚರ್ಯದಿಂದ ನಮಗೆ ಮೂರುವಿಧವಾಗಿ ಅಂದರೆ ಕಾಯಿಕ, ಮಾನಸಿಕ ಮತ್ತು ಆಧ್ಯಾತ್ಮಿಕವಾಗಿ ಪ್ರಯೋಜನವಾಗುವುದು. ಲೈಂಗಿಕ ಆಸಕ್ತಿಯ ಹಿಂದೆ ಅಮೃತತ್ವದ ಗುಣವಿದೆ. ಆ ಶಕ್ತಿಯನ್ನು ಸರಿಯಾಗಿ ತಿಳಿದುಕೊಂಡು, ಅದನ್ನು ಸರಿಯಾಗಿ ನಿಗ್ರಹಿಸಿದರೆ, ಅದನ್ನು ಊರ್ಧ್ವಗಾಮಿಯಾಗಿ ಮಾಡಿದರೆ ಅದು ನಮಗೆ ಆತ್ಮಸಾಕ್ಷಾತ್ಕಾರವನ್ನು ಕೊಡುವುದು.

ದಿಕ್ಕೆಟ್ಟು ಅಲೆಯುವ ಮನಸ್ಸಿನ ಸ್ವಭಾವ ಯಾವಾಗಲೂ ಒಳ್ಳೆಯದಲ್ಲ. ಆದರೆ ಇಲ್ಲಿ ಒಂದು ಅತಿಯ ಕಡೆಗೂ ಹೋಗಬಾರದು. ಇದು ಮತ್ತೊಂದು ಅತಿಯಾದ ಇಂದ್ರಿಯ ಲೋಲುಪತೆಯಷ್ಟೇ ಕೆಟ್ಟದ್ದು. ನೀನು ಕೆಲವು ವಸ್ತುಗಳನ್ನು ತ್ಯಜಿಸಿದ್ದರೆ ಅದಕ್ಕಾಗಿ ಹೆಚ್ಚು ಪವಿತ್ರ ಎಂದು ಭಾವಿಸಬೇಡ. ಯೋಗಜೀವನದಲ್ಲಿ ಸಾಧಕ, ತಾನು, ಗಂಡಸು ಅಥವಾ ಹೆಂಗಸು ಎಂಬುದನ್ನು ಮರೆತು ತಾನೊಬ್ಬ ಮನುಷ್ಯ ಎಂದು ಭಾವಿಸಬೇಕು. ನಮ್ಮಲ್ಲಿ ಲಿಂಗದೃಷ್ಟಿಯಿದ್ದರೆ, ಅದಕ್ಕೆ ವಿರೋಧವಾದ ಲಿಂಗದವರಿಂದ ಪ್ರತಿಕ್ರಿಯೆ ಒಂದೇ ಬರುವುದು. ಆ ಪ್ರತಿಕ್ರಿಯೆ ದೈಹಿಕವಾಗಿರಲಿ, ಮಾನಸಿಕವಾಗಿರಲಿ, ಅದು ಮನಸ್ಸನ್ನು ಚಂಚಲಗೊಳಿಸುವುದು.

ಲೈಂಗಿಕಶಕ್ತಿಯನ್ನು ನಿಗ್ರಹಿಸಿದರೆ, ಮೇಧಾ ಅಥವಾ ಪ್ರಚಂಡ ಬುದ್ಧಿಶಕ್ತಿ ಮತ್ತು ಇತರ ಸಾಧ್ಯತೆಗಳೆಲ್ಲ ನಮ್ಮಲ್ಲಿ ವೃದ್ಧಿಯಾಗುವುದು. ಒಂದು ದೃಢವಾದ ದೇಹ, ಬಲಿಷ್ಠವಾದ ಸ್ನಾಯುಜಾಲ, ಆಶೆಯಿಂದ ಪಾರಾದ ಸೂಕ್ಷ್ಮ ಬುದ್ಧಿಶಕ್ತಿ ಇವುಗಳು ಯೋಗಾಭ್ಯಾಸಕ್ಕೆ ಅತ್ಯಂತ ಆವಶ್ಯಕ. ಆದಕಾರಣ ಸಾಧಕ ಲಿಂಗದೃಷ್ಟಿಯಿಂದ ಮೇಲೇಳಬೇಕು. ಇದೇ ಬ್ರಹ್ಮಚರ್ಯ ಎಂದರೆ.

ಯೋಗಿಯ ರಕ್ಷಣೆಯ ಬೇಲಿಯ ಐದನೆ ಕಂಬವೇ ಅಪರಿಗ್ರಹ, ಎಂದರೆ ಯಾರಿಂದಲೂ ಏನನ್ನೂ ಸ್ವೀಕರಿಸದೆ ಇರುವುದು. ಇದನ್ನು ನಾವು ಸರಿಯಾಗಿ ಅರ್ಥ

ಮಾಡಿಕೊಳ್ಳಬೇಕು. ನಿಮ್ಮಿಂದ ಏನನ್ನೋ ಪ್ರತಿಫಲವನ್ನು ಆಶಿಸುವವರಿಂದ ಬಹುಮಾನವನ್ನು ಸ್ವೀಕರಿಸಿದರೆ, ನಿಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಂಡಿರಲು ಸಾಧ್ಯವೆ? ಖಡಾಖಂಡಿತವಾಗಿ ಸತ್ಯವನ್ನು ಎತ್ತಿ ಹಿಡಿಯಲು ಸಾಧ್ಯವೆ? ಋಣಿಯ ಭಾವ ಯಾವಾಗಲೂ ನಮ್ಮ ಮನಸ್ಸನ್ನು ಕೊರೆಯುತ್ತಿರುವುದು. ಕೆಲವು ವೇಳೆ ಲಂಚ ಬಹುಮಾನದಂತೆ ಬರುವುದರಿಂದ ಜೋಪಾನವಾಗಿರಬೇಕು. ಯಾವಾಗಲೂ ಇದನ್ನು ಗಮನಿಸಿ ನಿಮ್ಮ ಮೇಲೆ ಪ್ರೀತಿ ವಿನಃ ನಿಮ್ಮಿಂದ ಅವನು ಏನನ್ನೂ ನಿರೀಕ್ಷಿಸದೆ ಇರಲಿ. ಎರಡನೆಯದಾಗಿ ಕೊಡುವವನು ತಾನೇ ಮನಸಾರ ಕೊಡಬೇಕು. ಸ್ವೀಕರಿಸುವವನು ಮತ್ತೇನನ್ನೂ ನಿರೀಕ್ಷಿಸಬಾರದು. ಯಾವುವೊ ಆಶೆಯಿಂದ ಕೊಟ್ಟ ದಾನವನ್ನು ಸ್ವೀಕರಿಸುವುದು ನಮ್ಮನ್ನು ಬದ್ಧರನ್ನಾಗಿ ಮಾಡುವುದು. ಕೊಡುವವನಲ್ಲಿ ಪ್ರೀತಿ ವಿನಃ ಮತ್ತೇನೂ ಪ್ರತಿಫಲಾಪೇಕ್ಷೆ ಇಲ್ಲದೆ ಇದ್ದರೆ, ಸ್ವೀಕರಿಸುವವನು ಮತ್ತೇನನ್ನೂ ನಿರೀಕ್ಷಿಸದೆ ಇದ್ದರೆ, ಆಗ ದಾನಸ್ವೀಕಾರದಿಂದ ಯಾವ ಬಂಧನವೂ ಇಲ್ಲ, ತೊಂದರೆಯೂ ಇಲ್ಲ.

ಕೊಟ್ಟು ತೆಗೆದುಕೊಳ್ಳುವುದಿಲ್ಲದೇ ಇದ್ದರೆ ಈ ಪ್ರಪಂಚ ಮರಳುಕಾಡಿನಂತೆ ಆಗುವುದು. ಆದರೆ ನಿಮ್ಮ ಆಧ್ಯಾತ್ಮಿಕ ಶಕ್ತಿಯನ್ನು ನೀವು ರಕ್ಷಿಸಿಕೊಳ್ಳಬೇಕು. ಜಿಪುಣ ಹಣವನ್ನು ಕೂಡಿಡುವಂತೆ ಆಧ್ಯಾತ್ಮಿಕ ಶಕ್ತಿಯನ್ನು ಸಂಗ್ರಹಿಸುತ್ತ ಹೋಗಿ. ಯಾವುದರಿಂದಲೂ ಅದು ಕಡಿಮೆಯಾಗದಿರಲಿ. ನಾವು ಯಾವಾಗ ಮತ್ತೊಬ್ಬರಿಂದ ದಾನಾದಿಗಳನ್ನು ಸ್ವೀಕರಿಸುತ್ತೇವೆಯೊ ಅದು ನಮ್ಮ ಆಧ್ಯಾತ್ಮಿಕ ಜೀವನದ ಮೇಲೆ ತನ್ನ ಪ್ರಭಾವವನ್ನು ಬೀರುವುದು. ಅನಂತರ ವ್ಯಥೆಪಡುವುದಕ್ಕಿಂತ ಈಗ ಜೋಪಾನವಾಗಿರುವುದು ಮೇಲು. ಇಂತಹ ಪರಿಸ್ಥಿತಿಗೆ ಬರದಂತೆ ಜಾಗರೂಕತೆಯಿಂದ ನೋಡಿಕೊಳ್ಳಿ. ಯಾವಾಗಲೂ ಕೊಡುವವನಿಗೂ ಸ್ವೀಕರಿಸುವವನಿಗೂ ಒಂದು ಸೂಕ್ಷ್ಮವಾದ ಆದಾನ ಪ್ರದಾನವಿದೆ.

ಸುಮ್ಮನೆ ಯಾರಾರಿಂದಲೊ ದಾನವನ್ನು ಸ್ವೀಕರಿಸಬೇಡಿ. ದಾನವನ್ನು ಸ್ವೀಕರಿಸುವಾಗ ಅಥವಾ ಇನ್ನೊಬ್ಬರಿಗೆ ಉಪಕಾರಮಾಡುವಾಗ ಚೆನ್ನಾಗಿ ವಿಚಾರಮಾಡಿ. ನಿಮ್ಮ ವ್ಯವಹಾರದಲ್ಲಿ ಗೊಂದಲವಿಲ್ಲದೆ ಇರಲಿ, ಕಂದಾಚಾರ ಇಲ್ಲದೆ ಇರಲಿ.

ಹಲವಾರು ವರುಷಗಳ ಕಾಲ ಸಾಧನೆ ಮಾಡಿದ ಸಾಧು ಒಬ್ಬನಿದ್ದ. ಅವನು ಸಂಚರಿಸುತ್ತಿದ್ದಾಗ ಒಮ್ಮೆ ಶ್ರೀಮಂತನೊಬ್ಬನ ಮನೆಯಲ್ಲಿ ಆತಿಥ್ಯವನ್ನು ಸ್ವೀಕರಿಸಿ ರಾತ್ರಿ ಅಲ್ಲಿ ಕಳೆದನು.

ಕೋಣೆಯಲ್ಲಿ ಬೆಲೆಬಾಳುವ ಸಾಮಾನು ಇತ್ತು. ಅದನ್ನು ನೋಡುತ್ತಿದ್ದಂತೆ ಅದನ್ನು ಪಡೆಯಬೇಕೆಂಬ ಆಶೆ ಬಂತು. ಅದನ್ನು ತಡೆಯಲು ಆಗಲಿಲ್ಲ. ತಕ್ಷಣವೇ ಆ ಸಾಮಾನನ್ನು ತೆಗೆದುಕೊಂಡು ಮನೆಯಿಂದ ಹೊರಟ. ಅನಂತರ ಅವನು ಆಲೋಚನೆ ಮಾಡಿದ, ಅಯ್ಯೋ ನಾನೇನು ಮಾಡಿದೆ. ನಾನು ಕಳ್ಳನಾದೆನಲ್ಲ ಎಂದು ತಕ್ಷಣವೆ ಶ್ರೀಮಂತನಿಗೆ ಅದನ್ನು ಕೊಟ್ಟು ಕ್ಷಮಾಪಣೆ ಬೇಡಿದ. ನಾನು ಅದನ್ನು ತೆಗೆದುಕೊಳ್ಳುವಾಗ ನನ್ನ ಮನಸ್ಸು ಸ್ವಾಸ್ಥ್ಯವಿರಲಿಲ್ಲ ಎಂದ. ಶ್ರೀಮಂತ ಈ ವ್ಯವಹಾರವನ್ನು ನೋಡಿ ನಕ್ಕು, ಪರವಾಇಲ್ಲ ನನ್ನ ಮನೆಯಲ್ಲೆ ಅತಿಥಿಯಾಗಿರಿ ಎಂದ. ಆದರೆ ಸಾಧು ಇದಕ್ಕೆ ಒಪ್ಪಿಕೊಳ್ಳಲಿಲ್ಲ.

ಸ್ವಲ್ಪಕಾಲವಾದ ಮೇಲೆ ಈ ಸಾಧು ಆ ಪ್ರಾಂತ್ಯದಲ್ಲಿದ್ದ ಮತ್ತೊಬ್ಬ ಸಾಧುವನ್ನು ಕಂಡ ತನಗಾದ ಅನುಭವವನ್ನು ಅವನಿಗೆ ಹೇಳಿದ. ಮತ್ತೊಬ್ಬನಿಗೆ ಇದೇನೂ ಆಶ್ಚರ್ಯಕರವಾಗಿ ಕಾಣಲಿಲ್ಲ. ತಮ್ಮ, ನನಗೆ ಅದಕ್ಕೆ ಕಾರಣ ಗೊತ್ತಿದೆ. ಆ ಶ್ರೀಮಂತನ ಆತಿಥ್ಯದಿಂದ ನಿನ್ನ ದೇಹ ಮೈಲಿಗೆ ಆಯಿತು. ಆ ಶ್ರೀಮಂತ ಅಧರ್ಮದಿಂದ ಹಣವನ್ನು ಸಂಪಾದಿಸಿದ್ದ. ಅವನು ಸಂಪಾದಿಸಿದ ಪ್ರತಿಯೊಂದು ಕಾಸು ನಿರಪರಾಧಿಗಳನ್ನು ಸುಲಿದು ಸಂಪಾದಿಸಿದ್ದು. ನೀನು ಅವನ ಆತಿಥ್ಯವನ್ನು ಸ್ವೀಕರಿಸಿದ್ದರಿಂದ ಅವನ ಪಾಪ ನಿನ್ನನ್ನು ಪ್ರವೇಶಿಸಿತು. ಆದಕಾರಣವೇ ಅಂತಹ ಕಳ್ಳತನವನ್ನು ನೀನು ಮಾಡಿದೆ ಎಂದ.

ಮತ್ತೊಬ್ಬರಿಂದ ಬಹುಮಾನ, ಉಪಕಾರ ಅಥವಾ ಆತಿಥ್ಯವನ್ನು ಸ್ವೀಕರಿಸುವಾಗ ಜೋಪಾನವಾಗಿರಬೇಕು.

ಆರನೆ ನಿಯಮವೆ ಶೌಚ. ಇಲ್ಲಿ ಬಾಹ್ಯ ಮತ್ತು ಆಂತರಿಕ ಶೌಚ, ಶಾರೀರಿಕ ಮತ್ತು ಮಾನಸಿಕ ಶೌಚಗಳೂ ಸೇರಿವೆ. ನಿಮಗೆ ದೇಹದ ಶೌಚದ ವಿಷಯವಾಗಿ ಬೇಕಾದಷ್ಟು ಗೊತ್ತಿರುವುದರಿಂದ ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಆಂತರಿಕ ಶೌಚವನ್ನು ನಾವು ಅಭ್ಯಾಸ ಮಾಡಬೇಕಾಗಿರುವುದು ಅತಿಮುಖ್ಯ. ಅದನ್ನು ಬಾಹ್ಯದಲ್ಲಿ ಅನಂತರ ವ್ಯಕ್ತಪಡಿಸಬೇಕು. ಶೌಚ ಎಂದರೆ ಮತ್ತೊಬ್ಬರಿಗೆ ತೋರುವಂತೆ ಮೆರೆಯುವುದಲ್ಲ. ಒಳಗೆ ಶೌಚವಿಲ್ಲದೆ, ಹೊರಗೆ ಅದನ್ನು ತೋರ್ಪಡಿಸಿಕೊಂಡರೆ ಸಾಲದು. ಸುಮ್ಮನೆ ಬುರುಡೆ ಹೊಡೆಯುವುದನ್ನು ಕಲಿಯಬೇಡಿ. ವ್ಯವಸ್ಥಿತ ಪರಿಶುದ್ಧವಾದ ಮನಸ್ಸು, ನಮ್ಮ ದೇಹ, ಉಡುಪು ಮತ್ತು ಕ್ರಮವಾದ ಕರ್ಮ ಇವುಗಳ ಮೂಲಕ ವ್ಯಕ್ತವಾಗುವುದು.

ಮನಸ್ಸನ್ನು ಪರಿಶುದ್ಧವಾಗಿಟ್ಟಿರುವುದಕ್ಕಾಗಿ ಇತರರ ಒಳ್ಳೆಯದನ್ನು ಮಾತ್ರ ನೋಡಿ. ಅವರ ಗುಣಗಳನ್ನು ಮತ್ತು ಇತರರ ದೋಷಾರೋಪಣೆಗಳನ್ನು ಗಮನಿಸಬೇಡಿ. ಅನ್ಯಾಯ ದ್ವೇಷ ಅನುಮಾನ ಮತ್ತು ವೈರಿಯ ಭಾವನೆಗಳು ಮನಸ್ಸನ್ನು ಹಾಳು ಮಾಡುವುದು ಎಂಬುದನ್ನು ಗಮನದಲ್ಲಿಡಿ. ಸುಮ್ಮನೆ ಹರಟೆ ಹೊಡೆಯುವುದೂ ಕೂಡ ಮನಸ್ಸನ್ನು ಗಲೀಜು ಮಾಡುವುದು. ಮನಸ್ಸನ್ನು ಅಂತರ್ಮುಖಮಾಡಿ, ಅದನ್ನು ಚಂಚಲಗೊಳಿಸಲು ಹೊರಗಿನಿಂದ ಬರುವ ಪ್ರಚೋದನೆಗಳಿಗೆ ಗಮನಕೊಡದಂತೆ ಮಾಡಿ. ನಮ್ಮ ನಮ್ಮ ಮನಸ್ಸಿನಲ್ಲಿರುವ ಪವಿತ್ರ ಭಾವನೆಗಳನ್ನು ನಾವು ಬಾಹ್ಯದಲ್ಲಿ ವ್ಯಕ್ತಪಡಿಸಬೇಕು. ದೈವತ್ವಕ್ಕೆ ಎರಡನೆಯದೆ ಶೌಚ ಎಂದು ಹೇಳುತ್ತಾರೆ. ಇದೇ ಆಂತರಿಕ ಶೌಚ. ಮನೋಶೌಚ ಇರಬೇಕಾದರೆ ಅನಾಸಕ್ತಿ ಇರಬೇಕು. ನೀವು ವಸ್ತುಗಳಿಗೆ ಆಸಕ್ತರಾದರೆ ಮನಸ್ಸು ಕೊಳೆಯಾಗದೆ ವಿಧಿಯಿಲ್ಲ.

ಏಳನೆಯ ನಿಯಮವೆ ಸಂತೋಷ. ಜೀವನದಲ್ಲಿ ಯಾವಾಗಲೂ ಗೊಣಗಾಡುತ್ತಿರುವ ಮನುಷ್ಯ, ಯಾವುದಾದರೂ ಸಾರ್ಥಕವಾದ ವಸ್ತುವನ್ನು ಪಡೆದಿರುವನೆ ಎಂಬುದನ್ನು ತೋರಿ. ಒಬ್ಬ ಯಾವಾಗಲೂ ಅತೃಪ್ತನಾಗಿದ್ದರೆ, ಅವನು ಜೀವನದ ಯಾವ ಕಾರ್ಯಕ್ಷೇತ್ರದಲ್ಲಿಯೂ ಮುಂದುವರಿಯಲಾರ. ಕೆಲವರು ತೃಪ್ತಿ ಪ್ರಗತಿಗೆ ಆತಂಕವಾಗುವುದು ಎಂದು ಹೇಳು

ತ್ತಾನೆ. ಯಾರು ಜೀವನದಲ್ಲಿ ಯಾವುದಾದರೂ ಶ್ರೇಷ್ಠವಾಗಿರುವುದನ್ನು ಪಡೆದವರಲ್ಲಿ ಅತೃಪ್ತಿ ಲವಲೇಶವೂ ಇರಲಿಲ್ಲ. ಯಾರು ಅತೃಪ್ತರಾಗಿರುವರೋ ಅವರು ಸಾಧಾರಣ ವಾಗಿ ಸೋಮಾರಿಗಳು ಮತ್ತು ಯಾವುದನ್ನೂ ಪ್ರಾರಂಭಿಸದ ಮನೋಭಾವವುಳ್ಳವರು. ಅವರು ಎಲ್ಲಿಯೂ ಏನನ್ನೂ ಸಾಧಿಸುವುದಿಲ್ಲ. ತೃಪ್ತಿ ನಿಮ್ಮಲ್ಲಿರುವ ಪ್ರೇರಣೆಯನ್ನು ಕೊಲ್ಲುವುದೆಂದು ತಿಳಿಯಬೇಡಿ. ಅದು ಹಾಗೆ ಮಾಡುವುದಿಲ್ಲ. ಅತೃಪ್ತಿ ಯಾವಾಗಲೂ ನಮ್ಮನ್ನು ನಮ್ಮ ಕೀಳು ಸ್ವಭಾವಕ್ಕೆ ಕಟ್ಟಿಹಾಕುವುದು. ವಿವೇಕದಿಂದ ನಾವು ಸಂತೋಷ ವನ್ನು ರೂಢಿಸಿಕೊಳ್ಳಬೇಕು.

ತೃಪ್ತಿ ಎಂದರೆ ಏನೆಂದು ಭಾವಿಸುವಿರಿ. ನಮ್ಮಲ್ಲಿ ಬೇಕಾದಷ್ಟು ವಸ್ತುಗಳಿದ್ದರೆ ನಮಗೆ ತೃಪ್ತಿ ಬರುವುದು ಎಂದು ಭಾವಿಸಬೇಡಿ. ಇದೊಂದು ಮನಸ್ಸಿನ ದೃಷ್ಟಿ. ಅತೃಪ್ತಿ ಮನಸ್ಸಿನ ಆಂದೋಳನವನ್ನು ವ್ಯಕ್ತಪಡಿಸುವುದು. ಇದು ಚಿತ್ತದ ಸ್ವಾಸ್ಥವನ್ನು ಕೆಡಿಸು ವುದು. ಅತೃಪ್ತಿಯನ್ನು ನಿಮ್ಮಲ್ಲಿ ಉತ್ಪತ್ತಿಮಾಡಿಕೊಂಡು ಮನಸ್ಸನ್ನು ಹಾಳುಮಾಡಿ ಕೊಳ್ಳಬೇಡಿ. ಈಗ ನೀವು ಇರುವ ಸ್ಥಿತಿಯಲ್ಲಿ ತೃಪ್ತರಾಗಿ, ಸಂತೋಷಪಡಿ. ಇದರ ಮೇಲೆ ಮುಂದುವರಿಯಿರಿ. ಅತೃಪ್ತಿಯಿಂದ ಕೂಡಿದ ಮನಸ್ಸಿಗೆ ಶಾಂತಿಯೂ ಇಲ್ಲ, ಸ್ಥಿಮಿತವೂ ಇಲ್ಲ. ಯೋಗದಲ್ಲಿ ಇಂತಹ ವ್ಯಕ್ತಿ ಮುಂದುವರಿಯಲಾರ.

ಎಂಟನೆಯ ನಿಯಮವೇ ತಪಸ್. ಅನೇಕರು ತಪಸ್ಸು ಎಂಬ ಪದವನ್ನು ಕೇಳಿದ ಮೇಲೆ ನಡುಗುವರು. ತಪಸ್ಸು ಎಂದರೆ ಏನೂ ಆಹಾರ ಇಲ್ಲದೆ ಇರುವುದು, ಬಟ್ಟೆ ಇಲ್ಲದೆ ಇರುವುದು, ಏನೊ ಕೊಳಕಿನಲ್ಲಿ ಬಾಳುವುದು ಎಂದು ಭಾವಿಸುವರು. ಅದೇನಾದರೂ ಹಾಗಿದ್ದರೆ, ಪ್ರಪಂಚದಲ್ಲಿರುವ ಭಿಕ್ಷುಕರೆಲ್ಲ ಮಹಾಯೋಗಿಗಳಾಗಬೇಕಿತ್ತು. ತಪಸ್ ಎಂದರೆ ಜೀವನ ದ್ವಂದ್ವದಲ್ಲಿ ನಾವು ಕಾಪಾಡಿಕೊಂಡುಬಂದಿರುವ ಸಮತ್ವ, ಜೀವನದಲ್ಲಿ ಬರುವ ಜಯಾಪಜಯಗಳು, ರೋಗ ಮತ್ತು ಆರೋಗ, ಹೊಗಳಿಕೆ ಮತ್ತು ತೆಗಳಿಕೆ, ಒಂದುಗೂಡುವಿಕೆ ಮತ್ತು ಅಗಲಿಕೆ ಇವುಗಳನ್ನು ಸಹಿಸುವುದಕ್ಕೆ ತಪಸ್ಸನ್ನು ಮಾಡ ಬೇಕು. ನೀವು ಶಾಂತಿಯಿಂದ ಬಾಳಬೇಕಾದರೆ ಎರಡನ್ನೂ ಸ್ವೀಕರಿಸಲು ಸಿದ್ಧವಾಗಿರ ಬೇಕು. ತ್ಯಾಗದಿಂದ ಸಮತ್ವ ಬರುವುದು. ಅನಂತರ ಜನ ನಿಮ್ಮ ಕೊರಳಿಗೆ ಹಾರವನ್ನು ಹಾಕುವರೊ ಅಥವಾ ಹಳೆಯ ಎಕ್ಕಡವನ್ನು ಎಸೆಯುವರೊ ಇದನ್ನು ಗಮನಿಸುವುದಿಲ್ಲ.

ನಾವು ಯಾವ ಉದ್ಯೋಗ ಸಾಧನೆಗಾದರೂ ಸ್ವಲ್ಪ ತ್ಯಾಗವನ್ನು ಅಭ್ಯಾಸಮಾಡ ಬೇಕು. ನೆರೆಯ ಹಾವಳಿ ಅಥವಾ ಬರಗಾಲದಲ್ಲಿ ಪೀಡಿತರಾದ ಜನರಿಗೆ ಸಹಾಯ ಮಾಡುವ ಕೆಲಸವನ್ನು ತೆಗೆದುಕೊಂಡರೆ, ಕಾಲಕಾಲಕ್ಕೆ ಊಟ–ವಿಶ್ರಾಂತಿ ಇವುಗಳ ಕಡೆಗೆ ಗಮನ ಕೊಟ್ಟರೆ ಸೇವಾಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಬೇಕಾದರೆ, ನಿಮ್ಮ ಅನುಕೂಲಗಳನ್ನು ಬದಿಗೊಡ್ಡಬೇಕು. ತಪಸ್ ಎಂದರೆ ಇದೇ. ನಿಮ್ಮ ದೇಹ ಮತ್ತು ಮನಸ್ಸಿಗೆ ತರಬೇತು ಕೊಡಿ, ಇವುಗಳಾವುವೂ ಇಲ್ಲದೆ ಇರುವುದಕ್ಕೆ ಸಾಧ್ಯವಾಗುವಂತೆ. ಇದರಿಂದ ನಿಮಗೆ ಅದ್ಭುತವಾದ ಶಕ್ತಿ ಲಭಿಸುವುದು. ದೇಹ ಎನ್ನುವುದು ಒಂದು ಯಂತ್ರ. ಇದನ್ನು ಎಂತಹ ಜೀವನಕ್ಕೆ ಬೇಕಾದರೂ ಒಗ್ಗಿಸಬಹುದು. ಯೋಗ ಜೀವನದಲ್ಲಿ ನಡೆಯುವವನಿಗೆ ಇಂತಹ ಹೊಂದಿಕೊಳ್ಳುವುದು ಅತ್ಯಂತ ಆವಶ್ಯಕ.

ಯೋಗಿ ಆಂತರಿಕ ದೃಷ್ಟಿಯನ್ನು ರೂಢಿಸಿಕೊಳ್ಳಬೇಕು. ಸಾಧಾರಣವಾಗಿ ನಮ್ಮ ಮನಸ್ಸಿಗೆ ಏನಾದರೂ ಆಗಿದ್ದರೆ ಅದಕ್ಕೆ ಕಾರಣವನ್ನು ಒಳಗೆ ನೋಡದೆ ಹೊರಗೆ ನೋಡುತ್ತೇವೆ. ಆದರೆ ಯೋಗಿಯಾದರೊ ತನ್ನ ಅಂತರ್ಯದ ಕಡೆ ಗಮನಕೊಡುವನು. ಎಲ್ಲಾ ಸಮಯದಲ್ಲಿಯೂ ನಮನ್ನು ನಿಗ್ರಹಿಸಬೇಕು. ದೇಹ ಮನಸ್ಸು ಮತ್ತು ನಿಮ್ಮ ಇತರ ಅಭ್ಯಾಸವನ್ನು ನಿಗ್ರಹಿಸಿ. ಇದರಿಂದ ನಮ್ಮ ಶೀಲ ದೃಢವಾಗುವುದು. ಕೆಲವುವೇಳೆ ಬೇಕೆಂತಲೆ ನಿಮ್ಮ ಉಡುಪಿನ ವಿಷಯದಲ್ಲಿ ಅನಾದರವನ್ನು ತೋರಿ. ಜನ ಇದನ್ನು ನೋಡಿ ಹಾಸ್ಯಮಾಡಿದರೆ ಅದನ್ನು ಸಹಿಸಿಕೊಳ್ಳಿ. ನಿಮ್ಮ ಮಾತನ್ನು ಬಹಳವಾಗಿ ನಿಗ್ರಹಿಸಬೇಕಾಗಿದೆ. ನಿಮ್ಮ ಮಾತಿನಿಂದ ಯಾರಿಗೂ ನೋವಾಗದಂತೆ ನೋಡಿಕೊಳ್ಳಿ. ಇದನ್ನು ಆರ ತಿಂಗಳ ಕಾಲ ಅಭ್ಯಾಸಮಾಡಿ. ನೀವೇನಾದರೂ ಸೋತರೆ ನೀವೇ ಶಿಕ್ಷೆ ಯನ್ನು ಕೊಟ್ಟುಕೊಳ್ಳಿ. ಯೋಗಿಯಾಗಬೇಕಾದರೆ ಮಾತನ್ನು ನಿಗ್ರಹಿಸುವುದು ಅತ್ಯಾವಶ್ಯಕ. ವಾರದಲ್ಲಿ ಒಂದು ದಿನವಾದರೂ ಮೌನವನ್ನು ಆಚರಿಸಿ. ನಾವು ಅನೇಕವೇಳೆ ಬಹಳ ಮಾತನಾಡಿ, ನಮ್ಮ ಭಾವನೆಯನ್ನು ವ್ಯಕ್ತಪಡಿಸಲು ಇರುವ ಅನೇಕ ಮಾರ್ಗಗಳನ್ನು ತೆಯುತ್ತೇವೆ.

ಮಾತಿನ ನಿಗ್ರಹ ಯೋಗದಲ್ಲಿ ಅತ್ಯಂತ ಮುಖ್ಯವಾಗಿರುವುದು. ಇದನ್ನು ಅಭ್ಯಾಸ ಮಾಡಿ. ಇದನ್ನು ನೀವು ಅಭ್ಯಾಸಮಾಡಿದರೆ, ಪ್ರಪಂಚದ ಜಂಜಡದಲ್ಲಿ ನಾವು ನೋಡದ ಹಲವು ವಿಷಯಗಳು ನಮಗೆ ವ್ಯಕ್ತವಾಗುವುವು. ಸ್ವಾಮಿ ಪ್ರೇಮಾನಂದರು ಹೀಗೆ ಹೇಳುತ್ತಿದ್ದರು "ನೀವೆಲ್ಲ ಸುಮ್ಮನೆ ಮಾತಿನ ಮಲ್ಲರು. ನೀವು ಮಾತನಾಡುವುದು ಕಾಡುಹರಟೆ. ನಿಮ್ಮ ಬಾಯಿ ಮಾತನಾಡದಿರಲಿ. ನಿಮ್ಮ ಶೀಲ ಅದನ್ನು ವ್ಯಕ್ತಪಡಿಸಲಿ." ನೀವು ಮಾತನಾಡುವುದನ್ನು ಬಿಗಿಹಿಡಿದರೆ, ನಿಮ್ಮ ಶೀಲ ಅದನ್ನು ವ್ಯಕ್ತಪಡಿಸುವುದು. ಅತ್ಯಂತ ಆವಶ್ಯಕವಾದಾಗ ಮಾತ್ರ ಮಾತನಾಡಿ. ಸುಮ್ಮನೆ ಮಾತಿನ ಯಂತ್ರವಾಗಬೇಡಿ. ನಾವು ಮಾತನ್ನು ನಿಗ್ರಹಿಸಿದರೆ ಉಳಿದುದು ಸುಲಭವಾಗುವುದು.

ಮತ್ತೊಂದು ಸಲಿ ಸುಮ್ಮನೆ ಹರಟೆ ಹೊಡೆಯುತ್ತಿದ್ದ ಸಂನ್ಯಾಸಿಗಳಿಗೆ ಹೀಗೆ ಹೇಳಿದರು"ನೀವೇಕೆ ಇಷ್ಟೊಂದು ಗುಜುಗುಜುಗುಟ್ಟುತ್ತಿದ್ದೀರಿ ? ನಿಮಗೆ ಇನ್ನೂ ಜೇನುತುಪ್ಪ ಸಿಕ್ಕಿ ಎಂದು ಕಾಣುವುದು. ದುಂಬಿಗಳು ತಮಗೆ ಮಕರಂದ ಸಿಕ್ಕದವರೆಗೆ ಗುಯ್ಞ್ ಗುಡುತ್ತವೆ ಸಿಕ್ಕಿದ ಮೇಲೆ ಅದನ್ನು ಕುಡಿಯುವುದರಲ್ಲಿ ನಿರತವಾಗಿ ಮೌನವಾಗುವುವು."

ಮಾತನ್ನು ನಿಗ್ರಹಿಸುವುದಕ್ಕಾಗಿ ಮೌನವನ್ನು ಆಚರಿಸುವುದು ಕಷ್ಟವಲ್ಲ. ಮನಸ್ಸು ಸೂಕ್ಷ್ಮ ಸೂಕ್ಷ್ಮವಾದಂತೆಲ್ಲ ಬಾಹ್ಯವೇದನೆಗಳಿಂದ ಅದು ತನ್ನ ಸ್ವಾಸ್ಥ್ಯವನ್ನು ಕಳೆದುಕೊಳ್ಳುವುದು. ಯೋಗಿಗೆ ಎಲ್ಲಾ ಕಾರ್ಯಕ್ರಮಗಳಲ್ಲಿಯೂ ತಪಸ್ ಅತ್ಯಂತ ಆವಶ್ಯಕ.

ಒಂಭತ್ತನೆಯ ನಿಯಮವೇ ಸ್ವಾಧ್ಯಾಯ. ಶಾಸ್ತ್ರಗಳ ಅಧ್ಯಯನ ಮತ್ತು ಅಭ್ಯಾಸ ಇರಕು. ಪ್ರತಿದಿನವೂ ಒಂದು ನಿಯಮಿತ ಅಭ್ಯಾಸವನ್ನು ಇಟ್ಟುಕೊಳ್ಳಿ. ಅದನ್ನು ಬಿಡ ಮಾಡಿ. ಪ್ರತಿಯೊಂದೂ ಒಂದುಕ್ರಮಕ್ಕೆ ಅನುಸಾರವಾಗಿ ನಡೆಯುವಂತೆ ಮಾಡಿ. ಕ್ರಬದ್ಧ ಜೀವನದಿಂದ ನಾವು ಬೇಕಾದಷ್ಟನ್ನು ಸಾಧಿಸಬಹುದು. ಈ ಕ್ರಮವೇ

ನಿಮ್ಮನ್ನು ಅಭ್ಯಾಸಮಾಡುವಂತೆ ಪ್ರೇರೇಪಿಸುವುದು. ಅಧ್ಯಯನದ ಅಭ್ಯಾಸಬಲದಿಂದ ನಮಗೆ ಅದ್ಭುತವಾದ ಶಕ್ತಿ ಕರಗತವಾಗುವುದು. ನೀವು ಕಾಲಕಾಲಕ್ಕೆ ಅಭ್ಯಾಸವನ್ನು ಮಾಡದೆ ಇದ್ದರೆ, ಪಟ್ಟುಹಿಡಿಯದೆ ಇದ್ದರೆ, ಸ್ವಲ್ಪ ವ್ಯತ್ಯಾಸವಾದರೂ ಅಭ್ಯಾಸವನ್ನು ಬಿಟ್ಟುಬಿಡುವ ಹಾಗೆ ಇದ್ದರೆ, ನೀವು ಜೀವನದಲ್ಲಿ ಯಾವ ಮಹಾತ್ಕಾರ್ಯವನ್ನೂ ಸಾಧಿಸ ಲಾರಿರಿ. ಹೊರಗಿನ ಬದಲಾವಣೆಗೆ ತಕ್ಕಂತೆ ಹೋಗಬೇಡಿ. ನಿಮಗೆ ಬರುವ ಅನಾನುಕೂಲ್ಯ ಗಳು, ಆತಂಕಗಳು, ತೊಂದರೆಗಳು ಎಲ್ಲವನ್ನೂ ಎದುರಿಸಿ. ನೀವು ನನ್ನನ್ನು ಎಷ್ಟು ಮುತ್ತಿದರೂ, ನಾನು ಒಂದು ಅಂಗುಲವೂ ಹಿಂದೆ ಸರಿಯುವುದಿಲ್ಲ, ಪ್ರಪಂಚವೇ ನನಗೆ ವಿರೋಧವಾದರೂ ನಾನು ಅಭ್ಯಾಸವನ್ನು ಬಿಡುವುದಿಲ್ಲ ಎಂದು ಹೇಳಿ. ನಿಮ್ಮಲ್ಲಿ ಮಹಾ ನಾಯಕನಲ್ಲಿರುವ ಶಪಥ ಇರಬೇಕು. ಅನೇಕರಿಗೆ ಅವರು ಇಚ್ಛಿಸುವ ಪ್ರತಿಫಲ ಸಿಕ್ಕದೇ ಇರುವುದಕ್ಕೆ ಕಾರಣವೆ, ಅವರಲ್ಲಿ ದೃಢಸಂಕಲ್ಪವಿಲ್ಲದೇ ಇರುವುದು, ಮತ್ತು ಸ್ಥಿರವಾದ ಅಭ್ಯಾಸವಿಲ್ಲದೇ ಇರುವುದು. ನಾವೆಷ್ಟು ಮಾಡಿದ್ದೇವೆ ಅದಲ್ಲ ಮುಖ್ಯ, ಅದನ್ನು ನಿಯ ಮಿತ ಕಾಲದಲ್ಲಿ ಮಾಡಿರುವೆವೆ ಎಂಬುದು ನಮ್ಮ ಶೀಲವನ್ನು ರೂಪಿಸುವುದು.

ಅಭ್ಯಾಸಬಲಕ್ಕೆ ಒಂದು ಶ್ರೇಷ್ಠವಾದ ಉದಾಹರಣೆ ನನ್ನ ನೆನಪಿಗೆ ಬರುವುದು. ಅದೇ ಕಾಶಿಯಲ್ಲಿದ್ದ ತೊಂಬತ್ತು ವರುಷದ ವೃದ್ಧೆ. ನಲವತ್ತು ವರುಷಗಳಿಂದ ಪ್ರತಿದಿನ ಭಗವದ್ಗೀತೆಯನ್ನು ಪೂರ್ಣವಾಗಿ ಪಾರಾಯಣ ಮಾಡುತ್ತಿದ್ದಳು. ಏನಾದರೂ ತನ್ನ ಅಭ್ಯಾಸವನ್ನು ಬಿಡುತ್ತಿರಲಿಲ್ಲ. ಅವಳೇನು ದೊಡ್ಡ ಪಂಡಿತೆಯಲ್ಲ, ಅಥವಾ ಯೋಗಿ ನಿಯೂ ಅಲ್ಲ. ತಾನು ಸಾಧರಣ ಗೃಹಿಣಿ ಎಂದು ಹೇಳಿಕೊಳ್ಳುತ್ತಿದ್ದಳು. ಆದರೆ ಇಂತಹ ಯೋಗಿಯಾದರೂ ಇಚ್ಛಿಸುವ ಅದ್ಭುತವಾದ ಗುಣಗಳು ನನಗೆ ಅವಳಲ್ಲಿ ಕಂಡವು.ಕಾಶಿ ಯಲ್ಲಿ ಬೇಕಾದಷ್ಟು ತಂಟೆಮಾಡುವ ಕಪಿಗಳಿವೆ. ಒಂದು ದಿನ ಅವುಗಳಲ್ಲಿ ಒಂದು ಕಪಿ ವೃದ್ಧಳ ಕನ್ನಡಕವನ್ನು ತೆಗೆದುಕೊಂಡು ಹೋಯಿತು. ವೃದ್ಧೆಗೆ ಬಹಳ ಚಿಂತೆಯಾಯಿತು. ಪ್ರತಿದಿನವೂ ಮಾಡುತ್ತಿದ್ದ ಪಾರಾಯಣವನ್ನು ಮತ್ತೊಂದು ಕನ್ನಡಕ ಬರುವರೆಗೆ ನಿಲ್ಲಿಸಬೇಕಾಗುವುದು ಎಂದು. ಆದರೆ ಏನಾಯಿತು ಅದನ್ನು ಕೇಳಿದರೆ ನಿಮಗೆ ಆಶ್ಚರ್ಯ ವಾಗುವುದು. ಅಭ್ಯಾಸಬಲದಿಂದ ಅವಳಿಗೆ ಭಗವದ್ಗೀತೆಯೆಲ್ಲ ಬಾಯಿಗೆ ಬಂದಿತ್ತು. ಪುಸ್ತಕ ವಿಲ್ಲದೆ ಪಾರಾಯಣ ಮಾಡಿದಳು, ಕ್ರಮಬದ್ಧವಾದ ಅಭ್ಯಾಸದ ಬಲ ಇದು.

ನಿಮ್ಮ ಅಭ್ಯಾಸದಲ್ಲಿ ಇಂತಹ ಕ್ರಮಬದ್ಧತೆ ಇದ್ದರೆ ಮಾಡುವುದೇನಾದರೂ ಆಗಿರಿ, ಅದು ಬೈಬಲ್, ಖುರಾನ್ ಮತ್ತು ಇತರ ಶಾಸ್ತ್ರಗಳಿಂದ ಪಾರಾಯಣ ಮಾಡುವುದಿರ ಬಹುದು, ಅದು ಪ್ರಾರ್ಥನೆ, ಜಪ, ಧ್ಯಾನ ಇರಬಹುದು, ನೀವು ಜಯಪ್ರದರಾಗುವುದ ರಲ್ಲಿ ಸಂದೇಹವಿಲ್ಲ. ಹನ್ನೆರಡು ವರುಷಗಳ ಕಾಲ, ಪ್ರತಿದಿನವೂ ಬೆಳಗ್ಗೆ ದೇವರ ಹೆಸರನ್ನು ಐದು ವೇಳೆಯಾದರೂ ಉಚ್ಚರಿಸಿ. ಇದನ್ನು ಒಂದು ದಿನವೂ ಬಿಡದೆ ಮಾಡಿರೆ ನಿಮಗೆ ಫಲ ಪ್ರಾಪ್ತಿಯಾಗುವುದು.

ಹತ್ತನೆಯ ಕೊನೆಯ ನಿಯಮವೇ ಈಶ್ವರ ಪ್ರಣಿಧಾನ. ಎಂದರೆ ಈಶ್ವರನಲ್ಲಿ ಶರಣಾಗುವುದು. ಯಾವಾಗಲೂ ನಿಮ್ಮನ್ನು ಯಾವುದೊ ಅತೀಂದ್ರಿಯಶಕ್ತಿ ನಡೆಸುತಿ

ಎಂದು ಭಾವಿಸಿ. ಅದನ್ನು ದೇವರೆನ್ನಿ, ಪರಮಾತ್ಮನೆನ್ನಿ ಅಥವಾ ನಿಮಗೆ ಏನು ತೋಚಿದರೆ ಹಾಗೆ ಹೇಳಿ. ಆ ಪರಮಾತ್ಮನ ಕೃಪೆಯಿಂದ ಮಾತ್ರ ಈ ಮಾರ್ಗದಲ್ಲಿ ಮುಂದುವರಿಯುತ್ತಿರುವುದು ಎಂದು ಯೋಚಿಸಿ. ಅದಕ್ಕೆ ನಿಮ್ಮ ಸಾಧನೆ ಮತ್ತು ಅದರಿಂದ ಬರುವ ಪ್ರತಿಫಲವನ್ನೆಲ್ಲ ಅರ್ಪಿಸಿ. ನಿಮ್ಮ ಸಾಧನೆಯಿಂದ ಬರುವ ಫಲವನ್ನು ನೀವು ಇಟ್ಟುಕೊಂಡರೆ ಅದು ನಿಮ್ಮನ್ನು ಬಂಧನಕ್ಕೆ ಒಳಗುಮಾಡುವುದು. ಅದರಿಂದ ಏನಾದರೂ ಒಳ್ಳೆಯದು ಬಂದಿದ್ದರೆ ಅದು ಎಲ್ಲರಿಗೂ ಹೋಗಲಿ ಅದರಿಂದ ನೀವೇನನ್ನೂ ಇಚ್ಛಿಸಬೇಡಿ.

ಪರಮೇಶ್ವರನಿಗೆ ನಿಮ್ಮ ಸಾಧನಾಪಲವನ್ನು ಅರ್ಪಿಸಿ. ನಿಮಗೆ ಬಂದಿರುವುದಕ್ಕೆ ಹೆಮ್ಮೆ ಪಡಬೇಕು. ನಾನು ಎಷ್ಟು ಮುಂದುವರಿದಿದ್ದೇನೆ ಎಂದು ಲೆಕ್ಕಾಚಾರ ಹಾಕುತ್ತಿರಬೇಡಿ. ಪ್ರತಿದಿನವೂ ಎಷ್ಟು ಬೇರುಬಿಟ್ಟಿದೆ ಎಂಬುದನ್ನು ನೋಡುವುದಕ್ಕೆ ಗಿಡ ತೆಗೆಯುತ್ತಿದ್ದವನಂತೆ ಇರಬೇಡಿ. ಒಂದು ಸಲಿ ಸ್ವಾಮಿಗಳೊಬ್ಬರು ತನ್ನ ಬಾಲ್ಯಸ್ನೇಹಿತನನ್ನು ಕಂಡರು. ಆತ ನೀನು ಸಾಧುಸಂಘಕ್ಕೆ ಸೇರಿ ಏನು ಗಳಿಸಿದೆ ಎಂದು ಕೇಳಿದ. ಅದಕ್ಕೆ ಸ್ವಾಮಿಗಳು "ಭಾಯಿ, ನಾನಿನ್ನೂ ಲೆಕ್ಕಾಚಾರ ಹಾಕಿಲ್ಲ. ನನಗೆ ಎಷ್ಟು ಬಂದಿದೆಯೊ ಗೊತ್ತಿಲ್ಲ" ಎಂದರು.

ರಾಜಯೋಗದಲ್ಲಿ ನಾವು ಅನುಸರಿಸಬೇಕಾದ ಹತ್ತು ನಿಯಮಗಳು ಇವು. ಯೋಗ ಜೀವನದಲ್ಲಿ ತನ್ನ ಮೂರುವರೆ ಮೊಳದ ನೆಲವನ್ನು ರಕ್ಷಿಸುವುದಕ್ಕೆ ಇವು ಬೇಕು. ಇದೇ ನೀತಿಯ ತಳಹದಿ. ನಿಮಗೆ ಯೋಗವನ್ನು ಅಭ್ಯಾಸಮಾಡುವುದಕ್ಕೆ ಇಚ್ಛೆ ಇಲ್ಲದೆ ಇದ್ದರೂ, ಯಾವ ಕಾರ್ಯಕ್ಷೇತ್ರದಲ್ಲಿ ಇದ್ದರೂ ಇದರಿಂದ ಪ್ರಯೋಜನವಿದೆ. ಯೋಗಿಗಾದರೋ, ಅಭ್ಯಾಸಮಾಡದೆ ಮುಂದುವರೆಯುವುದಕ್ಕೆ ಆಗುವುದೇ ಇಲ್ಲ ಎಂದು ಹೇಳಲೇಬೇಕಾಗಿಲ್ಲ.

ಅನಂತರ ಬರುವುದೇ ಪೂರ್ವಸಿದ್ಧತೆಗಳು. ಇದೇ ರಾಜಯೋಗದ ಮೂರು ಮತ್ತು ನಾಲ್ಕನೆ ಮೆಟ್ಟಲುಗಳು. ಇವೇ ಆಸನ ಮತ್ತು ಪ್ರಾಣಾಯಾಮ.

೨

ನಾವು ಕಳೆದಸಲಿ, ಸಾಧಕ ತನ್ನ ಕರ್ಮಕ್ಷೇತ್ರದ ಸುತ್ತಲೂ ಹತ್ತು ಕಂಬಗಳ ಸಹಾಯದಿಂದ ಕಟ್ಟಿದ ರಕ್ಷಣಾಬೇಲಿ ಆದಮೇಲೆ, ಪೂರ್ವಸಿದ್ಧತೆಗಳನ್ನು ಕೈಕೊಳ್ಳಬೇಕಾಗುವುದು ಎಂದು ಹೇಳಿದೆವು. ಬೇಲಿಯನ್ನು ಹಾಕಿದ ಮೇಲೆ ಒಳಗೆ ಇರುವ ನೆಲವನ್ನು ಸರಿಮಾಡಲು ಪ್ರಯತ್ನಿಸುವನು.

ಬೇಸಾಯದ ಉದಾಹರಣೆಯನ್ನು ತೆಗೆದುಕೊಳ್ಳಬಹುದು. ನೆಲ ಫಲವತ್ತಾಗಿಲ್ಲದೆ ಇರಬಹುದು. ಅಲ್ಲಿ ಬೇಕಾದಷ್ಟು ಕಲ್ಲುಬಂಡೆ ಪಾಳುಮನೆ ಇತ್ಯಾದಿ ಇರಬಹುದು. ಬೇಸಾಯಕ್ಕೆ ನೆಲ ಸಾಕಷ್ಟು ಫಲವತ್ತಾಗಿಲ್ಲದೇ ಇರಬಹುದು. ಆಗ ಏನು ಮಾಡಬೇಕು? ರೈತ ಕಲ್ಲನ್ನು ತೆಗೆಯುವನು, ಆಳವಾಗಿ ಉಳುವನು, ಹಳ್ಳಕೊಳ್ಳಗಳಿದ್ದರೆ ಅದನ್ನು ತುಂಬುವನು. ದಿಣ್ಣೆ ಇದ್ದರೆ ಅದನ್ನು ನೆಲಸಮ ಮಾಡುವನು. ಇದನ್ನೆಲ್ಲ ಅವನು ಉತ್ತುವುದಕ್ಕೆ ಮುಂಚೆ ಮಾಡುವನು. ಉತ್ತುವುದಕ್ಕೆ ನೆಲವನ್ನು ಹದಮಾಡುವುದನ್ನೇ ಯೋಗಶಾಸ್

ದಲ್ಲಿ ಆಸನ ಮತ್ತು ಪ್ರಾಣಾಯಾಮ ಎಂದು ಹೇಳುತ್ತಾರೆ.

ದೇಹವನ್ನು ಯೋಗಾಭ್ಯಾಸಕ್ಕೆ ಯೋಗ್ಯವನ್ನಾಗಿ ಮಾಡಬೇಕು. ದೈಹಿಕವಾಗಿ ಯಾವ ವಿಕಾರ, ಊನ ಮತ್ತು ದುರ್ಬಲವಿದ್ದರೂ ಅವನು ಯೋಗಿ ಜೀವನಕ್ಕೆ ಅನರ್ಹ. ಯೋಗಿಯಾಗಬೇಕೆಂದು ಬಯಸುವವನು ಆಸನ ಎಂದರೆ ಸರಿಯಾಗಿ ಕುಳಿತುಕೊಳ್ಳು ವುದನ್ನೂ, ಪ್ರಾಣಾಯಾಮ ಎಂದರೆ ಸರಿಯಾಗಿ ಉಸಿರಾಡುವುದನ್ನೂ ಅಭ್ಯಾಸಮಾಡ ಬೇಕು.

ಆಸನ ಎಂದರೆ ಧ್ಯಾನಕ್ಕೆ ಕುಳಿತುಕೊಳ್ಳುವ ಸ್ಥಿತಿ. ನಾವು ಸರಿಯಾದ ಆಸನದಲ್ಲಿ ಕುಳಿತರೆ, ನಮಗೆ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಪ್ರಯೋಜನವಾಗುವುದು. ನಾವು ನೇರವಾಗಿ ಕುಳಿತುಕೊಂಡರೆ ಯಾವ ಆತಂಕವೂ ಇಲ್ಲದೆ ಅಂಗಾಂಗಗಳು ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದು. ನಾವು ವಿಕಾರವಾದ ಸ್ಥಿತಿಯಲ್ಲಿ ಕುಳಿತರೆ ನಮ್ಮ ಒಳಗೆ ಇರುವ ಅಂಗಾಂಗಗಳು ಒಂದಕ್ಕೊಂದು ಒತ್ತುತ್ತಿರುತ್ತವೆ. ಪರಸ್ಪರ ಘರ್ಷಣೆ ಆಗುವುದು. ಒಳಗಿನ ಅಂಗಾಂಗಗಳು ಕ್ಷೇಮವಾದ ಸ್ಥಿತಿಯಲ್ಲಿ ಇಲ್ಲ. ನಾವು ಸರಿಯಾದ ಆಸನದಲ್ಲಿ ಕುಳಿತರೆ ನಮ್ಮ ದೇಹದಲ್ಲಿ ರಕ್ತಚಲನೆ ಮತ್ತು ಜೀರ್ಣ ಕೋಶ ಸರಿಯಾಗಿ ಕೆಲಸ ಮಾಡುವುದು. ಆದಕಾರಣ ದೇಹದ ಆರೋಗ್ಯ ದೃಷ್ಟಿಯಿಂದಲಾದರೂ ನಾವು ಸರಿಯಾದ ಆಸನದಲ್ಲಿ ಕುಳಿತುಕೊಳ್ಳಬೇಕು.

ಯಾರು ನೇರವಾಗಿ ಕತ್ತನ್ನು ಎತ್ತಿ ಕುಳಿತುಕೊಳ್ಳುವನೊ ಮತ್ತು ನಿಂತು ಕೊಳ್ಳು ವನೊ ಅವನು ಮಾನಸಿಕವಾಗಿ ಸಮಸ್ಯೆಗಳನ್ನು ಎದುರಿಸುವುದಕ್ಕೆ ಇತರರಿಗಿಂತ ಸಿದ್ಧನಾಗಿ ರುವನು. ಅವನಲ್ಲಿ ಹೆಚ್ಚು ಆತ್ಮಶ್ರದ್ಧೆ ಇದೆ. ಇತರರಿಗೂ ಅದನ್ನು ಕೊಡಬಲ್ಲ. ಯಾವಾಗಲಾದರೂ ನೀವು ಕಂಗೆಟ್ಟಿರುವಾಗ ವ್ಯಥೆಯಲ್ಲಿರುವಾಗ ನಿಮಗೆ ಸರಿಯಾಗಿ ಕುಳಿತು ಕೊಳ್ಳಲು ಆಗುವುದಿಲ್ಲ ಎಂಬುದನ್ನು ಗಮನಿಸಿರುವಿರೇನು ? ಆಗ ದೇಹ ಯಾವುದೋ ಮೂಲೆಗೆ ವಾಲುವುದು. ಆದರೆ ನಿಮಗೆ ಏನಾದರೂ ಸಂತೋಷದ ಸುದ್ದಿ ಬಂದರೆ ತಕ್ಷಣವೇ ನೇರವಾಗಿ ಕುಳಿತು ಕೊಳ್ಳುವಿರಿ. ಇದು ಏತಕ್ಕೆ ಗೊತ್ತೆ ? ಶುಭವಾದ ವಾರ್ತೆ ನಿಮ್ಮ ಮನಸ್ಸಿನಲ್ಲಿ ಹೊಸ ಶಕ್ತಿ ಸಂಚಾರವಾಗುವಂತೆ ಮಾಡುವುದು. ನಿಮ್ಮ ನಿರುತ್ಸಾಹವನ್ನು ಹೊಡೆದೋಡಿಸುವುದು. ನಿಮ್ಮ ಮನಸ್ಸನ್ನು ಉರ್ಧ್ವಗಾಮಿಯಾಗಿ ಮಾಡಬೇಕಾದರೆ, ಸರಿಯಾದ ಸ್ಥಿತಿಯಲ್ಲಿ ಕುಳಿತುಕೊಳ್ಳಬೇಕು.

ಬೆನ್ನು ಮೂಳೆಯ ಒಳಗೆ ಇರುವ ಕಾಲುವೆಯಲ್ಲಿ ಕುಂಡಲಿನಿ ಶಕ್ತಿ ಎಂಬ ಸೂಕ್ಷ್ಮ ಶಕ್ತಿ ಇದೆ ಎಂದು ಯೋಗಿಗಳು ಹೇಳುತ್ತಾರೆ. ಬೆನ್ನು ಮೂಳೆಯನ್ನು ಸರಿಯಾಗಿಟ್ಟರೆ ಈ ಶಕ್ತಿಗೆ ಆತಂಕ ಇರುವುದಿಲ್ಲ. ಆಧ್ಯಾತ್ಮಿಕವಾಗಿ ಒಬ್ಬ ಜಾಗ್ರತನಾದರೆ, ಥರ್ಮಾ ಮೀಟರಿನಲ್ಲಿ ಪಾದರಸ ಮೇಲೇಳುವಂತೆ ಈ ಶಕ್ತಿ ಮೇಲೇಳುವುದು. ಈ ಶಕ್ತಿ ಯಾವ ಯಾವ ಮಟ್ಟಕ್ಕೆ ಏಳುವುದೊ ಅಲ್ಲಿ ಅಂತಂಥಹ ಅನುಭವವನ್ನು ಪಡೆಯುತ್ತಾನೆ. ಬೆನ್ನು ಮೂಳೆಯ ಮಧ್ಯದಲ್ಲಿರುವ ಶಕ್ತಿಯನ್ನು ಜಾಗ್ರತಗೊಳಿಸುವ ಸಾಧನೆಗಳನ್ನು ಅಭ್ಯಾಸ ಮಾಡಬೇಕಾದರೆ ಆಸನಸಿದ್ಧನಿರಬೇಕು. ಆದಕಾರಣ ಯೋಗದ ವಿದ್ಯಾರ್ಥಿಗೆ ಸರಿಯಾದ

ಆಸನ ಅತ್ಯಾವಶ್ಯಕ. ಬೆನ್ನುಮೂಳೆ ನೇರವಾಗಿದ್ದರೂ, ಅದೇನಾದರೂ ನಿಂತಿರುವ ಅಥವಾ ಮಲಗಿರುವ ಸ್ಥಿತಿಯಲ್ಲಿದ್ದರೆ, ಮನೋಚಂಚಲತೆ ಮತ್ತು ನಿದ್ರೆ ಬರುವುದು. ಆದಕಾರಣವೇ ಧ್ಯಾನಕ್ಕೆ, ಕುಳಿತುಕೊಳ್ಳುವುದನ್ನು ಹೇಳುತ್ತಾರೆ.

ಧ್ಯಾನಕ್ಕೆ ನೇರವಾಗಿ ಕುಳಿತುಕೊಳ್ಳಬೇಕು. ಬೆನ್ನೆಲುಬು ಬಾಗಿರಬಾರದು. ಇಂಡಿಯಾ ದೇಶದಲ್ಲಿ ಕಾಲಮೇಲೆ ಕಾಲನ್ನು ಹಾಕಿಕೊಂಡು ಕುಳಿತುಕೊಳ್ಳುವುದು ರೂಢಿ. ಆ ಸ್ಥಿತಿಯಲ್ಲಿ ಅವರು ಹಲವು ಗಂಟೆಗಳ ಕಾಲ ನಿರಾಯಾಸವಾಗಿ ಇರಬಲ್ಲರು. ಪಾಶ್ಚಾತ್ಯ ದೇಶದಲ್ಲಾದರೆ ಕಾಲನ್ನು ಕೆಳಗೆ ಬಿಟ್ಟುಕೊಂಡು ಕುರ್ಚಿಯ ಮೇಲೆ ಕುಳಿತುಕೊಳ್ಳಬಹುದು.

ಪತಂಜಲಿ ಸ್ಥಿರವಾಗಿ, ಸುಖವಾಗಿ ಕುಳಿತುಕೊಳ್ಳುವುದನ್ನು ಆಸನ ಎನ್ನುವನು. ಆ ಸ್ಥಿತಿಯಲ್ಲಿ ಅತ್ಯಂತ ಕಡಿಮೆ ಶಕ್ತಿವ್ಯಯದಿಂದ ಅತ್ಯಂತ ಹೆಚ್ಚು ಪ್ರಯೋಜನವನ್ನು ಪಡೆಯಬಹುದು. ಒಬ್ಬ ದೀರ್ಘಕಾಲ ಯಾವ ಅನಾನುಕೂಲವೂ ಇಲ್ಲದೆ ಕುಳಿತಿರಬಹು ದಾದ ರೀತಿಯಲ್ಲಿರಬಹುದು. ಬಲಾತ್ಕಾರ ವಿಫಲವಾಗುವುದು. ಧ್ಯಾನ ಮಾಡುವುದಕ್ಕೆ ಅತಿ ಗಟ್ಟಿಯೂ ಅಲ್ಲ, ಅತಿ ಮೃದುವೂ ಇಲ್ಲದ ಆಸನದ ಮೇಲೆ ಕುಳಿತುಕೊಳ್ಳಬೇಕು. ಸೊಂಟ, ಎದೆ, ಕತ್ತು, ತಲೆ ನೇರವಾಗಿರಬೇಕು. ದೇಹಪಕ್ಕೆಲಬಿನ ಕುಳಿತಿರಬೇಕು. ನಿಮ್ಮ ತೊಡೆಯ ಮೇಲೆ ಇರುವ ಎಡ ಅಂಗೈ ಮೇಲೆ ನಿಮ್ಮ ಬಲ ಅಂಗೈಯನ್ನು ಇಡಿ. ಕಣ್ಣು ನೇರವಾಗಿ ನೋಡುತ್ತಿರಬೇಕು. ಇಲ್ಲಿ ಯಾವ ಬಲಾತ್ಕಾರವೂ ಇರಕೂಡದು, ಸ್ವಾಭಾವಿಕ ವಾಗಿರಬೇಕು. ಕಣ್ಣನ್ನು ಬೇರೆ ವಿಧವಾಗಿ ನೋಡುವುದನ್ನು ವಿಧಿಸುವರು. ಆದರೆ ಪ್ರಾರಂಭಸ್ಥಿತಿಯಲ್ಲಿರುವವನಿಗೆ ಸಡಿಲವಾಗಿರುವ ಈ ಸ್ಥಿತಿ ಸಾಕು.

ಸಾಧ್ಯವಾದರೆ ಪೂರ್ವದಿಕ್ಕಿಗೆ ತಿರುಗಿ ಕುಳಿತುಕೊಳ್ಳಿ. ಇದಕ್ಕೆ ಕಾರಣ ಭೂಮಿ ಆ ದಿಕ್ಕಿನಲ್ಲಿ ಸುತ್ತುತ್ತಿರುವುದು. ಅದರಿಂದ ನಾವು ಪ್ರಯೋಜನವನ್ನು ಪಡೆಯಬಹುದು. (ರೈಲು ಅಥವಾ ಯಾವುದಾದರೂ ಚಲಿಸುವ ಯಂತ್ರದಲ್ಲಿ ಹೋಗುತ್ತಿರುವಾಗ ಸಂಚಾರ ಮಾಡುವ ದಿಕ್ಕಿಗೆ ಕುಳಿತುಕೊಳ್ಳುವುದು ರೂಢಿ) ಪೂರ್ವಕ್ಕೆ ತಿರುಗಿ ಕುಳಿತುಕೊಳ್ಳುವುದಕ್ಕೆ ಆಗದೆ ಇದ್ದರೆ ಉತ್ತರಕ್ಕೆ ತಿರುಗಿ. ಉತ್ತರ ದಿಕ್ಕಿನ ಕಡೆ ಯಾವಾಗಲೂ ಮ್ಯಾಗ್ನೆಟಿಕ್ ಶಕ್ತಿ ಹರಿಯುತ್ತಿರುವುದು. ರೈಲಿನಲ್ಲಿ ನಿಮಗೆ ನಿದ್ರಿಸುವದಕ್ಕೆ ಸಂಚಾರ ಮಾಡುವ ದಿಕ್ಕಿಗೆ ನಿಮ್ಮ ಸೀಟನ್ನು ಅಲ್ಲಿ ಕೆಲಸ ಮಾಡುವವನು ಅಣಿ ಮಾಡಿರುವನು. ನೀವು ನಿದ್ರಿಸುವಾಗಲೂ ಇದನ್ನೇ ಅನುಸರಿಸಿ ಆಕರ್ಷಣ ಶಕ್ತಿಯೆಲ್ಲಾ ಉತ್ತರಧ್ರುವದ ಕಡೆ ಹರಿಯುತ್ತಿರುವುದು. ನೂರಾರು ಚಂಡುಗಳನ್ನು ನಮ್ಮ ತಲೆಯ ಮೇಲೆ ದಕ್ಷಿಣದಿಂದ ಉತ್ತರಕ್ಕೆ ಎಸೆಯುವಂತೆ ಇದ್ದರೆ ಅದಕ್ಕೆ ಬೆನ್ನನ್ನು ತೋರುವುದು ಅದನ್ನು ಎದುರಿಸುವುದಕ್ಕಿಂದ ಮೇಲಲ್ಲವೆ. ಆದಕಾರಣ, ಧ್ಯಾನಿಸುವುದಕ್ಕಾಗಲೀ, ನಿದ್ರಿಸುವುದಕ್ಕಾಗಲೀ ಉತ್ತರದಿಕ್ಕಿನ ಕಡೆ ತಲೆ ಹಾಕಿ. (ಆಸನದ ವಿಷಯದಲ್ಲಿ ಪತಂಜಲಿ ಯೋಗಸೂತ್ರ II ಅಧ್ಯಾಯ, ಸೂತ್ರ 46–48 ನೋಡಿ. ಭಗವದ್ಗೀತೆಯಲ್ಲಿ VI ಅಧ್ಯಾಯ 11–13 ಶ್ಲೋಕ ನೋಡಿ. ಸ್ವಾಮಿ ವಿವೇಕಾನಂದರ ರಾಜಯೋಗವನ್ನು ಪಠ್ಯ ಪುಸ್ತಕದಂತೆ ಓದಿ)

ಹಟಯೋಗ ಎಂಬ ಗ್ರಂಥದಲ್ಲಿ ಹಲವು ಆಸನಗಳನ್ನು ಹೇಳುತ್ತಾರೆ. ಆದರೆ ಈ

ಆಸನಗಳು ಕೇವಲ ಆರೋಗ್ಯಕ್ಕಾಗಿ ಮತ್ತು ನಮ್ಮ ಪ್ರತಿಯೊಂದು ಮಾಂಸಖಂಡದ ಮತ್ತು ನರಗಳ ಮೇಲೆ ನಮಗೆ ಇದರಿಂದ ಸ್ವಾಧೀನ ಬರುವುದು. ನಮಗೆ ಕೇಳಿ ಬರುವ ಅದ್ಭುತ ಅಭ್ಯಾಸಗಳನ್ನು ಹಟಯೋಗದಲ್ಲಿ ಪರಿಣತರಾದವರು ಮಾಡುವರು. ರಾಜಯೋಗವನ್ನು ಅಭ್ಯಾಸ ಮಾಡುವವನು ಇವುಗಳನ್ನೆಲ್ಲ ಅನುಷ್ಠಾನ ಮಾಡಬೇಕಾಗಿಲ್ಲ. ಹಟಯೋಗದಲ್ಲಿ ನಮ್ಮ ಲಕ್ಷ್ಯ ದೇಹವಾಗುವುದು ಮನಸ್ಸಲ್ಲ. ರಾಜಯೋಗದಲ್ಲಿ ಯೋಗಿ ತನ್ನ ದೇಹಭಾವ ವನ್ನು ಮರೆಯಲು ಯತ್ನಿಸುವನು. ದೇಹಭಾವನೆ ಮಾನಸಿಕ ಏಕಾಗ್ರತೆಗೆ ಭಂಗ ತರು ವುದು. ಯಾವ ವಿಧವಾದ ದೇಹ ಭಾವನೆಯಿಂದ ಬಾಧಿತರಾದರೂ ಧ್ಯಾನ ಮಾಡುವುದಕ್ಕೆ ಆಗುವುದಿಲ್ಲ. ನಮ್ಮ ಭೌತಿಕ ದೇಹ ಸ್ಥಿರವಾದ ಸುಖವಾದ ಸ್ಥಿತಿಯಲ್ಲಿದ್ದರೆ ನಮ್ಮ ಮನಸ್ಸು ಅದರ ಮೇಲೆ ಹೋಗುವುದು ಬಹಳ ಕಡಿಮೆಯಾಗುವುದು. ಆಗ ಮನಸ್ಸಿಗೆ ಯಾವ ಅಡಚಣೆಯೂ ಇರುವುದಿಲ್ಲ. ನಿಷ್ಠಾವಂತ ಆಧ್ಯಾತ್ಮಿಕ ಜೀವಿ, ತನ್ನಲ್ಲಿರುವ ಅದ್ಭುತ ಶಕ್ತಿಗಳನ್ನು ಪ್ರದರ್ಶಿಸಲು ಇಚ್ಛಿಸುವುದಿಲ್ಲ.

ಪ್ರಾಣಾಯಾಮದ ಗುರಿ ಮನುಷ್ಯನಲ್ಲಿರುವ ಮಾನಸಿಕ ಶಕ್ತಿಯನ್ನೆಲ್ಲ ನಿಗ್ರಹಿಸು ವುದು. ಪ್ರಾಣ ಎಂದರೆ ಶಕ್ತಿ, ಯಮ ಎಂದರೆ ನಿಗ್ರಹ. ಪ್ರಾಣಾಯಾಮಕ್ಕೆ ಎರಡು ಭಾಗಗಳಿವೆ. ಒಂದು ಬಾಹ್ಯ ಮತ್ತೊಂದು ಆಂತರಿಕ. ಆಂತರಿಕ ಪ್ರಾಣಾಯಾಮ ಎಂದರೆ, ಮನುಷ್ಯನಲ್ಲಿರುವ ಪ್ರಾಣ ಮತ್ತು ಆಧ್ಯಾತ್ಮಿಕ ಶಕ್ತಿಯನ್ನು ನಿಗ್ರಹಿಸುವುದು. ಬಾಹ್ಯ ಪ್ರಾಣಾಯಾಮ ಎಂದರೆ, ಬಾಹ್ಯ ಪ್ರಕೃತಿಯನ್ನು ನಿಗ್ರಹಿಸುವುದಕ್ಕೆ ಮಾಡುವ ಪ್ರಾಣಾಯಾಮ. ಬಾಹ್ಯ ಪ್ರಕೃತಿ ನಿಯಮಗಳು ನಮ್ಮಿಂದ ಹೊರಗೆ ಇವೆ. ಅವನ್ನು ಆಂತರಿಕ ಪ್ರಾಣಾಯಾಮದಿಂದ ಮಾತ್ರ ನಿಗ್ರಹಿಸಬಹುದು.

ಪ್ರಾಣ ಎಂದರೆ ವ್ಯಕ್ತಿಯಲ್ಲಿರುವ ವಿಶ್ವಶಕ್ತಿಯ ಅಂಶ. ಈ ಪ್ರಾಣಶಕ್ತಿಯೇ ನಮ್ಮ ದೇಹ, ಇಂದ್ರಿಯ ಮತ್ತು ಆಧ್ಯಾತ್ಮಿಕದ ಹಿಂದೆ ಕೆಲಸ ಮಾಡುತ್ತಿರುವುದು. ಪ್ರಾಣವೇ ನಿಮ್ಮ ಮಾತುಕತೆಗಳ ಮೂಲಕ ವ್ಯಕ್ತವಾಗುತ್ತಿರುವುದು. ಅದೆಲ್ಲೋ ಒಂದು ಕಡೆ ಇದೆ ಎಂದು ಭಾವಿಸ ಬೇಡಿ. ಅದೇ ಮೂಲಶಕ್ತಿ, ಅವ್ಯಕ್ತವಾದುದು, ನಿರ್ವಿಕಾರವಾಗಿರುವುದು. ಪ್ರಪಂಚದಲ್ಲಿ ಒಂದು ವಿಶ್ವಶಕ್ತಿ ಇದೆ. ಮಾನವದೇಹ ಅದನ್ನು ವ್ಯಕ್ತಗೊಳಿಸುವ ಶ್ರೇಷ್ಠ ವಸ್ತುವಾಗಿದೆ. ಈ ಪ್ರಾಣವೇ ಆಕರ್ಷಣ ಶಕ್ತಿ, ವಿದ್ಯುತ್ ಶಕ್ತಿ ಮುಂತಾದವುಗಳಂತೆ ಪ್ರಪಂಚದಲ್ಲಿ ವ್ಯಕ್ತವಾಗುತ್ತಿರುವುದು. ಮನುಷ್ಯನ ದೇಹದಲ್ಲಿ, ಅಂಗಾಂಗಗಳ ಯಂತ್ರ ದಲ್ಲಿ ಅದು ಚಲಿಸುವುದು. ನಾವು ಈ ಶಕ್ತಿಯನ್ನು ನಿಗ್ರಹಿಸಿದರೆ, ಏನನ್ನು ಬೇಕಾದರೂ ಪಡೆಯಬಹುದು. ನಾವೆಲ್ಲೋ ನಮ್ಮಲ್ಲಿರುವ ಶಕ್ತಿಯನ್ನು ಉಪಯೋಗಿಸುತ್ತಿಲ್ಲ. ನಮ್ಮಲ್ಲಿ ಸಂಗ್ರಹವಾಗಿರುವ ವಿಶ್ವಶಕ್ತಿಯನ್ನು ಉಪಯೋಗಿಸುತ್ತಿದ್ದೇವೆ. ಜೀವನ ಎಂದರೆ ಈ ಪ್ರಾಣ ಶಕ್ತಿಯನ್ನು ಉಪಯೋಗಿಸುವುದಕ್ಕೆ ಇರುವ ಸಾಮರ್ಥ್ಯ. ಮರಣ ಎಂದರೆ ಈ ಶಕ್ತಿ ಯನ್ನು ಉಪಯೋಗಿಸುವುದನ್ನು ಕಳೆದುಕೊಂಡಂತೆ. ಪ್ರಾಣ ಮಧ್ಯವರ್ತಿಗೆ ತಕ್ಕಂತೆ ವ್ಯಕ್ತವಾಗುತ್ತದೆ. ಆದರೆ ಅದಕ್ಕೆ ಯಾವ ಮೇರೆಯೂ ಇಲ್ಲ. ಸರ್ವವ್ಯಾಪಿಯಾಗಿದೆ.

ನಮ್ಮಲ್ಲಿ ಪ್ರಾಣ ಸ್ಪಷ್ಟವಾಗಿ ವ್ಯಕ್ತವಾಗುವುದು ನಾವು ಮಾಡುವ ಉಸಿರಾಟದಲ್ಲಿ.

ನಮ್ಮ ದೇಹದಲ್ಲಿ ಅತ್ಯಂತ ಮುಖ್ಯವಾದ ಅಂಗದೊಂದಿಗೆ ಇದು ಸಂಬಂಧವನ್ನು ಪಡೆದಿದ್ದರೂ, ಇದು ಬರೀ ಉಸಿರಾಟವಲ್ಲ. ನಾವು ಉಪಯೋಗಿಸುವ ಶಕ್ತಿಯೆಲ್ಲ ಶ್ವಾಸಕೋಶದಲ್ಲಿ ದಾಖಲಾಗಿದೆ. ಉಸಿರಾಟವನ್ನು ದಾಖಲು ಮಾಡುವ ಆಫೀಸೆಂದು ಕರೆಯ ಬಹುದು. ಅದು ನಿಗ್ರಹಿಸುವ ಆಫೀಸು ಕೂಡ ಆಗಿದೆ. ಯೋಗಿ ಉಸಿರಾಟದ ಮೂಲಕ ವ್ಯಕ್ತವಾಗುವ ಶಕ್ತಿಯನ್ನು ನಿಗ್ರಹಿಸುವುದರ ಮೂಲಕ, ಇತರ ಅಂಗಾಂಗಗಳ ಮೇಲೆಲ್ಲ ಸ್ವಾಧೀನವನ್ನು ಪಡೆದುಕೊಳ್ಳುವನು. ಅವನು ಕ್ರಮೇಣ ತನ್ನ ಆಂತರಿಕ ಸ್ವಭಾವವನ್ನು ನಿಗ್ರಹಿಸುವನು. ಯೋಗಾಭ್ಯಾಸದಲ್ಲಿ ನಿರತನಾದವನು ತನ್ನ ಉಸಿರಾಟವನ್ನು ನಿಗ್ರಹಕ್ಕೆ ತರುವನು. ಇದನ್ನು ಮುಖ್ಯವಾಗಿ ಪ್ರಾಣಾಯಾಮ ಎನ್ನುವುದು.

ನಾವು ಉಸಿರಾಡುವಾಗ ಮೂರು ವಿಷಯಗಳನ್ನು ಗಮನಿಸಬೇಕು. ಎಷ್ಟು ಆಳವಾಗಿ ಉಸಿರಾಡುತ್ತೇವೆ. ಉಸಿರಾಟದಲ್ಲಿ ಲಯ, ಉಸಿರಾಟದ ಸ್ವಭಾವ. ದೇಹದ ಆರೋಗ್ಯಕ್ಕೆ ದೀರ್ಘವಾಗಿ ಉಸಿರಾಡುವುದು ಅತ್ಯಾವಶ್ಯಕ ಎಂದು ನಮಗೆಲ್ಲ ಗೊತ್ತಿದೆ. ಇದು ಶ್ವಾಸಕೋಶಗಳ ಶಕ್ತಿಯನ್ನೆಲ್ಲ ಚೆನ್ನಾಗಿ ಉಪಯೋಗಿಸುವುದು, ನಮ್ಮ ಅಂಗಾಂಗಗಳಿಗೆಲ್ಲ ಶಕ್ತಿಯನ್ನು ನೀಡುವುದು. ನಾವು ಸರಿಯಾಗಿ ಉಸಿರಾಡಿದರೆ, ಪ್ರಕೃತಿಯಿಂದ ನಮ್ಮ ಮೇಲೆ ಆಗುವ ಅನೇಕ ಪರಿಣಾಮಗಳಿಂದ ಪಾರಾಗಬಹುದು.

ದೀರ್ಘವಾಗಿ ಉಸಿರಾಡುವುದರಿಂದ ನಮಗೆ ಮೂರು ಪ್ರಯೋಜನಗಳು ಆಗುವುವು. ಭೌತಿಕ ಶ್ವಾಸಕೋಶಗಳಿಗೆ ಇದು ಒಳ್ಳೆಯ ಅಂಗಸಾಧನೆ. ದೀರ್ಘವಾಗಿ ಉಸಿರನ್ನು ಎಳೆದುಕೊಳ್ಳುವುದರಿಂದ ಹೆಚ್ಚು ಹೆಚ್ಚು ಆಮ್ಲಜನಕವನ್ನು ಸೆಳೆದುಕೊಳ್ಳುವುದು. ಇದರಿಂದ ಶರೀರ ದೃಢವಾಗುವುದು. ಒಬ್ಬ ಒಂದು ಭಾರವಾದ ವಸ್ತುವನ್ನು ಎತ್ತುವುದಕ್ಕೆ ಮುಂಚೆ ಒಬ್ಬ ಮನುಷ್ಯ ಸಾಧಾರಣವಾಗಿ ಏನು ಮಾಡುತ್ತಾನೆ? ಅವನೆ ಚೆನ್ನಾಗಿ ಉಸಿರನ್ನು ಸೆಳೆದು ನಿಲ್ಲಿಸುವನು. ಅವನು ಎಷ್ಟು ಜಾಸ್ತಿ ಉಸಿರನ್ನು ಸೆಳೆದುಕೊಂಡರೆ ಅಷ್ಟು ಹೆಚ್ಚು ಶಕ್ತಿಯನ್ನು ಹೀರುವನು. ಕಷ್ಟಪಟ್ಟು ಕೆಲಸ ಮಾಡುವವನು ಯಾವಾಗಲೂ ದೀರ್ಘವಾಗಿ ಉಸಿರನ್ನು ಸಳೆದುಕೊಳ್ಳುವನು.

ಮಾನಸಿಕ :—ಮನಸ್ಸು ಚಂಚಲವಾಗಿದ್ದರೆ, ಅಥವಾ ವ್ಯಾಕುಲದಿಂದ ಕೂಡಿದ್ದರೆ ಅವನು ಸ್ವಲ್ಪ ಉಸಿರಾಡುವನು. ದೀರ್ಘವಾಗಿ ಯಾವಾಗ ಉಸಿರನ್ನು ಸೆಳೆಯುವನೊ ಆಗ ಮನಸ್ಸು ಶಾಂತವಾಗುವುದು. ವ್ಯಾಕುಲದಿಂದ ಪಾರಾಗುವನು.

ಆಧ್ಯಾತ್ಮಿಕ :—ನಾವು ಉಸಿರಿನೊಂದಿಗೆ ಮತ್ತೇನನ್ನೊ ಸೆಳೆದುಕೊಳ್ಳುತ್ತೇವೆ. ಅದೇನೆಂದು ಹೇಳುವುದಕ್ಕೆ ಆಗುವುದಿಲ್ಲ. ಇದೇ ಅತ್ಯಂತ ಸೂಕ್ಷ್ಮಸ್ಥಿತಿಯಲ್ಲಿರುವ ಪ್ರಾಣ. ಇದನ್ನೆ ನಾವು ನಮ್ಮ ದೇಹ ಮತ್ತು ಮನಸ್ಸಿನ ಪ್ರತಿಯೊಂದು ಭಾಗಕ್ಕೂ ಹೀರಿಕೊಳ್ಳುವೆವು. ನಮ್ಮ ದೇಹ ಮನಸ್ಸು ಆತ್ಮಶಕ್ತಿಗಳನ್ನು ರಕ್ಷಿಸುವ ಪವಿತ್ರಶಕ್ತಿ ಎನ್ನಬಹುದು. ಒಬ್ಬ ದೀರ್ಘವಾಗಿ ಉಸಿರನ್ನು ಸೆಳೆದುಕೊಳ್ಳುವುದನ್ನು ಕೆಲವು ಕಾಲ ಅಭ್ಯಾಸಮಾಡಿದರೆ, ಅನಂತರ ಅದು ಸ್ವಾಭಾವಿಕವಾಗುವುದು. ಇದರಿಂದ ನಮಗೆ ಎಷ್ಟೊ ಪ್ರಯೋಜನವಾಗುವುದು.

ಸರಿಯಾಗಿ ಉಸಿರಾಡುವುದಕ್ಕೆ ನಮಗೆ ಬೇಕಾದ ಎರಡನೆಯದೆ ಪ್ರಾಸ. ಪ್ರಾಸ ಬದ್ಧ ಜೀವನ ಎಂದರೆ ಏನು ಎಂಬುದು ಎಲ್ಲೋ ಕೆಲವರಿಗೆ ಮಾತ್ರ ಗೊತ್ತು. ಈ ಪ್ರಪಂಚವನ್ನು ಚಾಲಿಸುತ್ತಿರುವ ಮುಖ್ಯವಾದ ನಿಯಮವೇ ಪ್ರಾಸ. ಇದು ಮನುಷ್ಯನನ್ನು ಕೂಡ ಚಾಲಿಸುವುದು. ನಾವು ಪ್ರಾಸಬದ್ಧವಾಗಿ ಏನನ್ನು ಮಾಡಿದರೂ ನಮ್ಮಲ್ಲಿ ಒಂದು ಸಾಮರಸ್ಯವನ್ನುಂಟುಮಾಡುವುದು. ಗಲಾಟೆ ಪ್ರಾಸಬದ್ಧವಾಗಿದ್ದರೆ ಇದರಿಂದ ನಮಗೆ ಹಾನಿಯಿಲ್ಲ. ಆದರೆ ಪ್ರಾಸ ಯಾವಾಗ ಇಲ್ಲವೊ ಆಗಲೇ ಅಶಿಸ್ತು ಮತ್ತು ಗೊಂದಲ. ಚಲಿಸುತ್ತಿರುವ ರೈಲುಬಂಡಿಯ ಶಬ್ದ ಪ್ರಾಸಬದ್ಧವಾಗಿಲ್ಲದೆ ಇದ್ದರೆ, ಅದನ್ನು ಕೇಳುವವ ರೆಲ್ಲ ಹುಚ್ಚರಾಗಿ ಹೋಗುತ್ತಿದ್ದರು.

ಪ್ರಾಸಬದ್ಧವಾಗಿ ಉಸಿರಾಡುವುದರಿಂದ ಮಾನಸಿಕವಾಗಿ ನಮಗೆ ಬಹಳ ಪ್ರಯೋಜನವಾಗುವುದು. ಯಾವಾಗ ಪ್ರಾಸಕ್ಕೆ ಅಡಚಣೆಯಾಗುವುದೊ, ಆಗ ನಮಗೆ ಕೋಪ ಬರುವುದು. ನೀವು ಯಾವಾಗಲಾದರೂ ಉದ್ವಿಗ್ನವಾಗಿರುವಾಗ, ನಿಮ್ಮ ಉಸಿರಾಟ ಬೇಗ ಬೇಗ ಆಗುವುದು ಮತ್ತು ಅಲ್ಲಿ ಪ್ರಾಸ ಇರುವುದಿಲ್ಲ. ಇದನ್ನು ನೀವು ಗಮನಿಸಿಲ್ಲವೆ ? ನಿಮ್ಮ ಉಸಿರಾಟ ದೀರ್ಘವಾಗಿ ನಿಧಾನವಾಗಿದ್ದರೆ, ಅಲ್ಲಿ ಪ್ರಾಸವಿದ್ದರೆ, ನೀವು ವ್ಯಸ್ಥರಾಗುವುದಿಲ್ಲ. ನೀವು ಉದ್ರಿಕ್ತರಾಗಿ ಕೋಪಗೊಂಡು ಪ್ರಾಸಬದ್ಧವಾಗಿ ಉಸಿರಾಡುವುದಕ್ಕೆ ಪ್ರಯತ್ನಿಸಿ, ನೋಡೋಣ. ಇದು ನಿಮಗೆ ಸಾಧ್ಯವೇ ಆಗುವುದಿಲ್ಲ. ನಿಮ್ಮ ಮನೆ ಬಾಗಿಲನ್ನು ಕಾಯುತ್ತಿರುವ ಪ್ರಾಣವೆಂಬ ದರ್ವಾನ್ ಎಲ್ಲಿಯವರೆಗೆ, ನಿಧಾನವಾಗಿ ಪ್ರಾಸ ಬದ್ಧವಾಗಿ ಉಸಿರಾಡುತ್ತ ಕಾಯುತ್ತಿರುವನೋ ಅಲ್ಲಿಯವರೆಗೆ ಯಾವ ಕಳ್ಳರೂ ಪ್ರವೇಶಿಸ ಲಾರರು. ಜೀವನದಲ್ಲಿ ನಾವು ಶಾಂತಿಯನ್ನು ಪಡೆಯಬೇಕಾದರೆ, ಸ್ಥಿರವಾಗಬೇಕಾದರೆ, ಇದೇ ರಹಸ್ಯ, ಇದೇ ಬೀಗದಕೈ. ಉತ್ತರಮುಖಿಯ ಮನೆ ಉತ್ತರದಿಕ್ಕು ಹೇಗೋ ಹಾಗೆ ಪ್ರಾಸವನ್ನು ನಿಮ್ಮ ಮನೆಯನ್ನಾಗಿ ಮಾಡಿಕೊಳ್ಳಿ. ಮಗು ಒಂದು ಉತ್ತರಮುಖಿಯನ್ನು ತೆಗೆದುಕೊಂಡು ಆಡುತ್ತಿದ್ದರೆ, ಅದು ಅಸ್ತವ್ಯಸ್ತವಾಗುವುದು. ಅದರೆ ಅದನ್ನು ಬಿಟ್ಟ ತಕ್ಷಣವೇ ಸೂಜಿ ಉತ್ತರದಿಕ್ಕಿಗೆ ತಿರುಗುವುದು.

ಒಳ್ಳೆಯ ಉಸಿರಾಟದ ಮೂರನೆಯ ಗುಣವೇನೆಂದರೆ, ಅದರ ರೀತಿ. ಹಲವು ಬಗೆಯ ಉಸಿರಾಟಗಳಿವೆ ಉಸಿರು ಸಣ್ಣ ನೂಲಿನೆಳೆಯಂತೆ ಇರಬಹುದು, ಅಥವಾ ಬಲವಾದ ಹಗ್ಗದಂತೆ ಇರಬಹುದು. ಬಹಳ ಒರಟಾಗಿ ಉಸಿರಾಡುವುದರಿಂದ ವ್ಯಸ್ಥರಾಗಬಹುದು, ಇದು ಅನಾಗರಿಕ ಭಾವನೆಯ ಕುರುಹು. ನಿಮ್ಮ ಉಸಿರಾಟಕ್ಕೆ ಆಳವನ್ನು ಕೊಡುವಾಗ ಅದು ಯಾವಾಗಲೂ ಸೂಕ್ಷ್ಮವಾಗಿರುವಂತೆ ನೋಡಿಕೊಳ್ಳಿ. ಸೂಕ್ಷ್ಮವಾಗಿ ಉಸಿರಾಡು ವಾಗ ಶಬ್ದವಿರುವದಿಲ್ಲ, ನಿಮ್ಮ ಉಸಿರಿನಲ್ಲಿ ಶಬ್ದವಿದ್ದರೆ, ಅದನ್ನು ವಿಭಜನೆಮಾಡಿ ಏತಕ್ಕೆ ಎಂಬುದನ್ನು ಕಂಡುಹಿಡಿಯಿರಿ. ಅನಂತರ ಅದನ್ನು ಸರಿಪಡಿಸಿ. ನೀವು ಹೃತ್ಪೂರ್ವಕ ಮಾಡುವ ಪ್ರಯತ್ನದಿಂದ ಉಸಿರಾಟದ ರೀತಿಯನ್ನು ಬದಲಾಯಿಸಬಹುದು ಅಕ್ರಮವಾಗಿ ಉಸಿರಾಡುವುದನ್ನು ಸರಿಮಾಡಿ. ನಿಮ್ಮ ಉಸಿರಾಟವನ್ನು ಸೂಕ್ಷ್ಮವಾಗಿ, ದೀರ್ಘವಾಗಿ, ಕ್ರಮಬದ್ಧವಾಗಿ ಮಾಡಿ. ರಾಜಯೋಗವನ್ನು ಅಭ್ಯಾಸ ಮಾಡಬೇಕಾದರೆ ಇದು ಅತ್ಯಂತ

ಮುಖ್ಯ. ನೀವು ಯೋಗಾಭ್ಯಾಸವನ್ನು ಮಾಡಲಿ, ಬಿಡಲಿ ಕ್ರಮಬದ್ಧವಾದ ಉಸಿರಾಟ ಎಲ್ಲರಿಗೂ ಪ್ರಯೋಜನಕಾರಿ. ನೀವು ಯೋಗಿ ಆಗಲಿ, ಅಥವಾ ಆಗದಿರಲಿ, ಎರಡು ವರ್ಷಗಳ ಕಾಲ ಸರಿಯಾಗಿ ಉಸಿರಾಡುವುದನ್ನು ಅಭ್ಯಾಸಮಾಡಿ. ಇದರಿಂದ ನಿಮಗೆ ಜೀವಾವಧಿ ಪ್ರಯೋಜನ ಉಂಟು. ಇದೇನೆ ಅತ್ಯಂತ ಶ್ರೇಷ್ಠವಾದ ಜೀವವಿಮು ಪಾಲಿಸಿ. ಸರಿಯಾದ ಉಸಿರಾಡುವವರು ಒಂದು ತಲೆಮಾರು ಇದ್ದರೆ ಇವರಿಂದ ಉತ್ತಮವಾದ ನಾಗರಿಕತೆ ಅಭಿವೃದ್ಧಿಯಾಗುವುದು.

ರಾಜಯೋಗದಲ್ಲಿ ಕೆಲವು ಉಸಿರಾಡುವ ಪಾಠಗಳನ್ನು ಹೇಳುವುದಕ್ಕೆ ಮುಂಚೆ, ನಮ್ಮಲ್ಲೆಲ್ಲ ಸುಪ್ತವಾಗಿರುವ ಕುಂಡಲಿನಿ ಶಕ್ತಿಯನ್ನು ಹೇಗೆ ಜಾಗ್ರತಗೊಳಿಸುವುದು ಎಂಬುದನ್ನು ಹೇಳುತ್ತೇನೆ. ಕುಂಡಲಿನಿ ಎಂದರೆ ಸುರುಳಿಸುತ್ತಿಕೊಂಡಿರುವುದು. ಕುಂಡಲಿನಿಯನ್ನು ಜಾಗ್ರತಗೊಳಿಸುವುದು ಎಂದರೆ, ಮನುಷ್ಯನಲ್ಲಿ ಸುಪ್ತನಾಗಿರುವ ಶಕ್ತಿಯನ್ನು ವ್ಯಕ್ತಮಾಡುವುದು ಎಂದು.

ಈ ಶಕ್ತಿಯ ಸಂಚಾರಕ್ಕೆ ನಮ್ಮ ಬೆನ್ನುಮೂಳೆಯಲ್ಲಿ ಮೂರು ಮಾರ್ಗಗಳಿವೆ ಎಂದು ಯೋಗಿಗಳು ಹೇಳುತ್ತಾರೆ. ಬಲಗಡೆ ಇರುವುದನ್ನು ಪಿಂಗಲ ಎನ್ನುತ್ತಾರೆ. ಎಡಗಡೆ ಇರುವುದನ್ನು ಇಡಾ ಎನ್ನುತ್ತಾರೆ, ಮಧ್ಯದಲ್ಲಿರುವುದನ್ನು ಸುಷುಮ್ನ ಎನ್ನುತ್ತಾರೆ. ಪ್ರಾಣದಲ್ಲಿ ಏನು ಸ್ಪಂದನೆಯಾದರೂ ಈ ಬೆನ್ನೆಲುಬಿನ ಒಳಗೆ ಇರುವ ನರದಲ್ಲಿ ಅದು ಸ್ಫುಟವಾಗುವುದು. ಸಾಧಾರಣವಾಗಿ ಸುಷುಮ್ನ ಕಾಲುವೆಯ ಕೆಳಭಾಗ ಮುಚ್ಚಿಹೋಗಿರುವುದು. ಆದಕಾರಣ ಶಕ್ತಿ ಅಲ್ಲಿ ಪ್ರವೇಶಮಾಡಲಾರದು. ಇದನ್ನೆ ನಿದ್ರಿಸುತ್ತಿರುವ ಕುಂಡಲಿನಿ ಎನ್ನುವುದು. ಮುದುರಿಕೊಂಡು ನಿದ್ರಿಸುತ್ತಿರುವ ಹಾವಿನಂತೆ ಇದು. ಇದು ಈಗ ಮಲಗಿದ್ದರೂ ಜಾಗ್ರತವಾದರೆ ಮೇಲೆ ಹೋಗಬಹುದು. ಯೋಗಿಯ ಉದ್ದೇಶವೇ ಸುಪ್ತವಾಗಿ ವಾಗಿರುವ ಕುಂಡಲಿನಿ ಶಕ್ತಿಯನ್ನು ಜಾಗ್ರತಗೊಳಿಸುವುದು. ಇದು ಜಾಗ್ರತವಾದ ಮೇಲೆ ಸುಷುಮ್ನ ಕಾಲುವೆಯ ಮಧ್ಯಭಾಗದಲ್ಲಿ ಮೇಲಕ್ಕೆ ಚಲಿಸುವುದು. ಮೆದುಳಿನಲ್ಲಿರುವ ಸಹಸ್ರಾರದಲ್ಲಿ ಎಂದರೆ ಅನಂತದಲ್ಲಿ ಒಂದಾಗುವುದು. ಅದು ಮೇಲುಮೇಲಕ್ಕೆ ಹೋಗುವಾಗ ಆರು ಚಕ್ರಗಳ ಮೂಲಕ ಹೋಗುವುದು. ಚಕ್ರಗಳು ಎಂದರೆ ಆಧ್ಯಾತ್ಮಿಕ ಅನುಭವಗಳ ವಿಕಾಸದ ಕೇಂದ್ರ. ಉಪಮಾ.ದೃಷ್ಟಿಯಿಂದ ಇವುಗಳನ್ನು ಕಮಲಗಳು ಎನ್ನುತ್ತಾರೆ. ಇಲ್ಲಿ ಪ್ರತಿಯೊಂದು ಕಮಲವೂ ವಿಕಾಸವಾಗಿದೆ ಎಂದರೆ ಒಂದು ಹಂತದಲ್ಲಿ ಆಧ್ಯಾತ್ಮಿಕ ಶಕ್ತಿ ವಿಕಾಸವಾಯಿತು ಎಂದು. ಕಮಲ ಎನ್ನುವುದು ಬರೀ ಚಿಹ್ನೆ. ಬೆನ್ನುಮೂಳೆ ಒಳಗೆ ಕಮಲಗಳು ಬೆಳೆಯುತ್ತಿವೆ ಎಂದು ಯೋಗಿಗಳು ಭಾವಿಸುತ್ತಾರೆ ಎಂದು ತಿಳಿಯಬೇಡಿ. ಆಧ್ಯಾತ್ಮಿಕ ಅನುಭವದ ವಿಕಾಸವನ್ನೆ ವಿಕಸಿತವಾದ ಕಮಲ ಎನ್ನುವುದು. ತಾವರೆ ಮೊಗ್ಗು ಕ್ರಮೇಣ ಸುಂದರವಾಗಿ ಉದಯಿಸುವ ಸೂರ್ಯನೆದುರಿಗೆ ಅರಳುವುದು. ಹಿಂದೂಗಳ ದರ್ಶನದಲ್ಲಿ ಇದನ್ನು ಆಧ್ಯಾತ್ಮಿಕ ವಿಕಸನದ ಚಿಹ್ನೆ ಎನ್ನುವರು.

ಮೊದಲನೆ ಕೇಂದ್ರವೇ ಮೂಲಾಧಾರ. ಇದೇ ಬೆನ್ನುಮೂಳೆಯ ಅತ್ಯಂತ ಕೆಳಭಾಗ. ಈ ಕೇಂದ್ರದಲ್ಲಿರುವ ಕಮಲಕ್ಕೆ ನಾಲ್ಕುದಳಗಳಿವೆ, ಮತ್ತು ಅದು ಕೆಂಪು ಬಣ್ಣದ್ದು

ಈ ಕೇಂದ್ರ ಜಾಗ್ರತವಾದಾಗ ನಮ್ಮ ಸ್ಮೃತಿ ಮತ್ತು ಸುಪ್ತ ಮನಸ್ಸಿನಲ್ಲಿರುವ ಭಾವನೆಗಳು ನಮಗೆ ಕರಗತವಾಗುತ್ತವೆ.

ಎರಡನೇ ಕೇಂದ್ರದಲ್ಲಿರುವ ಕಮಲ ಕುಂಕುಮ ಬಣ್ಣವುಳ್ಳದ್ದು. ಅದಕ್ಕೆ ಆರು ದಳಗಳಿವೆ. ಮೃಗಜೀವನಕ್ಕೆ ಸಂಬಂಧವುಳ್ಳ ಭಾವನೆಗಳ ಕೇಂದ್ರ. ಇದು ಜನನೇಂದ್ರಿಯದ ಬಳಿ ಇದೆ. ಈ ಕೇಂದ್ರ ಜಾಗ್ರತವಾದಾಗ ಮೃಗೀಯ ತೃಷ್ಣೆಯ ಮೇಲೆ ನಮಗೆ ಹತೋಟಿ ಬರುವುದು. ಈ ಶಕ್ತಿಯನ್ನು ದೈವೀಕರಣ: ಮಾಡಿ ನಮ್ಮ ಆಧ್ಯಾತ್ಮಿಕಶಕ್ತಿಯ ಪುರೋಗಮನಕ್ಕೆ ಉಪಯೋಗಿಸಿಕೊಳ್ಳಬಹುದು.

ಹೊಕ್ಕಳ ಸಮೀಪದಲ್ಲಿ ಮಣಿಪುರವೆಂಬ ಮೂರನೆ ಕೇಂದ್ರವಿದೆ. ಇದಕ್ಕೆ ಕೇಸರಿ ಬಣ್ಣವಿದೆ ಎಂಟು ದಳಗಳಿಂದ ಕೂಡಿದೆ. ಈ ಕೇಂದ್ರ ವಿಕಾಸವಾದಾಗ ಸಾಂಸಾರಿಕ ಸುಖಗಳು ನಮಗೆ ಶಾಂತಿಯನ್ನು ನೀಡವು ಎಂಬುದು ಅರ್ಥವಾಗುವುದು. ನಾವು ಈ ಸ್ಥಿತಿಯಲ್ಲಿರುವಾಗ, ಅವುಗಳನ್ನು ಪರೀಕ್ಷಿಸಿ, ಕೆಲಸಕ್ಕೆ ಬಾರದ್ದು ಎಂದು ಆಚೆಗೆ ಎಸೆಯಬಹುದು.

ಈ ಮೂರು ಕೇಂದ್ರಗಳೂ ಅಧೋಗಾಮಿಯಾದ ಕುಂಡಲಿನಿ ಶಕ್ತಿಯೊಂದಿಗೆ ಸಂಬಂಧವನ್ನು ಪಡೆದಿದೆ. ಯಾವ ಸಮಯದಲ್ಲಿ ಬೇಕಾದರೂ ಅದು ನಮ್ಮನ್ನು ಅಧೋಸ್ಥಿತಿಗೆ ತಳ್ಳಬಹುದು. ಈ ಮೂರು ಕೇಂದ್ರಗಳನ್ನು ಯೋಗಿ ನಿಗ್ರಹಿಸುವ ಪರಿಯಂತರ ಸುರಕ್ಷಿತ ಎಂದು ಹೇಳುವುದಕ್ಕೆ ಆಗುವುದಿಲ್ಲ. ಇವನು ನಾಲ್ಕನೆ ಕೇಂದ್ರವನ್ನು ಸೇರುವುದಕ್ಕೆ ಪ್ರಯತ್ನ ಮಾಡಬೇಕು. ಈ ಕೇಂದ್ರಕ್ಕೆ ಹೋದರೆ ಆಧ್ಯಾತ್ಮಿಕ ತರಂಗ ಯಾವಾಗಲೂ ಊರ್ಧ್ವಗಾಮಿಯಾಗಿರುವುದು.

ನಾಲ್ಕನೆ ಕೇಂದ್ರ ಹೃದಯದ ಹತ್ತಿರ ಇರುವುದು. ಈ ಕಮಲ ನೀಲಬಣ್ಣದ್ದು. ಇದಕ್ಕೆ ಹನ್ನೆರಡು ದಳಗಳು ಇರುತ್ತವೆ. ಇದನ್ನೇ ಅನಾಹತ ಎಂದು ಹೇಳುತ್ತಾರೆ. ಎಂದರೆ ಉದ್ವಿಗ್ನವಾಗದೆ ಇರುವುದು, ನಿಷ್ಕಾರಣವಾಗಿರುವುದು ಎಂದು ಅರ್ಥ. ಈ ಕೇಂದ್ರ ತೆರೆದಾಗ ನಿಷ್ಕಾರಣವಾದ ವಿಶ್ವಪ್ರೇಮಕ್ಕೆ ನಮ್ಮನ್ನು ಒಯ್ಯುವುದು.

ಐದನೆ ಚಕ್ರ ಕತ್ತಿನ ಹತ್ತಿರ ಇರುವುದು. ಇದು ಬೂದುಬಣ್ಣದ್ದು. ಇಲ್ಲಿಯ ಕಮಲಕ್ಕೆ ಹದಿನಾರು ದಳಗಳಿವೆ. ಈ ಕೇಂದ್ರಕ್ಕೆ ಮನಸ್ಸು ಬಂದಾಗ ಪರಿಶುದ್ಧವಾಗಿರುವುದು. ಇದನ್ನು ವಿಶುದ್ಧ ಎಂದು ಹೇಳುವರು. ಇದರಿಂದ ಯೋಗಿಯಲ್ಲಿ ಸೌಂದರ್ಯ ಮಾರ್ದವ, ಸತ್ಯ ವ್ಯಕ್ತವಾಗುವುದು. ಅವನು ಮಾಡುವ ಪ್ರತಿಯೊಂದು ಕೆಲಸದಲ್ಲಿಯೂ ಇದು ವ್ಯಕ್ತವಾಗುವುದು.

ಹುಬ್ಬಿನ ನಡುವೆ ಆರನೆ ಚಕ್ರವಿರುವುದು. ಈ ಕಮಲ ಬೆಳ್ಳಗಿರುವುದು. ಇದಕ್ಕೆ ಎರಡು ದಳಗಳು ಮಾತ್ರ ಇರುವುದು. ಈ ಸ್ಥಿತಿಯಲ್ಲಿ ಯೋಗಿಗೆ ಸರ್ವಜ್ಞತ್ವ ಪ್ರಾಪ್ತವಾಗುವುದು. ಅವನಿಗೆ ಪರಮಸತ್ಯ ಗೊತ್ತಿದೆ. ಆದರೆ ಅದೇ ಆಗಿಲ್ಲ. ಇದನ್ನೆ ಆಗ್ನ ಎನ್ನುವುದು. ಹತ್ತಿರದಿಂದ ತಿಳಿಯುವುದು ಎಂದು ಇದಕ್ಕೆ ಹೆಸರು. ಒಂದು ಗ್ಲಾಸು ಆಲ್ಮೇರದಲ್ಲಿ ಕಾಣುವ ವಸ್ತುವಂತೆ, ಅದನ್ನು ನೋಡುತ್ತಾನೆ, ಆದರೆ ಅದನ್ನು ಮುಟ್ಟಲಾರ ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು.

ಏಳನೇ ಚಕ್ರವೇ ಇವುಗಳ ಮೇಲಿದೆ. ಮೂಲಾಧಾರದಿಂದ ಬಂದ ಕುಂಡಲಿನಿ ಶಕ್ತಿ ಮೆದುಳಿನಲ್ಲಿರುವ ಸಹಸ್ರಾರವನ್ನು ಸೇರುವುದು. ಇದಕ್ಕೆ ಪರಿಶುದ್ಧವಾದ ಬಿಳಿಯ ಬಣ್ಣವಿದೆ. ಸಾವಿರ ದಳಗಳಿಂದ ಕೂಡಿದೆ. ಅಲ್ಲಿ ವ್ಯಕ್ತಿಗತವಾದ ಕುಂಡಲಿನಿಶಕ್ತಿ ಸಮಾಧಿಯಲ್ಲಿ, ಅನಂತದಲ್ಲಿ ಲಯವಾಗುವುದು. ಇಲ್ಲಿಯೇ ಜೀವಾತ್ಮ, ಪರಮಾತ್ಮನಲ್ಲಿ ಐಕ್ಯವಾಗುವುದು. ಇದೇ ಯೋಗಿಯ ಗುರಿ. ಇದನ್ನು ಬಣ್ಣಿಸುವುದಕ್ಕೆ ಆಗುವುದಿಲ್ಲ. ಅನುಭವಿಸಬೇಕಷ್ಟೆ. ಹನಿಯೊಂದು ಸಾಗರವನ್ನು ಸೇರುವುದು. ನಿಮ್ಮಲ್ಲಿ ಅಂತಸ್ಥವಾಗಿರುವ ಪೂರ್ಣತೆ ಇಲ್ಲಿ ಸಹಸ್ರದಳ ಕಮಲದಂತೆ ಅರಳಿ ಪೂರ್ಣತೆಯಲ್ಲಿ ಐಕ್ಯವಾಗುವುದು. ಈ ಅನುಭವವನ್ನು ಯಾರೂ ವಿವರಿಸಲಾರರು. ಇದು ಪರೋಕ್ಷದಲ್ಲಿ ಪ್ರತ್ಯಕ್ಷವಾಗಬೇಕು.

ಶ್ರೀರಾಮಕೃಷ್ಣರು ಇನ್ನೇನು ನಿರ್ವಿಕಲ್ಪ ಸಮಾಧಿಗೆ ಹೋಗುವಾಗ ತಮ್ಮ ಅನುಭವವನ್ನು ವಿವರಿಸಲು ಯತ್ನಿಸುತ್ತಿದ್ದರು. ಅವರು ಸ್ವಲ್ಪಹೊತ್ತು ಮಾತನಾಡುತ್ತಿದ್ದರು. ಆದರೆ ಮಾತು ಅನಂತತೆಯಲ್ಲಿ ಲಯವಾಯಿತು. ಅವರು ಅದಾದಾಗ ಅದರ ವಿಷಯವನ್ನು ವಿವರಿಸಲಾಗಲಿಲ್ಲ. ಬ್ರಹ್ಮನನ್ನು ದೃಶ್ಯವಸ್ತುವನ್ನಾಗಿ ಮಾಡುವುದಕ್ಕೆ ಆಗುವುದಿಲ್ಲ. ವಿವರಿಸಲಾಗುವುದಿಲ್ಲ ಎಂದು ಜ್ಞಾನಿಗಳು ಹೇಳುತ್ತಾರಲ್ಲ ಆ ಅವಸ್ಥೆ ಇದು. ಈ ಅವಸ್ಥೆಗೆ ಸೇರಿದ ಬಹುಪಾಲು ಯೋಗಿಗಳು ನೀರನ್ನು ಮುಟ್ಟಿದ ಉಪ್ಪಿನ ಬೊಂಬೆಯಂತೆ ಅದರಲ್ಲಿ ಐಕ್ಯವಾಗುತ್ತಾರೆ. ಅವರು ಹಿಂತಿರುಗಿ ಬರಲಾರರು. ಅವತಾರಗಳು ಅಥವಾ, ಆಧ್ಯಾತ್ಮಿಕ ಮೇರುಸದೃಶ ವ್ಯಕ್ತಿಗಳಾದ ಈಶ್ವರಕೋಟಿಗಳು ಮಾತ್ರ ಹಿಂತಿರುಗಿ ಬರಬಲ್ಲರು.

ರಾಜಯೋಗದಲ್ಲಿ ಪ್ರಾಣಾಯಾಮ ಒಬ್ಬನಲ್ಲಿ ಸುಪ್ತವಾಗಿರುವ ಪೂರ್ಣತೆಯನ್ನು ಜಾಗ್ರತಗೊಳಿಸಿ, ಅದನ್ನು ಊರ್ಧ್ವಮುಖವಾಗಿ ಹೋಗುವಂತೆ ಮಾಡುವುದು. ಪ್ರಾಣಾಯಾಮದ ಅಭ್ಯಾಸದಲ್ಲಿ ಅಪಾಯಕರವಾಗಿರುವದಾಗಲಿ, ರಹಸ್ಯವಾಗಿರುವದಾಗಲಿ ಯಾವುದೂ ಇಲ್ಲ. ಅವೆಲ್ಲ ಸ್ಪಷ್ಟಪಡಿಸಿದ ವೈಜ್ಞಾನಿಕ ಅಭ್ಯಾಸಗಳು. ಯೋಗ್ಯಸಾಧಕ ಅದನ್ನು ಸರಿಯಾದ ರೀತಿಯಲ್ಲಿ ಅಭ್ಯಾಸಮಾಡಿದರೆ ಅವನಿಗೆ ಪ್ರತಿಫಲ ದೊರಕೇ ದೊರಕುವುದು. ಅದನ್ನು ಪ್ರತಿದಿನವೂ ಜಾಗ್ರತೆಯಿಂದ ಮಿತವಾಗಿ ಮಾಡಬೇಕು.

ಮೊದಲನೆಯದಾಗಿ ನಾವು ಯಾವಾಗಲೂ ಎರಡು ಮೂಗಿನ ಹೊಳ್ಳೆಗಳ ಮೂಲಕ ಒಂದೇ ಸಮನಾಗಿ ಉಸಿರಾಡುತ್ತಿಲ್ಲ ಎಂಬುದು ನಿಮಗೆ ಗೊತ್ತಿದೆಯೆ? ನಾವು ಎರಡು ಮೂಗಿನ ಹೊಳ್ಳೆಗಳ ಮೂಲಕ, ಉಸಿರಾಡುವುದು ಅಪರೂಪ. ಹೆಂಗಸರಲ್ಲಿ ಎಡಮೂಗಿನ ಹೊಳ್ಳೆಯ ಮೂಲಕ, ಗಂಡಸರಲ್ಲಿ ಬಲಮೂಗಿನ ಹೊಳ್ಳೆಯ ಮೂಲಕ, ಉಸಿರಾಡುತ್ತಿದ್ದರೆ ನೈಸರ್ಗಿಕ ಎಂದು ಪರಿಗಣಿಸಬೇಕಾಗಿದೆ. ಉಸಿರು ಎರಡು ಮೂಗಿನ ಹೊಳ್ಳೆಗಳ ಮೂಲಕ ಹೋಗುತ್ತಿದ್ದರೆ ಆಗ ಪ್ರಾಣ ಸಮಸ್ಥಿತಿಯಲ್ಲಿದೆ. ಧ್ಯಾನಕ್ಕೆ ಮತ್ತು ವಿಶ್ರಾಂತಿಗೆ ಯೋಗ್ಯವಾದ ಕಾಲ. ಸಾಧಾರಣವಾಗಿ ಉಸಿರು ಮೂಗಿನ ಯಾವುದಾದರೂ ಒಂದು ಹೊಳ್ಳೆಯ ಮೂಲಕ ಆಡುತ್ತಿರುವುದು. ನೀವು ಇದನ್ನು ಬದಲಾಯಿಸಬೇಕಾದರೆ ಸೋಮಾರಿತನದಿಂದ ಪಾರಾಗಿ ಅದನ್ನು ಯೋಗ್ಯವಾದ ರೀತಿಯಲ್ಲಿ ವ್ಯಕ್ತಪಡಿಸಬೇಕಾದರೆ ಪ್ರಾಣಾಯಾಮವನ್ನು ಮಾಡಿ.

ನೀವು ಗಂಡಸರಾಗಿದ್ದರೆ, ಬಲಮೂಗಿನ ಹೊಳ್ಳೆಯ ಮೂಲಕ ಉಸಿರಾಡಬೇಕು. ನಿಮ್ಮ ಎಡಗೈಯನ್ನು ಬಗ್ಗಿಸಿ ದೇಹವನ್ನು ಸ್ವಲ್ಪ ಎಡಭಾಗಕ್ಕೆ ತಿರುಗಿಸಿ, ಎಡಗೈ ಹೆಬ್ಬೆಟ್ಟಿನಿಂದ ಮೂಗಿನ ಎಡಭಾಗವನ್ನು ಮುಚ್ಚಿ ಬಲಮೂಗಿನ ಹೊಳ್ಳೆಯಮೂಲಕ ನಿಧಾನವಾಗಿ ಉಸಿರೆಳೆದು ಬಿಡಿ. ಹೀಗೆ ಹತ್ತುವೇಳೆ ಮಾಡಿ. ಆಗ ಬಲಮೂಗಿನ ಹೊಳ್ಳೆಯ ಮೂಲಕ ಉಸಿರಾಡಬಹುದು. ಹೆಂಗಸರಿಗೆ ಇದಕ್ಕೆ ವಿರುದ್ಧವಾಗಿ ಮಾಡಬೇಕು.

ಇಲ್ಲಿ ನಮ್ಮ ದೇಹಕ್ಕೆ ಅನುಕೂಲವಾಗುವ ಎರಡು ಅಭ್ಯಾಸಗಳಿವೆ. ನಿಂತಿರುವಾಗ ನಿಮ್ಮ ತಲೆಯನ್ನು ಸಾಧ್ಯವಾದಷ್ಟು ಎಡಭಾಗಕ್ಕೆ ತಿರುಗಿಸಿ. ಬಲಗೈ ಹೆಬ್ಬೆರಳಿನಿಂದ ಬಲಮೂಗಿನ ಹೊಳ್ಳೆಯನ್ನು ಮುಚ್ಚಿ, ನಿಧಾನವಾಗಿ ಎಡಮೂಗಿನ ಹೊಳ್ಳೆಯ ಮೂಲಕ ಉಸಿರನ್ನು ಸೇದಿಬಿಡಿ. ನಿಮ್ಮ ಶ್ವಾಸಕೋಶವನ್ನೆಲ್ಲ ಉಸಿರಿನಿಂದ ತುಂಬಿ. ಕ್ರಮೇಣ ತಲೆಯನ್ನು ಬಲಭಾಗಕ್ಕೆ ತಿರುಗಿಸಿ, ಮೂಗಿನ ಎಡಹೊಳ್ಳೆಯನ್ನು ಬಲಗೈ ಮಧ್ಯದ ಬೆರಳಿನಿಂದ ಮುಚ್ಚಿ ಬಲಮೂಗಿನ ಹೊಳ್ಳೆಯ ಮೂಲಕ ಉಸಿರನ್ನು ನಿಧಾನವಾಗಿ ಬಿಟ್ಟು ಎಳೆದುಕೊಳ್ಳಿ. ಅನಂತರ ಬೇರೊಂದು ಮೂಗಿನ ಹೊಳ್ಳೆಯ ಮೂಲಕ ಇದನ್ನು ಮಾಡಿ. ಇದರಿಂದ ನಮ್ಮ ನರಗಳ ಉದ್ವಿಗ್ನತೆಯೆಲ್ಲ ಹೋಗುವುದು. ಬೆಳಿಗ್ಗೆ ಎದ್ದ ತಕ್ಷಣ ನಮ್ಮನ್ನು ಆವರಿಸುವ ಸೋಮಾರಿತನದಿಂದ ಪಾರಾಗಬಹುದು. ಇದನ್ನು ಫಲಹಾರ ತೆಗೆದುಕೊಳ್ಳುವುದಕ್ಕೆ ಮುಂಚೆ ಐದು ವೇಳೆ ಮಾಡಿ.

ನಿಂತುಕೊಂಡು, ಕುಳಿತುಕೊಂಡು ಯಾವ ಸ್ಥಿತಿಯಲ್ಲಾದರೂ ಸಿಳ್ಳೆ ಹಾಕುವ ರೀತಿ ನಿಮ್ಮ ಬಾಯಿಯನ್ನು ತೆರೆಯಿರಿ. ಯಾವ ಶಬ್ದವನ್ನು ಮಾಡದೆ ನಿಧಾನವಾಗಿ ಉಸಿರನ್ನೆ ಪೂರ್ಣವಾಗಿ ಒಳಗೆ ಸೆಳೆದುಕೊಳ್ಳಿ. ಅನಂತರ ಬಾಯಿಯನ್ನು ಮುಚ್ಚಿ, ನುಂಗಿ ಉಸಿರನ್ನು ಎರಡು ಮೂಗಿನ ಹೊಳ್ಳೆಯ ಮೂಲಕ ಬಿಡಿ. ಇದನ್ನು ನಿಧಾನವಾಗಿ ಮಧುರವಾಗಿ ಉಸಿರಾಡುವುದರಲ್ಲಿ ಯಾವ ಶಬ್ದವನ್ನೂ ಮಾಡಬೇಡಿ. ಇದು ನಿಮ್ಮ ಧ್ವನಿಯನ್ನು ಉತ್ತಮ ಪಡಿಸುವುದು. ಗಂಟಲನ್ನು ಸರಿಮಾಡುವುದು. ಇದನ್ನು ಬಯಲಿನಲ್ಲಿ ಮಾಡುವುದು ಒಳ್ಳೆಯದು. ಈ ಸಾಧನೆಯನ್ನು ದಿನಕ್ಕೆ ಐದು ವೇಳೆ ಮಾಡಿ. ಹದಿನೈದು ದಿನಗಳಲ್ಲಿ, ನಿಮ್ಮಲ್ಲಿ ದೊಡ್ಡ ಬದಲಾವಣೆ ಆಗುವುದು.

ಈಗ ನಾವು ಇತರ ಉಸಿರಾಡುವ ಅಂಗಸಾಧನೆ ಬರುತ್ತೇವೆ. ನೀವು ಕುಳಿತುಕೊಂಡಾಗಲೀ, ನಿಂತುಕೊಂಡಾಗಲೀ ಎರಡು ಮೂಗಿನ ಹೊಳ್ಳೆಗಳ ಮೂಲಕ ಉಸಿರಾಡಿ. ಯಾವುದಾದರೂ ಒಂದುಕಡೆ ಹೆಚ್ಚುಕಡಿಮೆ ಆದರೆ ಚಿಂತೆಯಿಲ್ಲ. ಉಸಿರನ್ನು ನಿಧಾನವಾಗಿ, ನಿಶ್ಶಬ್ದವಾಗಿ ಶ್ವಾಸಕೋಶಗಳ ತುಂಬ ತೆಗೆದುಕೊಳ್ಳಿ. ಹಾಗೆ ಉಸಿರನ್ನು ತೆಗೆದುಕೊಳ್ಳುವಾಗ ವಿಶ್ವಶಕ್ತಿಯನ್ನು ಅತ್ಯಂತ ಶ್ರೇಷ್ಠವಾದ ಪ್ರಾಣವನ್ನು ಹೀರುತ್ತಿರುವೆಎಂದು ಭಾವಿಸಿ. ಉಸಿರನ್ನು ಒಳಗೆಕೊಡಿಡದೆ ನಿಧಾನವಾಗಿ ಉಸಿರನ್ನು ಹೊರಗೆ ಬಿಡಿ. ಬಿಡುವಾಗ ನಿಮ್ಮ ಮನಸ್ಸಿನ ಮಲಿನತೆಯೆಲ್ಲ ಹೋಗುತ್ತಿದೆ ಎಂದು ಭಾವಿಸಿ. ನೀವು ಉಸಿರನ್ನು ಒಳಗೆ ಸೆಳೆದುಕೊಳ್ಳುವಾಗ "ಹ್ರಂ" ಎಂದು ಉಚ್ಚರಿಸಿ. ನಾನು ಪವಿತ್ರತೆಯನ್ನು ಹೊರಗಿನಿಂದ

ಸೆಳೆದುಕೊಂಡು, ನನ್ನ ಅಂಗಾಂಗಗಳನ್ನೆಲ್ಲ ಅದರಿಂದ ತುಂಬುತ್ತಿದ್ದೇನೆ ಎಂದು ಅದರ ಭಾವ. ನೀವು ಉಸಿರನ್ನು ಬಿಡುವಾಗ "ಸ" ಎಂದು ಹೇಳಿ. ನನ್ನಿಂದ, ಯಾವುದು ಕೆಟ್ಟದ್ದೊ ಅಪವಿತ್ರವಾಗಿರುವುದೊ ಅದೆಲ್ಲ ಹೋಗುತ್ತಿದೆ ಎಂದು ಇದರ ಭಾವ. ಈ ಅಂಗಸಾಧನೆಯನ್ನು ಪ್ರಾಸಬದ್ಧವಾಗಿ ಮಾಡಿ.

ಧ್ಯಾನಮಾಡುವುದಕ್ಕೆ ಮುಂಚೆ ಸರಿಯಾದ ಆಸನದಲ್ಲಿ ಕುಳಿತುಕೊಂಡು, ಮೂಗಿನ ಬಲಹೊಳ್ಳೆಯನ್ನು ಬಲಗೈ ಹೆಬ್ಬೆಟ್ಟಿನಿಂದ ಮುಚ್ಚಿಕೊಳ್ಳಿ. ನಿಧಾನವಾಗಿ ಎಡಮೂಗಿನಿಂದ ಉಸಿರನ್ನು ನಾಲ್ಕು ಎಣಿಸುವವರೆಗೆ ಸೆಳೆದುಕೊಳ್ಳಿ. ಬಲಗೈ ಮಧ್ಯದ ಬೆರಳಿನಿಂದ ಎಡ ಮೂಗನ್ನು ಮುಚ್ಚಿ. ಉಸಿರನ್ನು ಹದಿನಾರು ಸೆಕೆಂಡುಗಳ ಕಾಲ ನಿಲ್ಲಿಸಿ. ಆಗ ಮನಸ್ಸನ್ನು ಮೂಲಾಧಾರದ ಕೆಳಗೆ ಏಕಾಗ್ರಗೊಳಿಸಿ. ಮೂಲಾದಾರದಲ್ಲಿರುವ ಕಮಲವನ್ನು ಕಲ್ಪಿಸಿಕೊಳ್ಳಿ. ಸುಷುಮ್ನ ಕಾಲುವೆ ತೆರೆದಿದೆ ಎಂದು ಭಾವಿಸಿಕೊಳ್ಳಿ. ಅನಂತರ ಬಲಮೂಗಿನಿಂದ ಉಸಿರನ್ನು ಎಂಟುಕ್ಷಣಗಳವರೆಗೆ ನಿಧಾನವಾಗಿ ಬಿಡಿ. ಈ ಪ್ರಾಸವೆ 4–16–8. ಪ್ರತಿಯೊಂದು ಸಲವೂ ಇದನ್ನು ಬದಲಾಯಿಸಿ. ಉಸಿರನ್ನು ಕಟ್ಟಿರುವಾಗ ಸುಷುಮ್ನಾ ಕಾಲುವೆ ತೆರೆದಿದೆ ಎಂದು ಭಾವಿಸಿ. ಸಂಖ್ಯೆಯನ್ನು ಎಣಿಸುವ ಬದಲು ಓಂ ಎಂಬ ಮಂತ್ರವನ್ನು ಉಚ್ಚರಿಸಿ.

ಸಂಸ್ಕೃತದಲ್ಲಿ ಈ ಮೂರುವಿಧವಾದ ಉಸಿರಾಟವನ್ನು ಪೂರಕ, ಕುಂಭಕ, ರೇಚಕ ಎಂದು ಕರೆಯುತ್ತಾರೆ.

ವಿದ್ಯಾರ್ಥಿ ಮುಂದುವರಿದಂತೆ, ಗುರು ಅವನಿಗೆ ಹೆಚ್ಚು ಸಾಧನೆಗಳನ್ನು ಹೇಳಿಕೊಡಬಹುದು. ಅವನ ಅಭ್ಯಾಸದ ಮೇಲ್ವಿಚಾರಣೆಯನ್ನು ತೆಗೆದುಕೊಳ್ಳಬೇಕು. ಸರಿಯಾದ ಗುರುವಿನ ಸಹಾಯವಿಲ್ಲದೆ ಹೆಚ್ಚಿಗೆ ಅಂಗಸಾಧನೆಗಳನ್ನು ಮಾಡಬಾರದು. ಮತ್ತು ಮಾಡುತ್ತಿರುವುದನ್ನು ಹೆಚ್ಚಿಸಲೂ ಬಾರದು. ಇಲ್ಲದೇ ಇದ್ದರೆ ಸಾಧಕನ ದೇಹ ಮತ್ತು ಮನಸ್ಸಿನ ಮೇಲೆ ಅಹಿತವಾದ ಪರಿಣಾಮವನ್ನು ಬೀರುವುದು.

ನಾವು ಸ್ವಲ್ಪ ಎಚ್ಚರಿಕೆಯಿಂದ ಇರಬೇಕಾಗುವುದು. ನೀವು ಕೆಲವು ಪ್ರಾಣಾಯಾಮಗಳನ್ನು ಮಾಡುತ್ತೀರಿ ಎಂದು ಇತರರಿಗಿಂತ ತುಂಬಾ ದೊಡ್ಡವರು ಎಂದು ಭಾವಿಸಬೇಡಿ. ಯಾವಾಗಲೂ ಈ ದೃಷ್ಟಿ ನಿಮ್ಮಲ್ಲಿ ಬರದೆ ಇರಲಿ. ಎಂದಿಗೂ ಅಹಂಕಾರಕ್ಕೆ ವಶವಾಗದಂತೆ ನೋಡಿಕೊಳ್ಳಿ. ಪಟದ ಬಾಲಂಗೋಚಿ ಪಟ ಮೇಲಕ್ಕೆ ಏಳದಷ್ಟು ಉದ್ದವಾಗದಿರಲಿ. ದೊಡ್ಡ ಅಹಂಕಾರದ ಬಾಲವಿಲ್ಲದಿರಲಿ. ಇದರಿಂದ ನಿಮ್ಮ ಪ್ರಗತಿಗೆ ಆತಂಕವಾಗುವುದು. ನೀವು ಯೋಗಾಭ್ಯಾಸದಲ್ಲಿ ಮುಂದುವರಿದಂತೆ ಅಹಂಕಾರ ಕಡಿಮೆ ಆಗಬೇಕು. ಜಾಸ್ತಿ ಆಗುವದಲ್ಲ. ಯಾವಾಗಲೂ ಇದನ್ನು ನಿಗ್ರಹಿಸಿ.

ನಾವು ವಿಚಾರಮಾಡುತ್ತಿದ್ದ ಪೀಠಿಕಾಪ್ರಕರಣದಲ್ಲಿ ಇನ್ನೆರಡು ಮುಖ್ಯವಾದ ವಿಷಯಗಳಿವೆ. ಅದೇ ಆಹಾರ ಮತ್ತು ವಿಹಾರ. ಇದನ್ನು ಭಗವದ್ಗೀತೆಯ ಆರನೇ ಅಧ್ಯಾಯ, ಹದಿನೇಳನೇ ಶ್ಲೋಕದಲ್ಲಿ ಹೇಳಿದೆ. ಆಹಾರ ವಿಷಯದಲ್ಲಿ ನೀವು ಜಾಸ್ತಿ ತಿನ್ನದಂತೆ ನೋಡಿಕೊಳ್ಳಿ. ಅನೇಕರು ತಮಗೆಷ್ಟು ಬೇಕೋ ಅದಕ್ಕಿಂತ ಹೆಚ್ಚು

ತಿನ್ನುತ್ತಾರೆ. ಸಾಧಾರಣವಾಗಿ ಆಹಾರವನ್ನು ಅರಗಿಸಿಕೊಳ್ಳುವುದರಲ್ಲಿಯೂ ಅವರು ತಪ್ಪು ಮಾಡುತ್ತಾರೆ. ಆಹಾರ ಹೊಸದಾಗಿರಬೇಕು. ಅದರಲ್ಲಿರುವ ದ್ರವಭಾಗ ಆರಿಹೋಗಿರ ಬಾರದು. ಇತರರಿಗೆ ಹಿಂಸೆ ಕೊಟ್ಟು ಸಂಪಾದಿಸಿದ ಅನ್ನವಾಗದಿರಲಿ. ಸುಮ್ಮನೆ ಅನಾ ವಶ್ಯಕವಾದುದನ್ನೆಲ್ಲ ತಿನ್ನಬೇಡಿ. ನಾವು ಎಲ್ಲಿಯವರೆಗೆ ಬದುಕಿರುತ್ತೇವೆಯೊ ಅಲ್ಲಿಯ ವರೆಗೆ ಏನನ್ನಾದರೂ ತಿನ್ನಬೇಕಾಗಿದೆ. ಜೀವನವೇ ಮತ್ತೊಂದು ಜೀವದ ಮೇಲೆ ನಿಂತಿದೆ. ಆದರೂ ಬದುಕಿರುವ ಯಾವ ಪ್ರಾಣಿಗೂ ಯಾತನೆ ಕೊಡದೆ ಸಂಪಾದಿಸಿದ ಆಹಾರ ವಾಗಿರಬೇಕೆಂದು ನಾನು ಹೇಳುತ್ತೇನೆ. ನೀವೇ ಇದರ ಪ್ರಯೋಗ ಮಾಡಿ. ಯಾವಾಗ ಲಾದರೊಮ್ಮೆ ವಿನಾಯತಿ ಮಾಡಿ ಸ್ವಲ್ಪ ಹಬ್ಬದ ಊಟ ಮಾಡಿ, ಅನಂತರ ಒಂದು ದಿನ ಉಪವಾಸವಿರಿ. ಸುಮ್ಮನೆ ಆಹಾರದ ವಿಷಯದಲ್ಲಿ ತಲೆ ಕೆಡಿಸಿ ಕೊಳ್ಳಬೇಡಿ. ಕೆಲವು ದಿನಗಳು ಉಪವಾಸವಿರುವುದು ಒಳ್ಳೆಯದು. ಚಂದ್ರಗತಿಯ ಪ್ರಕಾರ ಕೆಲವುವೇಳೆ ನಮ್ಮಲ್ಲಿ ಹೆಚ್ಚು ದ್ರವವಿರುತ್ತದೆ. ಅಂತಹ ದಿನಗಳಲ್ಲಿ ಅಂದರೆ ಏಕಾದಶಿ ದಿನ ಉಪವಾಸ ಮಾಡುವುದು ಒಳ್ಳೆಯದು.

ನಿಮ್ಮ ಆದರ್ಶ ಮತ್ತು ಭಾವನೆಗೆ ತಕ್ಕ ಕೆಲಸವನ್ನು ತೆಗೆದುಕೊಳ್ಳಿ. ನಿಮ್ಮ ಕರ್ಮ ಆಧ್ಯಾತ್ಮಿಕ ಆದರ್ಶಕ್ಕೆ ಧಕ್ಕೆ ಆಗುವಂತೆ ಇರಬಾರದು. ನೀವೇ ನಿಮಗೆ ಯಾವ ಕೆಲಸ ಹೊಂದಿಕೊಂಡು ಹೋಗುವುದು ಎಂಬುದನ್ನು ನಿರ್ಣಯಿಸಬೇಕಾಗಿದೆ. ನಮ್ಮ ಜೀವನಕ್ಕೆ ಅದು ಹೊಂದಿಕೊಳ್ಳುವಂತಹದಾಗಬೇಕು. ನಿಮ್ಮ ಕೆಲಸದಿಂದ ಬರುವ ವರಮಾನ ದಿಂದ, ಯಾವ ಆತಂಕವೂ ಇಲ್ಲದೆ ಜೀವನ ಮಾಡಿಕೊಂಡು ಹೋಗುವಂತಹದಿರಬೇಕು. ಅದರಿಂದ ನಿಮ್ಮ ಆಧ್ಯಾತ್ಮಿಕ ಜೀವನಕ್ಕೆ ಯಾವ ಘರ್ಷಣೆಯೂ ಆಗಕೂಡದು.

ನಿಮ್ಮ ವ್ಯಾವಹಾರಿಕ ಜೀವನದಲ್ಲಿ, ಯೋಗವನ್ನು ಅಭ್ಯಾಸ ಮಾಡುವುದಕ್ಕೆ ಒಂದು ಒಳ್ಳೆಯ ಅವಕಾಶ ಬರುವುದು. ನಿಮ್ಮ ಕಾರ್ಯ ಕ್ಷೇತ್ರದಲ್ಲಿ ಯಮ–ನಿಯಮಗಳನ್ನು ಅಭ್ಯಾಸ ಮಾಡಿ. ನೀವು ಎಷ್ಟರಮಟ್ಟಿಗೆ ಈ ಆದರ್ಶಗಳನ್ನು ನಿಮ್ಮ ಅನುಷ್ಠಾನದಲ್ಲಿ ತರಲು ಸಾಧ್ಯ ಎಂಬುದನ್ನು ಪರೀಕ್ಷಿಸಿ ನೋಡಿ. ನೀವು ಕೆಲಸ ಮಾಡುತ್ತಿರುವಾಗಲೂ ಇವುಗಳನ್ನು ಅಭ್ಯಾಸ ಮಾಡುವುದಕ್ಕೆ ಸಾಧ್ಯವೆ ಎಂಬುದನ್ನು ಪರೀಕ್ಷಿಸಿ. ಸರಳವಾಗಿರುವ ಉಸಿರಾಡುವುದನ್ನು ಕೂಡ ನೀವು ಅಭ್ಯಾಸ ಮಾಡಬಹುದು. ನೀವು ದಿನವೆಲ್ಲ ಪ್ರಾಪಂಚಿಕ ಕೆಲಸದಲ್ಲಿ ನಿರತರಾಗಿದ್ದರೂ, ಆಧ್ಯಾತ್ಮಿಕ ಆದರ್ಶದಿಂದ ವಿಚಲಿತರಾಗಬೇಡಿ. ಇದು ನಿಮ್ಮ ಸಾಮಾಜಿಕ ಜೀವನಕ್ಕೂ ಅನ್ವಯಿಸುವುದು. ಭೌತಿಕವಾಗಿಯೂ, ನಿಮ್ಮ ಸಾಮಾಜಿಕ ಜೀವನದಲ್ಲಿ ಮತ್ತು ವ್ಯಾವಹಾರಿಕ ಜೀವನದಲ್ಲಿ ನಿಮಗೆ ಬಹಳ ಸಹಾಯ ಮಾಡಿ, ನಿಮ್ಮನ್ನು ಮೇಲುಮಟ್ಟಕ್ಕೆ ಎತ್ತುವುದು ಎಂದು ನಾನು ನಿಮಗೆ ಭರವಸೆ ಕೊಡಬಲ್ಲೆ. ನೀವು ಚೆನ್ನಾಗಿ ಆಲೋಚಿಸಿ ನಿಮಗೆ ಒಗ್ಗುವ ಕೆಲಸವನ್ನು ಪಡೆಯುವುದು ಅತಿಮುಖ್ಯ.

ಯೋಗಜೀವನದ ಅಭ್ಯಾಸ, ಅಧ್ಯಯನ ಮತ್ತು ಯೋಗ್ಯವಾದ ಮನೋರಂಜನೆ ಇವುಗಳಿಗೆ ಸಾಕಷ್ಟು ಕಾಲವನ್ನು ಕೊಟ್ಟು ವಿಹಾರವನ್ನು ಉಪಯೋಗಿಸಿಕೊಳ್ಳಿ. ನಿಮ್ಮ ದೇಹಕ್ಕೆ ಮತ್ತು ಮನಸ್ಸಿಗೆ ಸಾಕಷ್ಟು ಶಿಸ್ತು, ಆಹಾರ, ವಿಹಾರ, ನಿದ್ರೆ ಇವುಗಳನ್ನು ಕೊಡಿ.

೩

ಯೋಗಜೀವನದಲ್ಲಿ ಮುಂದುವರಿಯುವುದಕ್ಕೆ ಯಾವ ಯಾವ ಅಭ್ಯಾಸಗಳು, ನಿಯಮಗಳನ್ನೆಲ್ಲ ಪಾಲಿಸಬೇಕೊ ಅದನ್ನೆಲ್ಲ ಹೇಳಿ ಆಗಿದೆ. ಆಧ್ಯಾತ್ಮಿಕ ಜೀವನದಲ್ಲಿ ಯಾವ ಮಾರ್ಗದಲ್ಲಾಗಲಿ ಮುಂದುವರಿಯುವುದಕ್ಕೆ ಯಮ ಮತ್ತು ನಿಯಮಗಳೆಂಬ ಹತ್ತು ನಿಯಮಗಳನ್ನು ಪಾಲಿಸಬೇಕಾಗಿದೆ. ಅನಂತರ ಆಸನ ಮತ್ತು ಪ್ರಾಣಾಯಾಮ ಇವುಗಳನ್ನು ಕುರಿತು ಹೇಳಿ ಆಗಿದೆ.

ಇವುಗಳೆಲ್ಲ ಸಾಧಕನ ದೇಹ ಮತ್ತು ಮನಸ್ಸಿನ ಮೇಲೆ ಕೆಲವು ಪ್ರಭಾವಗಳನ್ನು ಬೀರುವುದಕ್ಕಾಗಿ. ಆದರೆ ಮನುಷ್ಯ ಏಕಾಕಿಯಲ್ಲ. ಅವನು ಪ್ರಕೃತಿಯಲ್ಲಿ ಒಂದು ಭಾಗವಾಗಿರುವನು. ಆದಕಾರಣ ಅವನ ದೈಹಿಕ ಮತ್ತು ಆಧ್ಯಾತ್ಮಿಕ ವಿಷಯಗಳೆಲ್ಲ ಪ್ರಕೃತಿಯ ನಿಯಮದೊಂದಿಗೆ ಹೊಂದಿಕೊಂಡು ಹೋಗಿದೆ. ಆದಕಾರಣ ಪ್ರಕೃತಿ ಯಾವ ಸಾಧಕನ ಮೇಲೆ ಆಂತರಿಕವಾಗಿ ಮತ್ತು ಬಾಹ್ಯಿಕವಾಗಿ ತನ್ನ ಕೃಪಾದೃಷ್ಟಿಯನ್ನು ಬೀರುವುದೊ ಅವನು ಮುಂದುವರಿಯಬಲ್ಲ.

ಈ ದೃಷ್ಟಿಯಿಂದ ಸಾಧಕ ಯೋಗಮಾರ್ಗದಲ್ಲಿ ಮುಂದುವರಿಯಬೇಕಾದರೆ ಮೂರು ನಿಯಮಗಳನ್ನು ಪರಿಗಣಿಸಬೇಕಾಗಿದೆ. ಮೊದಲನೆಯದಾಗಿ, ಅವನ ದೇಹ ಮತ್ತು ಮನಸ್ಸು ಅದಕ್ಕೆ ಒಗ್ಗಿಕೊಂಡು ಇರಬೇಕು. ಅದಕ್ಕಾಗಿ ಕೆಲವು ಶಿಸ್ತು ಮತ್ತು ಅಭ್ಯಾಸಗಳನ್ನು ಹೇಳಿದೆ. ಇದುವರೆಗೆ ಚರ್ಚಿಸುತ್ತಿದ್ದುದೇ ಇದು. ಎರಡನೆಯದಾಗಿ ಕಾಲ ಅವನಿಗೆ ಸಹಾಯಕವಾಗಿರಬೇಕು. ಮೂರನೆಯದಾಗಿ, ಸ್ಥಳ ಮತ್ತು ಸುತ್ತಮುತ್ತಲ ವಾತಾವರಣ ಅವನಿಗೆ ಅನುಕೂಲವಾಗಿರಬೇಕು. ಇವುಗಳನ್ನೆಲ್ಲ ದೀರ್ಘವಾಗಿ ವಿವರಿಸುತ್ತೇನೆ.

ವ್ಯಕ್ತಿಯ ದೃಷ್ಟಿಯಿಂದ ನೋಡಿದರೆ, ಸಾಧನೆಗೆ ಜೀವನದಲ್ಲಿ ಯಾವುದೊ ಒಂದು ಕಾಲ ಮುಖ್ಯ ಎಂದು ಹೇಳುವುದಕ್ಕೆ ಆಗುವುದಿಲ್ಲ. ಆದರೆ ನಿಮ್ಮ ಜೀವನದಲ್ಲಿ ಕೆಲವು ಕಾಲ, ದಿನದಲ್ಲಿ ಕೆಲವು ಕಾಲ ಅದಕ್ಕೆ ಅನುಕೂಲವಾಗಿರುವುದನ್ನು ನೋಡಬಹುದು. ಆ ಸಮಯದಲ್ಲಿ ಮನಸ್ಸನ್ನು ಏಕಾಗ್ರ ಮಾಡುವುದು, ಧ್ಯಾನಿಸುವುದು ಸುಲಭವಾಗಿ ಕಾಣುವುದು. ಉಳಿದ ಕಾಲದಲ್ಲಿ ಅಷ್ಟು ಸುಲಭವಲ್ಲ. ಸಾಧಕನಿಗೆ ಅನುಕೂಲವಾದ ಸಮಯ ಯಾವುದು ಎಂದು ತಿಳಿಯದೆ ಇದ್ದರೆ, ಅವನು ತುಂಬಾ ಕಷ್ಟಪಟ್ಟು ಕೆಲಸ ಮಾಡಬೇಕಾಗಿರುವುದು. ಆದಕಾರಣವೇ ಯೋಗಿಯಾಗ ಬಯಸುವವನು ಬಾಹ್ಯ ಮತ್ತು ಆಂತರಿಕ ಪ್ರಕೃತಿಯನ್ನು ವಿಭಜನೆ ಮಾಡಬೇಕು. ಅವನ ಮನಸ್ಸು ಯಾವಾಗ ಅಂತರ್ಮುಖವಾಗುವುದು ಮತ್ತು ಯಾವ ಸಮಯದಲ್ಲಿ ಆಧ್ಯಾತ್ಮಿಕ ಹಸಿವನ್ನು ಪಡೆಯುತ್ತಾನೊ ಅದನ್ನು ಕಂಡುಹಿಡಿಯಬೇಕು. ಯಾವಾಗ ಆಧ್ಯಾತಿಕ ಹಸಿವು ಬರುವುದೊ ಆಗ ಅವನು ಕಷ್ಟಪಟ್ಟು ಸಾಧನೆ ಮಾಡಬೇಕು. ಸೂರ್ಯ ಬೆಳಗುತ್ತಿರುವಾಗಲೇ ಹುಲ್ಲನ್ನು ಒಣಗಿಸಿಕೊಳ್ಳಿ ಎಂಬ ಗಾದೆಯಿದೆ. ಇದು ನದೀ ಮುಖವಾಗಿ ಹರಿಯುವ ಉಬ್ಬರದ ಅಲೆಯಂತೆ. ಉಬ್ಬರದ ಅಲೆ ಬಂದಾಗ ನದಿ ಭರ್ತಿಯಾಗುವುದು. ಆಗ ದೊಡ್ಡ ಪ್ರವಾಹ ಇರುವುದು. ಈ ಪ್ರವಾಹ ಬಹಳ ಹೊತ್ತು ಇರುವುದಿಲ್ಲ ಎಂಬುದನ್ನು ತಿಳಿದುಕೊಳ್ಳಿ. ಇಳಿತ ಪ್ರಾರಂಭವಾದಾಗ

ನಿಮ್ಮ ಪ್ರಗತಿ ಕುಂಠಿತವಾಗುವುದು. ನಿಮ್ಮ ಜೀವನದ ಪ್ರವಾಹದಲ್ಲಿ ಉಬ್ಬರದ ಅಲೆ ಇದೆ. ಅದು ಬಂದಾಗ ಕಷ್ಟಪಟ್ಟು ಸಾಧನೆ ಮಾಡಿ, ಅಧ್ಯಯನ ಮಾಡಿ.

ಒಬ್ಬ ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿದಂತೆ, ಅವನು ಯಾವ ಅಲೆಗೂ ಕಾಯಬೇಕಾಗಿಲ್ಲ. ಪ್ರತಿಯೊಂದು ಕ್ಷಣವೂ ಅವನಿಗೆ ಸಕಾಲವೇ ಆಗಿರುವುದು. ಅಂತಹವನು ಕಾಲಕ್ಕೆ ಕಾಯಬೇಕಾಗಿಲ್ಲ. ಅವನ ಜೀವನ ಯಾವಾಗಲೂ ಹರಿಯುತ್ತ ಮುಂದುವರಿಯುತ್ತಿರುವುದು. ಆದರೆ ಅಂತಹ ಸ್ಥಿತಿ ಬರುವುದಕ್ಕೆ ಮುಂಚೆ, ಅವನು ಬಾಹ್ಯ ಸಹಾಯದ ಪ್ರಯೋಜನವನ್ನು ಸ್ವೀಕರಿಸಬೇಕಾಗಿದೆ.

ಬಾಹ್ಯ ದೃಷ್ಟಿಯಿಂದ ಕಾಲವನ್ನು ನಾವು ಬೇರೊಂದು ಬಗೆಯಿಂದಲೂ ನೋಡಬೇಕಾಗಿದೆ. ನಮ್ಮ ಸ್ವಭಾವವನ್ನು ಗಣನೆಗೆ ತಾರದೆ, ದಿನದಲ್ಲಿ ಕೆಲವು ಕಾಲ ಪ್ರಕೃತಿಯನ್ನೆಲ್ಲ ಆಳುವ ಕೆಲವು ಸ್ಪಂದನಗಳು ಇವೆ. ಪ್ರಕೃತಿ ಮೂರು ಗುಣಗಳಿಂದ ಆಗಿದೆ. ಅದೇ ಸತ್ವ, ರಜಸ್ ಮತ್ತು ತಮಸ್. ಸತ್ವದಲ್ಲಿ ಶಾಂತಿ, ಸಮತ್ವ, ಸಮಾಧಾನ ಮುಂತಾದ ಗುಣಗಳಿವೆ. ರಜಸ್ಸಿನಲ್ಲಿ ಯಾವಾಗಲೂ ಬಾಹ್ಯದಲ್ಲಿ ಕ್ರಿಯಾಮುಖನಾಗಿರುವನು. ತಮಸ್ ಎಂದರೆ ಸೋಮಾರಿತನ. ಬಾಹ್ಯಪ್ರಕೃತಿ ಈ ಮೂರುಗುಣಗಳಿಂದ ಆಗಿದೆ. ಪ್ರಕೃತಿಮಾತೆ, ವೈವಿಧ್ಯತೆಯ ಸೌಂದರ್ಯಕ್ಕಾಗಿ ಈ ಮೂರು ಗುಣಗಳನ್ನು ತೋಟದಲ್ಲಿ ಚೆಲ್ಲಿದಂತೆ ಇದೆ. ಶಾಂತಿ, ಸಮಾಧಾನ, ಸಮತ್ವ ಮುಂತಾದ ಗುಣಗಳನ್ನು ದಿನದಲ್ಲಿ ಕೆಲವುಕಾಲ ಕಾಣುತ್ತೇವೆ. ಯೋಗಾಭ್ಯಾಸವನ್ನು ದಿನದ ಪ್ರಶಾಂತ ಸಮಯದಲ್ಲಿ ಮಾಡಬೇಕು.

ಪ್ರಕೃತಿಯೊಂದಿಗೆ ನಾವು ನಿಕಟವಾಗಿ ವರ್ತಿಸಿದರೆ, ಪ್ರಕೃತಿಯಲ್ಲಿ ಇಂತಹ ಶಾಂತಿ ತಾಂಡವವಾಡುವ ಕೆಲವು ಕಾಲಗಳಿರುವುದು ನಿಮಗೆ ವೇದ್ಯವಾಗುವುದು. ಆಗ ಸೃಷ್ಟಿಯಲ್ಲಿರುವ ಪ್ರತಿಯೊಂದು ವಸ್ತುವಿನ ಮೇಲೂ ಪ್ರಕೃತಿ ತನ್ನ ಪ್ರಭಾವವನ್ನು ಬೀರುವುದು. ಪ್ರಾಣಿಗಳು, ಹಕ್ಕಿಗಳು, ತರುಲತೆಗಳು, ಹೂವು, ನದಿ, ಮತ್ತು ಬೀಸುವ ಗಾಳಿ ಕೂಡ ಅಂತಹ ಸಮಯದಲ್ಲಿ ಶಾಂತಿಯಿಂದ ತುಂಬಿತುಳುಕಾಡುವಂತೆ ಕಾಣುವುದು. ಇದನ್ನೆಲ್ಲ ನೋಡಬಲ್ಲ, ಅನುಭವಿಸಬಲ್ಲ ಮನುಷ್ಯ ಇಂತಹ ಅಂತರ್ಮುಖ ಪ್ರವಾಹದ ಪ್ರಯೋಜನವನ್ನು ಪಡೆದುಕೊಳ್ಳದೆ ಹೇಗೆ ಇರುವನು ?

ಪ್ರಕೃತಿಯಲ್ಲಿ ಇಂತಹ ಪ್ರಶಾಂತಿ ಇರುವಾಗ, ನಿಮ್ಮ ಸುತ್ತಮುತ್ತಲ ವಾತಾವರಣ ಸ್ತಬ್ಧವಾಗಿರುವಾಗ, ಇಂತಹ ಸಮಯದಲ್ಲಿ ಸಾಧನೆ ಮಾಡಿದರೆ ಉಳಿದ ಕಾಲಕ್ಕಿಂತ ಹೆಚ್ಚು ಪ್ರಯೋಜನವಾಗುವುದು. ಇತರ ಕಾಲದಲ್ಲಿ ನಾವು ಪ್ರಕೃತಿಗೆ ವಿರೋಧವಾಗಿ ಮಾಡಬೇಕಾಗುವುದು. ನೀವು ಒಂದು ಸಂಗೀತ ಕಛೇರಿ ಮಾಡುತ್ತಿದ್ದೀರಿ ಎಂದು ಭಾವಿಸಿ. ನಿಮಗೆ ವಿರೋಧವಾದ ವಾತಾವರಣ ಇದ್ದರೆ, ನೀವು ಚೆನ್ನಾಗಿ ಹಾಡುವುದಕ್ಕೆ ಆಗುವುದೆ? ಸಭಿಕರು ತಾರಾಡುತ್ತಿರುವಾಗ, ಮಾತನಾಡುತ್ತಿರುವಾಗ, ನಿರ್ಲಕ್ಷದಿಂದ ಇರುವಾಗ ನೀವು ಚೆನ್ನಾಗಿ ಹಾಡಲು ಸಾಧ್ಯವೆ ? ಇಂತಹ ಪರಿಸ್ಥಿತಿಯಲ್ಲಿ ನಿಮಗೆ ಹಾಡುವುದಕ್ಕೆ ತುಂಬಾ ತೊಂದರೆಯಾಗುವುದು. ಯೋಗಾಭ್ಯಾಸಕ್ಕೆ ಇದು ಅನ್ವಯಿಸುವುದು.

ಆಧ್ಯಾತ್ಮಿಕ ಸಾಧನೆಗೆ ಅನುಕೂಲವಾದ ನಾಲ್ಕು ಸಮಯಗಳಿವೆ. ಒಂದು, ದಿನದಲ್ಲಿ ಸಂಧ್ಯ ಅಥವಾ ಸಂಗಮ ಎಂದು ಕರೆಯುತ್ತಾರೆ. ಆಗ ಸತ್ವಗುಣ, ಸಮತ್ವ ಪ್ರಧಾನವಾಗಿ ಶಾಂತಿಯಿಂದ ಕೂಡಿರುವುದು. ಇವೇ ಸೂರ್ಯೋದಯ, ಮಧ್ಯಾಹ್ನ, ಸೂರ್ಯಾಸ್ತ ಮತ್ತು ಅರ್ಧರಾತ್ರಿ. ಪ್ರತಿಯೊಂದು ಕಾಲದಲ್ಲಿ ಸುಮಾರು ೪೫ ನಿಮಿಷ ಅತ್ಯಂತ ಸಮಾಧಾನವಾಗಿರುವುದು. ಆ ಕಾಲಕ್ಕೆ 22½ ನಿಮಿಷ ಮುಂಚೆ ಮತ್ತು 22½ ನಿಮಿಷ ಆನಂತರ. ಆಗ ಪ್ರಕೃತಿ ಯೋಗಸ್ಥ ಸ್ಥಿತಿಯಲ್ಲಿರುವುದು. ನೀವು ಈ ಕಾಲವನ್ನು ಗಮನಿಸಿದರೆ, ನಿಮ್ಮ ಮನಸ್ಸು ಆ ಸಮಯದಲ್ಲಿ ಬಾಹ್ಯಕಾರ್ಯಗಳನ್ನೆಲ್ಲ ಬಿಟ್ಟು ಅಂತರ್ಮುಖವಾಗು ಎಂದು ಪ್ರೇರಿಸುತ್ತಿರುವಂತೆ ಕಾಣುವುದು. ಈ ನಾಲ್ಕು ಸಮಯಗಳಲ್ಲಿ ಪ್ರಕೃತಿಯೇ ಅಂತರ್ಮುಖವಾಗಿರುವಾಗ ಅವುಗಳ ಸಹಾಯವನ್ನು ಪಡೆದುಕೊಳ್ಳಬಹುದು. ಆಗ ಪ್ರಕೃತಿಯೇ ಗಾಢ ಧ್ಯಾನದಲ್ಲಿರುವಂತೆ ಇದೆ. ಆ ಸಮಯ ಹೆಚ್ಚು ಫಲಕಾರಿಯಾಗುವುದು. ಏಕೆಂದರೆ ಆ ಸಮಯದಲ್ಲಿ ಉಳಿದ ಯೋಗಿಗಳು ಆಧ್ಯಾತ್ಮಿಕ ಸಾಧನೆಯಲ್ಲಿ ನಿರತರಾಗಿರುವಾಗ ಅವರ ಭಾವನೆಯ ಸಮಷ್ಟಿ ಸ್ಪಂದನದ ಸಹಾಯವನ್ನು ಪಡೆದುಕೊಳ್ಳಬಹುದು.

ಕೆಲವರಿಗೆ ಅಂತಹ ಸಮಯದಲ್ಲಿ ಸಾಧನೆ ಮಾಡುವುದಕ್ಕೆ ಅವಕಾಶವಿಲ್ಲದೇ ಇರಬಹುದು. ಪ್ರಯೋಜನಕಾರಿಯಾದ ಬಾಹ್ಯಪ್ರವಾಹದ ಉಪಕಾರವನ್ನು ನೀವು ಉಪಯೋಗಿಸಿಕೊಳ್ಳುವ ಸ್ಥಿತಿಯಲ್ಲಿ ಇಲ್ಲದೇ ಇರುವುದು ನಿಮ್ಮ ದೌರ್ಭಾಗ್ಯ. ಪೂರ್ವಿಕರು ಹೇಳಿರುವ ಪ್ರಕಾರ ನಿಮಗೆ ನಡೆಯುವುದಕ್ಕೆ ಆಗದೆ ಇದ್ದರೆ, ನಿಮ್ಮ ಸ್ವಂತ ಪ್ರಯತ್ನದಿಂದ ನಿಮ್ಮ ಸುತ್ತಲೂ ಸ್ಪಂದನವನ್ನು ಉಂಟುಮಾಡಿಕೊಳ್ಳಿ. ಕೆಲವು ಸಮಯದಲ್ಲಿ ಅವು ನಿಮ್ಮ ಮೇಲೆ ತಮ್ಮ ಪ್ರಭಾವವನ್ನು ಬೀರಬಲ್ಲದು. ನಿಮಗೆ ಸರಿಯಾದ ಕಾಲವನ್ನು ನೀವೇ ಆರಿಸಿಕೊಳ್ಳಿ. ಆದರೆ ಆ ಸಮಯದಲ್ಲಿ ಗಡಿಯಾರದಂತೆ ದಿನನಿತ್ಯವೂ ಬಿಡದೆ ಮಾಡಬೇಕು. ಇದು. ಯಾವುದೋ ಕ್ಲುಪ್ತ ಕಾಲದಲ್ಲಿ ಊಟಮಾಡುವಂತೆ ಆ ಸಮಯ ಬಂತು ಅಂದರೆ ನಮಗೆ ಹಸಿವಾಗುವುದು. ಅಭ್ಯಾಸ ಬಲದಿಂದ ನಮ್ಮ ಸುತ್ತಲೂ ಈ ಸ್ಪಂದನವನ್ನುಂಟುಮಾಡಿಕೊಳ್ಳಿ. ಅದು ಒಂದು ಕಾಲದಲ್ಲಿ ಕ್ಲುಪ್ತವಾಗಿರಬೇಕು. ಪ್ರತಿನಿತ್ಯವೂ ಒಡನೆ ಮಾಡುವುದು ಅತ್ಯಂತ ಆವಶ್ಯಕ. ಇವತ್ತು ನೀವು ಆರು ಗಂಟೆಗೆ, ನಾಳೆ ಏಳು ಗಂಟೆಗೆ, ಇನ್ನೊಂದು ದಿನ ಹತ್ತು ಗಂಟೆಗೆ ಮಾಡಿದರೆ ನಿಮಗೆ ಸ್ವಲ್ಪ ಪ್ರಯೋಜನವೇನೋ ಆಗುವುದು. ಆದರೆ ಅಧಿಕ ಪ್ರಯೋಜನ ನಿಮಗೆ ಲಭಿಸುವುದಿಲ್ಲ. ಕೆಲವು ದಿನ ಸಾಧನೆ ಮಾಡುವುದಕ್ಕೆ ನಿಮಗೆ ಮನಸ್ಸೇ ಬರುವುದಿಲ್ಲ. ಆ ಸಮಯದಲ್ಲಿ ನಮ್ಮ ಮನಸ್ಸನ್ನು ಮಾಡುವಂತೆ ಪ್ರಚೋದಿಸಬೇಕು. ಇಂತಹ ನೀರಸವಾದ ದಿನಗಳಲ್ಲಿ, ಅಭ್ಯಾಸಬಲ ನಮಗೆ ಸಹಾಯ ಮಾಡುವುದು. ಬಾಹ್ಯ ಪ್ರಕೃತಿ ಕೂಡ ನಿಮ್ಮ ಮನಸ್ಸನ್ನು ಮೇಲೆತ್ತುವುದು.

ನಮ್ಮ ಸಾಧನೆಗೆ ಹಿತಕಾರಿಯಾದ ಮೂರನೆಯ ವಿಷಯವೇ ಸ್ಥಳ, ಹಿತಕಾರಿಯಾದಂತಹ ಬಾಹ್ಯ ಪ್ರಕೃತಿಯ ಸನ್ನಿವೇಶ. ಪ್ರಾರಂಭದಲ್ಲಿರುವವನಿಗೆ ಎಲ್ಲಾ ಸ್ಥಳಗಳೂ

ಸಹಾಯಕವಲ್ಲ. ನಾವೆಲ್ಲ ಸುಂದರವಾದ ಸ್ಥಳಗಳಿಗೆ ಹೋಗಿದ್ದೇವೆ. ಅಲ್ಲಿ ನಮ್ಮ ಮನಸ್ಸು ಸ್ವಾಭಾವಿಕವಾಗಿ ಅಂತರ್ಮುಖವಾಗುವುದು. ಅಲ್ಲಿ ನಮ್ಮ ಮನಸ್ಸು ತನ್ನ ತೌರೂರಾದ ಅನಂತಕ್ಕೆ ಹೋಗಲು ಇಚ್ಛಿಸುವುದು. ಕೆಲವು ವೇಳೆ ನೀವೇನಾದರೂ ಸಮುದ್ರದ ಕಡೆಗೆ ಹೋದರೆ, ಅಲ್ಲಿ ನಿರ್ಜನವಾದ ಯಾವುದಾದರೂ ಸ್ಥಳವನ್ನು ಆರಿಸಿಕೊಳ್ಳಿ. ಮುಂದಿರುವ ಅನಂತ ಸಾಗರವನ್ನು, ಅನಂತಾಕಾಶವನ್ನು ನೋಡಿ (ನಾವು ಜನ ಬಾಹುಳ್ಯವಿರುವ ಸಮುದ್ರದ ತೀರವನ್ನು ಧ್ಯಾನಕ್ಕೆ ಸೂಚಿಸುವುದಿಲ್ಲ). ನಮ್ಮ ಮನಸ್ಸು ಸಾಂತವಾದ ಬೇಲಿಯನ್ನೆಲ್ಲ ಕಿತ್ತುಕೊಂಡು ಹೋಗಲು ಇಚ್ಛಿಸುವುದು. ಇಂತಹ ಸುಂದರವಾದ ಸ್ಥಳಗಳಲ್ಲಿ ನಮ್ಮ ಮನಸ್ಸಿಗೆ ಬಂದ ಸ್ಫೂರ್ತಿಯನ್ನು, ಸಾಧಾರಣ ಸ್ಥಳಗಳಲ್ಲಿ ಎಷ್ಟು ದೀರ್ಘ ಅಭ್ಯಾಸ ಮಾಡಿದರೂ ಪಡೆಯುವುದಕ್ಕೆ ಆಗುವುದಿಲ್ಲ. ಸುಂದರ ಪ್ರಕೃತಿ ದೃಶ್ಯಗಳು ನಮ್ಮ ಮನಸ್ಸಿನ ಮೇಲೆ ಅದ್ಭುತವಾದ ಪ್ರಭಾವವನ್ನು ಬೀರುವುದು. ಧ್ಯಾನಾಭ್ಯಾಸಕ್ಕೆ ಧ್ಯಾನಾನಂದಕ್ಕೆ ಇಂತಹ ಸ್ಥಳಗಳು ಪ್ರಶಸ್ತವಾಗಿವೆ.

ಕೆಲವು ವರುಷಗಳ ಹಿಂದೆ ನಾನು ಅಮೇರಿಕಾ ದೇಶದ ನ್ಯಾಷನಲ್ ಪಾರ್ಕ್‌ಗಳನ್ನು ನೋಡುವುದಕ್ಕೆ ಹೋಗಿದ್ದೆ. ಅದರಲ್ಲಿ ಗ್ರಾಂಡ್ ಕ್ಯಾನಿಯನ್ ಒಂದು. ನಾನು ಜೊತೆಯವರಿಂದ ಬೇರಾಗಿ ಬಂದು ನಿರ್ಜನ ಪ್ರದೇಶದಲ್ಲಿ ಕುಳಿತು ಅಲ್ಲಿಯ ಸೌಂದರ್ಯವನ್ನು ನೋಡುತ್ತಿದ್ದೆ. ನನಗೆ ಕಾಲದ ಭಾವನೆಯೆ ಇರಲಿಲ್ಲ. ಅದರಂತೆ ದೇಶದ ಭಾವನೆಯೂ ಹೋಯಿತು. ನಾನೊಬ್ಬನೇ ಅನಂತಸಾಗರದಲ್ಲಿ ತೇಲುತ್ತಿರುವಂತೆ ಕಂಡೆ. ನಾನು ಅಲ್ಲಿ ಎಷ್ಟು ಹೊತ್ತು ಇದ್ದೆನೊ ಗೊತ್ತಿಲ್ಲ. ಯಾರೊ ಹಿಂದಿನಿಂದ ಕೂಗಿದಾಗ ಎಚ್ಚರವಾಯಿತು. ನಿಮ್ಮ ಬಸ್ಸು ಆಗಲೆ ಹೊರಟುಹೋಯಿತು. ನಾಳೆಯ ತನಕ ಬಸ್ಸಿಲ್ಲ ಎಂದರು.

ನನಗೆ ವೇಳಾಪಟ್ಟಿಗಳು ಇವುಗಳನ್ನೆಲ್ಲಾ ನೋಡಿ ರೇಗಿತು. ಊರಿಂದೂರಿಗೆ ಪಾದಚಾರಿಯಾಗಿ ಯಾವ ಕಾರ್ಯಕ್ರಮವೂ ವೇಳಾಪಟ್ಟಿಯೂ ಇಲ್ಲದೆ ಅಲೆಯುವ ಸಾಧುವಿನ ಜೀವನ ಹಾಯಾಗಿ ಕಾಣಿಸಿತು. ನನಗೆ ಇಂತಹುದೇ ಮತ್ತೊಂದು ಅನುಭವ ಆಯಿತು. ಆದರೆ ಅದು ಬೇರೆ ವಿಧವಾಗಿ ಇತ್ತು. ಕೆಲವು ವರುಷಗಳ ಹಿಂದೆ ಇಂಡಿಯಾ ದೇಶದಲ್ಲಿ ಅಸ್ಸಾಂ ಬೆಟ್ಟಗಳ ಮೇಲೆ ಕಾಮಾಖ್ಯಾ ದೇವಸ್ಥಾನಕ್ಕೆ ಹೋಗಿದ್ದೆ. ಅಲ್ಲಿಂದ ಸುಂದರವಾದ ಬ್ರಹ್ಮಪುತ್ರಾ ನದಿಯನ್ನು ನೋಡಬಹುದಾಗಿತ್ತು. ನನ್ನ ಜೀವನದಲ್ಲಿ ಆ ದಿನವನ್ನು ಎಂದಿಗೂ ಮರೆಯುವಂತೆ ಇಲ್ಲ. ಅವ್ಯಕ್ತವಾದ ಯಾವುದೋ ಆನಂದವನ್ನು ನನ್ನ ಮನ ದಣಿಯ ನೋಡಿದೆ. ನಾನು ಅಷ್ಟೊಂದು ತೀವ್ರವಾಗಿ ಎಂದೂ ಧ್ಯಾನ ಮಾಡಿರಲಿಲ್ಲ. ಅಲ್ಲಿ ಮತ್ತಾರೂ ಇರಲಿಲ್ಲ. ನನ್ನನ್ನು ಯಾವ ಸ್ಥಳಕ್ಕಾಗಲಿ, ಕಾರ್ಯಕ್ಕಾಗಲಿ ಬಂಧಿಸಲು ಯಾವ ವೇಳಾಪಟ್ಟಿಯೂ ಇರಲಿಲ್ಲ.

ಈ ದೇಶದ ಸುಂದರವಾದ ಸ್ಥಳಗಳನ್ನು ನೋಡಿದಾಗ, ಭರತಖಂಡದ ಸುಂದರವಾದ ತೀರ್ಥಸ್ಥಳಗಳು ನನ್ನ ನೆನಪಿಗೆ ಬರುವುದು ಸಹಜ. ಆದರೆ ಈ ಸುಂದರ ದೃಶ್ಯವನ್ನು ಎರಡು ಜನಾಂಗದವರು ನೋಡುವ ದೃಷ್ಟಿ ವ್ಯತ್ಯಾಸವಾಗಿದೆ. ಅಮೇರಿಕಾ ದೇಶದಲ್ಲಿ ಅಂತಹ ಸ್ಥಳಕ್ಕೆ ಹೋಗುವವರು ವಿಲಾಸಿಗಳು, ಬರಿಯ ಪ್ರೇಕ್ಷಕರು, ಸುಖಾಸ್ವಾದನೆ

ಯೊಂದೇ ಅವರ ಗುರಿ. ಬೇಕಾದಷ್ಟು ಗುಜಗುಂಪು ಇಲ್ಲಿದೆ. ಆದರೆ ಇಂಡಿಯಾ ದೇಶದಲ್ಲಿ ಒಂದು ಪವಿತ್ರ ವಾತಾವರಣ, ಆಧ್ಯಾತ್ಮಿಕತೆ ಅನೇಕ ಕಾಲದಿಂದಲೂ ಈ ಸುಂದರವಾದ ತೀರ್ಥಸ್ಥಳಗಳಲ್ಲಿ ತಾಂಡವವಾಡುತ್ತಿದೆ. ಆದರೆ ನಾವು ಆರೋಗ್ಯ ವಿಧಿಗೆ ಗಮನ ಕೊಡದೆ, ಸೌಂದರ್ಯದ ಕಡೆಗೆ ಗಮನ ಕೊಡದೆ, ಆಧ್ಯಾತ್ಮಿಕ ಭಾವನೆಗಳಿಗೆ ಪ್ರೋತ್ಸಾಹ ಕೊಟ್ಟಿದ್ದೇವೆ. ಆ ವಿಷಯ ಎಲ್ಲರಿಗಿಂತ ನನಗೆ ಚೆನ್ನಾಗಿ ಗೊತ್ತು. ನಾನು ಅನೇಕವೇಳೆ ಅಮೇರಿಕಾ ದೇಶದ ನ್ಯಾಷನಲ್ ಪಾರ್ಕಿನಲ್ಲಿರುವಂತೆ ಅನುಕೂಲಗಳು ಶಿಸ್ತು, ಶುಭ್ರತೆ, ಆರೋಗ್ಯಕರವಾದ ವಾತಾವರಣ ಭರತಖಂಡದಲ್ಲಿ ಏತಕ್ಕೆ ಇರಬಾರದು ಎಂದು ನಾನು ಆಲೋಚಿಸಿದ್ದೇನೆ. ಆದರೆ ನೀವು ಅನಾರೋಗ್ಯಕರವಾದ ಅವ್ಯಸ್ಥೆಯಿಂದ ಕೂಡಿದ ತೀರ್ಥಸ್ಥಳಗಳಿಗೆ ಬಂದರೆ, ನಿಮಗೆ ಅನುಭವಿಸಬಲ್ಲ ಹೃದಯವಿದ್ದರೆ, ನಿಮ್ಮ ಸುತ್ತಲೂ ಆಧ್ಯಾತ್ಮಿಕ ವಾತಾವರಣವನ್ನು ಅನುಭವಿಸಬಹುದು. ಈ ಎರಡೂ ದೇಶಗಳಲ್ಲಿಯೂ ಒಂದು ಸಾಮರಸ್ಯವಿದ್ದರೆ, ಭರತಖಂಡದ ಅದ್ಭುತವಾದ ಆಧ್ಯಾತ್ಮಿಕ ಭಾವನೆ, ಅಮೇರಿಕಾ ದೇಶದ ಶುಭ್ರತೆ ಮತ್ತು ಶಿಸ್ತು ಒಂದು ಕಡೆ ಸೇರಿದರೆ ಅದ್ಭುತವಾದ ಪರಿಣಾಮ ಉಂಟಾಗುವುದು.

ಆದರೆ ಈಗ ಇರುವ ಸ್ಥಿತಿಯಲ್ಲಿ, ಭರತಖಂಡದಲ್ಲಿ ಸೌಂದರ್ಯವನ್ನು ಧ್ಯಾನಮಗ್ನನಾಗಿ ಅನುಭವಿಸುವಂತೆ ಅಮೇರಿಕಾ ದೇಶದಲ್ಲಿ ಮಾಡಲಾಗುವುದಿಲ್ಲ. ಅಮೇರಿಕಾ ದೇಶದಲ್ಲಿ ಯೋಗವನ್ನು ಅಭ್ಯಾಸಮಾಡುತ್ತಿದ್ದ ಯುವಕನೊಬ್ಬನ ಕಥೆಯೊಂದಿದೆ. ಅವನು ಸುತ್ತಲೂ ನೀರಿನಿಂದ ಆವೃತವಾದ ಬಂಡೆಯ ಮೇಲೆ ಧ್ಯಾನಕ್ಕೆ ಕುಳಿತುಕೊಳ್ಳುವುದು ಬಹಳ ಒಳ್ಳೆಯದು ಎಂಬುದನ್ನು ಓದಿದ್ದ. ಅವನು ವಾಷಿಂಗ್‌ಟನ್ ನಗರದ ನದೀತೀರಕ್ಕೆ ಹೋಗಿ, ಅಲ್ಲಿಂದ ನದಿಯಮೇಲೆ ಈಜಿಕೊಂಡು ಮಧ್ಯದಲ್ಲಿದ್ದ ಒಂದು ಬಂಡೆಯಮೇಲೆ ಧ್ಯಾನಕ್ಕೆ ಕುಳಿತ. ಬಹಳ ಹೊತ್ತು ಧ್ಯಾನಮಗ್ನನಾಗಿರಲು ಆಗಲಿಲ್ಲ. ನದೀ ತೀರದಲ್ಲಿ ದೊಡ್ಡ ಜನರ ಗುಂಪೊಂದು ಸೇರಿತು. ಅದರಲ್ಲಿ ಪೋಲೀಸಿನವನೂ ಇದ್ದನು. ಅವನು "ಏನು, ನೀನು ಕಾನೂನಿಗೆ ವಿರೋಧವಾಗಿ ಹೋಗುತ್ತಿರುವುದು ಗೊತ್ತಿಲ್ಲವೆ? ನೀನೇನು ಆತ್ಮಹತ್ಯಮಾಡಿಕೊಳ್ಳಬೇಕೆಂದು ಇದ್ದೀಯೇನು? ಅಲ್ಲಿಂದ ಇಳಿದು ದಡದ ಸಮೀಪಕ್ಕೆ ಬಾ" ಎಂದನು.

ಪ್ರಪಂಚದ ಇತ್ತಕಡೆ, ಜನ ಯಾವಾಗಲೂ ಮತ್ತೊಬ್ಬರನ್ನು ಉದ್ಧರಿಸುವುದರಲ್ಲಿ ಕಾತರರಾಗಿರುವಾಗ ನಾವು ಸ್ವಲ್ಪ ಜೋಪಾನವಾಗಿರಬೇಕು. ನಿಮ್ಮ ರೂಮಿನಲ್ಲಿ, ಒಂದು ಕಡೆ ಕುಳಿತುಕೊಳ್ಳುವುದು ಹೊರಗೆ ಕುಳಿತುಕೊಳ್ಳುವುದಕ್ಕಿಂತ ಒಳ್ಳೆಯದಾಗಿ ಕಾಣುವುದು. ಸುತ್ತಲೂ ಜನ ನಿಮ್ಮನ್ನು ನೋಡುತ್ತಿಲ್ಲ ಎಂಬುದು ನಿಜವಾಗಿ ಗೊತ್ತಾದಲ್ಲದೆ, ನಿಮ ಕೋಣೆಯಲ್ಲಿ ಧ್ಯಾನಿಸುವುದೇ ಮೇಲು. ನಿಮಗೆ ಅನಂತಾಕಾಶವನ್ನು ನೋಡುವುದಕ್ಕೆ ಅವಕಾಶವಿದ್ದರೆ ಅದು ನಾಲ್ಕು ಗೋಡೆಗಳಿಂದ ಆವೃತವಾದ ರೂಮಿಗಿಂತ ಮೇಲು. ಧ್ಯಾನಕ್ಕೆ ಅತ್ಯಂತ ಶ್ರೇಷ್ಠವಾದ ಮೊದಲನೆಯ ಸ್ಥಳ ಸಿಕ್ಕದೆ ಇದ್ದರೆ, ಎರಡನೆಯದೊ ಅಥವಾ ಮೂರನೆಯ ದರ್ಜೆಯದನ್ನೊ ಯಾವುದಾದರೂ ಆರಿಸಿಕೊಳ್ಳಿ. ನಿಮ್ಮ ಮನೆಯಲ್ಲೇ ಆ ವಾತಾವರಣವನ್ನು ಉತ್ಪತ್ತಿಮಾಡಿಕೊಳ್ಳಿ. ಸಾಧ್ಯವಾದರೆ ಧ್ಯಾಮಾಡುವುದಕ್ಕೆ ಮಾತ್ರ

ಒಂದುಕೋಣೆಯನ್ನು ಪ್ರತ್ಯೇಕಮಾಡಿ. ಅದು ಸಾಧ್ಯವಿಲ್ಲದೇ ಇದ್ದರೆ ಕೋಣೆಯ ಒಂದು ಮೂಲೆಯನ್ನಾದರೂ ಇಡಿ. ಅದನ್ನು ಮತ್ತಾವುದಕ್ಕೂ ಉಪಯೋಗಿಸಬೇಡಿ. ಅದನ್ನು ಧ್ಯಾನಕ್ಕೆ ಮಾತ್ರ ಮೀಸಲಾಗಿಡಿ. ನಿಮ್ಮ ಶ್ರೇಷ್ಠ ಆದರ್ಶಕ್ಕೆ ಹೊಂದಿಕೊಳ್ಳುವ ಯಾವುದಾದರೂ ಚಿತ್ರವನ್ನು ಬೇಕಾದರೆ ಅಲ್ಲಿಡಿ. ಇದರಿಂದ ನಿಮ್ಮ ಮನಸ್ಸನ್ನು ಅಂತರ್ಮುಖ ಮಾಡುವುದು ಸುಲಭವಾಗುವುದು. ಕ್ರಮೇಣ ಆ ಮೂಲೆಯಲ್ಲಿ ಆಧ್ಯಾತ್ಮಿಕ ಸ್ಪಂದನ ಸಂಗ್ರಹವಾಗುತ್ತಾ ಬರುವುದು. ಅದು ನಿಮಗೆ ಬಹಳ ಸಹಕಾರಿಯಾಗುವುದು. ಊದಿನ ಕಡ್ಡಿ ಸಿಕ್ಕಿದರೆ ಅದನ್ನು ಅಲ್ಲಿ ಹಚ್ಚಿ. ನಿಮಗೆ ಹೂವು ಇಷ್ಟವಾದರೆ ಅದನ್ನು ಅಲ್ಲಿಡಿ. ಇವುಗಳೆಲ್ಲ ನೀವು ಧ್ಯಾನಮಾಡುವ ಸ್ಥಳದಲ್ಲಿರಲಿ.

ನಾವು ಚರ್ಚಿಸುತ್ತಿದ್ದ ಯೋಗ ಜೀವನದ ಪೂರ್ವಸಿದ್ಧತೆ ವಿಷಯವಾಗಿ ನಾವು ಮತ್ತೊಂದನ್ನು ಹೇಳಬೇಕಾಗಿದೆ. ಬೇಸಾಯ ಮತ್ತು ಯೋಗವನ್ನು ಹೋಲಿಸುತ್ತಿದ್ದುದು ನಿಮಗೆ ಜ್ಞಾಪಕವಿರಬಹುದು. ಬೇಸಾಯಕ್ಕೆ ನೀರಿನ ಆವಶ್ಯಕತೆ ಇದೆ. ಯೋಗ ಜೀವನದಲ್ಲಿ ನೀರನ್ನು ಹಾಯಿಸುವುದು ಎಂದರೆ, ನಿಮ್ಮ ಆದರ್ಶದ ಮೇಲೆ ಉತ್ಕಟ ಪ್ರೀತಿ ವಿಶ್ವಾಸಗಳನ್ನು ನೀವು ಉತ್ಪತ್ತಿ ಮಾಡಿಕೊಳ್ಳಬೇಕು. ಮತ್ತು ಈ ಪ್ರಪಂಚದಲ್ಲಿರುವವರನ್ನು ಪ್ರೀತಿಸಬೇಕು. ನೀನು ಜಗಳ ಕಾಯುವ ಸ್ವಭಾವದವನಾದರೆ, ನೀನು ಇತರರಿಗೆ ತೊಂದರೆ ಕೊಟ್ಟರೆ, ಇತರರು ನಿನಗೆ ತೊಂದರೆ ಕೊಟ್ಟರೆ ನೀನು ಯೋಗಿ ಆಗಲಾರೆ. ನಮಗೂ ಹೊರಗಿನ ಪ್ರಪಂಚಕ್ಕೂ ಸಂತೋಷವಾದ ಸಂಬಂಧವಿದೆಯೇ? ಇದೇ ಪರೀಕ್ಷೆ. ಇಲ್ಲದೆ ಇದ್ದರೆ ಪ್ರಪಂಚದ ಮೇಲೆ ತಪ್ಪನ್ನು ಕಂಡುಹಿಡಿಯಬೇಡ, ನಿನ್ನ ಸುತ್ತಲೂ ಕೆಟ್ಟಜನ ಇದ್ದಾರೆ ಎಂದೂ ಗೊಣಗಬೇಡ. ಇದು ಸರಿಯಲ್ಲ. ಎಲ್ಲರಮೇಲೂ ಪ್ರೀತಿ ವಿಶ್ವಾಸವನ್ನು ಹರಿಸಬಲ್ಲ ವಾತಾವರಣ ನಿನ್ನಲ್ಲಿ ಇಲ್ಲ ಎಂಬುದೇ ವಾಸ್ತವಿಕ ಅಂಶ. ನಿನ್ನಲ್ಲಿ ವಿಶ್ವಪ್ರೇಮ ಇರಬೇಕು. ಆಗ ನಿನ್ನ ಕ್ಷೇತ್ರ ಬೀಜವನ್ನು ಸ್ವೀಕರಿಸುವ ಸ್ಥಿತಿಯಲ್ಲಿರುವುದು. ಈ ಶಿಸ್ತನ್ನು ಈ ಗುಣವನ್ನು ನಾವು ಎಂದಿಗೂ ಮರೆಯಕೂಡದು. ತಪ್ಪು ಕಂಡುಹಿಡಿಯುವ, ಸಮಾಜವನ್ನು ಕಂಡರೆ ಆಗದವನು, ಎಂದಿಗೂ ಯೋಗಿಯಾಗಲಾರ. ನೀನು ಎಲ್ಲರನ್ನೂ ಪ್ರೀತಿಸುವ ಸ್ಥಿತಿಯಲ್ಲಿರಬೇಕು. ಎಲ್ಲರಿಗೂ ಪ್ರೀತಿ ವಿಶ್ವಾಸ ನಿನ್ನ ಮೂಲಕ ಬರುವ ಸ್ಥಿತಿಯಲ್ಲಿ ನೀನಿರಬೇಕು.

ಯೋಗದ ಅದ್ಭುತಶಕ್ತಿಯ ವಿಷಯವಾಗಿ ನಾವು ಬಹಳ ಕೇಳಿರುವೆವು. ಇದನ್ನೇ ವಿಭೂತಿ ಎನ್ನುವುದು. ಅಷ್ಟಸಿದ್ಧಿಗಳಿವೆ. ಇವೇ ಅತ್ಯಂತ ಸಣ್ಣದಾಗುವುದು. ಅತ್ಯಂತ ವಿಸ್ತಾರವಾಗುವುದು, ಅತ್ಯಂತ ಹಗುರವಾಗುವುದು, ಇನ್ನೊಬ್ಬರ ಮನಸ್ಸನ್ನು ತಿರುಗಿಸುವುದು, ಇವೇ ಅವು. ಆದರೆ ಇವುಗಳನ್ನೆಲ್ಲಾ ನಿಕೃಷ್ಟವಾಗಿ ನೋಡುವುದನ್ನು ಕಲಿಯಬೇಕು. ಇದೇ ಅತ್ಯಂತ ಶ್ರೇಷ್ಠವಾದ ಶಕ್ತಿ. ಯೋಗಿಯ ಜೀವನದಲ್ಲಿ ದಾರಿ ಕವಲೊಡೆಯುವ ಸಮಯ ಬರುವುದು. ಅವನು ಆಗ ಆರಿಸಿಕೊಳ್ಳಬೇಕು, ಆತ್ಮೋದ್ಧಾರಕವಾಗಿರುವುದು ಬೇಕೋ, ಜನರಂಜಕವಾಗಿರುವುದು ಬೇಕೊ ಎಂಬುದನ್ನು. ಇದು ಅತ್ಯಂತ ಮುಖ್ಯವಾದ ಕಾಲ. ಮರದಲ್ಲಿ ಹಣ್ಣು ನೇತಾಡುತ್ತಿರುವಾಗ ಅದು ದೈನ್ಯದಿಂದ ಬಾಗು

ವುದು. ಯೋಗದ ಫಲ ನಿನ್ನಲ್ಲಿ ಬರಲಿ. ನೀನು ಫಲಭರಿತವಾದ ಮರವನ್ನು ಅನುಸರಿಸು. ಬಾಗು, ಸಿದ್ಧಿಗಳ ಕಡೆ ಗಮನ ಕೊಡಬೇಡ. ಅತ್ಯಂತ ದೊಡ್ಡ ಶಕ್ತಿಯೇ, ಶಾಂತಿ ವಿಶ್ವ ಪ್ರೇಮ ಮತ್ತು ಬ್ರಹ್ಮಜ್ಞಾನ. ಇತರ ಶಕ್ತಿಗಳನ್ನು ನಾವು ನಿಕೃಷ್ಟವಾಗಿ ಕಾಣಬೇಕು. ಏನಾದರೂ ಇಂತಹ ಶಕ್ತಿಗಳು ನಿಮಗೆ ಅನಾಯಾಸವಾಗಿ ಬಂದರೆ ಅವುಗಳ ಕಡೆ ಕಣ್ಣನ್ನು ಹಾಕಬೇಡಿ.

ನಾವು ಅಧ್ಯಾತ್ಮಿಕ ಪಥದಲ್ಲಿ ಹೋಗುತ್ತಿರುವಾಗ, ನಮ್ಮಲ್ಲಿ ದೈನ್ಯತೆ ಇರಬೇಕು, ಋಜುತ್ವ ಇರಬೇಕು, ಸಿದ್ಧಿಗಳ ಕಡೆ ಗಮನವಿರಕೂಡದು. ನಿನ್ನಲ್ಲಿ ನನ್ನದೇ ಸರಿ ಎಂಬ ಮತಭ್ರಾಂತಿ ಇಲ್ಲದೆ ಇರಲಿ. ಇಂಡಿಯಾ ದೇಶದಲ್ಲಿ ಹದಿನಾರನೆ ಶತಮಾನದಲ್ಲಿ ಕವಯಿತ್ರಿಯಾದ ರಾಜಪುತ್ರಿ ಒಂದು ಹಾಡನ್ನು ಬರೆದಿದ್ದಾಳೆ. ತ್ಯಾಗಿಯಾಗುವುದಕ್ಕೆ ತನ್ನ ರಾಣಿ ಪದವಿಯನ್ನು ತ್ಯಜಿಸಿದಳು. ಅವಳ ಹಾಡಿನ ಕೆಲವು ಭಾಗವನ್ನು ನಾನು ಭಾಷಾಂತರ ಮಾಡುತ್ತೇನೆ.

"ನೀನು ನಿನ್ನ ದೇಹವನ್ನು ಸ್ನಾನಾದಿಗಳನ್ನು ಮಾಡಿಸುವುದರಿಂದ ಪವಿತ್ರನಾದೆ ಎಂದು ಭಾವಿಸಿದರೆ, ಮೀನನ್ನು ನೋಡಿ, ಅದೇ ನಿಮ್ಮ ದೇವರಾಗಬೇಕು.

ಶಾಖಾಹಾರವೇ ಸಾಧು ಆಗುವುದಕ್ಕೆ ಹಾದಿಯಾದರೆ, ನೀನು ಕತ್ತೆಯನ್ನು ಅನು ಅನುಸರಿಸಬೇಕು. ಅದು ಬರೀ ಶಾಖಹಾರವನ್ನೇ ತೆಗೆದುಕೊಳ್ಳುವುದು.

ಹಣ್ಣೇ ಮುಖ್ಯ ಎಂದು ಭಾವಿಸಿದರೆ ಕಪಿಯನ್ನೇ ದೇವರನ್ನಾಗಿ ಮಾಡಿಕೊಳ್ಳಿ."

ಶುದ್ಧಪ್ರೇಮದಿಂದ, ಭಕ್ತಿಯಿಂದ ಮಾತ್ರ ಪರಮಾತ್ಮನನ್ನು ಒಲಿಸಿಕೊಳ್ಳುವುದು ಸಾಧನ ಎಂದು ಮೀರಾಬಾಯಿ ಹೇಳುತ್ತಾಳೆ. ಆದಕಾರಣ ಸುಮ್ಮನೆ ಮತಭ್ರಾಂತರಾಗ ಬೇಡಿ. ನಿನ್ನಂತೆ ಯಾರು ಇಲ್ಲವೊ ಅವರನ್ನು ದ್ವೇಷಿಸುವಂತೆ ಮಾಡುವುದು. ಯೋಗದಲ್ಲಿ ಗುರಿ ಸೇರುವುದಕ್ಕೆ ಹತ್ತಿರದ ಮಾರ್ಗ ಯಾವುದೂ ಇಲ್ಲ. ಯಮ–ನಿಯಮಗಳೆಂಬ ಶಿಸ್ತು ಒಂದು ಕಡೆ ಇರುವುದು, ಮತ್ತೊಂದು ಕಡೆ ಸಮಾಧಿ ಇರುವುದು. ಇದನ್ನು ತಲೆಕೆಳಗು ಮಾಡುವುದಕ್ಕೆ ಆಗುವುದಿಲ್ಲ. ಮೊದಲನೆಯದು ಮೊದಲು ಬರಬೇಕು.

ಒಂದು ತಮಾಷೆಯ ಕಥೆ ಜ್ಞಾಪಕಕ್ಕೆ ಬರುವುದು. ಒಬ್ಬ ತರುಣ ಒಂದು ಆಶ್ರಮಕ್ಕೆ ಸೇರಿ ಯೋಗಾಭ್ಯಾಸ ಮಾಡಬೇಕೆಂದು ಬಯಸಿದ. ಅವನು ಒಂದು ಮಠಕ್ಕೆ ಹೋದ. ಅಲ್ಲಿರುವ ಮಹಂತರನ್ನು ನೋಡಿದ. ಅವರಿಗೆ ಈ ತರುಣ ನಾನು ಸಾಧುವಾಗ ಬೇಕು, ನೀವು ನನ್ನನ್ನು ಸ್ವೀಕರಿಸಿ ಎಂದು ಕೇಳಿಕೊಂಡ. ಮಹಂತರು ಒಬ್ಬ ಸಾಧುಗಳಿಗೆ ಈ ಯುವಕನಿಗೆ ಮಠವನ್ನೆಲ್ಲ ತೋರಿಸಿ, ಅವನು ಸೇರಿದರೆ ಯಾವ ಕೆಲಸ ಮಾಡಬೇಕಾಗಿದೆ ಎಂಬುದನ್ನು ವಿವರಿಸು ಎಂದು ಹೇಳಿದರು.

ಯುವಕನಿಗೆ ಅವನು ಆಶ್ರಮ ಸೇರಿದರೆ ಏನೇನು ಕೆಲಸ ಮಾಡಬೇಕು ಎಂಬುದನ್ನೆಲ್ಲ ಹೇಳಿದರು. ಅವನು ಬೆಳ್ಳಗ್ಗೆ ಹೊತ್ತಿಗೆ ಮುಂಚೆ ಏಳಬೇಕು, ಧ್ಯಾನಮಾಡಬೇಕು ನೀರು ಸೇದಬೇಕು, ಮಠ ಗುಡಿಸಬೇಕು, ತೋಟದಲ್ಲಿ ಕೆಲಸ ಮಾಡಬೇಕು ಇತ್ಯಾದಿ ಕೆಲಸಗಳನ್ನು ಹೇಳಿದರು. ಆಗತಾನೆ ಸೇರುವವರು ಇರುವ ಕೋಣೆಯನ್ನು ಅವನಿಗೆ ತೋರಿ

ಸಿದರು. ಅಲ್ಲಿ ಬರೀನೆಲ, ಗೋಡೆ, ಮತ್ತು ಗಟ್ಟಿಯಾದ ಹಾಸಿಗೆ ಇತ್ತು. ಹೋಗುತ್ತಿರುವಾಗ ಬೇರೆ ಕೋಣೆಯನ್ನು ನೋಡಿದ. ಅವು ಚೆನ್ನಾಗಿದ್ದವು. ಮೆತ್ತನೆಯ ಹಾಸಿಗೆ ಇತ್ತು. ಅವನು ತನ್ನ ಮಾರ್ಗದರ್ಶಿಯನ್ನು ಇಲ್ಲಿ ಯಾರು ಇರುತ್ತಾರೆ ಎಂದು ಕೇಳಿದ. ಅದಕ್ಕೆ ಸಾಧು ಇಲ್ಲಿ ಗುರುಗಳು ಇರುತ್ತಾರೆ ಎಂದ. ಅಡಿಗೆಮನೆಗೆ ಹೋದಾಗ ಆಗತಾನೆ ಸೇರಿದವರಿಗೆ ಮಾಡುತ್ತಿದ್ದ ಸರಳವಾದ ಅಡಿಗೆಯನ್ನು ನೋಡಿದ. ಅಲ್ಲೇ ಕೆಲವು ತಟ್ಟೆಗಳಲ್ಲಿ ಚೆನ್ನಾಗಿರುವ ಪದಾರ್ಥಗಳು ಇದ್ದವು. ಇವು ಯಾರಿಗೆ ಎಂದು ಕೇಳಿದ. ಅದಕ್ಕೆ ಸಾಧು ಇವೆಲ್ಲ ಗುರುಗಳಿಗೆ ಎಂದ.

ಗುರುಗಳು ಏನು ಕೆಲಸ ಮಾಡುತ್ತಾರೆ ಎಂದು ಯುವಕ ಕೇಳಿದ. ಅದಕ್ಕೆ ಸಾಧು, ಅವರು ಉಪದೇಶ ಕೊಡುತ್ತಾರೆ ಎಂದ. ಯುವಕನ ಮುಖ ಅರಳಿತು. ನನ್ನನ್ನು ಮಹಂತರ ಬಳಿಗೆ ಕರೆದುಕೊಂಡು ಹೋಗಿ ಎಂದ. ಅವನು ಮಹಂತರ ಬಳಿಗೆ ಬಂದಾಗ "ಸ್ವಾಮಿ, ನಾನು ತಪ್ಪು ಮಾಡಿದೆ, ನನ್ನನ್ನು ಶಿಷ್ಯನನ್ನಾಗಿ ತೆಗೆದುಕೊಳ್ಳಬೇಡಿ. ನಾನು ಗುರುವಾಗಬೇಕು" ಎಂದ.

ನೀವು ಮೇಲಿನಿಂದ ಪ್ರಾರಂಭಮಾಡಲು ಆಗುವುದಿಲ್ಲ. ಅಲ್ಲಿ ಸಹನೆಯಿಂದ ನಿಧಾನವಾಗಿ ಪ್ರಯಾಣ ಮಾಡಬೇಕಾಗಿದೆ. ಅದು ಎಷ್ಟು ಕಾಲ ಹಿಡಿಯುವುದು ಎಂದರೆ, ನೀನು ಅದಕ್ಕೆ ಮಾಡುವ ಪ್ರಯತ್ನದ ಮೇಲಿದೆ.

ಪೂರ್ವಭಾವಿಯಾದ ಸಿದ್ಧತೆಗಳಲ್ಲಿ ಪ್ರತಿಷ್ಠಿತರಾದ ಮೇಲೆ ಪೂರ್ಣತೆಯ ಬೀಜವನ್ನು ಬಿತ್ತಬೇಕಾಗುವುದು. ಬಿತ್ತುವುದು ಎಂದರೆ ಏನು ? ನಿಮ್ಮಲ್ಲಿ ಆಗಲೇ ಇರುವ ಸಾಧ್ಯತೆಯನ್ನು ವ್ಯಕ್ತಪಡಿಸುವುದು. ರಾಜಯೋಗದಲ್ಲಿ ಬರುವ ಪೂರ್ವ ಅಭ್ಯಾಸಗಳನ್ನೆಲ್ಲ ಸಾಧಿಸಿದ ಮೇಲೆ ಶಿಷ್ಯ ಗುರುವಿನ ಬಳಿಗೆ ಹೋಗುವನು. ಗುರುವಿನೊಂದಿಗೆ ಕಲ್ಪಿಸಿಕೊಂಡಿರುವ ಸಂಬಂಧವೇ, ನಿಮ್ಮಲ್ಲಿರುವ ಸಾಧ್ಯತೆಯನ್ನು ವ್ಯಕ್ತಗೊಳಿಸುವುದು.

ನಿಜವಾಗಿ ನೀವಲ್ಲ ಬೀಜವನ್ನು ನೆಡುವುದು. ನಿಮಗೆ ಭೂಮಿ ಸಿಕ್ಕಿದಾಗಲೆ ಬೀಜ ಅಲ್ಲಿತ್ತು. ಅದು ವಿಕಾಸವಾಗುವುದಕ್ಕೆ ಅವಕಾಶವಿಲ್ಲದೇ ಇದ್ದುದರಿಂದ ಅದು ಸುಪ್ತವಾಗಿತ್ತು. ವಾತಾವರಣ ಸರಿಯಾದ ಮೇಲೆ ಬೀಜ ಮೊಳೆಯಲು ಪ್ರಾರಂಭಿಸುವುದು. ಆದರೆ ನಾವು ಪ್ರಯತ್ನಪಟ್ಟರೆ ಅದು ಬೇಗ ಬೆಳೆಯುವುದು. ಏಕಾಗ್ರತೆ ಧ್ಯಾನ ಇವುಗಳೆಲ್ಲ ಅದಕ್ಕೆ ಸಹಾಯಕವಾಗುವುದು.

ಇದಕ್ಕೆ ನಾಲ್ಕು ಮೆಟ್ಟಲುಗಳಿವೆ. ಧ್ಯಾನ ಭಂಗಿಯಲ್ಲಿ ಕುಳಿತುಕೊಂಡು ಮುಂಚೆ ಹೇಳಿದ ಪ್ರಾಣಾಯಾಮವನ್ನು ಮಾಡಿದಮೇಲೆ ಉಳಿದವುಗಳನ್ನು ಅಭ್ಯಾಸ ಮಾಡಬೇಕು.

ಮನುಷ್ಯನ ಪ್ರಜ್ಞೆಗೆ ಅನಂತ ಶಕ್ತಿ ಇದೆ. ಮೂಲತಃ ಈ ಪ್ರಜ್ಞೆ ಮಾನವನ ಮೂಲಕ ಅಥವಾ ಬೇರೆ ಹೇಗೆ ಬೇಕಾದರೂ ವ್ಯಕ್ತವಾಗಬಹುದು. ಆದರೂ ಅದು ಪವಿತ್ರವಾದುದು, ಮತ್ತು ಪರಿಪೂರ್ಣವಾದುದು. ಆದರೆ ಅದು ವ್ಯಕ್ತವಾಗಲು ಕೆಲವು ಅಂತಕಗಳಿವೆ. ಅವನ್ನು ನಾವು ನಿವಾರಣೆ ಮಾಡಬೇಕು. ಆ ವಿಶ್ವಪ್ರಜ್ಞೆಯ ಒಂದು ಅಂಶವೆ ಮನಸ್ಸು. ಅದು ಯಾವಾಗಲೂ ಸಂಕಲ್ಪ ವಿಕಲ್ಪಗಳ ಮಧ್ಯ ತೂಗಾಡುತ್ತಿರುವುದು.

ಮನಸ್ಸು ಒಂದು ಮರ್ಕಟದಂತೆ. ಅಹಂಕಾರದ ಸುರೆಯನ್ನು ಹೀರಿರುವುದು. ಅರಿಷಡ್ವರ್ಗ ಗಳೆಂಬ ಆರುಚೇಳುಗಳಿಂದ ಇದು ಕಚ್ಚಿಸಿಕೊಂಡಿರುವುದು. ಪಂಚೇಂದ್ರಿಯಗಳೆಂಬ ದೆವ್ವ ಇದನ್ನು ಮೆಟ್ಟಿಕೊಂಡಿರುವುದು. ಅದು ಅನ್ನೃತಶಿಲೆಯ ನೆಲದಮೇಲೆ ಬಿಚ್ಚಿಹೋದ ಸ್ಫಾಸುವೆಯ ಪೊಟ್ಟಣದಂತಿದೆ.

ಯೋಗಾಭ್ಯಾಸಿಯೂ ಮನಸ್ಸನ್ನು ಕೇಂದ್ರೀಕರಿಸಬೇಕು. ನಿಮ್ಮ ಇಷ್ಟದೇವತೆಯ ಯಾವುದಾದರೂ ಒಂದು ಭಾವವನ್ನೊ, ಆಕಾರವನ್ನೊ, ಚಿತ್ರವನ್ನೊ ತೆಗೆದುಕೊಂಡು, ಉಳಿದೆಲ್ಲವನ್ನೂ ಬಿಟ್ಟು ಅದನ್ನೇ ಕುರಿತು ಚಿಂತಿಸಿ. ಮೊದಮೊದಲು ಮನಸ್ಸನ್ನು ಕೇಂದ್ರೀಕರಿಸುವುದು ಬಹಳ ಕಷ್ಟವಾಗಿ ಕಾಣುವುದು. ಅದು ಎಲ್ಲೆಲ್ಲಿ ಚದುರಿಹೋದರೆ ಅಲ್ಲಿಂದ ಪುನಃ ಪುನಃ ಮನಸ್ಸನ್ನು ಎಳೆದುಕೊಂಡು ಬರಬೇಕು. ಕುರುಬ ಚದರಿಹೋದ ತನ್ನ ಕುರಿಗಳನ್ನು ಹೇಗೆ ಒಂದುಗೂಡಿಸುವನೊ ಹಾಗೆ ಮಾಡಿ. ಮನಸ್ಸನ್ನು ಕೇಂದ್ರೀ ಕರಿಸುವುದು ಎಂದರೆ, ನಾಯಿಯನ್ನು ಬಿಟ್ಟು ಕುರಿಗಳನ್ನೆಲ್ಲ ಒಂದುಗೂಡಿಸುವಂತೆ.

ಪ್ರತ್ಯಾಹಾರ, ಅಥವಾ ಮನಸ್ಸನ್ನು ಕೇಂದ್ರೀಕರಿಸುವುದು ಎಂದರೆ, ಮನಸ್ಸು ಮನಸ್ಸಿನ ತೌರುಮನೆಗೆ ಬಂದಂತೆ. ಮನಸ್ಸನ್ನು ಕೇಂದ್ರೀಕರಿಸಬೇಕಾದರೆ ದಿನನಿತ್ಯವೂ ಬಿಡದೆ ಅಭ್ಯಾಸ ಮಾಡಬೇಕು. ಅದು ಸುಲಭವಾಗಿ ಸಿದ್ಧಿಸುವದಿಲ್ಲ. ಅದಕ್ಕಾಗಿ ನಾವು ಬಹಳ ಶ್ರಮಪಡಬೇಕಾಗಿದೆ. ಸ್ವಲ್ಪಕಾಲ ಪ್ರತ್ಯಾಹಾರವನ್ನು ಅಭ್ಯಾಸಮಾಡಿದಮೇಲೆ ನಿಮ್ಮ ಧ್ಯೇಯದ ಸ್ಪಷ್ಟವಾದ ಚಿತ್ರ ಬರುವುದು. ನಿಮ್ಮ ಮನಸ್ಸು ಹೆಚ್ಚು ಸ್ಥಿರವಾಗುವುದು. ಇನ್ನುಮೇಲೆ ಅದನ್ನು ಏಕಾಗ್ರಗೊಳಿಸಬೇಕಾದರೆ ಹೆಚ್ಚು ಕಷ್ಟಪಡಬೇಕಾಗಿಲ್ಲ.

ಎರಡನೆಯ ಮೆಟ್ಟಲೆ ಧಾರಣ, ಎಂದರೆ ಏಕಾಗ್ರಗೊಳಿಸಿದ ಮನಸ್ಸನ್ನು ಸ್ವಲ್ಪ ಕಾಲ ಹಿಡಿದು ನಿಲ್ಲಿಸುವುದು. ಸ್ವಲ್ಪಕಾಲ ಪ್ರತ್ಯಾಹಾರವನ್ನು ಅಭ್ಯಾಸ ಮಾಡಿದಮೇಲೆ ನಿಮ್ಮ ಮನಸ್ಸಿನ ಮೇಲೆ ನಿಮಗೆ ಸ್ವಾಧೀನ ಬರುವುದು. ಆಗ ಅದನ್ನು ಯಾವುದಾದರೂ ವಸ್ತುವಿನ ಮೇಲೆ ಕೇಂದ್ರೀಕರಿಸಬಹುದು. ಅದನ್ನು ದೀರ್ಘಕಾಲ ಹಿಡಿದು ನಿಲ್ಲಿಸುವುದು ಕಷ್ಟ. ಅದು ಅಲ್ಲಿ ಇಲ್ಲಿ ಅಲೆಯುತ್ತಿರುವುದು. ನೀವು ಧ್ಯಾನಿಸುವ ವಸ್ತುವಿನ ಮೇಲೆ ಮನಸ್ಸನ್ನು ಕೇಂದ್ರೀಕರಿಸಬೇಕಾಗಿದೆ. ಅದು ನಿಮ್ಮ ಸ್ವಾಧೀನದಿಂದ ತಪ್ಪಿಸಿಕೊಂಡು ಹೋಗದಂತೆ ನೋಡಿಕೊಳ್ಳಿ. ಇತರ ಎಲ್ಲಾ ಭಾವನೆಗಳನ್ನೂ ತಡೆಯಿರಿ. ನೀವು ಧ್ಯಾನಿಸುವ ವಸ್ತು ಮಂಕಾಗಬಹುದು. ಏಕಾಗ್ರತೆಯನ್ನು ಸ್ಪಷ್ಟಮಾಡಿ.

ನೀವು ಒಂದು ಕಮಲದ ಮೇಲೆ ಧ್ಯಾನಿಸುತ್ತಿರುವಿರಿ ಎಂದು ಭಾವಿಸೋಣ. ಮುಂಚೆ ಕಮಲ ಚೆನ್ನಾಗಿ ಅರಳಿದೆ ಎಂದು ಭಾವಿಸಿ. ಅನಂತರ ಅದಕ್ಕೆ ನೀಲಿಯ ಬಣ್ಣವಿದೆ ಎಂದು ಭಾವಿಸಿ. ಕಮಲದ ದಳದಮೇಲೆ ಚಿನ್ನದಿಂದ ಬರೆದ ಅಕ್ಷರಗಳಿವೆ ಎಂದು ಭಾವಿಸಿ. ಆ ಚಿತ್ರವನ್ನು ವಿಸ್ತಾರಮಾಡುತ್ತ ಬನ್ನಿ. ಅದು ಮಂದವಾಗದಿರಲಿ. ಇದಕ್ಕೆ ಅಭ್ಯಾಸಬೇಕು, ಛಲಬೇಕು. ನಿಮ್ಮ ಮನಸ್ಸನ್ನು ಒಂದು ವಸ್ತುವಿವ ಮೇಲೆ ಅಲುಗಾಡದೆ ನಿಲ್ಲುವಂತೆ ಮಾಡಿದಮೇಲೆ ನೀವು ಎರಡನೆ ಮೆಟ್ಟಲಾದ ಧಾರಣಕ್ಕೆ ಬಂದಿರುವಿರಿ. ಇದಕ್ಕೆ ಉದಾಹರಣೆಯೆ ಸ್ವಲ್ಪವೂ ಅಲುಗಾಡದೆ ಒಂದೇ ಸಮನಾಗಿ ಉರಿಯುತ್ತಿರುವ ದೀಪ. ಅದು ಒಂದೇಸಮನಾಗಿ ಕಾಂತಿಯನ್ನು ಕೊಡುತ್ತಿರುವುದು.

ಧ್ಯಾನದಲ್ಲಿ ಎರಡು ವಿಧ ಇದೆ. ಒಂದು ಆಕಾರ ಮತ್ತೊಂದು ನಿರಾಕಾರ. ಒಂದು ವಸ್ತುವಿನ ಮೇಲೆ ಧ್ಯಾನಿಸುತ್ತಿದ್ದರೆ, ಅಲ್ಲಿ ದೃಗ್ ದೃಶ್ಯದ ಸಂಬಂಧವಿದೆ. ಇದರಿಂದ ಸವಿಕಲ್ಪ ಸಮಾಧಿ ಬರುವುದು. ಧ್ಯಾನಕ್ಕೆ ಯಾವ ವಸ್ತುವನ್ನೂ ಉಪಯೋಗಿಸದೆ ಇದ್ದರೆ ಇದೇ ನಿರ್ವಿಕಲ್ಪ ಸಮಾಧಿಗೆ ನಮ್ಮನ್ನು ಒಯ್ಯುವುದು. ಇಲ್ಲಿ ಯಾವ ವಿಕಲ್ಪಗಳೂ ಎಂದರೆ ಆಕಾರಗಳೂ ಇಲ್ಲ. ಆಂತರಿಕವಾಗಿ ಎಂದರೆ ನಿರಾಕಾರವಾಗಿ ಧ್ಯಾನಮಾಡುವಾಗ ನಮ್ಮ ಮನಸ್ಸಿನಿಂದ ಎಲ್ಲಾ ಮಾನಸಿಕ ಮುದ್ರೆಗಳನ್ನೂ ಸ್ಮೃತಿಚಿತ್ರವನ್ನೂ ತೆಗೆದುಹಾಕಬೇಕು. ಅತಿಥಿ ಕೋಣೆ ಖಾಲಿಯಾಗಿದ್ದರೆ ಬರುತ್ತಾನೆ ಇಲ್ಲದೇ ಇದ್ದರೆ ಇಲ್ಲ. ನಮ್ಮ ಚಿತ್ತವೃತ್ತಿಗಳಿಗೆ ಕಾರಣವಾದ ಉಪಾಧಿಗಳಿಂದ ಪಾರಾಗಬೇಕಾಗಿದೆ.

ನಮ್ಮಲ್ಲಿರುವ ಆತ್ಮನ ಮೇಲೆ ವಿಶ್ವವನ್ನೇ ನಮ್ಮ ಕಡೆಗೆ ಸೆಳೆಯುವೆವು. ಅಥವಾ ಆತ್ಮನೇ ವಿಶ್ವಾತ್ಮನಾಗಿ ವಿಕಾಸವಾಗುತ್ತಾನೆಂದು ಹೇಳಬಹುದು. ಬಾಹ್ಯಧ್ಯಾನದಲ್ಲಿ ಆತ್ಮನನ್ನು ಬಾಹ್ಯಕ್ಕೆ ಅರ್ಪಿಸುತ್ತೇವೆ. ಆಗ ಅದು ಸರ್ವಾತ್ಮವಾಗುತ್ತದೆ. ಎಲ್ಲವೂ ಅವ್ಯಕ್ತತತ್ವವಾಗುವುದು.

ಸಮಾಧಿ, ಪ್ರತ್ಯಾಹಾರ, ಧಾರಣ, ಧ್ಯಾನದ ಪರಿಣಾಮ. ಸಮಾಧಿ ಎಂದರೆ ಸಾಕ್ಷಾತ್ಕಾರ. ಧಾನ್ಯಕ್ಕೆ ಸರಿಯಾಗಿ ಸಮಾಧಿ ಬಹುವಿಧವಾಗಿದೆ. ನಾನು ಎರಡನ್ನು ಮಾತ್ರ ಹೇಳಿದ್ದೇನೆ.

ಮನಸ್ಸು ತೀವ್ರವಾಗಿ ಒಂದು ವಸ್ತುವನ್ನು ಕುರಿತು ಧ್ಯಾನಿಸಿದರೆ, ಆಗ ಆ ವಸ್ತುವಿನ ಸತ್ಯ ವ್ಯಕ್ತವಾಗುವುದು. ಯಾವುದಾದರೂ ಒಂದು ವಸ್ತುವಿನ ಮೇಲೆ, ಧಾರಣ ಧ್ಯಾನ, ಸಮಾಧಿ ಒಟ್ಟಿಗೆ ಆದರೆ ಅದಕ್ಕೆ ಸಂಯಮ ಎಂದು ಹೆಸರು. ಆ ವಸ್ತುವಿನ ಸತ್ಯ ಗೋಚರವಾಗುವುದು.

ಈ ನಾಲ್ಕು ವಿಧವಾದ ಧ್ಯಾನಗಳಿಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಯಾವುದೋ ಒಂದು ಸ್ಥಳವನ್ನು ನೋಡಲು ತೀವ್ರವಾದ ಸರ್ಚ್‌ಲೈಟ್ ತಯಾರುಮಾಡಬೇಕೆಂದು ಇರುವಿರಿ ಎಂದು ಭಾವಿಸೋಣ. ಒಂದು ಬೆಳಕಿನ ಕಿರಣವೂ ಬೇರೆಕಡೆ ಹೋಗದಂತೆ ನೋಡಿಕೊಳ್ಳಬೇಕು. ಅವನ್ನೆಲ್ಲ ಒಂದು ಕಡೆ ಕೇಂದ್ರೀಕರಿಸಬೇಕು. ಮೊದಲನೆ ಮೆಟ್ಟಲಾದ ಪ್ರತ್ಯಾಹಾರ ಎಂದರೆ ಇದು. ಅದನ್ನೇ ಅನಂತರ ಒಂದು ಪೀಠದ ಮೇಲೆ ಇಡುವಹಾಗೆ ಅಣಿಮಾಡಬೇಕು. ಒಂದು ಸರಿಯಾದ ರೀತಿ ಬೆಳಕನ್ನು ತಿರುಗಿಸುವುದೇ ಧಾರಣ. ಧ್ಯಾನ ಎಂದರೆ ಒಂದು ವಸ್ತುವಿನ ಮೇಲೆ ಬೆಳಕನ್ನು ತಿರುಗಿಸುವುದು. ಅದನ್ನು ಒಂದು ಕೂದಲಿನ ಎಳೆಯಷ್ಟೂ ಕದಲದಂತೆ ನೋಡಿಕೊಳ್ಳಬೇಕು. ಇಂತಹ ಪ್ರಕಾಶಮಾನವಾದ ಸರ್ಚಲೈಟ್ ಎದುರಿಗೆ ಸಾಧಾರಣವಾಗಿ ಕಾಣದ ವಸ್ತುಗಳು ಕಾಣುತ್ತವೆ. ಇದೇ ಸಮಾಧಿ.

ಯಾವುದನ್ನು ದೀಪವೆನ್ನುವೆವೂ ಅದೇ ಚಿತ್ತ. ನಾವು ರಾಜಯೋಗವನ್ನು ಪ್ರಾರಂಭಿಸಿದಾಗ, ಮನಸ್ಸಿನ ಉದ್ವೇಗ, ವ್ಯಕ್ತಿಗಳು ಇವುಗಳನ್ನೆಲ್ಲ ನಿಲ್ಲಿಸುವದಕ್ಕಾಗಿ ಕೆಲವು ನಿಯಮಗಳನ್ನು ಕೈಕೊಂಡೆವು. ನಾವು ಅದರಲ್ಲಿ ಉತ್ತೀರ್ಣರಾದ ಮೇಲೆ ಚಿತ್ತದ

ಸರ್ಚ್‌ಲೈಟ್ ಸಿಕ್ಕಿತು. ಅದು ತನ್ನ ಮುಂದಿರುವ ಎಲ್ಲವನ್ನೂ ವ್ಯಕ್ತಗೊಳಿಸುವುದು. ವಿಭಜನೆಯ ಕೊನೆಯಲ್ಲಿ ಚಿತ್ತಮಾತ್ರ ಉಳಿಯುವುದು. ಆದರೆ ಧ್ಯಾನಮಾಡಿದ ಮೇಲೆ ದೃಶ್ಯವಾಗಿದ್ದ ಚಿತ್ತ ನಿಮ್ಮ ಒಳಗಿರುವ ಚಿತ್ತದಿಂದ ವ್ಯಕ್ತವಾಯಿತು. ಬಾಹ್ಯ ಬೆಳಕನ್ನು ನಿಮ್ಮ ಮೇಲೆ ತಿರುಗಿಸಿದಂತೆ ಇದು. ಇದರಿಂದ ಶ್ರೇಷ್ಠ ಜ್ಞಾನ ಉಂಟಾಗುವುದು. ಅತ್ಯಂತ ಸೂಕ್ಷ್ಮವಾದ ಸತ್ಯದ ಗೋಚರವೆ ಅತಿ ಶ್ರೇಷ್ಠವಾದ ಸಮಾಧಿ.

ಪ್ರತಿಯೊಂದು ವಸ್ತುವಿನ ಆಂತರಿಕ ಮತ್ತು ಬಾಹ್ಯಸತ್ಯವೇ ಬ್ರಹ್ಮ. ಅದರ ಸಾಕ್ಷಾತ್ಕಾರವಾಯಿತು ಎಂದರೆ ಸಾಧಾರಣ ಪ್ರಜ್ಞೆ ಹೋಗುವುದು, ಅದರ ಸ್ಥಳದಲ್ಲಿ ಅತಿಪ್ರಜ್ಞೆ ಬರುವುದು. ನೀನೇ ಏಕಮೇವ ಅದ್ವಿತೀಯ, ಎರಡಿಲ್ಲದ ಒಂದು. ಅದು ಎಲ್ಲೆಲ್ಲಿಯೂ ಇದೆ. ಅತ್ಯಂತ ಸಣ್ಣಕಣದಿಂದ, ಅತ್ಯಂತ ದೊಡ್ಡಕಣದವರೆಗೆ ಅದು ಎಲ್ಲೆಲ್ಲಿಯೂ ಇದೆ. ನಿಮ್ಮ ನಿಜವಾದ ಆತ್ಮನನ್ನೆ ನೀವು ಕಂಡುಹಿಡಿಯುವಿರಿ. ಅದು ಜನನ ಮರಣಾತೀತ, ಸುಖದುಃಖಾತೀತ. ಅದು ವಿಶ್ವದಲ್ಲಿ ಅಗಣಿತ ರೀತಿಯಲ್ಲಿ ವ್ಯಕ್ತವಾಗುವುದು.

ಇದೇನೆ ಶ್ರೇಷ್ಠಜ್ಞಾನದ ಸ್ಥಿತಿ. ನೀವು ಅದನ್ನು ಹುಡುಕಾಡುವಾಗಲೂ, ನೀನೇ ಅದೇ ಪವಿತ್ರ, ಪರಿಪೂರ್ಣ ಎಂದು ಗೊತ್ತಾಗುವುದು. ಆ ಪರಿಪೂರ್ಣತೆಯನ್ನೇ ನಾವು ಯಾವಾಗಲೂ ಹೊತ್ತುಕೊಂಡು ಅಲೆಯುತ್ತಿದ್ದೆವು. ನೀನೇ ಸರ್ವಾತ್ಮ ನಿರ್ವಿಕಲ್ಪ ಸಮಾಧಿಯಲ್ಲಿ ಇದರ ಸಾಕ್ಷಾತ್ಕಾರ ಪೂರ್ಣವಾಗಿ ಆಗುವುದು. ರಾಜಯೋಗದಲ್ಲಿ ಫಲ ವನ್ನು ಹೊಂದುವುದು ಎಂದರೆ ಇದೇ.

ಭಕ್ತಿಯೋಗ

ಮನುಷ್ಯನ ಅಂತರ್ಯದಲ್ಲಿರುವ ಪವಿತ್ರತೆ ಎಂಬ ಭಾವನೆಯನ್ನು ಅವನು ವ್ಯಕ್ತಗೊಳಿಸುತ್ತಿರುವನು. ಪ್ರೀತಿಯೇ ಆ ಶಕ್ತಿಯ ಸ್ಪಷ್ಟಭಾವನೆ. ಮನುಷ್ಯ ತನ್ನಲ್ಲಿ ಸ್ವಾಭಾವಿಕವಾಗಿರುವ ಪ್ರೀತಿಯ ಭಾವನೆಯನ್ನು ಪರಿಶುದ್ಧಮಾಡಿದರೆ ಪಡೆಯಬಹುದು.

ಇದೇ ಭಕ್ತಿಯೋಗದ ಸೂತ್ರ. ಭಕ್ತಿಯೋಗದಲ್ಲಿ ಪರಮಾದರ್ಶವೇ ಅನಂತ ಅಥವಾ ದೇವರು. ಜೀವಿಯಲ್ಲಿ ಆಗಲೇ ಸ್ವಾಭಾವಿಕವಾಗಿರುವ ಪ್ರೀತಿಯೇ ನಮ್ಮಲ್ಲಿ ಸುಪ್ತವಾಗಿರುವ ಪವಿತ್ರತೆಯ ಆವಿರ್ಭಾವ. ಆ ಪ್ರೀತಿಯನ್ನು ಶುದ್ಧಮಾಡುತ್ತ ಹೋಗಿ, ಕೊನೆಗೆ ಅದು ಸರ್ವಶಕ್ತಿಯುತವಾಗುವುದು. ನಮ್ಮಲ್ಲಿರುವ ಪ್ರೀತಿಯ ಕುಡಿಯನ್ನು, ಪರಿಶುದ್ಧಮಾಡುವುದರಿಂದ, ವೃದ್ಧಿಮಾಡುವುದರಿಂದ, ವಿಸ್ತಾರಮಾಡುವುದರಿಂದ ಅನಂತ ಪ್ರೇಮೇಶ್ವರನಾದ ಭಗವಂತನನ್ನು ನಾವು ಸಾಕ್ಷಾತ್ಕಾರಮಾಡಿಕೊಳ್ಳಬಹುದು. ದೇವರೇ ಪ್ರೀತಿ, ಪ್ರೀತಿಯೇ ದೇವರು. ಪ್ರೀತಿಯಿಂದ ಇದು ವ್ಯಕ್ತವಾಗುವುದು. ಪ್ರೀತಿಯಲ್ಲಿ ಇದು ಇರುವುದು, ಪ್ರೀತಿಯಲ್ಲಿ ಪರ್ಯವಸಾನವಾಗುವುದು.

ದೇವರಿಗೋ ಅಥವಾ ಅತೀಂದ್ರಿಯ ಶಕ್ತಿಗೋ ಇರುವ ಭಕ್ತಿ ಯಾವಾಗಲೂ ಮನುಷ್ಯನನ್ನು ಪ್ರಚೋದಿಸಿದೆ. ಪ್ರಪಂಚದ ಪುರಾತನವಾದ ವೇದ ಮತ್ತು ಇತರ ಶಾಸ್ತ್ರಗಳು, ಭಕ್ತಿಯ ಸುಂದರವಾದ ಭಾವನೆಗಳನ್ನು ಒಳಗೊಂಡಿದೆ. ತನಗಿಂತ ಅಧಿಕತರವಾದ ಶಕ್ತಿಯ ಮೇಲೆ ಇರುವ ಪ್ರೀತಿ ಗೌರವ ಭಕ್ತಿಗಳು ಕಾವ್ಯರೂಪದಲ್ಲಿ ಹೊರಹೊಮ್ಮಿವೆ ಭರತಖಂಡದಲ್ಲಿ ತನ್ನನ್ನು ಮೀರಿದ ಶಕ್ತಿಯನ್ನು ಗೌರವಿಸುವುದು, ಪ್ರೀತಿಸುವುದನ್ನು ವೈಜ್ಞಾನಿಕವಾದ ಶಾಸ್ತ್ರವನ್ನಾಗಿ ಮಾಡಿರುವರು. ಇದರ ಮೂಲಕ ಆತ್ಮಸಾಕ್ಷಾತಾರವನ್ನು ಪಡೆಯುವುದೇ ಭಕ್ತಿಯೋಗ.

ಮನುಷ್ಯನಲ್ಲಿರುವ ಸ್ವಾಭಾವಿಕ ಪವಿತ್ರತೆಯನ್ನು ಪರಶುದ್ಧಮಾಡಿ, ಪೂರ್ಣತೆಯನ್ನು ಪಡೆಯುವ ವಿಧಾನವನ್ನು ಭಕ್ತಿಯೋಗ ನಮಗೆ ಹೇಳುವುದು. ಅದನ್ನು ತಿಳಿದುಕೊಳ್ಳುವುದು ಹೇಗೆ ಎಂಬುದನ್ನು ಬೋಧಿಸುವುದರಿಂದ ಅದು ವಿಜ್ಞಾನ. ಅದನ್ನು ಅನುಷ್ಠಾನಕ್ಕೆ ತರುವುದು ಹೇಗೆ ಎಂಬುದನ್ನು ಬೋಧಿಸುವುದರಿಂದ ಅದು ಒಂದು ಕಲೆ.

ಎಲ್ಲ ಭಾವನೆಗಳನ್ನು ಪ್ರೀತಿಯಲ್ಲಿ ಐಕ್ಯಮಾಡಬಹುದು. ಪ್ರೀತಿಗೆ ವಿರೋಧವಾದ ಭಾವನೆಗಳೇ ಕೋಪ, ದ್ವೇಷ ಇತ್ಯಾದಿಗಳು. ದೇವರನ್ನು ಕಂಡರೆ ಬದ್ಧದ್ವೇಷವನ್ನು ಸಾಧಿಸಿತ ಮಹಾನಾಯಕರುಗಳು ಕೂಡ, ಅವನನ್ನೇ ಪಡೆಯುವುದನ್ನು ನಾವು ಭಕ್ತಿಶಾಸ್ತ್ರದಲ್ಲಿ ನೋಡುತ್ತೇವೆ. ಇಲ್ಲೆಲ್ಲ ಅಹಂಕಾರ ಆದರ್ಶದಲ್ಲಿ ತನ್ಮಯವಾಗಬೇಕು. ಭಕ್ತಿಯೋಗದ ಕೊನೆಯಲ್ಲಿ, ನಮ್ಮಲ್ಲಿರುವ ಯಾವ ಮೂಲಭಾವನೆಯನ್ನೇ ಆಗಲಿ ವೃದ್ಧಿಗೊಳಿಸಿ, ಪರಾಕಾಷ್ಠೆಗೆ ತೆಗೆದುಕೊಂಡು ಹೋದರೆ, ಮನುಷ್ಯನ ಪವಿತ್ರತೆ ವ್ಯಕ್ತವಾಗುವುದು ಎಂಬುದನ್ನು ಸಾರುವುದು.

ವೇದಾಂತದ ಏಕವಾದ ಸರ್ವವ್ಯಾಪಿಯಾದ ಅನಂತವಾದ ಬ್ರಹ್ಮನೇ ಭಕ್ತನ ಭಗವಂತ. ಆದರೆ ಭಕ್ತನಿಗೆ ಪ್ರೀತಿಸಲೇಬೇಕೆಂಬ ಆಸೆ ಇರುವುದರಿಂದ, ಅವನು ತನ್ನಿಂದ ಬೇರೆಯಾದ, ಸ್ಥೂಲವಾದ ಪ್ರೀತಿಸಲು ಯೋಗ್ಯನಾದ ಸಗುಣದೇವರನ್ನು ಆರೋಪಿಸುವನು. ಇದನ್ನೇ ಇಷ್ಟದೇವರು ಎನ್ನುವುದು. ಪ್ರೀತಿಯಲ್ಲಿ, ಪ್ರೀತಿಸುವವನ ಪರಮಾದರ್ಶ, ತನ್ನ ಶ್ರೇಷ್ಠ ಆದರ್ಶವೇ ವ್ಯಕ್ತವಾಗುವುದು. ನಾವೊಂದು ಆದರ್ಶವನ್ನು ಒಪ್ಪಿಕೊಂಡಾಗ ಅದನ್ನು ಒಂದು ವಸ್ತುವಿನ ಮೇಲೆ ಆರೋಪಮಾಡಿ, ಅದನ್ನು ಪ್ರೀತಿಸುವೆವು. ಪರಮಾತ್ಮನಾದ ಪರಮೇಶ್ವರನೇ ಇಷ್ಟ ದೇವರಾಗುವನು.

ಇಷ್ಟದೇವತೆಯ ಮೇಲಿರುವ ಪರಮ ಪ್ರೇಮವೇ ಭಕ್ತಿ. ತಾನು ಯಾವುದನ್ನಾದರೂ ಅತಿ ಉತ್ಕಟವಾಗಿ ಪ್ರೀತಿಸುವ ಯಾವುದಾದರೂ ವ್ಯಕ್ತಿಯಾಗಿರಬಹುದು. ಆದರೆ ನಾವು ಪ್ರೀತಿಸುವ ವಸ್ತು ಇಂದ್ರಿಯಾತೀತವಾಗಿದ್ದರೆ ಮೇಲು.

ಭಕ್ತ ತನ್ನ ಇಷ್ಟದೇವತೆಯನ್ನು ತೆಗೆದುಕೊಳ್ಳಬೇಕು. ತನ್ನ ವ್ಯಕ್ತಿತ್ವವೆಲ್ಲ ಅದರಿಂದ ಓತಪ್ರೋತವಾಗುವಂತೆ ಇಷ್ಟದೇವರನ್ನು ಪ್ರೀತಿಸಬೇಕು. ಭಕ್ತನ ದೇವರು ಸಾಕಾರನಾದರೂ ಅದೊಂದು ಅನಾಗರಿಕ ಭಾವನೆಯಲ್ಲ. ಭಕ್ತಿ ಸಿದ್ಧಾಂತ, ನಮ್ಮ ಪ್ರೀತಿಯನ್ನು ಹರಿಸಬೇಕಾದರೆ ಒಂದು ವ್ಯಕ್ತಿ ಅವಶ್ಯಕ ಎಂಬುದನ್ನು ಒಪ್ಪಿಕೊಳ್ಳುವುದು. ತನ್ನ ಪ್ರೀತಿಗೆ ಪಾತ್ರನಾದ ಪರಮಾದರ್ಶವೇ ಅಲ್ಲಿರುವುದು. ಭಕ್ತ ತಾನಿರುವಂತೆಯೇ ತನ್ನ ಇಷ್ಟದೇವರನ್ನು ಆರೋಪಿಸುವನು. ಸರ್ವವ್ಯಾಪಿಯಾದ ಪರಮಾತ್ಮನನ್ನು ತಾನು ನೋಡುವ ರೀತಿ ಇದು. ಇದನ್ನು ಮತ್ತೊಬ್ಬರ ಮೇಲೆ ಬಲಾತ್ಕಾರ ಮಾಡಲಾಗುವುದಿಲ್ಲ.

ದರ್ಶನ ಶಾಸ್ತ್ರದ ದೇವರ ಭಾವನೆಯಿಂದ ಇಷ್ಟದೇವರಾಗುವುದು. ಯಾವ ಆಕಾರ ಕೊಟ್ಟರೂ ಒಂದೇ, ಇರುವ ವಸ್ತು ಒಂದೇ. ಎಷ್ಟು ಜನರಿದ್ದಾರೋ, ಅಷ್ಟು ಇಷ್ಟ ದೇವತೆಗಳು ಇರಬಹುದು. ಅವ್ಯಕ್ತವನ್ನು ನೋಡುವ ಹಲವು ವ್ಯಕ್ತಿಯ ಕಿಟಕಿಗಳು ಇವು. ಇಷ್ಟದೇವರ ವಿಷಯವಾಗಿ ನಾವು ಕಾದಾಡಬೇಕಾಗಿಲ್ಲ. ನಾನು ನನ್ನ ದೇವರನ್ನು ಸೃಷ್ಟಿ ಮಾಡಿಕೊಳ್ಳುತ್ತೇನೆ, ನೀನು ನಿನ್ನ ದೇವರನ್ನು ಸೃಷ್ಟಿಮಾಡಿಕೊ. ದೇವರನ್ನು ಮಾಡುವ ಸಾಮಗ್ರಿಗಳನ್ನೆಲ್ಲಾ ನಾನು ಖರ್ಚುಮಾಡಿಲ್ಲ. ಅದು ಅನಂತವಾದುದು.

ಈಗೊಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ಒಬ್ಬ ಹೆಂಗಸಿಗೆ ನಾಲ್ಕು ಜನ ನಂಟರಿರುವರು. ಅವರ ತಂದೆ, ತಮ್ಮ, ಮಗ, ಮತ್ತು ಗಂಡ. ಅವಳು ಒಬ್ಬಳೇ ಆದರೂ, ಒಬ್ಬೊಬ್ಬರಿಗೆ ಒಂದೊಂದು ರೀತಿ ಕಾಣುತ್ತಾಳೆ. ಅವಳಿಗೆ ಪ್ರತಿಯೊಬ್ಬರ ಹತ್ತಿರ ಇರುವ ಸಂಬಂಧ ಬೇರೆ ವಿಧದ್ದು. ಆದರೆ ಆ ಹೆಂಗಸಾದರೊ ? ಅವಳನ್ನು ಹಲವು ಭಾವಗಳ ಮೂಲಕ ಪ್ರೀತಿಸಬಹುದು.

ಪ್ರತಿಯೊಬ್ಬನೂ ತನ್ನ ಇಷ್ಟವನ್ನೇ ಆರಿಸಿಕೊಳ್ಳಬಹುದು. ನಿನ್ನ ದೇವರನ್ನು ನೀನು ಬಿಗಿಯಾಗಿ ಹಿಡಿದುಕೊ. ಆದರೆ ಬೇರೆಯವರು ತಮ್ಮ ಇಷ್ಟದೇವರನ್ನು ಆರಿಸಿಕೊಂಡರೆ ಅದನ್ನು ಉದಾರವಾಗಿ ನೋಡಿ. ಇಂಡಿಯಾದೇಶದಲ್ಲಿ ಈ ಸೌಹಾರ್ದಭಾವನೆ ಇರುವುದರಿಂದಲೇ, ಕ್ರೈಸ್ತರು ತಮ್ಮ ಧರ್ಮಕ್ಕೆ ಹಲವರನ್ನು ಸೇರಿಸಿಕೊಳ್ಳಲು ಆಗಲಿಲ್ಲ.

ಭರತಖಂಡದಲ್ಲಿರುವ ಮೂವತ್ತೆರಡು ಕೋಟಿ ದೇವದೇವಿಯರೆಲ್ಲ ಇಷ್ಟದೇವರು. ಇವುಗಳೆಲ್ಲ ಸರಿಯೆ ಎಂದು ಜನ ಒಪ್ಪಿಕೊಂಡಿರುವರು. ಇಷ್ಟದೇವತೆಯ ಸಿದ್ಧಾಂತ ನಮಗೆ ಸ್ವಾತಂತ್ರ್ಯ ವನ್ನು ಕೊಡುವುದು. ಸೌಹಾರ್ದವನ್ನು ಕೊಡುವುದು.

ಭಗವಂತನ ಹಲವು ಅವತಾರಗಳ ಮೂಲಕ ಇಷ್ಟದೇವರು ವ್ಯಕ್ತವಾಗುವನು. ಆದ ಕಾರಣವೆ, ಯಾವ ಇಷ್ಟದೇವತೆಯನ್ನು ಭಕ್ತ ಆರಿಸಿಕೊಳ್ಳಬೇಕಾಗಿದೆ ಎಂಬುದನ್ನು ನಿರ್ಣಯಿಸುವುದಕ್ಕಾಗಿ ಗುರುಗಳು ಬೇಕು. ಗುರು ಶಿಷ್ಯನ ಇಷ್ಟವನ್ನು ತಿಳಿದುಕೊಂಡು ಅದಕ್ಕೆ ಹೊಂದಿಕೊಳ್ಳುವ ಮಂತ್ರವನ್ನು ಅಥವಾ ಹೆಸರನ್ನು ಕೊಡುತ್ತಾನೆ. ಭಕ್ತಿ, ಶ್ರದ್ಧೆ ಯಿಂದ ಶಿಷ್ಯ ಅದನ್ನು ಜಪಮಾಡುತ್ತ ಹೋಗುವನು. ಜಪವನ್ನು ಮಾಡುತ್ತ ಹೋದಂತೆಲ್ಲ ಶಿಷ್ಯನಿಗೆ ಹಲವು ಅನುಭವಗಳಾಗುವುವು. ಅತ್ಯಂತ ಶ್ರೇಷ್ಠ ಆದರ್ಶದ ಸಮೀಪಕ್ಕೆ ಅವನು ಹೋಗುತ್ತಾ ಬರುವನು. ಸಮುದ್ರದಲ್ಲಿ ಒಂದು ನಿಧಿ ಇರುವ ಪಾತ್ರೆಯು ಮುಳುಗಿದೆ ಎಂದು ಭಾವಿಸಿ. ಅದು ನಿಮಗೆ ಬೇಕಾಗಿದೆ. ಅದು ಅಟ್ಲಾಂಟಿಕ್ ಸಾಗರದಲ್ಲಿ ಮುಳುಗಿ ಹೋಗಿದೆ ಎಂದು ಭಾವಿಸೋಣ. ಅದು ಸ್ನಾನದ ಟಬ್ ಅಲ್ಲ. ನಿಮಗೆ ನಿಧಿಯ ಪೆಟ್ಟಿಗೆ ಬೇಕಾಗಿದೆ. ಆದರೆ ಅದು ಎಲ್ಲಿರುವುದೊ ಗೊತ್ತಿಲ್ಲ. ಅದರ ಮೇಲೆ ಆಸೆ ನಿಮಗೆ ಉತ್ಕಟ ವಾದರೆ ನಿಮಗೆ ಒಬ್ಬ ಗುರು ದೊರಕುವನು. ಅವನು ಮುಳುಗುವುದರಲ್ಲಿ ನಿಸ್ಸೀಮ. ನೀವು ತೀರದಲ್ಲಿ ನಿಂತಿರುವಾಗ, ಗುರು ಸಾಗರದಲ್ಲಿ ಮುಳುಗಿ, ನಿಧಿ ಪೆಟ್ಟಿಗೆಗೆ ಒಂದು ಸರಪಳಿ ಯನ್ನು ಕಟ್ಟುವನು. ಅವನು ಸಾಗರದಿಂದ ಬಂದಮೇಲೆ, ಆ ಸರಪಳಿಯ ತುದಿಯನ್ನು ನಿಮ್ಮ ಕೈಯಲ್ಲಿ ಕೊಟ್ಟು ಇದನ್ನು ಎಳಿ ಎಂದು ಹೇಳುತ್ತಾನೆ. ಅನಂತರ ನಿಮಗೆ ನಿಧಿ ಪೆಟ್ಟಿಗೆ ಸಿಕ್ಕುವುದು.

ಅನಂತ ಸಾಗರದಲ್ಲಿ ಮುಳುಗಿರುವ, ನಿಧಿ ಪೆಟ್ಟಿಗೆಗೆ ಕಟ್ಟಿರುವ ಸರಪಳಿಯ ಕೊಂಡಿ ಮಂತ್ರ ಎಂಬುದು. ಮಂತ್ರವನ್ನು ಉಚ್ಚರಿಸುತ್ತಿರುವಂತೆ, ಸಾಕ್ಷಾತ್ಕಾರ ಎಂಬ ನಿಧಿಯ ಪೆಟ್ಟಿಗೆ ಹತ್ತಿರ ಹತ್ತಿರಕ್ಕೆ ಬರುವುದು. ಸರಪಳಿ ಎಷ್ಟು ಉದ್ದವಿದೆಯೋಗೊತ್ತಿಲ್ಲ. ಸುಮ್ಮನೆ ಎಳೆಯುತ್ತಾ ಹೋಗಬೇಕು. ಅದು ಸಣ್ಣದಾಗಿರಬಹುದು; ಅಥವಾ ದೊಡ್ಡದಾಗಿರ ಬಹುದು. ಶ್ರದ್ಧಾಭಕ್ತಿಯಿಂದ, ಕೊಂಡಿಯಾದ ಮೇಲೆ ಕೊಂಡಿಯನ್ನು ಎಳೆಯುತ್ತಿರ ಬೇಕು, ಏನೊ ಮತ್ತೊಂದು ಸಲ ಎಳೆಯುವಾಗ ಅದು ಸಿಕ್ಕಬಹುದೇನೋ ಎಂದು.

ಶಿಷ್ಯನ ಇಷ್ಟದೇವತೆಯನ್ನು ನಿರ್ಣಯಿಸುವಾಗ ಗುರು ಶಿಷ್ಯನ ಪೂರ್ವ ಜನ್ಮವನ್ನೇ ತೆಗೆದುಕೊಳ್ಳುತ್ತಾನೆ. ಶಿಷ್ಯನ ಸ್ವಭಾವವನ್ನು ಪರೀಕ್ಷಿಸುವನು. ಅವನೊಂದಿಗೆ ಸ್ವಲ್ಪ ಮಾತನಾಡಬಹುದು. ಅವನ ಮೇಲೆ ಸ್ವಲ್ಪ ಪ್ರಯೋಗವನ್ನು ನಡೆಸಬಹುದು. ವ್ಯಕ್ತಿಯ ಇಷ್ಟವನ್ನು ಕಂಡುಹಿಡಿಯುವುದಕ್ಕೆ ಗುರು ಧ್ಯಾನ ಮಾಡಬಹುದು.

ಭಕ್ತನಿಗೆ ಇಷ್ಟದೇವತೆಯ ಮೇಲೆ ಅವಿಚ್ಛಿನ್ನ ಭಕ್ತಿ ಇರಬೇಕು. ಇದನ್ನೇ ಇಷ್ಟ ನಿಷ್ಠೆ ಎನ್ನುವುದು. ಇದನ್ನು ಅನಂತರ ವಿಚಾರಿಸೋಣ. ತತ್ತ್ವ ಪಾಂಡಿತ್ಯ ತರ್ಕ ಇವು ಗಳೆಲ್ಲ ಆನೆಯ ಕೊಂಬಿನಂತೆ. ಅಲಂಕಾರಕ್ಕೆ ಮತ್ತು ತನ್ನನ್ನು ರಕ್ಷಿಸಿಕೊಳ್ಳುವುದಕ್ಕೆ. ತನ್ನ ರಕ್ಷಣೆಗಾಗಿ, ಆಹಾರವನ್ನು ತಿನ್ನುವುದು, ಬಾಯಲ್ಲಿರುವ ಹಲ್ಲುಗಳು. ನಿಮ್ಮ ತತ್ತ್ವ

ಮತ್ತು ಪಾಂಡಿತ್ಯಕ್ಕೆ ಚೆನ್ನಾಗಿ ಮೆರಗು ಕೊಡಿ, ಇವುಗಳ ವಿಷಯವಾಗಿ ಹೆಮ್ಮೆಯನ್ನು ತಾಳಿ. ಆದರೆ ಜೀವನದ ಉದ್ದೇಶ ನಿಮ್ಮ ಆತ್ಮಪೋಷಣೆಯಾಗಬೇಕು ಎಂಬುದು.

ಯೋಗದಲ್ಲಿ ಸಾಧಕನನ್ನು ಅಧಿಕಾರಿ ಅಥವಾ ಪಾತ್ರ ಎಂದು ಕರೆಯುತ್ತಾರೆ. ಭಕ್ತಿಯೋಗದ ಅಧಿಕಾರಿ ಹೇಗೆ ಇರಬೇಕೆಂಬುದನ್ನು ಭಗವದ್ಗೀತೆಯ ಹನ್ನೆರಡನೆಯ ಅಧ್ಯಾಯದಲ್ಲಿ, ೧೩ ರಿಂದ ೨೦ ನೇ ಶ್ಲೋಕದಲ್ಲಿ ವಿವರಿಸುವರು. ಭಕ್ತನಲ್ಲಿ ಇರಬೇಕಾದ ಲಕ್ಷಣಗಳೇ, ಮನೋ ಪವಿತ್ರತೆ, ನಿಷ್ಠೆ, ಶ್ರದ್ಧೆ ಮತ್ತು ಸಾಭಾವಿಕವಾದ ಭಕ್ತಿ. ಅವನಲ್ಲಿರುವ ಭಕ್ತಿಯ ವಿಷಯದಲ್ಲಿ ಯಾವ ಸಂದೇಹವೂ ಇರಬಾರದು. ಅದು ಹೃತ್ಪೂರ್ವಕವಾಗಿ ಇರಬೇಕು. ತೀವ್ರ, ಮಧ್ಯ ಮತ್ತು ಮಂದ ಎಂಬ ಮೂರು ಬಗೆಯ ಅಧಿಕಾರಿಗಳಿದ್ದಾರೆ. ತೀವ್ರ ಶಿಷ್ಯನ ಗುಂಪಿಗೆ ಸೇರಿದವನು ಶಾಸ್ತ್ರ ಮತ್ತು ಗುರೂಪದೇಶವನ್ನು ಹೇಳದೇ ಇದ್ದರೂ ತಿಳಿದುಕೊಳ್ಳಬಲ್ಲ. ಅವನಿಗೆ ಬೋಧಿಸಿದೊಡನೆಯೇ ಅರ್ಥಮಾಡಿಕೊಳ್ಳಬಲ್ಲ ಶಕ್ತಿ ಇದೆ. ಮಧ್ಯದ ಗುಂಪಿಗೆ ಸೇರಿದವನಿಗೆ ಪದೇ ಪದೇ ಹೇಳುತ್ತಿದ್ದರೆ ಅರ್ಥಮಾಡಿಕೊಳ್ಳುವನು. ಮೂರನೆಯ ಮಂದರ ಗುಂಪಿಗೆ ಸೇರಿದವನಿಗೆ ಪದೇ ಪದೇ ಹೇಳುತ್ತಿದ್ದರೂ, ಅವನು ಅದನ್ನು ಅರ್ಥಮಾಡಿಕೊಳ್ಳಲಾರ. ಅವನು ಅರ್ಥಮಾಡಿಕೊಳ್ಳಬೇಕಾದರೆ ಬಹಳ ಕಾಲ ಬೇಕು. ಈ ಮೂರೂ ಗುಂಪಿನವರು ಕೂಡ ಯೋಗ್ಯರೆ. ಅವರೆಲ್ಲ ಮುಂದುವರೆಯುವುದಕ್ಕೆ ಪ್ರಯತ್ನಮಾಡುತ್ತಿರುವರು. ಕೆಲವರು ಬೇಗ ಗುರಿ ಸೇರುತ್ತಾರೆ. ಮತ್ತೆ ಕೆಲವರು ನಿಧಾನವಾಗಿ ಸೇರುತ್ತಾರೆ.

ಮನುಷ್ಯರಿಗೆ ಎಲ್ಲರಿಗೂ ಒಂದೇ ಯೋಗ್ಯತೆ ಇಲ್ಲ. ಅವರಿಗೆಲ್ಲ ಸರಿಸಮಾನವಾದ ಅವಕಾಶವಿರಬೇಕು. ಆದರೆ ಅವರು ಸರಿಸಮಾನರಾಗಿ ಹುಟ್ಟಿಲ್ಲ. ಪ್ರತಿಯೊಬ್ಬನ ಹಿಂದೆಯೂ ಅವನ ವರ್ತಮಾನವನ್ನು ನಿರ್ಧರಿಸಬಲ್ಲ, ಹಿಂದಿನ ಕರ್ಮಗಳಿವೆ. ಇದೆಲ್ಲ, ಅವನು ವಿಷಯವನ್ನು ಅರ್ಥಮಾಡಿಕೊಳ್ಳುವುದು, ಇಲ್ಲದಿರುವುದು ಇವುಗಳಲ್ಲೂ ವ್ಯಕ್ತವಾಗುವುದು. ಒಣಗಿದ ಸೌದೆ ಬೇಗ ಹತ್ತಿಕೊಳ್ಳುವುದು. ಆದರಂತೆಯೇ ಕೆಲವು ಸಾಧಕರು ಬೋಧನೆಯನ್ನು ಇತರರಿಗಿಂತ ಬಹಳ ಬೇಗ ತಿಳಿದುಕೊಳ್ಳುವರು, ಅವನ್ನು ಅನುಷ್ಠಾನಕ್ಕೆ ತರುವರು. ಆದರೆ ಬಾಳೆ ಮರಕ್ಕೆ ಬೆಂಕಿಹಾಕಲು ಆಗುವುದಿಲ್ಲ. ಅದರಿಂದ ಸುಮ್ಮನೆ ಹೊಗೆ ಏಳುವುದು. ಶ್ರೀರಾಮಕೃಷ್ಣರು ಒಬ್ಬನ ವಿಷಯವಾಗಿ ಹೀಗೆ ಹೇಳಿವರು, "ಅವನಿಗೆ ನಾನೇನುಮಾಡಲಿ. ಅವನೊಂದು ಬಾಳೆಯ ಮರದ ತುಂಡಿನಂತೆ. ನಾನು ಪ್ರಯತ್ನಪಟ್ಟರೂ ಅದಕ್ಕೆ ಉರಿ ತಗಲಿಸಲು ಆಗುವುದಿಲ್ಲ. ಅದು ಸುಮ್ಮನೆ ಹೊಗೆಯಾಡುವುದು. ಅವನ ಕಣ್ಣು ಕೆಂಪಗಾಗುವುದು, ನನ್ನ ಕಣ್ಣೂ ಕೆಂಪಗಾಗುವುದು."

ಮನುಷ್ಯನಲ್ಲಿ ಸತ್ವ, ರಜಸ್, ತಮಸ್ ಎಂಬ ಮೂರು ಗುಣಗಳಿವೆ. ಒಬ್ಬೊಬ್ಬರಲ್ಲಿ ಒಂದೊಂದು ಗುಣ ಜಾಸ್ತಿ ಇರುವುದು. ಪ್ರತಿಯೊಬ್ಬನೂ ತನ್ನ ಕರ್ಮಾನುಸಾರ ಮಾರ್ಗವನ್ನು ನವೆಸಬೇಕಾಗಿದೆ. ಆಧ್ಯಾತ್ಮಿಕ ಜೀವನದಲ್ಲಿ, ಮತ್ತೊಬ್ಬನೊಡನೆ ದಾರಿಯಲ್ಲಿರಲು ಆಗುವುದಿಲ್ಲ. ಮತ್ತೊಬ್ಬ ಏನುಮಾಡುತ್ತಿರುವನು ಲಕ್ಷ್ಯದಲ್ಲಿಡಬೇಡಿ. ಇನ್ನೊಬ್ಬರ ವೇಗಕ್ಕೆ ನಾನು ನಡೆಯಲು ಆಗುವುದಿಲ್ಲ.

ಭಕ್ತಿಯೋಗದಲ್ಲಿ ನಾವು ಉದ್ವೇಗವನ್ನು ಕುರಿತು ಚಿಂತಿಸುವಾಗ, ಕೆಲವರಲ್ಲಿ ಭಕ್ತಿಭಾವನೆ ಇದ್ದಕ್ಕಿದ್ದಂತೆ ತೀವ್ರವಾಗಿದ್ದು ಸ್ವಲ್ಪ ಕಾಲ ಎದ್ದು ಮಾಯವಾಗುವುದು. ಅವನು ದಿನಮಟ್ಟಿಗೆ ಅರಳುವ ಹೂವುಗಳಂತೆ. ಅನಂತರ ಬಾಡಿ ಬಿದ್ದು ಹೋಗುವುದು. ಮತ್ತೆ ಕೆಲವು ನಿಧಾನವಾಗಿ ಬಹಳ ಎತ್ತರ ಬೆಳೆಯುವ ತ್ಯಾಗದ ಮರದಂತೆ. ಅದರ ಬೆಳವಣಿಗೆಗೆ ನಿಲ್ಲುವುದೇ ಇಲ್ಲ. ಭಕ್ತಿ ವಿಕಾಸಕ್ಕೆ ಇರುವ ಆತಂಕಗಳನ್ನು ಮಾತ್ರ ನಾವು ತೆಗೆಯಬಹುದು. ಅದಕ್ಕಿಂತ ಹೆಚ್ಚಾಗಿ ಅದರ ಬೆಳವಣಿಗೆಯನ್ನು ತೀವ್ರ ಮಾಡುವುದಕ್ಕೆ ಆಗುವುದಿಲ್ಲ.

ಅಧಿಕಾರಿ ತನ್ನ ಇಷ್ಟ ದೇವರನ್ನು ನಿಷ್ಕರ್ಷಿಸಿದ ಮೇಲೆ, ಸಾಧನೆಯ ಸಾಗರದಲ್ಲಿ ಮುತ್ತಿನ ಚಿಪ್ಪಿನಂತೆ ಒಳಗೆ ಮುಳುಗುವನು. ಕ್ರಮೇಣ ಸಹನೆಯಿಂದ ಭಾವ ಎಂಬ ಮುತ್ತನ್ನು ತಯಾರು ಮಾಡುವನು. ಸಾಧನೆ ಎಂದರೆ ಕೆಲವು ನಿಯಮಗಳನ್ನು ಪಾಲಿಸುವುದು. ಭಾವ ಎಂದರೆ ಇರುವ ಸ್ಥಿತಿ. ಭಕ್ತಿ ಶಾಸ್ತ್ರದಲ್ಲಿ ಭಾವ ಎಂದರೆ ಇಷ್ಟದೇವತೆಯನ್ನು ಯಾವ ಸಂಬಂಧದ ಮೂಲಕ ನೋಡುವನೊ ಅದು ಎಂದು.

ಭಾವ ವ್ಯಕ್ತಿಗತವಾಗಿರುವುದು, ರಹಸ್ಯವಾಗಿರುವುದು. ನಿಮ್ಮ ಭಾವವನ್ನು ಮತ್ತೊಬ್ಬರ ಮೇಲೆ ಹೇರುವುದಕ್ಕೆ ಹೋಗಬೇಡಿ. ಕೆಲವು ಸಮಯದಲ್ಲಿ ಒಂದು ಭಾವದಿಂದ ಮತ್ತೊಂದು ಭಾವಕ್ಕೆ ಬೆಳೆಯುತ್ತಾನೆ; ಮೊಗ್ಗು ಅರಳಿ ಸುಂದರವಾದ ಹೂವಾಗುವಂತೆ. ಬೇಕಾದಷ್ಟು ಅಭ್ಯಾಸ ಇರಬೇಕು, ಜೀವನದಲ್ಲಿ ಶಿಸ್ತು ಇರಬೇಕು.

ಭಾವಗಳು ಅನಂತವಾಗಿವೆ. ಆದರೆ ಅವುಗಳನ್ನು ಹೀಗೆ ವಿಭಾಗಿಸುತ್ತಾರೆ.

ಶಾಂತಭಾವ : ಸರ್ವಶಕ್ತನಾದ ಪರಮೇಶ್ವರನ ಮೇಲೆ ಇರುವ ಅಪೂರ್ವ ಗೌರವ ಭಕ್ತಿಗಳು.

ದಾಸ್ಯಭಾವ : ಸೇವಕ ಸ್ವಾಮಿಯನ್ನು ನೋಡುವಂತೆ. ದೂರದಿಂದ ಸ್ವಾಮಿಗೆ ದೈನ್ಯದಿಂದ ಕೆಲಸ ಮಾಡುವುದು.

ತತಾಭಾವ : ಮಗು ತಾಯಿತಂದೆಗಳನ್ನು ನೋಡುವಂತೆ. ಭಕ್ತಿಯೋಗದಲ್ಲಿ ಅವನನ್ನು ತಾಯಿ ಅಥವಾ ತಂದೆಯಂತೆ ನೋಡಬಹುದು.

ಸಖ್ಯಭಾವ : ಒಬ್ಬ ಸ್ನೇಹಿತ ಮತ್ತೊಬ್ಬ ಸ್ನೇಹಿತನನ್ನು ನೋಡುವಂತೆ.

ವಾತ್ಸಲ್ಯಭಾವ : ತಂದೆ ತಾಯಿಗಳಿಗೆ ಮಗುವಿನ ಮೇಲೆ ಇರುವ ಪ್ರೀತಿಯಂತೆ.

ಮಧುರಭಾವ : ಪ್ರೀತಿಸುವವರು, ತನ್ನ ಪ್ರೀತಿಯ ಪುರುಷನನ್ನೊ, ಸ್ತ್ರೀಯನ್ನೊ ನೋಡುವಂತೆ.

ಮತ್ತಾವ ತೀವ್ರವಾದ ದೃಢವಾದ ಭಾವವಾದರೂ ನಮ್ಮನ್ನು ಗುರಿಗೆ ಮುಟ್ಟಿಸುವುದು. ಯಾವುದಾದರೂ ಭಾವ ನಮ್ಮಲ್ಲಿ ದೃಢವಾಗಿದ್ದರೆ, ನಮಗೆ ದರ್ಶನವಾಗುವುದು. ಭಾವ ಜೀವನದ ಗತಿಯನ್ನು ನಿರ್ವಹಿಸುವುದು.

ಒಂದು ಭಾವವನ್ನು ದೃಢವಾಗಿ ನಮ್ಮಲ್ಲಿ ಆರೈಕೆ ಮಾಡುವುದಕ್ಕೆ ಸಾಧನವನ್ನು ಮಾಡುತ್ತೇವೆ. ನಮ್ಮನ್ನು ತಡೆಯುವ ಆತಂಕಗಳೊಡನೆ ಸತತವೂ ನಾವು ಹೋರಾಡಬೇಕಾಗುವುದು.

ನಮ್ಮನ್ನು ತಡೆಯುವ ಆತಂಕಗಳು ಯಾವುವು? ಬಹುಪಾಲು ಇದೆಲ್ಲ ನಮ್ಮ ದುರಹಂಕಾರದಿಂದ ಆದುದು. ಭಕ್ತಿಯೋಗದಲ್ಲಿ ಅಹಂಕಾರ ಚೂರ್ಣೀಭೂತವಾಗಿರಬೇಕು. ಇದು ಕ್ರಮೇಣ ನಮ್ಮನ್ನು ಪರಿಶುದ್ಧರನ್ನಾಗಿ ಮಾಡುತ್ತ ಬರುವುದು. ಇದು ಪ್ರಾರಂಭದಲ್ಲಿ ದ್ವೈತದಿಂದ ಆರಂಭವಾಗುವುದು. ಕೊನೆಗೆ ನಮಗೆ ಐಕ್ಯದ ಅನುಭವವನ್ನು ಕೊಡುವುದು. ನಾನು ಎನ್ನುವುದು, ನೀನು ಎನ್ನುವುದರಲ್ಲಿ ಲಯವಾಗುವುದು.

ಪ್ರೀತಿಯನ್ನು ಪರಿಶುದ್ಧ ಮಾಡಿ, ನಿಯಂತ್ರಿಸಿದ ಮೇಲೆ ಪ್ರೇಮೇಶ್ವರನು ನಮಗೆ ಇಷ್ಟದಂತೆ ಕಾಣುವನು. ಪ್ರೀತಿ ಎಂಬುದು ಮಾನಸಿಕವಾದುದು. ಅದನ್ನು ಅತ್ಯಂತ ಶ್ರೇಷ್ಠ ಹಂತಕ್ಕೆ ಏರಿಸಿದರೆ, ಅಲ್ಲಿ ಸಾಕ್ಷಾತ್ಕಾರವಾಗುವುದು. ನಿನ್ನನ್ನು ಪರಮಾತ್ಮನೊಡನೆ ಒಂದುಗೂಡಿಸುವುದೇ ಪ್ರೀತಿ ಎಂಬ ಸೇತುವೆ. ಪರಮಾತ್ಮನೇ ಸೌಂದರ್ಯ, ಶಕ್ತಿ, ಪರಿಪೂರ್ಣ.

ನಮ್ಮ ಪ್ರೀತಿ ಪರಿಶುದ್ಧವಾಗಬೇಕು. ಸಾಧಾರಣವಾಗಿ ಪ್ರೀತಿ ಎಂಬುದರಲ್ಲಿ ಬೇಕಾದಷ್ಟು ಸ್ವಾರ್ಥತೆ ಇದೆ.

ಪವಿತ್ರ ಪ್ರೇಮವನ್ನು ಪಡೆಯಬೇಕಾದರೆ, ನಾವು ಏನೇನು ಮಾಡಬೇಕು. ಅದನ್ನೇ L–O–V–E ಎಂದು ಅಕ್ಷರಶಃ ಹೇಳೋಣ. L ಎಂದರೆ ಹಂಬಲಕ್ಕೆ ನಿಂತಿದೆ. ಭಗವಂತನಿಗಾಗಿ ನಾವು ಹಂಬಲಿಸಬೇಕು. ಈ ಹಂಬಲವಿಲ್ಲದೆ ನಾವು ಮುಂದುವರೆಯಲಾರೆವು. O ಎಂದರೆ ಐಕ್ಯತೆ. ಭಕ್ತ ಯಾವುದಕ್ಕಾಗಿ ಹಂಬಲಿಸುತ್ತಾನೆ? ಭಗವಂತನೊಡನೆ ಒಂದಾಗುವುದಕ್ಕೆ V ಎಂದರೆ ಅಹಂಕಾರಕ್ಕೆ ನಿಂತಿದೆ. ಭಗವಂತನೊಂದಿಗೆ ಒಂದಾಗುವುದಕ್ಕೆ ಆತಂಕಪ್ರಾಯವಾಗಿರುವುದಾವುದು? ಅದೇ ದುರಹಂಕಾರ. ಭಕ್ತ ಪಾಲಿಸುವ ವ್ರತಾದಿಗಳು, ನಿಯಮಾದಿಗಳು, ಭಕ್ತನಲ್ಲಿರುವ ದುರಹಂಕಾರವನ್ನು ಅಳಿಸುವುದಕ್ಕಾಗಿ. E ಎಂದರೆ ಪರವಶತೆ. ಭಕ್ತಿಯೋಗದ ಗುರಿಯೇ ಇದು. ನೀವು Love ಎಂದರೆ ಏನು ಎಂಬುದನ್ನು ನೆನಪಿನಲ್ಲಿಡಿ,

ಭಾವವನ್ನು ಪಡೆಯುವುದಕ್ಕೆ ಮುಂಚೆ, ದರ್ಶನದಲ್ಲಿ ಸಾಕ್ಷಾತ್ಕಾರವನ್ನು ಪಡೆಯುವುದಕ್ಕೆ ಮುಂಚೆ, ಭಕ್ತ ಮೂರು ಮೆಟ್ಟಲುಗಳನ್ನು ದಾಟಬೇಕಾಗಿದೆ. ಅವೇ ಇವು.

ವೈಧಿಭಕ್ತಿ—ವೈಧಿ ಎಂಬುದು ಸಂಸ್ಕೃತದ ವಿಧಿ ಎಂಬುದರಿಂದ ಬಂದಿದೆ. ಎಂದರೆ ಕೆಲವು ನಿಯಮಗಳನ್ನು ಪಾಲಿಸುವುದು ಎಂದು. ಇಲ್ಲಿ ಹಲವು ವಿಧಿ ನಿಷೇಧಗಳಿವೆ. ಹಲವು ವ್ರತಗಳಿವೆ, ನಿಯಮಗಳಿವೆ. ಇಲ್ಲಿ ಕೆಲವು ರೀತಿನೀತಿಗಳನ್ನು ಪಾಲಿಸಬೇಕು.

ರಾಗಾನುಭಕ್ತಿ—ರಾಗದಿಂದ ಉತ್ಪನ್ನವಾಗುವ ಭಕ್ತಿ. ಈ ಸ್ಥಿತಿಯಲ್ಲಿ ಭಕ್ತ ದೇವರನ್ನು ಹಲವು ವಸ್ತುಗಳನ್ನು ಕೇಳುವನು.

ಪ್ರೇಮಭಕ್ತಿ—ಈ ಸ್ಥಿತಿಯಲ್ಲಿ ನನ್ನಲ್ಲಿ ನೀನಿರುವುದು ಎಂಬ ಭಾವ ಬರುವುದು. ಇಲ್ಲಿ ಅಹಂಕಾರದ ಸುಳಿವೇ ಇರುವುದಿಲ್ಲ. ಪ್ರೇಮ ಒಂದೇ ಇರುವುದು. ಪ್ರೇಮಭಾವ ಸಮಾಧಿಗೆ ಒಯ್ಯುವುದು. ಇದೇ ಭಕ್ತಿಯೋಗದ ಗುರಿ.

ವೈಧಿಭಕ್ತಿಯನ್ನು ದಾರಿಯ ಮರಕ್ಕೆ ಹಾಕಿರುವ ಬೇಲಿಗೆ ಹೋಲಿಸಬಹುದು. ಬೇಲಿ ಮರವನ್ನು ಬೆಳೆಯುವಂತೆ ಮಾಡುವುದಿಲ್ಲ. ಆದರೆ ದನಕರುಗಳು ಅದನ್ನು ಹಾಳು ಮಾಡದಂತೆ ನೋಡಿಕೊಳ್ಳುವುದು. ಮರ, ತನಗೆ ಆತಂಕವಾಗಿದೆ ಎಂದು ಭಾವಿಸಬಹುದು. ಅದಕ್ಕೇನಾದರೂ ಮಾತನಾಡಲು ಶಕ್ತಿ ಇದ್ದರೆ, ನನಗೇತಕ್ಕೆ ಬೇಲಿ ಹಾಕಿದ್ದಾರೆ ಎಂದು ಗೊಣಗಾಡಲೂಬಹುದು. ಆದರೆ ಪ್ರಾರಂಭದಲ್ಲಿ ಅದನ್ನು ರಕ್ಷಿಸುವುದಕ್ಕೆ ಒಂದು ಬೇಲಿ ಆವಶ್ಯಕ. ಅನಂತರ ಅದು ಬೇಕಾಗಿಲ್ಲ.

ಸೋರೆಕಾಯಿ ಗಿಡದಲ್ಲಿ ಮೊದಲು ಹೂವು ಬಿಡುವುದು. ಅನಂತರ ಅದು ಸತ್ತು ಹೋಗುವುದು. ಅಲ್ಲಿ ಕಾಯಿಬರುವುದು. ಹೂವು ಹಾಳಾಗುವುದೇ ಹಿಂದೆ ಕಾಯಿ ಬರುವುದನ್ನು ಸೂಚಿಸುವುದು. ಮುಂದೆ ಬರುವ ಕಾಯಿಗಾಗಿ ಹೂವನ್ನು ಕೆಡಿಸಬಾರದು. ವಿಧಿ, ನಿಷೇಧಗಳು ಹೂವು, ಫಲವೇ ಪ್ರೀತಿ. ಭಕ್ತಿಯೋಗದಲ್ಲಿ ಆಚಾರಾದಿಗಳನ್ನು ಸಾವಧಾನದಿಂದ ಅನುಸರಿಸಬೇಕು. ಇದರಿಂದಲೇ ಭಗವತ್‌ಪ್ರೀತಿ ಉದಯಿಸುವುದು.

ಪೂಜಾದಿಗಳಿಂದ ಭಗವಂತನ ಮೇಲೆ ಪ್ರೀತಿ ಹುಟ್ಟುವುದು. ಅನಂತರ ಭಗವತ್ ಆಸಕ್ತಿಯೇ ಪ್ರಚೋದನಕಾರಿಯಾಗುವುದು. ವೈಧಿಭಕ್ತಿ ರಾಗಾನುಭಕ್ತಿ ಆಗುವುದು. ಆಗ ಬಾಹ್ಯ ಆಚಾರಾದಿಗಳು ಗೌಣವಾಗುವುವು. ಆಗ ಪ್ರೀತಿಯಿಂದ ಪ್ರೇರೇಪಿತನಾಗಿಯೇ ಪೂಜಾದಿಗಳನ್ನು ಮಾಡುತ್ತಾನೆ. ಅದಕ್ಕೆ ಮುಂಚೆ, ಬಾಹ್ಯ ಆಚಾರಗಳನ್ನು ಪಾಲಿಸುವುದಕ್ಕಾಗಿ ಪೂಜಿಸುತ್ತಿದ್ದ.

ಸಾಧಾರಣ ಪ್ರೀತಿಯಲ್ಲಿ ವೈಧಿ ಮತ್ತು ರಾಗಾನುಕ ಒಂದಾದಮೇಲೆ ಒಂದು ಬರುವುದು. ಆದರೆ ಪ್ರೇಮಕ್ಕೆ ಮುಟ್ಟುವುದಿಲ್ಲ. ನಮ್ಮ ಪ್ರೀತಿಯಲ್ಲಿ ಅಷ್ಟು ತೀವ್ರತೆ ಇರುವುದಿಲ್ಲ. ಈ ಪ್ರೀತಿಯಲ್ಲಿ ಯಾವಾಗಲೂ ನಾನೆಂಬುದೇ ಹೆಚ್ಚಾಗಿರುವುದು. ಸಾಧಾರಣ ಪ್ರೀತಿಗೆ ಉದಾಹರಣೆಯೇ ತಾಯಿ ಪ್ರೀತಿ.

ಭಕ್ತಿ ಮಾನಸಿಕವಾದ ಬೆಳವಣಿಗೆ. ಅದು ತನ್ನ ನಿಯಮವನ್ನು ಅನುಸರಿಸಬೇಕು. ಅದನ್ನು ತೀವ್ರಗೊಳಿಸುವುದಕ್ಕೆ ಆಗುವುದಿಲ್ಲ. ಅದು ಸ್ವಾಭಾವಿಕವಾಗಿ ಬೆಳೆಯಲಿ. ಫಲ ತಾನಾಗಿಯೇ ಬಿಡುವುದು. ಭಕ್ತಿಯ ಫಲ ಬಿಡುವುದಕ್ಕೆ ಸಾವಧಾನವಾಗಿ ಕಾಯಬೇಕಾಗಿದೆ. ಶ್ರೀರಾಮಕೃಷ್ಣರು ಈ ಕಥೆಯನ್ನು ಹೇಳುತ್ತಿದ್ದರು.

ನಾರದರು ವೈಕುಂಠಕ್ಕೆ ಹೋಗುವುದಕ್ಕಿಂತ ಮುಂಚೆ ಸ್ವತಂತ್ರವಾಗಿ ಸಂಚಾರ ಮಾಡುತ್ತಿದ್ದರು. ದಾರಿಯ ಪಕ್ಕದಲ್ಲಿದ್ದ ಒಬ್ಬ ಸಾಧುವನ್ನು ಕಂಡು ಮಾತನಾಡಿಸಿದರು. ನಾರದರು ವೈಕುಂಠಕ್ಕೆ ಹೋಗುತ್ತಿರುವರು ಎಂಬುದನ್ನು ಸಾಧು ಕೇಳಿ, ದಯವಿಟ್ಟು ವಿಷ್ಣುವನ್ನು ಕೇಳಿ ನನಗೆ ಯಾವಾಗ ಮುಕ್ತಿ ಸಿಕ್ಕುವುದು ಎಂಬುದನ್ನು ಎಂದು. ನಾರದರು ಹಾಗೆಯೇ ಆಗಲಿ ಎಂದು ಮುಂದೆ ಹೋಗುತ್ತಿದ್ದರು. ಸ್ವಲ್ಪ ಹೊತ್ತಿನಲ್ಲಿ ಶಾಂತಾರಾಮ್ ಎಂಬ ಭಕ್ತನ ಮನೆಗೆ ಬಂದರು. ಅಲ್ಲಿ ಶಾಂತಾರಾಮ್ ಭಗವಂತನ ಮೇಲೆ ಅನಾಸಕ್ತವಾದ ಪ್ರೀತಿಯಿಂದ ಅವನ ನಾಮವನ್ನು ಸಂತೋಷದಿಂದ ಕೊಂಡಾಡುತ್ತ ಭಜನೆ ಮಾಡುತ್ತಿದ್ದ. ಅವನು ಕೂಡ ನಾರದರಿಗೆ ತನಗೆ ಯಾವಾಗ ಮುಕ್ತಿ ಸಿಕ್ಕುವುದು ಎಂಬುದನ್ನು ವಿಚಾರಿಸಿ ಎಂದು ಕೇಳಿಕೊಂಡ.

ಹಲವು ಕಾಲವಾಯಿತು. ನಾರದರು ಅದೇ ದಾರಿಯಲ್ಲಿ ಬರುತ್ತಿದ್ದರು. ಇಷ್ಟು ಹೊತ್ತಿಗೆ ಸನ್ಯಾಸಿ ಸುತ್ತಲೂ ಒಂದು ಹುತ್ತ ಬೆಳೆದಿತ್ತು. ದೇವರನ್ನು ಕೇಳಿದಿರಾ ನಾರದರೇ, ಎಂದು ಆ ಸನ್ಯಾಸಿ ಕಾತರದಿಂದ ಕೇಳಿದ. ಅದಕ್ಕೆ ನಾರದರು, ನೀನು ಇನ್ನೂ ಮೂರು ಜನ್ಮಗಳು ಕಾಯಬೇಕಾಗಿದೆ ಎಂದರು.

ಸಾಧು, ಏನು, ನಾನು ಇನ್ನೂ ಮೂರು ಜನ್ಮಗಳು ಕಾಯಬೇಕೇ ? ಅದು ತುಂಬಾ ದೀರ್ಘಕಾಲ. ಇಷ್ಟೊಂದು ತಪಸ್ಸು, ತ್ಯಾಗ, ಧ್ಯಾನಮಾಡಿದರೂ ನಾನು ಇನ್ನೂ ಮೂರು ಜನ್ಮಗಳು ಕಾಯಬೇಕೇ ? ನನ್ನ ಕೈಯಲ್ಲಿ ಆಗುವುದಿಲ್ಲ ಎಂದ.

ನಾರದರು ಅನಂತರ ಶಾಂತಾರಾಮನ ಮನೆಗೆ ಹೋಗಿ, ದೇವರು ಹೇಳಿದ್ದನ್ನು ಹೇಳಿದರು : ಶಾಂತಾರಾಮ, ನೀನು ಆ ಮರದಲ್ಲಿ ಎಷ್ಟು ಎಲೆಗಳಿವೆಯೋ ಅಷ್ಟು ಜನ್ಮಗಳನ್ನು ಕಳೆಯಬೇಕಾಗಿದೆ, ನಿನ್ನ ಮುಕ್ತಿಗಾಗಿ ಎಂದು ಹೇಳಿದರು.

ಏನು, ಇಷ್ಟು ಬೇಗನೇ ಎಂದು ಕುಣಿದಾಡುವುದಕ್ಕೆ ಪ್ರಾರಂಭಿಸಿದ ಶಾಂತಾರಾಮ. ಓ, ದೇವರು ನನ್ನ ಮೇಲೆ ಅಮಿತ ಕೃಪೆಯನ್ನು ಬೀರಿದ್ದಾನೆ ಎಂದ. ದೇವರು ಇದನ್ನು ಕೇಳಿದ. ಅವನಲ್ಲಿರುವ ಭಕ್ತಿ ಮತ್ತು ತಾಳ್ಮೆಯನ್ನು ನೋಡಿದ ತಕ್ಷಣವೇ ಮುಕ್ತಿಯನ್ನು ಕರುಣಿಸಿದ. ಮುಕ್ತಿಗಾಗಿ ಅವನು ಎಷ್ಟು ಕಾಲವಾದರೂ ಕಾಯುವುದಕ್ಕೆ ಸಿದ್ಧನಾಗಿದ್ದ. ಆದರಿಂದ ಅವನಿಗೆ ಮುಕ್ತಿ ಲಭಿಸಿತು.

ಭಕ್ತಿಯೋಗದಲ್ಲಿ ನೀವು ಈ ವಿಷಯದಲ್ಲಿ ಉತ್ತೀರ್ಣರಾಗಬೇಕು.

ನಿಯಮ—ಇದು ರಾಜಯೋಗದಲ್ಲಿ ಹೇಳಿದಂತೆಯೇ ಇರುವುದು. ಭಗವತ್ ಪ್ರೀತಿ ಎಂಬ ಸಣ್ಣ ಸಸಿಯ ರಕ್ಷಣೆಗೆ ಹಾಕುವ ಬೇಲಿ ಇದು.

ನಿಷ್ಠೆ—ಕೆಲವು ಆಹಾರ ಮತ್ತು ಆಚಾರಗಳಿಗೆ ನಿಮ್ಮಲ್ಲಿರುವ ನಿಷ್ಠೆ. ಇದನ್ನು ಅನುಸರಿಸುವುದಕ್ಕೆ ಯಾವುದೂ ಆತಂಕವಾಗಿರಬಾರದು. ನಿಯಮ ಯಾವಾಗ ಸಿದ್ಧವಾಗುವುದೊ ಆಗ ಅದು ನಿಷ್ಠೆಯಾಗುವುದು. ನಿಷ್ಠೆ ಎಂದರೆ ಬಿಡದೆ ಇರುವ ಒಂದು ಛಲ. ಮತಭ್ರಾಂತರಲ್ಲಿ ಇದು ಇರುವುದು. ನಿಷ್ಠೆ ಇದ್ದರೆ, ಬಿಡದೆ ನಿಮ್ಮ ಅಭ್ಯಾಸಕ್ಕೆ ಅಂಟಿಕೊಂಡಿರುವುದಕ್ಕೆ ಸಾಧ್ಯವಾಗುವುದು. ಈ ಛಲವೇ ನಿಮ್ಮನ್ನು ಗುರಿಯೆಡೆಗೆ ಒಯ್ಯುವುದು.

ಉಪಾಸನ—ನಿಮ್ಮ ಇಷ್ಟದೇವರ ಸಮೀಪದಲ್ಲಿರುವುದು ಎಂದು ಇದಕ್ಕೆ ಅರ್ಥ. ನೀವು ಯಾವ ಕೆಲಸವನ್ನು ಮಾಡುತ್ತಿದ್ದರೂ, ಈ ದೃಷ್ಟಿ ನಿಮ್ಮಲ್ಲಿರಬೇಕು. ಈ ವೈಧೀ ಭಕ್ತಿಯ ಮಟ್ಟದಲ್ಲಿದ್ದಾಗ, ಪೂಜೆ, ಜಪ, ಸ್ಮರಣ, ಧ್ಯಾನ ಇವುಗಳನ್ನು ಮಾಡುತ್ತಿರಬೇಕು.

ಪೂಜೆ ಎಂದರೆ ನಿಮ್ಮ ಇಷ್ಟದೇವರನ್ನು ಆಚಾರಾಧಿಗಳ ಮೂಲಕ ಆರಾಧಿಸುವುದು. ದೇವರೇ ನಿಮ್ಮ ಎದುರಿಗೆ ಇರುವನು ಎಂದು ಭಾವಿಸಿ, ಇದನ್ನೆಲ್ಲ ಮಾಡಿ. ದೇವರನ್ನು ನಿಮ್ಮ ಮನೆಯ ಪರಮ ಆಪ್ತನೆಂದು ಭಾವಿಸಿ, ಅವನನ್ನು ಪೂಜಿಸಿ, ಸೇವಿಸಿ, ದೇವರನ್ನೇ ನಿಮ್ಮ ಯಜಮಾನನೆಂದು ಭಾವಿಸಿ. ಯಾವಾಗಲೂ ಅವನ ಕೆಲಸವನ್ನು ಮಾಡಿ.

ಜಪ ಎಂದರೆ ಇಷ್ಟದೇವತೆಯ ಮಂತ್ರವನ್ನು ಉಚ್ಚರಿಸುವುದು. ಅವನ ಜಪ ಚಿತ್ತವನ್ನು ಶುದ್ಧ ಮಾಡುವುದು. ನಿಮಗೆ ಎಷ್ಟು ಸಾಧ್ಯವೋ ಅಷ್ಟು ಜಪಮಾಡಿ. ಹಿಂದಿನಿಂದ ವಾಡಿಕೆಯಲ್ಲಿ ಬಂದ ದೇವರೊಡನೆ ಕೆಲವು ಮಂತ್ರಗಳು ಕೆಲವು ಭಾವಗಳೊಡನೆ ಸಂಬಂಧವನ್ನೂ ಪಡೆದಿವೆ. ಅದನ್ನೇ ಪದೇ ಪದೇ ಉಪಯೋಗಿಸುವುದರಿಂದ ಅದಕ್ಕೆ ಶಕ್ತಿ ಬಂದಿದೆ. ನೀವು ನಿಮ್ಮ ಮಂತ್ರವನ್ನು ಉಚ್ಚಾರಮಾಡಿದರೆ ನಿಮ್ಮ ಸುತ್ತಲೂ ಆಧ್ಯಾತ್ಮಿಕ ಸ್ಪಂದನವನ್ನು ಉಂಟುಮಾಡಿಕೊಳ್ಳುವಿರಿ. ಪ್ರೀತಿಪಾತ್ರನಾದ ಭಗವಂತನ ನಾಮೋಚ್ಚಾರಣೆ, ಭಕ್ತಿಯೋಗದಲ್ಲಿ ಮುಂದುವರಿಯಬೇಕಾದರೆ ಅತಿ ಮುಖ್ಯ.

ಸ್ಮರಣ ಎಂದರೆ ಸದಾ ಅವನನ್ನು ಜ್ಞಾಪಿಸಿಕೊಳ್ಳುವುದು. ನೀವು ಕೆಲಸದಲ್ಲಿ ನಿರತರಾಗಿರುವಾಗ ಮಧ್ಯಮಧ್ಯ ಸ್ವಲ್ಪಹೊತ್ತು ಅದನ್ನು ನಿಲ್ಲಿಸಿ, ಭಗವಂತನನ್ನು ಚಿಂತಿಸಿ. ಸ್ಮರಣ ನಿಮ್ಮ ಜೀವನವನ್ನೆಲ್ಲಾ ಒಂದು ಸಾಮರಸ್ಯದಿಂದ ತುಂಬುವುದು. ಇದು ನಿಮ್ಮ ಜೀವನದ ಹಿನ್ನೆಲೆಯಾಗುವುದು. ಜೀವನವನ್ನು ಮಾಧುರ್ಯದಿಂದ ತುಂಬುವುದು.

ಉತ್ತರ ಮುಖಿಯ ಸೂಜಿ ಯಾವಾಗಲೂ ಉತ್ತರಕ್ಕೆ ತೋರುತ್ತಿರುವುದು. ಭಗವಂತನ ನಾಮವೇ ಉತ್ತರದಿಕ್ಕಾಗಲಿ. ನಿಮ್ಮ ಜೀವನ ಮತ್ತು ಮನಸ್ಸು ಸೂಜಿಯಂತೆ ಯಾವಾಗಲೂ ಉತ್ತರಕ್ಕೆ ತಿರುಗಲಿ. ಇದೇ ಸ್ಮರಣ.

ಮದುವೆ ಸಮಯದಲ್ಲಿ ಒಬ್ಬ ಅಲ್ಲಿ ಉರಿಯುತ್ತಿದ್ದ ದೀಪವನ್ನೆಲ್ಲ ನೋಡಿಕೊಳ್ಳುತ್ತಿದ್ದ. ಅವನು ದೀಪದಿಂದ ದೀಪಕ್ಕೆ ಹೋಗಿ, ಬೇಕಾದರೆ ಎಣ್ಣೆ ಹಾಕುತ್ತಿದ್ದ. ಮದುವೆಗೆ ಬಂದ ನೆಂಟರು ಇಷ್ಟರೊಡನೆ ಮಾತುಕತೆ ಆಡುತ್ತಿದ್ದ. ಆದರೆ ಅವನ ಮನಸ್ಸು ಯಾವಾಗಲೂ ದೀಪದ ಮೇಲೆ ಇತ್ತು. ಇದೇ ಸ್ಮರಣ.

ಪರಿಚಾರಕ ಹೆಂಗಸು ಯಜಮಾನನ ಮಕ್ಕಳನ್ನು ಎತ್ತಿಕೊಂಡು ಮುದ್ದಾಡುತ್ತ ನನ್ನ ಹರಿ, ನನ್ನ ರತ್ನ ಎಂದು ಹೇಳುವಳು. ಆದರೆ ಅವಳ ಮನಸ್ಸು ದೂರದ ಹಳ್ಳಿಯಲ್ಲಿರುವ ತನ್ನ ಮಕ್ಕಳ ಮೇಲಿದೆ. ಇದೇ ಸ್ಮರಣ.

ಒಬ್ಬನಿಗೆ ಹಲ್ಲುನೋವು ಬಂತು. ಅವನು ತನ್ನ ತುರ್ತುಕೆಲಸಗಳನ್ನು ಮಾಡುತ್ತಿರಬಹುದು. ಆದರೆ ಅವನ ಮನಸ್ಸು ಹಲ್ಲುನೋವಿನ ಮೇಲಿದೆ. ಇದೇ ಸ್ಮರಣ.

ನಿಮ್ಮ ಇಷ್ಟದೇವತೆಯ ಸ್ಮರಣವನ್ನು ಅಭ್ಯಾಸಮಾಡಿ.

ಧ್ಯಾನ ಎಂದರೆ ಭಗವಂತನ ಮೇಲೆ ಮನಸ್ಸನ್ನು ಸಮನಾಗಿ ಹರಿಸುವುದು. ಸ್ಮರಣದಲ್ಲಿ ನಾವು ಆರೂಢರಾದರೆ ಇಷ್ಟದೇವತೆಯ ಮೇಲೆ ಧ್ಯಾನ ಸುಲಭವಾಗುವುದು. ನಿಮ್ಮ ಹೃದಯಪದ್ಮದಲ್ಲಿ ಇಷ್ಟದೇವರನ್ನು ಕುರಿತು ಚಿಂತನೆ ಮಾಡಿ. ಅಥವಾ ನಿಮ್ಮ ಗುರು ಹೇಳಿದಂತೆ ಮಾಡಿ. ಇಷ್ಟದೇವರೆ ನಿನ್ನ ದೇಹ, ಮನಸ್ಸು, ಬುದ್ಧಿಗಳ ಒಡೆಯ. ನಿಮ್ಮ ಮನಸ್ಸನ್ನೆಲ್ಲ ಅವನ ಮೇಲೆ ಇಡಿ. ನಿಮ್ಮ ಒಳಗಣ್ಣುಗಳು ಭಗವಂತನ ಸೌಂದರ್ಯವನ್ನು ನೋಡಿ ನಲಿಯಲಿ. ನಿಮ್ಮ ದೇಹವನ್ನು ಭಗವಂತನ ದೇವಾಲಯವನ್ನಾಗಿ ಮಾಡಿ. ನೀವು ಗೌರವಿಸುವ ವಸ್ತುವಿನ ಮೇಲೆ ಧ್ಯಾನ ಮಾಡಿದರೆ ನಮ್ಮ ಪ್ರೀತಿಯನ್ನು ಪರಿಶುದ್ಧ ಮಾಡುವುದು. ಕ್ರಮೇಣ ನಾವು ಧ್ಯಾನಿಸುವ ವಸ್ತುವಿನ ಗುಣಧರ್ಮಗಳು ನಮಗೆ ಬರುವುವು.

ದೀನತೆ ಎಂದರೆ ದೈನ್ಯತೆ. ಅದು ನಾನು ಏತಕ್ಕೂ ಪ್ರಯೋಜನವಿಲ್ಲ ಎಂದು ಯೋಚಿಸುವ ನೈಚ್ಯ ಸ್ವಭಾವವಲ್ಲ. ಒಂದು ದೊಡ್ಡ ಶಕ್ತಿ ನಿನ್ನ ಮೂಲಕ ಕೆಲಸ ಮಾಡುತ್ತಿರುವ ಅರಿವಾದಾಗ ನೀನು ನಿಜವಾಗಿಯೂ ದೀನನಾಗುವೆ. ನಿನಗಿಂತ ಮಿಗಿಲಾದ ಶಕ್ತಿಯೊಂದಿದೆ ಎಂಬುದನ್ನು ಅನುಭವಿಸಿದಾಗ ದೈನ್ಯತೆ ಬರುವುದು. ಇದು ನಮ್ಮ ಪ್ರೀತಿಯನ್ನು ಪರಿಶುದ್ಧ ಮಾಡುವುದು. ಎಲ್ಲರಿಗೂ ಗೌರವ ತೋರುವುದಕ್ಕೆ ಸಿದ್ಧನಾಗು. ಈ ದೈನ್ಯತೆಯನ್ನು ಸಂಪಾದಿಸು. ದೈನ್ಯತೆಯಿಂದ ಶಕ್ತಿ ಬರುವುದು. ಇದು ದೌರ್ಬಲ್ಯವಲ್ಲ. ತೃಣದಂತೆ ಎಲ್ಲರ ಕಾಲಿನಿಂದಲೂ ತುಳಸಿಕೊಳ್ಳುವುದಕ್ಕೆ ಸಿದ್ಧನಾಗು. ಕಲ್ಲನ್ನು ಮೇಲಕ್ಕೆ ಎಸೆದರೆ ಅದು ನಿನಗೆ ಹಣ್ಣನ್ನು ಹೇಗೆ ಕೊಡುವುದೊ ಹಾಗಿರು. ಮರ ಕಡಿಯುತ್ತಿದ್ದರೂ ಅದು ಅವನಿಗೆ ನೆರಳನ್ನು ಕೊಡುವಂತೆ ಇದು.

ಶ್ರೀರಾಮಕೃಷ್ಣರ ಗೃಹಸ್ಥ ಶಿಷ್ಯರಾದ ನಾಗಮಹಾಶಯರ ಹೆಸರನ್ನು ಕೇಳಿದರೆ ಸಾಕು. ದೈನ್ಯತೆಯ ಜ್ವಲಂತ ಉದಾಹರಣೆ ಮನಸ್ಸಿಗೆ ಬರುವುದು. ಮಹಾಮಾಯೆ ತನ್ನ ಪಾಶದಿಂದ ನಾಗಮಹಾಶಯರನ್ನು ಕಟ್ಟಲು ಪ್ರಯತ್ನಪಟ್ಟಳು. ಅವನು ದೈನ್ಯತೆಯಿಂದ ಸಣ್ಣ ಸಣ್ಣದಾಗುತ್ತ ಬಂದ. ಅವನನ್ನು ಕಟ್ಟುವಷ್ಟು ಸಣ್ಣದಾರವಿರಲಿಲ್ಲ. ನರೇಂದ್ರನನ್ನು ಹಾಗೆ ಕಟ್ಟಲು ಪ್ರಯತ್ನಿಸಿದಳು. ಅವನು ದೊಡ್ಡ ದೊಡ್ಡದಾಗುತ್ತ ಮೇರೆ ಇಲ್ಲದ ಅನಂತವಾದನು. ಅವನನ್ನು ಕಟ್ಟುವಷ್ಟು ದೊಡ್ಡ ಹಗ್ಗ ಅವಳಲ್ಲಿ ಇರಲಿಲ್ಲ.

ಒಂದು ಸಲ ನಾನು ಪಾಟ್ನಾ ಆಶ್ರಮದಲ್ಲಿದ್ದಾಗ ಸ್ವಾಮಿ ವಿಶುದ್ಧಾನಂದರು ಅಲ್ಲಿಗೆ ಬಂದರು. ಪ್ರವಚನದ ದಿನ ಬಂದಾಗ ಇವತ್ತು ಪ್ರವಚನವನ್ನು ನಡೆಸಿ ಎಂದು ನಾನು ಅವರನ್ನು ಕೇಳಿಕೊಂಡೆ. ಅಂತಹ ಹಿರಿಯ ಸ್ವಾಮಿಗಳು ಇರುವಾಗ ಅವರೆದುರಿಗೆ ನನಗೆ ಮಾತನಾಡಲು ನಾಚಿಕೆಯಾಯಿತು. ಆದರೆ ಅವರು ಪ್ರವಚನ ಮಾಡಲಿಲ್ಲ. ಆದರೆ ನಾನು ಪ್ರವಚನ ಮಾಡುತ್ತಿದ್ದಾಗ ಅತಿ ವಿನಯದಿಂದ ಅವರು ಕೇಳುವುದಕ್ಕೆ ಪ್ರೇಕ್ಷಕ ವರ್ಗದಲ್ಲಿ ಕುಳಿತರು. ಮಹಾವ್ಯಕ್ತಿಗಳು ಅಭ್ಯಾಸ ಮಾಡುವ ದೈನ್ಯತೆ ಇದು.

ಶ್ರೀಚೈತನ್ಯರು, ದೈನ್ಯತೆ ಮತ್ತು ಜಪಕ್ಕೆ ಪ್ರಾಧಾನ್ಯತೆಯನ್ನು ಕೊಟ್ಟರು. "ತೃಣಕ್ಕಿಂತ ದೀನನಾಗಿರು. ಮರಕ್ಕಿಂತ ಸಹನೆಯಿಂದಿರು. ಎಲ್ಲರಿಗೂ ಗೌರವವನ್ನು ತೋರು. ನಿನಗಾಗಿ ಏನನ್ನೂ ಆಶಿಸಬೇಡ."

ಸೇವೆ ಎಂದರೆ, ದೇವರಿಗೆ ಮಾಡುವ ಸೇವೆಯನ್ನೇ ಪೂಜೆ ಎಂದು ನೋಡುವುದು. ನೀನು ಭಕ್ತಿಯಿಂದ ನೀಡುವ ಸೇವೆಯನ್ನೆಲ್ಲ ಭಗವಂತನು ಸ್ವೀಕರಿಸುವನು. ಸಾಮಾಜಿಕ ಸೇವೆ, ಆಸ್ಪತ್ರೆಯಲ್ಲಿ ಮಾಡುವ ಕೆಲಸ ಇವುಗಳೆಲ್ಲ ನಮ್ಮಲ್ಲಿ ಕನಿಕರದ ಭಾವನೆಯನ್ನು ನೀಡುವುದು. ಇತರರಿಗೆ ಏನೊ ಒಂದು ಮಹೋಪಕಾರ ಮಾಡುತ್ತಿದ್ದೇನೆ ಎಂದು ಅರಿಯದೆಯೂ ಆಲೋಚನೆ ಮಾಡಬೇಡ. ಕೆಲವು ಸ್ತ್ರೀಸಮಾಜಗಳಿಗೆ ಸೇರಿದ ಹೆಂಗಸರು ತಾವು ಮಾಡುತ್ತಿರುವ ದಾನಧರ್ಮಗಳ ವಿಷಯವನ್ನು ಮಾತನಾಡುತ್ತಿರುವಾಗ, ಭೂಮಿ ತಾಯಿಗೆ, "ತಾಯಿ, ನೀನು ಸಂದುಬಿಡು, ನಾನಲ್ಲಿ ಅವಿತುಕೊಳ್ಳುತ್ತೇನೆ" ಎನ್ನುವಂತಾಗುವುದು.

ದೇವರಿಗೆ ಸೇವೆ ಮಾಡುವುದಕ್ಕೆ ನಿನಗೆ ಒಂದು ಅವಕಾಶ ಬಂದಿರುವುದರಿಂದ ನೀನು ಧನ್ಯನಾದೆ ಎಂದು ಭಾವಿಸು. ಅಂಗಡಿಯಲ್ಲಿ ಮಾರಾಟ ಮಾಡುವವನು "ನಾನು ನಿನಗೆ ಏನು ಮಾಡಲಿ" ಎಂಬ ಭಾವ ಬಹಳ ಕೆಟ್ಟದ್ದು. ಹಾಗೆಂದಿಗೂ ಭಾವಿಸಬೇಡ. ನೀನು ದೇವರನ್ನು ನೋಡದೆ ಇದ್ದರೂ ಅವನ ಮಕ್ಕಳನ್ನು ನೋಡುತ್ತಿರುವೆ. ಅವರಿಗೆ ಸೇವೆ ಮಾಡು. ನೀನೇನಾದರೂ ಉಪಾಧ್ಯಾಯನಾದರೆ, ದೇವರೇ ವಿದ್ಯಾರ್ಥಿಗಳಂತೆ ನಿನ್ನ ಮುಂದೆ ಇರುವರು ಎಂದು ಭಾವಿಸು.

ಆತ್ಮಸಮರ್ಪಣ ಎಂದರೆ ಭಗವಂತನಲ್ಲಿ ಶರಣಾಗುವುದು. ಭಗವಂತನನ್ನು ನೆಚ್ಚು. ನೀನು ದೇವರ ಕೈಯನ್ನು ಹಿಡಿದುಕೊ. ದೇವರು ನಿನ್ನ ಕೈಯನ್ನು ಹಿಡಿದುಕೊಳ್ಳಲಿ. ಆಗ ನೀನು ಎಡವಿ ಬೀಳುವುದಿಲ್ಲ. ದಾರಿ ಹಿಂದಿಗಿಂತ ಸುಗಮವಾಗುವುದು.

ನೀವು ನೋಡುವಂತೆ ವೈಧೀಭಕ್ತಿ ಸಾಂಪ್ರದಾಯಿಕವಾಗಿರುವುದು. ತನ್ನ ಇಷ್ಟ ದೇವರ ಮೇಲೆ ಭಕ್ತಿಯನ್ನು ರೂಢಿಸಿಕೊಳ್ಳುವುದಕ್ಕೆ ಭಕ್ತಿ ಸಂಪ್ರದಾಯದ ಆಚಾರಾದಿ ಗಳನ್ನು ಪಾಲಿಸಬೇಕು. ನೀನು ಪ್ರೀತಿಸುವ ಭಗವಂತನನ್ನು ಅನುಭವಿಸುವುದಕ್ಕೆ ಆಚಾರಾದಿಗಳನ್ನು ಪಾಲಿಸಬೇಕು.

೩

ನಾನು ಮೊದಲನೆ ಪ್ರವಚನದಲ್ಲಿ, ಭಕ್ತನಿಗೆ ಭಗವಂತನ ಮೇಲೆ ಇರುವ ಹಲವು ಭಾವಗಳ ವಿಷಯವಾಗಿ ಹೇಳಿದೆ. ದೇವರನ್ನು ಹಲವು ಭಾವಗಳ ಮೂಲಕ ಆರಾಧಿಸ ಬಹುದು ಎಂಬುದನ್ನು ಕೇಳಿದಾಗ ನಿಮಗೆ ಅದು ವಿಚಿತ್ರವಾಗಿ ಕಾಣಬಹುದು. ಅದಕ್ಕಾಗಿ ನಾನು ಸ್ವಲ್ಪ ಹಿನ್ನೆಲೆಯನ್ನು ಕೊಡುತ್ತೇನೆ.

ಪ್ರಪಂಚದಲ್ಲೆಲ್ಲ ಹಿಂದೂಗಳು ಮಾತ್ರ ದೇವರನ್ನು ತಂದೆ, ತಾಯಿ, ಮಗು, ಸಖಿ ಪ್ರಿಯತಮ ಮುಂತಾದ ಭಾವಗಳ ಮೂಲಕ ಪ್ರೀತಿಸಬಲ್ಲರು. ಅವರಿಗೆ ದೇವರು ಒಂದು ವ್ಯಕ್ತಿಯಲ್ಲ. ಅದೊಂದು ತತ್ವ. ಅದನ್ನು ಹಲವು ರೀತಿ ಒಬ್ಬ ಪರಿಗಣಿಸಬಹುದು- ಹಿಂದೂ ಸೂಕ್ಷ್ಮ ವಿಚಾರಮತಿ. ಅವನು ಮೊದಲು ಆದರ್ಶವನ್ನು ತರುವನು. ಅನಂತರ ವ್ಯಕ್ತಿ ಯನ್ನು ತರುವನು. ಮುಂಚೆ ಬರುವುದು ಭಾವ ಅಥವಾ ಸೂಕ್ಷ್ಮವಾದ ತತ್ತ್ವ. ಅನಂತರ ಸ್ಥೂಲವಾಗಿರುವ ವಸ್ತುವನ್ನು ಸೃಷ್ಟಿಸುವನು. ಅವನ ದೇಹಕ್ಕೆ, ಮನಸ್ಸು ಆತ್ಮಗಳಿಲ್ಲ. ಆತ್ಮನೇ ದೇಹ ಮತ್ತು ಮನಸ್ಸುಗಳನ್ನು ಸೃಷ್ಟಿಸುವುದು. ಎಲ್ಲಿಯವರೆಗೆ ವ್ಯಕ್ತಿ ಒಂದು ತತ್ವಕ್ಕೆ ಉದಾಹರಣೆಯಾಗಿರುವನೊ ಅಲ್ಲಿಯವರೆಗೆ ಮಾತ್ರ ಅದಕ್ಕೆ ಬೆಲೆ.

ಭರತಖಂಡದಲ್ಲೆಲ್ಲ, ಕೃಷ್ಣನ ಆದರ್ಶವನ್ನು ಹಲವು ಭಾವಗಳಲ್ಲಿ ಇಂದಿಗೂ ಪ್ರೀತಿಸುವರು, ಪೂಜಿಸುವರು. ಹಿಂದೂಗಳು ಕೃಷ್ಣ ಎಂಬ ವ್ಯಕ್ತಿಯನ್ನು ಯಾವ ಕ್ಷಣ ಬೇಕಾದರೂ ಆಚೆಗೆ ಎಸೆಯಲು ಸಿದ್ಧ. ಆದರೆ ಕೃಷ್ಣನ ಆದರ್ಶ ಅವನ ಬಾಳಿನ ಸಾರ. ನಾವು ಕೃಷ್ಣನ ಆದರ್ಶವನ್ನು ತಿಳಿದುಕೊಳ್ಳಬೇಕಾದರೆ ಕ್ರಮೇಣ ಸ್ಥೂಲದಿಂದ ಸೂಕ್ಷ್ಮಕ್ಕೆ ಹೋಗಬೇಕಾಗಿದೆ. ವ್ಯಕ್ತಿತ್ವ, ಆದರ್ಶದ ಕಾಂತಿಯಲ್ಲಿ ಮ್ಲಾನವಾಗಿಬಿಡುವುದು. ಸಂಸ್ಕೃತ

ದಲ್ಲಿ ಇದನ್ನೆ ಅರುಂಧತಿದರ್ಶನನ್ಯಾಯ ಎನ್ನುವರು. ಇದನ್ನು ನಾವು ಮುಂಚೆಯೇ ವಿವರಿಸಿದ್ದೇವೆ. ನೀವು ಅದನ್ನು ಜ್ಞಾಪಿಸಿಕೊಂಡರೆ, ಗುರು ಮೊದಲು ಸ್ಥೂಲವಾದ ವಸ್ತುವನ್ನು ತೋರಿಸುವನು. ಅನಂತರ ಪ್ರಕಾಶಮಾನವಾದ ನಕ್ಷತ್ರ, ಅನಂತರ ಅದ ಕ್ಕಿಂತ ಮಂಕಾಗಿರುವುದು. ಕೊನೆಗೆ ಅತ್ಯಂತ ಅಸ್ಪಷ್ಟವಾಗಿರುವ ನಕ್ಷತ್ರವನ್ನು ತೋರು ವನು. ಅದರಂತೆಯೇ ಮೊದಲು ಸಾಧಕನ ಮನಸ್ಸಿಗೆ ಯಾವ ವ್ಯಕ್ತಿಯಲ್ಲಿ ಆದರ್ಶ ಜಾಜ್ವಲ್ಯಮಾನವಾಗಿ ಬೆಳಗುತ್ತಿದೆಯೊ ಅವರನ್ನು ತೋರಬೇಕು. ಕ್ರಮೇಣ ಮನಸ್ಸು ಸೂಕ್ಷ್ಮವಾದ ಭಾವವನ್ನು ಗ್ರಹಿಸುವ ಸ್ಥಿತಿಗೆ ಬಂದರೆ, ಒಂದು ವ್ಯಕ್ತಿಯನ್ನು ಸಂಪೂರ್ಣ ವಾಗಿ ತ್ಯಜಿಸಿ, ಆದರ್ಶವನ್ನು ಸ್ವೀಕರಿಸುವನು.

ಒಬ್ಬ ಪ್ರಖ್ಯಾತ ವಿದ್ವಾಂಸ ಹಿಂದೂಗಳ ಭಕ್ತಿಯ ಹಿಂದೆ ಇರುವ ಮಾನಸಿಕಶಾಸ್ತ್ರ ವನ್ನು ಕುರಿತು ಹೀಗೆ ಹೇಳುತ್ತಾನೆ. ಕ್ರೈಸ್ತಧರ್ಮದಲ್ಲಿ ಬರುವ ನಿಷ್ಠುರನಾದ ನ್ಯಾಯ ಪಕ್ಷಪಾತಿಯಾದ, ಸ್ವರ್ಗದ ಸಿಂಹಾಸನದ ಮೇಲೆ ಕುಳಿತು ಆಳುತ್ತಿರುವ ದೇವರನ್ನು ಕೆಳ ತಂದು, ಮನೆಯಲ್ಲಿ ಅವನಿಗೆ ಒಂದು ಸ್ಥಳವನ್ನು ಕೊಟ್ಟು, ಅವನನ್ನು ತಾಯಿ, ತಂದೆ, ಮಗು, ಗಂಡ, ಪ್ರಿಯತಮೆ ಮುಂತಾದಾಗಿ ಕರೆದರು. ಅವನು ನಮಗೆ ಸಮೀಪನಾಗಿರ ಬೇಕು. ನಮ್ಮ ಪ್ರೀತಿಗೆ ಪಾತ್ರನಾಗಿರಬೇಕು. ದೇವರು ನಮಗೆ ಮನೋಹರವಾಗಿರುವನು. ಪ್ರೀತಿಗೆ ಪಾತ್ರನಾಗಿರುವನು. ಅವನು ನಮ್ಮ ಸಖನಾಗಿರುವನು. ಆ ಕೃಷ್ಣನಾದರೊ ಯಮುನಾ ನದೀ ತೀರದಲ್ಲಿ ಗೋವುಗಳನ್ನು ಕಾಯುತ್ತಿರುವನು, ಗೋಪಾಲ ರೊಡನೆ ಆಡುತ್ತಿರುವನು. ತನ್ನ ಕೊಳಲಿನ ಅಮರಗಾನದಿಂದ ಎಲ್ಲರನ್ನೂ ಸೆಳೆಯುತ್ತಿರವನು. ಇದೇ ಪರಮ ಪ್ರೀತಿಯ ಚಿಹ್ನೆಯಾಗಿದೆ.

ಭಾಗವತವನ್ನು ರಚಿಸಿದ ಕವಿ ಬ್ರಹ್ಮನ ಪ್ರೇಮವೇ ಕೃಷ್ಣನಲ್ಲಿ ಆವಿರ್ಭವಿಸಿದೆ ಎಂದು ಹೇಳುತ್ತಾನೆ. ದೇವರೇ ಪ್ರೇಮ, ಪ್ರೇಮವೇ ದೇವರು ಎಂಬುದು ಕೃಷ್ಣನ ವ್ಯಕ್ತಿತ್ವದಲ್ಲಿ ಸ್ಪಷ್ಟವಾಗಿ ಚಿತ್ರಿತವಾಗಿರುವುದು. ವಿಶ್ವವ್ಯಾಪಿಯಾದ ಪರಮ ಪ್ರೇಮದ ತತ್ವ ಏನೇನು ಮಾಡಬಲ್ಲದು ಎಂಬುದನ್ನೆ ಸ್ಫೂರ್ತಿಯಿಂದ ತುಂಬಿ ತುಳುಕಾಡುತ್ತ ಕವಿ ವರ್ಣಿಸುವನು.

ಶ್ರೀಕೃಷ್ಣನ ವ್ಯಕ್ತಿತ್ವದಲ್ಲಿ ಸಖ್ಯ, ವಾತ್ಸಲ್ಯ, ಮಧುರ ಎಂಬುವು ಉದಾಹರಿತ ವಾಗಿವೆ. ಕೃಷ್ಣನ ವ್ಯಕ್ತಿತ್ವದಲ್ಲಿ ಬರುವ ವಿಧವಿಧವಾದ ಪ್ರೇಮದ ಭಾವವನ್ನು, ಕವಿ ಎಷ್ಟು ಮನೋಹರವಾಗಿ ಬಣ್ಣಿಸುವನು. ಬೃಂದಾವನದ ಗೋಪಾಲರು ಕೃಷ್ಣನೊಂದಿಗೆ ಆಡಿದ ಹಲವು ಸಖ್ಯ ಭಾವದ ಉದಾಹರಣೆಗಳಿವೆ. ಹಸು ಮತ್ತು ಕರುಗಳು ಕೂಡ ಶ್ರೀಕೃಷ್ಣನಿಂದ ಆಕರ್ಷಿತವಾಗಿ ಹೋಗಿದ್ದವು. ಕೃಷ್ಣನ ಉನ್ಮತ್ತ ಕೊಳಲಿನ ಗಾನವನ್ನು ಕೇಳದಲ್ಲದೆ, ಅವು ಮೇಯುತ್ತಿರಲಿಲ್ಲ, ಕುಡಿಯುತ್ತಿರಲಿಲ್ಲ. ಅವನ ಮಂದಹಾಸ, ಅವನ ಸ್ಪರ್ಶ, ತಮಾಷೆ, ಅವನ ಕೊಳಲಿನಿಂದ ಬರುವ ಅಮರಗಾನ ಇವುಗಳೆಲ್ಲ ಬೃಂದಾವನದಲ್ಲಿ ರುವ ಸ್ನೇಹಿತರು, ಅಲ್ಲಿರುವ ಮೃಗ ಪಕ್ಷಿ ಎಲ್ಲವನ್ನು ಮಧುರ ಮನೋಹರವನ್ನಾಗಿ ಮಾಡಿವೆ.

ಸಾಕುತಾಯಿಯಾದ ಯಶೋದಳಿಗೆ ಗೋಪಾಲನ ಮೇಲಿರುವ ಪ್ರೀತಿ ಎಷ್ಟು

ಮೃದುವಾಗಿದೆ, ಸ್ವಾಭಾವಿಕವಾಗಿದೆ. ಶ್ರೀಕೃಷ್ಣನನ್ನು ಗೋಪಾಲ ಎಂದು ಪ್ರೀತಿಯಿಂದ ಕರೆಯುತ್ತಿದ್ದಳು. ಅವನನ್ನು ಮನೋಹರವಾದ ಮಗುವಿನಂತೆ ಚಿತ್ರಿಸಿರುವಳು. ಅವನದು ಅಸದೃಶ ಸೌಂದರ್ಯ, ನಮ್ಮನ್ನು ಮುಗ್ಧರನ್ನಾಗಿ ಮಾಡುವ ತಮಾಷೆ ಮತ್ತು ತುಂಟ ತನದಿಂದ–ಕೂಡಿರುವನು. ಒಂದು ದೃಶ್ಯದಲ್ಲಿ ಈ ತುಂಟ ಕೃಷ್ಣ ತನ್ನ ತಾಯಿಯ ಅಡಿಗೆಯ ಮನೆಯಿಂದ ಬೆಣ್ಣೆ ಕದಿಯುವನು. ಒಂದು ಸಲ ಒಬ್ಬ ಪಾದ್ರಿ ನಿಮ್ಮ ಕೃಷ್ಣ ಕಳ್ಳ, ಆದರೂ ನೀವು ಅವನನ್ನು ದೇವರೆಂದು ಪ್ರೀತಿಸುತ್ತೀರಲ್ಲ ಎಂದು ಆಕ್ಷೇಪಣೆ ಮಾಡಿದ. ಶ್ರೀಕೃಷ್ಣನ ಆದರ್ಶದಲ್ಲಿರುವ ಪವಿತ್ರತೆ, ಸೌಂದರ್ಯ, ಮುಗ್ಧತೆಯನ್ನೇ ಮೆಚ್ಚಲಾರದ ಧರ್ಮ ಬೋಧಕನಿಗೆ ನಾನು ಮರುಗಬೇಕಾಗಿದೆ. ದೇವರನ್ನು, ಯಾರು, ಕೋಪಾವಿಷ್ಟರಾಗಿ ಹುಬ್ಬು ಗಂಟುಹಾಕಿಕೊಂಡು, ಮನುಷ್ಯಲೋಪದೋಷಗಳ ಪಟ್ಟಿಯಲ್ಲಿ ಮುಳುಗಿ ಹೋಗಿರುವ ಜೀವರನ್ನು ಕಲ್ಪಿಸಿಕೊಳ್ಳುವ ಜನ, ಸುಂದರನಾದ, ಮನೋಹರನಾದ ಶ್ರೀಕೃಷ್ಣನ ಆದರ್ಶವನ್ನು ಹೇಗೆ ಮೆಚ್ಚಬಲ್ಲರು ? ನಮ್ಮ ಹೃದಯವನ್ನು ಅಪಹರಿಸುವ, ಮುದ್ದು ಕೃಷ್ಣನನ್ನು ಗೌರವಿಸುವುದಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತೇವೆ.

ರಾಧಕೃಷ್ಣರ ಪ್ರೇಮದೃಶ್ಯ ಎಲ್ಲಕ್ಕೂ ಕಿರೀಟಪ್ರಾಯವಾಗಿರುವುದು. ನಮ್ಮ ಹೃದಯದ ಅತ್ಯಂತ ಸೂಕ್ಷ್ಮವಾದ ಭಾವನೆಗಳು, ಮೃದು ಮಧುರವಾದ ಭಾವನೆಗಳು ನಮ್ಮ ದೇಹ ಭಾವನೆಯನ್ನು ಮೀರಿ ಅಲ್ಲಿ ಹೋಗುತ್ತವೆ. ಆ ಪರಮ ಪ್ರೀತಿಯ ಎದುರು ನಮ್ಮ ಮರ್ತ್ಯಭಾವನೆಗಳೆಲ್ಲ ನಾಮಾವಶೇಷವಾಗಿ ಹೋಗುವುವು. ಶ್ರೀಕೃಷ್ಣ ಮತ್ತು ಸ್ವರದ್ರೂಪಿಯಾದ ರಾಧೆ ಇವರ ಅತ್ಯಂತ ಸೂಕ್ಷ್ಮ ಆಧ್ಯಾತ್ಮ ಭಾವನೆಯಲ್ಲಿ ಆ ಪ್ರೇಮ ವ್ಯಕ್ತವಾಗುವುದು. ಪ್ರೀತಿ ತನ್ನ ಪರಾಕಾಷ್ಠೆಯನ್ನು ಮುಟ್ಟಿದಾಗ, ಸ್ವಾರ್ಥಶೂನ್ಯವಾದಾಗ, ಪರಮಸತ್ಯಕ್ಕೆ ತೀವ್ರವಾಗಿ ಪಡುವ ವ್ಯಾಕುಲಕ್ಕೆ ಒಂದು ರೂಪನ್ನೆ ಕೊಟ್ಟರೆ ಅದನ್ನು ಬೃಂದಾವನದ ಕಥೆ ಎನ್ನಬಹುದು. ರಾಧ ಪವಿತ್ರೋತ್ತಮಳು. ಇಂದ್ರಿಯ ಸುಖವನ್ನಲ್ಲದೆ ಬೇರೇನೂ ಅರಿಯದ ಸ್ಥೂಲಮನಸ್ಸು ಮತ್ತು ಬುದ್ಧಿಗೆ ಅವಳು ಅಗಮ್ಯಳು. ಶ್ರೀಕೃಷ್ಣನೆಂಬ ಕಥೆಯ ಹಾರದಲ್ಲಿ ಶೋಭಿಸುವ ಶ್ರೇಷ್ಠ ರತ್ನವೇ ಶ್ರೀರಾಧೆ. ಅವಳು ಅಷ್ಟು ಉತ್ಕೃಷ್ಟ, ಅಷ್ಟು ಸೂಕ್ಷ್ಮ, ಪ್ರಾಪಂಚಿಕರ ಉಸಿರನ್ನು ಕೂಡ ಸಹಿಸಲಾರಳು. ಯಾರು ಇಂದ್ರಿಯದಲ್ಲಿ ವಿಹರಿಸುವರೊ ಅವರು ಅತ್ಯಂತ ಸೂಕ್ಷ್ಮವಾದ ಮಧುರಭಾವವನ್ನು ಅರ್ಥ ಮಾಡಿಕೊಳ್ಳಲಾರರು. ಇಂದ್ರಿಯ ಮತ್ತು ವಿಷಯವಸ್ತುವನ್ನು ಮೀರಿದಾಗ, ಅದು ಪ್ರಾರಂಭವಾಗುವುದು.

ಪರಮ ಪ್ರೇಮಕ್ಕೆ ಆದರ್ಶನಾದ ಬೃಂದಾವನದ ಕೃಷ್ಣನಲ್ಲಿ ಪ್ರೀತಿಯ ಮಾನಸಿಕ ಭಾವನೆಗಳೆಲ್ಲ ಅತ್ಯಂತ ಶ್ರೇಷ್ಠವಾಗಿ ಉದಾಹರಿಸಲ್ಪಟ್ಟಿವೆ. ನಮ್ಮ ಭಾವನೆ ಮತ್ತು ಕ್ರಿಯೆಯಲ್ಲಿ ಕೃಷ್ಣ ತತ್ತ್ವವನ್ನು ಮನಗಂಡರೆ ಕೃಷ್ಣವ್ಯಕ್ತಿಯನ್ನು ಯಾರು ಲೆಕ್ಕಿಸುವರು ? ಇಂದಿಗೂ ಭರತ ಖಂಡದ ನರನಾರಿಯರು ಮತ್ತು ಮಕ್ಕಳು ಎಲ್ಲರೂ ಹುತ್ಪೂರ್ವಕವಾಗಿ ಮೆಚ್ಚುವ ಒಂದು ಆದರ್ಶನೆಂದರೆ ಶ್ರೀಕೃಷ್ಣ.

ಶ್ರೀಕೃಷ್ಣ ಇಂದಿಗೂ ತನ್ನ ದಿವ್ಯವಾದ ಕೊಳಲನ್ನು ಊದುತ್ತಿರುವನು. ನಿಮ್ಮ

ಬಾಹ್ಯ ಇಂದ್ರಿಯಗಳನ್ನೆಲ್ಲಾ ಮುಚ್ಚಿ, ಅಂತರ್ಮುಖರಾಗಿ ನಿಮ್ಮ ಹೃದಯದ ಒಳ ಹೊಕ್ಕು ನಿಸ್ವಾರ್ಥ ಪ್ರೀತಿ ಎಂಬ ಆಳವರಿಯದ ಸಾಗರದ ಮೇಲೆ ತೇಲಿದರೆ, ಆ ಗಾನ ವನ್ನು ನೀವು ಆಲಿಸುತ್ತೀರಿ, ನೀವೂ ಅಮರರಾಗುತ್ತೀರಿ.

ಇಂದ್ರಿಯ ತೃಪ್ತಿಗಾಗಿ ಪ್ರೀತಿಯನ್ನು ಯಾವ ವಿಧದಲ್ಲಿ ಉಪಯೋಗಿಸಿದರೂ, ಅದು ಕಾಮ. ಅದು ಜೀವಿಯನ್ನು ಅಧೋಗತಿಗೆ ಒಯ್ಯುವುದು. ಅವನನ್ನು ಬಂಧನಕ್ಕೆ ಒಳಗು ಮಾಡುವುದು. ಅದೇ ಪ್ರೀತಿಯಲ್ಲಿ ಯಾವಾಗ ಸ್ವಾರ್ಥತೆ ಇಲ್ಲವೊ, ಪ್ರತಿಫಲವಾಗಿ ಏನನ್ನೂ ಬಯಸದೋ ಆಗ ಪ್ರೀತಿಸುವವನನ್ನು, ಪ್ರೀತಿಸುವ ವಸ್ತುವಿನಲ್ಲಿ ಮಗ್ನಮಾಡು ವುದು. ಅದೇ ಪ್ರೇಮ. ಅದು ಮನುಷ್ಯನನ್ನು ಎಲ್ಲ ದೈಹಿಕ ಬಂಧನದಿಂದಲೂ ಪಾರು ಮಾಡಿ, ಪ್ರೇಮಿಯನ್ನು ಪ್ರೀತಿಸುವ ವಸ್ತುವಿನಲ್ಲಿ ಎಂದರೆ ಬ್ರಹ್ಮನಲ್ಲಿ ಐಕ್ಯಗೊಳಿಸುವುದು.

ಕೆಲವು ವೇಳೆ ಕೃಷ್ಣ ನಿಜವಾಗಿದ್ದನೋ ಅಥವಾ ಪೌರಾಣಿಕ ವ್ಯಕ್ತಿಯೇ ಎಂದು ಕೇಳುತ್ತಾರೆ. ನಾನು ಅದಕ್ಕೆ ಹೀಗೆ ಉತ್ತರಿಸುತ್ತೇನೆ. ಚಾರಿತ್ರಿಕವಾಗಿ ಅವನು ಹುಟ್ಟಿದ್ದು ಬೋಧಿಸಿದ್ದು ಮುಂತಾದವುಗಳಿಗೆ ದಾಖಲೆ ಇಲ್ಲದೇ ಇದ್ದರೂ, ಕೃಷ್ಣನ ಆದರ್ಶದ ಸಂಬಂಧ ವಾಗಿ ನಮಗೆ ಮಹಾಭಾರತ, ಭಾಗವತ, ಹರಿವಂಶ ಮುಂತಾದ ಪುರಾಣಗಳಲ್ಲಿ ವಿಷಯ ಗಳು ದೊರಕುತ್ತವೆ. ಇಲ್ಲೆಲ್ಲ ಶ್ರೀಕೃಷ್ಣನೆ ನಾಯಕನಾಗಿದ್ದಾನೆ. ಅಲ್ಲಿ ಬರುವ ಬೋಧನೆ ಗಳೆಲ್ಲ ಶ್ರೀಕೃಷ್ಣನ ಆದರ್ಶದ ಬೋಧನೆಗಳನ್ನು ಕೇಂದ್ರವಾಗಿ ಮಾಡಿಕೊಂಡಿವೆ.

ಇಂದಿನ ದಿನ ನಾವು ಇತಿಹಾಸದ ಸಂಶೋಧನೆಗಳಲ್ಲಿ ವ್ಯಕ್ತಿಗಳಿಗೆ ಸಾಕಷ್ಟು ಪ್ರಾಮುಖ್ಯತೆಯನ್ನು ಕೊಡುತ್ತೇವೆಯೇ ಹೊರತು ಆದರ್ಶಗಳಿಗಲ್ಲ. ಇಂತಹ ನಾಯಕರು ಹುಟ್ಟಿದ ಊರು, ತಾರೀಖು ಸಿಕ್ಕಿದರೆ ನಾವು ತೃಪ್ತರಾಗಿ ಹೋಗುತ್ತೇವೆ. ಆದರೆ ನಮ್ಮ ಪುರಾತನ ಇತಿಹಾಸಕಾರರು ಅಂದರೆ ನಮ್ಮ ಮಹಾ ಕಾವ್ಯಗಳನ್ನು ಸಂಗ್ರಹಿಸದವರಿಗೆ, ಆದರ್ಶಗಳು ಮುಂಚೆ ಬಂದವು. ವ್ಯಕ್ತಿಗಳನ್ನು ಆದರ್ಶಕ್ಕೆ ಉದಾಹರಣೆಗಳಂತೆ ಮಾತ್ರ ತೆಗೆದುಕೊಂಡರು. ಆದಕಾರಣವೆ ನಮ್ಮ ಇತಿಹಾಸದಲ್ಲಿ ಬರುವ ವ್ಯಕ್ತಿಗಳು, ಈಗಿನ ಕಾಲದವರಿಗೆ ಪೌರಾಣಿಕ ವ್ಯಕ್ತಿಗಳಂತೆ ಕಾಣುತ್ತಾರೆ. ಆದರೆ ಈ ಪೌರಾಣಿಕ ವ್ಯಕ್ತಿಗಳು ಜನಾಂಗದ ಶೀಲವನ್ನೇ ರೂಪಿಸುವುದರಲ್ಲಿ ಅಷ್ಟು ಪ್ರಾಮುಖ್ಯ ಪಾತ್ರವನ್ನು ಧರಿಸಿವೆ. ಈ ಮಹಾ ವ್ಯಕ್ತಿಗಳಲ್ಲಿ ಬರುವ ಆದರ್ಶಗಳು ಸಾವಿರಾರು ವರುಷಗಳಿಂದ ಕೋಟ್ಯಂತರ ಜನರಲ್ಲಿ ಒಂದು ಸ್ಫೂರ್ತಿಯನ್ನು ಕೊಟ್ಟು ಮಾರ್ಗದರ್ಶನ ಮಾಡುತ್ತಿದ್ದಾರೆ. ಚಾರಿತ್ರಿಕ ವ್ಯಕ್ತಿಗಳಿಗಿಂತ ಇವರು ಹೆಚ್ಚು ಗೌರವಕ್ಕೆ ಪಾತ್ರರಾಗಿದ್ದಾರೆ.

ಈಗ ಭಕ್ತಿಯೋಗದ ಸಾಧನೆಯನ್ನು ಕುರಿತು ಚಿಂತಿಸೋಣ.

ನಾನು ಮುಂಚೆ ಹೇಳಿದ ರಾಗಾನುಗ ಭಕ್ತಿ ಆಸಕ್ತಿಯಿಂದ ಕೂಡಿದೆ. ಇದು ಉದ್ರೇಕದಿಂದ ಕೂಡಿದೆ. ಇಲ್ಲಿ ಅಸಹಿಷ್ಣುತೆ ಇದೆ. ಅಸೂಯೆ ಇದೆ. ಕೋಪವಿದೆ, ಲಂಗು ಲಗಾಮಿಲ್ಲದೆ ಹರಿಯುತ್ತಿದೆ. ಇಲ್ಲಿ ಅಹಂಕಾರವಿದೆ, ಇನ್ನೊಬ್ಬರ ಮೇಲೆ ಅಧಿಕಾರ ಚಲಾ ಯಿಸುವುದು, ಹಠಮಾರಿತನ ಇದೆ. (ಮಗು ಬೆಕ್ಕನ್ನು ಮುದ್ದಿಸಬೇಕೆಂದು ಇದೆ. ಬೆಕ್ಕಿಗೆ ಇಷ್ಟವಿದೆಯೋ ಇಲ್ಲವೋ ಅದನ್ನು ಗಮನಿಸುವುದಿಲ್ಲ). ಈ ಸ್ಥಿತಿಯಲ್ಲಿ ಪ್ರೀತಿ ಗೊಂದಲಕ್ಕೆ

ಒಳಗಾಗಿದೆ. ಅದಕ್ಕೆ ತನ್ನ ತೃಪ್ತಿಮಾತ್ರ ಬೇಕು. ಇತರರನ್ನು ಕಂಡರೆ ಅಸೂಯೆ. ದೇವರಿಗೆ ನನ್ನ ಕಂಡರೆ ಪ್ರೀತಿ, ನೀನು ಯಾರು ಎನ್ನುವ ಮನೋಭಾವ. ಆಗ ನಾನು ನನ್ನದು ಎಂದು ತಲೆ ಚಚ್ಚಿಕೊಳ್ಳುತ್ತಿರುವನು. ನಾನು, ನನ್ನದು ಎಂಬುದಕ್ಕೆ ಧಕ್ಕೆ ಬಂದರೆ ತುಂಬಾ ವ್ಯಥೆಯಾಗುವುದು, ಇದು ಅಗ್ನಿ ಪರೀಕ್ಷೆ. ಮಿಶ್ರದಿಂದ ಕೂಡಿರುವ ಚಿನ್ನ ನಿಮ್ಮ ಹತ್ತಿರ ಇದ್ದರೆ, ಮುಂಚೆ ನೀವು ಅದನ್ನು ಶುದ್ಧಮಾಡಲು ಸುತ್ತಿಗೆಯಿಂದ ಹೊಡೆ ಯುತ್ತೀರಿ. ಹೀಗೆ ಹೊಡೆಯುವುದರಿಂದ ಅದರ ಕಶ್ಮಲ ಸ್ವಲ್ಪ ಬಿಟ್ಟುಹೋಗುವುದು.. (ಸ್ವಲ್ಪ ಪೆಟ್ಟು ಬಿದ್ದಮೇಲೆ ಏನೂ ಉಳಿಯದೇ ಇದ್ದರೆ, ಅದು ಬರೀ ಬೆರಕೆ, ಚಿನ್ನವಿರ ಲಿಲ್ಲ, ಪ್ರೀತಿ ಇರಲಿಲ್ಲ, ಬರೀ ಚೌಕಾಶಿ ವ್ಯಾಪಾರ ಇತ್ತು ಎಂದರ್ಥ). ಅನಂತರ ನೀವು ಚಿನ್ನವನ್ನು ತೊಳೆಯುತ್ತೀರಿ. ತೊಳೆಯುತ್ತ, ತೊಳೆಯುತ್ತ ಇದ್ದರೆ, ಅದು ಮತ್ತೂ ಸ್ವಲ್ಪ ಹೆಚ್ಚಾಗಿ ಶುದ್ಧವಾಗುವುದು. ಅನಂತರ ಬೆಂಕಿಯ ಮೇಲೆ ಇಡುವಿರಿ. ಅದಾದ ನಂತರ ಏನಾದರೂ ಉಳಿದರೆ ಅದೇ ಶುದ್ಧ ಚಿನ್ನ, ಪರಮ ಪ್ರೀತಿ, ಅದರ ಕಾಂತಿಯನ್ನು ಯಾವುದೂ ಕೆಡಿಸಲಾರದು. ಅದರಿಂದ ಇನ್ನು ಯಾವ ಬೆರಕೆಯನ್ನು ತೆಗೆಯಬೇಕಾಗಿಲ್ಲ. ಇವುಗಳ ಮೂಲಕ ಶುದ್ಧಿ ಆಗುವವರೆಗೆ ಪ್ರೇಮದ ವಿಷಯವನ್ನು ಮಾತನಾಡಬೇಡಿ.

ರಾಗಾನುರಾಗ ಸ್ಥಿತಿಯಲ್ಲಿ, ಇಷ್ಟದೇವರ ಮೇಲಿಗಿಂತ ತನ್ನಮೇಲೆಯೇ ಆಸಕ್ತಿ. ನಿಮ್ಮ ಪ್ರೀತಿಯ ಗುಣ ಮತ್ತು ಮೊತ್ತ ಎರಡೂ ದೋಷಪೂರಿತವಾಗಿವೆ. ಅವುಗಳನ್ನು ಬದಲಾಯಿಸಬೇಕಾಗಿದೆ. ಅಹಂಕಾರದ ಅಗ್ನಿಯನ್ನು ಕಣ್ಣೀರಿನ ಜಲದಿಂದ ಆರಿಸಬೇಕು. ನಾನು ಎಂಬ ಕ್ರೂರ ಮೃಗವನ್ನು ಪ್ರೀತಿಯ ಪೀಠದ ಮೇಲೆ ಬಲಿಕೊಡು.

ರಾಗಾನುರಾಗ, ವೈಧಿಭಕ್ತಿಗಿಂತ ಸ್ವಾಭಾವಿಕವಾಗಿರುವುದು. ಇಲ್ಲಿ ಮನಸ್ಸಿನ ಕ್ರಿಯೆ ಮತ್ತು ಪ್ರಕ್ರಿಯೆಗಳು ಬೇಕಾದಷ್ಟಿವೆ. ಇಲ್ಲಿ ನಿಮ್ಮ ಅಹಂಕಾರವನ್ನು ಪಳಗಿಸಬೇಕಾಗಿದೆ. ಆದಕಾರಣವೆ ಇದು ಕ್ಲಿಷ್ಟವಾಗಿರುವುದು. ಇಲ್ಲಿ ಬೇಕಾದಷ್ಟು ಗದ್ದಲ ಇದೆ. ನಿಜ ವಾಗಿಯೂ ರಾಗಾನುರಾಗ ಬಹಳ ಕಷ್ಟವಾಗಿರುವುದು. ಇಲ್ಲಿ ನಾನು ಎಂಬುದು ಮುಂಚೆ ವೃದ್ಧಿಯಾಗುವುದು. ಅನಂತರ ಈ ನಾನು ಎಂಬುದನ್ನು ನೀನು ಎಂಬುದರಲ್ಲಿ ಐಕ್ಯಮಾಡ ಬೇಕು. ಆಗ ನಾನು ಎಂಬುದು ತುಂಬಾ ಶುದ್ಧೀಕರಣಕ್ಕೆ ಒಳಗಾಗಬೇಕಾಗಿದೆ.

ಭಕ್ತ ಭಗವಂತನಲ್ಲಿ ಆಸಕ್ತನಾದರೆ, ದೇವರು ಹಿಂದಿಗಿಂತ ಸಣ್ಣದಾಗುವನು. ದೂರದಲ್ಲಿರುವಾಗ ನೀವು ಮುಂಚೆ ಯಾವುದಕ್ಕೆ ಅಂಜಿ, ಭಯ ಭಕ್ತಿಯಿಂದ ಗೌರವಿಸು ತ್ತಿದ್ದಿರೊ ಆ ದೇವರು ನಿಮ್ಮ ಸಮೀಪಕ್ಕೆ ಬರುವನು. ಅವನು ನನಗೆ ಸೇರಿದವನು ಎಂಬ ಭಾವ ಈ ಕಾಲದಲ್ಲಿ ಮುಖ್ಯವಾಗಿ ಕಾಣುವುದು. ದೇವರು ನನಗೆ ಸೇರಿದವನು. ನಾನು ಅವನನ್ನು ರಕ್ಷಿಸಬೇಕಾಗಿದೆ. ನಾನು ಏನು ಹೇಳಿದರೆ ಅವನು ಅದನ್ನು ಮಾಡಬೇಕು. ಇತರ ವಸ್ತುಗಳನ್ನು ಹೇಗೆ ಇಟ್ಟುಕೊಳ್ಳುತ್ತೀರೊ ಹಾಗೆ ದೇವರನ್ನು ನಿಮ್ಮವನನ್ನಾಗಿ ಮಾಡಿಕೊಳ್ಳಬೇಕೆಂದಿರುವಿರಿ. ಈ ಸ್ಥಿತಿಯಲ್ಲಿ ಸೂಕ್ಷ್ಮವಾಗಿ ನಿಮ್ಮಲ್ಲಿರುವುದು, ನಿಮ್ಮ ಆಶೆ ಮತ್ತು ಸಂತೋಷದ ತೃಪ್ತಿ. ಆದರೆ ಪರಮ ಪ್ರೇಮದ ಒಂದು ಲಕ್ಷಣವೇ ಕೊಡು ವುದು ಸ್ವೀಕರಿಸುವುದಲ್ಲ ಎಂಬುದನ್ನು ಮರೆಯುವಿರಿ. ರಾಗಾನುರಾಗ ಸ್ಥಿತಿಯಲ್ಲಿ ಒಬ್ಬ

ಸ್ವಾರ್ಥದೃಷ್ಟಿಯಿಂದ ನೋಡುವನು. ದೇವರನ್ನು ತಗಾದೆ ಮಾಡುವನು. ಅವನು ನನಗೆ ಮಾತ್ರ ಸೇರಿದವನು ಎಂದು ಭಾವಿಸುವನು. ಅಹಂಕಾರವನ್ನು ಇಲ್ಲಿ ಹೆಚ್ಚು ಪೋಷಿಸುವನು. ಭಕ್ತ ತನ್ನ ಅನುಕೂಲಕ್ಕಾಗಿ ದೇವರಿಂದ ಎಲ್ಲವನ್ನೂ ಹೊಂದುವನು. ಹಲವು ವಿಧದಲ್ಲಿ ಅವಿದ್ಯೆ ಇರುವುದು. ಕೀಳು ಅಹಂಕಾರ ಸ್ವಾರ್ಥಕ್ಕೆ ಸಾಧನವಾಗುವುದು. ಇದರಿಂದಲೇ ಅಹಂಕಾರ, ಕೋಪ, ಅಸೂಯೆ ಇವುಗಳೆಲ್ಲವೂ ಬರಬೇಕಾದರೆ. ಇದರಿಂದ ದುಃಖ ಮತ್ತು ವ್ಯಥೆಪಡಬೇಕಾಗುವುದು. ಈ ದುಃಖ ವ್ಯಥೆಯನ್ನು ಅನುಭವಿಸಿದರೆ ಅಹಂಕಾರ ಶುದ್ಧವಾಗಿ, ಪ್ರೇಮ ಬೇರೊಂದು ರೂಪಿನಿಂದ ವ್ಯಕ್ತವಾಗುವುದು.

ಭಕ್ತಿಶಾಸ್ತ್ರಗಳು ಭಕ್ತಿಯಲ್ಲಿ ಐದು ಮೆಟ್ಟಿಲುಗಳನ್ನು ಹೇಳುತ್ತವೆ. ವೈಷ್ಣವಕವಿಗಳು ರಾಧಾಕೃಷ್ಣರ ಪ್ರೇಮದಲ್ಲಿ ಇವನ್ನು ಐದು ಅವಸ್ಥೆಗಳು ಎಂದು ಹೇಳುತ್ತಾರೆ. ಆದರೆ ನಿಮ್ಮ ದೌರ್ಬಲ್ಯವನ್ನು ಇದರಿಂದ ಪೋಷಿಸಬೇಡಿ, ಜೋಪಾನವಾಗಿರಿ. ಇದು ಅವ್ಯಕ್ತವಾದುದು. ಭಾಷೆಯೇನೊ ವ್ಯಕ್ತಿಯನ್ನು ಕುರಿತದ್ದಾಗಿದ್ದರೂ ಶೃಂಗಾರ ಅದರಲ್ಲಿದ್ದರೂ, ಭಾವ ಇದನ್ನು ಮೀರಿರುವುದು. ಭಕ್ತನನ್ನು ಇಲ್ಲಿ ಸ್ತ್ರೀ ಎಂದು ಭಾವಿಸುವರು. ದೇವರನ್ನು ಪುರುಷ ಎನ್ನುವರು. ಭಾಷೆ ಸಾಂಕೇತಿಕವಾಗಿರುವುದು.

ಮೊದಲನೆ ಮೆಟ್ಟಲೆ ಪೂರ್ವರಾಗ. ಅಂದರೆ ಮೊದಲ ಪ್ರೀತಿ. ಈ ಸ್ಥಿತಿಯಲ್ಲಿ ದೇವರ ವಿಷಯವನ್ನು ಕೊಂಡಾಡುವವನನ್ನು ನೀನು ಕೇಳಬೇಕೆನ್ನುವೆ. ಅದನ್ನೆ ಮನಸಿಟ್ಟು ಕೇಳುವಿರಿ. ಅವನನ್ನು ಕುರಿತು ನೀವು ಉತ್ಸಾಹದಿಂದ ಬೇಕಾದಷ್ಟು ಮಾತಾನಾಡುವಿರಿ. ಮನಸಿಟ್ಟು ಕೇಳುವುದನ್ನೇ ಶ್ರವಣ ಎನ್ನುವುದು. ನಿನ್ನ ಆದರ್ಶವನ್ನು ಕುರಿತು ವಿವರಿಸುವಾಗ, ನಿಮ್ಮ ಭಾವನೆ ಹೃತ್ಪೂರ್ವಕವಾಗಿ ವ್ಯಕ್ತವಾದರೆ ಅದು ಕೀರ್ತನ.

ಎರಡನೆಯ ಮೆಟ್ಟಲೆ ಕಲಹ. ಇಲ್ಲಿ ದೇವರೊಂದಿಗೆ ಜಗಳವಾಡುವನು. ಆದರೆ ಪ್ರೀತಿ ಹೋಗುವುದಿಲ್ಲ. ಭಕ್ತನ ನಾನು ಎಂಬುದು ಇಲ್ಲಿ ಪ್ರಮುಖವಾಗುತ್ತಿದೆ. ಇದು ಪ್ರೀತಿಯನ್ನು ವೃದ್ಧಿ ಮಾಡಿ, ಹುಚ್ಚುಹೊಳೆಯನ್ನಾಗಿ ಮಾಡುತ್ತದೆ.

ಅನಂತರ ಬರುವುದೇ ಅಭಿಸಾರ. ಅಂದರೆ ಪ್ರೀತಿಸುವ ವಸ್ತುವಿಗಾಗಿ ಹಿಂದಿನಿಂದ ಬಂದ ಸಂಪ್ರದಾಯಗಳನ್ನು ಅಲ್ಲಗಳೆಯುವುದು. ಪ್ರೀತಿಯ ತೀವ್ರತೆಗಾಗಿ, ಆಚಾರಗಳು, ಸಂಪ್ರದಾಯಗಳು, ಸುತ್ತಮುತ್ತ ಜನ ಏನನ್ನುವರೊ ಎಂಬುದನ್ನು ಗಮನಿಸುವುದೇ ಇಲ್ಲ. ಇಲ್ಲಿ ದೇವರೊಡನೆ ಓಡಿಹೋಗಬೇಕು ಎಂಬ ಭಾವವಿದೆ. ಈ ಪ್ರತಿಭಟಿಸುವ ಶಕ್ತಿ ಹೆಚ್ಚುತ್ತಾ ಹೋಗುವುದು.

ಅನಂತರ ಬರುವುದೇ ಮಾನ. ಇಲ್ಲಿ ಏನೊ ನನಗೆ ಅವಮಾನವಾಗಿದೆ ಎಂಬ ಭಾವ. ಒಂದು ವಿಧವಾದ ತೋರಿಕೆಯ ಉದಾಸೀನತೆ ಇದೆ. ಇದು ಪ್ರೀತಿಯನ್ನು ವೃದ್ಧಿ ಮಾಡುವುದಕ್ಕಾಗಿ ಭಕ್ತ ತನ್ನ ಪ್ರೀತಿಪಾತ್ರನಾದ ದೇವರನ್ನೇ ಉದಾಸೀನವಾಗಿ ನೋಡುವನು. ದೇವರಿಲ್ಲದೆ ಇರಬೇಕೆಂದು ಬಯಸುವನು. ಏಕೆಂದರೆ ಅವನು ಇವನನ್ನು ಸಾಕಷ್ಟು ಪ್ರೀತಿಸಲಿಲ್ಲ. ಅವನು ತನ್ನ ಪ್ರಿಯತಮನನ್ನು ಕಾಡುವುದಕ್ಕೆ ಯತ್ನಿಸುವನು. ಆದರೆ ತನ್ನ ಹೃದಯಾಂತರಾಳದಲ್ಲಿ ಅವನನ್ನು ಪ್ರೀತಿಸುವನು.

ನಾವು ಹುಡುಗರಾಗಿದ್ದಾಗ ತಾಯಿ ಏನನ್ನಾದರೂ ಅಂದರೆ ಮುನಿಸಿಕೊಳ್ಳುತ್ತಿದ್ದೆವು. ನಾನು ಊಟ ಮಾಡುವುದಿಲ್ಲ ಎಂದು ಒಂದು ಕೋಣೆಗೆ ಹೋಗಿ ಬಾಗಿಲನ್ನು ಹಾಕಿಕೊಳ್ಳುತ್ತಿದ್ದೆವು. ಸ್ವಲ್ಪ ಹೊತ್ತಾದ ಮೇಲೆ ತಾಯಿ ಇದನ್ನು ಗಮನಕ್ಕೆ ತೆಗೆದುಕೊಳ್ಳದೇ ಇದ್ದರೆ, ಬಾಗಿಲನ್ನು ಮೆಲ್ಲಗೆ ತೆರೆದು ನನ್ನನ್ನು ಇನ್ನೊಂದು ಸಲ ಊಟಕ್ಕೆ ಕರಿ ಎಂದು ಚೀಟಿ ಅಂಟಿಸುತ್ತಿದ್ದೆವು. ಇದು ತೋರಿಕೆಯ ಕೋಪ. ಮಾನದ ಹಿಂದೆ ಇರುವುದು ಅಹಂಕಾರದ ಪ್ರಾಮುಖ್ಯತೆ. ಪ್ರೀತಿ ನಮ್ಮನ್ನು ಉತ್ತಮ ಗುರಿ ಕಡೆಗೆ ಒಯ್ಯುವುದು. ನಾವು ಪರಿಶುದ್ಧರಾಗಬೇಕಾಗಿದೆ. ಶುದ್ಧೀಕರಣದ ಮೂಲಕ ಹೋದಲ್ಲದೆ, ಪ್ರೇಮ ಉತ್ಕಟವಾಗುವುದಿಲ್ಲ.

ಅನಂತರ ಬರುವುದೆ ವಿರಹ, ಪ್ರಿಯತಮನಿಂದ ಅಗಲಿ ಇರುವುದು. ಇದು ಅತ್ಯಂತ ತೀವ್ರವಾದ ವ್ಯಾಕುಲತೆ. ಪ್ರೀತಿ ಇಲ್ಲಿ ಉತ್ಕಟಾವಸ್ಥೆಗೆ ಬರುವುದು. ಇದು ಪ್ರೀತಿಯನ್ನು ಮತ್ತೂ ಪರಿಶುದ್ಧ ಮಾಡುವುದು. ಉದಾಹರಣೆಗೆ ಕೃಷ್ಣ ಬೃಂದಾವನದಿಂದ ಹೋಗುವುದು.

ರಾಗಾನುಗ ಭಕ್ತಿಯ ಈ ಐದು ಮೆಟ್ಟಲುಗಳು ಮಿಲನಕ್ಕೆ ಒಯ್ಯುವುದು. ಭಕ್ತನ ಆಶೆ ಇಲ್ಲಿ ಸ್ವಲ್ಪ ತೃಪ್ತಿಯಾಗುವುದು. ಇಷ್ಟದ ಸಮೀಪದಲ್ಲಿ ನಾನು ಇದ್ದೇನೆ ಎಂಬ ಭಾವ ಇಲ್ಲಿದೆ. ಇದು ಪೂರ್ಣವಲ್ಲದೆ ಇದ್ದರೂ, ತಾನು ತನ್ನ ಇಷ್ಟದ ಹತ್ತಿರ ಇದ್ದೇನೆ ಎಂಬ ಸಮಾಧಾನ ಇರುವುದು. ಇಲ್ಲಿ ನಾನು ನೀನು ಎರಡು ಕರಗುವುದಕ್ಕೆ ಪ್ರಾರಂಭಿಸುವುದು. ಎಲ್ಲಿ ಮಿಲನ ಇದೆಯೊ ಅಲ್ಲಿ ವಿರಹ ಇರಲೇಬೇಕು. ಆದಕಾರಣ ಈ ಭಾವದಲ್ಲಿ ದೋಷವಿದೆ. ಆದರೂ ಇದು ಶಾಂತವಾದ ಸ್ಥಿತಿ. ಹೃದಯ ತುಂಬಿ ತುಳುಕಾಡುತ್ತಿದೆ.

ರಾಗಾನುಗ ಭಕ್ತಿಯ ಮಾರ್ಗದ ಮೂಲಕ ಹೋಗುತ್ತಿರುವಾಗ ಭಕ್ತ ತನ್ನ ಶ್ರದ್ಧೆಯನ್ನು ಕಾಪಾಡಿಕೊಂಡು ಬರಬೇಕು. ಯಾವಾಗ ಕಷ್ಟಗಳು ಬರುತ್ತವೆಯೊ ಆಗ ಭಕ್ತ ತನ್ನ ಶ್ರದ್ಧೆಯನ್ನು ಹೆಚ್ಚಿಸಿಕೊಳ್ಳಬೇಕು. ಶ್ರದ್ಧೆ ಎಂದರೆ ಆತ್ಮಪ್ರತ್ಯಯ, ನಾನು ಇವುಗಳಿಂದ ಪಾರಾಗುತ್ತೇನೆ ಎಂಬ ಮನೋಭಾವ. ಗುರುವಿನಲ್ಲಿಯೂ ಶ್ರದ್ಧೆ ಇರಬೇಕು ಎಂದು ಇದರ ಅರ್ಥ. ಜೀವನದಲ್ಲಿ ಎಂತಹ ಕಷ್ಟನಷ್ಟಗಳು ಬಂದರೂ ಇಂತಹ ಶ್ರದ್ಧೆ ಇದ್ದರೆ ಆಗ ಪ್ರೇಮ ಬರುವುದು. ಶ್ರದ್ಧೆ ಕಳೆದುಕೊಂಡರೆ ಸರ್ವನಾಶವಾಗುವುದು. ಇಲ್ಲಿ ಬಿಡದೆ ಹೋರಾಡಬೇಕಾಗಿದೆ. ಕ್ರಮೇಣ, ನಿಧಾನವಾಗಿ ಮುಂದುವರಿಯಬೇಕು. ಆಗ ಒಬ್ಬ ಗುರಿಯನ್ನು ಮುಟ್ಟುವುದರಲ್ಲಿ ಸಂದೇಹವಿಲ್ಲ.

ದೇವರು ನಮಗೆ ಪ್ರೀತಿ ಎಂಬ ಶಕ್ತಿಯನ್ನು ಕೊಟ್ಟಿದ್ದಾನೆ. ಇದಕ್ಕೆ ಬೆಲೆ ಏನೂ ಇಲ್ಲ. ಹೇರಳವಾಗಿ ಕೊಟ್ಟಿರುವನು. ಆದರೆ ನಾವು ಅದರಿಂದ ವಿಷವನ್ನು ಮಾಡುತ್ತೇವೆ. ನೀವು ಎಂತಹ ವಾತಾವರಣದಲ್ಲಿದ್ದರೂ ಅನಂತಪ್ರೇಮದಿಂದ ಎಷ್ಟನ್ನು ಬೇಕಾದರೂ ನೀವು ಹೀರಬಹುದು ಎಂಬುದನ್ನು ಲಕ್ಷ್ಯದಲ್ಲಿಡಿ. ನೀವು ಹೀಗೆ ಮಾಡದೆ ಇದ್ದರೆ, ದಿವಾಳಿಗಳಾಗುವಿರಿ. ನರಕದಲ್ಲಿದ್ದರೂ ಪ್ರೀತಿಸಿ, ಕುರೂಪಿನ ಮಧ್ಯ ಸೌಂದರ್ಯವನ್ನು ಸೃಷ್ಟಿ ಮಾಡಿ. ಏನಾದರೂ ಬರಲಿ, ಮಳೆ ಬರಲಿ, ಚಂಡಮಾರುತನೇ ಬರಲಿ, ಮಂಜು ಮುಸುಕಲಿ, ನಾನಂತೂ ದೇವರು ಕೊಟ್ಟ ಪ್ರೀತಿಯನ್ನು ಬಿಡುವುದಿಲ್ಲ ಎಂದು ಹೇಳಿ. ಇಲ್ಲದೇ

ಇದ್ದರೆ, ಸ್ವಲ್ಪ ತಲೆನೋವು ಬಂದರೆ, ಸ್ವಲ್ಪ ಆತಂಕ ಬಂದರೆ, ಇದರಿಂದ ನಿರಾಶನಾಗಿ ನಿಲ್ಲುವೆ. ಇದು ಸೋಮಾರಿತನ. ಇಲ್ಲಿ ಪ್ರೀತಿಯಿಲ್ಲ. ಸೋಮಾರಿತನದಿಂದ ಪಾರಾಗಿ. ಎಷ್ಟೇ ಆತಂಕ ಬರಲಿ ಎಲ್ಲವನ್ನೂ ಎದುರಿಸಿ. ಇನ್ನೆಷ್ಟು ಆತಂಕಗಳು ಬೇಕಾದರೂ ಬರಲಿ ಎದುರಿಸುತ್ತೇನೆ ಎನ್ನಿ.

ಪ್ರೇಮಭಕ್ತಿಯನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ, ಇದುವರೆಗೆ ಹೇಳಿರುವುದನ್ನು ಸ್ವಲ್ಪ ಗಮನಕ್ಕೆ ತರೋಣ. ವೈಧಿಭಕ್ತಿಯ, ನಿಯಮಗಳನ್ನೇ ಸಂಪೂರ್ಣವಾಗಿ ಅನುಷ್ಠಾನಮಾಡಿದರೆ ಪೂರ್ಣತೆಯನ್ನು ಮುಟ್ಟಬಹುದು. ಪ್ರಾರಂಭದಲ್ಲಿ ಪ್ರತಿಯೊಂದು ಪ್ರೇಮಭಾವವೂ ನಮ್ಮಲ್ಲಿ ಚೆನ್ನಾಗಿ ವೃದ್ಧಿ ಆಗಿರುವುದಿಲ್ಲ. ಮನುಷ್ಯನ ಮುಂದೆ ನಾಲ್ಕೈದು ವಸ್ತುಗಳನ್ನು ಇಟ್ಟರೆ, ಅವನು ಒಂದೊ, ಎರಡೊ ತನಗೆ ಬೇಕಾದುದನ್ನು ಆರಿಸಿಕೊಳ್ಳು ವನು. ಇದು ಮನುಷ್ಯನ ಸ್ವಭಾವ. ವೈಧೀ ಭಕ್ತಿಯಲ್ಲಿ ಬರುವ ಆರು ಭಾವಗಳನ್ನು ಒಬ್ಬ ಅಭ್ಯಾಸ ಮಾಡಿದರೂ, ಅವುಗಳಲ್ಲಿ ಯಾವುದೊ ಒಂದೊ ಎರಡರ ಮೇಲೆ ಅವನ ಹೆಚ್ಚಿನ ಒಲವು. ಒಬ್ಬನಲ್ಲಿ ದೀನತೆ ಇರಬಹುದು, ಇನ್ನೊಬ್ಬನಲ್ಲಿ ಸೇವಾ ಮನೋಭಾವ ಇರಬಹುದು, ಮತ್ತೊಬ್ಬನಲ್ಲಿ ಧ್ಯಾನ ಇರಬಹುದು.

ಭಕ್ತ ಒಂದು ಮೆಟ್ಟಲಿಂದ ಮತ್ತೊಂದು ಮೆಟ್ಟಲಿಗೆ ಹೋದಾಗ ಹಿಂದಿನದನ್ನೆಲ್ಲ ಮರೆತುಬಿಡುವನೆ ಎಂದು ನೀವು ಕೇಳಬಹುದು. ಒಬ್ಬ ರಾಗಾನುಗ ಭಕ್ತಿಗೆ ಹೋದರೆ, ವೈಧೀ ಭಕ್ತಿಯಲ್ಲಿ ಹೇಳಿರುವುದನ್ನೆಲ್ಲ ಬಿಡುವನೆ ಎಂದು ಕೇಳಬಹುದು. ಅವನು ಇವುಗಳಿಗೆ ವಿರೋಧವಾಗಿ ಹೋಗುತ್ತಾನೆ ಎಂದು ಹೇಳಲಾಗುವುದಿಲ್ಲ. ಅವನು ಕೆಲವು ವಿಷಯ ಗಳನ್ನು ಸಡಿಲಮಾಡಬಹುದು. ಮತ್ತೆ ಕೆಲವುಗಳ ಮೇಲೆ ಪ್ರಾಮುಖ್ಯತೆ ಹೆಚ್ಚಾಗ ಬಹುದು.

ನಿಮ್ಮ ಭಕ್ತಿ ವೃದ್ಧಿಯಾದಂತೆ, ನಿಮ್ಮ ನಿಷ್ಠೆ ಸೂಕ್ತವಾಗುತ್ತ ಬರುವುದು. ಅಲ್ಲಿ ಸ್ಥೂಲವಾಗಿರುವುದು ಕಡಿಮೆಯಾಗಿ ಸೂಕ್ಷ್ಮವಾದ ದೃಢಸಂಕಲ್ಪವಿರುವುದು. ಪೂಜೆ ಮಾನಸಿಕವಾಗುತ್ತ ಬರುವುದು. ಜಪವನ್ನು ಅವನು ಬೇರೆ ರೀತಿ ಮಾಡಬಹುದು. ಮುಂಚೆ ಎಷ್ಟುಸಲಿ ಜಪ ಮಾಡುವುದು ಎಂದು ಸಂಖ್ಯೆಗೆ ಪ್ರಾಧಾನ್ಯ ಕೊಡುತ್ತಿದ್ದಿರಿ. ಬಹುಶಃ ನೀವು ದಿನಕ್ಕೆ ಇಪ್ಪತ್ತುಸಾವಿರ ವೇಳೆ ಜಪ ಮಾಡುತ್ತಿದ್ದಿರಿ. ಜಪ ಸ್ವಾಭಾವಿಕವಾದ ಮೇಲೆ ಅದರ ಸಂಖ್ಯೆಯನ್ನು ಗಮನಿಸುವುದಿಲ್ಲ. ಅದು ನೀವು ಉಸಿರಾಡುವಂತೆ ಸ್ವಾಭಾವಿಕ ವಾಗುತ್ತ ಬರುವುದು. ನೀವು ಜಪವನ್ನು ಹಲವು ರೀತಿ ಮಾಡುವಿರಿ. ಪೂಜಾಮನೆಯಲ್ಲಿ, ಶಾಲೆಯಲ್ಲಿ, ಆಸ್ಪತ್ರೆಯಲ್ಲಿ, ಎಲ್ಲಿ ಅವಕಾಶವಾದರೆ ಅಲ್ಲಿ ಮಾಡುತ್ತೀರಿ. ಅದು ಯಾವಾ ಗಲೂ ಆಗುತ್ತಿರುವುದು. ಅದನ್ನು ಎಂದಿಗೂ ಮರೆಯುವಂತೆಯೇ ಇಲ್ಲ. ನೀವು ನಿಮ್ಮ ಇಷ್ಟದೇವತೆಯನ್ನು ಚಿಂತನೆ ಮಾಡಿದೊಡನೆ, ಸ್ಮರಣೆ ಮನಸ್ಸಿನಲ್ಲಿ ಪ್ರಾರಂಭವಾಗುವುದು. ಧ್ಯಾನ ತೀವ್ರವಾಗುವುದು. ನಿಮ್ಮ ಹೃದಯಕಮಲದಲ್ಲಿ ನಿಮ್ಮ ಇಷ್ಟದೇವರನ್ನು ಕಾಣುತ್ತೀರಿ.

ದೈನ್ಯತೆಯನ್ನು ವಿಶಾಲವಾದ ದೃಷ್ಟಿಯಿಂದ ಅರ್ಥಮಾಡಿಕೊಳ್ಳಬಹುದು. ನೀವು

ನಿಮ್ಮಲ್ಲಿ ಮತ್ತು ಎಲ್ಲಾ ಕಡೆಯೂ ಪವಿತ್ರತೆಯ ಇರವನ್ನು ಅರಿತಂತೆ, ನಿಮ್ಮ ದೇಹ, ಮನಸ್ಸು, ಅಹಂಕಾರಾದಿಗಳನ್ನು ಭಗವಂತನಿಗೆ ಸೇವಕನಂತೆ ಅರ್ಪಿಸುತ್ತೀರಿ. ಒಬ್ಬನಿಗೆ ತನ್ನ ಇಷ್ಟದೇವರು ಎಲ್ಲಾ ಕಡೆಯೂ ಇರುವನೆಂದು ಅರ್ಥವಾದರೆ, ತಾನು ಭಗವಂತನ ಸೇವಕನೆಂದು ಭಾವಿಸಿದರೆ ಅವನು ದೈನ್ಯತೆಯನ್ನು ತೋರದೆ ಇರಲಾರ.

ಸ್ವೀಕರಿಸುವವರೆಲ್ಲ ಭಗವಂತನ ಆವಿರ್ಭಾವಗಳೆ ಎಂದಾಗ ಕರ್ಮವೆಲ್ಲ ದೇವರಿಗೆ ಮಾಡುವ ಪೂಜೆಯಾಗುವುದು. ಮಾನವಕೋಟಿಯಲ್ಲಿರುವ ಭಗವಂತನಿಗೆ ಸೇವೆ ಎಂಬುದು ದೊಡ್ಡ ಸತ್ಯ. ಇದು ವಿಜ್ಞಾನ ಮತ್ತು ಧರ್ಮಕ್ಕೆ ಸಾಮರಸ್ಯವನ್ನು ತರುವುದು. ಭಕ್ತ ಮುಂದುವರಿದಂತೆ, ಅವನ ಜೀವನದ ಕಾರ್ಯಕ್ಷೇತ್ರದಲ್ಲೆಲ್ಲ ಸೇವಾಭಾವನೆ ಓತಪ್ರೋತವಾಗುವುದು.

ಆತ್ಮಸಮರ್ಪಣೆ ಸ್ವಾಭಾವಿಕವಾಗುವುದು. ಎಲ್ಲಿ ಬೀಳುತ್ತೇನೊ ಎಂದು ದೇವರ ಕೈಯನ್ನು ಹಿಡಿದುಕೊಳ್ಳುವ ಬದಲು, ಅವನು ನಮ್ಮ ಸಮೀಪದಲ್ಲಿರುವುದನ್ನು ನೋಡಿ ಸಂತೋಷಪಡುವನು. ಆಗ ನಮ್ಮ ಸುಖದುಃಖಗಳನ್ನೆಲ್ಲ ಅವನ ಪಾದಪದ್ಮಗಳಿಗೆ ಅರ್ಪಿಸುವೆವು. ಭಕ್ತನಿಗೆ ಆವಶ್ಯಕವಾಗಿರುವುದನ್ನೆಲ್ಲ ಭಗವಂತನೇ ಹೆಗಲಮೇಲೆ ಹೊರುತ್ತಿರುವನು ಎಂಬುದನ್ನು ನಾವು ಅನುಭವಿಸುತ್ತೇವೆ. ನಮ್ಮ ಸಾಧನೆ ಮತ್ತು ಅವುಗಳ ಫಲವನ್ನು ಭಗವಂತನಿಗೆ ಅರ್ಪಿಸುತ್ತೇವೆ. ಎಲ್ಲಾ ಕಡೆಯಲ್ಲೂ ಅವನಿರವನ್ನು ಅನುಭವಿಸುತ್ತ ಬರುತ್ತೇವೆ.

ಭಕ್ತಿಯೋಗದ ಸಾಧನೆ ಹಲವು ಮೆಟ್ಟಲುಗಳ ಮೂಲಕ, ನಿಧಾನವಾಗಿ ನಮ್ಮ ಅರಿವಿಲ್ಲದಂತೆ, ಮುಂದುವರಿಯುವುದು. ಕ್ರಮೇಣ ನಮ್ಮ ಶೀಲ ಪವಿತ್ರವಾಗಿ ಸ್ವಾರ್ಥ ಮತ್ತು ಆಸಕ್ತಿಯಿಂದ ಪಾರಾಗುವುದು. ಒಂದು ಮೆಟ್ಟಲಿಗೂ ಮತ್ತೊಂದು ಮೆಟ್ಟಲಿಗೂ ಸ್ವಲ್ಪ ವ್ಯತ್ಯಾಸವಿದ್ದರೂ, ಹಿಂದೆ ಯಾವ ಪ್ರಯೋಜನವನ್ನು ಪಡೆದಿರುವನೊ ಅದನ್ನು ಎಂದಿಗೂ ಮರೆಯುವುದಿಲ್ಲ. ಮೊದಲನೆ ಸ್ಥಿತಿಯ ನಿಯಮಾವಳಿಗಳು ಒಬ್ಬನ ಶೀಲದಲ್ಲಿ ವ್ಯಕ್ತವಾಗುವುದು, ಅವನ ವ್ಯಕ್ತಿತ್ವದ ಒಂದು ಭಾಗವಾಗುವುದು. ಯೋಗದಲ್ಲಿ ಬರುವ ಪೂರ್ವಸಿದ್ಧತೆಗಳೆಲ್ಲ ತಳಪಾಯದಂತೆ. ಅದರ ಮೇಲೆಯೇ ಅಧ್ಯಾತ್ಮಿಕ ಅನುಭವ ಸ್ಥಾಪಿತವಾಗಿರುವುದು. ನಾವು ಅಧ್ಯಾತ್ಮಿಕ ವೀರನನ್ನು ಮೆಚ್ಚುತ್ತೇವೆ. ಅನೇಕವೇಳೆ ನಮಗೆ ವಿಸ್ಮಯವಾಗಿ ಅವರನ್ನು ಗೌರವದಿಂದ ನೋಡುವೆವು. ಆದರೆ ಅವರು ಅವಿರತವಾಗಿ ಕಷ್ಟಪಟ್ಟು ಸಾಧನೆಮಾಡಿ ಇದನ್ನೆಲ್ಲ ಪಡೆದರು ಎಂಬುದನ್ನು ಮರೆಯುವೆವು. ಅವರು ಅಗ್ನಿಪರೀಕ್ಷೆ ಮೂಲಕ ಸಾಗಿಬಂದರು.

೩

ವೈಧಿ ಅಥವಾ ರಾಗಾನುಗ ಭಕ್ತಿಯಲ್ಲಿ ಪರಮಶಾಂತಿಯಿಲ್ಲ. ಎಲ್ಲಿಯವರೆಗೆ ನಾವು ನಮ್ಮ ವ್ಯಕ್ತಿತ್ವಕ್ಕೆ ಅಂಟಿಕೊಂಡಿರುವೆವೊ ಅಲ್ಲಿಯವರೆಗೆ ದ್ವಂದ್ವಗಳಾದ ಸುಖದುಃಖಗಳನ್ನು ಅನುಭವಿಸುತ್ತಿರಬೇಕಾಗುವುದು. ಇವೆರಡೂ ಒಂದೇ ನಾಣ್ಯದ ಎರಡು ಭಾಗ.

ಭಕ್ತಿಮಾರ್ಗದಲ್ಲಿ ನಮ್ಮಲ್ಲಿರುವ ಅಹಂಕಾರದಿಂದಲೇ ನಾವು ವ್ಯಥೆಯನ್ನು ಪಡಬೇಕಾಗಿರುವುದು. ಈ ದೋಷಪೂರಿತವಾದ ಅಹಂಕಾರದ ದೆಶೆಯಿಂದ ದಾರಿಯಲ್ಲಿ ಕೆಲವು ಆತಂಕಗಳು ಮತ್ತು ಅಪಾಯಗಳು ಬರುತ್ತವೆ. ಇವುಗಳನ್ನೇ ಇಲ್ಲಿ ಚರ್ಚಿಸುವುದು. ಭಾವನೆ ಎಂಬುದು ಜೀವಾಣುವಿನಂತೆ. ಅದರ ವಿಧವಿಧವಾದ ಹಂತದ ಬೆಳವಣಿಗೆಗೆ ಸರಿಯಾದ ಸ್ಥಿತಿಯನ್ನು ನಾವು ಒದಗಿಸದೇ ಇದ್ದರೆ ಅದು ಅಧೋಗತಿಗೆ ಬರುವುದು. ಕೆಲವು ವೇಳೆ ಅದಕ್ಕೆ ಸರಿಯಾಗಿ ಮಾರ್ಗವನ್ನು ತೋರಿದರೂ, ಪ್ರೀತಿಯನ್ನು ಸರಿಯಾಗಿ ನಿಗ್ರಹಿಸದೆ ಇದ್ದರೆ ಕ್ಷೀಣದೆಶೆಗೆ ಬರುವುದು. ಭಕ್ತಿಯಿಂದ ಪ್ರೀತಿ ಅವಿಭಾಜ್ಯವಾಗುವುದು. ದೇವರಿಗಾಗಿ ಒಂದು ಉದ್ರೇಕವನ್ನು ರೂಢಿಸುವುದು. ಕೆಲವು ಆಚಾರಗಳಿಂದ ಮತ್ತು ಕೆಲವು ಅಭ್ಯಾಸಗಳಿಂದ ಮತ್ತೂ ಉದ್ರೇಕಗೊಳ್ಳುವುದು. ಈ ಪ್ರೀತಿ ಎಂಬ ಅದ್ಭುತಶಕ್ತಿಯನ್ನು ಸರಿಯಾಗಿ ನಿಗ್ರಹಿಸದೆ, ಅದನ್ನು ಒಂದು ಸರಹದ್ದಿನಲ್ಲಿ ಇಡದೆ ಇದ್ದರೆ, ಅದರಿಂದ ಸಹಾಯವಾಗುವ ಬದಲು ಕೇಡೇ ಆಗುವುದು. ಎಲ್ಲೋ ಈ ಶಕ್ತಿಯಲ್ಲಿ ಸ್ವಲ್ಪವನ್ನು ಮಾತ್ರ ನಿಗ್ರಹಿಸುವುದು, ಕೊನೆಯತನಕ ಹೋಗಗೊಡದೆ ಇರುವುದು ಅಪಾಯಕಾರಿ. ಒಂದು ನಿಗ್ರಹ ಮತ್ತು ಮಿತಿಗೊಳಗಾಗಿ ಭಕ್ತಿಯೋಗದ ಸಾಧನೆಯನ್ನು ಮಾಡಬೇಕು. ಈ ಅದ್ಭುತಶಕ್ತಿಯನ್ನು ನಾವು ಸರಿಯಾಗಿ ನಿಗ್ರಹಿಸದೆ ಇದ್ದರೆ, ಇದು ನಮ್ಮನ್ನು ತಪ್ಪುದಾರಿಗೆ ಎಳೆದು ಹಲವು ವಿಕಾರಗಳಿಗೆ ಒಳಗುಮಾಡುವುದು.

ಅನಂತವಾದ ಪರಿಪೂರ್ಣತೆ ನಮ್ಮ ಸ್ವಭಾವದಲ್ಲಿರುವುದರಿಂದ, ನಮಗೆ ಈಗಿರುವ ಸ್ಥಿತಿಯಲ್ಲಿ ತೃಪ್ತಿ ಇಲ್ಲ. ನಮಗೆ ಗೊತ್ತಿರುವ ಏಕಮಾತ್ರ ಪ್ರಪಂಚವಾದ ಬಾಹ್ಯ ಜಗತ್ತಿನಲ್ಲಿ ತೃಪ್ತಿಗಾಗಿ ತವಕಪಡುವೆವು. ಇದು ಲೈಂಗಿಕ ಆಸಕ್ತಿಯಂತೆ ವ್ಯಕ್ತಪಡುವುದು. ಮೂಲತಃ ನಮ್ಮಲ್ಲಿರುವ ಸ್ವಭಾವಗಳೆಲ್ಲಾ ಧಾರ್ಮಿಕ ಭಾವನೆಗಳೇ ಆಗಿವೆ. ಆದರೆ ಆಧ್ಯಾತ್ಮ ಪುರೋಭಿವೃದ್ಧಿಯ ಹಾದಿಯಲ್ಲಿ ಲೈಂಗಿಕ ಆಸಕ್ತಿ ದೊಡ್ಡ ಆತಂಕ. ಇದು ಅವನನ್ನು ವಿಷಯ ಪ್ರಪಂಚಕ್ಕೆ ಕಟ್ಟಿಹಾಕುವುದು.

ಭಗವಂತನ ಮೇಲೆ ಪ್ರೀತಿ ನಮ್ಮಲ್ಲಿದ್ದರೆ, ಸಾಧಕನ ಭಾವ ವಿಕಾಸಕ್ಕೆ ಸರಿಯಾದ ಮಾರ್ಗವನ್ನು ತೋರುವುದು. ಆದರೆ ಶ್ರೇಷ್ಠವಾದ ಆದರ್ಶವನ್ನು ಜೋಪಾನವಾಗಿ ಪ್ರತಿದಿನವೂ ಚಿಂತಿಸದೆ ಇದ್ದರೆ, ಯಾವುದೋ ವ್ಯಕ್ತಿಗೆ ಮಾರುಹೋಗುತ್ತೇವೆ, ಇಲ್ಲವೆ ವಿಷಯ ಲಂಪಟರಾಗುತ್ತೇವೆ. ವಿಷಯಾಸಕ್ತಿಯ ಜೀವನದಿಂದ ನಾವು ತುಂಬಾ ಜೋಪಾನವಾಗಿರಬೇಕು. ಅಭ್ಯಾಸದಿಂದ ಭಕ್ತನ ಇಂದ್ರಿಯಗಳು ತೀವ್ರವಾಗುವುವು. ಅವನು ವಿಷಯಾಸಕ್ತನಾಗುವ ಅಪಾಯವಿದೆ. ನಿಮ್ಮ ಇಷ್ಟದೇವತೆಯ ಮಂಗಳ ಸ್ವರೂಪ ನಿಮ್ಮ ಮನಸ್ಸಿಂದ ಎಂದಿಗೂ ಮರೆಯಾಗದಿರಲಿ. ಇಂದ್ರಿಯಗಳನ್ನು ಎಂದಿಗೂ ತೃಪ್ತಿಪಡಿಸುವುದಕ್ಕೆ ಆಗುವುದಿಲ್ಲ. ನಿಮ್ಮಲ್ಲಿರುವ ಅಂತರ್ಯಾಮಿಯಕಡೆ ಮನಸ್ಸನ್ನು ಹಾಕಿ.

ಭಕ್ತಿಯನ್ನು ಕೆಲವುವೇಳೆ, ಸಂಗೀತ ಮತ್ತು ನೃತ್ಯದಿಂದ ಉದ್ರೇಕಗೊಳ್ಳುವಂತೆ ಮಾಡಬಹುದು. ಆದರೆ ಯಾರು ಇಂತಹ ಬಾಹ್ಯಸಾಧನಗಳಿಂದ ಪರವಶರಾಗುವರೊ ಅವರು ಪರವಶತೆ ಇಳಿದ ತಕ್ಷಣ ತುಂಬಾ ಕೆಳಮಟ್ಟಕ್ಕೆ ಬರುವರು. ಪಾಶ್ಚಾತ್ಯದೇಶದಲ್ಲಿ

ಇಂತಹ ಪಂಗಡ ನಿಮಗೆಲ್ಲ ಪರಿಚಯ ಇದೆ. Holy Rollers (ಪರವಶತೆಯಿಂದ ಕುಣಿದಾಡುವವರು) ಕುಣಿದಾಡುವುದರಿಂದ ಭಾವೋದ್ರೇಕವನ್ನು ಪಡೆಯುವರು. ಅವರು ಎಷ್ಟು ಬೇಗ ಮೇಲೆ ಹೋದರೊ ಅಷ್ಟುಬೇಗ ಕೆಳಮಟ್ಟಕ್ಕೆ ಬರುವರು. ಇದು ಆಕಾಶಕ್ಕೆ ಏರಿದ ತಾರಾಮಂಡಲದಂತೆ.

ಭರತಖಂಡದಲ್ಲಿ ಕೆಲವು ಭಕ್ತರ ಗುಂಪು ಇತ್ತು. ಅವರು ದೀರ್ಘಕಾಲ ಭಜನೆಯಲ್ಲಿ ಕಳೆದು, ಇನ್ನು ಕೆಲವು ಧಾರ್ಮಿಕ ಆಚಾರಗಳನ್ನು ಮಾಡಿ ಆದಮೇಲೆ ಅತ್ಯಂತ ಹೀನವಾದ ಕಳ್ಳತನ ಮತ್ತು ದರೋಡೆಯಲ್ಲಿ ತೊಡಗುತ್ತಿದ್ದರು. ಧಾರ್ಮಿಕರೆಂದು ಹೇಳಿಕೊಳ್ಳುವ ಅನೇಕರಲ್ಲಿ, ಅಸ್ವಾಭಾವಿಕವಾಗಿರುವ ಕ್ರೌರ್ಯ, ಹಿಂಸೆ ಮತ್ತು ಇಂದ್ರಿಯ ಲಂಪಟತೆ ಇರುವುದು.

ಶಕ್ತಿಯನ್ನು ಒಂದು ಸೀಸೆಯಲ್ಲಿ ಹಿಡಿದಿಟ್ಟರೆ, ಅದು ವ್ಯಕ್ತಪಡಿಸಲು ಯತ್ನಿಸುವುದು. ಭಕ್ತಿಯೇ ಶಕ್ತಿ, ನಮ್ಮ ಮನಸ್ಸು, ದೇಹಗಳೇ ಬುಡ್ಡಿ. ಒಳಗಿರುವ ಶಕ್ತಿಯನ್ನು ನಿಗ್ರಹಿಸಿ ಕ್ರಿಯಾತ್ಮಕ ಕಾರ್ಯಗಳಲ್ಲಿ ತೊಡಗುವಂತೆ ಮಾಡಬೇಕು. ಯಾವಾಗ ಶಕ್ತಿಯನ್ನು ತಪ್ಪು ಮಾರ್ಗಕ್ಕೆ ತಿರುಗಿಸುತ್ತೇವೆಯೊ ಆಗ ಅದು ಅಧೋಗತಿಗೆ ಒಯ್ಯುವುದು.

ಇಂದ್ರಿಯ ಲಂಪಟತ್ವದಿಂದ ಪಾರಾಗಬೇಕಾದರೆ, ನಿರ್ಮಾಪಕ ಕಲೆ ಮತ್ತು ಮಾನವಸೇವೆಯಲ್ಲಿ ನಿರತರಾಗಬೇಕು. ನಮ್ಮಲ್ಲಿರುವ ಭಾವವನ್ನು ವ್ಯಕ್ತಗೊಳಿಸುವುದಕ್ಕೆ ಕಲಾತ್ಮಕವಾದ ಆವಿರ್ಭಾವ ಒಳ್ಳೆಯ ದಾರಿ. ಮಧ್ಯಕಾಲದ ಸಾಧುಗಳು ತಮ್ಮ ಭಾವನೆಯನ್ನು ವ್ಯಕ್ತಗೊಳಿಸುವುದಕ್ಕೆ ಈ ಮಾರ್ಗವನ್ನು ಹಿಡಿಯುತ್ತಿದ್ದರು. ಕೆಲವರಿಗೆ ಸಾಮಾಜಿಕ ಸೇವೆಯೂ ಯೋಗ್ಯವಾದ ದಾರಿಯೆ.

ಭಾವ ಉದ್ರೇಕವಾದಾಗ, ನಮ್ಮಲ್ಲಿರುವ ಬೌದ್ಧಿಕ ಮತ್ತು ಕಲಾತ್ಮಕ ಸ್ವಭಾವಗಳು ತೀವ್ರವಾಗುವುವು. ಅವನ್ನು ನಿಗ್ರಹಿಸುವುದನ್ನು ಕಲಿತುಕೊಳ್ಳಿ. ಭಕ್ತಿಯೋಗದಲ್ಲಿ ಬರುವ ಸಾಧನೆಗಳನ್ನು ಪ್ರತಿದಿನವೂ ಜೋಪಾನದಿಂದ ಮಾಡಿ. ಅನಂತ ಅನಂತವನ್ನು ಸಮೀಪಿಸಿದಾಗ ಶಾಂತಿ ಮತ್ತು ತೃಪ್ತಿ ಬರುವುದು. ನಮ್ಮಲ್ಲಿರುವ ಅಂತರ್ಯಾಮಿಯನ್ನು ನೋಡುವ ಸ್ವಭಾವವನ್ನು ಯಾವಾಗಲೂ ಜಾಗ್ರತವಾಗಿಟ್ಟುಕೊಂಡಿರಬೇಕು.

ನಾವು ದೇಹವನ್ನು ನಿಕೃಷ್ಟವಾಗಿ ಕಾಣಬಾರದು. ಹುರುಳಿಲ್ಲದ ಕೆಲಸದಲ್ಲಿ ತಲ್ಲೀನರಾಗಬಾರದು. ದೇಹ ಒಂದು ಯಂತ್ರ. ನಾವು ಕೆಲಸಮಾಡುವುದಕ್ಕೆ ಯೋಗ್ಯವಾದ ಯಂತ್ರ ಇದೊಂದೇ. ಅದನ್ನು ಯಾವ ದೃಷ್ಟಿಯಿಂದ ನೋಡಬೇಕು, ಅದಕ್ಕೆ ಎಷ್ಟು ಗಮನ ಕೊಡಬೇಕು ಇವುಗಳನ್ನು ಆಲೋಚಿಸಬೇಕಾಗಿದೆ.

ಅತ್ಯಂತ ಬೇಗ ಅತ್ಯಂತ ಹೆಚ್ಚನ್ನೂ ನಿರೀಕ್ಷಿಸುವಾಗ, ತನ್ನ ಪ್ರಾಮುಖ್ಯತೆಯನ್ನು ಉತ್ಪ್ರೇಕ್ಷೆಮಾಡುವಾಗ ಬರುವ ಮಾನಸಿಕ ಪ್ರತಿಕ್ರಿಯೆಗಳನ್ನು ಗಮನಿಸಬೇಕು. ಇಂತಹ ಭಕ್ತ ನಿರಾಸೆಯನ್ನು ಎದುರಿಸಬೇಕಾಗುವುದು. ಪ್ರತಿಕ್ರಿಯೆಯ ಫಲವಾಗಿ ತನ್ನ ಇಷ್ಟ ದೇವರ ಮೇಲೆಯೇ ದ್ವೇಷ ಅಸೂಯೆ ಕೋಪ ಮುಂತಾದವುಗಳು ಬರಬಹುದು. ನೀವು ನಾಗರಹಾವಿಗೆ ಶುದ್ಧ ಹಾಲನ್ನು ಕೊಟ್ಟರೂ ಅದು ವಿಷವನ್ನು ಕೊಡುವುದು ಎಂಬ ಗಾದೆ ಇದೆ.

ನಾವೊಂದು ಸ್ಥಿತಿಯನ್ನು ಮುಟ್ಟುವುದು ಸುಲಭ. ಅಲ್ಲೇ ಇರಬೇಕಾದರೆ ಕಷ್ಟ. ಅದನ್ನು ಗೆಲ್ಲುವುದು ಅದನ್ನೇ ಇಟ್ಟುಕೊಳ್ಳುವುದು ಮುಖ್ಯ. ಭಗವತ್ ಪ್ರೇಮದಿಂದ ಒಬ್ಬ ಉನ್ಮತ್ತನಾಗಬೇಕು. ಆದರೆ ಮಾರ್ಗವನ್ನು ಸರಿಯಾಗಿ ನಿಯಂತ್ರಿಸಬೇಕು. ಪ್ರತಿಯೊಂದು ಹಂತದಲ್ಲಿಯೂ ಜೋಪಾನವಾಗಿ ಮುಂದುವರಿಯಬೇಕು. ಆನೆ ಒಂದು ನೀರಿನ ಕೊಳಕ್ಕೆ ಹೋದಾಗ ಎಂತಹ ಆಂದೋಳನ ಅಲ್ಲಿ ಆಗುವುದು. ನಾವು ನಮ್ಮ ಮನಸ್ಸಿನ ಹಳ್ಳವನ್ನು ವಿಶಾಲ ಮಾಡಬೇಕು. ಭಕ್ತಿ ಆನೆಯಂತೆ ಬಂದರೂ, ಮನಸ್ಸಿನಲ್ಲಿ ಯಾವ ಆಂದೋಳನ ಆಗದಂತೆ ನೋಡಿಕೊಳ್ಳಬೇಕು. ಇಂತಹ ಪ್ರತಿಕ್ರಿಯೆಯಿಂದ ಪಾರಾಗಬೇಕಾದರೆ ಎಲ್ಲಾ ತೊಂದರೆಗಳ ಮೂಲಕಾರಣವಾದ ನಮ್ಮ ಅಹಂಕಾರವನ್ನು ಸರಿಯಾದ ಹದ್ದಿನಲ್ಲಿಡಬೇಕು. ಅದಕ್ಕಾಗಿ ಸಾಮಾಜಿಕ ಸೇವೆ, ಕಾಯಕ ಸೇವೆ ಸದಾ ಇಷ್ಟದೇವತೆಯ ಮೇಲೆ ಧ್ಯಾನ ಇವನ್ನು ಮಾಡುತ್ತಿರಬೇಕು.

ಆಧ್ಯಾತ್ಮಿಕ ಜೀವನದಲ್ಲಿ ಹೇಗೆ ಒಬ್ಬ ಭ್ರಷ್ಟನಾಗುತ್ತಾನೆ ಎಂಬುದನ್ನು ವಿವರಿಸುವುದಕ್ಕೆ ಶ್ರೀರಾಮಕೃಷ್ಣರು ಒಂದು ಸುಂದರವಾದ ಉಪಮಾನವನ್ನು ಕೊಟ್ಟರು. ಒಂದು ಸಲಿ ಅವರು ಕಲ್ಕತ್ತೆಯಲ್ಲಿರುವ ವಿಲಿಯಂ ಕೋಟೆ ನೋಡುವುದಕ್ಕೆ ಗಾಡಿಯಲ್ಲಿ ಹೋದಾಗ ತಳ ಮುಟ್ಟುವ ತನಕ ತಾನು ಇಳಿಯುತ್ತಿದ್ದೇನೆ ಎನ್ನಿಸಲಿಲ್ಲ ಏಕೆಂದರೆ ಅದು ಕ್ರಮೇಣ ಜಾರುತ್ತಿತ್ತು. ಆಧ್ಯಾತ್ಮಿಕ ಜೀವನದಲ್ಲಿ ಅವನತಿ ಅಷ್ಟು ನಿಧಾನವಾಗಿ ಆಗುವುದು, ಅದು ನಮಗೆ ಗೊತ್ತೇ ಆಗುವುದಿಲ್ಲ.

ಭಕ್ತಿ ಜೀವನದಲ್ಲಿ ಮತ್ತೆ ಕೆಲವು ಆತಂಕಗಳಿವೆ. ಅವೇ ಅಸಹಿಷ್ಣುತೆ, ಮತಾಂಧತೆ ಮಾನಸಿಕ ದಾಸ್ಯ, ಮೌಢ್ಯತೆ ಮುಂತಾದವುಗಳು. ನಮ್ಮ ಭಾವೋದ್ರೇಕವನ್ನು ತಪ್ಪು ದಾರಿಗೆ ತಿರುಗಿಸಿದಾಗಲೆ ಅತಿ ಉಗ್ರ ಮತಾಂಧರು ಆಗುವುದು. ಈ ಗದ್ದಲದಿಂದ ತುಂಬಿದ ಜಗತ್ತಿನಲ್ಲಿ ಅವರು ಮತ್ತಷ್ಟುಗದ್ದಲವನ್ನು ಮಾಡುವರು. ನಮ್ಮ ಭಾವವನ್ನು ವಿಚಾರ ಮತ್ತು ವಿವೇಕದಿಂದ ನಿಗ್ರಹಿಸಿ, ಅದನ್ನು ಮತ್ತಾವುದಾದರೂ ನಿರ್ಮಾಣ ಕೆಲಸದಲ್ಲಿ ತೊಡಗುವಂತೆ ಮಾಡುವುದೇ ಇದರಿಂದ ಪಾರಾಗುವುದಕ್ಕೆ ಮಾರ್ಗ.

ವಿಚಾರ ಮತ್ತು ತರ್ಕ ಸಹಾಯ ಇಲ್ಲದೇ ಇದ್ದರೆ ಧರ್ಮ ಒಂದು ಉಗ್ರ ಮೂಢಾಚಾರವಾಗುವುದು. ಧರ್ಮ ಎಂದರೆ ವಿಚಾರದ ಕಾಂತಿ ಎದುರಿಗೆ ನಿಲ್ಲದ ಸುಳ್ಳೆ ? ಧರ್ಮ ಅಥವಾ ಭಕ್ತಿಯಲ್ಲಿ ಯಾವ ರಹಸ್ಯವೂ ಇಲ್ಲ. ಇಲ್ಲಿ ಏನಾದರೂ ರಹಸ್ಯವಿದೆ ಎಂದು ಭಾವಿಸಿದರೆ ನಮ್ಮನ್ನು ಬಾಹ್ಯ ಆಚಾರಗಳಿಗೆ, ಮೂಢನಂಬಿಕೆಗೆ ದಾಸರನ್ನಾಗಿ ಮಾಡುವುದು. ಅದರಿಂದ ಧಾರ್ಮಿಕ ಸಂಸ್ಕೃತಿಯಲ್ಲಿ ತರ್ಕ ಮತ್ತು ವಿಚಾರದ ಪಾತ್ರವನ್ನು ಗ್ರಹಿಸಲು ಸಾಧ್ಯವಾಗುವುದಿಲ್ಲ. ಹೇಗೆ ಏತಕ್ಕೆ ಎಂದು ಪ್ರಶ್ನಿಸುವ ಸ್ವಾತಂತ್ರ್ಯವಿರಬೇಕು. ಸುಮ್ಮನೆ ಯಾವುದನ್ನೊ ಕುರಿತು ಚಿಂತಿಸುವುದರಿಂದ ಪಾರಾಗಿ ಮನಸ್ಸನ್ನು ಚಟುವಟಿಕೆಯಲ್ಲಿಟ್ಟಿರಬೇಕಾದರೆ ಒಳ್ಳೆಯ ಸಹವಾಸ ಆವಶ್ಯಕ.

ಒಮ್ಮೆ ಸ್ವಾಮಿ ವಿವೇಕಾನಂದರು ಕಂದಾಚಾರವನ್ನು ನಂಬಿಕೊಂಡಿದ್ದ ಹುಡುಗನಿಗೆ ಧರ್ಮವನ್ನು ಸ್ವಲ್ಪಕಾಲ ಮರೆ, ಗರಡಿಮನೆಗೆ ಹೋಗಿ ಅಂಗಸಾಧನೆ ಮಾಡು ಎಂದರು.

ಆನೆಯನ್ನು ಕೊಂದು ತಿನ್ನು ಎಂದರು. ಮೂಢಾಚಾರಿಗಳಿಗೆ ಯಾವಾಗಲೂ ದುರ್ಬಲವಾದ ದೇಹವಿರುವುದು. ಆರೋಗ್ಯಕರವಾದ ದೇಹವೆಂದರೆ, ಆರೋಗ್ಯಕರವಾದ ಮನಸ್ಸು.

ಧಾರ್ಮಿಕ ಕಂದಾಚಾರಿಗಳು ಯಾವಾಗಲೂ ಮೂಢಭಕ್ತಿಯವರು. ಸ್ವಾಮಿ ವಿವೇಕಾನಂದರು, ಕೆಲವು ಯುವಕರು ಗೀತಾಧ್ಯಯನಕ್ಕಿಂತ ಚಂಡಿನಾಟವನ್ನು ಆಡಿದರೆ ಮೇಲು ಎನ್ನುತ್ತಿದ್ದರು. ಇದರಿಂದ ಅವರ ದೇಹ ಮನಸ್ಸು ಆತ್ಮ ಎಲ್ಲ ದುರ್ಬಲವಾಗಿದೆ ಎಂದರ್ಥ. ಸುಮ್ಮನೆ ಗೀತೆಯನ್ನು ಹೊಗಳಿದರೆ ಏನೂ ಪ್ರಯೋಜನವಿಲ್ಲ. ಆಧ್ಯಾತ್ಮಿಕ ಶಕ್ತಿ ಎಲ್ಲಿದೆ? ಭಕ್ತಿ ಮಾರ್ಗದಲ್ಲಿ ಮತ್ತೆ ಕೆಲವು ಅಪರೂಪವಾದ ಅಪಾಯಗಳು ಇವೆ. ಹಲವು ಭ್ರಾಂತಿಗಳು, ಅಂಜಿಕೆಗಳು, ಮೂಢಾಚಾರಗಳು ಅವೇ ಇವು. ಇವುಗಳನ್ನೆಲ್ಲ ಒಬ್ಬ ಪ್ರವೀಣ ಪರೀಕ್ಷಿಸಬೇಕಾಗಿದೆ. ಪ್ರತಿಯೊಂದಕ್ಕೂ ಬೇರೆ ಬೇರೆ ಚಿಕಿತ್ಸೆಯನ್ನೇ ಮಾಡಬೇಕಾಗಿದೆ. ದೈವವಶಾತ್ ಇಂತಹ ಸಂಗತಿಗಳು ಬಹಳ ಅಪರೂಪ.

ಭಕ್ತಿಯ ಅನಂತರ ಜೀವನದಲ್ಲಿ ಬರುವ ಮತ್ತೊಂದು ಆತಂಕ ಇದೆ. ಭಕ್ತ ಕೆಲವು ವರುಷಗಳ ಸಾಧನೆ ಮಾಡಿದಮೇಲೆ ತೃಪ್ತಿ ಎನ್ನುವ ಆತಂಕ ಬರುವುದು. ಸಂಸ್ಕೃತದಲ್ಲಿ ಇದಕ್ಕೆ ತುಷ್ಟಿ ಎನ್ನುತ್ತಾರೆ. ಕೆಲವು ಅತೀಂದ್ರಿಯ ಬೌದ್ಧಿಕ, ಆಧ್ಯಾತ್ಮಿಕ ಶಕ್ತಿಗಳು ಬರಬಹುದು. ತುಂಬಾ ದರಿದ್ರನಾಗಿ ಹೆಣಗಿದಮೇಲೆ ಇದ್ದಕ್ಕ ಇದ್ದಂತೆ ಐಶ್ವರ್ಯ ಅವನಿಗೆ ಬರಬಹುದು, ಇತರರಿಗೆ ಕಾಣದ ಕೆಲವು ವಸ್ತುಗಳು ಇವನಿಗೆ ಕಾಣಬಹುದು, ಅವನು ದೊಡ್ಡ ಪಂಡಿತನಾಗಬಹುದು, ಸಮಾಜಕ್ಕೆ ನಾಯಕನಾಗಬಹುದು, ಅಧಿಕಾರ ಬರಬಹುದು, ಅಥವಾ ಧ್ಯಾನದಿಂದ ಕೆಲವು ದೃಶ್ಯಗಳನ್ನು ನೋಡಬಹುದು. ಇವೆಲ್ಲ ಆಧ್ಯಾತ್ಮಿಕ ಜೀವನಕ್ಕೆ ಆತಂಕಗಳು. ಇದರಿಂದ ಪಾರಾಗಬೇಕಾದರೆ, ವಿಮರ್ಶನಾ ಶಕ್ತಿ, ಸಾಧುಸಂಗ, ಗುರುವಿನ ಅನುಗ್ರಹ ಇರಬೇಕು.

ಭಕ್ತಿಮಾರ್ಗದಲ್ಲಿ ಬೇಕಾದಷ್ಟು ಅಪಾಯವಿದ್ದರೂ, ಆತಂಕಗಳಿದ್ದರೂ ಪೂರ್ಣತೆಯನ್ನು ಪಡೆಯುವುದಕ್ಕೆ ಇದು ಸ್ವಾಭಾವಿಕವಾದ ಮಾರ್ಗ. ಇಷ್ಟದೇವತೆಯ ಮೇಲೆ ಇಡುವ ಏಕಾಗ್ರವಾದ ಭಕ್ತಿಯಿಂದ ಸಾಧಕ ಗುರಿಯನ್ನು ಮುಟ್ಟಬಹುದು. ಆದರೆ ಅವನಲ್ಲಿ ಋಜುತ್ವ ಇರಬೇಕು, ಸರಳತೆ ಇರಬೇಕು, ನಿಸ್ವಾರ್ಥವಾದ ಭಕ್ತಿ ಇರಬೇಕು.

ಭಕ್ತ ತನ್ನಭಾವದ ಪರಾಕಾಷ್ಠೆಯನ್ನು ಮುಟ್ಟುವುದಕ್ಕೆ ಮುಂದೆ ಸಾಗಿ ಹೋಗಬೇಕಾಗಿರುವ ಮೂರನೆಯ ಹಂತಕ್ಕೆ ಬರುತ್ತೇವೆ. ಇದನ್ನೇ ಪ್ರೇಮಭಕ್ತಿ ಎನ್ನುತ್ತಾರೆ. ಭಕ್ತಿಯೋಗದಲ್ಲಿ ಬರುವ ಶಿಸ್ತು, ದುರಂಹಕಾರಿಯಾದ, ಭಂಡನಾದ ಅಹಂಕಾರವನ್ನು ಕುಗ್ಗಿಸಿ ಅದನ್ನು ಒಂದು ಸಣ್ಣ ಚುಕ್ಕೆಯಂತೆ ಮಾಡುವುದು. ಅಲ್ಲಿ ಪ್ರೇಮ ಇರುವುದು.

ಐಕ್ಯವೇ ಮಿಲನ. ರಾಗಾನುಭಕ್ತಿಯ ಅತ್ಯಂತ ಶ್ರೇಷ್ಠಸ್ಥಿತಿಯಲ್ಲಿಯೂ ಒಂದು ದೋಷವಿದೆ. ಎಲ್ಲಿ ಐಕ್ಯತೆ ಇದೆಯೊ ಅಲ್ಲಿ ಅಗಲಿಕೆಯೂ ಇರಬೇಕು. ಪ್ರೇಮ ಅತ್ಯಂತ ಪರಿಶುದ್ಧಾವಸ್ಥೆಯನ್ನು ಮುಟ್ಟಬೇಕು, ಇಲ್ಲದೆ ಇದ್ದರೆ ಶಾಂತಿ ಶಾಶ್ವತವಾಗಿರಲಾರದು. ಸ್ವಾರ್ಥ ತ್ಯಾಗದಿಂದ ಪ್ರೇಮ ಪರಿಶುದ್ಧವಾಗುವುದು. ವೈಧಿ ಮತ್ತು ರಾಗಾನುಕದಲ್ಲಿರುವ ನಾನು ಎಂಬುದನ್ನು ನಿನಗೆ ಎನ್ನುವುದಕ್ಕೆ ಬಲಿಕೊಡಬೇಕು. ಪ್ರೇಮದಲ್ಲಿ ಎಲ್ಲಾ ನೀನು.

ನೀನೊಂದೇ ಇರುವುದು. ರಾಗಾನುಕದಲ್ಲಿ ದೇವರು ನಮಗೆ ಉತ್ತರಿಸದಾಗ ಅವನ ಮೇಲೆ ಕೋಪವಿತ್ತು. ಆದರೂ ದೇವರೆ ದೇವರೆ ಎಂದು ನಾವು ಕರೆಯುತ್ತಿರುವ ಧ್ವನಿಯನ್ನು ಕೇಳಿ ನಮಗೆ ತೃಪ್ತಿಯಾಗುತ್ತಿತ್ತು.

ರಾಗಾನುಕ ಎಂಬ ಹುಚ್ಚುಹೊಳೆ ನಿಂತಾದ ಮೇಲೆ ಪ್ರೇಮ ಬರುವುದು. ಆ ಸ್ಥಿತಿಯಲ್ಲಿ ನಾನಲ್ಲ, ನೀನು ಎನ್ನುವುದು. ಇದು ಪರಿಶುದ್ಧವಾದ ಅಹೇತುಕ ಪ್ರೀತಿ, ಏನನ್ನು ಕೇಳದ ಪ್ರೀತಿ. ತನ್ನಲ್ಲಿರುವುದನ್ನೆಲ್ಲ ಕೊಡುವುದು, ಮತ್ತೇನನ್ನೂ ಆಶಿಸುವುದಿಲ್ಲ. ಫಲಾಪೇಕ್ಷೆಯಿಲ್ಲದ ಪ್ರೀತಿ ಇದು. ಆ ಸ್ಥಿತಿಯಲ್ಲಿ ದೇವರನ್ನು ಏನನ್ನೂ ಪಡೆಯಬೇಕೆಂಬ ಆಸೆ ಇಲ್ಲದೆ ಪ್ರೇಮ ಭಗವಂತನ ಕಡೆ ಹರಿಯುತ್ತಿರುವುದು. ಪ್ರೀತಿ ಅಹೇತುಕವಾಗಿ ಹರಿಯುವುದು. ಒಂದು ವಸ್ತು ಸುಂದರವಾಗಿರುವುದರಿಂದ ಪ್ರೀತಿಸುವುದು. ಇದನ್ನೇ ಪ್ರೇಮ ಎನ್ನುವುದು. ನಾವು ಪ್ರೀತಿಸುವ ವಸ್ತುವಿನಲ್ಲಿ, ಯಾವುದೊ ಗುಣವನ್ನು ಕಂಡು ಪ್ರೀತಿಸುತ್ತಿದ್ದರೆ, ಅದು ಶಾಶ್ವತವಾಗಿರಲಾರದು. ಅದು ಬದಲಾಯಿಸುವುದು, ಕ್ಷೀಣಿಸುವುದು, ನಾಶವಾಗುವುದು.

ಅಹೇತುಕ ಪ್ರೀತಿಯನ್ನು ನಾವು ವೃದ್ಧಿಗೊಳಿಸಿಕೊಳ್ಳಬೇಕು. ನಮ್ಮ ಪ್ರೀತಿ ಅಷ್ಟು ಪರಿಪಕ್ವವಾಗಿರಬೇಕು, ಅದು ಯಾವ ಕಾರಣವೂ ಇಲ್ಲದೆ ಹರಿಯುತ್ತಿರುವುದು. ಎಂತಹ ಸ್ಥಿತಿಯಲ್ಲಿಯೂ ಅದು ಬದಲಾಯಿಸುವುದಿಲ್ಲ. ಯಾವಾಗಲೂ ಕೊಡುವುದು, ಎಂದಿಗೂ ಸ್ವೀಕರಿಸುವುದಿಲ್ಲ. ಅಂತಹ ಸ್ಥಿತಿಯನ್ನು ಮುಟ್ಟುವವರೆಗೆ ನಮ್ಮ ಪ್ರೀತಿ ನಿಜವಾದ ಪ್ರೀತಿಯಲ್ಲ.

ವೈಧಿ ಮತ್ತು ರಾಗಾನುಗವನ್ನು ದಾಟಿದ ಮೇಲೆ ಪ್ರೇಮ ಬರುವುದು. ಅದು ಪರಿಶುದ್ಧವಾದ ಚಿನ್ನದಂತೆ ಹಿಂದಿನ ಎರಡು ಸ್ಥಿತಿಯಲ್ಲಿ ಅದರಲ್ಲಿದ್ದ ದೋಷವೆಲ್ಲ ನಿವಾರಣೆಯಾಗಿದೆ. ಇದೇ ಪ್ರೇಮದ ಸ್ಥಿತಿ. ಪ್ರೀತಿಗೋಸುಗವಾಗಿ ಪ್ರೀತಿ. ಸ್ವೀಕರಿಸುವುದಕ್ಕೆ ಆಸೆಯಿಲ್ಲ. ಪ್ರೇಮದಲ್ಲಿ ನಾನೆಂಬ ಅಹಂಕಾರದ ದೋಷವೆಲ್ಲ ಪಾರಾಗಿದೆ. ನಾನು ಎಂಬುದು ನೀನು ಎಂಬುದರಲ್ಲಿ ಸಂಪೂರ್ಣವಾಗಿ ಲಯವಾಗಿದೆ. ಯಾವಾಗ ನಾನು ಎಂಬುದನ್ನು ತ್ಯಜಿಸುತ್ತಾನೆಯೋ, ಆಗ ಭಕ್ತ ಭಗವಂತನಲ್ಲಿ ಐಕ್ಯವಾಗುತ್ತಾನೆ.

ಪರ್ಶಿಯಾ ದೇಶದ ಕವಿಯೊಬ್ಬ ತನ್ನ ಪ್ರಿಯತಮಳನ್ನು ನೋಡುವುದಕ್ಕೆ ಬಂದ ಪ್ರೇಮಿಯ ಕಥೆಯನ್ನು ಹೇಳುವನು. ಪ್ರೇಮಿ ಬಾಗಿಲನ್ನು ತಟ್ಟುತ್ತಾನೆ. ಪ್ರಿಯಳು ನೀನಾರು ಎಂದು ಕೇಳುತ್ತಾಳೆ. ಆಗ 'ನಾನು' ಎನ್ನುವ ಧ್ವನಿ ಬರುವುದು. ಬಾಗಿಲು ತೆಗೆಯಲಿಲ್ಲ, ಪುನಃ ಅವನು ಬಾಗಿಲನ್ನು ತಟ್ಟುತ್ತಾನೆ. ಯಾರು ಎಂದು ಅವಳು ಕೇಳುತ್ತಾಳೆ. 'ನಾನು ನಿನ್ನ ಪ್ರೀತಿ ಪಾತ್ರ' ಎನ್ನುತ್ತಾನೆ. ಆದರೂ ಬಾಗಿಲು ತೆಗೆಯಲಿಲ್ಲ. ಮೂರನೆ ಸಲ ಪ್ರೇಮಿ ಬಾಗಿಲನ್ನು ತಟ್ಟುತ್ತಾನೆ. ಆಗ ತನ್ನನ್ನೇ ತಾನು ಮರೆತು 'ಪ್ರಿಯಳೇ, ನೀನೇ' ಎನ್ನುತ್ತಾನೆ. ಆಗ ಬಾಗಿಲು ತೆಗೆಯುವುದು. ಇದೇ ಪ್ರೇಮದ ದೃಷ್ಟಿ.

ಶ್ರೀರಾಮಕೃಷ್ಣರು ಯಾವಾಗಲೂ ಹಂ ಹಂ (ಎಂದರೆ ನಾನು) ಎಂದು ಅರಚಿಕೊಳ್ಳುವ ಹಸುವಿನ ಕತೆಯನ್ನು ಹೇಳುತ್ತಾರೆ. ಅದು ಹಾಗೆ ಹೇಳುತ್ತಿದ್ದುದರಿಂದಲೇ

ಅಷ್ಟೊಂದು ದುಃಖಕ್ಕೆ ಈಡಾಯಿತು. ಹಗಲು ರಾತ್ರಿ ನೆಲ ಉಳಬೇಕಾಯಿತು. ಮುದಿಯಾದ ಮೇಲೆ ಕಟುಕರು ಅದನ್ನು ತೆಗೆದುಕೊಂಡು ಹೋಗಿ ಕೊಲ್ಲುತ್ತಾರೆ. ಅದರ ಚರ್ಮದಿಂದ ನಗಾರಿಯನ್ನು ಮಾಡಿ ನಿರ್ದಾಕ್ಷಿಣ್ಯವಾಗಿ ಅದನ್ನು ಬಡೆಯುತ್ತಾರೆ. ಅದರಿಂದ ಮೆಟ್ಟನ್ನು ಮಾಡಿ ನೆಲದಮೇಲೆ ತುಳಿಯುತ್ತಾರೆ. ಅದರ ಕರುಳಿನಿಂದ ಹುರಿಯನ್ನು ಮಾಡಿ ಹತ್ತಿ ಎಕ್ಕುವವನು ತನ್ನ ಬಿಲ್ಲಿಗೆ ಅದನ್ನು ಕಟ್ಟಿ ಹೊಡೆದಾಗ ಮಾತ್ರ ಅದು ತುಹು, ತುಹು ಎನ್ನುವುದು. ಹಂ ಹಂ ಎಂದು ಹೇಳಿ ಅಷ್ಟು ಪಾಡು ಪಟ್ಟಮೇಲೆ ಕೊನೆಗೆ ತುಹು ಎನ್ನುವುದು.

ಪ್ರೇಮಭಕ್ತಿಯ ವೈಶಿಷ್ಟ್ಯವೇ ಇದು :

ಪ್ರೀತಿಸುವ ವ್ಯಕ್ತಿಗಾಗಿ ತನ್ನ ಅಹಂಕಾರವನ್ನು ಸಂಪೂರ್ಣವಾಗಿ ಅರ್ಪಣೆ ಮಾಡುವುದು. ಅವನಿಂದ ಏನನ್ನೂ ಇಚ್ಛಿಸಬಾರದು. ತನ್ನ ಆತ್ಮ ತ್ಯಾಗವೇ ಅವನ ಗುರಿಯಾಗಿರಬೇಕು, ಇಂದ್ರಿಯಗಳ ತೃಪ್ತಿಯಲ್ಲ.

ಪ್ರೇಮ ಮಾನಸಿಕವಾದುದು. ಭಕ್ತ ತನ್ನ ಅಂತರ್ಯದಲ್ಲಿ ಆನಂದವನ್ನು ಅನುಭವಿಸುವವನೆ ಹೊರತು ಬಾಹ್ಯದಲ್ಲಿ ಅಲ್ಲ. ಎಲ್ಲಕ್ಕೂ ಯಾವುದೋ ಹೊರಗಡೆಯದು ಕಾರಣ ಎಂದು ಭಾವಿಸುವವನು, ಹೂವನ್ನು ನೋಡಿ ಆನಂದಿಸುವುದು ಹೇಗೆ ಬಾಹ್ಯವೊ ಹಾಗೆಯೇ ತನ್ನ ಸುಖದುಃಖಕ್ಕೆ ಕಾರಣ ಯಾವುದೋ ಹೊರಗಡೆ ಇರುವ ವಸ್ತು ಎಂದು ಭಾವಿಸುವವನು, ಬಾಹ್ಯವಸ್ತುವನ್ನು ಅವಲಂಬಿಸುವನು. ಯಾರು ಪ್ರತಿಯೊಂದಕ್ಕೂ ಕಾರಣ ಅಂತರ್ಯದಲ್ಲಿದೆ ಎಂದು ಭಾವಿಸುವನೊ ಅವನು ಆತ್ಮಪ್ರತ್ಯಯವಾದಿ. ಇಂತಹವನು "ನಾನು ನನ್ನ ಆತ್ಮವನ್ನೇ ಪ್ರೀತಿಸುತ್ತೇನೆ. ನನ್ನ ಅಂತರತಮನಾದ ಭಗವಂತನ ಸ್ಪರ್ಶಸುಖವನ್ನು ನಾನು ಏನನ್ನೂ ಪ್ರತಿ ಆಶಿಸುತ್ತ ಪ್ರೀತಿಸುವುದಿಲ್ಲ. ನನಗೆ ಪ್ರೀತಿಸುವುದಕ್ಕೆ ಆಸೆ, ಅದಕ್ಕೇ ಪ್ರೀತಿಸುತ್ತೇನೆ" ಎನ್ನುವನು.

ಪ್ರೇಮವೇ ಆತ್ಮ ವಿಭಜನೆಯಲ್ಲಿ ಕೊನೆಯದು. ತನಗಿಂತ ದೊಡ್ಡದಾದ ಸರ್ವಶಕ್ತವಾದ ಪರಿಪೂರ್ಣವಾದ ಅನ್ವೇಷಣೆ, ನಾನು ನಿನ್ನಲ್ಲಿ ನನ್ನ ಪ್ರತಿಬಿಂಬವನ್ನು ನೋಡುತ್ತೇನೆ, ನಾನು ನಿನ್ನನ್ನು ಪ್ರೀತಿಸುತ್ತೇನೆ ಎಂದು ಭಾವಿಸುತ್ತೇನೆ, ಇದೇನೇ ನಮ್ಮ ನಿಯಮ.

ನೀನು ಯಾವ ವಸ್ತುವನ್ನು ಪ್ರೀತಿಸುತ್ತೇನೆ ಎನ್ನುವೆಯೊ, ಅದು ಕನ್ನಡಿಯಲ್ಲಿ ಕಂಡ ನಿನ್ನ ಪ್ರತಿಬಿಂಬ. ಅದು ನಿನ್ನ ಭಾವವನ್ನು ಮತ್ತು ಆದರ್ಶವನ್ನು ಪ್ರತಿಬಿಂಬಿಸುವುದು. ಇದೇ ನಿನ್ನ ನೈಜವಾದ ಆತ್ಮನ ಸ್ವರೂಪ.

ನೀನು ಇತರರಲ್ಲಿ ನಿನ್ನ ಪ್ರತಿಬಿಂಬವನ್ನು ಕಾಣದೆ ಇದ್ದರೆ, ಮತ್ತೊಂದು ವಸ್ತುವನ್ನಾಗಲಿ ಅಥವಾ ಮತ್ತೊಂದು ವ್ಯಕ್ತಿಯನ್ನಾಗಲಿ ಪ್ರೀತಿಸುವುದಿಲ್ಲ. ಕಲಾವಿದ ತನ್ನ ಪಿಟೀಲನ್ನು ಏತಕ್ಕೆ ಪ್ರೀತಿಸುತ್ತಾನೆ? ತಾನು ಪಿಟೀಲಿನ ಮೇಲೆ ಬಾರಿಸುವಾಗ ಯಾವ ಆದರ್ಶವನ್ನು ಇಟ್ಟುಕೊಂಡಿರುವನೊ ಅದನ್ನು ಪಿಟೀಲು ಪ್ರತಿಬಿಂಬಿಸುವುದರಿಂದ ತನ್ನ ಆಂತರಿಕ ಆದರ್ಶ ಒಂದು ಬಾಹ್ಯನಿಮಿತ್ತದ ಮೂಲಕ ವ್ಯಕ್ತವಾಗುವುದು.

ಆದರೆ ಪ್ರೇಮಗಾನ ಯಾವಾಗಲೂ ಅಂತರ್ಯದಲ್ಲೆ ಇರುವುದು. ಇದನ್ನು ಹೊರಗೆ ಕಾಣುವವನ ಅಥವಾ ಕೇಳುವವನನ್ನು ತೃಪ್ತಿಪಡಿಸುವುದಕ್ಕಾಗಿ ಹಾಡಲಾಗುವುದಿಲ್ಲ.

ಪ್ರೇಮ ಎಂಬುದು ಒಂದು ಆದರ್ಶ. ಈ ಸ್ಥಿತಿಯಲ್ಲಿ ಭಕ್ತ ಭಗವಂತನ ನಿರಂತರ ಸೇವೆಯಲ್ಲಿ ಕಳೆಯುವನು. ತನ್ನ ಪ್ರೇಮೇಶ್ವರನಿಗೆ ಮಾಡುವ ಸೇವೆಯಲ್ಲಿ ಯಾವ ಸ್ಪರ್ಧೆಯೂ ಇಲ್ಲ. ತನಗೂ ದೇವರಿಗೂ ಇರುವ ಸಂಬಂಧದಲ್ಲಿ ಭಕ್ತನಿಗೆ ಅನುಮಾನವೇ ಇಲ್ಲ. ಆದರೂ ಅವನು ಅತಿ ವಿನಯ ಮತ್ತು ದೀನ. ಅವನಿಗೆ ಪ್ರೀತಿಯಲ್ಲೆ ಪರಮಾನಂದ, ಅದಕ್ಕಾಗಿ ಅವನು ಬಾಳುತ್ತಿರುವನು. ಆ ಪರಮ ಪ್ರೇಮವನ್ನೇ ತನ್ನ ಹೃದಯದಲ್ಲಿ ಪೋಷಿಸುತ್ತಿರುವನು. ಅವನು ಮುಟ್ಟಿದ್ದೆಲ್ಲಾ ಇದರಿಂದ ಸುಂದರವಾಗುವುದು. ಅವನು ಮಾನಸಿಕವಾಗಿ ಭಗವಂತನನ್ನು ಆನಂದಿಸುವನು. ಅವನು ಸರ್ವವನ್ನು ಇದರಿಂದ ವ್ಯಾಪಿಸುವನು. ತಾನಿನ್ನೂ ಗುರಿಯನ್ನು ಮುಟ್ಟಿಲ್ಲವೇನೊ ಎಂಬ ಭಾವನೆ ಅವನಲ್ಲಿರುವುದು. ಇದರಿಂದ ಅವನು ಯಾವಾಗಲೂ ಮುಂದುವರಿಯುತ್ತಿರುವನು. ಪ್ರೇಮ ಯಾವ ದೇಶ ಕಾಲ ನಿಮಿತ್ತವನ್ನೂ ಆಶ್ರಯಿಸಿಕೊಂಡಿಲ್ಲ. ಭಕ್ತನಿಗೆ ಏನೇ ಆಗಲಿ ಅವನ ಹೃದಯದಲ್ಲಿ ಯಾವಾಗಲೂ ಆನಂದ ಚಿಮ್ಮುತ್ತಿರುವುದು.

ಪ್ರೇಮದ ಸ್ಥಿತಿಯಲ್ಲಿ ಅದು ವಿಶ್ವವ್ಯಾಪಿಯಾಗುವುದು. ಭಕ್ತ ತನ್ನ ಇಷ್ಟದೇವರನ್ನು ಎಲ್ಲಾ ಸ್ಥಳಗಳಲ್ಲಿ, ಎಲ್ಲಾ ವ್ಯಕ್ತಿಗಳಲ್ಲಿ ನೋಡುವನು. ನಿಮ್ಮ ಆಧ್ಯಾತ್ಮಿಕ ಸಾಧನೆ ಫಲಕಾರಿಯಾದಾಗ, ಮುಂಚೆ ಸಾಕಾರಿಯಾದ ದೇವರು, ನಿಮ್ಮ ಪ್ರೇಮದಲ್ಲಿ ಕರಗಿ. ಪ್ರತಿಯೊಂದು ವಸ್ತುವನ್ನು ವ್ಯಾಪಿಸಿಕೊಳ್ಳುವನು. ನಿನ್ನ ಪ್ರೇಮೇಶ್ವರನನ್ನು ಎಲ್ಲಾ ಸ್ಥಳಗಳಲ್ಲಿ ಮತ್ತು ಎಲ್ಲಾ ವಸ್ತುಗಳಲ್ಲಿ ನೋಡುವೆ. ನೀನು ಬದುಕಿರುವ ಪ್ರತಿಯೊಂದು ಕ್ಷಣವೂ, ಅವನನ್ನು ನೋಡುತ್ತಿರಬಹುದು, ಪ್ರೇಮದ ಸ್ಥಿತಿಯಲ್ಲಿ ನಿನ್ನ ಇಷ್ಟದೇವರು ಪ್ರಪಂಚದ ಎಲ್ಲಾ ವಸ್ತುಗಳಲ್ಲಿಯೂ ಕಾಣುವನು. ಆಗ ಭಕ್ತ ವಿಶ್ವಪ್ರೇಮಿಯಾಗುವನು. ಅತ್ಯಂತ ಶ್ರೇಷ್ಠವಾದ ಪ್ರೇಮಭಕ್ತಿ ಸೂಕ್ಷ್ಮವಾದುದು.

ಭಕ್ತಿಯೋಗದಲ್ಲಿ ಅತ್ಯಂತ ಶ್ರೇಷ್ಠವಾದ ಅವಸ್ಥೆಯೆ ತನ್ನ ಇಷ್ಟದೇವತೆಯಲ್ಲಿ ತಲ್ಲೀನವಾಗುವುದು. ಇದನ್ನೇ ಭಾವಸಮಾಧಿ ಎನ್ನುವರು. ಯಾವುದಾದರೂ ಒಂದು ಭಾವದಲ್ಲಿ ಪೂರ್ಣತೆಯನ್ನು ಪಡೆದು ತದ್ಗತನಾಗುವನು. ಅವನ ಇಷ್ಟದೇವತೆ ಒಂದು ಚಿತ್ರವಾಗಬಹುದು, ಅಥವಾ ವಿಗ್ರಹವಾಗಬಹುದು, ಅದು ಜೀವಂತವಾಗಿ ಸತ್ಯವಾಗುವುದು. ತನ್ನ ಇಷ್ಟದೇವತೆ ಬಾಹ್ಯದಲ್ಲಿಯೂ ಸತ್ಯವಾಗುವನು, ಇಂತಹ ಅವರ್ಣನೀಯ ಸ್ಥಿತಿಗೆ ಭಕ್ತಿ ಮುಟ್ಟಿದಾಗ, ಸಾಂತವಾಗಿರುವ ಇಷ್ಟದೇವತೆ ಅನಂತವಾಗುವುದು, ಸಾಕಾರದಿಂದ ನಿರಾಕಾರವಾಗುವುದು.

ಶಾಂತಭಾವದಲ್ಲಿ ಭಕ್ತ, ತನ್ನ ಇಷ್ಟದೇವತೆ ಸರ್ವವ್ಯಾಪಿಯಾಗಿರುವನು ಎಂಬುದನ್ನು ಅನುಭವಿಸುವನು. ಪ್ರತಿಯೊಂದು ವಸ್ತುವೂ ತನ್ನ ಇಷ್ಟದೇವತೆಯನ್ನೇ ಪ್ರತಿಬಿಂಬಿಸುವುದು. ಎಲ್ಲಾ ಮಾನವಾಕಾರಗಳ ಹಿಂದೆಯೂ ಅವನನ್ನೇ ನೋಡುವನು. ಶ್ರೀರಾಮಕೃಷ್ಣರು, ಶಾಂತಭಾವ ಮತ್ತು ಇತರ ಭಾವಗಳ ಮೂಲಕ ಭಗವಂತನನ್ನು

ಸಾಕ್ಷಾತ್ಕಾರ ಮಾಡಿಕೊಂಡರು. ಅವರು ಕೆಲವು ಕಾಲ ಹೂವನ್ನು ಕೊಯ್ಯುವುದಕ್ಕೆ ಆಗಲಿಲ್ಲ. ಏಕೆಂದರೆ ಅಲ್ಲಿ ಭಗವತ್ ತತ್ತ್ವವೇ ಇತ್ತು. ನೆಲದಮೇಲಿರುವ ಹುಲ್ಲಿನಲ್ಲಿಯೂ ಅದನ್ನು ನೋಡಿದರು. ಹುಲ್ಲಿನಮೇಲೆ ಯಾರಾದರೂ ನಡೆದರೆ ಅದನ್ನು ಸಹಿಸುವುದಕ್ಕೆ ಆಗುತ್ತಿರಲಿಲ್ಲ. ಬೇರೆ ಬೇರೆ ಬಣ್ಣದ ಹೊದಿಕೆಗಳುಳ್ಳ ದಿಂಬಿನಲ್ಲೆಲ್ಲಾ ಒಂದೇ ಹತ್ತಿ ಇರುವಂತೆ, ಎಲ್ಲದರಲ್ಲಿಯೂ ಭಗವಂತನನ್ನೇ ನೋಡಿದರು. ದೇವರು ಸರ್ವವ್ಯಾಪಿ ಎಂದು ಅನುಭವಿಸುವ ಶಾಂತಭಾವವೇ ಇದು.

ದಾಸ್ಯಭಾವದಲ್ಲಿ ಆಕಾರದಿಂದ ಪ್ರಾರಂಭವಾಗಿ ನಿರಾಕಾರಕ್ಕೆ ಹೋಗುವುದು. ಭಕ್ತನ ಇಷ್ಟದೇವರು ಮೊದಲು ಒಂದು ಆಕಾರದಲ್ಲಿ ಕಂಡು, ಕ್ರಮೇಣ ಅವನು ವಿಸ್ತಾರವಾಗಿ ಅನಂತನಾಗುವನು. ಸಾಕಾರ ಮಾಯವಾಗಿ ಸರ್ವವ್ಯಾಪಿಯಾಗುವುದು.

ಮಗು ತನ್ನ ತಂದೆ ತಾಯಿಗಳನ್ನು ನೋಡುವ ತತಾಭಾವವೂ ಆ ಕಾರಣದಿಂದ ಪ್ರಾರಂಭವಾಗಿ, ನಿರಾಕಾರವಾಗುವುದು. ಈ ಭಾವದ ಶ್ರೇಷ್ಠವಾದ ಆವಿರ್ಭಾವನೆಯನ್ನು ಜೀಸಸ್‌ಗೆ ತನ್ನ ತಂದೆಯಮೇಲಿರುವ ಭಕ್ತಿ, ಶ್ರೀರಾಮಕೃಷ್ಣರಿಗೆ ತನ್ನ ತಾಯಿಯಮೇಲಿರುವ ಭಕ್ತಿಯಲ್ಲಿ ಜ್ವಲಂತ ಉದಾಹರಣೆಯನ್ನು ನೋಡುತ್ತೇವೆ. ಶ್ರೀರಾಮಕೃಷ್ಣರು ಜಗನ್ಮಾತೆಯನ್ನು ಒಂದು ಆಕಾರದಲ್ಲಿ ನೋಡಿದರು, ಮತ್ತು ಎಲ್ಲೆಲ್ಲಿಯೂ ನೋಡಿದರು. ಅತ್ಯಂತ ಕೀಳು ದರ್ಜೆಯ ವ್ಯಕ್ತಿಗಳಲ್ಲಿಯೂ ತಮ್ಮ ಇಷ್ಟದೇವಿಯನ್ನೇ ನೋಡಿದರು. ಶ್ರೀರಾಮಕೃಷ್ಣರಿಗೆ ತಮ್ಮ ಇಷ್ಟದೇವತೆ ಮೇಲೆ ಇದ್ದ ಭಕ್ತಿ, ಪ್ರಪಂಚದ ವೈವಿಧ್ಯತೆಯ ಹಿಂದೆಲ್ಲ ಅದನ್ನು ನೋಡುವುದು, ಸರ್ವವ್ಯಾಪಿಯಾದ ತತ್ತ್ವ ಹೇಗೆ ವ್ಯಕ್ತವಾಗಿದೆ ಎಂಬುದನ್ನು ಮಾನವಕೋಟಿಯ ಮುಂದೆ ತೋರಿದ್ದಾರೆ.

ಭಕ್ತ ಸಖ್ಯಭಾವದಲ್ಲಿ ಹೋಗಿ, ತನ್ನ ಇಷ್ಟದೇವರೇ ಎಲ್ಲಾ ಕಡೆಯಲ್ಲಿಯೂ ಸಖನಂತೆ ಇರುವುದನ್ನು ಅನುಭವಿಸುವನು.

ವಾತ್ಸಲ್ಯಭಾವದಲ್ಲಿ ಭಕ್ತ ತನ್ನ ಇಷ್ಟದೇವತೆಗೆ ತಾಯಿ ತಂದೆಯಂತೆ ಮಾತ್ರ ಇರುವುದಲ್ಲ, ಪ್ರಪಂಚಕ್ಕೆ ತಾಯಿ ತಂದೆಯಂತಾಗುವನು. ಅವನು ಎಲ್ಲರನ್ನೂ ತನ್ನ ಮಕ್ಕಳಂತೆ ನೋಡುತ್ತಾನೆ. ತನ್ನ ಇಷ್ಟದೇವತೆಗೆ ತಾಯಿಯಾಗಿರುವುದರಿಂದ, ವಿಶ್ವಕ್ಕೆ ಜನನಿಯಾಗುವನು, ತನ್ನ ಪ್ರೀತಿಪಾತ್ರನಾದ ಮಗುವನ್ನೇ ಎಲ್ಲೆಲ್ಲಿಯೂ ನೋಡುವನು.

ಮಧುರಭಾವವನ್ನು ಅಭ್ಯಾಸಮಾಡುವ ಭಕ್ತ ತನ್ನ ಪ್ರಿಯತಮನೆ ಎಲ್ಲೆಲ್ಲೂ ಇರುವುದನ್ನು ನೋಡುವನು. ತನ್ನ ಪ್ರಿಯತಮನೆ ಎಲ್ಲಾ ಆಕಾರಗಳ ಹಿಂದೆ ಎಲ್ಲಾ ವ್ಯಕ್ತಿಗಳ ಹಿಂದೆ ಅಡಗಿಕೊಂಡಿರುವಂತೆ ಕಾಣುವನು. ಭಕ್ತ ಅವನಿಂದ ಎಂದಿಗೂ ಬೇರೆಯಾಗಿಲ್ಲ.

ಯಾರು ಭಾವಸಮಾಧಿಯಲ್ಲಿ ತುತ್ತತುದಿಯನ್ನು ಮುಟ್ಟಿದ್ದಾರೊ, ಅವರೆಲ್ಲರೂ ಬೇರೆ ಬೇರೆ ಭಾವಗಳಿಂದ ಒಂದೇ ಅನುಭವವನ್ನು ಪಡೆದಿರುವರು. ಎಲ್ಲಾ ಭಾವದಲ್ಲಿಯೂ ಇಷ್ಟದೇವರು ಸರ್ವವ್ಯಾಪಿಯಾಗುವನು. ಮಾನಸಿಕ ದೃಷ್ಟಿಯಿಂದ ಈ ಸಾಕ್ಷಾತ್ಕಾರಗಳೆಲ್ಲ ಒಂದೇ. ಆದರೂ ಬಾಹ್ಯದಲ್ಲಿ ವ್ಯಕ್ತವಾಗುವ ರೀತಿಯಿಂದ ಅವುಗಳನ್ನು ಹೀಗೆ ವರ್ಗೀಕರಿಸಬಹುದು.

ಜಡ: ಒಂದು ಗೊಂಬೆಯ ಹಾಗೆ ಧ್ಯಾನಾವಸ್ಥೆಯಲ್ಲಿ ತಲ್ಲೀನನಾಗಿರುವನು. ಅವನಿಗೆ ಯಾವುದರ ಮೇಲೆಯೂ ಅರಿವಿಲ್ಲ. ಹಲವು ವರುಷಗಳ ಕಾಲ ಕೂತ ಕಡೆಯೆ ಕುಳಿತಿರಬಲ್ಲ. ಅವನ ದೇಹ ಹಾಗೆಯೇ ಬಿದ್ದು ಹೋಗುವುದು.

ಬಾಲ: ಐದು ವರುಷದ ಮಗುವಿನಂತೆ, ಮಗುವಿನ ಸರಳತನವನ್ನು ಅವನ ವ್ಯವಹಾರದಲ್ಲಿ ನೋಡುತ್ತೇವೆ. ಶ್ರೀರಾಮಕೃಷ್ಣರು ಇಂತಹ ಭಾವಸಮಾಧಿಗೆ ಉದಾಹರಣೆ.

ಉನ್ಮತ್ತ: ಹುಚ್ಚನಂತೆ ಅಥವಾ ಕುಡುಕನಂತೆ ಇರುವುದು. ಅವನು ಪರಮ ಪ್ರೇಮಾಮೃತವನ್ನು ಹೀರಿರುವುದರಿಂದ, ನಿಶೆ ಏರಿದಂತೆ ಕಾಣುವನು.

ಪಿಶಾಚ: ನೋಡುವುದಕ್ಕೆ ಅಂಜಿಕೆಯಾಗುವ ಪಿಶಾಚದಂತೆ ಇರುವನು. ಅವನು ಇತರರು ತನ್ನ ಬಳಿಗೆ ಬರದೆ ಇರಲಿ ಎಂದು ಈ ಭಾವವನ್ನು ಆರೋಪಿಸಿಕೊಳ್ಳುವನು.

ರಾಜರಾಜೇಶ್ವರ: ಅವನು ರಾಜಾಧಿರಾಜನಂತೆ ಇರುವನು. ಅವನಲ್ಲಿ ರಾಜನ ಗಾಂಭೀರ್ಯವನ್ನು ನೋಡುತ್ತೇವೆ. ಅವನು ಹೋದಕಡೆ ಎಲ್ಲವೂ ಯಥೇಚ್ಛವಾಗಿರುವುದು.

ಈ ಐದು ಭಾವಗಳು ಪ್ರತ್ಯೇಕವಾಗಿದ್ದರೂ, ಎಲ್ಲರೂ ಪರಮಗುರಿಯನ್ನೂ ಮುಟ್ಟಿರುವರು ಎಂಬುದನ್ನು ನಾವು ಮರೆಯಕೂಡದು. ಅವರನ್ನು ಬಾಹ್ಯತೋರಿಕೆಗೆ ತಕ್ಕಂತೆ ವಿಭಾಗಿಸಿದ್ದೇವೆ. ಅವರಲ್ಲಿರುವ ಸಾಕ್ಷಾತ್ಕಾರವೆಲ್ಲ, ಮನಸ್ಸೆಲ್ಲ ಒಂದೇ ಬಗೆಯದು. ಸಾಕ್ಷಾತ್ಕಾರವನ್ನು ಪಡೆದ ಜೀವಿಗಳು ಏತಕ್ಕೆ ಬೇರೆ ಬೇರೆ ಭಾವಗಳಲ್ಲಿದ್ದಾರೆ ಎಂದರೆ ಇದು ಅವರ ಪ್ರಾರಬ್ಧಕರ್ಮ ಎನ್ನಬೇಕಾಗಿದೆ. ಹಿಂದೆ ಮಾಡಿದ ಪ್ರಾರಬ್ಧ ಕರ್ಮವನ್ನು ಬದಲಾಯಿಸುವುದಕ್ಕೆ ಆಗುವುದಿಲ್ಲ. ಈ ಕರ್ಮ ಕ್ಷಯವಾಗಬೇಕಾಗಿದೆ. ಆಧ್ಯಾತ್ಮಿಕ ಗುರಿಯನ್ನು ಮುಟ್ಟಿದವರು ಕೂಡ ಇದಕ್ಕೆ ವಿನಾಯಿತಿ ಅಲ್ಲ.

ಪಿಶಾಚಭಾವವನ್ನು ತಿಳಿದುಕೊಳ್ಳುವುದಕ್ಕೆ ನಮಗೆ ಬಹಳ ಕಷ್ಟವಾಗಬಹುದು. ದಕ್ಷಿಣೇಶ್ವರ ದೇವಸ್ಥಾನ ಪ್ರಾರಂಭವಾದಮೇಲೆ ಅಲ್ಲಿ ನಡೆದ ಒಂದು ಘಟನೆಯ ಮೂಲಕ ಇದನ್ನು ವಿವರಿಸಬಹುದು.

ಒಂದು ದಿನ ಒಬ್ಬ ಹುಚ್ಚ ದೇವಸ್ಥಾನಕ್ಕೆ ಬಂದ. ಅವನು ಬಿಕ್ಷುಕನಂತೆ ಬಟ್ಟೆಯನ್ನು ಹಾಕಿಕೊಂಡಿದ್ದ. ನೋಡುವುದಕ್ಕೆ ಅವಲಕ್ಷಣವಾಗಿದ್ದ. ಅವನು ಒಂದು ಕೈಯಲ್ಲಿ ಮರದ ಕೊಂಬೆಯನ್ನು, ಮತ್ತೊಂದು ಕೈಯಲ್ಲಿ ಸಸಿ ಇರುವ ಕುಂಡವನ್ನು ಹಿಡಿದುಕೊಂಡಿದ್ದ. ಅವನು ಅಷ್ಟೊಂದು ವಿಲಕ್ಷಣವಾಗಿ ಕಾಣುತ್ತಿದ್ದುದರಿಂದ, ಭಿಕ್ಷುಕರು ಕೂಡ ಅವನನ್ನು ಸೇರಿಸಲಿಲ್ಲ. ದೇವಸ್ಥಾನದಲ್ಲಿ ಪ್ರಸಾದವನ್ನು ಹಂಚುವ ಸಮಯದಲ್ಲಿ ಭಿಕ್ಷುಕರು ಈತನಿಗೆ ತಮ್ಮ ಸಮೀಪದಲ್ಲಿ ಕುಳಿತುಕೊಳ್ಳುವುದಕ್ಕೆ ಅವಕಾಶ ಕೊಡಲಿಲ್ಲ. ಅವನು ಎಂಜಲನ್ನು ಬಿಸಾಡುವ ತಿಪ್ಪೆಗುಂಡಿಗೆ ಹೋಗಿ ಅಲ್ಲಿ ತಿನ್ನುತ್ತಿದ್ದ ನಾಯಿಗಳೊಂದಿಗೆ ತಾನೂ ತಿನ್ನತೊಡಗಿದ. ಒಂದು ನಾಯಿಯ ಮೇಲೆ ಕೈಯನ್ನು ಹಾಕಿದ. ಕೆಲವುವೇಳೆ ನಾಯಿಗಳನ್ನು ಅತ್ತತಳ್ಳಿ, ತಾನು ತಿನ್ನುತ್ತಿದ್ದ. ನಾಯಿಗಳು ಇವನನ್ನು ಗಮನಿಸಲೇ ಇಲ್ಲ. ಇಬ್ಬರೂ ಶಾಂತಿಯಿಂದ ತಿಂದರು.

ಶ್ರೀರಾಮಕೃಷ್ಣರ ಸೋದರಳಿಯ ಹಲಧಾರಿ ಆಗ ದೇವಸ್ಥಾನದಲ್ಲಿದ್ದ. ಇದನ್ನೆಲ್ಲ ನೋಡಿದ. ಅವನು ತಕ್ಷಣ ಓಡಿಹೋಗಿ ಶ್ರೀರಾಮಕೃಷ್ಣರಿಗೆ ಇದನ್ನು ಹೇಳಿದ. ಇಬ್ಬರೂ

ಅವನೊಡನೆ ಮಾತನಾಡುವುದಕ್ಕೆ ಹೋದರು. ಹುಚ್ಚ ಅವರೊಂದಿಗೆ ಅತ್ಯಂತ ಶ್ರೇಷ್ಠ ವಾದ ಸತ್ಯವನ್ನು ಕುರಿತು ಮಾತನಾಡಿದ. ಆದರೆ ಇತರರಿಗೆ ಅವನು ಏನನ್ನೂ ಹೇಳಲಿಲ್ಲ. ಅನಂತರ ಅವನು ದೇವಸ್ಥಾನದಿಂದ ಹೋಗುವ ಸಮಯದಲ್ಲಿ, ಶ್ರೀರಾಮಕೃಷ್ಣರ ಮತ್ತೊಬ್ಬ ಸೋದರಳಿಯನಾದ ಹೃದಯ, ತನಗೇನಾದರೂ ಬುದ್ಧಿವಾದವನ್ನು ಹೇಳ ಬೇಕೆಂದು ಅವನನ್ನು ಕೇಳಿಕೊಂಡ. ಮುಂಚೆ ಈ ಹುಚ್ಚ ಇದನ್ನು ಲೆಕ್ಕಿಸಲಿಲ್ಲ. ಆದರೆ ಹೃದಯ ಅವನನ್ನು ಬೇಡಿಕೊಂಡ ಮೇಲೆ ತಿರುಗಿ "ಈ ಚರಂಡಿಯಲ್ಲಿರುವ ನೀರು, ಗಂಗಾ ನದಿಯ ನೀರು ಎರಡೂ ಒಂದೇ ಎಂದು ನಿನಗೆ ಕಂಡಾಗ ನೀನು ಗುರಿಯನ್ನು ಮುಟ್ಟಿ ರುವೆ" ಎಂದ. ಅವನು ಅನಂತರ ರಸ್ತೆಯಲ್ಲಿ ಕಾಣದೆ ಹೋದ. ಶ್ರೀರಾಮಕೃಷ್ಣರು ಅವನನ್ನು ಒಬ್ಬ ಪರಮಹಂಸ ಎಂದರು.

ಯಾರು ಅತ್ಯಂತ ಶ್ರೇಷ್ಠವಾದ ಸ್ಥಿತಿಯನ್ನು ಮುಟ್ಟಿರುವರೊ ಅವನನ್ನು ಪರಮ ಹಂಸ ಎನ್ನುವರು. ಪದಶಃ ಇದಕ್ಕೆ ದೊಡ್ಡಹಂಸ ಎಂದು ಅರ್ಥ. ಈ ಉಪಮಾನ ಹೇಗೆ ಬಂತೆಂದರೆ, ಹಿಂದೆ ಒಂದು ವಿಧವಾದ ಹಂಸವಿತ್ತು. ಅದು ಹಾಲಿನಲ್ಲಿ ನೀರನ್ನು ಬಿಟ್ಟು ಹಾಲನ್ನೇ ಕುಡಿಯಬಲ್ಲದಾಗಿತ್ತು. ಒಬ್ಬ ಅಕ್ಕಿಯನ್ನು ಬೆಳೆಯಬೇಕಾದರೆ, ಹೊರಗಿನ ಹೊಟ್ಟು, ಒಳಗಿನ ಕಾಳು ಎರಡನ್ನೂ ಗಮನಿಸಬೇಕಾಗಿದೆ. ಯಾರು ಅಕ್ಕಿಯನ್ನು ತಿನ್ನ ಬಯಸುವರೊ ಅವರಿಗೆ ಹೊಟ್ಟು ಬೇಕಾಗಿಲ್ಲ. ಹೊಟ್ಟು ಅನಾವಶ್ಯಕ. ಅದನ್ನು ಆಚೆಗೆ ಎಸೆಯುವರು. ಪ್ರತಿಯೊಂದು ಆವಿರ್ಭಾವದ ಹಿಂದೆ ಯಾರು ಸತ್ಯವನ್ನು ಸಾಕ್ಷಾತ್ಕಾರ ಮಾಡಿಕೊಂಡಿರುವರೊ ಅವರೇ ಪರಮಹಂಸರು.

ಎಲ್ಲಾ ಧರ್ಮಗಳು ಮತ್ತು ತತ್ವಗಳು ಮೃತ್ಯುವಿನ ಸತ್ಯವನ್ನು ತಿಳಿದುಕೊಳ್ಳುವು ದಕ್ಕೆ ಯತ್ನಿಸಿವೆ. ಭವಿಷ್ಯದಲ್ಲಿ ಏನಿರುವುದು ಎಂಬುದನ್ನು ತಿಳಿದುಕೊಳ್ಳಲು ಯತ್ನಿಸಿವೆ. ಭಕ್ತಿಯೋಗದ ದೃಷ್ಟಿಯಲ್ಲಿ ಜನನ ಮರಣಗಳ ವಿಷಯವನ್ನು ಭಗವದ್ಗೀತೆಯ ಆರನೆ ಅಧ್ಯಾಯದಲ್ಲಿ ವಿವರಿಸಿರುವರು.

ಭಕ್ತ ಏನೇ ಆಗಲಿ ದೇವರಲ್ಲಿ ತಲ್ಲೀನನಾಗಲು ಬಯಸುವುದಿಲ್ಲ. ಅವನು ದೇವರನ್ನು ಪ್ರೀತಿಸುವನು. ಅವನು ಒಳಗೆ ಹೊರಗೆ ಎಲ್ಲಾ ವಸ್ತುಗಳಲ್ಲಿಯೂ ಸೌಂದರ್ಯವನ್ನು ನೋಡುವನು. ನನಗೆ ಸಕ್ಕರೆ ಆಗಲು ಆಶೆಯಿಲ್ಲ, ಸಕ್ಕರೆಯ ಸವಿಯನ್ನು ರುಚಿ ನೋಡ ಬೇಕೆನ್ನುವನು. ಭಕ್ತನಿಗೆ ಮುಕ್ತಿಯನ್ನು ಕಂಡರೆ ಆಗದು. ಅವನು ತಾನು ಬದ್ಧ ಎಂದು ಭಾವಿಸುವುದೇ ಇಲ್ಲ, ಅವನು ಬಂಧನ ಮುಕ್ತಿಗಳ ಮಾತನ್ನೇ ಆಡುವುದಿಲ್ಲ. ದೇವರಲ್ಲಿ ತನ್ನನ್ನು ಲಯಮಾಡಿಕೊಳ್ಳುವುದಕ್ಕೆ ಭಕ್ತ ಇಚ್ಛಿಸುವುದಿಲ್ಲ.

ಭಕ್ತನ ಮುಖ್ಯ ಕರ್ತವ್ಯವೇ ತನ್ನ ಅಂತರಾತ್ಮನಾದ ಭಗವಂತನ ಮೇಲೆ ಪ್ರೀತಿ ಯನ್ನು ಹುಟ್ಟಿಸಿಕೊಳ್ಳಬೇಕು, ಅವನಂತೆ ಆಗಬೇಕು, ಎನ್ನುವುದು. ಅವನಿಗೆ ಮಾನವ ಕೋಟಿ ಅನಾವಶ್ಯಕವಲ್ಲ. ಅವನು ಎಲ್ಲೆಲ್ಲಿಯೂ ಸೌಂದರ್ಯವನ್ನೇ ನೋಡುವನು. ತನ್ನ ಹೃದಯವೇ ಭಗವಂತನ ಬೈಠಕ್‌ಖಾನೆ ಎಂಬುದನ್ನು ಅವನು ಯಾವಾಗಲೂ ಅರಿತಿರು ವನು.

ಭಕ್ತ ಹೀಗೆ ಹೇಳುತ್ತಾನೆ. "ನನ್ನ ಪ್ರಪಂಚ ಮಾಯವಲ್ಲ. ಅದೊಂದು ಆಟದ ಮೈದಾನ. ನಾನು ಮತ್ತೊಮ್ಮೆ ಹಕ್ಕಿಯಾದರೆ, ಮೃಗವಾದರೆ ಏನು ವ್ಯತ್ಯಾಸ. ನಾನು ವೈವಿಧ್ಯತೆಯನ್ನು ಪ್ರೀತಿಸುತ್ತೇನೆ. ನಾನು ನನ್ನ ಭಕ್ತಿಗೋಸುಗ ಪುನಃ ಪುನಃ ಬಂದು ಆನಂದಿಸುತ್ತೇನೆ. ಇದೊಂದು ತಮಾಷೆ. ನನ್ನ ಪ್ರಿಯತಮ ಆಡಬೇಕೆಂದು ಬಯಸಿದರೆ, ನಾನು ಏತಕ್ಕೆ ಆಡಬಾರದು" ?

ಮರಣವಾದ ಮೇಲೆ ಭಕ್ತ ತನ್ನ ಭಕ್ತಿಯ ಬಯಕೆಗಳನ್ನೆಲ್ಲ ಈಡೇರಿಸುವ ಸ್ಥಾನಕ್ಕೆ, ಈ ಪ್ರಪಂಚದ ಲೋಪದೋಷಗಳು ಇಲ್ಲದ ಸ್ಥಳಕ್ಕೆ ಹೋಗಲು ಇಚ್ಛಿಸುವನು. ಅಂತಹ ಲೋಕವೇ ವೈಕುಂಠ. ಇದು ಸ್ವರ್ಗಲೋಕವನ್ನು ಮೀರಿದುದು. ವೈಕುಂಠಲೋಕ ಚಿನ್ಮಯ ದಿಂದ ಆಗಿದೆ. ಅಲ್ಲಿ ವಸ್ತುಗಳು ಕನಸಿನ ಲೋಕದಲ್ಲಿರುವಂತೆ ಇರುತ್ತವೆ. ಅಲ್ಲಿ ಭಕ್ತನಿಗೆ ತಾನು ಇಚ್ಛಿಸುವ ದೇಹ ಬರುವುದು. ಆ ದೇಹದಲ್ಲಿ ಆನಂದವಿರುವುದು, ಭೌತಿಕ ದೇಹದ ಯಾವ ಕುಂದುಕೊರತೆಗಳೂ ಇರುವುದಿಲ್ಲ. ಭಗವಂತನಿಗೆ ಎಷ್ಟು ಬೇಕಾದರೂ ಸೇವೆ ಮಾಡಬಲ್ಲ ದೇಹ ಅವನಿಗಿರುವುದು. ರೋಗ ಮತ್ತು ನಾಶದಿಂದ ಬಾಧಿತವಾಗದ ದೇಹ ಇದು. ಭಕ್ತ ಭಗವಂತನ ಸಾಕ್ಷಾತ್ಕಾರವನ್ನು ಎಂದೆಂದಿಗೂ ಆನಂದಿಸುತ್ತಾ ಇರಬೇಕೆಂದು ಬಯಸುವನು. ವೈಕುಂಠ ಲೋಕದಲ್ಲಿ ಭಕ್ತನ ಆಸೆಗಳೆಲ್ಲ ಪೂರ್ಣವಾಗುವುವು. ಅವನು ತನ್ನ ಇಷ್ಟದೇವರಿಂದ ಎಂದಿಗೂ ಅಗಲಿರುವುದಿಲ್ಲ. ದೇವರಿಗೂ ಅವನಿಗೂ ಇರುವ ಸಂಬಂಧ, ಕಣ್ಣಿಗೆ ಕಾಣುವುದು ಸ್ವಾಭಾವಿಕವಾಗಿರುವುದು. ಇಂತಹ ಸಂಬಂಧವನ್ನು' ಇಂತಹ ಸ್ಥಿತಿಯನ್ನು ಭಕ್ತ ಎಂದೆಂದಿಗೂ ಇರುವುದು ಎಂದು ಭಾವಿಸುತ್ತಾನೆ. ಭಕ್ತ ತನ್ನ ಇಷ್ಟದೇವರನ್ನು ಎಂದೆಂದಿಗೂ ಪ್ರೀತಿಸುತ್ತಿರಬೇಕೆಂದು ಬಯಸುವನು. ಅವನು ತನ್ನ ಇಷ್ಟ ದೇವರನ್ನು ಎಲ್ಲಾ ಕಡೆಯಲ್ಲಿ ಕಂಡರೂ ಅದು ಅವನ ಆರಾಧನೆಯ ಪವಿತ್ರ ವಸ್ತುವಾಗಿರು ವುದು. ಅವನು ದೇವರಲ್ಲಿ ತಲ್ಲೀನನಾಗಬಯಸುವುದಿಲ್ಲ. ಅವನು ದೇವರನ್ನು ಪ್ರೀತಿಸುವನು.

ಭಕ್ತಿಶಾಸ್ತ್ರಗಳ ಪ್ರಕಾರ ವೈಕುಂಠದಲ್ಲಿ ಭಕ್ತ ನಾಲ್ಕು ವಿಧವಾದ ಸಂಬಂಧಗಳನ್ನು ಅನುಭವಿಸುವನು.

ಸಾರೂಪ್ಯ : ತನ್ನ ಇಷ್ಟದೇವತೆಗೆ ಇರುವಂತಹ ಆಕಾರವೇ ತನಗೂ ಬರುವುದು. ಭಕ್ತ ಪ್ರಪಂಚದಲ್ಲಿ ತನ್ನ ಇಷ್ಟದೇವತೆಯ ಮೇಲೆ ಧ್ಯಾನಿಸುತ್ತಾನೆ. ಹಾಗೆ ಧ್ಯಾನಿಸುವುದ ರಿಂದ ಅವನಿಗೂ ಚಿನ್ಮಯ ರೂಪ ಬರುವುದು.

ಸಾಯುಜ್ಯ : ಯಾವಾಗಲೂ ಇಷ್ಟದೇವತೆಯೊಂದಿಗೆ ಇರುವನು. ಆ ಸಂಬಂಧ ದಲ್ಲಿ ಯಾವ ಭಾವವಾದರೂ ಇರಬಹುದು.

ಸಾಲೋಕ್ಯ : ಎಂದರೆ ಒಂದೇ ಲೋಕದಲ್ಲಿರುವವನು. ಅದೇ ಲೋಕದಲ್ಲಿ ಯಾವ ದೇಹವನ್ನಾದರೂ ಧರಿಸಿ ಇರುವನು. ನೀನು ಯಾವಾಗಲೂ ಇಷ್ಟದೊಂದಿಗೆ ಇರುವುದಿಲ್ಲ, ಆದರೇ ಅದೇ ಲೋಕದಲ್ಲಿ ಇರುವಿ.

ಸಾರ್ಷ್ಟಿ : ಸಮಾನಸ್ಥಾನ. ಇಷ್ಟದೇವರ ಕಾಂತಿ ನಿನ್ನಲ್ಲಿ ಪ್ರತಿಬಿಂಬಿಸುತ್ತಿರು ವುದು. ಸೃಷ್ಟಿಮಾಡುವ ಶಕ್ತಿ ವಿನಃ ಭಕ್ತನಿಗೆ ಉಳಿದೆಲ್ಲ ಶಕ್ತಿಗಳೂ ಬರುವುವು.

ಜನನದಲ್ಲಿ, ಮರಣದಲ್ಲಿ ಅಥವಾ ಮತ್ತೆ ಬೇರೆ ಯಾವ ಲೋಕದಲ್ಲಾದರೂ ಇರಲಿ, ಭಕ್ತನ ಇಚ್ಛೆ ಭಗವಂತನನ್ನು ಪ್ರೀತಿಸುವದೊಂದೇ. ಪ್ರಪಂಚದ ದೊಡ್ಡ ಭಕ್ತರು, ದೊಡ್ಡ ಅನುಭಾವಿಗಳು, ಅತ್ಯಂತ ತೀವ್ರವಾದ ಆಧ್ಯಾತ್ಮಿಕ ಭೂಮಿಕೆಯಲ್ಲಿದ್ದರು. ಅವರಲ್ಲಿದ್ದ ಉದ್ವೇಗ ಭಕ್ತಿಯಿಂದ ನಿಯಂತ್ರಿತವಾಗಿದ್ದುದರಿಂದ ಶ್ರೇಷ್ಠ ವ್ಯಕ್ತಿಗಳಾದರು.

ಭಗವತ್ಪ್ರೇಮಕ್ಕೆ ಒಂದು ಅಂತ್ಯವಿಲ್ಲ. ನೀವು ಮಾಡುವ ಪ್ರತಿಯೊಂದು ಕೆಲಸವೂ ಭಗವಂತನಿಗೆ ಮಾಡುವ ಸೇವೆಯಂತೆ ಇರಲಿ. ದೇವರನ್ನು ಮಾತ್ರ ಅರಸಿ. ಅವನಲ್ಲಿ ಮಾತ್ರ ತನ್ಮಯರಾಗಿ.

ಕರ್ಮಯೋಗ

೧

ಮನುಷ್ಯನು ಸ್ವಭಾವತಃ ಪವಿತ್ರಾತ್ಮ. ಕರ್ಮಚಕ್ರದ ಪರಿವರ್ತನೆಯಿಂದ ಆದ ಆಂದೋಳನದಿಂದ ಅವನಲ್ಲಿರುವ ಪವಿತ್ರತೆ ಚಂಚಲವಾಗಿದೆ. ಇದರಿಂದ ಕ್ರಿಯೆ ಮತ್ತು ಪ್ರತಿಕ್ರಿಯೆಗಳಾಗಿ ಕರ್ಮ ಉಂಟಾಗುವುದು. ಕರ್ಮದಿಂದ ಪಾರಾಗುವವರೆಗೆ ಮನುಷ್ಯ ಪೂರ್ಣನಾಗಲಾರ ಅಥವಾ ಪೂರ್ಣತೆಯನ್ನು ವ್ಯಕ್ತಪಡಿಸಲಾರ.ಅವನು ಮುಕ್ತನಾಗಲಾರ.

ಮೇಲಿನದೇ ಒಂದು ಸೂತ್ರ, ಸಿದ್ಧಾಂತ, ಕರ್ಮಯೋಗದ ಗುರಿ. ಕರ್ಮಯೋಗ ವೆಂದರೆ ಕರ್ಮದದ್ವಾರ ಮುಕ್ತಿಯನ್ನು ಪಡೆಯುವುದು. ಕರ್ಮ ಪ್ರತಿಯೊಂದು ಜೀವರಾಶಿ ಯಲ್ಲಿಯೂ ಸ್ವಾಭಾವಿಕವಾಗಿದೆ. ಅದರಿಂದ ನಾವು ತಪ್ಪಿಸಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ಇದರಿಂದ ಪಾರಾಗುವುದಕ್ಕೆ ನಮಗೆ ಸಾಧ್ಯವಾಗದೆ ಇರುವಾಗ, ಸ್ವಾಭಾವಿಕ ವಾಗಿರುವ ಶಕ್ತಿಯನ್ನು ಉಪಯೋಗಿಸಿಕೊಂಡು, ಕರ್ಮಮಾರ್ಗದ ಮೂಲಕ ಮುಕ್ತಿ ಯನ್ನು ಪಡೆಯಬಹುದು. ನಮ್ಮಲ್ಲಿ ಆಗಲೆ ಇರುವ ಪೂರ್ಣತೆಯನ್ನು ವ್ಯಕ್ತಪಡಿಸ ಬಹುದು.

ಜೀವನ ಎಂದರೆ, ನಮ್ಮ ಸ್ವಭಾವವನ್ನು ವ್ಯಕ್ತಪಡಿಸುವುದು. ನಮ್ಮ ನೈಜಸ್ವಭಾವ ವಾಗಿರುವ ಪವಿತ್ರತೆಯನ್ನು ವ್ಯಕ್ತಪಡಿಸಲು ಇರುವ ಆತಂಕಗಳೊಡನೆ ಹೋರಾಡುವುದು. ಈ ಪ್ರಪಂಚದಲ್ಲಿ ಯಾವ ಒಂದು ಜೀವಾಣುವೂ ಕೆಲಸವಿಲ್ಲದೆ ಕ್ಷಣಕಾಲವಾದರೂ ಸುಮ್ಮನೆ ಇರುವುದಿಲ್ಲ. ದೇವರೇ ಬಿಡುವಿಲ್ಲದ ಕರ್ಮದಲ್ಲಿ ನಿರತನಾಗಿರುವನು. ಜೀವನದಲ್ಲಿ ಯಾರಿಗಾದರೂ ರಜ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲದ ವ್ಯಕ್ತಿಯೆಂದರೆ, ಪಾಪ ಅವನು ದೇವರಾಗಿರುವನು. ಅವನು ಪ್ರತಿಯೊಂದು ಕ್ಷಣವೂ ಕೆಲಸಮಾಡುತ್ತಿರಬೇಕು. ಇಲ್ಲದಿದ್ದರೆ ಸೃಷ್ಟಿಯೆಲ್ಲ ಅನಾಯಕವಾಗುವುದು. ಒಂದು ಸುಂದರವಾದ ಹಾರದಲ್ಲಿರುವ ಮಣಿಗಳನ್ನೆಲ್ಲಾ ಒಟ್ಟಾಗಿಟ್ಟಿರುವುದು ಹೇಗೆ ಒಂದು ದಾರವೋ ಅದರಂತೆಯೇ ದೇವರ ಕರ್ಮವೇ ಪ್ರಪಂಚವನ್ನೆಲ್ಲ ಒಂದು ನಿಯಮದಲ್ಲಿಟ್ಟಿರುವುದು. ಭಗವಂತನ ಬಿಡುವಿಲ್ಲದ ಕರ್ಮವೇ ಎಲ್ಲಾ ಕಡೆಯಲ್ಲಿಯೂ ವ್ಯಕ್ತವಾಗುವುದು. ಅದರಿಂದಲೇ ಇಲ್ಲಿ ಪ್ರೇಮನಿಯಮ, ಸೌಂದರ್ಯ, ಮತ್ತು ಪ್ರಯೋಜನ ಇರುವುದು.

ಸೂರ್ಯಚಂದ್ರರು, ನಕ್ಷತ್ರಗ್ರಹಗಳು, ಬೆಟ್ಟ ಸಾಗರ ನದಿ ಬಯಲು, ಮರಗಳು, ಹೂವುಗಳು, ಪಶುಪಕ್ಷಿಗಳು ಮತ್ತು ಪ್ರತಿಯೊಂದು ಕಣದಿಂದ ಕೂಡಿದ ಈ ಪೃಥ್ವಿ ಬಿಡು ವಿಲ್ಲದೆ ಕರ್ಮದಲ್ಲಿ ಮುಳುಗಿರುವುದು. ಪ್ರತಿಯೊಂದು ಕ್ಷಣವೂ ಯಾವುದೂ ತಾಟಸ್ಥ್ಯ ವಾಗಿರಲಾರದು.

ನಮ್ಮ ಪ್ರಕೃತಿಯೇ ಪ್ರತಿಕ್ಷಣವೂ ವಿಕಾಸವಾಗುವಂತೆ, ಪೂರ್ಣತೆಯನ್ನು ಪಡೆ

ಯುವಂತೆ ಪ್ರಚೋದಿಸುತ್ತಿರುವುದು. ಈ ಸ್ವಭಾವವೇ ನಮ್ಮನ್ನು ಕಾರ್ಯೋನ್ಮುಖರಾಗುವಂತೆ ಮಾಡುವುದು. ಇಲ್ಲಿ ನಾನು ಕೆಲಸ ಮಾಡಲೆ ಬಿಡಲೆ ಎಂಬ ಪ್ರಶ್ನೆಯೇ ಇಲ್ಲ. ಏಕೆಂದರೆ ನಮ್ಮ ಪ್ರಕೃತಿಯೇ ನಾವು ಸುಮ್ಮನಿರಬೇಕೆಂದರೂ ಕೆಲಸಮಾಡುವಂತೆ ಪ್ರಚೋದಿಸುವುದು.

ಈಗಿನ ಪ್ರಶ್ನೆಯೇ ಇದು. ನಾವು ಹೇಗೆ ಕೆಲಸಮಾಡುವುದು ? ನಾವು ಏನು ಮಾಡಿದರೂ ನಮ್ಮಲ್ಲಿರುವ ಪೂರ್ಣತೆಯನ್ನು ವ್ಯಕ್ತಪಡಿಸುವಂತೆ ಇರಬೇಕು. ವ್ಯಕ್ತಪಡಿಸಬೇಕೆಂಬುದು ಅದ್ಭುತವಾದ ಶಕ್ತಿ. ನಾವು ಅದನ್ನು ವಿವೇಚನೆ ಇಲ್ಲದೆ ಅನುಸರಿಸಿದರೆ ನಮ್ಮನ್ನು ಗೋಜಿಗೆ ಸಿಕ್ಕಿಸುವುದು. ಆಸೆಯನ್ನು ಎಂದಿಗೂ ತೃಪ್ತಿಪಡಿಸುವುದಕ್ಕೆ ಆಗುವುದಿಲ್ಲ. ನಮಗೆ ಬಂದಷ್ಟೂ ಇನ್ನೂ ಬೇಕು. ಇದು ಹೀಗೆಯೇ ಇನ್ನೂ ಮುಂದುವರಿಯುತ್ತಿರುವುದು. ಈ ಬಯಕೆಯನ್ನು ನಾವು ನಿಗ್ರಹಿಸಬೇಕಾಗಿದೆ. ಹಿಂದೂದರ್ಶನ, ನಮ್ಮಲ್ಲಿ ವ್ಯಕ್ತವಾಗಲೆತ್ನಿಸುವ ಮೂಲಸ್ವಭಾವವನ್ನು, ಆಧ್ಯಾತ್ಮಿಕ ಸಾಕ್ಷಾತ್ಕಾರವನ್ನು ಪಡೆಯುವುದಕ್ಕೆ ಪರಿವರ್ತಿಸಬಹುದು ಎಂದು ಹೇಳುವುದು.

ನಾವು ನಿರ್ಜನ ಪ್ರದೇಶದಲ್ಲಿ ಮತ್ತು ಗಡಿಬಿಡಿಯ ಜೀವನದಲ್ಲಿ ಹೇಗೆ ಆಧ್ಯಾತ್ಮಿಕ ಸಂಪನ್ನರಾಗಿರುವುದು. ನಾವು ಭಾನುವಾರದ ದಿವಸ ಸಾಧುಗಳಾಗಿ, ಮಿಕ್ಕದಿನಗಳಲ್ಲಿ ಪಾಪಿಗಳಾಗಿರುವುದಕ್ಕೆ ಸಾಧ್ಯವೇ ? ಮತ್ತೊಂದು ಮಾತಿನಲ್ಲಿ ಹೇಳುವುದಾದರೆ ನಮ್ಮ ವ್ಯವಹಾರಕ್ಕೂ ಪರಮಾರ್ಥಕ್ಕೂ ಘರ್ಷಣೆ ಇದೆಯೇ ? ವ್ಯವಹಾರ ಮತ್ತು ಪರಮಾರ್ಥವನ್ನು ಒಂದು ಸಾಮರಸ್ಯಕ್ಕೆ ಬರುವಂತೆ ಮಾಡಬೇಕಾದರೆ ಅದರ ಪರಿಹಾರೋಪಾಯಕ್ಕಾಗಿ ನಾವು ಸುಸ್ಕೃತ ಸಾಹಿತ್ಯಕ್ಕೆ ಹೋಗಬೇಕಾಗಿದೆ. ಪ್ರಪಂಚದಲ್ಲಿ ವ್ಯವಹಾರ ಮತ್ತು ಪರಮಾರ್ಥವನ್ನು ಒಂದುಗೂಡಿಸುವ ಅದ್ಭುತವಾದ ಸೇತುವೆ ಮತ್ತೆಲ್ಲಿಯೂ ಇಲ್ಲ ಎಂದು ನಾನು ಧೈರ್ಯದಿಂದ ಹೇಳಬೇಕಾಗಿದೆ. ಈ ಪ್ರಪಂಚಕ್ಕೆ ಈ ಸಂದೇಶವನ್ನು ಕೊಡುವುದಕ್ಕಾಗಿಯೇ ಭರತಖಂಡ ಜೀವಂತವಾಗಿದೆ. ನೀವು ಬೇಕಾದರೆ ನನ್ನನ್ನು ಇದಕ್ಕಾಗಿ ಹುಚ್ಚನೆಂದು ಕರೆಯಬಹುದು. ಆದರೆ ಭರತಖಂಡದ ಈ ಸಿದ್ಧಾಂತವೇ, ಕರ್ಮಯೋಗದ ಶಾಸ್ತ್ರವೇ ವಿಶ್ವದ ಭವಿಷ್ಯ ಧರ್ಮವಾಗುವುದು.

ಕರ್ಮ ಎನ್ನುವ ಪದ ಸಂಸ್ಕೃತದಲ್ಲಿ ಕೃ ಎಂಬ ಧಾತುವಿನಿಂದ ಬಂದಿದೆ. ಹೇಗೆಂದರೆ ಇದು ನಾವು ಮಾಡುವ ಕ್ರಿಯೆಯೆಲ್ಲ, ಮಾನಸಿಕವಾಗಿರಲಿ, ಭೌತಿಕವಾಗಿರಲಿ ಎಲ್ಲದಕ್ಕೂ ಅನ್ವಯಿಸುವುದು. ನಾವೊಂದು ವ್ಯಾಕರಣದ ಉದಾಹರಣೆಯನ್ನು ತೆಗೆದುಕೊಳ್ಳೋಣ. ನಾನು ಎನ್ನುವ ಸರ್ವನಾಮದ ಮುಂದೆ ಉಪಯೋಗಿಸುವ ಪ್ರತಿಯೊಂದು ಕ್ರಿಯಾಪದವೂ, ಯಾವುದಾದರೂ ಕ್ರಿಯೆಗೆ ಅನ್ವಯಿಸುವುದು. ನಾನು ನೋಡುತ್ತೇನೆ, ನಾನು ಕೇಳುತ್ತೇನೆ, ನನಗೆ ಬೇಕು, ನಾನು ಆಲೋಚಿಸುತ್ತೇನೆ—ಈ ಕ್ರಿಯೆಗೆಲ್ಲ ಕರ್ತೃ ನಾನೆಂಬುದು. ಕ್ರಿಯಾಪದ ಮಾಡುವ ಕೆಲಸವನ್ನು ಹೇಳುವುದು. ಸೂಕ್ಷ್ಮವಾಗಿ ಕರ್ಮ ಎಂದರೆ, ಕಾರ್ಯಕಾರಣ ಸಂಬಂಧ ಎಂದಾಗುವುದು. ಈಗಿನ ಕರ್ಮ ಮುಂದೆ ಮತ್ತೊಂದು ಕರ್ಮಕ್ಕೆ ಕಾರಣವಾಗುತ್ತದೆ. ಕಾರ್ಯಕಾರಣ ಸಂಬಂಧಕ್ಕೆ ಕಾರಣವಾದುದೆಲ್ಲ ಕರ್ಮ.

ಯೋಗ ಎಂದರೆ ಒಂದುಗೂಡಿಸುವುದು. ಇಲ್ಲಿ ಕೆಳಗಿರುವ ಜೀವಾತ್ಮನನ್ನು ಪೂರ್ಣಾತ್ಮನೊಡನೆ ಒಂದುಗೂಡಿಸುವುದು ಎಂದರ್ಥ. ಈ ಪೂರ್ಣಾತ್ಮನೆ ನಮ್ಮ ಸ್ವಭಾವ. ಕರ್ಮಯೋಗ ಎಂದರೆ ಕರ್ಮದ ಮೂಲಕ ಈ ಪೂರ್ಣತೆಯನ್ನು ಪಡೆಯುವ ಮಾರ್ಗ. ಆಗಲೆ ಇರುವ ಪವಿತ್ರ ಪರಿಪೂರ್ಣತೆಯನ್ನು ಪಡೆಯುವುದಕ್ಕೆ ಜ್ಞಾನಯೋಗ ಭಕ್ತಿಯೋಗ, ರಾಜಯೋಗಗಳಂತೆಯೇ ಕರ್ಮಯೋಗ ಒಂದು ಸ್ವತಂತ್ರವಾದ ಮಾರ್ಗ.

ಕರ್ಮಯೋಗವನ್ನು ಅನುಸರಿಸಿದರೆ, ನಮ್ಮ ನಿತ್ಯಕರ್ಮಗಳನ್ನು ಈ ಉದ್ದೇಶ ಸಾಧನೆಗೆ ಹೊಂದಿಸಿಕೊಳ್ಳುವುದು ಎಂಬ ರಹಸ್ಯವನ್ನು ಅರಿಯುವುದಾಗಿದೆ. ನಮ್ಮನ್ನು ಕೀಳು ಅಹಂಕಾರಕ್ಕೆ ಬಿಗಿದ ಕಾರ್ಯಕಾರಣ ಸಂಬಂಧವನ್ನು ಹೇಗೆ ತುಂಡರಿಸುವುದು ಎಂಬುದನ್ನು ಅರಿಯುತ್ತೇವೆ. ಎಲ್ಲಿಯವರೆಗೆ ನಮ್ಮಲ್ಲಿ ಕರ್ಮ ನಿಯಮ ಇರುವುದೊ, ಅಲ್ಲಿಯವರೆಗೆ ನಾವು ಮುಕ್ತರಲ್ಲ. ಕರ್ಮಯೋಗಿ ಮುಕ್ತನಾಗಬೇಕಾದರೆ, ಕರ್ಮನಿಯಮದಿಂದ ಆತ ಪಾರಾಗಬೇಕು. ಕರ್ಮನಿಯಮಕ್ಕೆ ಎರಡು ದೃಷ್ಟಿಗಳಿವೆ. ಕಾರ್ಯಕಾರಣ ಸಂಬಂಧ ಮತ್ತು ಅದನ್ನು ವ್ಯಕ್ತಗೊಳಿಸುವ ರೀತಿ. ಕರ್ಮ ಮತ್ತು ಅದರ ಪರಿಣಾಮಗಳಿಂದ ಪಾರಾಗುವುದಕ್ಕಾಗಿ ಯೋಗಿ ಈ ನಿಯಮದ ಸರಪಳಿಯನ್ನು ಕತ್ತರಿಸುವುದಕ್ಕೆ ಯತ್ನಿಸುವನು. ಇವನು ಕರ್ಮ ತನ್ನ ಮೇಲೆ ಪ್ರಭಾವವನ್ನು ಬೀರದ ರೀತಿ ಅದನ್ನು ವ್ಯಕ್ತಪಡಿಸಲು ಯತ್ನಿಸುವನು. ಮಾನಸಿಕವಾಗಿ ಕರ್ಮಯೋಗ, ಕರ್ಮತಂತುವನ್ನು ಹರಿದು ಪಾರಾಗುವುದಾಗಿದೆ. ಕರ್ಮಯೋಗಿ ಕಾರ್ಯಕಾರಣ ಸಂಬಂಧವನ್ನು ಮೀರಿಹೋಗಲು ಯತ್ನಿಸುವನು. ಮಾನಸಿಕ ರೀತಿ ಇದನ್ನು ಸರಿಯಾಗಿ ಅನುಷ್ಠಾನ ಮಾಡಿದರೆ, ಅವನು ಕರ್ಮನಿಯಮದಿಂದ ಪಾರಾಗಿ ಹೋಗಬಹುದು.

ಹೊರಗಡೆ ಕರ್ಮಪ್ರಪಂಚದಲ್ಲಿ ಒಬ್ಬ ಹೇಗೆ ಕೆಲಸ ಮಾಡಬೇಕು ಎಂದರೆ, ತನ್ನಲ್ಲಿರುವ ಪೂರ್ಣತೆಯನ್ನು ಹೆಚ್ಚುಹೆಚ್ಚಾಗಿ ವ್ಯಕ್ತವಾಗುವಂತೆ ಮಾಡಬೇಕು. ಮತ್ತು ತಾನು ಮಾಡುವ ಕೆಲಸಗಳಿಂದ ತಾನು ಬಂಧಿತನಾಗದೆ ಮುಕ್ತನಾಗುವುದಕ್ಕೆ ಸಹಾಯ ಮಾಡುವಂತೆ ಇರಬೇಕು. ಕರ್ಮಯೋಗಕ್ಕೆ ಎರಡು ದೃಷ್ಟಿಗಳಿವೆ. ಒಂದು ಆಂತರಿಕವಾದುದು, ಮತ್ತೊಂದು ಬಾಹ್ಯಕವಾಗಿರುವುದು.

ಪರಿಪೂರ್ಣತೆ ನಮ್ಮಲ್ಲಿದೆ. ಆಸೆ ನಮ್ಮ ಮನಸ್ಸಿನಲ್ಲಿ ಕ್ಷೋಭೆಯನ್ನುಂಟುಮಾಡುವುದು. ಆದಕಾರಣವೆ ಪರಿಪೂರ್ಣತೆ ವ್ಯಕ್ತವಾಗಲಾರದು. ಆಸೆಯಿಂದ ಪ್ರೇರಿತವಾದ ಕರ್ಮ, ಹಲವು ವಸ್ತುಗಳನ್ನು ನಮ್ಮಲ್ಲಿ ಸಂಗ್ರಹಿಸಬೇಕು ಎನ್ನುವ ಕರ್ಮ, ನಾನು, ನನ್ನದು ಎಂಬ ಭಾವದಿಂದ ನಮ್ಮನ್ನು ಕಟ್ಟಿಹಾಕುವುದು. ಯಾವುದೂ ಯಾರಿಗೂ ಸೇರಿಲ್ಲ. ಯಾವ ವಸ್ತುವಿನ ಮೇಲಾಗಲಿ, ವ್ಯಕ್ತಿಯ ಮೇಲಾಗಲಿ ನಿನ್ನ ಸ್ವಾಮಿತ್ವವನ್ನು ತರಬೇಡ. ನನ್ನ ದೇಹ ಎಂತಲೂ ಹೇಳಬೇಡಿ. ಈ ದೇಹ ಎನ್ನಿ. ಪರಿಗ್ರಹದಿಂದ ಪಾರಾಗುವುದಕ್ಕೆ ಹಲವು ರೀತಿಗಳಿವೆ.

ಆಸೆ ಮತ್ತು ಆಸಕ್ತಿ ಎಂಬುದೇ ಅವಳಿ ಜವಳಿ. ಇವುಗಳೇ ಕಾರ್ಯ ಕಾರಣ ಸಂಬಂಧಕ್ಕೆ ಕಾರಣ. ಕಾರ್ಯ ಕಾರಣ ಸಂಬಂಧವೇ ಜೀವಿಯನ್ನು ಜನನ ಮರಣಗಳಿಗೆ

ಗುರಿಮಾಡಿ ಅದನ್ನು ಬಂಧನದಲ್ಲಿಡುವುದು. ಬಾಹ್ಯ ಕರ್ಮಕ್ಕಿಂತ ಮಾನಸಿಕ ಕರ್ಮ ಮತ್ತೂ ತೀವ್ರವಾದುದು, ಏಕೆಂದರೆ ಇದು ಮನಸ್ಸಿನ ಆಳಕ್ಕೆ ಹೋಗುವುದು. ಆಸೆ ಮತ್ತು ಆಸಕ್ತಿಯೇ ನಮ್ಮ ಮುಕ್ತಿಗೆ ಇರುವ ತಡೆ. ಇವುಗಳನ್ನು ನಿಗ್ರಹಿಸುವುದು ಹೇಗೆ ಎಂಬುದನ್ನು ಕರ್ಮಯೋಗ ನಮಗೆ ಹೇಳುವುದು. ಆಸಕ್ತಿಯಿಂದ ಮಾಡಿದ ಕರ್ಮ ಮಾನಸಿಕವಾಗಲಿ, ಶಾರೀರಕವಾಗಲಿ ಇದು ಕರ್ಮಸಂಸ್ಕಾರವಾಗುವುದು. ಅದು ಪುನಃ ಕರ್ಮವಾಗಿ ಹೊರಬರಬೇಕಾಗಿದೆ. ಪರಿಣಾಮದಿಂದ ಪಾರಾದ ಮೇಲೆ ಮನುಷ್ಯ ಮುಕ್ತನಾಗುತ್ತಾನೆ. ಇದನ್ನು ತ್ವರಿತಗೊಳಿಸುವುದೇ ಕರ್ಮಯೋಗಿಯ ಉದ್ದೇಶ.

ಕರ್ಮವನ್ನು ಹಲವು ದೃಷ್ಟಿಗಳ ಮೂಲಕ ಪರಿಶೀಲಿಸಬಹುದು. ನಮ್ಮ ಆಲೋಚನೆ ಮತ್ತು ಕ್ರಿಯೆಯನ್ನು ಎರಡುಭಾಗ ಮಾಡಬಹುದು. ಅವುಗಳೇ ಇಷ್ಟಪ್ರಾಪ್ತಿಗೆ ಮಾಡುವ ಕರ್ಮ, ಅನಿಷ್ಟ ನಿವೃತ್ತಿಗೆ ಮಾಡುವ ಕರ್ಮ. ಮನುಷ್ಯನಲ್ಲಿ ಪ್ರಾಯಶ್ಚಿತ್ತರೂಪವಾದ ಕರ್ಮವೊಂದಿದೆ. ಇದು ಹಿಂದಿನ ಎರಡು ಗುಂಪಿಗಿಂತ ಬೇರೆಯಾಗಿದೆ. ಪ್ರಾಯಶ್ಚಿತ್ತ ಕರ್ಮ ಯಾವಾಗಲಾದರೊಮ್ಮೆ ಬರುವುದು. ಅದನ್ನು ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಹಿಂದೆ ಮಾಡಿದ ದುಷ್ಕರ್ಮದ ಪ್ರಭಾವದಿಂದ ಪಾರಾಗುವುದಕ್ಕೆ, ಕ್ಷಮೆ ಬೇಡುವುದಾಗಲಿ. ಅದಕ್ಕೆ ಪ್ರತಿಯಾದ ಒಳ್ಳೆಯ ಕರ್ಮಮಾಡುವುದಾಗಲಿ ಬರುವುದು. ಕ್ಯಾಥೊಲಿಕ್ ಚರ್ಚ್‌ಗಳಲ್ಲಿ ತಪ್ಪನ್ನು ಒಪ್ಪಿಕೊಳ್ಳುವುದು ಈ ಗುಂಪಿಗೆ ಬರುವುದು.

ಪರಿಣಾಮದ ದೃಷ್ಟಿಯಿಂದ ಕರ್ಮವನ್ನು ಹಲವು ವಿಭಾಗ ಮಾಡಬಹುದು. ಇಷ್ಟವಾಗಿರುವ ಫಲಗಳನ್ನು ಕೊಡುವುದು. ಅನಿಷ್ಟವಾಗಿರುವ ಫಲಗಳನ್ನು ಕೊಡುವುದು, ಇಷ್ಟವೂ ಅನಿಷ್ಟವೂ ಇಲ್ಲದೇ ಇರುವುದು. ನಾವು ಕರ್ಮವನ್ನು ಕೊನೆಯ ಗುಂಪಿಗೆ ತರಬೇಕು. ಒಳ್ಳೆಯ ಮತ್ತು ಕೆಟ್ಟ ಕರ್ಮಗಳನ್ನು ನಿಸ್ಸತ್ವಗೊಳಿಸುವಂತೆ ಮಾಡಬೇಕು.

ಅನಾಸಕ್ತವಾದ ಕರ್ಮ ಎಂಬ ಮತ್ತೊಂದು ಬಗೆಯ ಕರ್ಮವಿದೆ. ನಾವು ಅದನ್ನು ಇಚ್ಛಿಸಿ ಮಾಡುವುದಿಲ್ಲ. ಇದರಿಂದ ಯಾವ ಪ್ರತಿ ಫಲವೂ ಬರುವುದಿಲ್ಲ. ಅನೈಚ್ಛಿಕವಾದ ಕರ್ಮ ಎಂಬುದು ಯಾವುದಾದರೂ ಇದೆ ಏನು? ನಮ್ಮ ದೇಹದಲ್ಲಿ ನಡೆಯುತ್ತಿರುವ ಹೃದಯದ ಹೊಡೆತವನ್ನೂ ಕೂಡ ನಾವು ನಿಗ್ರಹಿಸಬಹುದು ಎಂಬುದನ್ನು ರಾಜಯೋಗದಲ್ಲಿ ನೋಡಿದೆವು. ಹಾಗಿದ್ದರೆ ಯಾವುದು ಅನೈಚ್ಛಿಕವಾಗಿ ನಡೆಯುವುದು ಎನ್ನುವೆವೊ ಅದೂ ಕೂಡ ಸುಪ್ತವಾಗಿರುವ ಐಚ್ಛಿಕ ಕ್ರಿಯೆಯೇ ಆಯಿತು. ನಾವು ಇಚ್ಛಿಸಿ ಮಾಡುವ ಕ್ರಿಯೆಯಿಂದ ಒಳ್ಳೆಯ ಅಥವಾ ಕೆಟ್ಟ ಕರ್ಮಗಳಾಗುವುವು.

ಕರ್ಮವನ್ನು ನಮಗೆ ಸಹಾಯವಾಗಿರುವ ಒಳ್ಳೆಯ ಕರ್ಮವೆಂತಲೂ, ನಮಗೆ ಹಾನಿಕರವಾದ ಕೆಟ್ಟ ಕರ್ಮವೆಂತಲೂ ವಿಭಾಗಮಾಡಬಹುದು. ಕರ್ಮ ಒಳ್ಳೆಯದು ಅಥವಾ ಕೆಟ್ಟದ್ದು ಎಂದು ಹೇಗೆ ಹೇಳುವುದು? ಯಾವ ಕರ್ಮ ಮಾಡುವವನ ಮನಸ್ಸನ್ನು ಮೇಲಕ್ಕೆ ಎತ್ತುವುದೋ, ಅತ್ಯಂತ ಹೆಚ್ಚು ಜನರಿಗೆ ಅತ್ಯಂತ ಶ್ರೇಷ್ಠವಾದ ಪರಿಣಾಮವನ್ನು ಕೊಡುವುದೊ ಅದು ಸತ್ ಕರ್ಮ. ಇದಕ್ಕೆ ವಿರೋಧವಾಗಿರುವುದೇ ದುಷ್ಕರ್ಮ. ಕರ್ಮ ಒಳ್ಳೆಯದಾಗಿರಬೇಕಾದರೆ ಮಾಡುವವನ ಮನಸ್ಸನ್ನು ಮೇಲೆತ್ತಬೇಕು. ಸತ್ಕರ್ಮ

ನಮ್ಮಲ್ಲಿರುವ ಪವಿತ್ರತೆಯನ್ನು ವ್ಯಕ್ತಗೊಳಿಸುವುದು. ನೀವು ನಿಮ್ಮ ಆಲೋಚನೆ ಮತ್ತು ಕ್ರಿಯೆಯಲ್ಲಿ ನಿಮ್ಮ ಸುತ್ತಲೂ ಒಂದು ಬೇಲಿಯನ್ನು ಕಟ್ಟಿಕೊಂಡು, ಇತರರಿಗಿಂತ ಬೇರೆ ಎಂದು ಭಾವಿಸಿದರೆ, ನೀವು ಏನು ಕೆಲಸ ಮಾಡಿದರೂ, ನಿಮ್ಮ ಪವಿತ್ರತೆ ವ್ಯಕ್ತವಾಗುವುದಕ್ಕೆ ಅವಕಾಶವಿರುವುದಿಲ್ಲ. ಇಂತಹ ಕೆಲಸಗಳು ಧಾರ್ಮಿಕವಲ್ಲ, ನಾಶಕಾರಿ ಎಂದು ನಾನು ಹೇಳುತ್ತೇನೆ. ಆಧ್ಯಾತ್ಮಿಕ ದೃಷ್ಟಿಯಿಂದ, ನಮ್ಮ ಸ್ವಾರ್ಥತೆಯ ಬೇಲಿಯನ್ನು ತೆಗೆಯುವಂತೆ ಮಾಡಿದರೆ, ಪ್ರಪಂಚದ ಹಿಂದೆ ಇರುವ ಏಕತ್ವವನ್ನು ವ್ಯಕ್ತಗೊಳಿಸಲು ವಿಕಾಸ ಮಾಡಿದರೆ ಅವು ಒಳ್ಳೆಯ ಕರ್ಮಗಳು ಎನ್ನಬೇಕಾಗಿದೆ.

ಸಾಧಾರಣವಾಗಿ ವಿಧಿ ನಿಷೇಧಗಳಿಗೆ ಅನುಸಾರವಾಗಿ ಒಂದು ಕೆಲಸವನ್ನು ಒಳ್ಳೆಯದು ಮತ್ತು ಕೆಟ್ಟದ್ದು ಎಂದು ಹೇಳಬೇಕಾಗಿದೆ. ಒಂದು ಸನ್ನಿವೇಶದಲ್ಲಿ ಒಳ್ಳೆಯದಾದ ಕರ್ಮ ಮತ್ತೊಂದು ಸನ್ನಿವೇಶದಲ್ಲಿ ಕೆಟ್ಟದ್ದಾಗಬಹುದು. ಒಂದು ಕೆಲಸ ಸರಿಯೆ ಎಂದು ನಿರ್ಣಯಿಸುವುದಕ್ಕೆ ನಾಲ್ಕು ಪರೀಕ್ಷೆಗಳಿವೆ. ೧. ಮುಖ್ಯವಾದ ಧರ್ಮದ ನಿಯಮಗಳಿಗೆ ಅದು ಹೊಂದಿಕೊಳ್ಳಬೇಕು. ೨. ಅದು ನಮ್ಮ ಧಾರ್ಮಿಕ ಮತ್ತು ವ್ಯವಹಾರಗಳಿಗೆ ವಿರೋಧವಾಗಿರಬಾರದು. ೩. ಅವನು ಯಾವ ಸಮಾಜದಲ್ಲಿ ಹುಟ್ಟಿರುವನೊ ಆ ಸಮಾಜದಲ್ಲಿ ರೂಢಿಯಾಗಿರತಕ್ಕ ಆಚಾರ ವ್ಯವಹಾರಗಳಿಗೆ ವಿರೋಧವಾಗಿರಬಾರದು. ೪. ಒಳ್ಳೆಯ ಕೆಲಸವನ್ನು ಮಾಡಿದರೆ ಮನಸ್ಸಿಗೆ ತೃಪ್ತಿ ಆಗಬೇಕು. ಅದರಿಂದ ವ್ಯಥೆಯಾಗಬಾರದು. ಆದರೆ ಒಳ್ಳೆಯ ಅಥವಾ ಕೆಟ್ಟಕೆಲಸ ಎಲ್ಲರಿಗೂ ಅನ್ವಯಿಸುವಂತೆ ಇರಬೇಕಾದರೆ ಅದು ಹೀಗಿರಬೇಕು :—ಪ್ರತಿಯೊಂದು ವಸ್ತುವಿನಲ್ಲಿರುವ ಅಖಂಡ ಪೂರ್ಣತೆಯ ತತ್ವಪ್ರಕಾಶಕ್ಕೆ ಅಡ್ಡಿ ಬರದೆ ಇದ್ದರೆ, ಅಥವಾ ಅದನ್ನು ಮರೆಮಾಚದೆ ಇದ್ದರೆ ಅದು ಒಳ್ಳೆಯ ಕೆಲಸವೆ. ಯಾವುದು ಅದಕ್ಕೆ ಆತಂಕಪ್ರಾಯವಾಗಿದೆಯೊ ಅದು ಕೆಟ್ಟ ಕೆಲಸ.

ಕರ್ಮಯೋಗದ ಮೂಲಕ ಪರಿಪೂರ್ಣತೆಯನ್ನು ಮುಟ್ಟಬೇಕಾದರೆ, ಒಳ್ಳೆಯ ಕರ್ಮಗಳ ಬಂಧನದಿಂದಲೂ ಒಬ್ಬ ಪಾರಾಗಬೇಕು. ನಮ್ಮಲ್ಲಿರುವ ಕೆಟ್ಟ ಅಥವಾ ಆತಂಕ ಪ್ರಾಯದ ಕೆಟ್ಟಕೆಲಸಗಳಿಗೆ ವಿರೋಧವಾಗಿ ಒಳ್ಳೆಯ ಕರ್ಮಗಳನ್ನು ಮಾಡಬೇಕು. ಶ್ರೀರಾಮಕೃಷ್ಣರು, ಕಾಡಿನಲ್ಲಿ ನಡೆಯುತ್ತಿದ್ದಾಗ ನಿಮ್ಮ ಕಾಲಿಗೆ ಏನಾದರೂ ಮುಳ್ಳು ಹೊಕ್ಕಿದ್ದರೆ, ಮತ್ತೊಂದು ಮುಳ್ಳಿನ ಸಹಾಯದಿಂದ ಅದನ್ನು ತೆಗೆದು ಎರಡನ್ನೂ ಬಿಸುಡಿ ಎಂದು ಹೇಳುತ್ತಿದ್ದರು. ಒಂದು ಒಳ್ಳೆಯ ಕೆಲಸ ಕೆಟ್ಟ ಪರಿಣಾಮದಿಂದ ನಮ್ಮನ್ನು ಪಾರುಮಾಡುವುದು. ನಮ್ಮ ಗುರಿಯಾದರೊ ಎರಡನ್ನೂ ಮೀರಿ ಹೋಗಬೇಕು. ಎಲ್ಲ ಕರ್ಮ ಪರಿಣಾಮಗಳಿಂದಲೂ ಮನಸ್ಸನ್ನು ಪಾರುಮಾಡಬೇಕು.

ಯಾವ ಒಂದು ಜೀವಾಣುವೂ ತೆಪ್ಪಗೆ ಇರಲಾರದು. ಜೀವನವೇ ನಿರಂತರ ಕರ್ಮ. ಅನಂತದಲ್ಲಿ ವಿನಃ ಬೇರೆಡೆ ತಾಟಸ್ಥ್ಯ ಎಂಬುದಿಲ್ಲ. ಹಾಗಾದರೆ ನಾವು ಏತಕ್ಕೆ ಏನನ್ನಾದರೂ ಮಾಡಬೇಕು ಎಂದು ನೀವು ಕೇಳಬಹುದು. ನಾವು ಸುಮ್ಮನೆ ಶುದ್ಧ ಸೋಮಾರಿಗಳಾಗಿ ಏತಕ್ಕೆ ಇರಬಾರದು ? ಮಾಯಾ ಪ್ರಭಾವ ನಮ್ಮ ಮೇಲೆ ಇರುವವರೆಗೆ ಎಲ್ಲಿಯವರೆಗೆ ಜೀವನದ ಮಹಾಚಕ್ರದಲ್ಲಿ ಸಿಕ್ಕಿಕೊಂಡಿರುವೆವೊ, ನಮಗೆ ಕೆಲಸ ಮಾಡು

ವುದಕ್ಕಾಗಲಿ, ಬಿಡುವುದಕ್ಕಾಗಲಿ ಸ್ವಾತಂತ್ರ್ಯವಿಲ್ಲ. ನಾವು ಕೆಲಸವನ್ನು ಮಾಡಲೇ ಬೇಕಾಗಿದೆ. ನಾವು ಎಷ್ಟೋ ವಿರೋಧಿಸಿದರೂ, ಎಲ್ಲಿಯವರೆಗೆ ದೊಡ್ಡ ಕರ್ಮಚಕ್ರ ಸುತ್ತುತ್ತಿದೆಯೊ ಅಲ್ಲಿಯವರೆಗೆ ನಾವು ಕರ್ಮಮಾಡದೆ ವಿಧಿಯಿಲ್ಲ.

ಪ್ರತಿಯೊಂದು ಕರ್ಮವೂ ಹಿಂದಿನ ಕರ್ಮದ ಪರಿಣಾಮ. ಈ ಪರಿಣಾಮ ಮುಂದಿನ ಕರ್ಮಕ್ಕೆ ಕಾರಣವಾಗಿರುತ್ತದೆ. ಈ ಕರ್ಮ ಮೂರು ವಿಧವಾಗಿದೆ. ಕಾರಣ, ಕರ್ಮ, ಮತ್ತು ಪರಿಣಾಮ. ಪರಿಣಾಮ ಮತ್ತೊಂದು ಕರ್ಮಕ್ಕೆ ಕಾರಣವಾಗುತ್ತದೆ. ಹೀಗೆ ಎಂದೆಂದಿಗೂ ಹೋಗುತ್ತಿರುವುದು. ಈ ಕರ್ಮವನ್ನು ಯಾರು ಪ್ರಾರಂಭಮಾಡಿದರು ಎಂದು ಕೇಳಬಹುದು. ಇದು ಹಗಲು ಮೊದಲು ಬಂತೆ, ರಾತ್ರಿ ಮೊದಲು ಬಂತೆ ? ಹಕ್ಕಿ ಮೊದಲು ಬಂತೆ, ಮೊಟ್ಟೆ ಮೊದಲು ಬಂತೆ ಎಂದು ಕೇಳುವಂತೆ ಇದೆ. ನಾವು ಒಂದು ಕೋಣೆಗೆ ಹೋದರೆ, ಅಲ್ಲಿ ದೀಪದ ಮುಂದೆ ಚಕ್ರ ಸುತ್ತುತ್ತಿದ್ದರೆ, ಅದರ ಹಿಂದೆ ಇರುವ ದೀಪ ಕಾಣದಂತೆ ಇದ್ದರೆ, ಯಾರು ಚಕ್ರವನ್ನು ಸುತ್ತುವಂತೆ ಮಾಡಿದರು ಎಂಬುದನ್ನು ಅರಿತರೆ, ದೀಪವನ್ನು ನೋಡುವುದಕ್ಕೆ ಆಗುವುದೆ ? ಇಲ್ಲ, ತಿರುಗುತ್ತಿರುವ ಚಕ್ರವನ್ನು ನಿಲ್ಲಿಸಬೇಕು.

ಕಾರ್ಯಕಾರಣ ಸಂಬಂಧದ ದೃಷ್ಟಿಯಿಂದ ಕರ್ಮವನ್ನು ವಿಭಜನೆ ಮಾಡೋಣ.

ಸಂಚಿತ ಕರ್ಮ : ಆಗಲೇ ಸಂಗ್ರಹಿಸಿದ ಕರ್ಮ. ಬಿತ್ತುವುದಕ್ಕೆ ಸಿದ್ಧವಾಗಿರುವ ಬೀಜದ ಗುಡಾಣದಂತೆ. ಕಾರಣವಿಲ್ಲದೆ ಯಾವುದೂ ಆಗಲಾರದು. ಹಿಂದಿನಿಂದ ಬಂದ ಕರ್ಮದ ಪರಿಣಾಮವನ್ನು ನಾವು ಬಹುವಿಧವಾಗಿ ಉಪಯೋಗಿಸಬಹುದು. ಇನ್ನೂ ಖರ್ಚಾಗದೆ ಇರುವುದನ್ನು ಬಳಸಬಹುದು. ಇದ್ದಕ್ಕಿದ್ದಂತೆಯೇ ಒಬ್ಬನಿಗೆ ಒಂದು ಶಕ್ತಿ ಬರುವುದಕ್ಕೆ ಇದೇ ಕಾರಣ.

ಕ್ರಿಯಾಮಾಣ ಕರ್ಮ : ಈಗ ಆಗುತ್ತಿರುವ ಕರ್ಮ. ಈಗ ನಾವು ಕರ್ಮ ಮಾಡುತ್ತಿರುವುದೇ ಇದರ ದೆಸೆಯಿಂದ. ಹಿಂದಿನಿಂದ ಸಂಗ್ರಹವಾದ ಕರ್ಮ ಈಗ ವ್ಯಕ್ತವಾಗುತ್ತಿದೆ. ಈಗ ಪರಿಣಾಮಗಳು ಆಗುತ್ತಿವೆ. ಈಗ ನಮಗೆ ಕಾಣುತ್ತಿರುವ ಕರ್ಮವೇ ಇದು. ಇದಕ್ಕೆ ಮೂಲವನ್ನು ನಾವು ಕಂಡುಹಿಡಿಯಬಹುದು.

ಪ್ರಾರಬ್ಧ ಕರ್ಮ : ನಾವು ಆಗಲೇ ಮಾಡಿರುವ ಕರ್ಮ. ಈಗ ನಾವು ಅದನ್ನು ಬದಲಾಯಿಸುವುದಕ್ಕೆ ಆಗುವುದಿಲ್ಲ. ಶಕ್ತಿಯಲ್ಲಿ ಎರಡು ವಿಧ ಇವೆ. ಒಂದು ಸುಪ್ತ ಮತ್ತೊಂದು ವ್ಯಕ್ತ. ಪ್ರಾರಬ್ಧ ಕರ್ಮ ಆಗಲೇ ವ್ಯಕ್ತವಾದ ಕರ್ಮ. ಅದು ನಮ್ಮ ಕೈಯನ್ನು ಮೀರಿಹೋಗಿದೆ. ಪ್ರಾರಬ್ಧ ಕರ್ಮವೇ ನಾವು ಈಗ ಇರುವ ಸ್ಥಿತಿಗೆ ಕಾರಣ. ನಾವು ಗಂಡಸೊ, ಹೆಂಗಸೊ ಆಗಿ ಹುಟ್ಟಿರುವುದು, ನಮಗೆ ಯಾರೊ ತಂದೆತಾಯಿಗಳಾಗುವುದು, ನಮ್ಮಲ್ಲಿರುವ ಕೆಲವು ಯೋಗ್ಯತೆಗಳು, ಸ್ವಭಾವಗಳು, ಸಾಮರ್ಥ್ಯಗಳು ಮತ್ತು ನಾವು ಯಾವುದೋ ವಾತಾವರಣದಲ್ಲಿ ಹುಟ್ಟುವುದು ಇದಕ್ಕೆಲ್ಲ ಕಾರಣ ಪ್ರಾರಬ್ಧ ಕರ್ಮ. ಜೀವನದಲ್ಲಿ ಪ್ರಾರಬ್ಧ ಕರ್ಮಕ್ಕೆ ಒಳಗಾದ ಕೆಲಸವನ್ನು ನಾವು ಬದಲಾಯಿಸುವುದಕ್ಕೆ ಆಗುವುದಿಲ್ಲ. ಅವುಗಳನ್ನು ನಾವು ಗಮನಿಸಕೂಡದು. ಗಮನಿಸಿದರೆ ಶುದ್ಧ ಸೋಮಾರಿ

ಗಳಾಗುತ್ತೇವೆ. ಕೆಲವು ವೇಳೆ ಪ್ರಾರಬ್ಧ ಕರ್ಮದಿಂದ ನಮಗೆ ಅನಾನುಕೂಲಗಳಾದರೂ, ಪೂರ್ಣತೆಯನ್ನು ಪಡೆಯುವುದಕ್ಕೆ ಆತಂಕವಾಗುವುದಿಲ್ಲ. ಯಾವನೊ ಒಬ್ಬ ಅಂಗವಿಕಲನಾಗಿ ಹುಟ್ಟುತ್ತಾನೆ ಎಂದು ಭಾವಿಸೋಣ. ಅವನು ಅದನ್ನು ನೇರ ಮಾಡಲಾಗುವುದಿಲ್ಲ. ಆದರೆ ಆಧ್ಯಾತ್ಮಿಕ ಜೀವನದಲ್ಲಿ ಪೂರ್ಣತೆಯನ್ನು ಪಡೆಯುವುದಕ್ಕೆ ಆದು ಆತಂಕವಾಗಲಾರದು. ವಸ್ತುತಃ ಜೀವನವನ್ನು ಸ್ವೀಕರಿಸಬೇಕೆಂದು ಪ್ರಾರಬ್ಧ ಕರ್ಮ ಹೇಳುವುದು. ಬಯಕೆ, ಭರವಸೆಗಳನ್ನು ಉತ್ಪ್ರೇಕ್ಷೆ ಮಾಡಬೇಡಿ. ಅಸಾಧ್ಯವನ್ನು ಪಡೆಯುವುದಕ್ಕೆ ಯತ್ನಿಸಬೇಡಿ.

ಜೀವನದಲ್ಲಿ ಮಾಡಿದ ಪ್ರತಿಯೊಂದು ಕೆಲಸಕ್ಕೂ ನಾವೇ ಜವಾಬ್ದಾರರು. ನಾವು ಈಗ ಇರುವ ಸ್ಥಿತಿಯನ್ನು ಜ್ಞಾನ ವಿವರಿಸಲಾರದು. ಸ್ಮೃತಿಯೇ ಪ್ರಮಾಣವಲ್ಲ. ಕರ್ಮ ಮತ್ತೊಂದು ಕರ್ಮಕ್ಕೆ ಕಾರಣವಾಗುವುದು. ನೀವು ಒಂದು ಕರ್ಮವನ್ನು ಮಾಡಿದರೆ, ಅದರಂತೆ ಮುಂದೆ ಮಾಡುವುದಕ್ಕೆ ಯೋಗ್ಯವಾದ ಜನ್ಮವನ್ನು ನಿಶ್ಚಯಿಸುವುದು. ಆಗ ಕೆಲವು ಉಪಕರ್ಮಗಳೂ ಹುಟ್ಟುವುವು. ನಾವು ಕೆಲವು ಕರ್ಮದೊಡನೆ ಹುಟ್ಟಿದ್ದೇವೆ. ನಮಗೆ ಇಚ್ಛೆ ಇರಲಿ, ಇಲ್ಲದಿರಲಿ ಅದನ್ನು ಕ್ಷಯಮಾಡಿಕೊಳ್ಳಬೇಕಾಗಿದೆ.

ಹಿಂದಿನ ಒಂದು ಉದಾಹರಣೆ ಮೂರು ವಿಧವಾದ ಕರ್ಮವನ್ನು ಚೆನ್ನಾಗಿ ವಿವರಿಸುವುದು. ಒಬ್ಬ ಬಿಲ್ಲುಗಾರನ ಬತ್ತಳಿಕೆಯ ತುಂಬ ಬಾಣಗಳಿದ್ದವು. ಇವು ಸಂಚಿತ ಕರ್ಮ. ಅವನು ಬಿಡುವುದಕ್ಕೆ ಈಗೊಂದು ಬಾಣವನ್ನು ಕೈಗೆ ತೆಗೆದುಕೊಳ್ಳುವನು. ಇದು ಕ್ರಿಯಾಮಾನ. ಅವನು ಆಗಲೆ ಬಿಟ್ಟ ಬಾಣ ಈಗ ಗುರಿಎಡೆಗೆ ಧಾವಿಸುತ್ತಿದೆ. ಇದೇ ಪ್ರಾರಬ್ಧ. ಈ ಬಾಣದ ಮೇಲೆ ಇವನಿಗೆ ಹತೋಟಿ ಇಲ್ಲ. ಅದು ಮುಂದೆ ಹೋಗೇ ಹೋಗುವುದು.

ಸಂಚಿತ ಮತ್ತು ಕ್ರಿಯಾಮಾನದ ಕರ್ಮಗಳಲ್ಲಿ ಮನುಷ್ಯನಿಗೆ ಸ್ವಾತಂತ್ರವಿದೆ. ಬಿಲ್ಲುಗಾರನ ಕೈಯಲ್ಲಿ ಬತ್ತಳಿಕೆಯಲ್ಲಿರುವ ಬಾಣಗಳಂತೆ ಇವೆರಡೂ ಈಗ ಅವನ ಅಧೀನ. ಈ ಬಾಣಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸುವುದಕ್ಕೆ ಅಥವಾ ಆಚೆಗೆ ಎಸೆಯುವುದಕ್ಕೆ, ವಿದ್ಯಾಭ್ಯಾಸ, ಸಂಸ್ಕೃತಿ, ಶಿಸ್ತು ಇವುಗಳೆಲ್ಲ ಅದಕ್ಕೆ ಸಹಾಯಕವಾಗುವುವು.

ಪ್ರಾರಬ್ಧ ಕರ್ಮದ ದೃಷ್ಟಿಯಿಂದ ಯಾವ ಪರಿಣಾಮವಾದರೂ ಆಗಲಿ, ಅದು ಒಳ್ಳೆಯದಾಗಲಿ, ಕೆಟ್ಟದ್ದಾಗಲಿ ಅದು ಕ್ಷಯವಾಗುವವರೆಗೆ ಸಹಿಸಬೇಕಾಗಿದೆ. ಸಂಚಿತ ಕ್ರಿಯಾಮಾನ ಕರ್ಮದಿಂದ ಪಾರಾದರೆ, ಕೆಲಸಮಾಡುವುದಕ್ಕೆ ಯಾವ ಪ್ರೇರಣೆಯೂ ಇರುವುದಿಲ್ಲ. ಪಾರಬ್ಧ ಕರ್ಮ ಕ್ಷಯವಾಗುವುದು. ಬೇರೆ ಕರ್ಮಕ್ಕೆ ಅದು ಬೀಜವಾಗುವುದಿಲ್ಲ. ಕರ್ಮಯೋಗಿ ತನ್ನ ಪ್ರಾರಬ್ಧ ಕರ್ಮವನ್ನು ಹೊಸ ಕರ್ಮ ಹುಟ್ಟದಂತೆ ಮಾಡುವನು. ವಿವೇಕದಿಂದ ಕ್ರಿಯಾಮಾನ ಕರ್ಮವನ್ನು ನಿಗ್ರಹಿಸುವನು. ಆಗಲೆ ಸಂಗ್ರಹವಾಗಿರುವ ಸಂಚಿತ ಕರ್ಮ ಪರಿಣಾಮವನ್ನು ವಿವೇಕ ಶಿಸ್ತು, ಉತ್ತಮ ಸಂಸ್ಕಾರಾದಿಗಳಿಂದ ತಡೆಗಟ್ಟುವನು.

ಕರ್ಮಯೋಗಿ, ಈ ಮೂರು ವಿಧವಾದ ಕರ್ಮಕಾರಣಗಳನ್ನು ಸುಡುವುದಕ್ಕೆ ಪ್ರಯತ್ನಿಸುವನು. ಕರ್ಮವನ್ನು ಮಾಡದೆ ಇದ್ದರೆ ಅಥವಾ ಮರೆತರೆ ಹಿಂದಿರುವ ಸಂಸ್ಕಾರವನ್ನು ನಾಶಮಾಡುವುದಕ್ಕೆ ಆಗುವುದಿಲ್ಲ. ಅದರ ಶಕ್ತಿಯನ್ನು ಧ್ವಂಸ ಮಾಡಬೇಕು, ಅದರ ಬೀಜವನ್ನು ನಾಶಮಾಡಬೇಕು. ಶ್ರೀ ರಾಮಕೃಷ್ಣರು ಈ ಮುಂದಿನ ಉದಾಹರಣೆಗಳ ಮೂಲಕ ವಿವರಿಸುವರು.

ಬೀಜದಲ್ಲಿರುವ ಮೊಳೆಯುವ ಸ್ವಭಾವವನ್ನು ಅದನ್ನು ಹುರಿಯುವುದರಿಂದ ನಾಶ ಮಾಡಬಹುದು. ಕರ್ಮವನ್ನು ಹುರಿದು ಅನುಭವಿಸಬಹುದು. ಅದರಿಂದ ಯಾವ ಪರಿಣಾಮವೂ ಆಗುವುದಿಲ್ಲ. ನಮ್ಮ ಕರ್ಮವನ್ನು ಹುರಿಯುವ ರಹಸ್ಯವನ್ನು ಅರಿತಿರಬೇಕು.

ಸುಟ್ಟ ಹಗ್ಗ ಮತ್ತೊಬ್ಬನನ್ನು ಬಂಧಿಸುವುದಿಲ್ಲ. ಸುಟ್ಟಹಗ್ಗ, ಹಗ್ಗದ ಆಕಾರದಲ್ಲಿಯೇ ನೆಲದ ಮೇಲೆ ಬಿದ್ದಿದೆ. ಅದೊಂದು ಹಗ್ಗದಂತೆಯೇ ಕಾಣುವುದು. ಅದನ್ನು ಊದಿದರೆ ಅದು ಹಾರಿಹೋಗುವುದು. ನಾವು ಕರ್ಮದ ಹಗ್ಗವನ್ನು ದಹಿಸುವ ರಹಸ್ಯವನ್ನು ತಿಳಿದುಕೊಳ್ಳಬೇಕು ಆಗ ನಮ್ಮ ಕರ್ಮಗಳು ನಮ್ಮನ್ನು ಬಂಧಿಸಲಾರವು.

ಸ್ಪರ್ಶಶಿಲೆಗೆ ತಾಕಿದ ಉಕ್ಕಿನ ಕತ್ತಿ ಚಿನ್ನವಾಗುವುದು. ಇನ್ನುಮೇಲೆ ಅದರಿಂದ ಕತ್ತರಿಸುವುದಕ್ಕೆ ಆಗುವುದಿಲ್ಲ. ಚಿನ್ನಕ್ಕೆ ರೂಪಾಂತರ ಹೊಂದಿದ ಕತ್ತಿಯನ್ನು ಅಲಂಕಾ ಕಾರಕ್ಕೇ ಇಟ್ಟಿರುವರು. ಪ್ರತಿಯೊಂದು ಕೆಲಸವೂ ಅಲಂಕಾರದಂತೆ ಇರಲಿ, ಚಿನ್ನದ ಕತ್ತಿಯಾದ ಉಕ್ಕಿನ ಕತ್ತಿಯಂತೆ. ಅದು ಹಿಂದಿನಂತೆ ಚೂಪಾಗಿರುವುದಿಲ್ಲ. ಅದರಿಂದ ಯಾವ ಹತ್ಯಾಕೆಲಸವನ್ನೂ ಮಾಡುವುದಕ್ಕೆ ಆಗುವುದಿಲ್ಲ.

ಕರ್ಮಯೋಗದ ರಹಸ್ಯವನ್ನು ಅರಿತಮೇಲೆ, ಕರ್ಮ ಇನ್ನು ಮೇಲೆ ನಮ್ಮನ್ನು ಬಂಧಿಸಲಾರದು.

ಕರ್ಮಸಿದ್ಧಾಂತಕ್ಕೂ, ಆಗಲೇ ಎಲ್ಲ ಪೂರ್ವನಿಶ್ಚಯವಾಗಿದೆ ಎಂಬ ಸಿದ್ಧಾಂತಕ್ಕೂ ವ್ಯತ್ಯಾಸವಿದೆ. ನೀವು ಬೇಕಾದರೆ ಆ ಕೆಲಸವನ್ನು ಮಾಡಬಹುದು, ಇಲ್ಲದೆ ಇದ್ದರೆ ಇಲ್ಲ.

ಕರ್ಮಿಗೂ ಕರ್ಮಯೋಗಿಗೂ ದೊಡ್ಡ ವ್ಯತ್ಯಾಸವಿದೆ. ಕರ್ಮಿ ಚೆನ್ನಾಗೇನೋ ಕೆಲಸಮಾಡುತ್ತಾನೆ. ಆದರೆ ಅವನು ಕರ್ಮದಿಂದ ಮುಕ್ತನಾಗಲಾರ. ಕೆಲಸಮಾಡುವ ದೃಷ್ಟಿಯಲ್ಲಿ ವ್ಯತ್ಯಾಸವಿದೆ.

ಸರಿಯಾದ ದೃಷ್ಟಿಯನ್ನು ಬೆಳೆಸುವುದಕ್ಕಾಗಿ ಕರ್ಮ ನಿಮಗೆ ಒಂದು ಅವಕಾಶವನ್ನು ಕೊಟ್ಟಿದೆ ಎಂದು ಭಾವಿಸಿ. ಆ ದೃಷ್ಟಿಯೇ ಇವು.

೧. ನೀನು ಕರ್ಮಕ್ಕೆ ಸಾಕ್ಷಿ ಎಂದು ಭಾವಿಸು. ಕರ್ಮದಿಂದ ಏನನ್ನೂ ಆಶಿಸಬೇಡಿ. ನಮ್ಮ ಕರ್ಮವನ್ನು ಕ್ಷಯಮಾಡಿಕೊಳ್ಳುವುದಕ್ಕಾಗಿ ಕರ್ಮ ಮಾಡಬೇಕಾಗಿದೆ ಎಂದು ಮಾಡಿ.

೨. ನಿನ್ನ ಕರ್ಮದ ಮೂಲಕ ನೀನು ದೇವರೊಂದಿಗೆ ಒಂದು ಸಂಬಂಧವನ್ನು ಕಲ್ಪಿಸಿಕೊಳ್ಳುತ್ತಿರುವೆ. ಭಗವಂತನ ಸೇವೆ ಎಂದು ಕರ್ಮವನ್ನು ಮಾಡಿ.

೩. ಕರ್ಮಕ್ಕೋಸ್ಕರ ಕರ್ಮವನ್ನು ಮಾಡಿ. ಪ್ರಚಂಡ ಕರ್ಮದ ಮಧ್ಯದಲ್ಲಿಯೂ ವಿಶ್ರಾಂತಿಯನ್ನು ಪಡೆಯುವುದಕ್ಕೆ ಕರ್ಮವನ್ನು ಮಾಡಿ.

ಇವುಗಳಲ್ಲಿ ನೀವು ಯಾವ ಒಂದು ದೃಷ್ಟಿಯನ್ನು ರೂಢಿಸಿದರೂ ಕರ್ತೃತ್ವಭಾವ ಬರುವುದು. ೧. ಆಗ ಮುಕ್ತಿಯನ್ನು ಪಡೆಯುವುದಕ್ಕೆ ಕರ್ಮ ಸಹಾಯಮಾಡುವುದು ೨. ಕರ್ಮವೇ ಅತ್ಯಂತ ಶ್ರೇಷ್ಠವಾದ ಪೂಜೆ ಆಗುವುದು ೩. ಅದು ನಿಸ್ವಾರ್ಥವಾದ ಕರ್ಮವಾಗುವುದು. ಕರ್ಮಕ್ಕೋಸುಗ ಕರ್ಮವನ್ನು ಮಾಡಿದರೆ ಅದು ನಮ್ಮನ್ನು ಬಂಧಿಸುವುದಿಲ್ಲ. ಕರ್ಮಯೋಗಿ ತನ್ನ ಸ್ವಾರ್ಥವನ್ನು ಮರೆತು, ಅನಾಸಕ್ತನಾಗಿ ಫಲಾಪೇಕ್ಷೆಯಿಲ್ಲದೆ ಕರ್ಮವನ್ನು ಮಾಡುವನು.

ಕರ್ಮಫಲಗಳಿಂದ ಸಂಪೂರ್ಣವಾಗಿ ಬೇರೆ ನಿಲ್ಲಿ.

ಹೊಗಳಿಕೆಯನ್ನು ಸ್ವೀಕರಿಸಬೇಡಿ. ಅದನ್ನು ಅರಗಿಸಿಕೊಳ್ಳಿ. ಒಳ್ಳೆಯದೊ ಕೆಟ್ಟದ್ದೊ, ಸುಖವೊ ದುಃಖವೊ ಎರಡನ್ನೂ ಸ್ವೀಕರಿಸಿ. ಆಗ ನಿಮಗೆ ಒಂದು ಹಾರ ಹಾಕುವನೊ, ಅಥವಾ ಹಳೆಯ ಜೋಡನ್ನು ಎಸೆಯುವನೊ ಅದನ್ನು ನೀವು ಗಮನಿಸುವುದಿಲ್ಲ.

ಅನೇಕ ವೇಳೆ ನಮ್ಮ ಆದರ್ಶಕ್ಕಿಂತ ಕೆಲಸ ಮುಂದೆ ಹೋಗಿರುವುದು. ಮನಸ್ಸು ಕೆಲಸದಮೇಲೆ ನಿಲ್ಲಲಿ. ಮುಂದೆ ಅದರಿಂದ ಒಳ್ಳೆಯದಾಗುವುದೊ ಕೆಟ್ಟದ್ದು ಆಗುವುದೊ ಅದನ್ನು ಕುರಿತು ಚಿಂತಿಸಬೇಡಿ. ಆಗ ಮನಸ್ಸು ಭರವಸೆ, ನಿರೀಕ್ಷಣೆ, ವ್ಯಾಕುಲಗಳಿಂದ ತಾಡಿತವಾಗುವುದಿಲ್ಲ. ಯಾವಾಗಲೂ ಮನಸ್ಸಿನಲ್ಲಿ ಶಾಂತಿಯಿರಲಿ. ಮನಸ್ಸು ಮಾಡುತ್ತಿರುವ ಕೆಲಸದಲ್ಲಿ ತನ್ಮಯವಾಗಲಿ. ನಾವು ಮಾಡಲೇಬೇಕಾದ ಕೆಲಸಗಳಲ್ಲಿ ಈ ಮನೋಭಾವವನ್ನು ರೂಢಿಸಿ.

ಯಾವ ಒಂದು ಕೆಲಸದಲ್ಲಾಗಲಿ ಕರ್ತೃತ್ವದೃಷ್ಟಿ ಅತ್ಯಂತ ಮುಖ್ಯವಾದುದು. ಅತ್ಯಂತ ನಿಸ್ಪೃಹತೆ ಆವಶ್ಯಕ. ನಮ್ಮಲ್ಲಿರುವ ದೋಷಗಳನ್ನು ಒಪ್ಪಿಕೊಳ್ಳುವುದರಿಂದ ನಾವು ದೊಡ್ಡವರಾಗುತ್ತೇವೆ. ತಪ್ಪುಮಾಡಿದಾಗ ಅದು ಸರಿ ಎಂದು ವಾದಿಸುವುದಾಗಲಿ, ಅಥವಾ ಅದನ್ನು ಬಚ್ಚಿಡುವುದಾಗಲಿ ಮಾಡುವುದರಿಂದ ಪ್ರಯೋಜನವಿಲ್ಲ.

ಜೀವನದಲ್ಲಿ ಯಾವಾಗಲೂ ಕೊಡುವುದರ ಕಡೆ ಗಮನವಿರಲಿ, ತೆಗೆದುಕೊಳ್ಳುವುದರ ಕಡೆ ಅಲ್ಲ. ಆಗಲೆ ನಿಮ್ಮಲ್ಲಿ ಸರಿಯಾದ ಕರ್ತೃತ್ವ ಬುದ್ಧಿ ಇರುವುದು. ಆದರೆ ಕೊಡುವಾಗ ಅಹಂಕಾರದಿಂದ ಕೊಡಬೇಡ, ಕೀರ್ತಿಗಾಗಿ ಕೊಡಬೇಡ, ಸ್ವೀಕರಿಸುವವನನ್ನು ನಿಕೃಷ್ಟವಾಗಿ ಕಾಣಬೇಡ. ನೀನು ನಿನ್ನ ಒಳ್ಳೆಯ ಕೆಲಸಗಳಿಂದ ಪ್ರಪಂಚಕ್ಕೆ ಒಳ್ಳೆಯದನ್ನು ಮಾಡುತ್ತಿದ್ದೇನೆ ಎಂದು ಭಾವಿಸಬೇಡ. ನೀನಿಲ್ಲದೆ ಪ್ರಪಂಚ ಸಾಗುವುದು. ಒಳ್ಳೆಯ ಕೆಲಸಗಳಿಂದ ಉದ್ಧಾರವಾಗುವವನು ನೀನೇ. ನಾನು ಇನ್ನೊಬ್ಬನಿಗೆ ದಾನ ಮಾಡುತ್ತಿರುವೆ ಎಂಬ ಭಾವ ಇಲ್ಲದಿರಲಿ.

ಕೊಡುವುದೇ ಭಗವಂತನಿಗೆ ಸೇವೆ. ದುರಹಂಕಾರದಿಂದ ದಾನ ಮಾಡುವುದಲ್ಲ, ಅದನ್ನು ಒಂದು ಸೇವೆಯಂತೆ ಮಾಡು. ನಾವು ಕೊಡುವ ಕಲೆಯಲ್ಲಿ ಪರಿಣಿತರಾದರೆ,

ಜೀವನ ಸಾರ್ಥಕವಾಗುವುದು. ಜೀವನ ಶ್ರೇಷ್ಠವಾಗುವುದು. ಆಗ ಶಕ್ತಿ ಸಂಗ್ರಹವಾಗುವುದು. ಕೊಡುವುದಕ್ಕಾಗಿಯೇ ಜೀವನದಲ್ಲಿ ಬಾಳಬೇಕು.

ಯಾವಾಗ ನೀವು ಕೈಯನ್ನು ಒಡ್ಡುತ್ತೀರೊ, ಆಗ ನನಗೇನೋ ಬೇಕಾಗಿದೆ, ಕೊಡಿ ಎಂದು ಕೇಳುತ್ತೀರಿ. ಆದರೆ ಕೈಗಳನ್ನು ಯಾವಾಗಲೂ ಕೊಡುವುದಕ್ಕೆ ನೀಡಿ.

ಒಮ್ಮೆ ನನಗೆ ಒಬ್ಬ ಬಹಳ ಜಿಪುಣನ ಪರಿಚಯವಿತ್ತು. ಪ್ರತಿದಿನವೂ ಅವನ ಸ್ನೇಹಿತನೊಬ್ಬ, ಅವನಿಗೆ ಏನನ್ನೋ ಕೊಟ್ಟು, ನಾಳೆ ನನಗೆ ಅದನ್ನು ವಾಪಸ್ ಕೊಡು ಎಂದು ಹೇಳುತ್ತಿದ್ದ.

ಅವನು ತನ್ನ ಸ್ನೇಹಿತನಿಗೆ ನೀನು ಕೊಡುವುದೇಕೆ ಮತ್ತೆ ಪುನಃ ನನಗೆ ಅದನ್ನು ಹಿಂತಿರುಗಿ ಕೊಡು ಎಂದು ಹೇಳುವುದೇಕೆ ? ಎಂದು ಕೇಳಿದ. ಅದಕ್ಕೆ ಆತ, ನಾನು ನಿನಗೆ ಕೊಡುವುದನ್ನು ಕಲಿಸುವುದಕ್ಕಾಗಿ ಹೀಗೆ ಮಾಡುತ್ತಿದ್ದೇನೆ ಎಂದ.

ಕದಿಯುವ ಸ್ವಭಾವಿರುವ ಮಗುವಿಗೆ, ಏನನ್ನಾದರೂ ಕೊಡುವುದಕ್ಕೆ ಕಲಿಸಬೇಕು. ಆಗ ಅದು ಕ್ರಮೇಣ ಉತ್ತಮವಾಗುವುದು. ನಿಮ್ಮಲ್ಲಿರುವುದನ್ನೆಲ್ಲಾ ಕೊಡಿ. ನೀವು ದೇವರಿಗೇ ಕೊಡುತ್ತಿದ್ದೀರಿ. ಅದೇನೋ ನಿಮಗೆ ಕಷ್ಟವಾಗಿ ಕಾಣಬಹುದು. ಆದರೆ ನಾವು ತುಂಬಾ ಉದಾತ್ತ ವಿಷಯವನ್ನು ಹೇಳುತ್ತಿರುವೆವು.

ನೀವು ಸೇವಾ ದೃಷ್ಟಿಯಿಂದ ದೇವರಿಗೆ ಕೊಟ್ಟರೆ, ಅಥವಾ ಯಾವುದಾದರೂ ಕೆಲಸ ಮಾಡಿದರೆ, ಆ ಕರ್ಮ ಕರ್ಮವಾಗುವುದಿಲ್ಲ. ಅದು ಸೇವೆಯಾಗುವುದು, ಭಗವಂತನ ಪೂಜೆಯಾಗುವುದು. ಇದು ಕರ್ಮಬಂಧನಕ್ಕೆ ನಿಮ್ಮನ್ನು ಗುರಿಮಾಡುವುದಿಲ್ಲ.

ಕರ್ತೃತ್ವ ದೃಷ್ಟಿಯೊಂದೇ ಕೊನೆಗೆ ಉಳಿಯುವುದು. ನೀವು ಮಾಡುವ ಕರ್ಮದಿಂದ ನಿಮ್ಮ ಚಿತ್ತ ಶುದ್ಧಿ ಆಗುತ್ತಿದೆ ಎಂದು ಭಾವಿಸಿ. ನಿಮ್ಮ ನಿಜವಾದ ಆತ್ಮ ಎಲ್ಲಾ ಕಾರ್ಯಗಳಿಗೂ ಸಾಕ್ಷಿಯಂತೆ ನಿಲ್ಲಲಿ.

ಒಂದು ಸಲ ಗೋಪಿಯರು ದೇವಸ್ಥಾನಕ್ಕೆ ನೈವೇದ್ಯವನ್ನು ತೆಗೆದುಕೊಂಡು ಹೋಗುತ್ತಿದ್ದರು. ದಾರಿಯಲ್ಲಿ ದೊಡ್ಡ ನದಿ ಅಡ್ಡಲಾಗಿ ಬಂತು. ಅದನ್ನು ಹಾಗೆಯೇ ದಾಟುವಂತೆ ಇರಲಿಲ್ಲ. ಹತ್ತಿರದಲ್ಲಿ ಒಬ್ಬ ಸಾಧುವಿನ ಪರ್ಣಶಾಲೆ ಕಂಡಿತು. ಅವರು ಅವನಿಂದ ಏನನ್ನಾದರೂ ಸಹಾಯವನ್ನು ಕೋರೋಣ ಎಂದು ಅಲ್ಲಿಗೆ ಹೋದರು. ಸಾಧು ಗೋಪಿಯರಿಗೆ, ಮೊದಲು ನಿಮ್ಮಲ್ಲಿರುವ ತಿಂಡಿಯನ್ನು ಕೊಡಿ ಎಂದು ಕೇಳಿದ. ಗೋಪಿಯರು ತಾವು ತಂದುದನ್ನೆಲ್ಲ ಕೊಟ್ಟರು. ಅವರು ಅದನ್ನೆಲ್ಲಾ ತಿಂದು ನದಿ ದಡಕ್ಕೆ ಹೋಗಿ "ನಾನು ಏನೂ ತಿಂದಿಲ್ಲದೆ ಇದ್ದರೆ, ಈ ಗೋಪಿಯರು ಹೋಗುವುದಕ್ಕೆ ನದಿ ದಾರಿ ಕೊಡಲಿ" ಎಂದರು.

ಗೋಪಿಯರು ಸಾಧುವಿನ ಹಿಂದೆ ನಿಂತುಕೊಂಡಿದ್ದರು. ಅವರು ಸಾಧು ಹೇಳುವುದನ್ನು ಕೇಳಿದಾಗ ಆಶ್ಚರ್ಯವಾಯಿತು. ಆದರೆ ನದಿ ದಾರಿ ಕೊಟ್ಟಿತು. ಗೋಪಿಯರು ನಡೆದು ಎದುರಿಗೆ ಇರುವ ದಡವನ್ನು ಸೇರಿದರು. ಸಾಧುವಿಗೆ ನಾನು ಎಂಬುದು, ದೇಹ, ಇಂದ್ರಿಯಗಳಿಗೆ ಅತೀತ ಎಂಬುದು ಗೊತ್ತಿತ್ತು. ಅವನು ತಾನು ಕೇವಲ ಸಾಕ್ಷಿ ಎಂಬ ಮನೋಭಾವದಲ್ಲಿ ಆರೂಢನಾಗಿದ್ದನು.

ಸ್ವಾಮಿ ವಿವೇಕಾನಂದರು ಬೋಧಿಸುವ ಕರ್ಮಯೋಗದ ಪಲ್ಲವಿಯೆ, "ಸ್ವಾರ್ಥವನ್ನು ಬೇರುಸಹಿತ ಕಿತ್ತೊಗೆಯಿರಿ. ನಿಮ್ಮ ಜೀವನದಲ್ಲಿ ಮಾಡಬೇಕಾದ ಕೆಲಸವನ್ನು ಮಾಡಿ ಮುಕ್ತರಾಗಿ"

ಒಂದು ಸಲ ಒಬ್ಬ ಕಳ್ಳನಿದ್ದ. ಅವನು ಕದಿಯುವುದು, ಇತರರನ್ನು ಪೀಡಿಸುವುದು, ಇದರಲ್ಲೆ ಕಳೆಯುತ್ತಿದ್ದ. ಅವನ ಮನಸ್ಸಿನಲ್ಲಿ ಪಶ್ಚಾತ್ತಾಪ ಎಂಬುದೇ ಇರಲಿಲ್ಲ. ಅತ್ಯಂತ ಪಾಪಕರವಾಗಿದ್ದ ಕೆಲಸಗಳನ್ನು ಮಾಡುವುದಕ್ಕೂ ಅವನು ಹಿಂದೆಗೆಯುತ್ತಿರಲಿಲ್ಲ. ಆದರೆ ಆ ಮನುಷ್ಯ ತನ್ನ ಹೆಂಡತಿ ಮಕ್ಕಳನ್ನು ತುಂಬಾ ಪ್ರೀತಿಸುತ್ತಿದ್ದ. ಈ ಮಹಾ ಪಾಪಿಯ ಹೃದಯದಲ್ಲಿ ಇದೊಂದು ಸ್ವರ್ಣರೇಖೆ ಇತ್ತು. ಆದರೆ ಹಲವು ದಿನ ಇವನು ಸುಖವಾಗಿರಲಿಲ್ಲ. ಒಂದು ಸಲಿ ವಿಪತ್ತಿನಲ್ಲಿ ಅವನು ತನ್ನ ಹೆಂಡತಿ ಮಕ್ಕಳನ್ನೆಲ್ಲ ಕಳೆದುಕೊಂಡ. ಆಗ ಅವನು ಒಬ್ಬನೇ ಉಳಿದುಕೊಂಡ. ಹಿಂದೆ ಮಾಡಿದ ಪಾಪಕೃತ್ಯಗಳ ನೆನಪೊಂದೇ ಈಗ ಅವನ ಸ್ನೇಹಿತರಾಗಿದ್ದವು.

ಅಕಸ್ಮಾತ್ ಆದ ವಿಪತ್ತಿನಿಂದ ಒಂದು ಕೆಲಸವಾಯಿತು. ಅವನನ್ನು ಅಂತರ್ಮುಖಿಯನ್ನಾಗಿ ಮಾಡಿತು. ಆದರೆ ಅಲ್ಲಿ ಅಂಧಕಾರದಿಂದ ಆವೃತವಾದ ಅಂಧಕಾರವಲ್ಲದೆ ಬೇರೇನೂ ಇರಲಿಲ್ಲ. ಆಗ ಅವನಿಗೆ ತಾನು ಮಾಡಿದ್ದು ಪಾಪ ಎಂದು ಪಶ್ಚಾತ್ತಾಪವಾಯಿತು. ಅವನು ತಾನು ಹಿಂದೆಮಾಡಿದ ಪಾಪ ಕೆಲಸವನ್ನು ಚಿಂತಿಸುತ್ತಿರುವಾಗ, ತಾನು ಮಾಡಿದ ೫೦ ಕೊಲೆಗಳ ನೆನಪಾಯಿತು. ಅದನ್ನು ಸಹಿಸುವುದಕ್ಕೆ ಆಗಲಿಲ್ಲ. ಇಂತಹ ಮಹಾಪಾಪದಿಂದ ಪಾರಾಗುವುದು ಹೇಗೆ ಎಂದು ಆಲೋಚಿಸಿದ. ಯಾರಾದರೂ ಸಾಧುಗಳ ಹತ್ತಿರ ಹೋಗಿ ಎಲ್ಲವನ್ನೂ ಹೇಳಿಕೊಳ್ಳೋಣ ಎಂದು ಭಾವಿಸಿದ.

ಕೆಲವು ಕಾಲ ಹುಡುಕಾಡಿದ ಮೇಲೆ, ಒಬ್ಬ ಸಾಧುವಿನ ಆಶ್ರಮಕ್ಕೆ ಬಂದ. ಕಳ್ಳ ತನ್ನ ಮನಸ್ಸಿನಲ್ಲಿದ್ದುದನ್ನೆಲ್ಲ ಹೇಳಿದ. ಸಾಧು ಅವನಿಗೆ ತನ್ನ ಆಶ್ರಮದಲ್ಲಿಯೇ ಇರುವಂತೆ ಹೇಳಿದರು. ಅಲ್ಲೀ ಇರುವ ಇತರ ಸಾಧುಗಳಿಗೆ ಸೇವೆ ಮಾಡುವಂತೆ ಹೇಳಿದರು. ಸಾಧುಸಂಗದಿಂದ ಆತ ಕ್ರಮೇಣ ಉತ್ತಮನಾದ. ಆದರೆ ತನ್ನ ಪಾಪವೆಲ್ಲ ಬಿಟ್ಟುಹೋಗಿದೆ ಎಂದು ನಂಬಲಾಗಲಿಲ್ಲ. ಸಾಧುವಿನ ಮೇಲೆ ಇವನಿಗೆ ಬಹಳ ಗೌರವ ಇತ್ತು. ಅವನು ಸಾಧುವಿನ ಪ್ರೇಮವನ್ನು ಅನುಮಾನಿಸಲಿಲ್ಲ. ಆದರೆ ತನ್ನ ಪಾಪದಿಂದ ಪಾರಾಗಬೇಕೆಂದು ಆಲೋಚಿಸಿದ. ಇದಕ್ಕಾಗಿ ಅವನು ಸಾಧುವನ್ನು, ತನಗೆ ತೀರ್ಥಯಾತ್ರೆ ಮಾಡಿ, ಪವಿತ್ರ ನದಿಯಲ್ಲಿ ಮಿಂದು ತನ್ನ ಪಾಪವನ್ನು ಕಳೆದುಕೊಳ್ಳುತ್ತೇನೆ ಎಂದು ಕೇಳಿದ.

ಸಾಧು ತಕ್ಷಣವೇ ಒಪ್ಪಿಕೊಂಡರು. ಒಂದು ಕಪ್ಪು ಬಾವುಟವನ್ನು ನಿನ್ನ ಜತೆಯಲ್ಲಿ ತೆಗೆದುಕೊಂಡು ಹೋಗು ಎಂದು ಕೊಟ್ಟರು. ಮಗು, ಇದನ್ನು ತೆಗೆದುಕೊಂಡು ಹೋಗು. ಈ ಕಪ್ಪು ಬಾವುಟದಲ್ಲಿ ನಿನ್ನ ಪಾಪಗಳೆಲ್ಲ ಇವೆ. ಇದು ಬಿಳುಪಾದಾಗ, ನೀನು ಎಲ್ಲ ಪಾಪಗಳಿಂದಲೂ ಮುಕ್ತನಾದೆ ಎಂದು ಭಾವಿಸು ಎಂದರು. ನೀನು ಹಿಮದಂತೆ ಪರಿಶುದ್ಧನಾಗಿ ಬಾ ಎಂದರು.

ಕಳ್ಳ ಎಲ್ಲಾ ತೀರ್ಥ ಸ್ಥಳಕ್ಕೆ ಹೋಗಿ ಪೂಜೆ ಮಾಡಿದ. ಎಲ್ಲಾ ಪವಿತ್ರ ನದಿಗಳ

ಲ್ಲಿಯೂ ಸ್ನಾನ ಮಾಡಿದ. ಪ್ರತಿಯೊಂದು ಸಲ ಪೂಜೆ ಅಥವಾ ಸ್ನಾನ ಮಾಡಿದ ಮೇಲೆ ತನ್ನ ಗಂಟಿನಲ್ಲಿದ್ದ ಕಪ್ಪು ಬಾವುಟವನ್ನು ತೆಗೆದು ನೋಡುತ್ತಿದ್ದ, ಅದು ಎಷ್ಟು ಬಿಳುಪಾಗಿದೆ ಎಂದು. ಆದರೆ ಅದು ಎಂದಿನಂತೆಯೇ ಕಪ್ಪಾಗಿತ್ತು, ದುರ್ದೈವ ವಶದಿಂದ.

ಇನ್ನು ಯಾವ ತೀರ್ಥಸ್ಥಳವೂ ಇಲ್ಲ, ಪ್ರಾಯಶ್ಚಿತ್ತ ಕರ್ಮವೂ ಇಲ್ಲ ಎಂದು ಗೊತ್ತಾದ ಮೇಲೆ, ತನ್ನ ಪಾಪದಿಂದ ಕೊರಗುತ್ತ ಸಾಧುವಿಗೆ ಕೊನೆಗಾಲದವರೆಗೆ ಸೇವೆ ಮಾಡಿಕೊಂಡಿರೋಣ ಎಂದು ಹಿಂತಿರುಗುತ್ತಿದ್ದ.

ಅವನು ಹಲವು ಊರುಗಳನ್ನು ದಾಟಿ, ಹಲವು ಕಾಡುಗಳ ಮೂಲಕ ನಡೆದುಕೊಂಡು ತನ್ನ ಗುರುವಿನ ಪರ್ಣಶಾಲೆಗೆ ಹಿಂತಿರುಗುತ್ತಿದ್ದ. ಒಂದು ದಿನ ಸಾಯಂಕಾಲ, ಆಶ್ರಮಕ್ಕೆ ಕೆಲವು ಮೈಲಿಗಳ ದೂರಕ್ಕೆ ಬಂದ. ಅಲ್ಲಿ ರಾತ್ರಿ ಕಳೆದು ಮಾರನೆ ದಿನ ಆಶ್ರಮಕ್ಕೆ ನಡೆದುಕೊಂಡು ಹೋಗೋಣ ಎಂದು ಭಾವಿಸಿದ. ಆಶ್ರಮದಲ್ಲಿ ಅವೇಳೆ ರಾತ್ರಿ ಸಮಯದಲ್ಲಿ ಹೋಗಿ ಅವರಿಗೆ ತೊಂದರೆ ಕೊಡಲು ಇಚ್ಛಿಸಲಿಲ್ಲ. ಅವನ ಸುತ್ತಲೂ ಪ್ರಶಾಂತ ವಾತಾವರಣವಿತ್ತು. ಮಿಡತೆಗಳ ಜೀ ಧ್ವನಿಯೊಂದೇ ಅದಕ್ಕೆ ಭಂಗ ತರುತ್ತಿತ್ತು. ಪ್ರಕೃತಿ ಇಷ್ಟು ರಮ್ಯವಾಗಿ ಎಂದೂ ಕಂಡಿರಲಿಲ್ಲ. ಆ ಗಂಭೀರವಾದ ರಾತ್ರಿಯಲ್ಲಿ ಎಲ್ಲಾ ಕಡೆಯೂ ಸೌಂದರ್ಯವಿತ್ತು. ತನ್ನ ಪಾಪದ ಹೃದಯಾಂಧಕಾರದಲ್ಲಿ ಮಾತ್ರ ಅಶಾಂತಿ ಇರಲಿಲ್ಲ. ಅದನ್ನು ನೆನಸಿಕೊಂಡು ಗಳಗಳನೆ ನೀರು ಸುರಿಸುತ್ತ ಅತ್ತ.

ಇದ್ದಕ್ಕೆ ಇದ್ದಂತೆಯೇ ಮೌನಭಂಗವಾಯಿತು. ಕಷ್ಟದಲ್ಲಿ ಸಿಕ್ಕಿದ ಹೆಂಗಸಿನ ಆರ್ತನಾದ ಕೇಳಿಸಿತು. ಈ ಶಬ್ದ ಬಂದ ಕಡೆಗೆ ಇವನು ತಕ್ಷಣವೇ ಓಡಿದ. ಕಳ್ಳನಂತೆ ಸಪ್ಪಳವಿಲ್ಲದೆ ಧ್ವನಿ ಬರುತ್ತಿದ್ದ ಕಡೆಗೆ ಹೋದ. ಅಲ್ಲಿ ಒಂದು ಸ್ವಲ್ಪ ಬಯಲಿತ್ತು. ಅಲ್ಲಿ ಕಂಡ ದೃಶ್ಯದಿಂದ ಇವನ ರಕ್ತವೆಲ್ಲ ಹೆಪ್ಪುಗಟ್ಟಿತು. ಮೂರು ಜನ ಪುಂಡರು ಒಬ್ಬ ಹೆಂಗಸನ್ನು ಹಿಂಸಿಸುತ್ತಿದ್ದರು. ಅದನ್ನು ನೋಡಿ ಇವನು ಆಲೋಚನೆ ಮಾಡಿದ. “ನಾನು ಈ ಮೂರು ಜನರನ್ನು ಒಬ್ಬನೇ ಎದುರಿಸಲು ಸಾಧ್ಯವೇ ? ಇವರಲ್ಲಿ ಯಾರಾದರೂ ಒಬ್ಬನಿಗೆ ಪೆಟ್ಟು ಬಿದ್ದು ಸತ್ತರೂ ಉಳಿದ ಇಬ್ಬರು ಓಡಿಹೋಗಬಹುದು. ಒಂದು ವೇಳೆ ಓಡಿಹೋಗದೆ ನನ್ನ ಮೇಲೆ ಬಿದ್ದರೆ, ನನ್ನ ಹಿಂದಿನ ಅಭ್ಯಾಸ ಬಲದಿಂದ ಹೋರಾಡುವುದಕ್ಕೆ ಆಗುವುದಿಲ್ಲವೆ ?”

ಆದರೆ ಮತ್ತೊಂದು ಆಲೋಚನೆ ಅವನ ಮನಸ್ಸಿನಲ್ಲಿ ಬಂತು. “ಈ ಅಬಲೆ ಹೆಂಗಸನ್ನು, ಒಬ್ಬನೊ, ಇಬ್ಬರೊ, ಮೂರು ಜನರನ್ನೊ ಕೊಂದು ಬಿಡಿಸಿದರೆ, ಇವಳೇನೊ ಕಷ್ಟದಿಂದ ಪಾರಾಗುತ್ತಾಳೆ. ಆದರೆ ನನ್ನ ಪಾಡೇನು ? ನಾನಾಗಲೇ ೯೨ ಕೊಲೆ ಮಾಡಿದ್ದೇನೆ. ಇನ್ನು ಮೂರು ಕೊಲೆಯ ಭಾರವನ್ನು ಹೆಚ್ಚು ಹೊರಬೇಕು”.

ಆಲೋಚನೆ ಮಾಡುವುದಕ್ಕೆ ಹೆಚ್ಚು ಕಾಲವಿರಲಿಲ್ಲ. ೯೨ ಅಥವಾ ೯೫ ಏನಾದರೇನು ? ನಾನು ನರಕಕ್ಕೆ ಹೋದರೂ ಚಿಂತೆಯಿಲ್ಲ. ಇವಳನ್ನು ಬಿಡುಗಡೆ ಮಾಡುತ್ತೇನೆ ಎಂದ.

ಯಾವಾಗ ತನ್ನ ಅಹಂಕಾರವನ್ನು ಕಿತ್ತು, ಆಚೆಗೆ ಎಸೆದನೊ, ಆಗ ಅವನಿಗೆ ಇಪ್ಪತ್ತು ಸಿಂಹಗಳ ಶಕ್ತಿ ಬಂದಂತಾಯಿತು. ಸಿಂಹ ಘರ್ಜನೆ ಮಾಡಿ ಒಬ್ಬನ ಮೇಲೆ ಬಿದ್ದು ಪ್ರಾಣ ಹೋಗುವಂತೆ ಹೊಡೆದ. ಉಳಿದಿಬ್ಬರು ಓಡಿ ಹೋದರು. ಆ ಹೆಂಗಸು ಇವನ ಕೈಗಳಲ್ಲಿ ಪ್ರಜ್ಞೆ ತಪ್ಪಿಬಿದ್ದಳು.

ಮಾರನೆ ದಿನ ಬೆಳಗ್ಗೆ ನಡುಗುತ್ತಿದ್ದ ಹುಡುಗಿಯನ್ನು ಆಶ್ರಮಕ್ಕೆ ಕರೆದುಕೊಂಡು ಹೋದ. ಸಾಧು ಸಹೋದರರು ಇವನನ್ನು ಸ್ವಾಗತಿಸಿದರು. ಅವರಿಗೆ ಆಶ್ಚರ್ಯವಾದರೂ ಏನನ್ನೂ ಪ್ರಶ್ನೆ ಕೇಳಲಿಲ್ಲ. ಅವರು ಹೆಂಗಸಿಗೆ ವಿಶ್ರಾಮಕ್ಕೆ ಅನುಕೂಲಮಾಡಿಕೊಟ್ಟರು. ಅವಳೊಡನೆ ಬಂದವನಿಗೆ ಸಾಧುವನ್ನು ನೋಡುವುದಕ್ಕೆ ಮುಂಚೆ ಸುಧಾರಿಸಿಕೊ ಎಂದರು.

ಅನಂತರ ಸಾಧುವಿನ ಪದತಳದಲ್ಲಿ ಕುಳಿತುಕೊಂಡು ಹಿಂದಿನ ದಿನ ರಾತ್ರಿ ನಡೆದ ಘಟನೆಯನ್ನು ಹೇಳಿದನು. ಎಲ್ಲರಿಗೂ ಇವನು ಶುದ್ಧನಾಗಿ ಸ್ವತಂತ್ರನಾಗಿರುವುದು ಕಂಡು ಬಂದಿತು. ಅವನ ಯಾತ್ರೆ ವಿಷಯ ಅವನ ಕಪ್ಪುಬಾವುಟದ ವಿಷಯ ಕೇಳಿದಾಗ ಆ ಕೆಲಸಕ್ಕೆ ಬಾರದ ವಿಷಯವನ್ನು ಕುರಿತು ಈಗ ಚಿಂತಿಸುತ್ತಿಲ್ಲ ಎಂದು ಹೇಳಿದ. ಅನಂತರ ಅವನು ಗುರುಗಳಿಗೆ, "ತೆಗೆದುಕೊಳ್ಳಿ ಗುರುಗಳೇ, ನಿಮ್ಮ ಕಪ್ಪುಬಾವುಟವನ್ನು. ಅದು ಇನ್ನೂ ಕಪ್ಪಗಿದೆ. ಅದನ್ನು ನಾನು ಗಮನಿಸುವುದೇ ಇಲ್ಲ. ಇಲ್ಲಿ ನಾನು ಸಾಯುವ ಪರಿಯಂತ ಇರುತ್ತೇನೆ" ಎಂದ.

ಬಾವುಟವನ್ನು ತೆಗೆಯುವುದಕ್ಕೆ ತನ್ನ ಗಂಟಿಗೆ ಕೈಹಾಕಿದ. ಕಪ್ಪುಬಾವುಟವು ಈಗ ಹಿಮದಂತೆ ಬೆಳ್ಳಗಾಗಿತ್ತು. ಅದನ್ನು ನೋಡಿದಾಗ ಅವನಿಗೇನೂ ಅನ್ನಿಸಲಿಲ್ಲ. "ಕಪ್ಪೊ, ಬಿಳುಪೊ ಅದನ್ನು ನಿಮ್ಮ ಅಡಿದಾವರೆಗೆ ಸಮರ್ಪಿಸುವೆನು. ನಾನು ನನ್ನನ್ನೇ ಮರೆತಿರುವೆನು. ನನಗೆ ಮುಂದೆ ಏನಾಗುವುದೋ ಅದನ್ನು ಕುರಿತು ಚಿಂತಿಸುವುದಿಲ್ಲ. ಬದುಕಿರುವ ತನಕ ನಿಮ್ಮ ಸೇವೆಯನ್ನು ಮಾಡುವೆನು" ಎಂದ.

ಆಗ ಸಾಧು ಹೀಗೆಂದರು: "ಎಲ್ಲಿಯವರೆಗೆ ಒಬ್ಬ ತನ್ನ ಪುಣ್ಯಕ್ಕೆ ಆಶೆ ಪಡುವನೊ, ಅಲ್ಲಿಯವರೆಗೆ ಅವನು ಪಾಪದಿಂದ ಹೇಗೆ ಪಾರಾದಾನು? ಅವೆರಡೂ ಒಂದೇ ನಾಣ್ಯದ ಎರಡು ಕಡೆಗಳಂತೆ. ಒಂದನ್ನು ಸ್ವೀಕರಿಸಿದರೆ ಮತ್ತೊಂದನ್ನು ಸ್ವೀಕರಿಸಬೇಕಾಗುವುದು. ಎಲ್ಲಿಯವರೆಗೆ ನೀನು ಪುಣ್ಯಕರ್ಮ ಫಲಕ್ಕೆ ಆಸಕ್ತನಾಗಿದ್ದೆಯೋ, ಅಲ್ಲಿಯವರೆಗೆ ಕಪ್ಪು ಬಾವುಟ ಬಿಳಿ ಆಗಲಿಲ್ಲ. ಆದಕಾರಣ ನೀನು ಇಷ್ಟೊಂದು ಪವಿತ್ರ ನದಿಯಲ್ಲಿ ಮಿಂದರೂ ದೇವರ ಪೂಜೆ ಮಾಡಿದರೂ, ಕಪ್ಪು ಬಾವುಟ ಬಿಳಿ ಆಗಲಿಲ್ಲ. ನೀನು ಸ್ವಲ್ಪ ಉತ್ತಮ ಸಂಸ್ಕಾರವನ್ನೇನೋ ಸಂಗ್ರಹಿಸಿರಬಹುದು. ಯಾವಾಗ ನೀನು ದೇವರದಯೆಯಿಂದ ಪುಣ್ಯ ಕರ್ಮದ ವಶದಿಂದಲೂ ಪಾರಾದೆಯೊ, ಆಗ ಕರ್ಮದಿಂದ ಪಾರಾಗಿ ಮುಕ್ತನಾದೆ."

"ವತ್ಸ, ಪವಿತ್ರತೆ, ಮತ್ತು ಸ್ವಾತಂತ್ರ್ಯವೆಲ್ಲ ನಿಸ್ವಾರ್ಥತೆ. ಸ್ವಾರ್ಥತ್ಯಾಗವೇ ನಿರ್ಭಯತೆ. ನಿರ್ಭಯತೆಯೇ ಪುಣ್ಯ."

೨

ಕರ್ಮಯೋಗ ನೀವು ಮಾಡುತ್ತಿರುವ ಕೆಲಸಕ್ಕೆ ಅಡ್ಡಿಬರುವುದಿಲ್ಲ. ಅದನ್ನು ಇನ್ನೂ ಚೆನ್ನಾಗಿ ಮಾಡುವುದಕ್ಕೆ ಸಹಾಯಮಾಡುವುದು. ಕರ್ಮಯೋಗದ ದೃಷ್ಟಿಯಿಂದ ನೀವು ಕೆಲಸವನ್ನು ಮಾಡಿದರೆ, ಅದು ರಸ್ತೆಗುಡಿಸುವ ಕೆಲಸವಾಗಿರಬಹುದು, ಅದನ್ನು ನಿಮ್ಮಷ್ಟು ಚೆನ್ನಾಗಿ ಪ್ರಪಂಚದಲ್ಲಿ ಯಾರೂ ಮಾಡುವುದಿಲ್ಲ ಹಾಗೆ ಮಾಡುವಿರಿ. ಅದೂ ಅಲ್ಲದೆ ನೀವು ದೊಡ್ಡ ಯೋಗಿಗಳಾಗುವಿರಿ. ಕರ್ಮಯೋಗ ದೃಷ್ಟಿ, ಮಾನಸಿಕವಾಗಿ ಆಗಲಿ, ಬಾಹ್ಯಕವಾಗಿ ಆಗಲಿ ಅತ್ಯಂತ ಚೆನ್ನಾಗಿ ಪರಿಣಾಮಕಾರಿಯಾಗುವುದು. ನೀವು ನಿಮ್ಮ ಜೀವನೋಪಾಯಕ್ಕೆ ಮಾಡುವ ಕಸಬನ್ನೇ ದೊಡ್ಡ ಸಾಧನೆಯನ್ನಾಗಿ ಮಾಡಿ ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿಯಬಹುದು. ನನ್ನ ಸ್ನೇಹಿತನೊಬ್ಬ ಹೀಗೆ ಹೇಳುತ್ತಿದ್ದ. ಜೀವನೋಪಾಯಕ್ಕೆ ಕೆಲಸಮಾಡುವುದು, ಬರೀ ಅದಕ್ಕೆ ಮಾತ್ರ. ಅದರಿಂದ ಮತ್ತಾವ ಪ್ರಯೋಜನವೂ ಇಲ್ಲ ಎನ್ನುತ್ತಿದ್ದ. ಜೀವನೋಪಾಯದ ಹುದ್ದೆಯನ್ನೇ ಆಧ್ಯಾತ್ಮಿಕ ಸಾಧನೆಯನ್ನಾಗಿ ಮಾರ್ಪಡಿಸಬಹುದು. ನೀವು ಜೀವನದಲ್ಲಿ ಕಟುಕನ ವೃತ್ತಿಯನ್ನು ಆಶ್ರಯಿಸಿದ್ದರೂ, ಕರ್ಮಯೋಗದ ಸಹಾಯದಿಂದ ನೀನು ದೇವಮಾನವನಾಗಬಹುದು. ಅದಕ್ಕೆ ಒಂದು ಕಥೆಯನ್ನು ಹೇಳುತ್ತೇನೆ.

ಹಲವು ವರ್ಷಗಳ ಕಾಲ ಕಾಡಿನಲ್ಲಿ ತಪಸ್ಸುಮಾಡಿದ್ದ ಯೋಗಿಯೊಬ್ಬನಿದ್ದ. ಅವನು ಆಸನ ಪ್ರಾಣಾಯಾಮ ಮುಂತಾದುವನ್ನೆಲ್ಲ ಮಾಡುತ್ತಿದ್ದ. ಒಂದು ದಿನ ಅವನು ಒಂದು ಮರದ ಕೆಳಗೆ ಕುಳಿತಿದ್ದ. ಆಗ ಮರದಮೇಲಿದ್ದ ಹಕ್ಕಿ ಇವನ ಮೇಲೆ ಹಿಕ್ಕೆಯನ್ನು ಹಾಕಿತು. ಯೋಗಿ ಕೋಪದಿಂದ ಅದನ್ನು ನೋಡಿದ. ಇವನ ಕೋಪದ ತಾಪದಿಂದ ಹಕ್ಕಿ ಕೆಳಕ್ಕೆ ಸತ್ತುಬಿದ್ದು, ಉರಿದು ಹೋಯಿತು. ಇಷ್ಟು ವರುಷಗಳ ತಪಸ್ಸು ಸಾರ್ಥಕವಾಯಿತು ಎಂದು ಭಾವಿಸಿದ.

ಅಂದಿನ ಸಂಜೆ ಹತ್ತಿರದ ಹಳ್ಳಿಗೆ ಬಂದು ಒಂದು ಮನೆಗೆ ಭಿಕ್ಷೆಗೆ ಹೋದ. ಒಳಗಿನಿಂದ ಹೆಂಗಸಿನ ಧ್ವನಿಯೊಂದು ತಾನು ಸೇವೆಮಾಡುತ್ತಿದ್ದೇನೆ, ಸ್ವಲ್ಪ ತಾಳಿ ಎಂದು ಉತ್ತರ ಬಂತು. ಯೋಗಿಗೆ ತುಂಬಾ ಕೋಪ ಬಂತು. ಅವತ್ತು ತಾನೆ ಅವನಿಗೆ ಗೊತ್ತಾಗಿತ್ತು ತನಗೆ ಎಷ್ಟು ತಪೋಶಕ್ತಿ ಇದೆ ಎಂದು. ಮತ್ತೊಂದು ಸಲ ಸ್ವಲ್ಪ ಕೋಪದಿಂದಲೇ ಕರೆದ. ಪುನಃ ಒಳಗಿನಿಂದ, "ಯೋಗಿಗಳೇ ಸ್ವಲ್ಪ ತಾಳಿ, ನೀವೇನು ನನ್ನನ್ನು ಸುಟ್ಟುಬಿಡುವುದಕ್ಕೆ ಒಂದು ಸಣ್ಣ ಹಕ್ಕಿ ಎಂದು ಭಾವಿಸಬೇಡಿ" ಎಂದಳು.

ಯೋಗಿಗೆ ಈ ಮಾತನ್ನು ಕೇಳಿ ಆಶ್ಚರ್ಯವಾಯಿತು. ಕೊನೆಗೆ ಗೃಹಿಣಿ ಮನೆಯ ಬಾಗಿಲಿಗೆ ಬಂದಾಗ ಹಕ್ಕಿಯ ಪ್ರಸಂಗ ಈಕೆಗೆ ಹೇಗೆ ಗೊತ್ತಾಯಿತು ಎಂದು ಕೇಳಿದ. ಅದಕ್ಕೆ ಅವಳು ತಾನೂ ಕೂಡ ಒಂದು ಯೋಗದ ಮಾರ್ಗವನ್ನು ಅನುಸರಿಸುತ್ತಿದ್ದೇನೆ ಎಂದಳು. ಪುನಃ ಯೋಗಿ ಪ್ರಶ್ನಿಸಿದಾಗ ಆ ಹಳ್ಳಿಗೆ ಹೋಗಿ ಅಲ್ಲೊಬ್ಬ ಕಟುಕನಿದ್ದಾನೆ. ಅವನನ್ನು ನೋಡಿ. ಅವನು ನಿಮಗೆ ಎಲ್ಲವನ್ನು ಹೇಳುವನು ಎಂದು ಹೇಳಿದಳು.

ಏನು ಕಟುಕನನ್ನು ನೋಡುವುದೆ! ಎಂದು ಅಚ್ಚರಿಯಿಂದ ಯೋಗಿ ಕೇಳಿದ.

ಹೌದು ಆ ಕಟುಕನನ್ನು ಎಂದು ಗೃಹಿಣಿ ಹೇಳಿದಳು.

ಕಟುಕ ತನಗೆ ಯೋಗದ ವಿಷಯವಾಗಿ ಏನು ಕಲಿಸಿಯಾನು ಎಂದು ಯೋಗಿ ಅಚ್ಚರಿಪಟ್ಟನು. ಯೋಗಿಯ ಕುತೂಹಲ ಕೆರಳಿತ್ತು. ಅವನು ಹಳ್ಳಿಗೆ ಹೋದನು.— ದೂರದಿಂದ ಕಟುಕ ತನ್ನ ವ್ಯವಹಾರದಲ್ಲಿ ನಿರತನಾಗಿದ್ದುದನ್ನು ನೋಡಿದ. ಅದನ್ನು ನೋಡಿ ಜುಗುಪ್ಸೆಯಾಗಿ ಹಿಂತಿರುಗಿ ಹೊರಟುಹೋಗಬೇಕೆಂದು ಬಯಸಿದನು. ಆದರೂ ಅಂಗಡಿಯ ಹತ್ತಿರ ಹೋದನು.

ಕಟುಕ ಕೆಲಸಮಾಡುತ್ತಿದ್ದಂತೆ ಇವನನ್ನು ನೋಡಿದ. "ಓ! ಆಕೆಯೊ ನಿಮ್ಮನ್ನು ಕಳುಹಿಸಿರುವುದು ?" ಎಂದು ಕೇಳಿದ. ಯೋಗಿ ಮಾತನಾಡುವುದಕ್ಕೆ ಅವಕಾಶ ಕೊಡ ಲಿಲ್ಲ. ನಾನು ಕೆಲಸ ಪೂರೈಸುವವರೆಗೆ ಕಾದರೆ, ಆಮೇಲೆ ನಿಮ್ಮೊಡನೆ ಮಾತನಾಡುತ್ತೇನೆ ಎಂದ.

ಇಷ್ಟು ಹೊತ್ತಿಗೆ ಯೋಗಿಗೆ ತುಂಬಾ ಉತ್ಸಾಹ ಕೆರಳಿತ್ತು. ಕಟುಕ ಕೆಲಸ ಆದ ಮೇಲೆ ತನ್ನ ಮನೆಗೆ ಬನ್ನಿ ಎಂದು ಯೋಗಿಯನ್ನು ಕರೆದುಕೊಂಡು ಹೋದ. ಮನೆಗೆ ಹೋದ ಮೇಲೆ ತನ್ನ ತಂದೆ ತಾಯಿಗಳ ಸೇವೆ ಮಾಡಿಬರುತ್ತೇನೆ, ಸ್ವಲ್ಪ ಕಾದಿರಿ ಎಂದು ಕ್ಷಮಾಪಣೆ ಕೇಳಿದ. ತನ್ನ ತಂದೆ ತಾಯಿಗಳಿಗೆ ಸ್ನಾನಮಾಡಿಸಿ, ಊಟಮಾಡಿಸಿ, ಅವರನ್ನು ನೆಮ್ಮದಿ ಯಿಂದ ಇರುವಂತೆ ಮಾಡಿದಮೇಲೆ, ಯೋಗಿಯ ಬಳಿಗೆ ಬಂದು, ಕರ್ಮದ ಮೂಲಕವಾಗಿ ಆತ್ಮಸಾಕ್ಷಾತ್ಕಾರವನ್ನು ಪಡೆಯುವುದು ಹೇಗೆ ಎಂಬುದನ್ನು ಅದ್ಭುತವಾಗಿ ವಿವರಿಸಿದ. ಇದೇ ಕರ್ಮಯೋಗ.

ಆಧ್ಯಾತ್ಮಿಕತೆ ಎಂದರೆ ಏನೊ ಪರಲೋಕದಲ್ಲಿ ಪ್ರಾಪ್ತವಾಗುವುದು ಎಂದು ಭಾವಿಸ ಬಾರದು. ಯಾವ ಕೆಲಸ ನಮ್ಮ ಪಾಲಿಗೆ ಬರಲಿ ಅದರಲ್ಲಿ ತೋರುವ ಕೌಶಲ್ಯ ಮತ್ತು ದಕ್ಷತೆ. ನೀವು ಆಧ್ಯಾತ್ಮಿಕ ಜೀವಿಗಳಾಗಬೇಕಾದರೂ ಯಾವುದೊ ಆಸನದಲ್ಲಿ ಕುಳಿತು, ಪ್ರಾಣಾಯಾಮಾದಿಗಳನ್ನು ಮಾಡಬೇಕಾಗಿಲ್ಲ. ನೀವು ಮನೆಬಿಟ್ಟು ಸನ್ಯಾಸಿಯಾಗಬೇಕಾ ಗಿಲ್ಲ. ನೀವು ಎಲ್ಲಿ ಬೇಕಾದರೂ, ಎಂತಹ ಸನ್ನಿವೇಶದಲ್ಲಿ ಬೇಕಾದರೂ ಅದನ್ನು ಅಭ್ಯಾಸ ಮಾಡಬಹುದು. ಸರಿಯಾದ ದೃಷ್ಟಿಯೇ ಇದಕ್ಕೆ ಇರಬೇಕಾದ ರಹಸ್ಯ.

ನೀವು ಏನು ಕೆಲಸಮಾಡುತ್ತಿದ್ದರೂ ಚಿಂತೆಯಿಲ್ಲ. ನಿಮ್ಮ ಮನಸ್ಸನ್ನೆಲ್ಲ ಅದರ ಮೇಲೆ ಇಡಿ. ಇಲ್ಲೆ ನಿಜವಾದ ಪ್ರಾವೀಣ್ಯತೆ ಇರುವುದು. ನಿಮ್ಮ ಕೆಲಸವನ್ನೆ ಪೂಜೆಯಂತೆ ಭಾವಿಸಿ. ಈಗಿನ ಕಾಲದಲ್ಲಿ ಪೂಜೆ ಎಂದರೆ ಅದಕ್ಕೇನು ದೊಡ್ಡ ಅರ್ಥವಿಲ್ಲ. ಅದರ ಬದಲು ನಿಮ್ಮ ಮನಸ್ಸನ್ನೆಲ್ಲ ಕೆಲಸಮೇಲೆ ಕೇಂದ್ರೀಕರಿಸಿ ಎನ್ನುತ್ತೇನೆ. ನಿಮ್ಮ ಕೆಲಸದ ಮೂಲಕವೇ ನಿಮಗೆ ಶ್ರೇಷ್ಠವಾದ ಮುಕ್ತಿ ಸಿಕ್ಕುವುದು. ನಿಮಗೆ ಇನ್ನು ಬೇರೆ ಏನೂ ಇರಕೂಡದು. ಕೆಲವನ್ನು ಆಸೆಯಿಲ್ಲದೆ, ಫಲಾಪೇಕ್ಷೆಯಿಲ್ಲದೆ, ಅದರ ಮೂಲಕ ಅತ್ಯಂತ ಶ್ರೇಷ್ಠವಾದ ಪರಿಪೂರ್ಣತೆಯನ್ನು ವ್ಯಕ್ತಪಡಿಸಿದರೇ ಅದು ಅತ್ಯಂತ ಚೆನ್ನಾದ ಕೆಲಸ ವಾಗುವುದು. ಇಂತಹ ಕೆಲಸದಿಂದ ಮನಸ್ಸು ಚಂಚಲವಾಗುವುದಿಲ್ಲ. ಮಾನಸಿಕವಾಗಿ ಮತ್ತು ಬಾಹ್ಯಿಕವಾಗಿ ಎರಡನ್ನೂ ಗಮನಿಸಿದಂತೆ ಆಗುವುದು.

ನಮ್ಮ ಕಾರ್ಯಕ್ಷೇತ್ರವನ್ನು ನಾವು ಗೆಲ್ಲಬೇಕು. ಬಾಹ್ಯದೃಷ್ಟಿಯಿಂದ ನಮ್ಮ ಕೆಲಸವನ್ನು ದಕ್ಷತೆಯಿಂದ ಮತ್ತು ಜಾಣತನದಿಂದ ಮಾಡಬೇಕು. ಆಗ ಇದು ಮನಸ್ಸನ್ನು ಚಂಚಲ ಗೊಳಿಸುವುದಿಲ್ಲ. ಯೋಗದಲ್ಲಿ ನಾವು ತೋರುವ ಕೌಶಲ್ಯ ಮತ್ತು ಫಲದಮೇಲೆ ಅನಾಸಕ್ತಿ ಇದ್ದರೆ ಮುಕ್ತಿ ಲಭಿಸುವುದು.

ನನಗೆ ಜೀವನದಲ್ಲಿ ಒಂದು ಘಟನೆ ಜ್ಞಾಪಕಕ್ಕೆ ಬರುವುದು. ನಾನು ಒಂದು ಸಲಿ ಮಹಾತ್ಮ ಗಾಂಧೀಜಿ ಅವರನ್ನು ನೋಡಲು ಹೋದೆ. ಅವರು ಎಂದಿನಂತೆ ನೂಲುತ್ತಿದ್ದರು. ಅದೇ ಸಮಯದಲ್ಲಿ ತಮ್ಮ ಕಾರ್ಯದರ್ಶಿಗೆ Young India ಎಂಬ ಪತ್ರಿಕೆಗೆ ಒಂದು ಲೇಖನ ವನ್ನು ಹೇಳಿ ಬರೆಸುತ್ತಿದ್ದರು. ಆ ಸಮಯದಲ್ಲಿ ಅವರು ಆ ಪತ್ರಿಕೆಗೆ ಸಂಪಾದಕರಾಗಿ ದ್ದರು. ಲಾರ್ಡ್ ಬರ್ಕನ್ ಹೆಡ್ ಎಂಬುವರಿಗೆ ಅದೊಂದು ಪ್ರತಿಭಟನೆಯ ಪತ್ರವಾಗಿತ್ತು. ಆ ಸಮಯದಲ್ಲಿ ಹತ್ತಿರ ಕುಳಿತಿದ್ದವರೊಡನೆ, ಮಾತನಾಡುತ್ತ ತಮಾಷೆ ಮಾಡುತ್ತ ಇದ್ದರು. ಇನ್ನು ಹತ್ತು ನಿಮಿಷದಲ್ಲಿ ಉಪನ್ಯಾಸಕ್ಕೆ ಒಂದು ಸ್ಥಳಕ್ಕೆ ರೈಲನ್ನು ಹತ್ತ ಬೇಕಾಗಿತ್ತು. ಅವರು ಮಾಡುತ್ತಿದ್ದ ಕೆಲಸಗಳೆಲ್ಲ ಅಚ್ಚುಕಟ್ಟಾಗಿದ್ದವು. ಅವರು ಶಾಂತಿ ಯಿಂದ ಇದ್ದರು, ಹರ್ಷಚಿತ್ತರಾಗಿದ್ದರು, ಸ್ವತಂತ್ರರಾಗಿದ್ದರು. ಮಹಾತ್ಮಾ ಗಾಂಧೀಜಿ ದೊಡ್ಡ ಕರ್ಮಯೋಗಿಗಳಾಗಿದ್ದರು.

ನೀವು ಪರಮಾತ್ಮನಿಗೆ ಕೆಲಸ ಮಾಡಿದರೆ, ಅದರ ಹಿಂದುಗಡೆ ಯಾವ ಫಲಾ ಪೇಕ್ಷೆಯೂ ಇಲ್ಲದೆ ಇದ್ದರೆ, ಬಾಹ್ಯ ಕೆಲಸವೂ ಕೂಡ ಚೆನ್ನಾಗಿ ಆಗುವುದು. ನಿಮ್ಮ ಮನಸ್ಸಿನಲ್ಲಿ ಶಾಂತಿ ಆನಂದ ಹರ್ಷ ನಲಿದಾಡುವುದು. ತ್ಯಾಗದ ಅದ್ಭುತವಾದ ಶಕ್ತಿ ನಿಮ್ಮನ್ನು ಮೇಲುಮೇಲಕ್ಕೆ ಕರೆದುಕೊಂಡು ಹೋಗುವುದು. ಅಜ್ಞಾನದ ಕಂಬಕ್ಕೆ ನಮ್ಮನ್ನು ಕಟ್ಟಿಹಾಕಿರುವ ಬಲವಾದ ಬಂಧನವೆ ಸ್ವಾರ್ಥತೆ.

ನೀವು ಎಲ್ಲರ ಪ್ರೇಮಕ್ಕೋಸುಗ ಕೆಲಸ ಮಾಡಿದರೆ, ಎಲ್ಲರಲ್ಲಿಯೂ ಇರುವ ಆತ್ಮನಿ ಗಾಗಿ ಕೆಲಸ ಮಾಡಿದರೆ, ಭಗವಂತನ ಪ್ರೀತಿಗೋಸುಗ ಕರ್ಮಮಾಡಿದರೆ, ನಿಮ್ಮ ಕೆಲಸವೇ ಅತ್ಯದ್ಭುತವಾದ ಆಧ್ಯಾತ್ಮಿಕ ಸಾಧನೆಯಾಗುವುದು. ಅವನು ಕಸ ಗುಡಿಸಲಿ, ಒಂದು ರಾಜ್ಯವನ್ನಾಳಲಿ, ಅದನ್ನು ಅತ್ಯಂತ ಚೆನ್ನಾಗಿ ಮಾಡುವನು.

ನೀವು ಯಾವ ಕೆಲಸವನ್ನು ಮಾಡಬೇಕಾದರೂ ದಕ್ಷತೆಯಿಂದ ಮಾಡಬೇಕು. ದಕ್ಷತೆ ಇರಲಿ. ಪ್ರಪಂಚದಲ್ಲಿ ಹೇಗೆ ಬಾಳಬೇಕು ಎಂಬುದು ಗೊತ್ತಿರಬೇಕು. ನೀವು ಹಾವಿ ನೊಂದಿಗೆ ಆಡಬೇಕಾದರೆ, ಮುಂಚೆ ಅದನ್ನು ನಿಗ್ರಹಿಸಬೇಕು. ಇಲ್ಲದೇ ಇದ್ದರೆ ಅವು ನಿಮ್ಮನ್ನು ಕಚ್ಚುತ್ತವೆ, ನೀವು ಸಾಯುತ್ತೀರಿ. ಕರ್ಮಯೋಗದ ಮೂಲಕ ಹಾವಿಗೆ ಮಂತ್ರ ಹಾಕಿ ವಶ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದು. ಕರ್ಮಯೋಗ ಜೀವನದಲ್ಲಿ ಹೇಗೆ ಬಾಳಬೇಕೆಂಬುದನ್ನು ಕಲಿಸುವುದು.

ಯಾವ ಯೋಗವಾದರೂ ಆಗಲಿ ಆ ದಾರಿಯಲ್ಲಿ ಹೋಗಬಯಸುವವನು ಕೆಲವು ನಿಯಮಗಳನ್ನು ಪಾಲಿಸಬೇಕಾಗಿದೆ. ಕೆಲವು ವೇಳೆ ಇದನ್ನು ಅನುಸರಿಸುವುದು ಬಹಳ ಕಷ್ಟ. ಕರ್ಮಯೋಗದಲ್ಲಿ ನಡೆಯುವುದಕ್ಕೆ ಬೇಕಾದ ಗುಣಗಳನ್ನು ಹೇಳಬಹುದು. ಆದರೆ ಅದರ ವ್ಯಾಪ್ತಿ ಬಹಳ ಗಹನವಾದುದು.

ಇದಕ್ಕೆ ಬೇಕಾದ ಮೂರು ಗುಣಗಳೇ ಋಜುತ್ವ, ಸ್ಥಿರತೆ, ವಿವೇಕ. ಒಬ್ಬ ಸಂಪೂರ್ಣವಾಗಿ ನಿಸ್ಪೃಹನಾಗಿರಬೇಕು. ನಿಸ್ಪೃಹನಿಗೆ ಮಾತ್ರ ಕರ್ಮಯೋಗದಲ್ಲಿ ಮುಂದುವರಿದು ಹೋಗುವುದಕ್ಕೆ ಛಲ ಬಲಗಳು ಇರಬಲ್ಲವು. ನಮ್ಮ ಕೆಲಸದಲ್ಲಿ ಋಜುತ್ವ ಇರುವುದು, ಯಾವ ಆಕಾಂಕ್ಷೆಗಳೂ ಇಲ್ಲದೆ ಇರುವುದು, ಫಲಾಪೇಕ್ಷೆ ಇಲ್ಲದೇ ಇರುವುದು, ಆಸಕ್ತಿ ಇಲ್ಲದೇ ಇರುವುದು ಅತ್ಯಂತ ಶ್ರೇಷ್ಠವಾದ ಗುಣಗಳು.

ಯಾವ ಯೋಗಮಾರ್ಗದಲ್ಲಿ ಹೋಗಬೇಕಾದರೂ ವಿವೇಕ ಇರಬೇಕು. ಇದಿಲ್ಲದೆ ಇದ್ದರೆ ತಳಪಾಯವನ್ನೆ ಹಾಕುವುದಕ್ಕೆ ಆಗುವುದಿಲ್ಲ.

ಸಾಧಕ ಈ ಮೂರು ಗುಣಗಳಲ್ಲಿ ಬಲಿಷ್ಠನಾಗಬೇಕು. ಕೆಲವು ವೇಳೆ ಆತಂಕಗಳು ಅಥವಾ ಸೋಲಾದರೆ ಅವನು ಧೈರ್ಯಗೆಡಕೂಡದು, ನೀನು ಅಸ್ಥಿರನಾಗಿ ನಿಮ್ಮ ಅಹಂಕಾರದ ಚಪಲಕ್ಕೆ ಯಾವುದಾದರೂ ಹೊಸ ಹಂಚಿಕೆಯನ್ನು ಅನುಸರಿಸುವಿಯಾದರೆ ಯಾವ ಯೋಗದಲ್ಲಿಯೂ ಮುಂದುವರಿಯಲಾರೆ.

ಒಂದೂರಿನಲ್ಲಿ ಶಾಲೆಯ ಒಬ್ಬ ಉಪಾಧ್ಯಾಯನಿಗೆ ತನ್ನ ಕೆಲಸದಲ್ಲಿ ಬೇಜಾರು ಬಂತು. ಬೇಸಾಯ ಮಾಡಬೇಕು ಎನ್ನಿಸಿತು. ಪ್ರಕೃತಿಯ ಮಡಿಲಲ್ಲಿದ್ದು, ಹಕ್ಕಿಗಳ ಇಂಚರವನ್ನು ಕೇಳುತ್ತ ಭೂಮಿತಾಯಿಯ ಮೇಲೆ ಬೆಳೆ ಬೆಳೆದು ಜೀವಿಸಿದರೆ ಚೆನ್ನಾಗಿರುವುದು ಎನ್ನಿಸಿತು. ಅವನು ತನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟು ಒಂದು ಹೊಲವನ್ನು ಕೊಂಡನು. ಅವನಿಗೆ ಬೇಸಾಯವೇ ಗೊತ್ತಿಲ್ಲದೇ ಇದ್ದುದರಿಂದ ಮೊದಲನೆ ವರ್ಷ ಯಾವ ಬೆಳೆಯೂ ಬರಲಿಲ್ಲ. ಇನ್ನೊಂದು ವರ್ಷ ಪ್ರವಾಹ ಬಂದು ಬೆಳೆದ ಸ್ವಲ್ಪ ಬೆಳೆಯನ್ನೂ ಹಾಳು ಮಾಡಿತು. ಮೂರನೇ ವರ್ಷ ಮಳೆಯೇ ಬರಲಿಲ್ಲ. ಬೆಳೆಯೆಲ್ಲ ಒಣಗಿಹೋಯಿತು. ಉಪಾಧ್ಯಾಯನ ಹತ್ತಿರ ಇದ್ದ ಹಣವೆಲ್ಲ ಹೋಯಿತು. ಈ ಬೇಸಾಯದ ಭ್ರಮೆಯಿಂದ ಪಾರಾದ. ಸಾಕಪ್ಪ ಈ ಬೇಸಾಯ ಎಂದು ಪುನಃ ಊರಿಗೆ ಬಂದು ಕೆಲಸ ಹುಡುಕಲು ಪ್ರಾರಂಭಿಸಿದ. ಆದರೆ ಜನ್ಮತಃ ಬೇಸಾಯಗಾರನಾದವನು ಅತಿವೃಷ್ಟಿಯಾಗಲಿ, ಅನಾವೃಷ್ಟಿಯಾಗಲಿ ಬೇಸಾಯವನ್ನು ಬಿಡುವುದಿಲ್ಲ. ಕೊನೆಗೆ ಅವನು ಜಯಶೀಲನಾಗುವನು.

ಯೋಗ ಸಾಧಕನು ಜನ್ಮತಃ ಬೇಸಾಯಗಾರನಂತೆ ಇರಬೇಕು. ಬೆಂಕಿ ಬೀಳಲಿ, ಪ್ರವಾಹ ಬರಲಿ, ಬರಗಾಲ ಬರಲಿ, ಏನಾದರೂ ತನ್ನ ಆದರ್ಶವನ್ನು ಅವನು ಬಿಡಕೂಡದು. ಇನ್ನು ಬೇರೆ ಯಾವ ಕಡೆಗೂ ಮನಸ್ಸನ್ನು ಹಾಕದೆ ಇದ್ದರೆ ಅವನು ಗೆಲ್ಲುತ್ತಾನೆ. ಅವನು ತಾತ್ಕಾಲಿಕ ಕುತೂಹಲಕ್ಕೆ ತೆಗೆದುಕೊಂಡರೆ ಬಹಳ ಕಾಲ ಮುಂದುವರಿಯುವುದಕ್ಕೆ ಆಗುವುದಿಲ್ಲ.

ಆದರ್ಶಕ್ಕಾಗಿ ಕೊನೆಯತನಕ ನಿಲ್ಲುವವರು ಬಹಳ ಅಲ್ಪಮಂದಿ. ಒಂದು ಕೆಲಸ ಹಿಡಿಯುತ್ತೇವೆ. ಅದನ್ನು ಮಾಡುತ್ತಿರುವಾಗ ಇನ್ನೂ ಏನೇನೊ ಹಿಡಿಯುತ್ತೇವೆ. ಅದರಲ್ಲಿ ಯಾವುದಾದರೂ ಒಂದು ಹಾಳಾದರೂ ಎಲ್ಲಾ ಹೋಯಿತು. ಕರ್ಮಯೋಗಿ ಒಂದೇ ಒಂದು ಉದ್ದೇಶ ಇಟ್ಟುಕೊಂಡು ಕೆಲಸ ಮಾಡುತ್ತಾನೆ. ತಾನು ಮತ್ತು ತನ್ನ ಕೆಲಸವನ್ನು ಅತ್ಯಂತ ಶ್ರೇಷ್ಠದರ್ಜೆಗೆ ತರಬೇಕು ಎನ್ನುವುದೇ ಅವನ ಉದ್ದೇಶ. ನಾನು ಈ

ಒಂದು ಆದರ್ಶವನ್ನು ಮಾತ್ರ ಹಿಡಿಯುತ್ತೇನೆ. ನನಗೇನಾದರೂ ಚಿಂತೆಯಿಲ್ಲ. ಇಡೀ ಪ್ರಪಂಚವೇ ನನಗೆ ವಿರೋಧವಾಗಿ ನಿಂತರೂ, ನಾನು ಹಿಂಪೆ ಸರಿಯುವುದಿಲ್ಲ. ಎಲ್ಲರೂ ಹೊಗಳಿದರೂ ನನ್ನ ತಲೆ ತಿರುಗಿಹೋಗುವುದಿಲ್ಲ. ಜಯಾಪಜಯಗಳನ್ನು ನಾನು ಗಮನಿಸುವುದಿಲ್ಲ. ನಾನು ಮುಕ್ತಿಯನ್ನು ಪಡೆಯುವುದಕ್ಕಾಗಿ ಮಾಡುತ್ತೇನೆ. ಗುರಿಮುಟ್ಟುವ ವರೆಗೆ ನಾನು ಬಿಡುವುದಿಲ್ಲ.

ಯೋಗದಲ್ಲಿ ಸಾಧಕನನ್ನು ಅಧಿಕಾರಿ ಎಂದು ಕರೆಯುತ್ತಾರೆ. ಅಧಿಕಾರಿಗೆ ಕೆಲವು ಯೋಗ್ಯತೆಗಳು ಇರುತ್ತವೆ. ಈ ಯೋಗ್ಯತೆ ಅಥವಾ ಕೌಶಲ್ಯ ಸ್ವಭಾವತಃ ಬರುವುದು. ಹಿಂದಿನ ಜನ್ಮಗಳಿಂದ ಇದನ್ನು ಪಡೆದುಕೊಂಡಿರುವನು. ಕರ್ಮಯೋಗದ ಅಧಿಕಾರವನ್ನು ಮೂರು ದೃಷ್ಟಿಯಿಂದ ನೋಡುತ್ತಾರೆ.

೧. ಅದನ್ನು ಮಾಡುವುದಕ್ಕೆ ಅರ್ಥಿತ್ವ, ಮತ್ತಾವುದೊ ಒಂದು ಉದ್ದೇಶಕ್ಕಲ್ಲ.

೨. ಸಾಮರ್ಥ್ಯ. ಇಲ್ಲಿ ಅವನ ಆರೋಗ್ಯ, ಹಿನ್ನೆಲೆ, ಅವನ ಜಾಣತನ ಇವುಗಳೆಲ್ಲ ಸೇರಿವೆ.

೩. ಅಪ್ರತಿರೋಧ. ಇದನ್ನು ವಿರೋಧಿಸುವವರಿಲ್ಲದೆ ಇರುವುದು. ಇತರರು ಅದನ್ನು ವಿರೋಧಿಸಬಹುದು, ಇತರರನ್ನು ಇವನು ನೋಡಿಕೊಳ್ಳಬೇಕಾಗುವುದು, ಇವುಗಳಿಲ್ಲದೆ ಇರುವುದು. ಇದನ್ನು ನಾವು ಗಮನಿಸಬೇಕಾಗಿದೆ. ಅನಂತರ ಉಳಿದ ಎರಡು ಇದನ್ನೆ ಅನುಸರಿಸುವುದು.

ಕರ್ಮಯೋಗಿಗಳಲ್ಲಿ ತೀವ್ರ, ಮಧ್ಯ, ಮಂದ ಎಂದು ಮೂರು ವರ್ಗದವರು ಇದ್ದಾರೆ. ಒಬ್ಬ ತಾನು ಯಾವ ವರ್ಗಕ್ಕೆ ಸೇರಿದ್ದಾನೊ ಅದನ್ನು ಗಮನಿಸಬೇಕು. ಬೇರೆ ಗುಂಪಿಗೆ ಸೇರಿದವನನ್ನು ಅನುಕರಿಸಬೇಕಾಗಿಲ್ಲ. ಅಧ್ಯಾತ್ಮಿಕ ಜೀವನದಲ್ಲಿ ಸ್ಪರ್ಧೆಯ ಮನೋಭಾವ ಇರಕೂಡದು. ನೀನು ಮಂದ ಅಧಿಕಾರಿಯ ಗುಂಪಿಗೆ ಸೇರಿದ್ದರೆ, ತೀವ್ರ ಅಧಿಕಾರಿಯನ್ನು ನೋಡಿ ಅಸೂಯೆಪಟ್ಟರೆ ಪ್ರಯೋಜನವಿಲ್ಲ. ಅವನನ್ನು ನೋಡಿ ನಾವು ತೀವ್ರ ಅಧಿಕಾರಿಗಳಾಗುವುದಕ್ಕೆ ಸಾಧ್ಯವಿಲ್ಲ. ಸ್ಪರ್ಧೆ ಮನುಷ್ಯನ ಸ್ವಭಾವ. ನಾನು ಹೋಗುವ ದಾರಿಯಲ್ಲಿ ಗಂಟೆಗೆ ಐವತ್ತು ಮೈಲಿ ವೇಗದಲ್ಲಿ ಹೋಗುವವರೂ ಇದ್ದರೆ, ಗಂಟೆಗೆ ಐದು ಮೈಲಿ ಹೋಗುವುದಕ್ಕೆ ನನಗೇನೂ ವ್ಯಸನವಿಲ್ಲ.

ಮನುಷ್ಯ ಮೂರು ಗುಣಗಳಿಂದ ಆಗಿದ್ದಾನೆ. ಇದನ್ನು ನಾವು ಹಿಂದೆಯೇ ಹೇಳಿದ್ದೇವೆ. ನೀವೇ ವಿಭಜನೆ ಮಾಡಿ, ನಿಮ್ಮಲ್ಲಿ ಯಾವ ಗುಣ ಮುಖ್ಯವಾಗಿದೆ ಎಂಬುದನ್ನು ತಿಳಿದುಕೊಳ್ಳಿ. ಈಗ ಅವನು ಇರುವ ಸ್ಥಿತಿಯಿಂದ ಪ್ರತಿಯೊಬ್ಬರೂ ಮುಂದುವರಿಯಬೇಕಾಗಿದೆ. ಇತರರು ಮಾಡುವುದನ್ನು ನಾನು ಗಮನಿಸಬೇಕಾಗಿಲ್ಲ. ಪ್ರತಿಯೊಬ್ಬನೂ ತನ್ನ ಹಾದಿಯನ್ನು ಹಿಡಿಯಬೇಕು. ಅವನು ಇತರರನ್ನು ಗಮನಿಸದೆ ಇದ್ದರೆ ಬೇಗ ಗುರಿ ಮುಟ್ಟಬಹುದು.

ಮಾನವರು ಸಾಧಾರಣವಾಗಿ ಮೂರು ವರ್ಗಕ್ಕೆ ಬರುತ್ತಾರೆ. ೧. ಬದ್ಧರು— ಧಾರ್ಮಿಕ ಜಾಗೃತಿ ಇಲ್ಲದೆ ಇರುವವರು. ಅವರಿಗೆ ತಮ್ಮ ಇಂದ್ರಿಯ ತೃಪ್ತಿಯೊಂದೇ

ಬೇಕಾಗಿರುವುದು, ೨. ಸಾಧಕರಾಗಿರುವವರು ಅವರು ಉತ್ತಮ ಆದರ್ಶಕ್ಕೆ ಹೋಗುತ್ತಿರುವವರು. ೩. ಸಿದ್ಧ—ಎಂದರೆ ಮುಕ್ತಿಯನ್ನು ಪಡೆದವನು.

ಶ್ರೀರಾಮಕೃಷ್ಣರು ಈ ಮೂರು ಬಗೆಯುವರನ್ನು ಹೀಗೆ ವಿವರಿಸುತ್ತಿದ್ದರು. ಬೆಸ್ತ ನೀರಿಗೆ ಬಲೆಯನ್ನು ಬೀಸುತ್ತಾನೆ. ಅದರಲ್ಲಿ ಮೀನುಗಳು ಬೀಳುತ್ತವೆ. ಅನೇಕ ಮೀನುಗಳಿಗೆ ಮುಂದೇನಾಗುವುದು ಎಂಬುದು ಗೊತ್ತಿಲ್ಲದೆ ಸುಖವಾಗಿಯೆ ಇರುತ್ತವೆ. ಅವಕ್ಕೆ ತಾವು ಬಲೆಗೆ ಬಿದ್ದಿರುವುದೇ ಗೊತ್ತಿಲ್ಲ. ಕೆಲವು ಬಲೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಹೋರಾಡುತ್ತವೆ. ಎಲ್ಲೋ ಕೆಲವು ಬಲೆಯಿಂದ ತಪ್ಪಿಸಿಕೊಳ್ಳುತ್ತವೆ. ನಾವೆಲ್ಲ ಸಂಸಾರದ ಬಲೆಗೆ ಬಿದ್ದ ಮೀನುಗಳು. ಕಾರ್ಯಕಾರಣ ಸಂಬಂಧದ ಕರ್ಮವೇ ಬಲೆ.

ಮಾನವಕೋಟಿಯಲ್ಲಿ ಬಹುಪಾಲು ಮೊದಲನೆ ಗುಂಪಿಗೆ ಬರುತ್ತಾರೆ. ನೀವು ಎರಡನೆ ವರ್ಗಕ್ಕೆ ಸೇರಿದವರು ಎಂದು ಭಾವಿಸಿದರೆ ಈ ಜನ್ಮದಲ್ಲಿಯೇ ಪಾರಾಗುವುದಕ್ಕೆ ಪ್ರಯತ್ನಿಸಬೇಕು. ಆದರೆ ಯಾರು ಸಂಸಾರದಲ್ಲಿ ತಲ್ಲೀನರಾಗಿರುವರೊ ಅವರನ್ನು ನಿಕೃಷ್ಟವಾಗಿ ಕಾಣಬಾರದು. ಪ್ರತಿಯೊಬ್ಬನೂ ತನ್ನ ಕರ್ಮವನ್ನು ಸವೆಸುತ್ತಿರುವನು. ಶ್ರೀರಾಮಕೃಷ್ಣರು ಅಂತಹ ಬದ್ಧಜೀವಿಗಳನ್ನು ಕುರಿತು ಒಂದು ಸುಂದರವಾದ ಕಥೆಯನ್ನು ಹೇಳುತ್ತಾರೆ.

ಕೆಲವು ಬೆಸ್ತರ ಹೆಂಗಸರು ಸಂತೆಗೆ ಹೋಗಿ ಮೀನು ಮಾರಿದರು. ಅವರು ಖಾಲಿ ಬುಟ್ಟಿ ಸಮೇತ ಮನೆಗೆ ಹಿಂತಿರುಗುತ್ತಿದ್ದಾಗ ಮಳೆ ಬಂತು. ಮೋಡ ಆವರಿಸಿ ಜೋರಾಗಿ ಮಳೆ ಪ್ರಾರಂಭವಾಯಿತು. ದೂರದಲ್ಲಿ ಬೆಸ್ತರ ಹೆಂಗಸರಿಗೆ ಒಂದು ಮನೆ ಕಾಣಿಸಿತು. ಅವರು ಅಲ್ಲಿಂದ ಓಡಿ ತಂಗುವುದಕ್ಕೆ ಒಂದು ಬೇಲಿ ಒಳಗೆ ಪ್ರವೇಶ ಮಾಡಿದರು. ಅಲ್ಲಿ ಒಂದು ಸುಂದರವಾದ ತೋಟವಿತ್ತು. ಮನೆಯ ಬಾಗಿಲನ್ನು ತಟ್ಟಿದಾಗ, ತೋಟಗಾರನ ಹೆಂಡತಿ ಮಳೆಯಿಂದ ಮನೆ ಒಳಗೆ ಬನ್ನಿ ಎಂದು ಹೇಳಿದಳು. ಅವರು ತಮ್ಮ ಮೀನಿನ ಬುಟ್ಟಿಯನ್ನು ಹೊರಗೆ ಬಿಟ್ಟು ಮನೆ ಒಳಗೆ ಬಂದರು.

ತೋಟಗಾರನ ಹೆಂಡತಿ ಅವರಿಗೆ ಬಟ್ಟೆಯನ್ನು ಒಣಗಿಸಿಕೊಳ್ಳಲು ಸಹಾಯ ಮಾಡಿದಳು. ಮಳೆ ಬಿಡದೆ ಇದ್ದುದರಿಂದ ಅವರಿಗೆ ಮಲಗಿಕೊಳ್ಳುವುದಕ್ಕೆ ಒಂದು ಕೋಣೆಯನ್ನು ಬಿಟ್ಟುಕೊಟ್ಟಳು. ಆ ಬಡ ಹೆಂಗಸರು ಅಂತಹ ಮನೆಯನ್ನು ನೋಡಿರಲಿಲ್ಲ. ಅವರೆಲ್ಲ ಮಲಗಿಕೊಂಡರು. ಎಲ್ಲಾ ಸೌಕರ್ಯಗಳು ಇದ್ದರೂ, ಮಲಗಲು ಒಳ್ಳೆಯ ಹಾಸಿಗೆ ಇದ್ದರೂ, ಅವರಿಗೆ ಬಹಳ ಕಾಲದವರೆಗೆ ನಿದ್ರೆ ಬರಲಿಲ್ಲ. ಒಬ್ಬ ಬೆಸ್ತಳು "ಏನಾಗಿದೆ ನನಗೆ? ನಿದ್ರೆಯೇ ಬರುವುದಿಲ್ಲವಲ್ಲ. ಈ ಹಾಳು ಹೂವಿನ ವಾಸನೆ ಸಹಿಸುವುದಕ್ಕೆ ಆಗುವುದಿಲ್ಲ" ಎಂದಳು.

ತಕ್ಷಣವೇ ಅವಳಿಗೆ ಸ್ಫೂರ್ತಿ ಬಂತು. ನನಗೆ ಗೊತ್ತು ಉಪಾಯ ಎಂದು ಹಾಸಿಗೆಯಿಂದ ಎದ್ದು ಹೊರಗೆ ಓಡಿ, ಮೀನಿನ ಬುಟ್ಟಿಯನ್ನು ತಂದಳು. ಅದಕ್ಕೆ ಸ್ವಲ್ಪ ನೀರನ್ನು ಚಿಮುಕಿಸಿ ಕೋಣೆ ಒಳಗೆ ತಂದಳು. ಮೀನಿನ ಗಂಧ ಕೋಣೆಯನ್ನೆಲ್ಲ ಆವರಿಸಿತು. ಬೆಸ್ತರ

ಹೆಂಗಸರು ಸುಖವಾಗಿ ನಿದ್ರೆಗೆ ಹೋದರು. ಆ ಕೋಣೆಯೆಲ್ಲ ಇವರ ಗೊರಕೆಯಿಂದ ತುಂಬಿತು.

ಜನರಿಗೆ ಸವೆಸುವುದಕ್ಕೆ ಇನ್ನೂ ಜಾಸ್ತಿ ಕರ್ಮ ಇರುವಾಗ ಜೀವನದಲ್ಲಿ ಉತ್ತಮ ಆದರ್ಶಗಳ ಕಡೆಗೆ ಅವರ ಗಮನ ಹೋಗುವುದಿಲ್ಲ. ಅವರು ತಾವು ಪ್ರೀತಿಸುವ ವಸ್ತುವನ್ನು ಬಿಗಿಯಾಗಿ ಹಿಡಿಯುವರು. ತಮಗೆ ಈಗ ಬರುತ್ತಿರುವ ಸುಖವೇ ಮುಂದೆಯೂ ಬರುವುದೆಂದು ಭ್ರಮಿಸುವರು.

ಜನ ಅನೇಕವೇಳೆ ತಾವು ಇರುವ ಸ್ಥಿತಿಗೆ, ಅದೃಷ್ಟವನ್ನೊ, ದೇವರನ್ನೊ ದೂರುವರು. ದೇವರು ಕೆಲವರಿಗೆ ಎಲ್ಲಾ ಅನುಕೂಲಗಳನ್ನು ಒದಗಿಸಿಕೊಡುವನು, ಮತ್ತೆ ಕೆಲವರಿಗೆ ಇಲ್ಲ. ದೇವರು ತನ್ನ ಮನಸ್ಸಿಗೆ ಬಂದಂತೆ ಮಾಡುತ್ತಾನೆ ಎನ್ನಬಹುದು. ದೇವರು ಪಕ್ಷಪಾತಿ ಎಂದು ಭಾವಿಸುವರು. ದೇವರು ಒಂದು ರಸ್ತೆ ಪಕ್ಕದಲ್ಲಿರುವ ಮಗುವಿನಂತೆ. ಅದರ ಹತ್ತಿರ ಪೆಪ್ಪರಮಿಂಟಿನ ಗಂಟು ಇದೆ. ಯಾರೊ ನನಗೊಂದು ಕೊಡು ಎಂದು ಅದನ್ನು ಕೇಳುತ್ತಾರೆ. ಆ ಮಗು ಕೊಡುವುದಿಲ್ಲ ಎನ್ನುವುದು. ಕೇಳದ ಮತ್ತೊಬ್ಬನ ಕೈಗೆ ನಿನಗೆ ಬೇಕೆ ಪೆಪ್ಪರಮಿಂಟ್ ಎಂದು ಕೊಡುವುದಕ್ಕೆ ಹೋಗುವುದು. ನಮಗೆ ಪ್ರತಿಯೊಬ್ಬರ ಕರ್ಮ ಗೊತ್ತಿಲ್ಲ. ಅದಕ್ಕೇ ದೇವರನ್ನು ದೂರುವೆವು.

ಒಂದು ಸಲ ಭಕ್ತನೊಬ್ಬ ಸಾಧನೆ ಮಾಡುತ್ತಿದ್ದ. ಅವನು ಕಾಡಿನಲ್ಲಿ ಒಂದು ಮರದ ಕೆಳಗೆ ಧ್ಯಾನಿಸುವುದಕ್ಕೆ ಒಂದು ಪೀಠವನ್ನು ಅಣಿ ಮಾಡಿದ್ದ. ಅವನು ಧ್ಯಾನ ಮಾಡುವುದಕ್ಕೆ ಕುಳಿತ. ಆಗ ಒಂದು ಹುಲಿ ಗರ್ಜನೆಯನ್ನು ಕೇಳಿದ. ಅಂಜಿಕೆಯಾಗಿ ಅವನು ಅಲ್ಲಿಂದ ಓಡಿಹೋದ. ಅದಕ್ಕೆ ಮುಂಚೆ ಕಳ್ಳನೊಬ್ಬ ಧ್ಯಾನಕ್ಕೆ ಕುಳಿತುಕೊಳ್ಳುವವನನ್ನು ಒಂದು ಪೊದೆಯ ಕಡೆಯಿಂದ ನೋಡುತ್ತಿದ್ದ. ಅವನು ಓಡಿಹೋಗುವುದನ್ನು ನೋಡಿ, ನಾನು ಅಲ್ಲಿ ಹೋಗಿ ಕುಳಿತುಕೊಂಡು ಧ್ಯಾನಮಾಡಿದರೆ ಏನು ಬರುವುದೊ ನೋಡೋಣ ಎಂದು ಅಲ್ಲಿ ಹೋಗಿ ಕುಳಿತುಕೊಂಡು ಕಣ್ಣನ್ನು ಮುಚ್ಚಿ ಧ್ಯಾನಿಸತೊಡಗಿದ. ತಕ್ಷಣವೇ ಒಂದು ಜ್ಯೋತಿಸ್ವರೂಪವಾದ ದೇವತೆ ಇವನ ಮುಂದೆ ನಿಂತಳು. "ನಿನಗೆ ಏನು ಬೇಕು, ಕೇಳು ಕೊಡುತ್ತೇನೆ." ಎಂದಳು. ಕಳ್ಳನಿಗೆ ಇದನ್ನು ನೋಡಿ ಅತ್ಯಾಶ್ಚರ್ಯವಾಯಿತು. "ತಾಯಿ, ನನಗೆ ಒಂದೇ ಬಯಕೆ ಇರುವುದು. ನೀನು ನನಗೆ ಏತಕ್ಕೆ ವರವನ್ನು ಕೊಡಬೇಕು. ನಾನು ನಿನ್ನ ಭಕ್ತನೂ ಅಲ್ಲ. ನಿನ್ನ ಭಕ್ತ ಅಂಜಿಕೆಯಿಂದ ಓಡಿಹೋದ ಮೇಲೆ ನಾನು ಬರೀ ಕುತೂಹಲದಿಂದ ಇಲ್ಲಿ ಕುಳಿತುಕೊಂಡೆ."

ಅದಕ್ಕೆ ತಾಯಿ "ನೀನು ಭಕ್ತನಲ್ಲ ಎಂದು ಭಾವಿಸಿದೆ ಏನು ? ನಿನಗೆ ನಿನ್ನ ಹಿಂದಿನ ಜನ್ಮ ಗೊತ್ತಿಲ್ಲ. ಅದು ನನಗೆ ಗೊತ್ತು. ನಿನ್ನ ಕರ್ಮ ಈಗ ಕ್ಷಯವಾಯಿತು. ಅದಕ್ಕೇ ಈಗ ನಿನಗೆ ಸಾಕ್ಷಾತ್ಕಾರವನ್ನು ಕೊಡುವುದು" ಎಂದಳು.

ನಮ್ಮಲ್ಲಿ ಯಾರಿಗೂ ನಮ್ಮ ಹಿಂದೆ ಎಷ್ಟು ಸತ್ಕರ್ಮ ಇದೆ ಎಂದು ಗೊತ್ತಿಲ್ಲ. ಅದು ಯಾವ ಹೊತ್ತಿನಲ್ಲಾದರೂ ಫಲಿಸಬಹುದು.

೩

ಪ್ರತಿಯೊಬ್ಬ ಮನುಷ್ಯನಲ್ಲಿಯೂ ಹುಟ್ಟುವಾಗಲೇ ಕೆಲವು ಸಂಸ್ಕಾರಗಳು ಇರುತ್ತವೆ. ಅದೇ ಅವನ ಜೀವನದ ಮುಖ್ಯ ಸ್ವಭಾವವಾಗಿರುವುದು. ನಮ್ಮ ಮನಸ್ಸು ಜೀವನದ ಗತಿಯಲ್ಲಿ ಹೇಗೆ ಪ್ರವಹಿಸುತ್ತದೆ, ಯಾವುದನ್ನು ಅದಕ್ಕೆ ಮಾಡುವುದಕ್ಕೆ ಆಸೆ ಎಂಬುದನ್ನು ಕಂಡುಹಿಡಿಯಬೇಕು. ಒಂದು ಕೆಲಸದಲ್ಲಿ ನಮಗೆ ಇರುವ ಆಸಕ್ತಿ, ನಮ್ಮ ಸ್ವಭಾವ ದಕ್ಷತೆ ಇವುಗಳನ್ನು ತೆಗೆದುಕೊಂಡು, ನಾವು ಯಾವ ಕೆಲಸಕ್ಕೆ ಯೋಗ್ಯರು, ಎಲ್ಲಿ ನಾವು ಅತ್ಯಂತ ಕಡಿಮೆ ಘರ್ಷಣೆಯಿಂದ ಕೆಲಸ ಮಾಡಬಲ್ಲೆವು ಎಂಬುದನ್ನು ಕಂಡುಹಿಡಿಯಬೇಕು. ಇದರಿಂದ ಆತಂಕಗಳು ಕಡಿಮೆಯಾಗುವುವು. ನಮ್ಮ ಅಂತರ್ಯದಲ್ಲಿರುವ ಪೂರ್ಣತೆ ವ್ಯಕ್ತವಾಗುವುದಕ್ಕೆ ಸಹಾಯವಾಗುವುದು. ಸಂಸ್ಕೃತದಲ್ಲಿ ಇದಕ್ಕೆ ಸ್ವಧರ್ಮ ಸಿದ್ಧಾಂತ ಎನ್ನುವರು. ಸ್ವ ಎಂದರೆ ನನ್ನ, ಧರ್ಮವೆಂದರೆ ಯಾವುದು ಎತ್ತಿ ಹಿಡಿಯುವುದೊ ಅದು. ನಮ್ಮಲ್ಲಿರುವ ಸಾಧ್ಯತೆಗಳನ್ನು ವ್ಯಕ್ತಮಾಡುವುದೇ ನಮ್ಮಲ್ಲಿರುವ ಸ್ವಭಾವ.

ಒಬ್ಬನ ಧರ್ಮ ಯಾವುದು ಎಂಬುದನ್ನು ಕಂಡುಹಿಡಿಯಬೇಕಾದರೆ ನಾವು ಹಲವು ವಿಷಯಗಳನ್ನು ಪರ್ಯಾಲೋಚಿಸಬೇಕಾಗಿದೆ. ಮೊದಲನೆಯದೆ ನಮ್ಮ ಲಿಂಗ, ನಮ್ಮಲ್ಲಿ ವಂಶಪಾರಂಪರ್ಯವಾಗಿ ಬಂದ ಗುಣ. ಒಬ್ಬ ಗಂಡಸಾಗಿ ಹುಟ್ಟುವನೊ, ಹೆಂಗಸಾಗಿ ಹುಟ್ಟುವನೊ ಅದರ ಮೇಲೆ ಒಬ್ಬನ ಸ್ವಧರ್ಮ ನಿಂತಿದೆ. ಒಬ್ಬನ ಧರ್ಮ ಮತ್ತೊಬ್ಬರ ಧರ್ಮವಾಗುವುದಿಲ್ಲ. ಆದರೆ ಈಗಿನ ಕಾಲದಲ್ಲಿ ಗಂಡಸರು ಹೆಂಗಸರು ಒಂದೇ ಕ್ಷೇತ್ರದಲ್ಲಿ ಕೆಲಸಮಾಡಬಹುದು. ಪ್ರತಿಯೊಬ್ಬನೂ, ಗಂಡಸೊ, ಹೆಂಗಸೊ, ತನ್ನ ಕಾರ್ಯಕ್ಷೇತ್ರದಲ್ಲಿ ದೊಡ್ಡವನೆ. ಸ್ತ್ರೀ ಪುರುಷರ ಪ್ರತಿಸ್ಪರ್ಧೆ ಅನಾವಶ್ಯಕ. ನಮ್ಮ ಪೂರ್ವಿಕರಿಂದ ನನ್ನಲ್ಲಿ ಕೆಲವು ಗುಣಗಳು ವಂಶಪಾರಂಪರ್ಯವಾಗಿ ಬಂದಿದೆ. ಇವು ಹುಟ್ಟುಗುಣ. ನಿಮ್ಮ ಪೂರ್ವಿಕರು ಎಂತಹ ಕೆಲಸದಲ್ಲಿ ಅಗ್ರಗಣ್ಯರಾಗಿದ್ದರು ಎಂಬುದನ್ನು ನೋಡಿ. ಅವರ ಮುಖ್ಯವಾದ ಸ್ವಭಾವ ಏನಾಗಿತ್ತೆಂಬುದನ್ನು ನೋಡಿ.

ನೀವು ಯಾವ ವಾತಾವರಣದಲ್ಲಿ ಹುಟ್ಟಿದಿರಿ, ಎಲ್ಲಿ ಬೆಳೆದಿರಿ, ಇವುಗಳನ್ನೆಲ್ಲಾ ಗಣನೆಗೆ ತೆಗೆದುಕೊಳ್ಳಬೇಕಾಗಿದೆ. ಇಲ್ಲಿ ನಿಮ್ಮ ಆರ್ಥಿಕ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಮತ್ತು ವಿದ್ಯಾಭ್ಯಾಸಾದಿಗಳನ್ನೆಲ್ಲಾ ತೆಗೆದುಕೊಳ್ಳಬೇಕಾಗಿದೆ.

ಹಿಂದೂ ಮಾನಸಿಕ ಶಾಸ್ತ್ರದಲ್ಲಿ ಮನುಷ್ಯನಲ್ಲಿ ಹುಟ್ಟುವಾಗಲೆ ಯಾವ ಸ್ವಭಾವಗಳಿವೆ ಎಂಬುದನ್ನು ಗುಮನಿಸುತ್ತಾರೆಯೇ ಹೊರತು, ಆನುವಂಶಿಕವಾಗಿ ಬಂದವುಗಳನ್ನು ಹೆಚ್ಚು ಗಮನಿಸುವುದಿಲ್ಲ. ನಾವು ಪುನರ್ಜನ್ಮದಲ್ಲಿ ನಂಬುವುದರಿಂದ, ಮಗು ಹುಟ್ಟುವಾಗಲೆ ತನ್ನ ಪೂರ್ವಜನ್ಮಕ್ಕೆ ಅನುಸಾರವಾಗಿ, ಕೆಲವು ಸ್ವಭಾವಗಳೊಡನೆ ಹುಟ್ಟುವುದು. ಈ ಸ್ವಭಾವ ಮಗುವಿನ ಸುಪ್ತಮನಸ್ಸಿನಲ್ಲಿರುವುದು. ಅದೇ ಅವನ ಈಗಿನ ಜೀವನವನ್ನು ತಿಳಿದೊ ತಿಳಿಯದೆಯೋ ನಿರ್ಧರಿಸುವುದು. ಯಾವ ಸ್ವಭಾವ ಇನ್ನೂ ವ್ಯಕ್ತಿಯ ಶೀಲದಲ್ಲಿ ವ್ಯಕ್ತವಾಗಿಲ್ಲವೊ. ಅದನ್ನು ಮಾನಸಿಕ ವಿಭಜನೆಯಿಂದ ಕಂಡುಹಿಡಿಯಬಹುದು. ಈಗ

ಮನುಷ್ಯನಲ್ಲಿರುವ ಸ್ವಭಾವ, ಅವನು ಹಿಂದಿನ ಜನ್ಮದಲ್ಲಿ ಏನುಮಾಡಿದ ಎಂಬುದರ ಮೇಲೆ ನಿಂತಿದೆ. ಅವುಗಳೆಲ್ಲವೂ ಸಂಸ್ಕಾರರೂಪದಂತೆ ನಮ್ಮ ಮನಸ್ಸಿನ ಅಂತರಾಳದಲ್ಲಿ ಹುದುಗಿವೆ. ನಾವು ಒಬ್ಬನ ಸುಸ್ಕಾರವನ್ನು ವಿಭಜನೆ ಮಾಡಿದರೆ, ಅವನ ಸಾಧ್ಯತೆಗಳನ್ನು ಕಂಡುಹಿಡಿಯಬಹುದು. ಇದನ್ನು ಅತೀಂದ್ರಿಯ ವಾಣಿಯಿಂದಲೂ ಕಂಡುಹಿಡಿಯಬಹುದು. ಅತೀಂದ್ರವಾಣಿ ಅನೇಕವೇಳೆ ಪೂರ್ವ ಅಭಿಪ್ರಾಯಗಳಿಂದ ಬಾಧಿತವಾಗಿ ಹೋಗಿರುವುದು. ಹಾಗಿಲ್ಲದೇ ಇದ್ದರೆ ಕಂಡುಹಿಡಿಯುವುದಕ್ಕೆ ಸುಲಭವಾಗಿತ್ತು.

ನಿಮ್ಮ ಸ್ವಧರ್ಮವನ್ನು, ನಿಮ್ಮ ಲಿಂಗ, ಆನುವಂಶಿಕತೆ, ವಾತಾವರಣ, ಮತ್ತು ಮಾನಸಿಕ ವಿಭಜನೆ ಮುಂತಾದವುಗಳಿಂದ ಕಂಡುಹಿಡಿಯಬಹುದು. ನೀವು ಎಲ್ಲಿ ಕೆಲಸ ಮಾಡಬೇಕೆಂದು ಬಯಸುವಿರೊ ಅದನ್ನು ಆರಿಸಿಕೊಳ್ಳಬೇಕಾದರೆ, ನಿಮ್ಮ ಸ್ವಧರ್ಮ ಏನು, ಯಾವ ಕೆಲಸದಲ್ಲಿ ನೀವು ಮುಂದುವರಿಯಬಲ್ಲಿರಿ, ಎಲ್ಲಿ ನಿಮಗೆ ಅತ್ಯಂತ ಕಡಿಮೆ ಆತಂಕವಾಗಬಹುದು ಎಂಬುದನ್ನು ಕಂಡು ಹಿಡಿಯಬೇಕಾಗಿದೆ. ನೀವು ಯಾವ ಕಾರ್ಯಕ್ಷೇತ್ರದಲ್ಲಿ ಪೂರ್ಣತೆಯನ್ನು ಸುಲಭವಾಗಿ ವ್ಯಕ್ತಪಡಿಸಬಹುದು ಎಂಬುದನ್ನು ನೀವೇ ಕೇಳಿಕೊಳ್ಳಿ. ಅದನ್ನು ಜೋಪಾನವಾಗಿ ಆರಿಸಿಕೊಳ್ಳಿ. ಸುಮ್ಮನೆ ಹಣ, ಅಂತಸ್ತು, ಕೀರ್ತಿ ಮುಂತಾದವುಗಳಿಗೆ ಒಂದು ಕೆಲಸವನ್ನು ಮಾಡುವುದಕ್ಕೆ ಹೋಗಬೇಡಿ. ಅದು ನಿಮ್ಮ ಅಂತರ್ಯದಲ್ಲಿರುವ ಪೂರ್ಣತೆಯ ವಿಕಾಸಕ್ಕೆ ಸಹಾಯವಾಗುವುದಿಲ್ಲ. ನಿಮ್ಮ ಕೆಲಸವನ್ನೆಲ್ಲ ಇದು ಹಾಳುಮಾಡುವುದು.

ನೀವು ಯಾವ ಕೆಲಸವನ್ನಾದರೂ ಆರಿಸಿಕೊಂಡು ಕರ್ಮಯೋಗವನ್ನು ಮಾಡಬಹುದು. ಆದರೆ ನಿಮ್ಮಲ್ಲಿ ಕೆಲವು ಗುಣಗಳ ಲೋಪದೋಷಗಳಿರುವುದರಿಂದ, ಕೆಲವು ಕೆಲಸಗಳಲ್ಲಿ ಕಡಿಮೆ ಆತಂಕ ಮತ್ತೆ ಕೆಲವು ಕೆಲಸದಲ್ಲಿ ಹೆಚ್ಚು ಆತಂಕಗಳು ಒದಗುವುವು. ಯಾವ ಕೆಲಸ ನಿಮಗೆ ಒಗ್ಗುವುದೊ, ಯಾವುದು ನಿಮ್ಮ ಸ್ವಭಾವಕ್ಕೆ ಅನುಗುಣವಾಗಿದೆಯೊ, ಯಾವ ಕೆಲಸವನ್ನು ಪ್ರೀತಿಸುತ್ತೀರೊ ಅದನ್ನು ಆರಿಸಿಕೊಳ್ಳಿ. ಆಗ ನೀವು ಮಾಡುವ ಕೆಲಸ ಪೂಜೆಯಷ್ಟೇ ಚೆನ್ನಾಗಿರುವುದು.

ಇಂದು ಜನ ತಮ್ಮ ಶಕ್ತಿಯನ್ನು ಹಲವು ಕೆಲಸಗಳ ಮೇಲೆ ಹರಿಬಿಟ್ಟಿದ್ದಾರೆ. ನಾವು ಪ್ರತಿ ಒಂದನ್ನು ಚೆನ್ನಾಗಿ ಮಾಡುವುದಕ್ಕೆ ಆಗುವುದಿಲ್ಲ. ಎಲ್ಲಿ ನೀವು ಚೆನ್ನಾಗಿ ಕೆಲಸ ಮಾಡಬಲ್ಲಿರೊ ಅದನ್ನು ಆರಿಸಿಕೊಳ್ಳಬೇಕು. ಒಂದು ವೃತ್ತಿ ನಿಮ್ಮ ಜೀವನದಲ್ಲಿ ಮುಖ್ಯವಾಗಿರಲಿ, ಉಳಿದವುಗಳೆಲ್ಲ ಅದಕ್ಕೆ ಆಶ್ರಯವಾಗಿದ್ದರೆ, ಒಂದು ಸಾಮರಸ್ಯ ಬರುವುದು. ಆಧುನಿಕ ಜೀವನ ಆಳಕ್ಕಿಂತ ಹೆಚ್ಚಾಗಿ ವಿಸ್ತಾರವಾಗಿದೆ. ಹಲವು ವೃತ್ತಿಗಳ ಸಂತೆಯಾಗಿದೆ. ನೀವು ಪೂರ್ಣತೆಯನ್ನು ವ್ಯಕ್ತಪಡಿಸಬಹುದಾದ ಯಾವುದಾದರೂ ಒಂದನ್ನು ಆರಿಸಿಕೊಳ್ಳಿ. ನಿಮ್ಮ ಸ್ವಧರ್ಮವನ್ನು ಬಿಟ್ಟು ಬೇರೆ ಕರ್ಮವನ್ನು ಮಾಡಬೇಕಾಗಿ ಬಂದರೂ, ಕೆಲಸವನ್ನು ಆಧ್ಯಾತ್ಮಿಕ ದೃಷ್ಟಿಯಿಂದ ನೋಡಿ. ಆದರೆ ಅದು ಬಹಳ ಕಷ್ಟ. ಯಾವ ಕೆಲಸದ ಮೂಲಕವಾಗಿಯಾದರೂ ಮನಸ್ಸನ್ನು ಶಾಂತಸ್ಥಿತಿಗೆ ತರಬಹುದು.

ಭಗವತ್ಪ್ರೀತಿ ಕೆಲಸವನ್ನು ಐದು ದೃಷ್ಟಿಯಿಂದ ನೋಡುವುದು. ಅದರಲ್ಲಿ ಪ್ರತಿ

ಯೊಂದೂ ಸರಿಯಾಗಿರಬೇಕು. ಇದನ್ನೇ ಜಯದ ಪಂಚಭುಜಗಳು ಎನ್ನುತ್ತೇವೆ. ಮೊದಲು ನಾವು ಕೆಲಸ ಮಾಡುವ ಕ್ಷೇತ್ರ. ಇದನ್ನೇ ಅಧಿಷ್ಠಾನ ಎನ್ನುವರು. ಎರಡನೆಯವನೆ ಅದನ್ನು ಮಾಡುವವನು, ಕರ್ತೃ. ಕೆಲಸವನ್ನು ಮಾಡುವುದಕ್ಕೆ ಉಪಯೋಗಿಸುವ ಕರಣಗಳು ಮೂರನೆಯದು. ನಾಲ್ಕನೆಯದೇ ಕೆಲಸವನ್ನು ಮಾಡುವ ರೀತಿ.

ಐದನೆ ಭುಜವನ್ನು ಹೇಳುವುದಕ್ಕೆ ಮುಂಚೆ, ಈ ನಾಲ್ಕನ್ನೂ ವಿವರಿಸುತ್ತೇನೆ. ಪ್ರತಿಯೊಂದು ಕೆಲಸವನ್ನೂ ಯಾವುದಾದರೂ ಒಂದು ಕ್ಷೇತ್ರದಲ್ಲಿ ಮಾಡುತ್ತೇವೆ. ನೀವೇನಾದರೂ ವ್ಯಾಪಾರಕ್ಕೆ ಇಳಿದರೆ, ಆ ಕಾರ್ಯಕ್ಷೇತ್ರದ ವಿಷಯ ನಿಮಗೆ ಗೊತ್ತಿಲ್ಲದೇ ಇದ್ದರೆ ನಿಮಗೆ ಕಷ್ಟಪರಂಪರೆ ಬರಬಹುದು. ಅನಂತರ ತೊಂದರೆಗಳ ವಿಘ್ನಗಳು ಬರದಿರುವಂತೆ ನೋಡಿಕೊಳ್ಳುವುದಕ್ಕಾಗಿ ಕಾರ್ಯಕ್ಷೇತ್ರವನ್ನು ಎಲ್ಲಾ ದೃಷ್ಟಿಗಳಿಂದಲೂ ಪರೀಕ್ಷಿಸಬೇಕು. ಏನು ಬರಬಹುದು ಎಂಬುದನ್ನು ನಾವು ನಿರೀಕ್ಷಿಸುವ ಸ್ಥಿತಿಯಲ್ಲಿರಬೇಕು.

ಕರ್ತೃ ಎಂದರೆ ಕೆಲಸವನ್ನು ಮಾಡುವವನ ದೃಷ್ಟಿಯಿಂದ, ಆ ಕೆಲಸವನ್ನು ಮಾಡುವುದಕ್ಕೆ ಅವನಿಗೆ ಯೋಗ್ಯತೆಗಳಿವೆಯೆ ಇಲ್ಲವೆ ಎಂಬುದನ್ನು ನೋಡಬೇಕು. ಅಧಿಕಾರಿಯ ಯೋಗ್ಯತೆಯನ್ನು ತಿಳಿದುಕೊಳ್ಳಬೇಕಾಗಿದೆ. ಇಲ್ಲಿಯೇ ಸ್ವಧರ್ಮ ಬರುವುದು. ಒಂದು ಕೆಲಸವನ್ನು ಮಾಡುವುದಕ್ಕೆ ಒಬ್ಬನಲ್ಲಿರುವ ಸಾಮರ್ಥ್ಯ ಮತ್ತು ಅಭಿಲಾಷೆಗಳನ್ನು ತೆಗೆದುಕೊಳ್ಳಬೇಕು. ಅಧಿಕಾರಿಯಲ್ಲಿ ನಾವು ಮತ್ತೊಂದು ಗುಣವನ್ನು ನಿರೀಕ್ಷಿಸಬೇಕಾಗಿದೆ. ಯಾವ ಕೆಲಸವನ್ನು ಕೈಕೊಳ್ಳಬೇಕಾದರೂ ಒಬ್ಬನಿಗೆ ತನ್ನಲ್ಲಿ ಆತ್ಮಶ್ರದ್ಧೆ ಇರಬೇಕು. ಸಂಸ್ಕೃತದಲ್ಲಿ ಶ್ರದ್ಧೆ ಎಂದರೆ ಬರೀ ನಂಬಿಕೆಯಲ್ಲ, ಆ ಪೂರ್ಣತೆ ನಿನ್ನಲ್ಲಿದೆ, ಅದನ್ನು ವ್ಯಕ್ತಪಡಿಸುವ ಸಾಮರ್ಥ್ಯ ನಿನ್ನಲ್ಲಿದೆ ಎಂದು ತಿಳಿದುಕೊಂಡಿರುವುದು. ಗುರಿಯನ್ನು ಸೇರಬೇಕಾದರೆ, ಎಷ್ಟೇ ಆತಂಕಗಳ ಪರಂಪರೆ ಬಂದರೂ ನಾನು ಅವುಗಳನ್ನು ದಾಟಿ ಹೋಗುತ್ತೇನೆ ಎಂಬ ಸಾಮರ್ಥ್ಯ ಇರಬೇಕು. ನಿನ್ನಲ್ಲಿರುವ ಪವಿತ್ರತೆ, ನೀನು ಮಾಡುವ ಕೆಲಸದ ಮೂಲಕ, ಅತ್ಯಂತ ಸುಂದರವಾಗಿರುವುದನ್ನು, ಪ್ರಯೋಜನವಾಗಿರುವುದನ್ನು ವ್ಯಕ್ತಪಡಿಸುವುದು ಎಂಬ ವಿಶ್ವಾಸ ಇರಬೇಕು. ಒಂದು ಕ್ಷಣವೂ ಇದರಲ್ಲಿ ಸಂದೇಹಪಡಬೇಡಿ. ಅನಂತಶಕ್ತಿ ನಿನ್ನಲ್ಲಿದೆ ಎಂದು ನಂಬಿ. ನಾನೇ ನನ್ನ ಸ್ವಂತ ಶಕ್ತಿಯ ಸಹಾಯದಿಂದ ಕೆಲಸಕ್ಕೆ ಕೈಹಾಕುತ್ತೇನೆ ಎಂದು ಶಪಥ ಮಾಡಿ. ನೀವು ಈ ಪ್ರಪಂಚದಲ್ಲಿ ಯಾವುದನ್ನೂ ನೆಚ್ಚುವುದಕ್ಕೆ ಆಗುವುದಿಲ್ಲ. ಪ್ರಪಂಚವೇ ನಿನಗೆ ವಿರೋಧವಾಗಿ ನಿಂತರೂ ನಿನ್ನಲ್ಲಿರುವ ಪೂರ್ಣತೆಯ ಆದರ್ಶದಲ್ಲಿ ನಂಬಿ ಆತ್ಮಶ್ರದ್ಧೆಯನ್ನು ರೂಢಿಸು. ಕೆಲವು ಆತಂಕಗಳು ಬಂದರೆ, ನಿರಾಶೆ ಬಂದರೆ ಅಧೈರ್ಯ ತಾಳಬೇಡ. ಹೇಡಿಯಾಗಬೇಡ ಧೀರನಾಗು. ನೀನು ಮಾಡುವ ಕೆಲಸದಲ್ಲಿ ಮತ್ತು ನಿನ್ನಲ್ಲಿ ಅಂತಹ ಶ್ರದ್ಧೆ ಇರಬೇಕು; ಈ ನಂಬಿಕೆಯನ್ನೆ ಶ್ರದ್ಧೆ ಎನ್ನುವುದು.

ಕೆಲಸ ಮಾಡುವುದಕ್ಕೆ ಒಬ್ಬನಿಗೆ ಮಾರ್ಗಗಳೂ ಇರಬೇಕು. ಶ್ರದ್ಧೆಯೊಂದೇ ಸಾಲದು. ಒಂದು ಕ್ಷೇತ್ರದಲ್ಲಿ ಕೆಲಸವನ್ನು ಮಾಡುವುದಕ್ಕೆ ಅಧಿಕಾರಿಯಲ್ಲಿ ಶಿಸ್ತು ಇದೆಯೆ, ವಿದ್ಯೆ ಇದೆಯೆ, ತರಬೇತು ಇದೆಯೆ ಎಂಬುದನ್ನು ನೋಡಬೇಕು. ಯಾವ ಕೆಲಸ

ವನ್ನು ಮಾಡಬೇಕೆಂದು ಆಶಿಸುವದೊ ಅದಕ್ಕಾಗಿ ತರಬೇತನ್ನು ತೆಗೆದುಕೊಳ್ಳಬೇಕು. ಯಾವ ವೃತ್ತಿಯಾದರೂ ಆಗಲಿ, ಅದರ ಪರಿಚಯ ಇರಬೇಕು.

ಇತರರನ್ನು ಕೂಡ ಒಂದು ನಿಮಿತ್ತ ಎಂದು ಭಾವಿಸು. ಸ್ನೇಹಿತರು ಬರೀ ಸ್ನೇಹಿತರು ಮಾತ್ರವಲ್ಲ, ಪರಿಚಿತಸ್ಥರು. ಬರೀ ಪರಿಚಿತಸ್ಥರು ಮಾತ್ರವಲ್ಲ. ಎಲ್ಲರೂ ಭಗವಂತನ ಕೈಯಲ್ಲಿ ನಿಮಿತ್ತವೆ.

ಅನಂತರ ನಾವು ಕೆಲಸ ಮಾಡುವಾಗ ಉಪಯೋಗಿಸುವ ಕರಣಗಳು ಎಂದರೆ ಸಾಮಾನುಗಳು. ಇಂಡಿಯಾದೇಶದಲ್ಲಿ ಒಂದು ಗಾದೆಯಿದೆ. "ಕತ್ತಿಯಿಲ್ಲ, ಗುರಾಣಿಯಿಲ್ಲ, ಆದರೂ ನೀನು ಸಿಪಾಯಿ ಆಗಬೇಕಂತೆ." ನೀನು ಸಿಪಾಯಿ ಆಗಬೇಕಾದರೆ ಕತ್ತಿ ಗುರಾಣಿಗಳನ್ನು ತೆಗೆದುಕೊ. ಅದನ್ನು ಸಾಣೆಗೆ ಕೊಟ್ಟು ಉಜ್ಜಿ ಶುಭ್ರವಾಗಿಡು. ಮುಂಚೆ ಉಪಯೋಗಿಸುವ ವಸ್ತುಗಳನ್ನು ಚೆನ್ನಾಗಿಡಿ. ಅನಂತರ ಅದನ್ನು ಉಪಯೋಗಿಸುವುದಕ್ಕೆ ಯತ್ನಿಸಿ. ಯಾವ ಕಾರ್ಯಕ್ಷೇತ್ರಲ್ಲಿ ಪೂರ್ಣತೆಯನ್ನು ಮುಟ್ಟಬೇಕಾದರೂ, ಉಪಯೋಗಿಸುವ ಸಾಮಾನುಗಳನ್ನು ಸರಿಯಾಗಿ ಇಟ್ಟಿರಬೇಕು.

ಒಬ್ಬ ದೊಡ್ಡ ಸಂಗೀತಗಾರ ಒಂದು ಕಛೇರಿ ಕೊಡಬೇಕೆಂದು ಇಚ್ಛಿಸುವನು. ಆಗ ಪಿಯಾನೊ ಸರಿಯಾಗಿ ಶ್ರುತಿ ಕೂಡಿಲ್ಲ. ಸಂಗೀತ ಕಛೇರಿಯೇ ಹಾಳಾಗುವುದು. ಹಾಡುವವನಿಗೆ ಸ್ಫೂರ್ತಿಯೇ ಇರುವುದಿಲ್ಲ. ಶ್ರೋತೃಗಳಿಗೆ ಅತೃಪ್ತಿಯಾಗುವುದು. ಅವರು ಕೊಟ್ಟ ಹಣವನ್ನು ವಾಪಸ್ಸು ಕೇಳಿದರೂ ಕೇಳಬಹುದು. ಇದೆಲ್ಲ ಏತಕ್ಕೆ ಎಂದರೆ ಸಂಗೀತಗಾರ ಉಪಯೋಗಿಸುವ ಸಾಮಾನುಗಳನ್ನು ಸರಿಯಾಗಿ ಪರೀಕ್ಷೆ ಮಾಡದೆ ಇದ್ದುದಕ್ಕಾಗಿ.

ಇಂಡಿಯಾದೇಶದಲ್ಲಿ ಕೆಲಸಕ್ಕೆ ಉಪಯೋಗಿಸುವ ಕರಣಗಳನ್ನೆಲ್ಲ ಪವಿತ್ರದೃಷ್ಟಿಯಿಂದ ನೋಡುತ್ತಾರೆ. ಪ್ರತಿವರ್ಷವೂ ವಿಶ್ವಕರ್ಮ ಪೂಜೆಯನ್ನು ಮಾಡುವಾಗ, ದೇವರನ್ನು ಈ ಪ್ರಪಂಚವನ್ನು ಯೋಜಿಸಿದವನು ಎಂದು ಅವನನ್ನು ವಿಗ್ರಹದ ಮೂಲಕ ಪೂಜಿಸುವಾಗ, ಅವನೆದುರಿಗೆ ಕೆಲಸದಲ್ಲಿ ಉಪಯೋಗಿಸುವ ಸಾಮಾನುಗಳನ್ನು ಇಟ್ಟು ಅದರ ಮೇಲೆ ಭಗವಂತನ ಕೃಪೆಯನ್ನು ಬೇಡುತ್ತಾರೆ.

ನಾಲ್ಕನೆಯದು ಸಾಮರ್ಥ್ಯದಿಂದ ಕೆಲಸವನ್ನು ಮಾಡುವುದು, ಕೆಲಸವನ್ನು ಮಾಡುವುದಕ್ಕೆ ನಾವು ಎಷ್ಟು ಶಕ್ತಿಯನ್ನು ಖರ್ಚು ಮಾಡಬೇಕು ಎಂಬುದನ್ನು ಮೂರು ದೃಷ್ಟಿಯಿಂದ ನೋಡಬಹುದು. ಹೆಚ್ಚು ಶಕ್ತಿ ಉಪಯೋಗಿಸುವುದು, ಕಡಿಮೆ ಶಕ್ತಿ ಉಪಯೋಗಿಸುವುದು ಮತ್ತು ಶಕ್ತಿಯನ್ನು ವೃಥಾ ವ್ಯರ್ಥ ಮಾಡುವುದು. ಎಷ್ಟು ಬೇಕೊ ಅಷ್ಟು ಶಕ್ತಿಯನ್ನು ಉಪಯೋಗಿಸಬೇಕು. ವೃಥಾ ಶಕ್ತಿಯನ್ನು ವ್ಯರ್ಥ ಮಾಡುವುದು ನಮ್ಮ ಶೀಲದಲ್ಲಿ ಕಳಂಕವನ್ನು ತೋರುವುದು. ಇದನ್ನೆ ನಾವು ರಾಜಸಿಕ ಅಧಿಕಾರಿಯ ವಿಷಯದಲ್ಲಿ ಹೇಳಿರುವೆವು. ಕಡಿಮೆ ಶಕ್ತಿಯನ್ನು ಉಪಯೋಗಿಸುವುದಕ್ಕೆ ಕಾರಣ ತಮೋಗುಣ. ಇದಕ್ಕೆ ಸೋಮಾರಿತನ ಅಥವಾ ಅಜ್ಞಾನವೇ ಕಾರಣ. ತಪ್ಪಾಗಿ ಶಕ್ತಿಯನ್ನು ಉಪಯೋಗಿಸುವುದಕ್ಕೆ ಕಾರಣವೇ ಯಾವುದಕ್ಕೆ ಎಷ್ಟು ಖರ್ಚು ಮಾಡಬೇಕು ಎಂದು ಗೊತ್ತಿಲ್ಲದೆ ಇರುವುದು.

ಇವುಗಳನ್ನೆಲ್ಲ ನಾವು ವಿಭಜನೆ ಮಾಡಿ ಸರಿ ಹೊಂದಿಸಿಕೊಳ್ಳಬೇಕಾಗಿದೆ. ಆಗ ಸಾಕಷ್ಟು ಕಡಿಮೆ ಶಕ್ತಿವ್ಯಯದಿಂದ ಸಾಕಷ್ಟು ಜಾಸ್ತಿ ಕೆಲಸವನ್ನು ಮಾಡಬಹುದು. ಯಾವ ಕೆಲಸದಲ್ಲಿ ಹೆಚ್ಚು ಸೌಂದರ್ಯವನ್ನು ನೋಡುತ್ತೇವೊ, ಎಲ್ಲಿ ನಾವು ಸಾಕಷ್ಟು ಕಡಿಮೆ ಶಕ್ತಿಯನ್ನು ಉಪಯೋಗಿಸಿರುವೆವೊ ಇದೇ ಅತ್ಯಂತ ಜಯಪ್ರದವಾದ ಕೆಲಸ ಎಂದು ನೋಡಬೇಕು. ಪೂರ್ಣತೆಯನ್ನು ಒಂದು ಕೆಲಸದ ಮೂಲಕ ವ್ಯಕ್ತಪಡಿಸುವಾಗ ಅದನ್ನು ಕುಶಲತೆಯಿಂದ ಮಾಡಬೇಕು. ಕರ್ಮಯೋಗಿಗೆ ಕಾಲ, ದೇಶ, ಸನ್ನಿವೇಶಕ್ಕೆ ತಕ್ಕಂತೆ ಕೆಲಸವನ್ನು ಹೊಂದಿಸಿಕೊಳ್ಳುವ ರಹಸ್ಯ ಗೊತ್ತಿದೆ. ಇದೇನೆ ಹೊಂದಾಣಿಕೆ.

ಪಂಚಭುಬಗಳಲ್ಲಿ ಐದನೆಯದೆ ಅತಿ ಮುಖ್ಯವಾಗಿರುವುದು. ಇನ್ನು ನಾಲ್ಕನ್ನೂ ನಾವು ಸರಿಯಾಗಿ ನೋಡಿಕೊಂಡಿದ್ದರೂ, ಐದನೆಯದು ಇಲ್ಲದೇ ಇದ್ದರೆ, ಕೆಲಸ ಜಯಪ್ರದವಾಗುವುದೆಂದು ಹೇಳುವುದಕ್ಕೆ ಆಗುವುದಿಲ್ಲ. ಪ್ರಾಪಂಚಿಕ ವಸ್ತುಗಳನ್ನು ಪಡೆಯುವುದಲ್ಲ ನಮ್ಮ ಕೆಲಸದ ಉದ್ದೇಶ. ಕೆಲಸದ ಮೂಲಕ ನಾವು ಪೂರ್ಣತೆಯನ್ನು ಪಡೆಯಬೇಕಾಗಿದೆ. ಒಂದು ಕೆಲಸ ಮಾಡುವಾಗ ಬಾಹ್ಯ ಮತ್ತು ಆಂತರಿಕ ದೃಷ್ಟಿಗಳೆರಡೂ ಮುಖ್ಯ. ಐದನೆಯದೆ ಅತ್ಯಂತ ಮುಖ್ಯವಾಗಿರುವುದು.

ಕೆಲವರು ಇದನ್ನು ಅದೃಷ್ಟ, ಹಣೆಯಬರಹ, ದೈವ ಎಂದು ಏನು ಬೇಕಾದರೂ ಹೇಳಬಹುದು. ಅದೇನಾದರೂ ಆಗಲಿ, ನಾವು ಅದನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗಿದೆ. ಏಕೆಂದರೆ ನಮ್ಮ ಕರ್ಮದ ಮೇಲೆ ಅದಕ್ಕೆ ಒಂದು ಹತೋಟಿ ಇದೆ. ನಮಗೆ ಅದರ ಮೇಲೆ ಹತೋಟಿ ಇಲ್ಲ. ಎಮರ್ಸನ್ನನು ಐದನೆಯದಾದ ದೈವವನ್ನು "ಗೊತ್ತಿಲ್ಲದ ವ್ಯಂಜನ" (The Unscheduled Ingredient) ಎಂದು ಹೇಳಿದನು. ನಾವು ಯಾವಾಗಲೂ ಈ ದೈವಕ್ಕೆ ದೊಡ್ಡ ಸ್ಥಾನವನ್ನು ಕೊಡಬೇಕಾಗಿದೆ. ಐದನೆಯದನ್ನು ಒಪ್ಪಿಕೊಳ್ಳುವುದೇ ಎಲ್ಲಾ ಜಯದ ಮೂಲ. ಮೊದಲ ನಾಲ್ಕನ್ನು ಚೆನ್ನಾಗಿ ಗಮನಿಸಿದಮೇಲೆ, ಇನ್ನೂ ಆತಂಕಗಳು ಇದ್ದರೆ, ಭಗವಂತನಲ್ಲಿ ಶರಣಾಗಬೇಕು. ನೀನು ಕೆಲಸದಲ್ಲಿ ಜಯಶಾಲಿಯಾಗಬೇಕಾದರೆ ಯಾವಾಗಲೂ ಐದನೆಯ ವ್ಯಂಜನಕ್ಕೆ ಅವಕಾಶವನ್ನು ಕಲ್ಪಿಸಿರು. ಯಾವಾಗ ನಾವು ಇದಕ್ಕೆ ಅವಕಾಶವನ್ನು ಕಲ್ಪಿಸಿರುವೆವೊ ಆಗ ಹೆಚ್ಚು ಶಾಂತಿ, ಸ್ಥಿರತೆ, ದೀರ್ಘವಾದ ಆಲೋಚನೆ ಮಾಡುವುದು ಎಲ್ಲವೂ ಬರುವುವು. ನಾವು ಯಾವಾಗ ದೈವವನ್ನು ಒಪ್ಪಿಕೊಳ್ಳುತ್ತೇವೊ, ಆಗ ಅದು ನಮ್ಮ ದುರಹಂಕಾರವನ್ನು ಸ್ವಾರ್ಥವನ್ನು, ಆಸಕ್ತಿಯನ್ನು ತಗ್ಗಿಸುವುದು. ಪಂಚಭುಜಗಳಲ್ಲಿ ಐದನೆಯದಾದ ದೈವಕ್ಕೆ ಯಾವಾಗ ಅವಕಾಶವನ್ನು ಕಲ್ಪಿಸುವೆವೊ, ನಮ್ಮ ಆಧ್ಯಾತ್ಮಿಕ ಜೀವನಕ್ಕೆ ಇರುವ ಎಲ್ಲಾ ಆತಂಕಗಳೂ ನಿವಾರಣೆ ಆಗುವುವು.

ಜೀವನದಲ್ಲಿ ಹಲವಾರು ವಸ್ತುಗಳನ್ನು ನಾವು ಆಶಿಸುತ್ತೇವೆ. ನಾವು ಬೇಕಾದಷ್ಟು ಆಲೋಚನೆ ಮಾಡಿದಮೇಲೆ, ಮುಂದೆ ಒದಗಬಹುದಾದುದಕ್ಕೆಲ್ಲ ಅವಕಾಶವನ್ನು ಕಲ್ಪಿಸಿದ ಮೇಲೆ, ಆಶಯಗಳನ್ನು ರೂಢಿಸಿಕೊಳ್ಳಬೇಕು. ನೀನು ಏನು ಆಗಬೇಕೆಂದು ಇಚ್ಛಿಸುವೆಯೊ ನಿನಗೆ ಅದು ಗೊತ್ತಾದರೆ, ಅದನ್ನೆ ಸ್ವಲ್ಪ ಪ್ರಯತ್ನಿಸಿ. ಅದರಲ್ಲಿರುವ ಸಾಧಕ–

ಬಾಧಕಗಳನ್ನೆಲ್ಲ ಆಲೋಚಿಸಿ ಅದಕ್ಕೆ ಕೈಹಾಕಬೇಕು. ನಿಮ್ಮ ಸುತ್ತಮುತ್ತ ಜನ ಏನೊ ಮಾಡುತ್ತಿದ್ದರೆ ನಾನು ಅದನ್ನೆ ಮಾಡಬೇಕೆಂದು ಧುಮುಕಬೇಡಿ. ಇತರರ ಹವ್ಯಾಸಗಳು ನಮ್ಮನ್ನು ನೂಕುತ್ತವೆ. ಇತರರಿಗೆ ಏನು ಇದೆಯೊ, ಅವರು ಏನು ಕೆಲಸ ಮಾಡುತ್ತಾರೋ ನನಗೆ ಅದೇ ಬೇಕಾಗಿರುವುದು ? ಮಾಡಬೇಕಾಗಿರುವುದು ? ಎಂಬ ಪ್ರಶ್ನೆಯನ್ನು ಹಾಕಿ ಕೊಳ್ಳಬೇಕು. ನಮ್ಮನ್ನು ಚೆನ್ನಾಗಿ ತುಲನೆಮಾಡಿ ನೋಡಿದಮೇಲೆ ನಮ್ಮ ಆದರ್ಶವನ್ನು ನಿಶ್ಚಯಮಾಡುವ. ನಮ್ಮ ಆಶಯಗಳನ್ನು ಮೀರಿ ನಾವು ಹೋಗಬೇಕಾಗಿದೆ. ನಮ್ಮ ಎದುರಿಗೆ ಯಾವಾಗಲೂ ಒಂದು ಸಾಧಿಸಬೇಕಾಗಿರುವುದು ಇದ್ದರೆ ನಾವು ಸುಖಿಗಳಾಗು ವುದಿಲ್ಲ. ನಿಮ್ಮ ಜೀವನವನ್ನು ಸಾರ್ಥಕಗೊಳಿಸುವುದಾವುದು ಎಂಬುದನ್ನು ಮೊದಲು ನಿರ್ಧರಿಸಿ. ಅದಕ್ಕೆ ನಾವು ಶಿಸ್ತಿನಿಂದ ಆಲೋಚನೆಯನ್ನು ಮಾಡಬೇಕಾಗಿದೆ.

ನಮ್ಮ ಜೀವನದಲ್ಲಿ ಜಯಪ್ರದವಾಗಿರುವುದನ್ನು ಕುರಿತು ನಾವು ಮಾತನಾಡು ತ್ತೇವೆ. ಕೆಲವರು ಅದನ್ನು ಉಪಾಯದಿಂದ ಪಡೆಯಬೇಕೆಂದು ಆಶಿಸುವರು. ಆ ಕೆಲಸಕ್ಕೆ ಬೇಕಾದ ಶಿಸ್ತನ್ನು ಪಡೆಯುವುದಕ್ಕೆ ಅವರಿಗೆ ತಾಳ್ಮೆ ಇಲ್ಲ. ಯಾವುದಾದರೂ ಹತ್ತಿರದ ಒಳರಸ್ತೆಯನ್ನು ಅವರು ಹುಡುಕುತ್ತಿರುವರು. ನಾವು ನಿಜವಾಗಿ ಜಯವನ್ನು ಪಡೆಯ ಬೇಕಾದರೆ, ಹತ್ತಿರದ ರಸ್ತೆ ಇಲ್ಲ. ನಿಜವಾದ ಜಯಕ್ಕೆ ಹತ್ತಿರದ ರಸ್ತೆಯೇ ಇಲ್ಲ ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಬೇರೆ ಯಾವುದಾದರೂ ವೃತ್ತಿಯಲ್ಲಿ ನೀವು ಬೇರೊಂದು ರೀತಿಯಲ್ಲಿ ಮುಂದುವರಿಯುವಿರಿ ಎಂದು ನೀವು ಯೋಚಿಸಬಹುದು. ಅದೂ ಕೂಡ ಆಧ್ಯಾ ತ್ಮಿಕ ಜೀವನದಲ್ಲಿ ಸೋಲಿನಲ್ಲಿ ಪರ್ಯವಸಾನವಾಗುವುದು. ನಿಮ್ಮ ಕೆಲಸದ ಮೇಲೆ ಸರಿಯಾದ ಕರ್ತೃತ್ವದ ದೃಷ್ಟಿಯಿಲ್ಲದೆ, ನೀವು ಹೊರಗಡೆ ಎಷ್ಟು ಗಳಿಸಿದರೂ ಪ್ರಯೋಜನವಿಲ್ಲ. ನಿಮ್ಮ ಕೆಲಸದಲ್ಲಿ ಆಂತರಿಕ ಪೂರ್ಣತೆಯನ್ನು ವ್ಯಕ್ತಪಡಿಸುವುದಕ್ಕೆ ಕರ್ಮ ಮತ್ತು ಆಲೋಚನೆಯ ಶಿಸ್ತಿನ ಮೂಲಕ ಹೋಗಬೇಕು. ಆತ್ಮಶ್ರದ್ಧೆಯನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳಬೇಕು.

ಕರ್ಮಯೋಗದಲ್ಲಿ ಸಾಧಕ ಮೂರು ಮೆಟ್ಟಲುಗಳ ಮೂಲಕ ಸಾಗಿಹೋಗುತ್ತಾನೆ. ಮೊದಲನೆಯದೆ ಚಿತ್ತಶುದ್ಧಿ. ಕರ್ಮದ ಮೂಲಕ ಅತ್ಯಂತ ಶ್ರೇಷ್ಠವಾದ ಚಿತ್ತಶುದ್ಧಿ ಯನ್ನು ಪಡೆಯುವುದು ನಿಮ್ಮ ಉದ್ದೇಶವಾಗಿರಬೇಕು. ಆದಕಾರಣ ಎಲ್ಲಾ ಕರ್ಮವನ್ನು ಚಿತ್ತಶುದ್ಧಿಯ ದೃಷ್ಟಿಯಿಂದ ನೋಡಬೇಕಾಗಿದೆ. ನಿಮ್ಮ ಕೆಲಸದ ವಿಷಯದಲ್ಲಿ ಕರ್ತೃತ್ವ ಭಾವವನ್ನು ಸರಿಯಾಗಿ ಪಡೆದಿದ್ದರೆ, ಕೆಲಸದ ವಿಷಯದಲ್ಲಿ ಗೊಣಗಾಡುವುದಿಲ್ಲ, ಎಷ್ಟು ಕೆಲಸವನ್ನು ಮಾಡಬೇಕಾದರೂ ಗೊಣಗಾಡುವುದಿಲ್ಲ. ನೀವು ಹೆಚ್ಚು ಕೆಲಸಮಾಡಿದಷ್ಟೂ ನಿಮ್ಮ ಚಿತ್ತ ಹೆಚ್ಚಾಗಿ ಶುದ್ಧವಾಗುವುದು. ನೀವು ಮಾಡುವ ಕೆಲಸಕ್ಕೆ ಆಸಕ್ತರೂ ಆಗುವುದಿಲ್ಲ, ಹೊಗಳಿಕೆ ತೆಗಳಿಕೆಗಳನ್ನು ನೀವು ಲೆಕ್ಕಿಸುವುದಿಲ್ಲ. ಏಕೆಂದರೆ ಕೆಲಸವನ್ನು ನಿಮ್ಮ ಚಿತ್ತಶುದ್ಧಿಗೋಸುಗ, ನಿಮ್ಮ ಉದ್ಧಾರಕ್ಕೋಸುಗ ಮಾಡುವಿರಿ.

ನೀವು ಮುಂದುವರಿದಂತೆ ಆತಂಕಗಳು ಕ್ರಮೇಣ ಕಡಿಮೆಯಾಗುತ್ತ ಬರುವುವು. ನಿಮ್ಮ ಕೆಲಸದಲ್ಲಿ ಕೌಶಲ್ಯ ಮತ್ತು ಸಾಮರ್ಥ್ಯ ಹೆಚ್ಚಾಗುತ್ತ ಬರುವುದು. ಚಿತ್ತಶುದ್ಧಿ

ಯಾದಂತೆ, ನಿಮ್ಮ ಕೆಲಸದ ಮೂಲಕ ಪವಿತ್ರತೆ ವ್ಯಕ್ತವಾಗುತ್ತ ಬರುವುದು. ನೀವು ಮಾಡುವ ಕೆಲಸ ಸಮರ್ಪಕವಾಗುವುದು. ಚಿತ್ತಶುದ್ಧಿಗಾಗಿ ಸೇವಾ ಮನೋಭಾವದಿಂದ ಕೆಲಸಮಾಡಿದರೆ, ನಿಮ್ಮ ಅಂತರಾಳದಲ್ಲಿರುವ ಸೂಕ್ಷ್ಮವಾದ ಆತಂಕಗಳ ಪದರಗಳು ಕಡಮೆಯಾಗುತ್ತ ಬರುವುವು. ನಿಮ್ಮ ದೃಷ್ಟಿ ವಿಶಾಲವಾಗುವುದು. ನೀನೇ ಎಲ್ಲಾ ಕಡೆಯಲ್ಲಿಯೂ, ಎಲ್ಲಾ ನಾಮರೂಪಗಳ ಹಿಂದೆ ಕಾಣುವಂತೆ ತೋರುವುದು. ಆಗ ಫಲಾಪೇಕ್ಷೆ ಇಲ್ಲದೆ ಇತರರಿಗೆ ಒಳ್ಳೆಯದನ್ನು ಮಾಡುವೆ. ಏಕೆಂದರೆ ಹಾಗೆ ಮಾಡದೆ ಇರುವುದಕ್ಕೆ ಆಗುವುದಿಲ್ಲ. ಒಳ್ಳೆಯತನವೇ ನಿಮ್ಮ ಸ್ವಭಾವ ಆಗುವುದು. ಈ ಪ್ರಪಂಚದಲ್ಲಿ ಎಲ್ಲಾ ವಸ್ತುಗಳಲ್ಲಿಯೂ ಪರಮಾತ್ಮನನ್ನು ನೋಡುವೆ. ಆಗ ನೀನು ಏನುಮಾಡಿದರೂ ಪೂಜೆಯಾಗುವುದು.

ನೀವು ಈ ಹಂತದ ಮೂಲಕ ಹೋದರೆ, ಯಾವಾಗಲೂ ಪರಮಾನಂದದಲ್ಲಿರುವಿರಿ. ನಿಮಗೆ ಇನ್ನುಮೇಲೆ ದುಃಖವೇ ಬರುವುದಿಲ್ಲ. ಸುಖದುಃಖಗಳಾಚೆ ಇರುವ ಪರಮಾನಂದದಲ್ಲಿ ನೆಲೆಸುವಿರಿ. ಸ್ವಾರ್ಥತೆ ನಿಮ್ಮಿಂದ ಬಿದ್ದುಹೋಗುವುದು. ಅದು ಬಿದ್ದುಹೋದಾಗ ಅಜ್ಞಾನದಿಂದ ಪಾರಾಗುವಿರಿ. ಎಲ್ಲಾ ಕರ್ಮಗಳ ಆಚೆ ನಿತ್ಯಸಾಕ್ಷಿಯಂತಿರುವ ನಿಮ್ಮ ಪರಮಾತ್ಮನನ್ನು ಕಂಡುಕೊಳ್ಳುವಿರಿ. ನಿಮ್ಮ ಪ್ರಜ್ಞೆ ಅದರಲ್ಲಿ ಸ್ಥಿರವಾಗಿರುವುದು. ಕೆಲಸ ಮಾಡುತ್ತಿರಲಿ, ಮೌನವಾಗಿರಲಿ. ಜನನ ಬರಲಿ, ಮರಣ ಬರಲಿ, ನಿನ್ನ ಆತ್ಮ ಅದನ್ನು ಗಮನಿಸುವುದಿಲ್ಲ. ಇದೇ ಕರ್ಮಯೋಗದ ಸಮಾಧಿ.

ಕರ್ಮಯೋಗದ ಮೂಲಕ ಬರುವ ಸಮಾಧಿಯನ್ನು ಸ್ಥಿತಪ್ರಜ್ಞ ಎಂದು ಕರೆಯುತ್ತಾರೆ. ಎಂದರೆ ಪ್ರಜ್ಞೆ ಯಾವಾಗಲೂ ಸ್ಥಿರವಾಗಿರುವುದು ಎಂದು. ನೀವು ಭಗವದ್ಗೀತೆಯ ಎರಡನೆ ಅಧ್ಯಾಯದಲ್ಲಿ ೫೫–೭೨ ಶ್ಲೋಕಗಳನ್ನು ನೋಡಿದರೆ ಸ್ಥಿತಪ್ರಜ್ಞನ ಲಕ್ಷಣಗಳನ್ನು ಹೇಳುತ್ತಾರೆ.

ಸಾಧಾರಣ ಮನುಷ್ಯನಿಗಿಂತ ಬೇರೆಯಾಗಿರುವ ಸ್ಥಿತಪ್ರಜ್ಞನಿಗೆ ಏಳು ಗುಣಗಳಿವೆ. (೧) ಅವನು ಆಶೆಗಳಿಂದ ಪಾರಾಗಿದ್ದಾನೆ. ಅವನ ಕೆಲಸದ ಹಿಂದೆ ಇರುವ ಉದ್ದೇಶ, ಸಾಕ್ಷೀಭೂತನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವದಾಗಿದೆ. (೨) ಅವನು ಸ್ವತಂತ್ರ. ಅವನು ಯಾವ ಬಾಹ್ಯಶಕ್ತಿಯಾಗಲಿ, ವ್ಯಕ್ತಿಯಾಗಲಿ, ಕಾಲವಾಗಲಿ, ವಾತಾವರಣವಾಗಲಿ ಇದರ ಆಧಾರದ ಮೇಲೆ ಸಾಧಾರಣ ಮನುಷ್ಯನಂತೆ ನಿಂತಿಲ್ಲ. ಅವನ ಸ್ಫೂರ್ತಿ, ಸಂತೋಷ, ಶಾಂತಿ ಎಲ್ಲ ಆಂತರ್ಯದಿಂದ ಬರುವುದು. (೩) ಅವನ ಮನಸ್ಸು ಸಮತ್ವದಲ್ಲಿದೆ. ಅವನು ಕೆಲಸಮಾಡುವಾಗ ಜಯದಿಂದ ಹಿಗ್ಗುವುದೂ ಇಲ್ಲ, ಅಪಜಯದಿಂದ ಕುಗ್ಗುವುದೂ ಇಲ್ಲ. ಕೆಲಸ ಮಾಡುವಾಗ ಮನಸ್ಸನ್ನು ಸಮತ್ವದ ಸ್ಥಿತಿಯಲ್ಲಿ ಇಟ್ಟಿರುವನು. (೪) ಅವನು ಮುಕ್ತ. ಅವನು ಎಲ್ಲಿಬೇಕಾದರೂ ಹೋಗಬಹುದು, ಏನುಬೇಕಾದರೂ ಮಾಡಬಹುದು, ಅದರಿಂದ ಬರುವ ಫಲಾಫಲಗಳಿಗೆ ಆಸಕ್ತನಲ್ಲ. (೫) ಅವನಿಗೆ ತನ್ನ ಇಂದ್ರಿಯಗಳ ಮೇಲೆ ಸಂಪೂರ್ಣ ನಿಗ್ರಹ ಇರುವುದು. ಇವನು ಇಂದ್ರಿಯಕ್ಕೆ ಒಡೆಯ, ಆಳಲ್ಲ. (೬) ಅವನು ಯಾವಾಗಲೂ ಸಂತೋಷಚಿತ್ತನು. ಅವನ ಸಮೀಪಕ್ಕೆ ಬರುವವರಿ

ಗೆಲ್ಲ ಆನಂದವನ್ನು ನೀಡುತ್ತಿರುವನು. (೭) ಅವನು ತನ್ನ ಜೀವನದಲ್ಲಿ ಮಾಡುವ ಕರ್ಮಗಳ ಮೂಲಕ ಪರಮಾತ್ಮನ ಸಾಕ್ಷಾತ್ಕಾರವನ್ನು ಅನುಭವಿಸುವನು. ತಾನಲ್ಲ ಕೆಲಸ ಮಾಡುವುದು, ಸಾಕ್ಷಿಯಾದ ಆತ್ಮನೇ ನಾನು ಎಂಬುದನ್ನು ಅರಿತಿರುವನು. ಸ್ಥಿತಪ್ರಜ್ಞನ ಮನಸ್ಸು ಅತ್ಯಂತ ಮೇಲಿನ ಮಟ್ಟದಲ್ಲಿರುವುದರಿಂದ, ಕರ್ಮದಲ್ಲೆಲ್ಲ ಅಕರ್ಮವನ್ನು ನೋಡುತ್ತಿರುವನು.

ನಾವು ಚರ್ಚಿಸಿದಂತೆ, ಕರ್ಮಯೋಗಿಯ ಆದರ್ಶ, ಅವನು ಕರ್ಮಚಕ್ರಕ್ಕೆ ವಶನಾಗದೆ ಕೆಲಸ ಮಾಡುವನು. ಕರ್ಮವನ್ನು ಈ ದೃಷ್ಟಿಯಿಂದ ಮಾಡಿದರೆ, ಕರ್ಮ ಕರ್ಮವಾಗುವುದಿಲ್ಲ. ಅದು ಒಬ್ಬನನ್ನು ಬಂಧಿಸುವುದಿಲ್ಲ. ಭಕ್ತಿಯೊಂದಿಗೆ ಬೆರೆತ ಕರ್ಮಯೋಗವಾಗಲಿ, ಕರ್ಮದೊಂದಿಗೆ ಬೆರೆತ ಭಕ್ತಿಯೋಗವಾಗಲಿ ಆಧುನಿಕ ಕಾಲಕ್ಕೆ ಸರಿಹೊಂದುವ ಧರ್ಮ. ನೀವು ಯಾವ ಯೋಗವನ್ನಾದರೂ ಅನುಸರಿಸುತ್ತಿರಿ, ಕರ್ಮಯೋಗದ ದೃಷ್ಟಿ ಅತ್ಯಂತ ಆವಶ್ಯಕ. ಎಲ್ಲರೂ ಕೆಲಸ ಮಾಡಬೇಕಾಗಿದೆ. ನಿಮ್ಮ ಕೆಲಸ ಪೂಜೆ ಆಗಲಿ. ಆಗ ನೀವು ಅದಕ್ಕೆ ಆಸಕ್ತರಾಗುವುದಿಲ್ಲ. ನೀವು ಮಾಡುವ ಕರ್ಮವೆಲ್ಲ ಭಗವಂತನಿಗೆ ಅರ್ಪಿತವಾಗುವುವು.

ಕರ್ಮಯೋಗವನ್ನು ಯಾರು ಬೇಕಾದರೂ ಅನುಷ್ಠಾನ ಮಾಡಬಹುದು. ಇದು ವ್ಯವಹಾರ ಸಾಧ್ಯವಾಗಿದೆ ಮತ್ತು ಪ್ರಯೋಗಿಸುವುದಕ್ಕೆ ಸರಳವಾಗಿದೆ. ಭಕ್ತ ಎಲ್ಲೆಲ್ಲಿಯೂ ತನ್ನ ಇಷ್ಟದೈವವನ್ನು ನೋಡಲು ಬಯಸುವನು. ಕರ್ಮಯೋಗಿ ಎಲ್ಲರ ಹಿಂದಿರುವ ಆತ್ಮನೊಡನೆ ಒಂದಾಗಲಿಚ್ಛಿಸುವನು. ಇಬ್ಬರೂ ದೇವರನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂದು ಬಯಸುವರು. ಅದನ್ನು ಮಾಡುವುದಕ್ಕೆ ತುಂಬಾ ಸುಲಭವಾದ ಮಾರ್ಗವೇ ನೀವು ಮಾಡುವ ಕರ್ಮವನ್ನೆಲ್ಲ ಭಗವಂತನಿಗೆ ಮಾಡುವ ಪೂಜೆಯೆಂದು ಭಾವಿಸುವುದು. ಯಾರು ನಮ್ಮ ಹೃದಯಾಂತರಾಳದಲ್ಲಿರುವನೊ, ಅವನೇ ಸರ್ವಾಂತರ್ಯಾಮಿ. ಎಲ್ಲರಲ್ಲಿಯೂ ಅವನನ್ನು ಕಾಣಿ. ಅವನನ್ನು ಪೂಜಿಸಿ, ಅವನಿಗೆ ಸೇವೆ ಮಾಡಿ. ಆಗ ನಿಮ್ಮ ಕ್ಷುದ್ರ ಅಹಂಕಾರ ಉದುರಿಹೋಗುವುದು. ಆಗ ನಿಮ್ಮ ಕರ್ಮದಲ್ಲಿ ಸ್ವಾರ್ಥತೆ ಇರುವುದಿಲ್ಲ. ನಿಮ್ಮ ಕರ್ಮ ನಿಮ್ಮನ್ನು ಕರ್ಮಚಕ್ರಕ್ಕೆ ಸಿಕ್ಕಿಸುವುದಿಲ್ಲ.

'ಒಬ್ಬ ಸ್ನೇಹಿತನಿಗೆ' ಎಂದು ಸ್ವಾಮಿ ವಿವೇಕಾನಂದರು ಬರೆದ ಕವನದಲ್ಲಿ ಕರ್ಮಯೋಗದ ಸಾರವೇ ಇದೆ.

ನಿನ್ನ ಕಣ್ಣಿಗೆ ಕಾಣುವುದೆಲ್ಲ ಭಗವಂತನ ಹಲವು ರೂಪಗಳು
ಅವರನ್ನು ತ್ಯಜಿಸಿ ಬೇರೆಲ್ಲಿ ದೇವರನ್ನು ಹುಡುಕುತ್ತಿರುವಿರಿ
ಯಾರು ತಾರತಮ್ಯಭಾವವಿಲ್ಲದೆ ಎಲ್ಲರನ್ನೂ ಪ್ರೀತಿಸುತ್ತಾರೊ
ಅವನೇ ದೇವರನ್ನು ಅತ್ಯಂತ ಶ್ರೇಷ್ಠವಾಗಿ ಪೂಜಿಸುತ್ತಾನೆ.

ದೇವರು ಎಲ್ಲರಲ್ಲಿಯೂ ಇರುವನು. ಅವನನ್ನು ಬಡವರಲ್ಲಿ, ಉಪವಾಸವಿರುವವರಲ್ಲಿ ಕಾಣಿ. ಅವರಿಗೆ ಒಂದು ತುತ್ತು ಅನ್ನ ಕೊಡಿ. ಹಸಿದವರು, ರೋಗಿಗಳು ಎಲ್ಲಾ

ಕಡೆಯೂ ಇರುವರು. ನಿಮ್ಮ ಮನೆಯಲ್ಲಿಯೂ ಇರುವರು, ಅವರಲ್ಲಿ ದೇವರನ್ನು ಸೇವಿಸಿ. ಸೇವಾ ಮನೋಭಾವದಿಂದ ನೀವು ಓತಪ್ರೋತರಾದರೆ, ಅವನು ನಿಮಗೆ ಎಲ್ಲೆಲ್ಲಿಯೂ ಕಾಣುವನು.

ಸೇವೆಯ ಒಂದು ಹೊಸಯುಗವನ್ನೇ ಸ್ವಾಮಿ ವಿವೇಕಾನಂದರು ಪ್ರಾರಂಭಿಸಿದರು. ಬದುಕಿರುವ ದೇವರ ಸೇವೆ ಎಂಬ ಹೊಸ ಮಂತ್ರವನ್ನು ಅವರು ಜಾರಿಗೆ ತಂದರು.

ಭಗವಂತನ ಸೇವೆಗೆ ಇರುವ ಯಂತ್ರ ನೀನು ಎಂದು ಭಾವಿಸು. ಬಾಹ್ಯ ಪ್ರಪಂಚವನ್ನು "ದೇವರು ಎಲ್ಲಾ ವಸ್ತುಗಳಲ್ಲಿ, ಜೀವಿಗಳಲ್ಲಿ ಇರುವನು" ಎಂದು ನೋಡಿ. ಸೇವೆಯೇ ಪೂಜೆಯಾಗಲಿ.

೪

ನಮಗೆ ಬೇಕಾಗಿರುವುದು ಒಳ್ಳೆಯ ತತ್ವ, ಒಳ್ಳೆಯ ಆಲೋಚನೆ, ಒಳ್ಳೆಯ ಜೀವನ. ಸೂಕ್ಷ್ಮವಾದ ವೇದಾಂತ ಸಿದ್ಧಾಂತಗಳಿಗೆ ತೋರಿಕೆಯ ಗೌರವ ಕೊಡುವುದರಿಂದ ಆಧ್ಯಾತ್ಮಿಕತೆ ನಮಗೆ ಬರುವುದಿಲ್ಲ. ಸುಮ್ಮನೆ ತಾತ್ವಿಕ ವಿಷಯಗಳನ್ನು ಅಥವಾ ಆಧ್ಯಾತ್ಮಿಕ ವಿಷಯಗಳನ್ನು ಚರ್ಚಿಸಿದರೂ ಅದು ಬರುವುದಿಲ್ಲ. ಇದರಿಂದ ಬರೀ ಅಜೀರ್ಣವಾಗುವುದು, ಅಷ್ಟೆ. ಮಹಾಧಾರ್ಮಿಕ ವಿಷಯಗಳನ್ನು ಅನುಷ್ಠಾನ ಮಾಡುವುದರಿಂದ ಮಾತ್ರ ಆಧ್ಯಾತ್ಮಿಕತೆ ಬರುವುದು. ಆದಕಾರಣವೆ ಸುಮ್ಮನೆ ಬೌದ್ಧಿಕ ವಿಷಯಗಳನ್ನು ನಾನು ಮಾತನಾಡುವುದಿಲ್ಲ. ದೊಡ್ಡ ತತ್ವವನ್ನು ನಾನು ಬೋಧನೆ ಮಾಡುವುದಕ್ಕೂ ಹೋಗುವುದಿಲ್ಲ. ಒಬ್ಬ ದೇವರಿದ್ದರೇನು ? ಇಪ್ಪತ್ತು ಸಾವಿರ ದೇವರಿದ್ದರೇನು ? ಅದು ನಿಮ್ಮ ಜೀವನದ ಮೇಲೆ ಪ್ರಭಾವವನ್ನು ಬೀರುವುದೇ ? ಬ್ರಹ್ಮ, ಜೀವ ಒಂದಾದರೇನು, ಬೇರೆ ಇದ್ದರೇನು ? ಇದೇನು, ಇವರು ಹೀಗೆ ಹೇಳುತ್ತಾರಲ್ಲ ಎಂದು ನೀವು ಆಶ್ಚರ್ಯಪಡಬಹುದು. ನಾನು ನಿಮ್ಮನ್ನು ರಂಜಿಸುವುದಕ್ಕೂ ಇಲ್ಲ, ಹೊಗಳುವುದಕ್ಕೂ ಇಲ್ಲ. ನಿಮ್ಮ ತತ್ವದಿಂದ, ನಿತ್ಯ ಜೀವನಕ್ಕೆ ಸಹಾಯವಾಗದೇ ಇದ್ದರೆ, ಆಧ್ಯಾತ್ಮಿಕ ಮಾರ್ಗವನ್ನು ಸ್ಪಷ್ಟಮಾಡದೇ ಇದ್ದರೆ, ಅದು ನಿಮ್ಮ ಅಹಂಕಾರವನ್ನು ಮಾತ್ರ ಪೋಷಿಸಿದರೆ ಅದರಿಂದೇನು ಪ್ರಯೋಜನ ? ಆಧ್ಯಾತ್ಮಿಕ ಜೀವನದಲ್ಲಿ ಮೊದಲು ನಾವು ಮಾಡಬೇಕಾಗಿರುವುದೇ, ಅಹಂಕಾರವನ್ನು ತ್ಯಜಿಸುವುದು. ನೀವು ಹಲವು ಸಿದ್ಧಾಂತಗಳನ್ನು ಓದಿ ಉತ್ತಮರಾಗುವಿರಾ ಎಂದು ಕೇಳುತ್ತೇನೆ. ನೀವು ನಿತ್ಯಜೀವನದಲ್ಲಿ ಹೆಚ್ಚು ಸೌಹಾರ್ದ, ಪ್ರೀತಿ, ತಿಳುವಳಿಕೆಯಿಂದ ವರ್ತಿಸುವಿರೇನು ? ನಿಮ್ಮ ಜೀವನದಲ್ಲಿ ಅಹಂಕಾರ ಕಡಮೆ ಆಗುತ್ತಿದೆಯೆ ? ಇತರರನ್ನು ಹೆಚ್ಚಾಗಿ ಸಹಿಸುತ್ತೀರಾ ? ಪ್ರೀತಿಸುತ್ತೀರಾ ? ಹಾಗಿದ್ದರೆ ನೀವು ತತ್ವ ಶಾಸ್ತ್ರವನ್ನು ಓದಿದ್ದು ಸಾರ್ಥಕವಾಯಿತು. ಆದರೆ ಅದು ನಿಮ್ಮನ್ನು ಪ್ರತ್ಯೇಕ ಮಾಡಿದ್ದರೆ, ಇತರರನ್ನು ಕೀಳೆಣಿಕೆಯಿಂದ ನೋಡುವಂತೆ ಮಾಡಿದ್ದರೆ, ನಿಮ್ಮ ತತ್ವಶಾಸ್ತ್ರ ಓದಿ ನಿಮಗೇನು ಪ್ರಯೋಜನವಾಗಿಲ್ಲ ಎಂದು ಹೇಳಬೇಕಾಗಿದೆ. ಅದು ನಿಷ್ಪ್ರಯೋಜನಕ್ಕಿಂತ ಹೊಲಸು.

ಆದಕಾರಣವೇ ನಾನು ಬದುಕಿರುವ ಪರಿಯಂತರ, ತಲೆ ಚಿಟ್ಟು ಹಿಡಿಯುವಂತಹ ತತ್ವವನ್ನು ಬೋಧಿಸುವುದಿಲ್ಲ. ಉತ್ತಮ ಜೀವನವನ್ನು ನಡೆಸುವುದಕ್ಕೆ ಬೇಕಾದ ಅನುಷ್ಠಾನ ಪ್ರಧಾನವಾದ ತತ್ವವನ್ನು, ಸ್ತ್ರೀಪುರುಷರನ್ನು ಉತ್ತಮರನ್ನಾಗಿ ಮಾಡುವ ತತ್ವವನ್ನು ನಾನು ಬೋಧಿಸುತ್ತೇನೆ. ನಮ್ಮ ನಿತ್ಯಜೀವನದಲ್ಲಿ ಬಾಳಬಹುದಾದಂತಹ, ವಿಶ್ವಪ್ರೇಮ, ಒಳ್ಳೆಯದು ಎಲ್ಲಿದ್ದರೆ ಅದನ್ನು ಮೆಚ್ಚುವುದು, ವಿಶ್ವವ್ಯಾಪಿಯಾದ ತತ್ವವನ್ನು ತಿಳಿದುಕೊಂಡು ಅದನ್ನು ನಮ್ಮ ಜೀವನದಲ್ಲಿ ಹೇಗೆ ವ್ಯಕ್ತಗೊಳಿಸುವುದು ಎಂಬುದನ್ನು ಬೋಧಿಸುತ್ತೇನೆ. ನಾನು ಕೊಡಬೇಕಾಗಿರುವ ಸಂದೇಶವೇ ಇದು. ಇಂತಹ ಅನುಷ್ಠಾನ ಪ್ರಧಾನವಾದ ತತ್ವ ಎಲ್ಲಿ ಸಿಕ್ಕಬಹುದು ಎಂದು ಆಶ್ಚರ್ಯಪಟ್ಟರೆ, ಅದೇ ಇಂಡಿಯಾದೇಶದ ಸಂದೇಶ–ಕರ್ಮ ಮತ್ತು ಪುನರ್ಜನ್ಮ ಸಿದ್ಧಾಂತ, ಮಾನವನಲ್ಲಿ ಅಂತರ್ಗತವಾಗಿರುವ ಪವಿತ್ರತೆ, ಎಲ್ಲಾ ಜೀವಿಗಳೂ ಒಂದೇ ಸಮನಾಗಿದ್ದಾರೆ, ಎಲ್ಲರಲ್ಲಿಯೂ ಪವಿತ್ರತೆ ಅಂತರ್ಗತವಾಗಿದೆ ಎಂಬ ಸಿದ್ಧಾಂತ. ಒಬ್ಬ ತಾನು ಯಾವ ಮಾರ್ಗವನ್ನು ಬೇಕಾದರೂ ಪೂರ್ಣತೆಗಾಗಿ ಹಿಡಿಯಬಹುದು, ಒಂದೇ ಗುರಿ ಎಡೆಗೆ ಧರ್ಮಗಳೆಲ್ಲ ಹೋಗುತ್ತಿವೆ ಎಂಬ ಸಿದ್ಧಾಂತ ಅದರಲ್ಲಿ ಅಂತರ್ಗತವಾಗಿದೆ. ಈ ತತ್ವವನ್ನು ನಾವು ಅನುಷ್ಠಾನದಲ್ಲಿ ತಂದು ಬಾಳಬೇಕಾಗಿದೆ. ಆದರೆ ಹಲವು ಕಾರಣಗಳಿಂದ ಇಂಡಿಯಾದೇಶ ಅದನ್ನು ಬಹುಪಾಲು ಮರೆತಿದೆ. ಇದನ್ನು ಬಹುಜನ ಮರೆತಿದ್ದರೂ, ಕೆಲವರು ಅದನ್ನು ಬಾಯಿನಲ್ಲಿ ಮಾತ್ರ ಮಾತನಾಡುತ್ತಿದ್ದರೂ, ಈ ಸಿದ್ಧಾಂತವೊಂದೇ ಭರತಖಂಡವನ್ನು ಇದುವರೆಗೆ ರಕ್ಷಿಸಿರುವುದು. ಈ ಸಿದ್ಧಾಂತವೇ ಪ್ರಪಂಚವನ್ನು ಸರ್ವನಾಶದಿಂದ ಕಾಪಾಡಬಲ್ಲದು. ಪ್ರಪಂಚದಲ್ಲಿರುವ ಕಚ್ಚಾಟ, ಅತೃಪ್ತಿ, ದ್ವೇಷ, ಯುದ್ಧಗಳಿಂದ, ನಮ್ಮನ್ನು ಪಾರುಮಾಡಬಲ್ಲದು.

ನಾನು ಆಲೋಚಿಸುತ್ತಿರುವಾಗ ಒಂದು ದೃಶ್ಯ ಬರುವುದು. ಈ ಪ್ರಪಂಚದ ಸನಾತನ ಮಾತೆ, ಸಿಂಹಾಸನದ ಮೇಲೆ ಮಂಡಿಸಿರುವಳು. ಅವಳ ಸುತ್ತಲೂ ಪ್ರಪಂಚದಲ್ಲಿ ಯಾವುದು ಶ್ರೇಷ್ಠವೊ ಅವೆಲ್ಲವೂ ಇವೆ. ಪ್ರೀತಿ ಇದೆ, ಅಧಿಕಾರ ಇದೆ, ಸೌಂದರ್ಯವಿದೆ, ಸಾಮರ್ಥ್ಯವಿದೆ, ಶಾಂತಿ ಇದೆ, ಆಧ್ಯಾತ್ಮಿಕ ಸತ್ಯವಿದೆ. ಅವಳು ತನ್ನ ಕೈಯಲ್ಲಿ ಚಿನ್ನದಿಂದ ಮಾಡಿದ, ವಜ್ರವೈಢೂರ್ಯಗಳ ಕೆತ್ತನೆ ಕೆಲಸವಿರುವ ಒಂದು ಕರಂಡವನ್ನು ಹಿಡಿದುಕೊಂಡಿರುವಳು. ಅದರೊಳಗೆ ಅತ್ಯಂತ ಪ್ರಕಾಶಮಾನವಾದ ಅನರ್ಘ್ಯ ವಜ್ರವೊಂದು ಕೊಹಿನೂರು ವಜ್ರಕ್ಕಿಂತ ಸಹಸ್ರಾರು ಪಾಲು ಕಾಂತಿಯುತವಾಗಿರುವುದು ಇದೆ. ಆ ವಿಶ್ವಮಾತೆಗೆ ಇಬ್ಬರು ಮಕ್ಕಳಿದ್ದಾರೆ. ತಾಯಿ ಮಕ್ಕಳನ್ನು ಕರೆದು, “ಮಕ್ಕಳೆ, ಇದನ್ನು ನಿಮ್ಮ ಪಿತ್ರಾರ್ಜಿತವಾದ ಆಸ್ತಿಯನ್ನು ಮಾಡುತ್ತಿದ್ದೇನೆ. ಇದನ್ನು ರಕ್ಷಿಸಿಕೊಂಡಿರಿ. ಎಲ್ಲಿಯವರೆಗೆ ನೀವು ಅದನ್ನು ರಕ್ಷಿಸುತ್ತೀರೊ, ಅಲ್ಲಿಯವರೆಗೆ ನೀವು ಸುರಕ್ಷಿತವಾಗಿರುವಿರಿ” ಎನ್ನುವಳು.

ಕೆಲವು ಕಾಲದ ಮೇಲೆ ಅವರಿಬ್ಬರಲ್ಲಿ ಮನಸ್ತಾಪ ಬಂತು. ಅವರು ಆ ಸುಂದರವಾದ ಕರಂಡ ಮತ್ತು ಅದರಲ್ಲಿರುವುದನ್ನು ಹಂಚಿಕೊಳ್ಳಲು ಯತ್ನಿಸಿದರು. ಅವರಲ್ಲಿ ಒಬ್ಬ ಕರಂಡದ ಬಾಹ್ಯ ಸೌಂದರ್ಯಕ್ಕೆ ಮನಸೋತು, ನನಗೆ ಅದಿರಲಿ ಎಂದ. ಮತ್ತೊಬ್ಬ ಬೇಕಾ

ದರೆ ನೀನು ಅದನ್ನು ತೆಗೆದುಕೊ, ನಾನು ಅದರ ಒಳಗೆ ಇರುವ ವಜ್ರವನ್ನು ತೆಗೆದುಕೊಳ್ಳುತ್ತೇನೆ ಎಂದ. ಒಬ್ಬ ಕರಂಡವನ್ನು ತೆಗೆದುಕೊಂಡ, ಮತ್ತೊಬ್ಬ ಅದರೊಳಗೆ ಇದ್ದ ವಜ್ರವನ್ನು ತೆಗೆದುಕೊಂಡ.

ಯಾರು ಹೊರಗಿನ ಪೆಟ್ಟಿಗೆಯನ್ನು ತೆಗೆದುಕೊಂಡನೊ, ಅವನು ಸಮರ್ಥ, ಕಾರ್ಯಧುರಂಧರ. ಅವನು ಏನೇ ಕೆಲಸ ಮಾಡಿದರೂ, ಮತ್ತೊಬ್ಬರಿಗೆ ತೃಪ್ತಿಕರವಾಗಿರಬೇಕು, ತನ್ನ ಸೌಂದರ್ಯಪಿಪಾಸೆಗೆ ತೃಪ್ತಿ ತರುವಂತಿರಬೇಕು ಹಾಗೆ ಮಾಡುತ್ತಿದ್ದ. ಕರಂಡವೇ ಅವನ ಜೀವನದ ಮುಖ್ಯ ಕೇಂದ್ರವಾಯಿತು. ಅದನ್ನು ಸೌಂದರ್ಯ, ಕಲೆ, ಸಾಮರ್ಥ್ಯ ಇವುಗಳಿಂದ ಅಲಂಕರಿಸಿದನು.

ಯಾರು ವಜ್ರವನ್ನು ತೆಗೆದುಕೊಂಡನೊ, ಅವನು ಅದನ್ನು ಯಾರೂ ಕದ್ದುಕೊಂಡು ಹೋಗದಿರಲಿ ಎಂದು ಬಚ್ಚಿಟ್ಟನು. ಅವನು ಬಡತನದಲ್ಲಿದ್ದರೂ, ತನ್ನ ಹತ್ತಿರ ಅತ್ಯಂತ ಬೆಲೆಬಾಳುವ ವಜ್ರವಿದೆ ಎಂದು ಸಂತೋಷದಿಂದ ಇದ್ದ. ಅವನಲ್ಲಿ ಶ್ರೀಮಂತಿಕೆ ಅಥವಾ ಸೌಂದರ್ಯದ ಯಾವ ಚಿಹ್ನೆ ಇಲ್ಲದೆ ಇದ್ದರೂ, ಈ ಪ್ರಪಂಚವನ್ನೇ ಕೊಳ್ಳಬಲ್ಲ ವಜ್ರ ನನ್ನಲ್ಲಿದೆ ಎಂಬ ನೆಮ್ಮದಿ ಇತ್ತು. ಈ ನೆನಪು ಅವನಿಗೆ ಬದುಕುವುದಕ್ಕೆ ಶಕ್ತಿಯನ್ನು ಕೊಟ್ಟಿತು. ಅವನಿಗೆ ಪ್ರಪಂಚದಲ್ಲಿ ಇನ್ನು ಏನೂ ಬೇಕಾಗಿರಲಿಲ್ಲ. ಅದರಿಂದ ಅವನು ನೆಮ್ಮದಿಯಿಂದ ಇದ್ದ. ಯಾವುದನ್ನು ಪಡೆದರೆ ಒಬ್ಬ ಸಂಸಾರ ಬಂಧನದಿಂದ ಪಾರಾಗಿ ಹೋಗಬಹುದೊ, ಅದು ಅವನಲ್ಲಿತ್ತು. ಅವನ ಆನಂದದಲ್ಲಿ ಸೌಂದರ್ಯವಿರಲಿಲ್ಲ, ಕೆಲಸದಲ್ಲಿ ಸಾಮರ್ಥ್ಯವಿರಲಿಲ್ಲ, ಬಾಹ್ಯಶಕ್ತಿ ಸಂಪನ್ನತೆಗಳಾವುವೂ ಅವನಲ್ಲಿ ಇರಲಿಲ್ಲ.

ಈ ಇಬ್ಬರು ಸಹೋದರರ ಚಿತ್ರವನ್ನು ನಿಮ್ಮ ಮುಂದೆ ಇಡುತ್ತೇನೆ. ಒಬ್ಬ ಕಾರ್ಯಕುಶಲಿ. ಸುತ್ತಲೂ ಸುಂದರವಾಗಿರುವುದು, ಪ್ರಯೋಜನವಾಗಿರುವುದು ಇವುಗಳಿಂದ ಕೂಡಿಕೊಂಡಿರುವನು. ಇದು ಬರೀ ಹೊರಗಿನ ಕರಂಡ., ಅದರೊಳಗೆ ಏನಿದೆ ಎಂದು ತಿಳಿದುಕೊಳ್ಳುವುದಕ್ಕೆ ಅವನು ಪ್ರಯತ್ನವನ್ನೇ ಮಾಡಿಲ್ಲ. ಒಳಗೆ ಏನೂ ಇಲ್ಲದಾಗ ಪೆಟ್ಟಿಗೆ ಇದ್ದೂ ಏನು ಪ್ರಯೋಜನ? ಆ ಸುಂದರವಾದ ಕರಂಡದ ಆಕರ್ಷಣೆಗೆ ಸಿಕ್ಕಿ ಅವನು ಅದ್ಭುತವಾದ ಕೆಲಸಗಳನ್ನೇನೊ ಮಾಡಿದ. ಆದರೆ ಅವನು ಸುಖವಾಗಿರುವನೆ? ಒಳ್ಳೆಯ ಪೆಟ್ಟಿಗೆ ಎಂದರೆ, ದೇಹವನ್ನು ಪಡೆಯುವುದೇನೊ ಸರಿಯೆ. ನೀವು ಅದನ್ನು ಎಷ್ಟು ಬೇಕಾದರೂ ಅಲಂಕಾರ ಮಾಡಬಹುದು. ಆದರೆ ಅದರೊಳಗೆ ಏನಾದರೂ ಇದೆಯೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನಿಸಿದ್ದೀರೇನು? ನಿಮ್ಮಲ್ಲಿ ಏನಿದೆ ಎಂಬುದನ್ನು ಕುರಿತು ಆಲೋಚಿಸಿದ್ದೀರೇನು? ಸುಮ್ಮನೆ ಪೆಟ್ಟಿಗೆಯನ್ನು ಪೆಟ್ಟಿಗೆಗಾಗಿ ಪೂಜಿಸಿದರೆ ಏನು ಬಂತು? ಅದರಲ್ಲಿದ್ದ ವಜ್ರವನ್ನು ಹುಡುಕಿ. ಅನರ್ಘ್ಯವಾದ ವಜ್ರ ನಿಮಗೆ ಸಿಕ್ಕುವ ತನಕ ನಿಮಗೆ ಶಾಂತಿಯಿಲ್ಲ, ನೆಮ್ಮದಿ ಇಲ್ಲ.

ಮತ್ತೊಬ್ಬ ಸಹೋದರನಿಗೂ ನಾವು ಹೀಗೆ ಹೇಳಬಹುದು. "ನೀನು ಬಚ್ಚಿಟ್ಟಿರುವ ವಜ್ರದ ವಿಷಯವನ್ನು ಕುರಿತು ನೀನು ಸುಮ್ಮನೇ ಮಾತನಾಡಬೇಡ. ಅದನ್ನು ಬಚ್ಚಿಟ್ಟಿರುವ ಸ್ಥಳದಿಂದ ತೆಗೆ. ಅದು ನೀನು ಮಾಡುವ ಕೆಲಸದ ಮೂಲಕವಾಗಿ ವ್ಯಕ್ತವಾಗಲಿ.

ಅದನ್ನು ನಿನ್ನ ಕೈಯಲ್ಲಿ ಹಿಡಿದುಕೊ. ಅದು ನಿನ್ನಲ್ಲಿದೆ ಎಂದು ತಿಳಿ. ಪ್ರಪಂಚಕ್ಕೆ ಗೊತ್ತಾಗಲಿ, ನಿನ್ನಲ್ಲಿ ಅನರ್ಘ್ಯ ಆಧ್ಯಾತ್ಮಿಕ ಸತ್ಯ ಇದೆ" ಎಂಬುದಾಗಿ.

ನನ್ನ ಪಾಶ್ಚಾತ್ಯ ಸ್ನೇಹಿತರೆ, ನಿಮ್ಮಲ್ಲಿ ಪೆಟ್ಟಿಗೆ ಇದೆ. ಅದನ್ನು ಚೆನ್ನಾಗಿ ಅಲಂಕರಿಸಿರುವಿರಿ. ಸಾಮರ್ಥ್ಯ, ಅನುಷ್ಠಾನ, ಪ್ರಯೋಜನವಾಗಿರುವುದು, ಇಂದ್ರಿಯಗಳಿಗೆ ಪ್ರಿಯವಾಗಿರುವುದು ಇವುಗಳೆಲ್ಲ ಅದರಲ್ಲಿವೆ. ಆದರೆ ಅದರಲ್ಲಿ ಒಂದು ಅನರ್ಘ್ಯ ವಜ್ರವಿದೆ, ನಿಮ್ಮಲ್ಲಿ ಭಗವಂತನ ಅಂಶವಿದೆ ಎಂದು ತಿಳಿಯಿರಿ, ಅದನ್ನು ಹುಡುಕಿ ಜೀವನದ ಗುರಿಯನ್ನು ಮುಟ್ಟಿ. ನನ್ನ ಪೌರ್ವಾತ್ಯ ಸಹೋದರರೆ, ನಿಮ್ಮ ಹತ್ತಿರ ಬಹಳ ಅನರ್ಘ್ಯವಾದ ವಜ್ರವಿದೆ ಎಂಬುದು ನಿಮಗೆ ಗೊತ್ತು. ಆದರೆ ಅದನ್ನು ಬಚ್ಚಿಟ್ಟಿರುವ ಸ್ಥಳದಿಂದ ತೆಗೆದು, ನಿಮ್ಮ ತಾಯಿ ಕೊಟ್ಟ ಸುಂದರವಾದ ಪೆಟ್ಟಿಗೆಯಲ್ಲಿ ಅದನ್ನು ಇಟ್ಟರೆ ಆಗ ಚೆನ್ನಾಗಿ ಶೋಭಿಸುವುದು. ಒಳಗಿರುವ ವಜ್ರ, ಇದೇ ನಮ್ಮಲ್ಲಿರುವ ಪವಿತ್ರತೆ. ಅದನ್ನು ತಿಳಿದುಕೊಂಡು ವ್ಯಕ್ತಪಡಿಸುವ ಸಾಮರ್ಥ್ಯ ಇವುಗಳನ್ನು ಬೇರೆ ಬೇರೆ ಮಾಡಬೇಡಿ. ಈ ಸಹೋದರರ ಮಿಲನ, ಒಂದು ಹೊಸ ಬಗೆಯ ಜನಾಂಗವನ್ನು ಸೃಷ್ಟಿಗೆ ತರುವುದು. ಇದು ಮಾನವಕೋಟಿಯನ್ನೇ ಆಧ್ಯಾತ್ಮಿಕ ಸಂಪನ್ನರನ್ನಾಗಿ ಮಾಡಬಹುದು. ನನ್ನ ಸ್ನೇಹಿತರೆ, ಆಗಲೇ ಮಾನವಕೋಟಿ ಉದ್ಧಾರವಾಗಬಲ್ಲದು.

ಉಪಸಂಹಾರ

೧

ನಾಲ್ಕು ಯೋಗಗಳ ಗುರಿಯನ್ನು ಈಗ ಸವಿಾಕ್ಷೆ ಮಾಡೋಣ. ಜ್ಞಾನಯೋಗದ ದೃಷ್ಟಿಯಿಂದ ದೃಶ್ಯಪ್ರಪಂಚ ಬರೀ ತೋರಿಕೆ. ಆತ್ಮ ಒಂದೇ ಸತ್ಯ, ಅದೇ ಬ್ರಹ್ಮ. ಈ ಮಾರ್ಗದಲ್ಲಿ ಮಾಯಾವರಣವನ್ನು ವಿಚಾರದ ಮೂಲಕ ನಿವಾರಿಸಿ ಆತ್ಮನಿಗೆ ಮುಕ್ತಿಗಳಿಸಿ ಸಾಕ್ಷಾತ್ಕಾರವನ್ನು ಕೊಡುವುದು. ಇದೇನೆ ವಿಚಾರದ ರಾಜಮಾರ್ಗ.

ರಾಜಯೋಗ ವ್ಯಕ್ತಿಗತವಾಗಿರುವ ಚೈತನ್ಯವೇ, ಪರಿಶುದ್ಧವಾದ ಚೈತನ್ಯ. ಚಿತ್ತ ವೃತ್ತಿಗಳಿಂದ ತಾಡಿತವಾಗಿ, ಅದು ಬೇರೆಯಾಗಿ ಸಾಂತವಾಗಿರುವಂತೆ ಕಾಣುತ್ತಿದೆ. ಚಿತ್ತ ವೃತ್ತಿಗಳನ್ನು ಶಮನಮಾಡುವುದಕ್ಕೆ ಶಿಸ್ತು, ಏಕಾಗ್ರತೆ ಮತ್ತು ಧ್ಯಾನ ಅವಶ್ಯಕ. ಚಿತ್ತ ವೃತ್ತಿಗಳೇ ಮನಸ್ಸನ್ನು ಕಲಕುವುದು, ಪೂರ್ಣತೆ ವ್ಯಕ್ತವಾಗುವುದಕ್ಕೆ ಅವಕಾಶ ಕೊಡು ವುದಿಲ್ಲ.

ಭಕ್ತಿಯೋಗದಲ್ಲಿ, ತಾನು, ತನ್ನ ಮೂಲವಾದ ಪರಮಾತ್ಮನಿಂದ ಬೇರೆಯಾಗಿದ್ದೇನೆ ಎಂದು ಭಾವಿಸುವುದೇ ಈಗಿನ ದುಃಖಕ್ಕೆ ಕಾರಣ. ನಮ್ಮ ಅಹಂಕಾರವನ್ನು ಪರಿಶುದ್ಧ ಮಾಡಿ, ಭಗವಂತನೆಡೆಗೆ ನಮ್ಮ ಭಾವವನ್ನೆಲ್ಲ ಹರಿಸಿದರೆ, ಅವನಲ್ಲಿ ಐಕ್ಯವಾಗಬಹುದು.

ಮನುಷ್ಯನಲ್ಲಿರುವ ಪವಿತ್ರತೆಯನ್ನು ಕಾಣದಂತೆ ಮಾಡಿರುವುದೇ ಅವನಲ್ಲಿರುವ ಆಶೆ ಆಕಾಂಕ್ಷೆಗಳು ಎಂದು ಕರ್ಮಯೋಗ ಸಾರುವುದು. ಆಶೆಯೇ ಕರ್ಮಚಕ್ರವನ್ನು ಚಲಿಸುವಂತೆ ಮಾಡುವುದು. ಕರ್ಮವನ್ನು ನಿಸ್ಸತ್ವಗೊಳಿಸುವುದೇ ಮಾರ್ಗ. ಕಾರ್ಯ ಕಾರಣಗಳ ತಂತುವನ್ನು ದಹಿಸಿದರೆ, ಪೂರ್ಣತೆ ತನಗೆ ತಾನೇ ವ್ಯಕ್ತವಾಗುವುದು.

ಬೇರೆ ಬೇರೆ ಸ್ವಭಾವದ ಮನುಷ್ಯರಿಗೆ, ಇವುಗಳಲ್ಲಿ ಬೇರೆ ಬೇರೆ ಮಾರ್ಗಗಳನ್ನು ವಿಧಿಸುತ್ತಾರೆ. ಇವುಗಳಲ್ಲಿ ಯಾವುದೊ ಒಂದು ಮಾರ್ಗವನ್ನು ಕೊನೆಯತನಕ ಅನುಸರಿಸಿ ದರೆ ಆತ್ಮಸಾಕ್ಷಾತ್ಕಾರವನ್ನು ಪಡೆಯಬಹುದು. ಪರಿಶುದ್ಧರಾದ ವ್ಯಕ್ತಿಗಳು ಬಹಳ ಅಪರೂಪ. ಸಾಧಕರು ತಮ್ಮ ಸ್ವಭಾವತಃ ಬಂದಿರುವ ಸಂಸ್ಕಾರ ಮತ್ತು ಗುಣಗಳಿಗೆ ಅನುಸಾರವಾಗಿ ಬೇರೆ ಬೇರೆ ಮಾರ್ಗಗಳನ್ನು ಹಿಡಿಯುತ್ತಾರೆ. ಇಂದು ಜೀವನ ತುಂಬಾ ಜಟಿಲವಾಗಿದೆ. ಯಾವುದಾದರೂ ಒಂದೇ ಒಂದು ಯೋಗದಲ್ಲಿ ಪೂರ್ಣತೆಯನ್ನು ಪಡೆಯು ವುದು ವ್ಯವಹಾರತಃ ಸಾಧ್ಯವಿಲ್ಲ. ಉದಾಹರಣೆಗೆ, ಯಾರು ನಿಜವಾದ ಜ್ಞಾನಿ ? ಯಾರು ತಾನು "ನಾನಿಲ್ಲಿ ಕುಳಿತುಕೊಂಡು ಯಾವುದೂ ಇಲ್ಲ ಎಂದು ಹೇಳುತ್ತೇನೆ" ಎಂದು ಸತ್ಯ ವಾಗಿ ಹೇಳಬಲ್ಲರು. ಇಂದು ನಾವು ನಾಲ್ಕು ಯೋಗಗಳನ್ನೂ ಸೇರಿಸಬೇಕಾಗಿದೆ ನಮ್ಮ ಆಧ್ಯಾತ್ಮಿಕ ಜೀವನದಲ್ಲಿ ಸೌಹಾರ್ದಭಾವ ಬೆಳೆಯಬೇಕಾದರೆ, ನಾವು ಯೋಗಗಳ ಭಾವನೆ ಯನ್ನೆಲ್ಲ ಬೆರೆಸಬೇಕು.

ಸ್ವಾಮಿ ವಿವೇಕಾನಂದರು ನಾನು ಪುರುಷಸಿಂಹರನ್ನು ಮಾಡುವ ಧರ್ಮವನ್ನು ಬೋಧಿಸಬೇಕೆಂದಿದ್ದೇನೆ ಎಂದರು. ಅವರು ಯೋಗವನ್ನು ಒಂದು ಹಕ್ಕಿಗೆ ಹೋಲಿಸಿದರು. ಹಕ್ಕಿ ಹಾರಬೇಕಾದರೆ ಮೂರು ವಸ್ತುಗಳು ಆವಶ್ಯಕ. ಎರಡು ರೆಕ್ಕೆಗಳು ಮತ್ತು ಬೇರೆ ಬೇರೆ ದಿಕ್ಕಿಗೆ ತಿರುಗಬೇಕಾದರೆ ಹಕ್ಕಿಯ ಹಿಂಭಾಗ. ಜ್ಞಾನ ಒಂದು ರೆಕ್ಕೆ, ಭಕ್ತಿ ಮತ್ತೊಂದು ರೆಕ್ಕೆ. ರಾಜಯೋಗವೇ ಸಮತ್ವವನ್ನು ಕಾಪಾಡುವ ಹಕ್ಕಿಯ ಹಿಂಭಾಗ.

ನಾಲ್ಕು ಯೋಗಗಳು ಪ್ರತ್ಯೇಕವಾಗಿದ್ದರೆ ಈ ದೋಷಗಳಿರುತ್ತವೆ. ಬರೀ ಬುದ್ಧಿ ಕಲ್ಲಿನಂತೆ ನೀರಸ. ಮಾನಸಿಕ ದೃಶ್ಯಾದಿಗಳು ನಂಬಲರ್ಹವಲ್ಲ. ಉದ್ವೇಗ ಒಂದೇ ಇದ್ದರೆ, ಯಾವುದಾದರೂ ಒಂದು ಸ್ಥಳದಲ್ಲಿ ನಿಂತುಬಿಡುವುದು. ಬರೀ ಕರ್ಮವೇ ಆದರೆ ಅದನ್ನು ನೆಚ್ಚುವುದಕ್ಕೆ ಆಗುವುದಿಲ್ಲ. ಈ ನಾಲ್ಕನ್ನೂ ನಾವು ಗಮನಿಸಬೇಕು. ನಮ್ಮ ಬುದ್ಧಿ, ಅತೀಂದ್ರಿಯ ಅನುಭವ, ಉದ್ವೇಗ ಮತ್ತು ಕ್ರಿಯೆಯಲ್ಲಿ ಒಂದು ಸಾಮರಸ್ಯವನ್ನು ತರಬೇಕು.

ಈಗ ಯೋಗಗಳನ್ನು ಹೇಗೆ ಒಂದುಗೂಡಿಸುವುದು ? ರಾಜಯೋಗದಿಂದ ದಿನವನ್ನು ಪ್ರಾರಂಭಿಸಿ. ಪ್ರಾರ್ಥನೆ, ಧ್ಯಾನಗಳು ನಮ್ಮ ಮನಸ್ಸಿನಲ್ಲಿ ಅಂತರ್‌ಪ್ರವಾಹದಂತೆ ಹರಿಯುತ್ತ, ಗಂಟೆ ಹೊಡೆಯುವುದು ನಿಂತಮೇಲೂ ಅದರ ಸ್ಪಂದನ ಸ್ಪಂದಿಸುವಂತೆ ಇರುತ್ತದೆ. ಸಾಧ್ಯವಾದಷ್ಟು ಸಲ ಗಂಟೆಯನ್ನು ಹೊಡೆಯಿರಿ. ಕೆಲಸದ ಮಧ್ಯದಲ್ಲಿಯೂ ಅದನ್ನು ಮಾಡಿ. ನಿಮಗೆ ಸ್ವಲ್ಪ ಕಾಲ ಸಿಕ್ಕಿದೊಡನೆಯೆ ರಾಜಯೋಗಿಗಳಾಗಿ. ರಾಜಯೋಗದ ಶಿಸ್ತು ನಮ್ಮಲ್ಲಿ ಛಲ ಮತ್ತು ಬಲವನ್ನು ತರುವುದು. ಅದು ಮನಸ್ಸಿಗೆ ಕ್ರಮೇಣ ಶಾಂತಿಯನ್ನು ತರುವುದು. ದಿನದ ಕೊನೆಯಲ್ಲಿ ಏಕಾಗ್ರತೆ ಮತ್ತು ಧ್ಯಾನದಿಂದ ರಾಜಯೋಗವನ್ನು ಅಭ್ಯಾಸಮಾಡಿ. ದಿನದಲ್ಲಿ ಕೆಲಸ ಮಾಡುವಾಗ ನಿಮ್ಮ ಮನಸ್ಸಿಗೆ ಅಂಟಿಕೊಂಡ ಧೂಳನ್ನೆಲ್ಲ ಆಗ ಕೊಡಹಿಕೊಳ್ಳಿ.

ನೀವು ಇತರರೊಡನೆ ವ್ಯವಹರಿಸುವಾಗ ಭಕ್ತರಾಗಿ. ದೇವರನ್ನು ಎಲ್ಲಾ ಕಡೆಯೂ ನೋಡಿ ಅವನನ್ನು ಪೂಜಿಸಿ. ದೇವರನ್ನು ಪುಷ್ಪದಿಂದಲಾದರೂ ಪೂಜಿಸಬಹುದು, ಪರಕೆಯಿಂದಲಾದರೂ ಪೂಜಿಸಬಹುದು. ದೇವರನ್ನು ನಿಮ್ಮ ಜೀವನದಲ್ಲಿ ಪ್ರತಿಷ್ಠಾಪನೆ ಮಾಡಿ. ಅವನನ್ನು ನಿಮ್ಮ ಜೊತೆಗಾರನನ್ನಾಗಿ ಮಾಡಿಕೊಳ್ಳಿ. ಜೀವನವೆಂದರೆ ಪವಿತ್ರತೆಯನ್ನು ವ್ಯಕ್ತಪಡಿಸುವುದು. ಇದೇ ನಮ್ಮ ಜೀವನವನ್ನು ಸಹಿಸುವಂತೆ ಮಾಡಬಲ್ಲದು, ಪ್ರೀತಿಸುವಂತೆ ಮಾಡಬಲ್ಲದು. ಪ್ರತಿಯೊಂದು ಸಲ ಉಸಿರಾಡುವಾಗಲೂ ಅವನನ್ನೇ ಚಿಂತಿಸಿ. ನಿಮ್ಮ ಹೃದಯಾಂತರಾಳದಲ್ಲಿ ಭಕ್ತಿಯನ್ನು ರಹಸ್ಯವಾಗಿ ರೂಢಿಸಿಕೊಳ್ಳಿ. ದೇವರಿಗಾಗಿ ಕಂಬನಿದುಂಬಿ. ನೀವು ಹೊರಗೆ ಹೋಗ:ವಾಗ ಅದನ್ನೆಲ್ಲ ಒರಸಿಕೊಂಡು ಹೋಗಿ. ನಿಮ್ಮ ಭಕ್ತಿಯನ್ನು ತೋರ್ಪಡಿಸಿಕೊಳ್ಳಬೇಡಿ. ಅದು ಬಹಳ ತುಚ್ಛವಾದುದು. ಭಕ್ತಿ ಜೀವನದಲ್ಲಿ ಶಿಸ್ತು ಆವಶ್ಯಕ.

ಕೆಲಸ ಮಾಡುವಾಗ ಕರ್ಮಯೋಗಿಯಾಗಿ. ಕರ್ಮಕ್ಕೋಸುಗ ಕರ್ಮವನ್ನು ಮಾಡಿ, ಕರ್ಮವೇ ನಿಮ್ಮ ಪೂಜೆಯಾಗಲಿ. ಯಾವಾಗಲೂ ಕರ್ಮದಲ್ಲಿ ಅನಾಸಕ್ತರಾಗಿರಿ.

ಹೃದಯದಲ್ಲಿ ಯಾವ ಆಶೆಯೂ ಏಳದಂತೆ ನೋಡಿಕೊಳ್ಳಿ. ನಿನ್ನ ಸ್ವಾರ್ಥವನ್ನು ಆಚೆಗೆ ಎಸೆ ಎಂಬುದೇ ಕರ್ಮಯೋಗದ ಪಲ್ಲವಿ. ನಿನ್ನ ವ್ಯಕ್ತಿತ್ವದಲ್ಲಿ ಯಾವ ಬಣ್ಣವೂ ಇಲ್ಲದಿರಲಿ, ಯಾವ ಬಣ್ಣದ ಬುಡ್ಡಿಗೆ ಹಾಕಿದರೆ ಅದಕ್ಕೆ ಆ ಬಣ್ಣ ಬಂದಂತೆ ಕಾಣುವುದು. ಆ ನೀರನ್ನು ಚೆಲ್ಲಿದರೆ, ಅದರಲ್ಲಿ ಯಾವ ಬಣ್ಣವೂ ಇಲ್ಲ, ಆಕಾರವೂ ಇಲ್ಲ. ಮನಸ್ಸು ಹಾಗಿರ ಬೇಕು. ಒಂದು ವಸ್ತುವಿಗೆ ಆಸಕ್ತವಾಗಬೇಕು, ತಕ್ಷಣವೇ ನಿರಾಸಕ್ತವಾಗಬೇಕು. ಒಂದು ಗ್ಲಾಸಿನ ಗೋಳದ ಹಿಂದೆ ಗುಲಾಬಿ ಹೂವನ್ನು ಇಟ್ಟರೆ, ಆ ಗೋಳಕ್ಕೆ ಆ ಬಣ್ಣ ಬಂದಂತೆ ಕಾಣುವುದು. ಹೂವನ್ನು ತೆಗೆದೊಡನೆ ಆ ಬಣ್ಣವೂ ಹೋಗುವುದು. ಯಾವ ಬೆಳಕನ್ನಾದರೂ ಪ್ರತಿಬಿಂಬಿಸುವ ಗ್ಲಾಸಿನ ಗೋಳದಂತೆ ಇರಬೇಕು. ಅದು ಯಾವ ಬಣ್ಣವನ್ನಾದರೂ ಪ್ರತಿಬಿಂಬಿಸುವುದು, ಆದರೆ ಅದಕ್ಕೆ ಯಾವ ಬಣ್ಣವೂ ಇಲ್ಲ. ಅದರಂತೆ ನಿಸ್ಸಂಗರಾಗಿರಿ.

ನಾವು ಯಾವ ಬುಡ್ಡಿಯಲ್ಲಿರುವೆವೊ ಅದರ ಬಣ್ಣವನ್ನು ಎಷ್ಟು ಹೆಚ್ಚಾಗಿ ಪ್ರತಿ ಬಿಂಬಿಸುವೆವೊ, ಅಷ್ಟೂ ಒಳ್ಳೆಯ ಸಂಪರ್ಕವಾಗುವುದು. ಆಗ ನಿನಗೂ, ನಿನ್ನ ಸುತ್ತಲೂ ಇರುವ ವಾತಾವರಣಕ್ಕೂ ಹೆಚ್ಚು ಸೌಹಾರ್ದ ಇರುವುದು. ಇತರರೊಂದಿಗೆ ಘರ್ಷಣೆ ಯಾಗುತ್ತಿರುವ ವ್ಯಕ್ತಿ ಇನ್ನೂ ಪೂರ್ಣವಾಗಿಲ್ಲ. ಗಾಜಿನ ಗೋಳ, ತನಗೆ ಸಂಪರ್ಕವಾದ ವಸ್ತುವಿನ ಕಾಂತಿಯನ್ನು ಬೀರುವುದು. ಆದರೆ ಅದು ಮಾತ್ರ ತಾನಾಗಿ ಉಳಿಯುವುದು, ಅದು ಯಾವ ವಿರುದ್ಧವಾದ ಕಾಂತಿಯನ್ನೂ ವ್ಯಕ್ತಗೊಳಿಸುವುದಿಲ್ಲ. ಎಲ್ಲರೊಂದಿಗೂ ಅದು ಸೌಹಾರ್ದದಿಂದ ಇರುವುದು.

ನೀವು ಬೇರೆ ಬೇರೆ ಬಣ್ಣದಲ್ಲಿ ಬಟ್ಟೆಗೆ ಬಣ್ಣವನ್ನು ಹಾಕಬೇಕಾದರೆ, ಬಕೆಟ್ಟನ್ನು ಪ್ರತಿಯೊಂದು ಬಾರಿ ಉಪಯೋಗಿಸಿ ಆದಮೇಲೆ ತೊಳೆಯಬೇಕು ಇಲ್ಲದೇ ಇದ್ದರೆ ನಿಮ್ಮ ಬಟ್ಟೆ ಹಾಳಾಗಿ ಹೋಗುವುದು. ಆಗ ಚೆನ್ನಾಗಿ ಬಣ್ಣ ಹಾಕುವದಕ್ಕೆ ಆಗುವುದಿಲ್ಲ. ಹಾಗೆಂದ ರೇನು? ಒಂದು ಆಲೋಚನೆಯನ್ನು ಮತ್ತೊಂದು ಆಲೋಚನೆಯ ಮೇಲೆ ಹೇರಬಾರದು ಎಂದು. ಪ್ರತಿಯೊಂದು ಸಲಿಯೂ ಆಸಕ್ತಿಯನ್ನು ತ್ಯಜಿಸಿ ಕೆಲಸಗಳಲ್ಲಿ ಆಸಕ್ತರಾಗಲೂ, ಅಥವಾ ಅದರಿಂದ ಅನಾಸಕ್ತರಾಗಲೂ ಸಿದ್ಧವಾಗಿರಿ. ಪ್ರತಿಯೊಂದು ಸಲಿಯೂ ಬಕೆಟ್ಟನ್ನು ತೊಳೆಯಿರಿ.

ಕರ್ಮಯೋಗಿಗೆ ಕಾಲದೇಶ, ವಾತಾವರಣಕ್ಕೆ ಅನುಸಾರವಾಗಿ, ತನ್ನ ಕೆಲಸವನ್ನು ಹೊಂದಿಸಿಕೊಳ್ಳುವ ಜಾಣತನ ಗೊತ್ತಿದೆ. ಅವನು ಯಾವಾಗಲೂ ತನಗೆ ಗೊತ್ತಾಗದೆ ಇರುವ ಅವ್ಯಕ್ತ ವ್ಯಂಜನ ಕೆಲಸ ಮಾಡುವುದಕ್ಕೆ ಅವಕಾಶ ಕೊಟ್ಟಿರುವನು. ನೀನು ಮಾಡುವ ಕೆಲಸದಲ್ಲೆಲ್ಲ ನಿನ್ನ ದೃಷ್ಟಿಯನ್ನು ಗಮನಿಸು. ಮಾನಸಿಕ ಮತ್ತು ಬಾಹ್ಯರೀತಿ ಕೆಲಸವನ್ನು ಅಚ್ಚುಕಟ್ಟಾಗಿ ಮಾಡು.

ಕೊನೆಯದಾದರೂ ಕನಿಷ್ಟವಲ್ಲದ ಮತ್ತೊಂದು ಇದೆ. ನಿಮ್ಮ ಜೀವನ ವಿಚಾರ ದಿಂದ ಬದ್ಧವಾಗಿರಲಿ. ಮುಖ್ಯ ಸಿದ್ಧಾಂತಗಳ ತತ್ವ ನಿಮಗೆ ಗೊತ್ತಿದ್ದರೆ, ಇತರರೊಂದಿಗೆ ಹೊಂದಿಕೊಂಡು ಹೋಗುವುದಕ್ಕೆ ಸಹಕಾರಿಯಾಗುವುದು. ಜೀವನದಲ್ಲಿ ನಮ್ಮನ್ನು ಸೌಹಾರ್ದಗೊಳಿಸುವುದು. ಅಹಂಕಾರದ ಭಾವದಿಂದ ನಮ್ಮನ್ನು ಪಾರುಮಾಡುವುದು.

ಜ್ಞಾನಯೋಗ ವಿಚಾರ ಮತ್ತು ವಿವೇಕವನ್ನು ಬಳಸುವುದು. ಅದು ಇತರ ಯೋಗಗಳನ್ನು ಒಂದು ಸರಹದ್ದಿನಲ್ಲಿ ಇಡುವುದು. ನಿನ್ನ ಇಡೀ ಜೀವನ ಯುಕ್ತಿಬದ್ಧವಾದ ವಿಚಾರದಿಂದ ನಿಯೋಜಿತವಾಗಿರಲಿ ಇದೇ ದೋಣಿಗೆ ಚುಕ್ಕಾಣಿಯಂತೆ.

ಶ್ರೀರಾಮಕೃಷ್ಣರು, ನಿನ್ನ ಪಂಚೆಗೆ ಅದ್ವೈತವನ್ನು ಕಟ್ಟಿಕೊಂಡು ಪ್ರಪಂಚದಲ್ಲಿ ಏನನ್ನು ಬೇಕಾದರೂ ಮಾಡಿ ಎನ್ನುತ್ತಿದ್ದರು. ಅಂದರೆ ನಿನ್ನ ಕೆಲಸದ ಹಿಂದೆಲ್ಲ ಅದ್ವೈತ ಜ್ಞಾನ ಓತಪ್ರೋತನಾಗಿರಲಿ ಎಂದು. ಇದರ ಆಧಾರವಿದ್ದರೆ ನೀನು ತಪ್ಪು ಮಾಡುವುದಿಲ್ಲ. ಶ್ರೀರಾಮಕೃಷ್ಣರು, ನುರಿತ ನೃತ್ಯಕಾರ ಎಂದಿಗೂ ತಪ್ಪು ಹೆಜ್ಜೆ ಇಡುವುದಿಲ್ಲ ಎಂದು ಹೇಳುತ್ತಿದ್ದರು. ನಿಮ್ಮ ನಿತ್ಯಜೀವನದಲ್ಲಿ ನಾಲ್ಕು ಯೋಗಗಳ ಸಾರವನ್ನು ತಂದರೆ, ನೀವು ಯಾವಾಗಲೂ ಭಗವಂತನ ಸಾನಿಧ್ಯದಲ್ಲಿರುವಿರಿ. ನೀವು ನಿಮ್ಮ ಆದರ್ಶದಿಂದ ಎಂದಿಗೂ ದೂರವಿರುವುದಿಲ್ಲ.

ಎಲ್ಲಾ ಯೋಗಿಗಳ ಗುರಿ ಪೂರ್ಣತೆಯನ್ನು ಪಡೆಯುವುದಾಗಿದೆ. ಯೋಗದ ಈ ಪೂರ್ಣತೆಯನ್ನು ವ್ಯಕ್ತಗೊಳಿಸುವುದಕ್ಕೆ ಆತಂಕಪ್ರಾಯವಾಗಿರುವುದೇ ನನ್ನ ಅಹಂಕಾರದ ದುರಭಿಮಾನ. ಜ್ಞಾನದೃಷ್ಟಿಯಿಂದ ಅಹಂಕಾರವನ್ನು ಒಂದು ಭ್ರಾಂತಿ ಎಂದು ಭಾವಿಸಬೇಕು. ಅದು ಆತ್ಮನ ಮೇಲೆ ಆರೋಪ ಮಾಡಿರುವುದು. ವಿವೇಕದಿಂದ ಅದನ್ನು ತೆಗೆದು ಹಾಕಬೇಕು. ನಾನೆಂಬ ಅಹಂಕಾರದ ಭಾವನೆ ಹೋದರೆ, ಜೊತೆಜೊತೆಯಲ್ಲಿಯೇ ಜಗತ್ತಿನ ಭಾವನೆಯೂ ಹೋಗುವುದು. ಅನಂತರ ಉಳಿಯುವುದೊಂದೆ ಸತ್ಯ, ಅದೇ ಬ್ರಹ್ಮ.

ರಾಜಯೋಗದಲ್ಲಿ ಬಹಳ ಬಲವಾದ ಚಿತ್ತವೃತ್ತಿಯೇ ನಾನೆಂಬ ಅಹಂಕಾರ. ಯಾವಾಗ ಅದನ್ನು ನಿಗ್ರಹಿಸುತ್ತೇವೆಯೊ, ಆಗ ಪರಮಾತ್ಮನ ಜ್ಞಾನ ಹೊಳೆಯುವುದು.

ಭಕ್ತಿಯೋಗದಲ್ಲಿ ಅಹಂಕಾರವನ್ನು ಶುದ್ಧ ಮಾಡಬೇಕು, ಅದನ್ನು ಸಾಧ್ಯವಾದಷ್ಟೂ ಕಡಿಮೆ ಮಾಡಬೇಕು. ಅದು ಅನಂತರ ಇಲ್ಲದಂತೆಯೇ ಕಾಣುವುದು, ಅದು ಇಷ್ಟದೇವರೆಂಬ ಜ್ಯೋತಿಯಲ್ಲಿ ಲಯವಾಗಿ ಹೋಗಿಬಿಡುವುದು.

ಕರ್ಮಯೋಗದಲ್ಲಿ ಆಶೆ ಮತ್ತು ಆಸಕ್ತಿಗಳಿಗೆ ಆಶ್ರಯವಾದ ನಾನು, ನನ್ನದು ಎಂಬುದನ್ನು ತ್ಯಜಿಸಬೇಕು. ಕರ್ತೃವಾದ ನಾನು ಎಂಬ ಕ್ಷುದ್ರ ಅಹಂಕಾರವನ್ನು ಅಳಿಸಬೇಕು. ಅದರ ಸ್ಥಳದಲ್ಲಿ ಭೂಮವಾದ ಎಲ್ಲಕ್ಕೂ ಸಾಕ್ಷೀಭೂತವಾದ ಪರಮಾತ್ಮನೇ ನನ್ನ ಸ್ವಭಾವವೆಂದು ಅರಿಯಬೇಕು. ಎಲ್ಲಾ ಸ್ಥಿತಿಯಲ್ಲಿಯೂ ನಮ್ಮಲ್ಲಿರುವ ಅಹಂಕಾರ ಭಾವನೆಯೇ ಬ್ರಹ್ಮಜ್ಞಾನ ವ್ಯಕ್ತವಾಗುವುದಕ್ಕೆ ಇರುವ ಆತಂಕ.

ನಾನು ಎಂಬ ಅಹಂಕಾರವನ್ನು ಈಗ ವಿಭಜನೆ ಮಾಡೋಣ. ನಾವು ಜ್ಞಾನಯೋಗವನ್ನು ಓದುತ್ತಿದ್ದಾಗ ಕಪಿಲರ ದೃಷ್ಟಿಯಲ್ಲಿ ಚೈತನ್ಯ ಹೇಗೆ ಪ್ರಾರಂಭವಾಯಿತು ಎಂಬುದನ್ನು ನೋಡಿದೆವು. ವೇದಾಂತ ಸಿದ್ಧಾಂತ ಇದನ್ನು ಬಹುಪಾಲು ಒಪ್ಪುವುದು. ಇವೆರಡಕ್ಕೂ ಇರುವ ವ್ಯತ್ಯಾಸ ಈಗ ನಮಗೇನೂ ಬೇಕಾಗಿಲ್ಲ. ಚಿತ್ತ ಪ್ರಪಂಚದಲ್ಲಿರುವ ಪ್ರತಿಯೊಂದನ್ನೂ ಮಾಯೆಯ ಮೂಲಕ ಪ್ರತಿಬಿಂಬಿಸುತ್ತಿದೆ. ಇದರ ವಿಕಾಸ ಹೀಗಿದೆ, ಮೊದಲು ಮಹತ್, ಅದೇ ಅವ್ಯಕ್ತವಾದ ಚಿತ್, ಅನಂತರ ಬುದ್ಧಿ ಅಥವಾ ವಿಶ್ವಪ್ರಜ್ಞೆ,

ಅನಂತರ ಅಹಂಕಾರ, ಜೀವಾತ್ಮ, ನಾನು ಎಂಬ ಭಾವನೆ. ಅನಂತರ ಮನಸ್ಸು ಮನಸ್ಸಿನಿಂದ ಇಂದ್ರಿಯಗಳು, ಅನಂತರ ಸೂಕ್ಷ್ಮವಾದ ತನ್ಮಾತ್ರ, ಅನಂತರ ಸ್ಥೂಲವಾದ ಪಂಚಭೂತಗಳು.

ಈ ವಿಭಜನೆಯಿಂದ ನಾನು ಎನ್ನುವ ಪ್ರಜ್ಞೆಯಿಂದ, ಮನಸ್ಸು, ಬುದ್ಧಿ ಮುಂತಾದುವು ಮತ್ತು ಬಾಹ್ಯದಲ್ಲಿರುವ ವಿಷಯವಸ್ತುಗಳು ಬರುವುವು. ಯೋಗಾಭ್ಯಾಸದ ಉದ್ದೇಶವೇನೆಂದರೆ, ವ್ಯಕ್ತಿಯಂತೆ ಕವಲೊಡೆಯುವ ಪ್ರಜ್ಞೆಯನ್ನು ಮೊದಲು ನಿಗ್ರಹಿಸಬೇಕು. ಈ ಅಹಂಕಾರದ ಭಾವನೆಯೇ ಬ್ರಹ್ಮಭಾವನೆಗೆ ಪ್ರತಿಬಂಧಕವಾಗಿರುವುದು. ಈಗ ನಾವು ಪ್ರಜ್ಞೆಯನ್ನು ಹಿಮ್ಮುಖನಾಗಿ ತೆಗೆದುಕೊಳ್ಳಬೇಕು. ಮನಸ್ಸನ್ನು ಸ್ಥೂಲದಿಂದ ಸೂಕ್ಷ್ಮಕ್ಕೆ ತರುವುದಕ್ಕಾಗಿ ವಿವೇಕ ಮತ್ತು ಧ್ಯಾನಾದಿಗಳು ಬೇಕಾಗಿವೆ. ಮನಸ್ಸು ಎರಡು ದಿಕ್ಕಿನಲ್ಲಿ ಹೋಗಬಹುದು. ಬಾಹ್ಯದಲ್ಲಿ ಹೋಗುವುದು, ಅಂತರ್ಮುಖನಾಗಿ ಹೋಗುವುದು. ನಾವು ಅಂತರ್ಮುಖರಾಗುವ ಅಭ್ಯಾಸವನ್ನು ಮಾಡಬೇಕು. ಶ್ರೀರಾಮಕೃಷ್ಣರು ನಾವು ಹೇಗೆ ಬಂದೆವೊ ಹಾಗೆಯೇ ಹಿಂತಿರುಗಬೇಕು ಎಂದು ಹೇಳುತ್ತಿದ್ದರು. ಇದು ಬಹಳ ಮುಖ್ಯ.

ಯೋಗ ಅಹಂಕಾರವನ್ನು ನಿಗ್ರಹಿಸಿ, ಅದನ್ನು ಅಳಿಸುವುದಕ್ಕೆ ಪ್ರಯತ್ನ ಮಾಡಿದರೂ, ಈ ಅಹಂಕಾರದಿಂದ ಪಾರಾಗುವುದು ಬಹಳ ಕಷ್ಟವಾದ ಕೆಲಸ. ಸಾಕ್ಷಾತ್ಕಾರವಾದ ಮೇಲೂ ಇದು ಬರುವುದು. ನಾವು ಎಲ್ಲಿಯವರೆಗೆ ದೇಹದೊಂದಿಗೆ ಸಂಪರ್ಕವನ್ನು ಇಟ್ಟುಕೊಂಡಿರುವೆವೊ ಅಲ್ಲಿಯವರೆಗೆ ಒಂದು ಅಹಂಕಾರದ ಭಾವನೆ ಇರುತ್ತದೆ. ಈ ಹಾಳು ಅಹಂಕಾರ, ದೇವರ ಗುಲಾಮನಂತೆ ಅವನ ಭಕ್ತನಂತೆ ಇರಲಿ ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು.

ನಾವು ಭಕ್ತನ, ಸಾಕ್ಷಿಯ ಅಥವಾ ಜ್ಞಾನಿಯ ಅಹಂಕಾರವನ್ನು ರೂಢಿಸಬೇಕು. ಇಷ್ಟದೇವತೆಯೊಂದಿಗೆ ಅಹಂಕಾರಕ್ಕೆ ಒಂದು ಸಂಬಂಧವನ್ನು ಕಲ್ಪಿಸಿ. ನೀವೇನಾದರೂ ಅದ್ವೈತಿಗಳಾಗಿದ್ದರೆ, ಈಗ ನಿಮಗೆ ಕಾಣುವ ಕ್ಷುದ್ರ ಅಹಂಕಾರ ನಿಜವಲ್ಲ ಎಂಬುದನ್ನು ಒತ್ತಿ ಹೇಳಿ. ಅದೇ ಪೂರ್ಣವಾದ ಸತ್ಯ. ನೀನೇ ಅದು ಎಂದು ಹೇಳಿ. ನೀವು ದ್ವೈತಿಯಾಗಿದ್ದರೆ ಪೂರ್ಣತೆಯ ಪರಮಾದರ್ಶವಾದ ಇಷ್ಟದೇವತೆಯೊಂದಿಗೆ ಯಾವುದಾದರೂ ಸಂಬಂಧವನ್ನು ಬೆಳೆಸಿ. ನಾನು ಎಂಬುದನ್ನು ಉಪಯೋಗಿಸಿದ ಮೇಲೆ ನಾನು ಅವನ ಮಗು, ಅವನ ಸೇವಕ, ಅವನ ಸ್ನೇಹಿತ, ಅವನ ಪ್ರೇಯಸಿ ಎಂಬುದನ್ನು ತನ್ನಿ. ಈ ಸಂಬಂಧ ನಿಮ್ಮ ಮನಸ್ಸಿನಲ್ಲಿ ಯಾವಾಗಲೂ ಇರಲಿ. ದೇವರನ್ನು ಮರೆತು ನಿಮ್ಮ ಅಹಂಕಾರದ ಮೇಲೆ ನೀವು ನಿಂತುಕೊಂಡರೆ ಅದು ಬಹಳ ಅಪಾಯಕರ. ಜೀವನದಲ್ಲಿ ಯಾವುದು ಕೈಬಿಟ್ಟರೂ ದೇವರೊಬ್ಬ ಕೈಬಿಡುವುದಿಲ್ಲ. ದೇವರ ಮೇಲೆ ಭರವಸೆಯನ್ನು ಇಡಿ. ಆಗ ನಿಮ್ಮ ಜೀವನ ಆಸಕ್ತಿಯಿಂದ ಪಾರಾಗುವುದು, ಅಂಜಿಕೆಯಿಂದ ಪಾರಾಗುವುದು; ನಾನು ಕ್ಷುದ್ರ, ದುಃಖಿ, ನನಗೆ ದಿಕ್ಕಿಲ್ಲ ಎಂಬ ಭಾವದಿಂದ ನಿಮ್ಮನ್ನು ಪಾರು ಮಾಡುವುದು.

ಇಷ್ಟದೇವತೆಯ ಆಸರೆ ಇಲ್ಲದೆ ನಿಲ್ಲಬಲ್ಲವರು ಬಹಳ ಅಪರೂಪ ಎಂದು ನಾನು

ಹೇಳಬಲ್ಲೆ. ಜಪಾನಿನಲ್ಲಿ ತಾತ್ವಿಕ ಸಂಪ್ರದಾಯದ ಪಂಗಡ ಒಂದಿತ್ತು. ಅದರಲ್ಲಿ ದೇವಸ್ಥಾನಗಳು ಇರಲಿಲ್ಲ, ಬಾಹ್ಯಾಚಾರಗಳು ಇರಲಿಲ್ಲ. ತಮ್ಮ ಅಹಂಕಾರದ ಕನ್ನಡಿ, ಅದನ್ನು ಶುಭ್ರನಾಗಿಟ್ಟರೆ ಅದು ಭಗವಂತನನ್ನು ಪ್ರತಿಬಿಂಬಿಸುವುದು ಎಂದು ಬಗೆದಿದ್ದರು. ಕಾಲಕ್ರಮೇಣ ದೇವಸ್ಥಾನಗಳು ಬಂದವು. ಅಲ್ಲಿ ದೊಡ್ಡ ಕನ್ನಡಿಯನ್ನು ಇಟ್ಟರು. ಅದನ್ನು ಒರಸುವುದಕ್ಕೆ ಬ್ರಷ್ ಇಟ್ಟರು! ಅದನ್ನು ಒರಸಿದರೆ ನಮ್ಮ ಅಹಂಕಾರವನ್ನು ಶುದ್ಧಿ ಮಾಡಿಕೊಳ್ಳುತ್ತಿದ್ದೇವೆ ಎಂದು ಭಾವಿಸುವುದಕ್ಕಾಗಿ. ಜನರಿಗೆ ಬಹುಕಾಲ ಯಾವುದಾದರೂ ಬಾಹ್ಯಾಚಾರವಿಲ್ಲದೆ ಹೋದರೆ ಆಗುವುದಿಲ್ಲ. ಸ್ವಲ್ಪ ವಿವೇಚನೆ ಉಪಯೋಗಿಸಿ ಯಾವುದಾದರೂ ಆಚಾರಾದಿಗಳು ಬೆಳೆಯಲು ಅವಕಾಶ ಮಾಡಿಕೊಡುವುದು ಒಳ್ಳೆಯದು. ಇದನ್ನು ಮಾಡಿದವನೊಬ್ಬ ಕಲಾವಿದ.

ಭಗವಂತ ಯಾವುದೊ ಒಂದು ವಸ್ತು ವಿನಂತೆ ಮಾತ್ರ ಕಾಣುತ್ತಾನೆ ಎಂಬ ಕ್ಷುದ್ರ ಭಾವನೆಯನ್ನು ಇಟ್ಟುಕೊಳ್ಳಬೇಡಿ. ಬೆಳಕು ಹಲವು ರೂಪಿನ ಮೂಲಕ ಪ್ರತಿಬಿಂಬಿಸಬಲ್ಲದು. ಸತ್ಯಾನ್ವೇಷಣೆಗೆ ನಿಮ್ಮಲ್ಲಿರುವ ದಾಹವನ್ನು ಕುಂಠಿತ ಮಾಡಬೇಡಿ. ಪಾಪಿಗಳಲ್ಲಿಯೂ ಒಳ್ಳೆಯದನ್ನು ನೋಡಿ. ದೇವರು ಯಾವ ರೂಪಿನಲ್ಲಿ ಬರಲಿ ಎಲ್ಲವನ್ನೂ ನಾನು ಸ್ವಾಗತಿಸುತ್ತೇನೆ ಎಂದು ಹೇಳಿ. ದೇವರು ಕೆಲವು ವೇಳೆ ದಪ್ಪನಾದ ಮುಸುಕನ್ನು ಹಾಕಿಕೊಂಡು ಬರುವನು. ಇದರಿಂದ ಮೋಸಹೋಗಬೇಡಿ. ದೇವರನ್ನು ಪ್ರೀತಿಸಿ, ಅವನು ಹಾಕಿಕೊಂಡಿರುವ ಮುಸುಕನ್ನು ಅಲ್ಲ. ಎಲ್ಲಾ ಮುಸುಕುಗಳ ಹಿಂದೆಯೂ ದೇವರನ್ನು ನೋಡಿ, ದೇವರೊಂದಿಗೆ ಮಾತ್ರ ನಿಮ್ಮ ಸಂಬಂಧವನ್ನು ಇಟ್ಟುಕೊಳ್ಳಿ, ಮುಕ್ತರಾಗಿ.

ದೇವರನ್ನು ಹಲವು ವಿಧದಲ್ಲಿ ಕಲ್ಪಿಸಿಕೊಳ್ಳಬಹುದು. ಅವನು ಸಾಕಾರವಾಗಿರಬಹುದು, ನಿರಾಕಾರವಾಗಿರಬಹುದು. ನಿಮ್ಮ ನಿತ್ಯಭಾಷೆಯಲ್ಲಿ ಭಗವಂತನ ಬಾಂಧವ್ಯವನ್ನು ಒತ್ತಿಹೇಳಿ. ಆಗ ನಿಮ್ಮಲ್ಲಿ ಔದಾರ್ಯತೆ ವ್ಯಕ್ತವಾಗುವುದು. ನಿರಾಕಾರವೊಂದೇ ದೇವರು ಎಂದು ಭಾವಿಸಬೇಡಿ. ಸಾಕಾರ, ನಿರಾಕಾರಗಳೆರಡನ್ನೂ ಒಪ್ಪಿಕೊಳ್ಳಿ.

ಶ್ರೀರಾಮಕೃಷ್ಣರ ಜೀವನದಲ್ಲಿ ಭಗವಂತನನ್ನು ಎಲ್ಲಾ ಭಾವದಿಂದ ನೋಡುವ ಮತ್ತು ಎಲ್ಲಾ ಧರ್ಮಗಳು ಒಂದೇ ಎಂಬ ಸಾಮರಸ್ಯವನ್ನು ನೋಡುತ್ತೇವೆ. ಬೇರೆ ಬೇರೆ ಧರ್ಮಗಳು, ಬೇರೆ ಬೇರೆ ಭಾವಗಳು ಇವೆಲ್ಲ ಸಾಪೇಕ್ಷ ಎಂಬುದನ್ನು ತೋರಿಸಿದರು. ಇವೆಲ್ಲ ಒಂದೇ ಸತ್ಯದ ಭಿನ್ನದೃಷ್ಟಿಗಳಷ್ಟೆ. ಯಾವುದನ್ನೂ ಉತ್ತಮ, ಶುದ್ಧವಾದುದು ಎಂದು ಹೇಳುವಹಾಗಿಲ್ಲ. ಅವೆಲ್ಲ ಬೇರೆ ಬೇರೆ ಅಷ್ಟೇ. ಅಂತಿಮ ಸತ್ಯವನ್ನು ನಾವು ಅರಿಯಲಾರೆವು, ಅದರ ವಿಷಯವಾಗಿ ತರ್ಕಿಸಲಾರೆವು. ಅದನ್ನು ನಾವು ಅನುಭವಿಸಬೇಕು. ಅದು ನಿರಪೇಕ್ಷ ಸತ್ಯ.

ಶ್ರೀರಾಮಕೃಷ್ಣರು ಒಂದು ಸಲ ಈ ಉದಾಹರಣೆಯನ್ನು ಕೊಟ್ಟರು. ದೇವರು ಒಂದು ವೃತ್ತದ ಮಧ್ಯದಲ್ಲಿರುವ ಕೇಂದ್ರದಂತೆ. ನಾವುಗಳೆಲ್ಲ ಆ ಸುತ್ತಳತೆಯಲ್ಲಿ ಬೇರೆ ಬೇರೆ ಕಡೆ ಇದ್ದೇವೆ. ಅಲ್ಲಿ ಒಂದು ಕೊಳವೆ ಮೂಲಕ ಕೇಂದ್ರವನ್ನು ನೋಡುತ್ತಿದ್ದೇವೆ. ಪ್ರತಿಯೊಬ್ಬನೂ ಕೇಂದ್ರದಲ್ಲಿರುವವನೇ ತನ್ನ ಗುರಿ ಎಂದು ಭಾವಿಸುವನು. ಕ್ರೈಸ್ತರು,

ಹಿಂದೂಗಳು, ಮಹಮ್ಮದೀಯರು, ದ್ವೈತಿಗಳು, ವಿಶಿಷ್ಟಾದ್ವೈತಿಗಳು, ಅದ್ವೈತಿಗಳು ಎಲ್ಲರೂ, ಕೇಂದ್ರದಲ್ಲಿರುವುದೇ ನಮ್ಮ ಪರಮಧ್ಯೇಯ ಎಂದು ಹೇಳುವರು. ಅವರೆಲ್ಲರೂ ಸುತ್ತಳತೆಯಲ್ಲಿ ಬೇರೆ ಬೇರೆ ಕಡೆಯಿಂದ ತಮ್ಮ ತಮ್ಮ ಕೊಳವೆ ಮೂಲಕ ನೋಡುತ್ತಿರುವರು. ಅವರೆಲ್ಲರೂ ತಾವು ನೋಡುವ ಗುರಿ ಎಡೆಗೆ ಹೋದರೆ, ಕೇಂದ್ರದಲ್ಲಿ ಎಲ್ಲರೂ ಸಂಧಿಸುವರು. ಆದಕಾರಣವೇ ಗುರಿ ಒಂದು, ದಾರಿಗಳು ಹಲವು ಎಂದು ಹೇಳುವರು.

ಇದರ ರಹಸ್ಯವೇ ಯಾವುದಾದರೂ ಒಂದು ದಾರಿಯ ಮೂಲಕ ಕೇಂದ್ರದ ಕಡೆ ಹೋಗಬೇಕು. ಸುಮ್ಮನೆ ನಿಂತುಕೊಂಡು ವಾದಮಾಡುವುದಲ್ಲ, ತಮ್ಮ ವಿನಃ ಉಳಿದೆಲ್ಲದರಲ್ಲಿಯೂ ದೋಷವನ್ನು ಹುಡುಕುವುದಲ್ಲ.

ಯೋಗದ ಮೇಲೆ ಅಲ್ಲೊಂದು ಕಡೆ, ಇಲ್ಲೊಂದು ಕಡೆ ಭಾವನೆಗಳು, ವೇದ ಸಾಹಿತ್ಯದಲ್ಲಿ ನಮಗೆ ದೊರಕುವುವು. ಸಂಸ್ಕೃತ ಭಾಷೆಯಲ್ಲಿ ಜ್ಞಾನಸಾಗರವೇ ಇದೆ. ಆದರೆ ಭರತಖಂಡದಲ್ಲಿ ಚಾರಿತ್ರಿಕ ದೃಷ್ಟಿ ಎಂಬುದು ಇರಲಿಲ್ಲ. ವೈಜ್ಞಾನಿಕವಾಗಿ ಕಾಲವನ್ನು ನಿರ್ಣಯಿಸುವ ಸ್ವಭಾವ ಅವರಲ್ಲಿ ಇರಲಿಲ್ಲ. ಅಲ್ಲಿ ಬರುವುದನ್ನು ನಾವು ಮೆಚ್ಚುವುದಕ್ಕೆ ಆಗುವುದಿಲ್ಲ. ಭಾರತೀಯರು ವ್ಯಕ್ತಿಗಳಿಗಿಂತ ತತ್ವಕ್ಕೆ ಪ್ರಾಧಾನ್ಯತೆಯನ್ನು ಕೊಟ್ಟದ್ದೇ ಇದಕ್ಕೆ ಕಾರಣವಿರಬಹುದು. ಪುರಾತನಕಾಲದಲ್ಲಿ ಒಂದು ಘಟನೆ ಯಾವಾಗ ನಡೆಯಿತು, ಒಬ್ಬ ವ್ಯಕ್ತಿ ಯಾವಾಗ ಬದುಕಿದ್ದ ಎಂಬುದನ್ನು ನಿರ್ಣಯಿಸುವುದು ಬಹಳ ಕಷ್ಟ. ಜ್ಞಾನಯೋಗ ಪುರಾತನ ಶಾಸ್ತ್ರಗಳಲ್ಲಿ ದೊರಕಿದರೂ, ಉಪನಿಷತ್ತಿನ ಸಾಹಿತ್ಯದಲ್ಲಿ ಅದು ತನ್ನ ಪರಾಕಾಷ್ಠೆಯನ್ನು ಮುಟ್ಟಿದರೂ, ಎಂಟನೆ ಶತಮಾನದಲ್ಲಿದ್ದ ಶಂಕರಾಚಾರ್ಯರೊಂದಿಗೆ ಇದು ಸಂಬಂಧವನ್ನು ಪಡೆದಿದೆ. ಒಂದು ಸಾವಿರ ವರ್ಷ ಬುದ್ಧನ ಪ್ರಭಾವವಾದ ಮೇಲೆ ವೇದಾಂತತತ್ವಕ್ಕೆ ತಳಹದಿಯನ್ನು ಹಾಕಿದರು. ಈಗಲೂ ಕೂಡ ಅವರ ವೇದಾಂತ ಭಾಷ್ಯ ಪ್ರಪಂಚ ಕಂಡಿರುವ ಅತ್ಯಮೋಘವಾದ ತಾತ್ವಿಕ ಕುಸುಮಗಳು ಎಂದು ಹೇಳಬಹುದು.

ರಾಜಯೋಗವೂ ಕೂಡ ಬಹಳ ಪುರಾತನ ಶಾಸ್ತ್ರ. ಯೋಗಸೂತ್ರವನ್ನು ನಮಗೆ ಕೊಟ್ಟ ಪತಂಜಲಿಯನ್ನು ನಮ್ಮ ಮನಸ್ಸಿಗೆ ತರುವುದು.

ಭಕ್ತಿಯೋಗದ ಮೇಲೆ ಅಧಿಕಾರಯುಕ್ತವಾಗಿ ಮಾತನಾಡಬಲ್ಲವರೆ, ನಾರದ ಮತ್ತು ಶಾಂಡಿಲ್ಯ ಎಂಬುವರು. ಅವರಿಬ್ಬರೂ ಭಕ್ತಿಸೂತ್ರಗಳು ಎಂಬ ಗ್ರಂಥವನ್ನು ನಮಗೆ ಕೊಟ್ಟಿದ್ದಾರೆ. ಅನಂತರ ಭಕ್ತಿಯನ್ನು ಒತ್ತಿ ಹೇಳಿದವರೆ ಮಧ್ವ ಮತ್ತು ರಾಮಾನುಜಾಚಾರ್ಯರು.

ಕರ್ಮಯೋಗಕ್ಕೆ ಯಾವ ಒಂದು ಪುಸ್ತಕವನ್ನು ಅಧಿಕಾರಯುತವಾದ ವಾಣಿಯಿಂದ ಒಪ್ಪಿಕೊಳ್ಳದೇ ಇದ್ದರೂ, ಇದು ಅಷ್ಟೊಂದು ಮುಖ್ಯವಾಗಿರುವುದರಿಂದ ಪ್ರತಿಯೊಂದು ಯೋಗದಲ್ಲಿಯೂ ಬರುವುದು. (ಕೆಲವರು ಭಗವದ್ಗೀತೆ ಕರ್ಮಯೋಗಕ್ಕೆ ಪಠ್ಯಪುಸ್ತಕ ಎಂದು ಹೇಳುತ್ತಾರೆ) ಸುಮಾರು ೮೦,೦೦೦ ಶ್ಲೋಕಗಳನ್ನು ಒಳಗೊಂಡ ಯೋಗವಾಸಿಷ್ಠ ರಾಮಾಯಣ ಎಂಬುದು ಕರ್ಮಯೋಗಕ್ಕೆ ಅತ್ಯಂತ ಮುಖ್ಯವಾದ ಗ್ರಂಥವಾಗಿದೆ.

ಸ್ವಾಮಿ ವಿವೇಕಾನಂದರು ಈ ಯೋಗಗಳನ್ನೆಲ್ಲ ಅತ್ಯಂತ ಶ್ರೇಷ್ಠವಾದ ರೀತಿಯಲ್ಲಿ ವಿವರಿಸುವರು. ನೀವು ಇನ್ನೂ ಹೆಚ್ಚು ವಿಷಯಗಳನ್ನು ಈ ಯೋಗದ ಬಗ್ಗೆ ತಿಳಿದುಕೊಳ್ಳಬೇಕೆಂದು ಇಚ್ಛಿಸಿದರೆ ಅದನ್ನು ಓದಬಹುದು. ಆದರೆ ಅದನ್ನು ಅತ್ಯಂತ ಶ್ರದ್ಧೆಯಿಂದ ತೆಗೆದುಕೊಳ್ಳಿ. ಇಲ್ಲಿ ಬರುವ ಗಹನ ಸತ್ಯಗಳನ್ನೆ ನಿಮ್ಮ ಜೀವನದಲ್ಲಿ ಅನುಷ್ಠಾನ ಮಾಡುವುದಕ್ಕಾಗಿ ಓದಿ. ಇಲ್ಲದೇ ಇದ್ದರೆ, ಇದುವರೆಗೆ ನಿಮ್ಮ ತಲೆಯಲ್ಲಿ ಹೊರುತ್ತಿರುವ ವಿಷಯಗಳ ಭಾರಕ್ಕೆ ಮತ್ತಷ್ಟು ಸೇರಿಸುವಿರಿ.

ಯಾವ ವಿದ್ಯವನ್ನಾದರೂ ನಾವು ಅನುಸರಿಸಿದರೆ, ಕೊನೆಗೆ ನಮಗೆ ಏನೂ ಗೊತ್ತಿಲ್ಲ ಎಂಬ ಧನ್ಯವಾದ ಅಜ್ಞಾನಕ್ಕೆ ಬರುತ್ತೇವೆ. ಇಲ್ಲಿಂದಲೇ ಧರ್ಮ ಮತ್ತು ತತ್ವ ಪ್ರಾರಂಭವಾಗುವುದು. ತತ್ವ ಒಂದು ಸತ್ಯವಿದೆ ಎಂದು ನಮಗೆ ಹೇಳಬಹುದು. ಆದರೆ ಅದನ್ನು ಅನುಭವಿಸಬೇಕಾದರೆ ನಾವು ಸಾಧನೆ ಮಾಡಬೇಕು. ಪ್ರತಿಯೊಂದು ಕ್ಷಣದಲ್ಲಿಯೂ ನೀವು ಅದನ್ನು ಅನುಭವಿಸಬೇಕು. ನಿಮಗೆ ಯಾವ ದಾರಿ ಹಿಡಿಸುವುದೊ ಅದನ್ನು ಆರಿಸಿಕೊಂಡು ಮುಂದುವರಿಯಿರಿ. ಇತರರ ಮೇಲೆ ನೀವೇ ಸರಿ ಎಂದು ಒಪ್ಪಿಸುವುದಕ್ಕಾಗಿ ಕಾಲಹರಣ ಮಾಡಬೇಡಿ.

ನಿಮ್ಮ ಮನಸ್ಸನ್ನು ಅಂತರ್ಮುಖ ಮಾಡಿ. ಜೀವನದ ಅಂತಿಮ ಗುರಿಯನ್ನು ಚಿಂತಿಸಿ. ಇಲ್ಲದೆ ಇದ್ದರೆ, ಈ ಜೀವನ ನಿಷ್ಪ್ರಯೋಜನ. ಪ್ರಪಂಚದ ಜನ ಯಾವುದನ್ನು ಹುಡುಕಿಕೊಂಡು ಓಡಿಹೋಗುತ್ತಿರುವರೊ ಅವುಗಳನ್ನು ಪರೀಕ್ಷಿಸಿ. ಸಾಧಾರಣವಾಗಿ ಈ ಸಂಸಾರದಲ್ಲಿ ಯಾವುದನ್ನು ಜನ ಅನುಸರಿಸುವರೊ ಅದನ್ನು ಕುರಿತು ಪರೀಕ್ಷೆ ಮಾಡಿ. ವಿಷಯವಸ್ತುಗಳ ಬಾಗಿಲಿನಲ್ಲಿ ನಿಂತುಕೊಂಡು ಭಿಕ್ಷೆ ಬೇಡಿದರೆ, ನಿಮ್ಮ ಭಿಕ್ಷಾಪಾತ್ರೆ ಭರ್ತಿಯಾಗುವುದಿಲ್ಲ. ನಿಮ್ಮ ಹತ್ತಿರ ಕೋಟ್ಯಾಂತರ ರೂಪಾಯಿಗಳಿದ್ದರೆ, ಬಿಡಿಕಾಸಿನಿಂದ ಪ್ರಯೋಜನವೇನು ? ಅಷ್ಟು ದುಡ್ಡು ನಿಮ್ಮಲ್ಲಿರುವಾಗ ಒಂದು ಕಾಸು ಹೋದರೇನಂತೆ ? ಪುಡಿಕಾಸು ಹೋಗಲಿ, ಅಂತರಾತ್ಮನ ಸಂಪತ್ತನ್ನು ಗಳಿಸಿ.

೩

ಯೋಗಾಭ್ಯಾಸ ಮಾಡುವುದರಿಂದ ಮನಸ್ಸು ಸ್ಥಿರವಾಗುವುದು ಮತ್ತು ಸಮತೂಕದಲ್ಲಿರುವುದು. ಇದರ ಪ್ರಭಾವದಿಂದ ಆಂತರಿಕ ಪರಿಪೂರ್ಣತೆ ವಿಕಾಸವಾಗುವುದಕ್ಕೆ ಇರುವ ಆತಂಕಗಳು ನಿವಾರಣೆ ಆಗುವುವು. ಸಾಧಕನಿಗೆ ಮನೋದಾರ್ಢ್ಯ ಮತ್ತು ಶಾಂತಿ ಇಲ್ಲದೇ ಇದ್ದರೆ, ಯಾವ ಯೋಗವನ್ನೂ ಅಭ್ಯಾಸ ಮಾಡುವುದಕ್ಕೆ ಆಗುವುದಿಲ್ಲ. ಅಸ್ಥಿರವಾದ, ನಿಗ್ರಹಿಸಲು ಅಸದಳವಾದ ಮನಸ್ಸು ದೊಡ್ಡ ಒಂದು ಆತಂಕ. ಅದರಿಂದ ಪ್ರಯೋಜನವಿಲ್ಲ. ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿಯಬೇಕೆಂದು ಬಯಸುವವನು ಪರಿಶುದ್ಧವಾದ ಶಾಂತವಾದ ಮನಸ್ಸನ್ನು ಹೊಂದಿರಬೇಕು.

ನಾವು ಹಿಂದೆ ತ್ರಿಗುಣಗಳನ್ನು ವಿಮರ್ಶಿಸಿ ಆಗಿದೆ. ಮನುಷ್ಯನ ಪ್ರಜ್ಞೆ ಸಹಿತ ಅವನ ಬಾಹ್ಯ ವ್ಯವಹಾರಗಳೆಲ್ಲ ಪ್ರಕೃತಿಯಲ್ಲಿರುವ ಈ ಮೂರು ಗುಣಗಳ ವಿಭಜನದಿಂದ

ಆಗಿದೆ. ಸತ್ವ ಎಂದರೆ ಮನಸ್ಸು ಸಮವಾಗಿರುವುದು, ಶಾಂತಿಯಿಂದ ಇರುವುದು. ರಜಸ್‌ನಲ್ಲಿ ಚಟುವಟಿಕೆ ಮತ್ತು ಅಶಾಂತಿ, ತಮಸ್‌ನಲ್ಲಿ ಸೋಮಾರಿತನ, ಅಜ್ಞಾನ. ಈ ಮೂರು ಗುಣಗಳೂ ಪ್ರತಿಯೊಬ್ಬ ಮನುಷ್ಯನಲ್ಲಿ ಇದ್ದರೂ, ಯಾವುದೊ ಒಂದು ಉಳಿದ ಎರಡಕ್ಕಿಂತ ಜಾಸ್ತಿ ಇರುವುದು. ಗುಣಗಳ ದೃಷ್ಟಿಯಿಂದ ಮನುಷ್ಯನ ಶೀಲ ಮತ್ತು ಆಧ್ಯಾತ್ಮಿಕ ಜೀವನದಲ್ಲಿ ಅವನು ಯಾವ ಅಂತಸ್ಥಿನಲ್ಲಿರುವನು ಎಂಬುದನ್ನು ನಾಲ್ಕು ರೀತಿ ವಿಭಾಗಿಸಬಹುದು. ಒಬ್ಬನ ಸಾಮಾನ್ಯ ಸ್ವಭಾವ ಮತ್ತು ನಡವಳಿಕೆ, ನೀತಿ ಮತ್ತು ಧರ್ಮದ ಮೇಲೆ ಅವನ ದೃಷ್ಟಿ, ಅವನು ಯಾವ ಆಹಾರವನ್ನು ತೆಗೆದುಕೊಳ್ಳುತ್ತಾನೆ, ಯಾವ ರೀತಿ ಉಡುಪುಗಳನ್ನು ಧರಿಸುತ್ತಾನೆ ಎಂಬುವು.

ಸಾಧಾರಣ ಸ್ವಭಾವ ಮತ್ತು ನಡವಳಿಕೆ : ತಮೋಗುಣದಿಂದ ಕೂಡಿದವನು ಜಡವಾಗಿರುವನು, ಅಸ್ಪಷ್ಟವಾಗಿರುವನು, ಅಜಾಗರೂಕನಾಗಿರುವನು, ಅಡ್ಡಾದಿಡ್ಡಿಯಾಗಿರುವನು. ರಜೋಗುಣದಿಂದ ಪ್ರಭಾವಿತನಾದವನಲ್ಲಿ, ಉತ್ಸಾಹದ ಆಧಿಕ್ಯ, ಮಾತಾಳಿಯಾಗಿರುವನು, ಇದ್ದಕ್ಕಿದ್ದಂತೆ ಬದಲಾಯಿಸುವನು, ಅಸ್ಥಿರನಾಗಿರುವನು, ಇನ್ನೊಬ್ಬರ ಮೇಲೆ ಅಧಿಕಾರವನ್ನು ಚಲಾಯಿಸುವನಾಗಿರುವನು. ಯಾರಲ್ಲಿ ಸತ್ವ ಪ್ರಧಾನವಾಗಿರುವುದೊ, ಅವನು ಪ್ರಶಾಂತನಾಗಿರುವನು, ನಿಶ್ಚಯವಾಗಿರುವನು, ಒಡಂಬಡಿಕೆಗೆ ಸದಾ ಸಿದ್ಧನಾಗಿರುವನು, ಸ್ಥಿರವಾಗಿರುವನು, ಸತ್ಯನಿಷ್ಠನಾಗಿರುವನು.

ಧರ್ಮ ಮತ್ತು ನೀತಿಯ ಮೇಲೆ ತಮೋಗುಣಿಯಲ್ಲಿ ಕ್ಷುದ್ರದೃಷ್ಟಿ, ಮೂಢಾಚಾರಗಳು, ಅಂಜಿಕೆ, ಕ್ರೌರ್ಯ ಮತ್ತು ಬಲಾತ್ಕಾರಕ್ಕೆ ಒಳಗಾಗುವನು. ರಾಜಸಿಕನು ಮತಭ್ರಾಂತನಾಗಿರುವನು; ಜಗಳಗಂಟನು, ನಾನೇ ಸರಿ ಎನ್ನುವವನು, ಕೇವಲ ತೋರಿಕೆ, ಆಷಾಢಭೂತಿ. ಸಾತ್ವಿಕನ ಮನಸ್ಸು ವಿಶಾಲವಾದ, ಉದಾರವಾದ ತಿಳಿವಳಿಕೆಯಿಂದ ಕೂಡಿದೆ. ಅವನು ಎಲ್ಲರನ್ನೂ ಪ್ರೀತಿಸುವನು, ಇತರರ ಭಿನ್ನಾಭಿಪ್ರಾಯಗಳಿಗೆ ಮನ್ನಣೆಯನ್ನು ಕೊಡುವನು.

ಆಹಾರದ ಆಯ್ಕೆ : ತಾಮಸಿಕನು ಹೊಟ್ಟೆಬಾಕ. ಆಹಾರ ಹೊಸದೊ, ಆರೋಗ್ಯದಾಯಕವೊ, ಶುಚಿಯಾಗಿರುವುದೊ ಅದನ್ನು ಲೆಕ್ಕಿಸುವುದಿಲ್ಲ. ರಾಜಸಿಕ ಹೆಚ್ಚು ಜಿಡ್ಡು ಆಹಾರ ತೆಗೆದುಕೊಳ್ಳುವನು, ಅದನ್ನು ಅರಗಿಸಿಕೊಳ್ಳುವುದಕ್ಕೆ ಕಷ್ಟವಾಗುವುದು. ಅವು ಇಂದ್ರಿಯಗಳನ್ನು ಹೆಚ್ಚು ಉದ್ರೇಕಗೊಳಿಸುವುವು. ಸಾತ್ವಿಕ ಮನುಷ್ಯ ಆರೋಗ್ಯಕರವಾದ ಪರಿಶುದ್ಧವಾದ ರಸಗಳಲ್ಲಿ ಒಂದು ಮಿತಿ ಇಟ್ಟುಕೊಂಡು ಮಿತವಾಗಿ ಭುಂಜಿಸುವನು.

ಪೋಷಾಕು : ತಾಮಸಿಕ ಅಜಾಗರೂಕನಾಗಿ, ಅಸಡ್ಡೆಯಿಂದ ಬಟ್ಟೆ-ಬರೆ ಹಾಕಿಕೊಳ್ಳುವನು. ಅವನ ಬಟ್ಟೆ-ಬರೆಯಲ್ಲಿ ಯಾವ ನಾಜೋಕೂ ಇಲ್ಲ, ಸೌಂದರ್ಯವೂ ಇಲ್ಲ. ರಾಜಸಿಕ, ಆಡಂಬರದ, ಬಣ್ಣಬಣ್ಣಗಳಿಂದ ಕೂಡಿದ ಉದ್ರೇಕಗೊಳಿಸುವ, ಮರ್ಯಾದೆ ಇಲ್ಲದ ಬಟ್ಟೆ ಧರಿಸುವನು. ಸಾತ್ವಿಕ ಶುಚಿಯಾದ, ಚೊಕ್ಕಟವಾದ ಬೆಡಗಿಲ್ಲದ ಸಾಧಾರಣ ರೀತಿ ಧರಿಸುವನು.

ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿಯಬೇಕಾದರೆ, ಕೆಳಗಿನ ಗುಣಗಳನ್ನು

ಮೇಲಿನ ಗುಣದಿಂದ ಸೋಲಿಸಿ, ಅನಂತರ ಅದಕ್ಕೂ ಅತೀತರಾಗಬೇಕು. ದೇಹ ಮತ್ತು ಮನಸ್ಸಿಗೆ ಪರಸ್ಪರ ಸಂಬಂಧವಿದೆ ಎಂಬುದು ನಮಗೆ ಗೊತ್ತು. ಒಂದು ಮತ್ತೊಂದರಮೇಲೆ ತನ್ನ ಪ್ರಭಾಪವನ್ನು ಬೀರುವುದು. ದೇಹಕ್ಕೆ ಅನಾರೋಗ್ಯವಾದರೆ ಮನಸ್ಸೂ ಹದಗೆಡು ವುದು. ಮನಸ್ಸು ಉತ್ಸಾಹವನ್ನು ಕಳೆದುಕೊಂಡು ಸೋಮಾರಿಯಾಗಿದ್ದರೆ, ದೇಹವೂ ಕೂಡ ಅದನ್ನು ಪ್ರತಿಬಿಂಬಿಸುವುದು. ನಾವು ಇಚ್ಛಿಸಲಿ, ಬಿಡಲಿ, ನಮ್ಮ ಅಂತರ್ಯದಂತೆ ನಮ್ಮ ನಡವಳಿಕೆಗಳು ಇರುತ್ತವೆ. ಉಡುಪಿನಂತಹ ಗೌಣವಾಗಿರುವುದು ಕೂಡ ನಮ್ಮ ಮನಸ್ಸಿನ ಮೇಲೆ ತನ್ನ ಪ್ರಭಾವವನ್ನು ಬಿಡುವುದು.

ಶ್ರೀರಾಮಕೃಷ್ಣರು ಬಟ್ಟೆ ಬರೆ ಹೇಗೆ ನಮ್ಮ ನಡವಳಿಕೆಯ ಮೇಲೆ ತನ್ನ ಪ್ರಭಾವ ನನ್ನು ಬೀರುತ್ತದೆ ಎನ್ನುವ ವಿಷಯವಾಗಿ ಎರಡು ಹಾಸ್ಯ ನಿದರ್ಶನಗಳನ್ನು ಹೇಳುತ್ತಾರೆ. ಒಬ್ಬ ಶೋಕಿಲಾಲನಂತೆ ಬಟ್ಟೆ ಹಾಕಿಕೊಂಡಾಗ, ಈಗಿನ ಕಾಲದ ಪ್ರೀತಿಯ ಹಾಡನ್ನು ಹಾಡುತ್ತಾನೆ. ಚೆಸ್ನಾದ ಬೆತ್ತವನ್ನು ಕೈಯಲ್ಲಿ ಹಿಡಿದುಕೊಂಡು ಹೋಗುತ್ತಾನೆ. ಇಸ್ಪೀಟಿನ ಕಟ್ಟು ಹತ್ತಿರವೇ ಇರುವುದು. ರೋಗಿಯಾಗಲಿ, ದುರ್ಬಲನಾಗಲಿ ಅಡಿ ಎತ್ತರ ವಿರುವ ಬೂಟ್ಸನ್ನು ಹಾಕಿಕೊಂಡರೆ, ಇಂಗ್ಲಿಷಿನವರಂತೆ ಸಿಳ್ಳೆ ಹಾಕುತ್ತಾನೆ, ಮೆಟ್ಟಲನ್ನು ಇಳಿಯುವಾಗ ಅವಸರದಲ್ಲಿ ನೆಗೆಯುವನು.

ಹಿಂದೂ ಸಾಹಿತ್ಯದಲ್ಲಿ, ನಾವು ಹಾಕಿಕೊಳ್ಳುವ ಬಟ್ಟೆಬರೆ ನಮ್ಮ ಶೀಲದ ಮೇಲೆ ಎಷ್ಟು ಪರಿಣಾಮಕಾರಿಯಾಗಿದೆ ಎಂಬುದನ್ನು ವಿವರಿಸುವುದು. ಇವೆಲ್ಲ ಮಾನಸಿಕ ಸಂಗತಿ ಗಳು. ನಮ್ಮ ಬಾಹ್ಯ ಅಭ್ಯಾಸಗಳನ್ನು ಬದಲಾಯಿಸಿದರೆ, ಮನಸ್ಸಿನ ಸ್ಥಿತಿಯನ್ನೂ ಬದಲಾಯಿಸಬಹುದು. ನಮ್ಮ ಪ್ರಕೃತಿಯಲ್ಲಿರುವ ಗುಣಗಳನ್ನು ವ್ಯಕ್ತಪಡಿಸುವದರಲ್ಲಿ ನಾವು ನಿಗ್ರಹವನ್ನು ತಂದರೆ ನಮ್ಮ ಮನಸ್ಸನ್ನು ಉತ್ತಮಸ್ಥಿತಿಗೆ ತರುವುದಕ್ಕೆ ಸುಲಭ ವಾಗುವುದು. ಆಧ್ಯಾತ್ಮಿಕ ಜೀವನದಲ್ಲಿ ಸಾಧಕ ತನ್ನ ಆಲೋಚನೆ ಮತ್ತು ನಡವಳಿಕೆ ಯನ್ನು ಯಥಾರ್ಥವಾಗಿ ಪರೀಕ್ಷಿಸಬೇಕು. ಯಾವಾಗಲೂ ತನ್ನ ಜೀವನದಲ್ಲಿ ಅತ್ಯಂತ ಉದಾತ್ತವಾದ ಭಾವನೆಗಳನ್ನು ಮೆಚ್ಚಬೇಕು, ಅದನ್ನು ಅನುಭವಿಸಬೇಕು, ಅದನ್ನು ವ್ಯಕ್ತಪಡಿಸಬೇಕು. ಇದಕ್ಕಾಗಿ ಸತತ ಪ್ರಯತ್ನ ಮಾಡಬೇಕು. ಜೀವನದ ಎಲ್ಲಾ ಕಾರ್ಯ ಕ್ಷೇತ್ರದಲ್ಲಿ ಶಿಸ್ತು ಆವಶ್ಯಕ.

ಆಧ್ಯಾತ್ಮಿಕ ಜೀವನದ ದೃಷ್ಟಿಯಿಂದ ಸಾಧಕ ಸತ್ತ್ವಗುಣಪ್ರಧಾನವಾದ ಸ್ಥಿತಿಯನ್ನು ಪಡೆಯಬೇಕು. ಅನಂತರ ಅವನು ಎಲ್ಲಾ ಗುಣಗಳಿಗೂ ಅತೀತನಾಗಿ ತ್ರಿಗುಣಾತೀತನಾಗ ಬೇಕು. ಭೌತಿಕ ಪ್ರಪಂಚದಿಂದ ಒಂದು ಘಟನೆಯನ್ನು ತೆಗೆದುಕೊಳ್ಳೋಣ. ನೀರು ಸಾಧಾರಣವಾಗಿ ಭೂಮಿಯ ಮೇಲೆ ಹರಿಯುವುದು. ಅದು ಆವಿಯಾದಲ್ಲದೆ ಮೇಲಕ್ಕೆ ಏಳಲಾರದು. ಆದರೆ ಅದು ಒಮ್ಮೆ ಆವಿಯಾದಮೇಲೆ ಆಕಾಶಕ್ಕೆ ಏರಿಹೋಗಿ ಮೋಡವಾಗಿ ಮಳೆಯಂತೆ ಭೂಮಿಗೆ ಬೀಳುವುದು. ನಾವು ನೀರಿನ ಆವಿಯಂತೆ ಸೂಕ್ಷ್ಮವಾಗಬೇಕು. ಆಗ ನಮ್ಮ ಅಹಂಕಾರ ಹೋಗಿ ನಾವು ಅನಂತದಲ್ಲಿ ಒಂದಾಗುವೆವು. ಅನಂತರ ಎಲ್ಲರ ಕಲ್ಯಾಣಕ್ಕೆ ಮಳೆಯಂತೆ ಬೀಳುವೆವು.

ಮನುಷ್ಯನನ್ನು ಕೆಳಮಟ್ಟಕ್ಕೆ ಬಂಧಿಸುವ ಮೂರು ಆಶೆಗಳಿವೆ. ಅವು ಒಂದರಷ್ಟೆ ಮತ್ತೊಂದು ಬಲಕಾರಿ, ಪರಸ್ಪರ ಪೋಷಕಕಾರಿ. ಅದೇ ಲೈಂಗಿಕ ಆಸಕ್ತಿ, ರುಚಿಯ ಆಸಕ್ತಿ, ಹಣದ ಆಸಕ್ತಿ. ಶಿಸ್ತಿನಿಂದ ಈ ಮೂರನ್ನೂ ನಿಗ್ರಹಿಸಬೇಕಾಗಿದೆ.

ಪ್ರತಿಯೊಂದು ಮನಸ್ಸೂ ಮತ್ತೊಂದು ಮನಸ್ಸಿನೊಂದಿಗೆ ಸಂಬಂಧವನ್ನು ಹೊಂದಿದೆ. ಪ್ರತಿಯೊಂದು ಮನಸ್ಸಿಗೂ ಪ್ರಪಂಚದಲ್ಲಿರುವವರ ಮನಸ್ಸಿನೊಂದಿಗೆ ಸಂಬಂಧವಿದೆ. ಇದರಿಂದ ಅನುಕೂಲಗಳೂ ಇವೆ. ಅನನುಕೂಲಗಳೂ ಇವೆ. ಇವು ನೀವು ಇರುವ ಆಧ್ಯಾತ್ಮಿಕ ಮಟ್ಟದ ಮೇಲೆ ನಿಂತಿದೆ. ನಿಮ್ಮ ಮನಸ್ಸು ಉತ್ತಮ ಭೂಮಿಕೆಯಲ್ಲಿದ್ದರೆ, ಹೊರಗಿಂದ ಬರುವ ಆಧ್ಯಾತ್ಮಿಕ ಸ್ಪಂದನಗಳನ್ನು ಹೀರಿಕೊಂಡು ಉತ್ತಮವಾಗಿ ಬೆಳೆಯಬಲ್ಲದು. ಧ್ವಂಸಕಾರಿಯಾದ ಆಲೋಚನಾ ಪರಂಪರೆ ನಿಮಗೆ ತಾಕದಂತೆ ನೋಡಿಕೊಳ್ಳಬೇಕಾಗುವುದು. ದೋಷಪೂರಿತವಾದ ಆಲೋಚನೆಗಳನ್ನು ಕಂಡರೆ ಆಗದಂತೆ ನಿಮ್ಮ ಮನಸ್ಸನ್ನು ಅಣಿಮಾಡಿಕೊಳ್ಳಿ. ಸ್ವಭಾವ ಎಂದರೆ ಘನೀಭೂತವಾದ ನಮ್ಮ ದೃಷ್ಟಿ. ನೀವು ಪ್ರಯತ್ನಪಟ್ಟರೆ ಕೆಟ್ಟ ಅಭ್ಯಾಸಗಳನ್ನು ಕಿತ್ತು ಹೊಸ ಒಳ್ಳೆಯ ಅಭ್ಯಾಸಗಳನ್ನು ಅಲ್ಲಿ ನೆಟ್ಟು ನಮ್ಮ ಶೀಲವನ್ನು ತಿದ್ದುಪಡಿಸಿಕೊಳ್ಳುವುದಕ್ಕೆ ಸಾಧ್ಯ ಎಂಬುದನ್ನು ನೆನಪಿನಲ್ಲಿಡಿ. ಆಧ್ಯಾತ್ಮಿಕ ಜೀವನದಲ್ಲಿ ಆತಂಕಗಳನ್ನು ಶಪಥದಿಂದ ಪಾರಾಗಬಹುದು, ಗೊಂದಲದಿಂದ ಅಲ್ಲ. ನಿಮಗೆ ಏನು ಬೇಕೊ ಅದು ನಿಮಗೆ ಚೆನ್ನಾಗಿ ಗೊತ್ತಿರಲಿ. ನಿಮಗೆ ಅದು ಸಿದ್ಧಿಸುವುದು. ಅದನ್ನು ಪಡೆಯುವುದಕ್ಕೆ ಬೇಕಾದ ವಸ್ತುಗಳೆಲ್ಲ ನಿಮ್ಮಲ್ಲಿವೆ.

ನಾವು ಅಷ್ಟೊಂದು ಆಲೋಚನೆ ಮಾಡುತ್ತೇವೆ. ಆದರೆ ಕೆಲಸಮಾಡುವುದೊ ಬಹಳ ಅಲ್ಪ. ನಿಮ್ಮ ಮನಸ್ಸನ್ನು ಪರಿಶೋಧನೆಮಾಡಿ, ಇದು ಏತಕ್ಕೆ ಎಂಬುದನ್ನು ಕಂಡುಹಿಡಿಯಿರಿ. ಅನುಷ್ಠಾನಕ್ಕೆ ತರಲು ಹಲವಾರು ನ್ಯೂನತೆಗಳು ಇವೆ. ನೀವು ಉತ್ಕಟವಾಗಿ ಅದನ್ನು ಆಲೋಚಿಸಿಲ್ಲ ಎಂದು ಕಾಣುವುದು. ಒಂದು ವೇಳೆ ಮಾಡಬೇಕೆಂದು ಅನ್ನಿಸಿದರೂ ಬರೀ ಉದ್ವೇಗದಲ್ಲೇ ನಿಮ್ಮ ಶಕ್ತಿ ವ್ಯಯವಾಗುವುದು. ಅಥವಾ ನಿಮ್ಮಲ್ಲಿ ಸಂಶಯಗಳು ಎದ್ದಿವೆ. ಕೆಲವರ ಸ್ವಭಾವ ಇದು, ಯಾವುದರಲ್ಲಿಯೂ ಒಂದು ನಿರ್ಣಯಕ್ಕೆ ಬರುವುದಿಲ್ಲ. ಬೇಗ ನಿರ್ಣಯಕ್ಕೆ ಬರುವಂತೆ, ಮತ್ತು ಅದು ಸರಿಯಾಗಿರುವಂತೆ ಮನಸ್ಸಿಗೆ ತರಬೇತನ್ನು ಕೊಡಬಹುದು. ನೀವು ಯಾವುದನ್ನಾದರೂ ಪಡೆಯಲು ಆಶಿಸಿದರೆ, ಪ್ರಯತ್ನಪಟ್ಟರೆ ಅದು ನಿಮ್ಮದಾಗುವುದು. ಪ್ರತಿಯೊಬ್ಬರಲ್ಲಿಯೂ ಒಂದೇ ಸಮನಾದ ಇಚ್ಛಾಶಕ್ತಿ ಇದೆ. ಅದನ್ನು ನೀವು ವೃದ್ಧಿಮಾಡಿ ಉಪಯೋಗಿಸಬೇಕಾಗಿದೆ.

ಬುದ್ಧ ಹೇಳಿದ ಅಷ್ಟಾಂಗ ಮಾರ್ಗಗಳಲ್ಲಿ ಒಳ್ಳೆಯ ಶೀಲ ಒಂದು. ಶೀಲ ಎಂಬುದು ವಿವರಿಸುವುದಕ್ಕೆ ಅಸ್ಪಷ್ಟವಾಗಿದೆ. ಆದರೂ ಅದು ನಮ್ಮಲ್ಲಿ ಆಳವಾಗಿ ಬೇರೂರಿದೆ. ಮನುಷ್ಯನ ಎಲ್ಲಾ ನಡವಳಿಕೆಯ ಹಿಂದೆ ಅದು ಇದೆ. ಒಬ್ಬ ಮತ್ತೊಬ್ಬನನ್ನು ಮಾತಿಲ್ಲದೆ ನೋಯಿಸಬಲ್ಲ. ಬರೀ ಮೌನವಾದ ನಡವಳಿಕೆಯಿಂದ. ನಮಗೆಲ್ಲ ಇದು ಗೊತ್ತಿದೆ. ದೇಹವನ್ನು ಚಲಿಸದೆ ಮತ್ತೊಬ್ಬನಿಗೆ ಕೆಟ್ಟದ್ದನ್ನು ಮಾಡಬಹುದು. ನಮ್ಮ ದೃಷ್ಟಿಯೇ ಸ್ವಭಾವವನ್ನು ನಿರ್ಧರಿಸುವುದು. ಮಗು ಬೇಕಾದಷ್ಟು ತಪ್ಪುಮಾಡುವುದು, ಆದರೆ ಅದು ನಮ್ಮನ್ನು ನೋಯಿಸುವುದಿಲ್ಲ.

ತನ್ನ ಅಂತರ್ಯಾಮಿಯನ್ನು ಯಾವ ದೃಷ್ಟಿಯಿಂದ ನೋಡುತ್ತಾನೆಯೊ ಅದರಂತೆ ಅವನ ಶೀಲವಾಗುವುದು. ನಿಮ್ಮನ್ನು ಯಾವ ದೃಷ್ಟಿಯಿಂದ ನೋಡುತ್ತೀರಿ, ಇತರರನ್ನು ಯಾವ ದೃಷ್ಟಿಯಿಂದ ನೋಡುತ್ತೀರಿ, ಬೇರೆ ಬೇರೆ ವರ್ಗದವರನ್ನು ಯಾವ ದೃಷ್ಟಿಯಿಂದ ನೋಡುತ್ತೀರಿ ? ಸರಿಯಾದ ದೃಷ್ಟಿಯಿಂದ ನಮ್ಮ ವ್ಯವಹಾರವೆಲ್ಲ ಕೂಡಿಕೊಂಡಿರಬೇಕು. ಅದು ನಮ್ಮ ಯೋಗ್ಯತೆಗೆ ತಕ್ಕಂತೆ ಇರಬೇಕು, ನಮ್ಮಲ್ಲಿಯ ಪವಿತ್ರಾತ್ಮನಿಗೆ ತಕ್ಕಂತೆ ಇರಬೇಕು. ಎಲ್ಲಾ ಸನ್ನಿವೇಶಗಳಲ್ಲಿಯೂ ಸರಿಯಾದ ದೃಷ್ಟಿಯನ್ನು ಇಟ್ಟುಕೊಂಡಿರಿ. ಸ್ವಾಭಾವಿಕವಾಗಿ ನೀವು ಹಲವು ತಪ್ಪುಗಳನ್ನು ಮಾಡಬಹುದು. ಅದನ್ನು ಗಮನಿಸಬೇಡಿ. ತಪ್ಪುಗಳೆಲ್ಲ ಅವನ ಕಡೆ ತೋರುವ ದೀಪಗಳು. ಕೆಲಸಮಾಡಿ, ಆಟವಾಡಿ, ನಗಿ, ನಿಮ್ಮ ಅಜ್ಞಾನದ ಮುಸುಕು ಜಾರಿಹೋಗುವಂತೆ ಪ್ರಾರ್ಥನೆ ಮಾಡಿ. ನಿಮ್ಮ ಕೆಲಸ ಮತ್ತು ನಿಮ್ಮ ಶೀಲ ಕ್ರಮೇಣ ಉತ್ತಮಗೊಳ್ಳುವುವು.

ಆಧ್ಯಾತ್ಮಿಕ ಅನುಭವಗಳನ್ನು ಗಳಿಸಬೇಕಾದರೆ, ರಾಜಮಾರ್ಗದಲ್ಲಿ ನಡೆಯುವ ಧೈರ್ಯವಿರಬೇಕು. ಒಂದು ಆದರ್ಶದಂತೆ ಆಗಬೇಕಾದರೆ, ಅದೊಂದು ಅವಿಶ್ರಾಂತ ಶ್ರಮದಿಂದ ನಡೆಸಿದ ಅವಿರಳ ಹೋರಾಟ. ನಮಗೆ ಎಷ್ಟೋ ವಿಷಯಗಳು ಗೊತ್ತಿವೆ. ಅವನ್ನೇ ಸರಿಯಾಗಿ ಅನುಷ್ಠಾನ ಮಾಡಿದರೆ ನಮ್ಮ ಜೀವನವನ್ನು ಪವಿತ್ರಮಾಡುವುವು. ಆದರೆ ಅದನ್ನು ಅನುಷ್ಠಾನ ಮಾಡುವುದಕ್ಕೆ ನಮ್ಮಲ್ಲಿ ತಾಳ್ಮೆಯಿಲ್ಲ. ಧೃಡತೆ ಇಲ್ಲ. ನಮ್ಮ ಹಸಿವಿಗೆ ನಾವೇ ಊಟಮಾಡುವಂತೆ, ನಾವು ಮುಂದುವರಿಯಬೇಕಾದರೆ ನಾವೇ ಹೋರಾಡಬೇಕು. ಇತರರು ನಿಮಗಾಗಿ ಊಟಮಾಡಿದರೆ ನಿಮಗೆ ಯಾವ ಪ್ರಯೋಜನವೂ ಆಗುವುದಿಲ್ಲ. ನಮಗೆ ಒಂದು ಸತ್ಯ ಗೊತ್ತಿದ್ದು ಜೀವನದಲ್ಲಿ ಅದನ್ನು ಅನುಷ್ಠಾನಮಾಡಿದರೆ ನಮ್ಮ ಜನ್ಮ ಉದ್ಧಾರವಾಗುವುದಕ್ಕೆ ಸಾಕು. ನಾವು ಪವಿತ್ರರಾಗುವುದಕ್ಕೆ ಪ್ರಪಂಚದಲ್ಲಿ ದಾರಿ ಸ್ಪಷ್ಟವಾಗಿ ಕಾಣುತ್ತಿದೆ. ನಮ್ಮ ಆಶೆ ಆಕಾಂಕ್ಷೆಗಳಿಂದ, ನಮ್ಮ ದೌರ್ಬಲ್ಯದಿಂದ ಹಲವಾರು ರಹಸ್ಯಗಳೊಂದಿಗೆ, ನಿಷ್ಪ್ರಯೋಜಕ ವಸ್ತುಗಳೊಂದಿಗೆ ಅದನ್ನು ಬೆರೆಸಿಬಿಟ್ಟಿದ್ದೇವೆ. ಆಧ್ಯಾತ್ಮಿಕ ಜೀವನದಲ್ಲಿ ಬಾಗಿಲನ್ನು ತೆಗೆ ಎನ್ನಬೇಕಾದರೆ, ಆದರ್ಶದಂತೆ ಆಗಬೇಕು. ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ ಶಕ್ತಿಸಾಹಸಗಳಿರಬೇಕು. ಅದು ಸರಳವಾಗಿರುವುದು, ಅಲ್ಲಿ ದೊಡ್ಡ ಪದಗಳ ಆಡಂಬರವಿಲ್ಲ. ಇದೇ ತೆರೆದ ರಹಸ್ಯ. ಇದನ್ನು ಅರಿತರೆ ಭಯಾನಕವಾದ ಸಂಸಾರದ ಕನಸಿನಿಂದ ಪಾರಾಗಬಹುದು. ಇದಕ್ಕೆ ಒಳದಾರಿ ಯಾವುದೂ ಇಲ್ಲ.

ಸತ್ಯ ಯಾವಾಗಲೂ ಸರಳವಾಗಿರುವುದು. ಸುಳ್ಳೇ ಯಾವಾಗಲೂ ಜಟಿಲವಾಗಿರುವುದು, ಗೋಜಿನಿಂದ ಕೂಡಿರುವುದು. ಅನೇಕರಿಗೆ ಯೋಗದಲ್ಲಿ, ಅದರಲ್ಲೂ ರಾಜಯೋಗದಲ್ಲಿ ಉತ್ಸಾಹವಿರುವುದು ಕಾಣುವುದು. ಆದರೆ ರಾಜಯೋಗ ಎಂದರೆ ಅನೇಕರು ಏನೇನೊ ವಿಚಿತ್ರ ಕಲ್ಪನೆಯನ್ನು ಮಾಡಿಕೊಂಡಿರುವರು. ಇದೇನೊ ಅಲ್ಲಾವುದ್ದೀನನ ಕೈಯಲ್ಲಿದ್ದ ಮಾಯಾದೀಪವೆಂದು ಭಾವಿಸುವರು. ಸ್ವಲ್ಪವೂ ಕಷ್ಟಪಡದೆ ಭೋಗವಸ್ತುಗಳನ್ನು ಇದರಿಂದ ಪಡೆಯಬಹುದು ಎಂದು ಭಾವಿಸುವರು. ಕೆಲವು ಆಸನಗಳನ್ನು ಕಲಿತು

ಕೊಳ್ಳುತ್ತಾರೆ, ಕೆಲವು ರೀತಿ ಪ್ರಾಣಾಯಾಮ ಮಾಡುತ್ತಾರೆ, ಇದರಿಂದ ದೀಪವಿಲ್ಲದೆ ಇಪ್ಪತ್ತನೆ ಶತಮಾನದ ಅಲ್ಲಾವುದ್ದೀನನಾಗುತ್ತಾನೆ. ಇನ್ನು ಕೆಲವರು, ಇದರಿಂದ ದೃಢವಾದ ಆರೋಗ್ಯ ಸಿಕ್ಕುವುದು, ಸ್ಥಿರವಾದ ಸೌಂದರ್ಯ ಸಿಕ್ಕುವುದು ಎಂದು ಭಾವಿಸುವರು. ನೀವು ಹೇಗೆ ಬೇಕಾದರೂ ಜೀವನ ನಡೆಸಿ, ಏನು ಬೇಕಾದರೂ ಮಾಡಿ, ಕೆಲವು ಯೋಗಾಸನಗಳನ್ನು ಕಲಿತುಬಿಟ್ಟರೆ, ಅಜೀರ್ಣದಿಂದ, ತಲೆ ನೋವಿನಿಂದ, ಹೆಚ್ಚು ತೂಕದಿಂದ ಪಾರಾಗುತ್ತೇವೆ ಎಂದು ಭಾವಿಸುವರು. ಕನ್ನಡಿ ನೋಡಿಕೊಳ್ಳಿ. ನಿಮ್ಮ ರೂಪು ಹೇಗೆ ಕಾಂತಿಯಿಂದ ಕೋರೈಸುತ್ತಿದೆ!

ಇವೆಲ್ಲ ಕೆಲವು ತಪ್ಪು ಭಾವನೆಗಳು. ಮನುಷ್ಯನಲ್ಲಿರುವುದೆಲ್ಲ ಸರಳವಾದ ಮೇಲೆ ಮಾತ್ರ ಸತ್ಯ ಸರಳವಾಗಿ ಆರೋಗ್ಯಕರವಾಗಿ ಕಾಣುವುದು. ಯೋಗ ದುರ್ಬಲರಿಗಲ್ಲ. ನಮಗೆ ಬೇಕಾಗಿರುವುದು ಅಸ್ಪಷ್ಟತೆಯಿಲ್ಲದ ಆಧ್ಯಾತ್ಮಿಕತೆ. ಎಲ್ಲಾ ಮಾಯಾಮಂತ್ರಗಳನ್ನು ವಿಚಾರದ ಬೆಳಕಿಗೆ ತೋರಿಸಬೇಕು. ಅದರಲ್ಲಿ ಯಾವುದು ಸುಳ್ಳೊ ಅವು ಹೋಗುವುದು. ಯಾವುದು ಸತ್ಯವಾಗಿ ಉಳಿದುಕೊಳ್ಳುವುದೊ, ಅದು ವೈಜ್ಞಾನಿಕ ಸತ್ಯದಷ್ಟೇ ಸ್ಪಷ್ಟವಾಗಿರುವುದು. ಆದಕಾರಣವೆ ಯೋಗದ ವಿಷಯದಲ್ಲಿ ನಿಮ್ಮಲ್ಲಿ ಇರುವ ಮಾಯಾಮಂತ್ರ ರಹಸ್ಯ ಇವುಗಳನ್ನು ತೂರಬೇಕು. ಆಧ್ಯಾತ್ಮಿಕ ಜೀವನ ವಿಕಾಸವಾದರೆ, ಅವನಿಗೆ ಅತೀಂದ್ರಿಯ ಶಕ್ತಿಗಳು, ಮಾಯಾಶಕ್ತಿಗಳು ಬರುತ್ತವೆ ಎಂದಲ್ಲ. ಇದಕ್ಕೂ ಆಧ್ಯಾತ್ಮಿಕತೆಗೂ ಸಂಬಂಧವೇ ಇಲ್ಲ.

ನೀವು ದೇಹವನ್ನು ಧಾರ್ಢ್ಯವನ್ನಾಗಿ ಮಾಡಲು ಅದಕ್ಕೆ ನಾಲ್ಕುರೀತಿ ಲಕ್ಷ್ಯವನ್ನು ಕೊಡಿ. ಅದಕ್ಕೆ ಒಳ್ಳೆ ಆಹಾರವನ್ನು ಕೊಡಿ, ಅದನ್ನು ಒಳ್ಳೆಯ ಆರೋಗ್ಯದಲ್ಲಿಡಿ, ಅದಕ್ಕೆ ವ್ಯಾಯಾಮವನ್ನು ಕೊಡಿ, ಸಾಕಷ್ಟು ವಿಶ್ರಾಂತಿಯನ್ನು ಕೊಡಿ. ಮನಸ್ಸು ಕೂಡ ನಿಮ್ಮಂತೆ ಇದೇ ಲಕ್ಷ್ಯವನ್ನು ಇಚ್ಛಿಸುವುದಿಲ್ಲವೆ? ಪಾಪ, ಮನಸ್ಸನ್ನು ಯಾರೂ ಕೇಳುವವರೇ ಇಲ್ಲ. ಮನುಷ್ಯ ಮನಸ್ಸಿಗೆ ಅಷ್ಟೇ ಲಕ್ಷ್ಯವನ್ನು ಕೊಡಬೇಕು. ಮನಸ್ಸನ್ನು ಚೆನ್ನಾಗಿ ಪೋಷಣೆ ಮಾಡಬೇಕು. ಅದನ್ನು ಶುದ್ಧವಾಗಿಟ್ಟರಬೇಕು. ಅದಕ್ಕೆ ಸಾಕಷ್ಟು ವ್ಯಾಯಾಮವನ್ನು ಕೊಡಬೇಕು. ಅದು ಸಾಕಷ್ಟು ವಿಶ್ರಾಂತಿಯನ್ನು ಕೇಳುವುದು. ಯೋಗಾಭ್ಯಾಸದಿಂದ ಮನಸ್ಸಿಗೆ ಇವುಗಳೆಲ್ಲ ಸಿಕ್ಕುವುವು. ಇದಿಲ್ಲದೆ ಇದ್ದರೆ ಮನಸ್ಸು ದುರ್ಬಲವಾಗುವುದು. ಹಲವು ದುರ್ಬಲ ರೋಗಗಳಿಗೆ ಒಳಗಾಗುವುದು.

ಆರೋಗ್ಯಕರವಾದ, ಏಕಾಗ್ರವಾದ, ಶಿಸ್ತಿನಿಂದ ಕೂಡಿದ ಮನಸ್ಸನ್ನು, ಯಾವ ಅಧ್ಯಯನ, ಕೆಲಸ, ಸಾಹಸದ ಮೇಲೆ ಪ್ರಯೋಗಿಸಿದರೂ, ಅಂಕೆಯಲ್ಲಿಲ್ಲದ ಅನಾರೋಗ್ಯಕರವಾದ ಮನಸ್ಸಿಗಿಂತ ಹೆಚ್ಚು ಪ್ರಯೋಜನವನ್ನು ನಮಗೆ ಕೊಡುವುದು. ಮಾನಸಿಕ ಶಿಸ್ತಿನ ಮೇಲೆ ನಾವು ಜೀವನದಲ್ಲಿ ಪಡೆಯುವುದು ನಿಂತಿದೆ.

ಜೀವನದ ಎಲ್ಲಾ ಜ್ಞಾನಕ್ಷೇತ್ರದಲ್ಲಿಯೂ, ಗುರು, ಹಿಂದಿನವರು ಏನುಗಳಿಸಿದರು ಎಂಬುದರ ವಿಷಯವಾಗಿ ನಿನಗೆ ಹೇಳುವರು. ಜ್ಞಾನಾರ್ಜನೆ ಎಂದರೆ, ಯಾವುದು ನಮ್ಮಲ್ಲಿದೆಯೋ ಅದು ಅರಳುವುದು. ಪ್ರತಿಯೊಬ್ಬನಲ್ಲಿರುವ ಅಹಂಕಾರ, ಕರ್ತೃವಿಗೆ ಒಂದು

ಪ್ರತ್ಯೇಕವಾದ ಬಣ್ಣವನ್ನು ಕೊಡುವುದು. ಈ ಅಹಂಕಾರವನ್ನು ಶುದ್ಧ ಮಾಡುವುದಕ್ಕೆ ನಾವು ಪ್ರಯತ್ನಿಸಬೇಕು. ಆಗ ಜ್ಞಾನ ಚೆನ್ನಾಗಿ ಬೆಳಗುವುದಕ್ಕೆ ಸಾಧ್ಯವಾಗುವುದು. ಎಲ್ಲಾ ಯೋಗದ ಗುರುಗಳು ಕೂಡ ಇದರ ಪ್ರಾಮುಖ್ಯತೆಯನ್ನು ಬಲ್ಲರು. ಇದನ್ನು ಜೀವನದ ಯಾವ ಕಾರ್ಯಕ್ಷೇತ್ರಕ್ಕೆ ಬೇಕಾದರೂ ಅನ್ವಯಿಸಬಹುದು.

ಯಾವ ಕಾರ್ಯಕ್ಷೇತ್ರದಲ್ಲಾದರೂ ಅಧ್ಯಯನ ಮಾಡಬೇಕಾದರೆ ನಾಲ್ಕು ಸ್ವರ್ಣ ಸೂತ್ರಗಳನ್ನು ನೀವು ಜ್ಞಾಪಕದಲ್ಲಿಡಬೇಕು. ೧. ನೀವು ಓದುವ ವಿಷಯವನ್ನು ಜೋಪಾನವಾಗಿ ಆರಿಸಿಕೊಳ್ಳಿ. ೨. ಮೊದಲಿಂದ ಕೊನೆಯವರೆಗೆ ಓದಿ, ಅಧ್ಯಯನ ಮಾಡಿ, ಮನನ ಮಾಡಿ. ೩. ಯಾವ ಒಂದು ಪದವೇ ಆಗಲಿ, ವಾಕ್ಯವೇ ಆಗಲಿ, ಭಾವನೆಯಾಗಲಿ, ಪುಸ್ತಕವನ್ನು ಬರೆದವನು ಏನು ಹೇಳುತ್ತಾನೆ ಎನ್ನುವುದು ಗೊತ್ತಾಗುವವರೆಗೆ ಮುಂಬೆ ಹೋಗಬೇಡಿ. ೪. ಒಂದು ವಿಷಯವನ್ನು ನ್ಯಾಯವಾಗಿ ನಿರ್ಣಯಿಸುವ ಸ್ವಾತಂತ್ರ್ಯವನ್ನು ಎಂದಿಗೂ ಮರೆಯಬೇಡಿ. ಗ್ರಂಥಕರ್ತ ವಿಷಯವನ್ನು ಕೊಡುತ್ತಾನೆ. ಅದನ್ನು ನಿರ್ಣಯಿಸುವವನು ನೀನೇ ಆಗಬೇಕು.

ನಮ್ಮ ಆಧ್ಯಾತ್ಮಿಕ ಅಥವಾ ಬೌದ್ಧಿಕ ಸಂಗ್ರಹಗಳಿಂದ ಹೆಚ್ಚು ಪ್ರಯೋಜನ ಪಡೆಯದೆ ಇರುವುದಕ್ಕೆ ಕಾರಣ, ನಮಗೆ ಗೊತ್ತಿರುವುದಕ್ಕಿಂತ ಹೆಚ್ಚಾಗಿ ಮಾತನಾಡುವೆವು. ಆಧ್ಯಾತ್ಮಿಕತೆಯನ್ನು ಖರ್ಚು ಮಾಡುವುದಕ್ಕೆ ಮುಂಚೆ ಸಂಗ್ರಹಿಸಬೇಕು. ಮೌನವನ್ನು ಅಭ್ಯಾಸ ಮಾಡಬೇಕು. ನಿಮ್ಮ ಪಾಂಡಿತ್ಯವನ್ನು ತೋರುವುದಕ್ಕೆ ಕಾತರರಾಗಬೇಡಿ. ಅನೇಕ ಜನ ಸಾಧಕರು ಕೆಲವು ವಿಷಯಗಳನ್ನು ತಿಳಿದುಕೊಳ್ಳುವುದೇ ತಡ ಅದನ್ನು ಬೋಧಿಸಲು ಮೊದಲು ಮಾಡುವರು. ಇಲ್ಲಿ ಬರೀ ಅಹಂಕಾರ ತೋರಿಸಿಕೊಳ್ಳುತ್ತಿದೆ. ಕ್ರಮೇಣ ಒಳಗಿನಿಂದ ಆಧ್ಯಾತ್ಮಿಕತೆ ವಿಕಾಸವಾದಂತೆ, ನೀನು ಮಾತಿನ ಮೂಲಕ ಇತರರಿಗೆ ಸಹಾಯ ಮಾಡಬಲ್ಲೆ. ಅಲ್ಲಿಯವರೆಗೆ ಸುಮ್ಮನಿರು. ಮೊದಲು ಸಂಗ್ರಹಿಸಿ. ಆಗ ಆಧ್ಯಾತ್ಮಿಕತೆ ಶಿಮ್ಮಿಂದ ಸ್ಪಂದಿಸುತ್ತಿರುವುದು. ಅದನ್ನು ಹೇಳುವುದಕ್ಕೆ ನೀವು ಪ್ರಯತ್ನವನ್ನೆ ಮಾಡಬೇಕಾಗಿಲ್ಲ. ಮತ್ತೊಂದು ವಿಷಯವನ್ನು ನೆನಪಿನಲ್ಲಿಡಿ. ನಿನ್ನ ಮೂಲಕ ವ್ಯಕ್ತವಾಗುತ್ತಿರುವುದು ಭಗವಂತನ ಶಕ್ತಿ. ನೀನೇ ಇದನ್ನೆಲ್ಲ ಮಾಡುತ್ತಿರುವುದು ಎಂದು ಭಾವಿಸಬೇಡ.

ಸುಮ್ಮನೆ ಚರ್ಚೆ, ವಾದಗಳಲ್ಲಿ ಕಾಲಹರಣ ಮಾಡಬೇಡ. ತತ್ವಶಾಸ್ತ್ರದಲ್ಲಿರುವುದನ್ನೆಲ್ಲ ಬಹುಪಾಲು ಖಂಡಿಸಿರುವರು. ವ್ಯರ್ಥವಾದ ಇಂತಹ ಗೊಂದಲಕ್ಕೆ ಕೈಹಾಕಬೇಡ.

ಧಾರ್ಮಿಕ ಜೀವನದಲ್ಲಿ ಆಚಾರಗಳು, ನಂಬಿಕೆಗಳು, ಸರಾಸರಿ ಗಣನೆಗಳು, ತರ್ಕ ನ್ಯಾಯಾದಿಗಳು ಗೌಣ. ಧರ್ಮ ಪ್ರಾರಂಭವಾಗುವುದು, ಅದರಂತೆ ಇರುವುದರಿಂದ, ಆಗುವುದರಿಂದ.

ಒಂದು ಸಲ ಇಬ್ಬರು ಒಂದು ಮಾವಿನ ತೋಟಕ್ಕೆ ಹೋದರು, ಒಬ್ಬ ಅದರಲ್ಲಿರುವ ಮರಗಳನ್ನೆಲ್ಲ ವಿಂಗಡಿಸುವುದಕ್ಕೆ ಪ್ರಯತ್ನಿಸಿದ. ಹಾಗೆ ಮಾಡುವಾಗ ಪ್ರಖ್ಯಾತ ಸಸ್ಯ ವಿಜ್ಞಾನಿಯ ಹೆಸರುಗಳನ್ನು ಹೇಳಿದ, ತಾನು ಹೇಳುವುದು ಸರಿ ಎಂದು ತೋರಿಸಿಕೊಳ್ಳು

ವುದಕ್ಕಾಗಿ. ಮತ್ತೊಬ್ಬ ಮನುಷ್ಯ ತೋಟದ ಮಾಲೀಕನ ಬಳಿಗೆ ಹೋದ. ಅವನು ತೋಟದಲ್ಲಿರುವ ಗಿಡಗಳನ್ನೆಲ್ಲ ವಿವರಿಸಿದ. ಎಷ್ಟು ಹಣ್ಣು ಬೇಕೋ ಅಷ್ಟು ತಿನ್ನು ಎಂದು ಹೇಳಿದ. ತೋಟ ಬಿಡುವ ಸಮಯದಲ್ಲಿ ಒಬ್ಬನಲ್ಲಿ ತೋಟದ ಗಿಡಗಳಿಗೆ ಸಂಬಂಧಪಟ್ಟ ಲೆಕ್ಕಾಚಾರಗಳೇ ಇದ್ದುವು ಆದರೆ ಯಾವ ಒಂದು ಮಾವಿನ ಹಣ್ಣಿನ ರುಚಿಯನ್ನೂ ತಿಳಿದಿರಲಿಲ್ಲ. ಯಾರು ಮಾವಿನ ಹಣ್ಣನ್ನು ತಿಂದನೊ ಅವನಿಗೆ ಮಾತ್ರ ಗೊತ್ತಿತ್ತು ಹಣ್ಣಿನ ರುಚಿ. ಅನರ್ಘ್ಯವಾದ ಕಾಲವನ್ನು ಸುಮ್ಮನೆ ಮಾವಿನ ಮರದ ಎಲೆ, ರೆಂಬೆ, ಕೊಂಬೆಗಳನ್ನು ಎಣಿಸುವಲ್ಲಿ ಆಗಲಿ, ಪ್ರಮಾಣ ವ್ಯಕ್ತಿಗಳ ಅಭಿಪ್ರಾಯವನ್ನು ಹೇಳುವುದರಲ್ಲಾಗಲೀ ವ್ಯರ್ಥ ಮಾಡದೆ ಇರುವ. ತೋಟದ ಯಜಮಾನನನ್ನು ಹುಡುಕಿ ಮಾವಿನ ಹಣ್ಣನ್ನು ರುಚಿ ನೋಡೋಣ.

ಯೋಗಗಳೆಲ್ಲ ಸಾರುವುದು ಇದನ್ನು—ದೇವರನ್ನು ಕಾಣಿ, ಬ್ರಹ್ಮನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಿ. ನಿಮ್ಮ ದೇಹ, ಮನಸ್ಸುಗಳ ಮೂಲಕ ಏನು ಆಗುತ್ತಿದ್ದರೆ, ಅದೆಲ್ಲ ಸರ್ವಶಕ್ತನಾದ ಭಗವಂತನಿಂದ ಎಂದು ನಂಬಿ. ನಿಮ್ಮ ಮನಸ್ಸಿನಲ್ಲಿ ದೇವರ ವಿಷಯದಲ್ಲಿ ಯಾವುದಾದರೂ ಭಾವನೆ ಇರಲಿ, ಅನಂತ ಶಕ್ತನಾದ ಭಗವಂತನೆ ನಿಮ್ಮ ಶರೀರದ ಮೂಲಕ ಕೆಲಸ ಮಾಡುತ್ತಿರುವುದು. ಪಾತ್ರೆ ಯಾವುದಾದರೂ ಆಗಲಿ, ಗಮನಿಸದಿರಿ. ಅದರೊಳಗೆ ಇರುವುದನ್ನು ಸಾಕ್ಷಾತ್ಕಾರ ಮಾಡಿಕೊಳ್ಳಿ ಈಕ್ಷಣವೇ ನೀವು ಮುಕ್ತರು.

ನಾವು ಬೇಕಾದಷ್ಟು ಮಾತನ್ನು ಕೇಳಿದ್ದೇವೆ. ನಾವು ಬೇಕಾದಷ್ಟು ಪುಸ್ತಕಗಳನ್ನು ಓದಿದ್ದೇವೆ. ಈಗ ನಾವು ಏನನ್ನಾದರೂ ಅನುಷ್ಠಾನ ಮಾಡೋಣ. ಅದನ್ನೆ ನಾವು ಅತ್ಯಂತ ಮುಖ್ಯವಾಗಿ ಮಾಡಬೇಕಾಗಿರುವುದು.

ಶ್ರೀರಾಮಕೃಷ್ಣಾಶ್ರಮದ ಪ್ರಕಟನೆಗಳು

	ರೂ. ಪೈ.		ರೂ. ಪೈ.
ಗುರುದೇವ ಶ್ರೀರಾಮಕೃಷ್ಣ	೧೫–೦೦	ಸನಾತನ ಭಾರತ	೩–೦೦
ಶ್ರೀರಾಮಕೃಷ್ಣ ವಚನವೇದ ಪೂರ್ವಾರ್ಧ	೧೫–೦೦	ಕರ್ಮಯೋಗ	೧–೫೦
ಶ್ರೀರಾಮಕೃಷ್ಣ ವಚನವೇದ ಉತ್ತರಾರ್ಧ	೧೫–೦೦	ಪ್ರವಚನಾದಿ	೭–೫೦
ಶ್ರೀರಾಮಕೃಷ್ಣ ಉಪದೇಶಾಮೃತ	೫–೦೦	ರಾಷ್ಟ್ರನಿರ್ಮಾಣ	೧–೫೦
ಭಗವಾನ್ ಶ್ರೀರಾಮಕೃಷ್ಣ	೫–೦೦	ಪರಿವ್ರಾಜಕ	೧–೨೫
ನಗೆಗಾರ ಶ್ರೀರಾಮಕೃಷ್ಣ	೨–೨೫	ಪ್ರಾಚ್ಯ ಮತ್ತು ಪಾಶ್ಚಾತ್ಯ	೧–೨೫
ಶ್ರೀರಾಮಕೃಷ್ಣ ಉಪನಿಷತ್	೧–೫೦	ಭಕ್ತಿಯೋಗ	೯–೫೦
ಶ್ರೀ ಗುರುದೇವರ ವಚನ	೦–೭೦	ಪರಾಭಕ್ತಿ	೧–೫೦
ನನ್ನ ಗುರುದೇವ	೦–೮೦	ಅನುಷ್ಠಾನ ವೇದಾಂತ	೧–೦೦
ಶ್ರೀರಾಮಕೃಷ್ಣ (ಸಂಕ್ಷಿಪ್ತ ಜೀವನ)	೦–೫೦	ಧನ್ಯತೆಗೆ ದಾರಿ	೧–೦೦
ಶ್ರೀ ಶಾರದಾದೇವಿ	೫–೦೦	ವರ್ತಮಾನ ಭಾರತ	೦–೬೦
ಶ್ರೀ ಶಾರದಾದೇವಿ ಸಂಭಾಷಣೆ	೫–೦೦	ವಿದ್ಯಾಭ್ಯಾಸ	೦–೮೦
ಶ್ರೀ ಶಾರದಾದೇವಿ (ಸಂಕ್ಷಿಪ್ತ ಜೀವನ)	೦–೫೦	ಹಿಂದೂಧರ್ಮಸಾರ	೦–೮೦
ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆ	೧೫–೦೦	ಹಿಂದೂಧರ್ಮದ ಕರೆ	೦–೬೦
ಸ್ವಾಮಿ ವಿವೇಕಾನಂದ –ಜೀವನ ಬೋಧನೆ	೬–೦೦	ಜ್ಞಾನಮಾರ್ಗ	೦–೮೦
ಸ್ವಾಮಿ ವಿವೇಕಾನಂದರ ಕೃತಿ ಶ್ರೇಣಿ (ಹತ್ತು ಸಂಪುಟಗಳಲ್ಲಿ) ಸಂಪುಟವೊಂದಕ್ಕೆ	೧೦–೦೦	ವೇದಾಂತ	೦–೬೦
ವಿವೇಕಾನಂದ ಕೃತಿ ಸಂಗ್ರಹ	೧೫–೦೦	ವಿವೇಕವಾಣಿ	೦–೮೦
ವಿವೇಕಾನಂದರ ಪತ್ರಮಾಲೆ	೧೨–೦೦	ಚಿಕಾಗೋ ಉಪನ್ಯಾಸ	೦–೬೦
ಕೊಲಂಬೊ ಇಂದ ಆಲ್ಮೋರಕೆ	೬–೦೦	ಸ್ವಾಮಿ ವಿವೇಕಾನಂದ (ಸಂಕ್ಷಿಪ್ತ ಜೀವನ)	೦–೫೦
ಸಂವಾದ ತರಂಗಿಣಿ	೫–೦೦	ಮುಮುಕ್ಷು	೦–೫೦
ಸ್ವಾಮಿ ವಿವೇಕಾನಂದ (ಕುವೆಂಪು)	೬–೦೦	ನನ್ನ ಜೀವನ ಮತ್ತು ಧ್ಯೇಯ	೦–೫೦
ಜೀವ ಈಶ್ವರ ಧರ್ಮ	೪–೦೦	ಭಕ್ತಿ	೦–೫೦
ನಾ ಕಂಡಂತೆ ನನ್ನ ಗುರುದೇವ	೫–೦೦	ಸಾಧನ	೦–೫೦
ಜ್ಞಾನಯೋಗ	೭–೫೦	ಭಾರತ ಮಹಿಳೆ	೦–೫೦
ರಾಜಯೋಗ	೪–೦೦	ಕರ್ಮರಹಸ್ಯ	೦–೫೦
ಸ್ಫೂರ್ತಿವಾಣಿ	೪–೦೦	ಧ್ಯಾನ	೦–೫೦
ನಾಡಿಗೆ ಕರೆ	೩–೦೦	ಭಗವದ್ಗೀತೆ (ಪ್ರವಚನಗಳು)	೧–೦೦
ವಿವೇಕಾನಂದರ ಬೋಧನೆಯ ಸಾರ	೪–೦೦	ಯೋಗ	೦–೬೦
		ಶ್ರೀರಾಮಕೃಷ್ಣ ಶಿಷ್ಯಕೋಟಿ	೬–೦೦
		ಗುರುವಿನೊಡನೆ ದೇವರಡಿಗೆ ೧	೫–೦೦
		ಗುರುವಿನೊಡನೆ ದೇವರಡಿಗೆ ೨	೫–೦೦
		ಗೀತಾಪರಿಚಯ	೪–೦೦
		ಮಿಂಚುನೋಟಕೆ ಹಿಂದೂಧರ್ಮ	೩–೦೦

	ರೂ. ಪೈ.
ಸಾಧಕನ ಕೈದೀವಿಗೆ	೨-೫೦
ಪರಮಾರ್ಥ ಪ್ರಸಂಗ	೩-೦೦
ಬ್ರಹ್ಮಾನಂದ ವಚನಸುಧೆ	೨-೦೦
ಭಾರತದಲ್ಲಿ ಶಕ್ತಿಪೂಜೆ	೧-೦೦
ಧ್ಯಾನ ಚಿಂತನಧಾರೆ	೧-೫೦
ತೀರ್ಥವಾಣಿ (ವಚನವೇದ ಗಾನಸಂಕಲನ)	೧-೦೦
ಆರತಿ (ಪ್ರಾರ್ಥನಾ ಸಂಕಲನ)	೨-೨೫
ಭಕ್ತಿಮಾರ್ಗ	೦-೬೦
ಪುನರ್ಜನ್ಮ	೦-೬೦
ಭಗವತ್ ಪ್ರೇಮ	೦-೬೦
ನೊಂದ ಜೀವಕ್ಕೆ ಭರವಸೆ	೦-೫೦
ಬ್ರಹ್ಮ ಸೂತ್ರಗಳು (ಭಾಷ್ಯತ್ರಯ) ಸಂಗ್ರಹದೊಂದಿಗೆ	೩೦-೦೦
ಶ್ರೀಮದ್ಭಗವದ್ಗೀತಾ (ಸಟೀಕ)	೭-೫೦
ಈಶಾವಾಸ್ಯೋಪನಿಷತ್ ,,	೦-೭೫
ಕೇನೋಪನಿಷತ್ ,,	೦-೭೫
ಕಠೋಪನಿಷತ್ ,,	೨-೨೫
ಪ್ರಶ್ನೋಪನಿಷತ್ ,,	೧-೦೦
ಮುಂಡಕೋಪನಿಷತ್ ,,	೧.೫೦
ಮಾಂಡೂಕ್ಯೋಪನಿಷತ್ ,,	೨-೫೦
ತೈತರೀಯೋಪನಿಷತ್ ,,	೨-೨೫
ಐತರೇಯೋಪನಿಷತ್ ,,	೦-೭೫
ಛಾಂದೋಗ್ಯೋಪನಿಷತ್ ,,	೧೫-೦೦
ಬೃಹದಾರಣ್ಯಕೋಪನಿಷತ್ ,,	೧೨-೦೦
ಶ್ವೇತಾಶ್ವತರೋಪನಿಷತ್ ,,	೧-೫೦
ನಾರದ ಭಕ್ತಿ ಸೂತ್ರ	೧-೫೦
ಅವಧೂತ ಗೀತಾ	೧-೦೦
ಅಷ್ಟಾವಕ್ರ ಗೀತಾ	೧-೫೦
ಪಂಚದಶೀ	೧೨-೦೦
ಜೀವನ್ಮುಕ್ತಿ ವಿವೇಕ	೭-೫೦
ವಿವೇಕ ಚೂಡಾಮಣಿ	೬-೦೦
ಸ್ತವಕುಸುಮಾಂಜಲಿ	೭-೫೦
ವೇದಕುಸುಮಾಂಜಲಿ	೪-೦೦
ಶ್ರೀದುರ್ಗಾಸಪ್ತಶತೀ	೫-೦೦
ಶ್ರೀಲಲಿತಾಸಹಸ್ರನಾಮ ಮತ್ತು ತ್ರಿಶತೀ (ಭಾಷ್ಯಸಹಿತ)	೧೨-೦೦
ಶ್ರೀ ವಿಷ್ಣು ಸಹಸ್ರನಾಮ	೯-೦೦
ಶ್ರೀ ಶಿವಸಹಸ್ರನಾಮ	೨-೫೦
ಹೈಮಾಚಲ ಸಾನ್ನಿಧ್ಯದಲ್ಲಿ	೪-೦೦
ಆಧ್ಯಾತ್ಮಿಕ ಜೀವನ ಇತ್ಯಾದಿ	೬-೦೦
ಶಿವಾನಂದ ಲಹರೀ	೦-೭೫
ಸೌಂದರ್ಯಲಹರೀ	೧-೦೦
ಶ್ರೀರಾಮಕೃಷ್ಣ ಕರ್ಣಾಮೃತಮ್	೩-೦೦
ಶ್ರೀರಾಮಕೃಷ್ಣ ಸುಪ್ರಭಾತಮ್	೦-೫೦
ಶ್ರೀರಾಮಕೃಷ್ಣ ನಾಮ ಸಂಕೀರ್ತನಾ	೦-೧೦
ಗೀತಾಭಾವಧಾರೆ	೨೧-೦೦
ಉಪನಿಷತ್ ಭಾವಧಾರೆ (ಮೂಲ, ತಾತ್ಪರ್ಯ ಮತ್ತು ದೀರ್ಘ ವಿವರಣೆ ಸಹಿತ)	೨೫-೦೦
ಪಾತಂಜಲಯೋಗಸೂತ್ರ (ವ್ಯಾಸಭಾಷ್ಯ ಸಹಿತ)	೭-೫೦
ಉಪದೇಶ ಸಹಸ್ರಿ	೮-೦೦
ಆತ್ಮಬೋಧ ಇತ್ಯಾದಿ	೨-೫೦
ನನ್ನ ಏಳ್ಗೆಗೆ ನಾನೇ ಶಿಲ್ಪಿ	೪-೦೦
ವೇದಾಂತಸಾರ	೫-೦೦
ನಾಲ್ಕು ಯೋಗಗಳು	೭-೫೦

ENGLISH BOOKS

Drig-drishya-Viveka—*Translated by Swami Nikhilananda* 2-50

Mandukya Upanishad with Goudapada Karika & Shankara's Commentary—*Translated by Swami Nikhilanda* 15-00

Vedarthasangraha of Ramanuja —*Translated by Sri S. S. Ragavachar* 10-00

ಶ್ರೀರಾಮಕೃಷ್ಣಾಶ್ರಮ

ವಾಣೀವಿಲಾಸ ಮೊಹಲ್ಲಾ, ಮೈಸೂರು-೫೭೦ ೦೦೨

ರೂ. ೭–೫೦